# ಸಮಾಜ ಶಾಸ್ತ್ರ

## 8ನೇ ತರಗತಿ

Social Studies
CLASS VIII
(Kannada Medium)

सत्यमेव जयते

**FREE**





ಪ್ರಚುರಣೆ :
ತೆಲಂಗಾಣ ಸರ್ಕಾರ , ಹೈದರಾಬಾದ್

ತೆಲಂಗಾಣ ಸರ್ಕಾರದ ಉಚಿತ ವಿತರಣೆ

ಸಮಾಜ ಶಾಸ್ತ್ರ 8ನೇ ತರಗತಿ

ಸಮಾಜ ಶಾಸ್ತ್ರ 8ನೇ ತರಗತಿ


ತೆಲಂಗಾಣ ಸರಕಾರ
ಮಹಿಳಾ ಅಭಿವೃದ್ಧಿ ಮತ್ತು ಶಿಶು ಕಲ್ಯಾಣ ಶಾಖೆ - ಚೈಲ್ಡ್‌ಲೈನ್ ಫೌಂಡೇಷನ್

ಶಾಲೆಯಲ್ಲಾಗಲಿ, ಶಾಲೆಯ ಹೊರಗಾಗಲಿ ವೇದನೆಗೆ ಗುರಿ ಆಗುತ್ತಿದ್ದರೆ

ಆಪತ್ತಿನಲ್ಲಿ, ಕಷ್ಟದಲ್ಲಿ ಇರುವ ಮಕ್ಕಳನ್ನು ರಕ್ಷಿಸಲು

CHILD LINE 1098 NIGHT & DAY
24 HOUR NATIONAL HELPLINE

ಮಕ್ಕಳಿಂದ ಕೆಲಸ ಮಾಡಿಸುತ್ತಿರುವ ಅವರನ್ನು ಶಾಲೆಗೆ ಕಳಿಸದೆ ಬೇರೆ ಕೆಲಸಗಳಲ್ಲಿ ಉಪಯೋಗಿಸುತ್ತಿದ್ದರೆ

ಕುಟುಂಬದ ಸದಸ್ಯರಾಗಲಿ ಬಂಧುಗಳಾಗಲಿ ಇಬ್ಬಂದಿಕರವಾಗಿ ಅಸಭ್ಯವಾಗಿ ವರ್ತಿಸುತ್ತಿದ್ದರೆ

1098 (ಹತ್ತು - ಒಂಬತ್ತು - ಎಂಟು) ಉಚಿತ ಟೆಲಿಫೋನ್ ಸೇವಾ ಸೌಕರ್ಯಕ್ಕಾಗಿ ಫೋನ್ ಮಾಡಿರಿ.

IN ANY EMERGENCY
DIAL 100
TELANGANA POLICE
www.tspolice.gov.in
@ Telangana State Police








ರಾಷ್ಟ್ರ ವಿದ್ಯಾ ಪರಿಶೋಧನ ಶಿಕ್ಷಣ ಸಂಸ್ಥೆ
ತೆಲಂಗಾಣ, ಹೈದರಾಬಾದ.

ತೆಲಂಗಾಣ ಸರ್ಕಾರದ ಉಚಿತ ವಿತರಣೆ

## ಮಕ್ಕಳ ಹಕ್ಕುಗಳು

ಮಕ್ಕಳ ಹಕ್ಕುಗಳ ಪರಿರಕ್ಷಣೆ ಸದಸ್ಸಿನಲ್ಲಿ ತೆಗೆದುಕೊಂಡ ತೀರ್ಮಾನಗಳ ಮೇಲೆ ನಮ್ಮ ದೇಶವೂ ಸಹ ಸಹಿಯನ್ನು ಹಾಕಲಾಗಿದೆ.ಆ ವಿಧವಾಗಿ ನಮ್ಮ ದೇಶವೂ ಸಹ ಮಕ್ಕಳ ಪರಿರಕ್ಷಣೆಗೆ ಕಂಕಣ ಬದ್ದವಾಗಿದೆ. ಪ್ರಧಾನವಾದ ಮಕ್ಕಳ ಹಕ್ಕುಗಳು ಇವು.

- **ಜೀವಿಸುವ ಹಕ್ಕು** : ಆರೋಗ್ಯ ,ಪೌಷ್ಟಿಕ ಆಹಾರ,ಬೇಕಾದ ಜೀವನ ಪ್ರಮಾಣಗಳನ್ನು ಪಡೆಯುವ ಹಕ್ಕು ;
- **ರಕ್ಷಣೆ ಪಡೆಯುವ ಹಕ್ಕು** : ದೋಚುವುದರಿಂದ,ಕ್ರೂರತ್ವದಿಂದ, ದುರುಪಯೋಗದಿಂದ, ಉದಾಸೀನತೆಯಿಂದ, ಸ್ವತಂತ್ರ ರಕ್ಷಣೆ ಪಡೆಯುವ ಹಕ್ಕು ;
- **ಅಭಿವೃದ್ಧಿಗೊಳ್ಳುವ ಹಕ್ಕು** : ವಿದ್ಯೆ ,ಶಿಶು ಪೋಷಣೆ,ಸಾಮಾಜಿಕ ಭದ್ರತೆ,ವಿಶ್ರಾಂತಿ,ಸಂಸ್ಕೃತಿ,ಕಾಲಕ್ಷೇಪ ಮುಂತಾದವುಗಳನ್ನು ಪಡೆಯುವ ಹಕ್ಕು;
- **ಪಾಲ್ಗೊಳ್ಳುವ ಹಕ್ಕು** : ಮಕ್ಕಳ ಅಭಿಪ್ರಾಯಗಳನ್ನು ಕೇಳುವುದು,ವ್ಯಕ್ತೀಕರಣ ಸ್ವಾತಂತ್ರ್ಯ ,ಸಮಾಚಾರ ಪಡೆಯುವ, ಆಲೋಚಿಸುವ ಮುಂತಾದ ಮತ,ಆತ್ಮಪರವಾದ ಹಕ್ಕುಗಳು.

ಭಾರತ ಸರ್ಕಾರ ಮಕ್ಕಳಿಗಾಗಿ ಕೆಲವು ಹೇಳಿಕೊಳ್ಳುವಂತಹ ಕಾಯ್ದೆಗಳನ್ನು ಮಾಡಿದೆ ಅವುಗಳಲ್ಲಿ:

- **ಕ್ರಿ.ಶ. 1933ರ ಮಕ್ಕಳ ಕಾಯ್ದೆ** : ಚಿಕ್ಕಮಕ್ಕಳ ಶ್ರಮ,ದೋಚುವಿಕೆಯಿಂದ ರಕ್ಷಿಸುವುದು.ಅವಶ್ಯಕವಾದ ಆರ್ಥಿಕ ಸಹಾಯ ಮಾಡುವುದು(ತಂದೆ ತಾಯಿಗಳಿಗೆ ,ಉದ್ಯೋಗ ಕಲ್ಪನೆ ಕರ್ತರಿಗೆ)
- **ಕ್ರಿ.ಶ. 1938ರ ಮಕ್ಕಳ ಉದ್ಯೋಗ ಕಲ್ಪನೆ ಕಾಯ್ದೆ** : ಕಠಿಣ ಶ್ರಮಕ್ಕೆ ಒಳಗಾದ ಕೆಲಸಗಳಲ್ಲಿ ಮಕ್ಕಳನ್ನು ಬಳಸಿಕೊಳ್ಳಬಾರದು ಎಂಬ ಕಾಯ್ದೆ.
- **ಕ್ರಿ.ಶ. 1948ರ ಕೈಗಾರಿಕೆ ಕಾಯ್ದೆ** : ಕಾರ್ಖಾನೆಗಳಲ್ಲಿ ಮಕ್ಕಳಿಂದ ಕೆಲಸ ಮಾಡಿಸಬಾರದು ಎಂಬ ಕಾಯ್ದೆ.

*ಚೈಲ್ಡ್ ಲೈನ್ 98- ಆಪತ್ತಿನಲ್ಲಿರುವ ಮಕ್ಕಳನ್ನು*
*ಕಾಪಾಡಲು,*
*ಸಂರಕ್ಷಿಸಲು ಇಪ್ಪತ್ತುನಾಲ್ಕು ಗಂಟೆಗಳು ಕೆಲಸ*
*ಮಾಡುವ ರಾಷ್ಟ್ರೀಯ ಅತ್ಯವಶ್ಯಕ ವ್ಯವಸ್ಥೆ.*
*1098 ಕ್ಕೆ ಒಂದು ಫೋನ್ ಕರೆ ಮಾಡಿರಿ*
*ಆಪತ್ತಿಗೊಳಗಾದ ಮಕ್ಕಳಿಗೆ ಸಹಾಯ ಹಸ್ತನೀಡಿ*







ಸ್ವಾಧೀನದಲ್ಲಿ ಭೂಮಿ,ರೆವೆನ್ಯೂ ರಿಕಾರ್ಡಿನಲ್ಲಿ ಹೆಸರು,ಕೈಯಲ್ಲಿ ಪಟ್ಟಾ ಇದ್ದಾಗ ಮಾತ್ರ ಭೂಮಿ ಮೇಲಿನ ಹಕ್ಕಿಗೆ ಪೂರ್ತಿ ಭದ್ರತೆ



## ಭೂಮಿ ಶಾಶ್ವತ

SCERT TELANGANA

# ಸಮಾಜ ಶಾಸ್ತ್ರ

## 8ನೇ ತರಗತಿ

## Social Studies,Class VIII

(Kannada Medium)

### ಸಂಪಾದಕರು


**ಶ್ರೀ ಸಿ.ಎನ್.ಸುಬ್ರಮಣ್ಯಮ್,**
ಏಕಲವ್ಯ,ಮಧ್ಯಪ್ರದೇಶ್.

**ಪ್ರೊ.ಜಿ.ಓಂಕಾರನಾಥ್,** ಅರ್ಥಶಾಸ್ತ್ರ ವಿಭಾಗ,
ಯೂನಿವರ್ಸಿಟಿ ಆಪ್ ಹೈದರಾಬಾದು, ಹೈದರಾಬಾದು.

**ಪ್ರೊ.ಐ.ಲಕ್ಷ್ಮಿ,** ಇತಿಹಾಸ ವಿಭಾಗ,
ಉಸ್ಮಾನಿಯಾ ಯೂನಿವರ್ಸಿಟಿ, ಹೈದರಾಬಾದು.

**ಪ್ರೊ || ಕೋದಂಡ್‌ರಾಮ್**
ರಾಜನೀತಿಶಾಸ್ತ್ರ ವಿಭಾಗ
ಪಿ.ಜಿ.ಕಾಲೇಜ್, ಸಿಕಿಂದ್ರಾಬಾದ್, ಹೈದರಾಬಾದು

**ಪ್ರೊ.ಕೆ.ವಿಜಯ ಬಾಬು,**
ಇತಿಹಾಸ ವಿಭಾಗ,
ಕಾಕತೀಯ ಯೂನಿವರ್ಸಿಟಿ, ವರಂಗಲ್.

**ಡಾ||ಎಂ.ವಿ.ಶ್ರೀನಿವಾಸನ್,** Asst. Prof.
DESSH, NCERT, ಹೊಸ ದೆಹಲಿ.

**ಶ್ರೀ ಕೆ.ಸುರೇಶ್,**
ಮಂಚಿ ಪುಸ್ತಕಂ,ಹೈದರಾಬಾದು.

**ಪ್ರೊ.ಎಸ್.ಪದ್ಮಜ,** ಭೂಗೋಳಶಾಸ್ತ್ರ ವಿಭಾಗ,
ಉಸ್ಮಾನಿಯಾ ಯೂನಿವರ್ಸಿಟಿ, ಹೈದರಾಬಾದು.

**ಪ್ರೊ.ಐ.ತಿರುನಾಲಿ,** ಇತಿಹಾಸ ವಿಭಾಗ,
ದೆಹಲಿ ಯೂನಿವರ್ಸಿಟಿ, ದೆಹಲಿ.

**ಶ್ರೀ ಅರವಿಂದ್ ಸರ್ದಾಣ,**
ಏಕಲವ್ಯ,ಮಧ್ಯಪ್ರದೇಶ್.

**ಪ್ರೊ || ಎ.ಸತ್ಯನಾರಾಯಣ (ನಿವೃತ್ತ)**
ಇತಿಹಾಸ ವಿಭಾಗ, ಉಸ್ಮಾನಿಯಾ ವಿಶ್ವವಿದ್ಯಾಲಯ,
ಹೈದರಾಬಾದು

**ಡಾ || ಕೆ. ಕೈಲಾಷ್**
ಅಸಿಸ್ಟೆಂಟ್ ಪ್ರೊಫೆಸರ್, ರಾಜ್ಯಶಾಸ್ತ್ರ ವಿಭಾಗ
ಯೂನಿವರ್ಸಿಟಿ ಆಫ್ ಹೈದರಾಬಾದು, ಹೈದರಾಬಾದು

**ಡಾ||ಕೆ.ನಾರಾಯಣ ರೆಡ್ಡಿ,** Asst. Prof.
ಭೂಗೋಳಶಾಸ್ತ್ರ ವಿಭಾಗ, O.U, ಹೈದರಾಬಾದು.

**ಶ್ರೀಮತಿ ಸುಕನ್ಯ ಬೋಸ್,** Asst. Prof.
NIPFP, ಹೊಸ ದೆಹಲಿ.

**ಶ್ರೀ ಅಲೆಕ್ಸ್.ಎಂ.ಜಾರ್ಜ್,** ಏಕಲವ್ಯ,ಮಧ್ಯಪ್ರದೇಶ್.


### ಸಮನ್ವಯಾಧಿಕಾರಿಗಳು


**ಶ್ರೀ ಎ.ಸತ್ಯನಾರಾಯಣ ರೆಡ್ಡಿ**
ನಿರ್ದೇಶಕರು, ಎಸ್.ಸಿ.ಇ.ಆರ್.ಟಿ.
ತೆಲಂಗಾಣ, ಹೈದರಾಬಾದು.

**ಶ್ರೀ ಬಿ.ಸುಧಾಕರ್**
ನಿರ್ದೇಶಕರು, ಸರ್ಕಾರಿ ಪಠ್ಯ ಪುಸ್ತಕ ಮುದ್ರಣಾಲಯ,
ತೆಲಂಗಾಣ, ಹೈದರಾಬಾದು.

**ಡಾ|| ಎನ್.ಉಪೇಂದರ್ ರೆಡ್ಡಿ**
ಪ್ರೊಫೆಸರ್, ಪಠ್ಯಪ್ರಣಾಳಿಕೆ ಮತ್ತು ಪಠ್ಯಪುಸ್ತಕ ವಿಭಾಗ,
ಎಸ್.ಸಿ.ಇ.ಆರ್.ಟಿ.ತೆಲಂಗಾಣ, ಹೈದರಾಬಾದು.





ತೆಲಂಗಾಣ ಸರ್ಕಾರದ ಪ್ರಚುರಣೆ, ಹೈದರಾಬಾದ್.


ಶಿಕ್ಷಣದಿಂದ ಬೆಳೆಯಿರಿ
ವಿನಯಶೀಲರಾಗಿ ನಡೆದುಕೊಳ್ಳಿ.

ಕಾನೂನನ್ನು ಗೌರವಿಸಿ
ಹಕ್ಕುಗಳನ್ನು ಪಡೆದುಕೊಳ್ಳಿ

SCERT TELANGANA

© Government of Telangana, Hyderabad.

*First Published 2013*

*New Impressions 2014, 2015, 2016, 2017, 2018, 2019, 2020.*

All rights reserved.

No part of this publication may be reproduced, stored in a retrieval system. or transmitted, in any form or by any means without the prior premission in writting of the publisher, nor be otherwise circulated in any form of binding or cover other than that in which it is published and without a similar condition including this condition being imposed on the subsequent purcharer.

The copy right holder of this book is the Director of School Education, Hyderabad, Telangana.

We have used some photographs which are under creative common licence. They are acknowledged at the end of the book.

This Book has been printed on 70 G.S.M. Maplitho Title Page 200 G.S.M. White Art Card

**ತೆಲಂಗಾಣ ಸರ್ಕಾರದ ಉಚಿತ ವಿತರಣೆ 2020–21**

*Printed in India*
at the Telangana Govt. Text Book Press,
Mint Compound, Hyderabad,
Telangana.

— o —

SCERT TELANGANA

# ಮುನ್ನುಡಿ

ನಿಮ್ಮ ಸುತ್ತಲೂ ಇರುವ ಸಮಾಜವನ್ನು ಅಧ್ಯಯನ ಮಾಡುವ ಪ್ರಕ್ರಿಯೆಯ ಭಾಗವಾಗಿ, ಸಮಾಜ ಶಾಸ್ತ್ರ ವಿದ್ಯಾಪ್ರಣಾಳಿಕೆ ಭಾಗವಾಗಿ ಈ ಪುಸ್ತಕ ರೂಪುಗೊಂಡಿದೆ. ಇದು ವಿದ್ಯಾ ಪ್ರಣಾಳಿಕೆಯಲ್ಲಿ ಒಂದು ಸಣ್ಣ ಭಾಗವಷ್ಟೇ. ಸಮಾಜ ಶಾಸ್ತ್ರ ವಿದ್ಯಾಪ್ರಣಾಳಿಕೆ ನಿಮಗೆ ಗೊತ್ತಿರುವ ಅಂಶಗಳನ್ನು ತರಗತಿ ಕೋಣೆಯಲ್ಲಿ ನಾಲ್ವರೊಂದಿಗೆ ಹಂಚಿಕೊಳ್ಳಲು, ವಿಶ್ಲೇಷಿಸಿಕೊಳ್ಳಲು ಸಹಾಯವಾಗುತ್ತದೆ. ಸಮಾಜದಲ್ಲಿನ ವಿವಿಧ ಅಂಶಗಳನ್ನು ಏಕೆ ಹಾಗೆ ಇವೆ ಎಂದು ಪ್ರಶ್ನಿಸಲು, ಸಮಸ್ಯಗಳು ಹೀಗೇಕೆ ಇವೆ ಎಂದು ಆಲೋಚಿಸಲು ಸಮಾಜ ಶಾಸ್ತ್ರ ಉಪಯೋಗಪಡುತ್ತದೆ. ನೀವು ನಿಮ್ಮ ಸ್ನೇಹಿತರು ತರಗತಿ ಕೋಣೆಯಿಂದ ಬಾಹ್ಯ ಪ್ರಪಂಚದಲ್ಲಿನ ಮಾರುಕಟ್ಟೆ, ಪಂಚಾಯಿತಿ, ಮುನ್ಸಿಪಾಲಿಟಿ, ಹಳ್ಳಿಗಳಲ್ಲಿನ ಹೊಲಗಳು, ದೇವಾಲಯಗಳು, ಮಸೀದಿಗಳು, ವಸ್ತು ಪ್ರದರ್ಶನ ಶಾಲೆಗಳು (ಮ್ಯೂಜಿಯಂ), ಇನ್ನೂ ಎಷ್ಟೋ ಅಂಶಗಳು ತಿಳಿದುಕೊಳ್ಳಲು ಉತ್ಸುಕತೆಗೊಳಿಸುತ್ತದೆ. ರೈತರು, ಅಂಗಡಿಯವರು, ಉದ್ಯೋಗಸ್ತರು, ದೈವ ಕಾರ್ಯ ನಿರ್ವಾಹಕರು ಮೊದಲಾದವರೊಂದಿಗೆ ಚರ್ಚಿಸುವ ಅವಕಾಶವನ್ನು ಈ ಪುಸ್ತಕ ಕಲ್ಪಿಸುತ್ತದೆ.

ಈ ಪುಸ್ತಕ ನಿನ್ನ ಮುಂದೆ ಎಷ್ಟೋ ಸಮಸ್ಯೆಗಳನ್ನು ಇಟ್ಟು ಅವುಗಳ ಅಧ್ಯಯನ ಮಾಡಿ ಅರ್ಥ ಮಾಡಿಕೊಳ್ಳುವ ಅವಕಾಶವನ್ನು ನೀಡುತ್ತದೆ. ಈಪುಸ್ತಕದಲ್ಲಿ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳು ಇರುವುದಿಲ್ಲ. ನೀವು ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಬೇಕು. ನಿಜವಾಗಿ ಇದು ಸಂಪೂರ್ಣ ಗ್ರಂಥ ಅಲ್ಲ. ನಿಮ್ಮ ಸ್ನೇಹಿತರ, ಶಿಕ್ಷಕರ ಅನುಭವಗಳು, ಸಂದೇಹಗಳನ್ನು ಬೇರ್ಪಡಿಸಿ ಚರ್ಚಿಸಿ ಜೋಡಿಸಿದಾಗ ಪರಿಪೂರ್ಣತೆ ಉಂಟಾಗುತ್ತದೆ. ಪುಸ್ತಕದಲ್ಲಿನ ಬಹಳ ಅಂಶಗಳಲ್ಲಿ ನೀವು ವಿರೋಧಿಸಬಹುದು. ಸಂಕೋಚವಿಲ್ಲದೇ ಕಾರಣಗಳನ್ನು ತಿಳಿಸಬಹುದು. ಕೊನೆಯಲ್ಲಿ ಸ್ವಂತವಾಗಿ ಪರಿಷ್ಕಾರವನ್ನು ಪಡೆಯಬಹುದು. ಹಾಗೆ ಪಡೆದ ಸಮಾಧಾನವನ್ನು ಮತ್ತೆ ನೋಡಬೇಕೆಂದೆನಿಸಿದರೆ ಪ್ರಶ್ನೆಗಳೆಲ್ಲವನ್ನೂ ಜಾಗ್ರತ್ತೆಯಿಂದ ಪಟ್ಟಿಯಾಗಿ ತಯಾರು ಮಾಡಿ ಸ್ನೇಹಿತರ, ಶಿಕ್ಷಕರ, ಹಿರಿಯರ ಸಹಾಯವನ್ನು ಪಡೆದು ಒಂದು ಸ್ಥಿರವಾದ ನಿರ್ಣಯವನ್ನು ತೆಗೆದುಕೊಳ್ಳಿರಿ.

ಸಾಮಾಜಿಕ ಜೀವನದಲ್ಲಿ ವಿಭಿನ್ನ ಮುಖಗಳನ್ನು ಅಧ್ಯಯನ ಮಾಡಲು ಈ ಪುಸ್ತಕ ಸಹಾಯವಾಗುತ್ತದೆ. ಭೂಸ್ವರೂಪಗಳು, ಪ್ರಜೆಗಳ ಭಿನ್ನತ್ವ, ಪ್ರಜೆಗಳ ಜೀವನಾಧಾರ, ಪ್ರಜೆಗಳ ಸಾಮೂಹಿಕ ಅವಸರಗಳನ್ನು, ಅವುಗಳ ನಿರ್ವಹಣೆಯನ್ನು ಅಸಮಾನತೆಯಿಂದ ಕೂಡಿದ ಸಮಾಜದಲ್ಲಿಸಾಧನೆ ಹೇಗೋ, ವಿವಿಧ ದೇವರುಗಳನ್ನು, ವಿವಿಧ ಮಾರ್ಗಗಳಲ್ಲಿ ಪೂಜಿಸುವ ವಿಧಾನ ಕೊನೆಯಲ್ಲಿ ಒಬ್ಬರು ಮತ್ತೊಬ್ಬರಲ್ಲಿ ಸಂಬಂಧ ಬಾಂಧವ್ಯಗಳನ್ನು, ಫಲಿತವಾಗಿ ಹಂಚಿಕೊಳ್ಳುವ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು, ಸಮಾಚಾರ ಹಂಚಿಕೊಳ್ಳಲು ಈ ಪುಸ್ತಕ ಅವಕಾಶ ನೀಡುತ್ತದೆ.

ಮೇಲಿನ ಅಂಶಗಳಲ್ಲಿ ಕೆಲವನ್ನು ಅರ್ಥ ಮಾಡಿಕೊಳ್ಳುವುದಕ್ಕೋಸ್ಕರ ನಾವು ಭೂಮಿ, ಮೈದಾನಗಳು, ಪ್ರಸ್ಥಭೂಮಿಗಳು, ನದಿಗಳು, ಸಮುದ್ರಗಳು ಮೊದಲಾದವುಗಳ ಬಗ್ಗೆ ಅಧ್ಯಯನ ಮಾಡಬೇಕಾಗುತ್ತದೆ. ಕೆಲವು ಸಾವಿರ ವರ್ಷಗಳ ಹಿಂದೆ ಏನು ನಡೆದಿದೆಯೋ, ಮತ್ತೆ ನೋಡದೆ ಹೊರತು ವಿಷಯಗಳನ್ನು ಅರ್ಥ ಮಾಡಿಕೊಳ್ಳಲಾರೆವು. ಒಟ್ಟನಲ್ಲಿ ವಿಭಿನ್ನ ವಿಧಗಳ ಪ್ರಜೆಗಳ ಬಳಿ ಹೋಗಿ ಅವರೊಂದಿಗೆ ಸಂಬಾಷಿಸಿದರೆ ಹೊರತು ಸಾಮಾಜಿಕ ಜೀವನ ಅರ್ಥ ವಾಗುವುದಿಲ್ಲ.

ಈ ಪುಸ್ತಕದಲ್ಲಿನ ಪಾಠಗಳನ್ನು ತರಾತುರಿಯಾಗಿ ಪೂರ್ತಿಮಾಡುವುದಕ್ಕಿಂತ ಕೊಟ್ಟ ಪ್ರಶ್ನೆಗಳನ್ನು, ಚಟುವಟಿಕೆಗಳನ್ನು ಸಮರ್ಥವಂತವಾಗಿ ನಿರ್ವಹಿಸುವುದು ಅವಸರ. ಈ ಪಠ್ಯ ಪುಸ್ತಕವನ್ನು ಓದುತ್ತಿರುವಾಗ ನಿಮಗೆ ಎಷ್ಟೋ ಪ್ರಶ್ನೆಗಳು, ಚಟುವಟಿಕೆಗಳು ಎದುರಾಗುತ್ತಿರುತ್ತವೆ. ಈ ಪ್ರಶ್ನೆಗಳಿಗೆ ಉತ್ತರಗಳಿಗೋಸ್ಕರ ಪ್ರಯತ್ನಿಸಬೇಕು. ಕೊಟ್ಟ ಚಟುವಟಿಕೆಗಳನ್ನು, ಪ್ರಾಜೆಕ್ಟುಗಳನ್ನು ಮಾಡಿದ ನಂತರವೇ ಮುಂದಿನ ಪಾಠ್ಯಾಂಶಕ್ಕೆ ಹೋಗಬೇಕು.

ಬಹಳ ಪಾಠಗಳಲ್ಲಿ ಪ್ರಾಜೆಕ್ಟು ಕೆಲಸಗಳುನೀಡಲಾಗಿದೆ. ಅವುಗಳನ್ನು ನಿರ್ವಹಿಸಲು ಕೆಲವು ದಿನಗಳು ಹಿಡಿಯುತ್ತದೆ. ಇವು ಸಮಾಜ ಶಾಸ್ತ್ರದಲ್ಲಿನ ವಿಷಯ ಶೇಖರಣೆಗೆ, ವಿಶ್ಲೇಷಣೆಗೆ, ಪ್ರದರ್ಶನೆಗೆ ಬೇಕಾದ ನೈಪುಣ್ಯಗಳನ್ನು ಬೆಳೆಸುತ್ತವೆ. ಪಾಠದಲ್ಲಿರುವವನ್ನು ಕಂಠಪಾಠ ಮಾಡದೆ ಅವುಗಳ ಬಗ್ಗೆ ಆಲೋಚಿಸಿ ಸ್ವಂತ ಅಭಿಪ್ರಾಯವನ್ನು ಏರ್ಪಡಿಸಿಕೊಳ್ಳಬೇಕು.

**ಸಂಚಾಲಕರು, SCERT,**
**ತೆಲಂಗಾಣ ಹೈದರಾಬಾದು.**

SCERT TELANGANA

## ರಚನಾಕಾರರು

**ಡಾ.ಎನ್.ಚಂದ್ರಾಯುಡು,** Asst.Prof.
ಭೂಗೋಳಶಾಸ್ತ್ರವಿಭಾಗ, S.V.ಯೂನಿವರ್ಸಿಟಿ, ತಿರುಪತಿ

**ಶ್ರೀಎಂ.ನರಸಿಂಹಾರೆಡ್ಡಿ,** GHM,
ZPHS ಪೆದ್ದಜಂಗಮಪಲ್ಲಿ, Y.S.R.ಕಡಪ.

**ಶ್ರೀಕೆ.ಸುಬ್ರಮಣ್ಯಮ್,** ಉಪನ್ಯಾಸಕರು, ಸರ್ಕಾರಿ DIET, ಕರ್ನೂಲ್.

**ಶ್ರೀಟಿ.ರವೀಂದರ್,** ಉಪನ್ಯಾಸಕರು, ಸರ್ಕಾರಿ DIET, ವರಂಗಲ್.

**ಶ್ರೀಕೆ.ಲಕ್ಷ್ಮಿನಾರಾಯಣ** ಉಪನ್ಯಾಸಕರು
ಸರ್ಕಾರಿ DIET, ಅಂಗಲೂರು,ಕೃಷ್ಣ

**ಶ್ರೀ ಮಲ್ಯಾಲ ಪಾಪಯ್ಯ,** Lecturer,
ಎಸ್.ಸಿ.ಇ.ಆರ್.ಟಿ., ಆಂಧ್ರಪ್ರದೇಶ್

**ಡಾ.ರಾಚರ್ಲ ಗಣಪತಿ,** S.A. ZPHS ಲಾಡೆಲ್ಲ, ವರಂಗಲ್.

**ಶ್ರೀ ಎಸ್.ರಹಮತುಲ್ಲಾ,** S.A
ZPHS ಭಾಸ್ಕರ್‌ಪೇಟ್, Y.S.R.ಕಡಪ.

**ಶ್ರೀ ಬಿ.ವಿ.ಎನ್.ಸ್ವಾಮಿ** S.A, GHS ಹುಜೂರಾಬಾದ್, ಕರೀಂನಗರ್.

**ಶ್ರೀ ಕೊರಿವಿ ಶ್ರೀನಿವಾಸ ರಾವ್,** S.A.
MPUPS P.R.ಪಲ್ಲಿ,ತೆಕ್ಕಲಿ,ಶ್ರೀಕಾಕುಳಂ.

**ಶ್ರೀ ಪಿ.ವಿ.ಕೃಷ್ಣಾರಾವ್,** LFL HM,
P.S. ಮೊಹಲ್ಲಾ No.16, ಯೆಲ್ಲಂದು,ಖಮ್ಮಂ

**ಶ್ರೀ ಟಿ.ವೆಂಕಟಯ್ಯ** S.A,ZPHS ಎಗುವವೀಡಿ,ಚಿತ್ತೂರು.

**ಶ್ರೀ ಕಾನಂ ಕುಮಾರಸ್ವಾಮಿ,** SA, ZPHS, ದೌಡೇಪಲ್ಲಿ, ಆದಿಲಾಬಾದ್

**ಶ್ರೀ ವಂಗೂರಿ ಗಂಗಿರೆಡ್ಡಿ,** SA, ZPHS, ಕೊಂದುರ್ಗು,ಮಹಬೂಬನಗರ್

**ಶ್ರೀ ಆಯಚಿಂತುಲ ಲಕ್ಷ್ಮಣರಾವ್,** S.A.
GHS ಧಂಗರ್‌ವಾಡಿ,ಕರೀಂನಗರ್.

**ಶ್ರೀ ಉಂಡೇಟಿ ಆನಂದಕುಮಾರ್,** S.A
ZPHS ಸುಜಾತ ನಗರ್,ಖಮ್ಮಂ.

**ಶ್ರೀ ಪಿ.ಶ್ರೀನಿವಾಸುಲು,** S.A,
ZPHS ಹವೇಲಿ ಘನ್‌ಪೂರ್,ಮೆದಕ್.

**ಶ್ರೀ ಪಿ.ಜಗನ್ ಮೋಹನ್ ರೆಡ್ಡಿ,** S.A
ZPHS ಪಿಡ್ಚೇಡ್,ಗಜ್ವೇಲ್,ಮೆದಕ್.

**ಶ್ರೀ ಎ.ರವೀಂದರ್,** S.A,GHS ಒರುಸ್,ವರಂಗಲ್.

**ಶ್ರೀ ಎ.ಎಂ.ಶ್ರೀನಿವಾಸ ರಾವ್,** S.A
ZPHS ಕೊಲಾಲಪುಡಿ,ಪ್ರಕಾಶಂ.

**ಶ್ರೀ ಕೆ.ಮುಖ ಲಿಂಗಂ,** S.A ZPHS ತಿಲಾರು,ಶ್ರೀಕಾಕುಳಂ

**ಶ್ರೀ ಎನ್.ಸುಬ್ರಮಣ್ಯಮ್,** S.A,ZPHS ಟಂಗುಟೂರು,ನೆಲ್ಲೂರು.

**ಶ್ರೀ ಪಿ. ರಥಂಗಪಾಣಿ ರೆಡ್ಡಿ,** SA, ZPHS, ಪೋಲ್ಕಂಪಲ್ಲಿ,
ಮಹಬೂಬ್‌ನಗರ್

**ಶ್ರೀಮತಿ ಬಿ.ಮರಿಯಾರಾಣಿ,** S.A. M.P.U.P.S
ಚಿಲುಕನಗರ್,ರಂಗಾರೆಡ್ಡಿ

**ಶ್ರೀಮತಿ ಎಸ್.ಲಕ್ಷ್ಮಿ,**
GPS ಭಗ್ಗೂಸರಿಮೋ,ಹೈದರಾಬಾದು.

**ಡಾ.ಚಕಿನಾಲ ಶ್ರೀನಿವಾಸ್,** ಜಿ.ಹೆಚ್.ಎಮ್,ಪ್ರ.ಉ.ಪಾಠಶಾಲ,
ದುರ್ಗಮ್ಮಗಡ್ಡ, ಕರೀಂ ನಗರ್.

**ಶ್ರೀ ಎನ್.ಸಿ. ಜಗನ್ನಾಥ್,** GHS, ಕುಲ್ಸುಂಪುರ, ಹೈದರಾಬಾದು

## ಸಮನ್ವಯಾಧಿಕಾರಿಗಳು

**ಶ್ರೀಎಂ.ಪಾಪಯ್ಯ,** ಉಪನ್ಯಾಸಕರು
SCERT, A.P., ಹೈದರಾಬಾದು.

**ಶ್ರಿ ಎಸ್.ವಿನಾಯಕ್,** ಕೋ ಆರ್ಡಿನೇಟರ್
C&T Dept. SCERT, A.P., ಹೈದರಾಬಾದು.

**ಶ್ರೀಎಂ.ನರಸಿಂಹಾರೆಡ್ಡಿ,** GHM
ZPHS ಪೆದ್ದಜಂಗಮಪಲ್ಲಿ, Y.S.R.ಕಡಪ..

**ಡಾ.ರಾಚರ್ಲ ಗಣಪತಿ,** S.A.
ZPHS ಲಾಡೆಲ್ಲ, ವರಂಗಲ್

**ಶ್ರೀ ಆಯಚಿಂತುಲ ಲಕ್ಷ್ಮಣರಾವ್,** S.A.
GHS ಧಂಗರ್‌ವಾಡಿ,ಕರೀಂನಗರ್.

**ಶ್ರೀ ಕಸಂ ಕುಮಾರಸ್ವಾಮಿ,** S.A
ZPHS ದೌಡೇಪಲ್ಲಿ,ಆದಿಲಾಬಾದ್.

**ಶ್ರೀ ಉಂಡೇಟಿ ಆನಂದಕುಮಾರ್,** S.A
ZPHS ಸುಜಾತ ನಗರ್,ಖಮ್ಮಂ.

## ಕನ್ನಡ ಅನುವಾದಕರು

**ಶ್ರೀ ಎಂ.ಗಿರಿಜಾಪತಿ,** S.A
ZPHS ಡಿ.ಹಿರೇಹಾಳ್,ಅನಂತಪುರಂ

**ಶ್ರೀಮತಿ ವೈ.ಪಾದಮ್ಮ,** S.A
ZPHS ಡಿ.ಹಿರೇಹಾಳ್,ಅನಂತಪುರಂ

**ಶ್ರೀ ಎಂ.ಶಂಕರಪ್ಪ** S.A
MPUPS ಉಪ್ಪರಹಾಳ್,ಕರ್ನೂಲ್

**ಶ್ರೀಮತಿ ಜಿ.ಈರಾಕ್ಷಮ್ಮ** S.A
ZPHS ಡಿ.ಹಿರೇಹಾಳ್,ಅನಂತಪುರಂ

**ಶ್ರೀ ಬಿ.ವಿರೋಬಪ್ಪ** S.A
ZPHS ವಿರುಪಾಪುರಂ,ಕರ್ನೂಲ್

**ಶ್ರೀ ಜಿ.ಗಂಗಾಧರಯ್ಯ,** S.A
ZPHS ಕೌತಾಳಂ,ಕರ್ನೂಲ್

**ಶ್ರೀ ನಾಗರಾಜ,** S.A
MPUPS ಚೇಗುಂಟ,
ಮಹಬೂಬನಗರ್.

**ಶ್ರೀ ನಾಗಭೂಷಣ** S.A
ZPHS,--

## ರೇಖಾಚಿತ್ರ

**ಶ್ರೀಕುರೆಲ್ಲ ಶ್ರೀನಿವಾಸ್,** GHM
ZPHS ಕುರ್ಮೇಡು,ನಲ್ಗೊಂಡ

**ಶ್ರೀಪಿ.ಆಂಜನೇಯುಲು,** Geomapper,
CESS-DCS, ಹೈದರಾಬಾದ್

## ರೇಖಾಚಿತ್ರ ಮತ್ತು ವಿನ್ಯಾಸ

**ಶ್ರೀಕುರ್ರಾ ಸುರೇಶ್ ಬಾಬು**
MANA ಮೀಡಿಯಾ,ಗ್ರಾಫಿಕ್ಸ್ **ಹೈದರಾಬಾದು.**

**ಶ್ರೀಕನ್ನಯ್ಯ ದಾರಾ,** S.C.E.R.T. AP, ಹೈದರಾಬಾದು.

**ಶ್ರೀಮತಿ ಕೆ. ಪಾವನಿ,** ಕಂಪ್ಯೂಟರ್ ಆಪರೇಟರ್, ಹೈದರಾಬಾದು.

SCERT TELANGANA

## ಪುಸ್ತಕವನ್ನು ಉಪಯೋಗಿಸುವಲ್ಲಿ ಉಪಾಧ್ಯಾಯರಿಗೆ, ವಿದ್ಯಾರ್ಥಿಗಳಿಗೆ ಸೂಚನೆಗಳು

- ಸಮಾಜ ಶಾಸ್ತ್ರ ಭಾವನೆಗಳಿಗೆ ಒಂದು ಸಮಗ್ರ ವಿಧಾನವನ್ನು ಅನುಸರಿಸಲು ಈ ಪುಸ್ತಕದಲ್ಲಿ ಪ್ರಯತ್ನಿಸಲಾಗಿದೆ.ಇದು ರಾಷ್ಟ್ರೀಯ,ರಾಜ್ಯ ಪಠ್ಯ ಯೋಜನೆಯ ಕಾಯ್ದೆಗೆ ಅನುಗುಣವಾಗಿದೆ.ಹತ್ತನೇ ತರಗತಿಯ ನಂತರ ವಿಷಯಗಳ ವಿಭಜನೆ ಮಾಡಬೇಕೆಂದು ಇವು ಹೇಳುತ್ತವೆ.ಚರಿತ್ರೆ, ಅರ್ಥಶಾಸ್ತ್ರ,ಪೌರಶಾಸ್ತ್ರ, ಭೂಗೋಳ ಶಾಸ್ತ್ರ ಎನ್ನುವ ವಿವಿಧ ವಿಭಾಗಗಳಿಗೆ ಇಲ್ಲಿಯವರೆಗೂ ಭೋಧಿಸುತ್ತಾ ಬಂದಿದ್ದಾರೆ.ಆದರೆಇವುಗಳಲ್ಲಿ ಚರ್ಚಿಸುವ ಅಂಶಗಳು ಒಂದಕ್ಕೊಂದು ಮಿಳಿತವಾಗಿದ್ದವು. ಈಪಠ್ಯ ಪುಸ್ತಕದಲ್ಲಿನ ವಿಷಯ ಸೂಚಿಕೆಯ ಪುಟ ಗಮನಿಸಿದಲ್ಲಿ ಆರು ಅಂಶಗಳು ಕೆಳಗಿನ ವಿವಿಧ ಭಾವನೆಗಳನ್ನು ಚರ್ಚಿಸಲಾಗಿದೆ ಎಂದು ಅರ್ಥವಾಗುತ್ತದೆ.

- ಶಿಕ್ಷಕರು,ವಿಧ್ಯಾರ್ಥಿಗಳು ಪಠ್ಯ ಪುಸ್ತಕವನ್ನು ತರಗತಿಗೆ ತಂದು ಅದರ ಆಧಾರವಾಗಿ ಕಲಿತುಕೊಳ್ಳುವಂತೆ ಇದನ್ನು ತಯಾರಿಸಲಾಗಿದೆ, ಪಠ್ಯಪುಸ್ತಕವನ್ನು ತರಗತಿ ಕೋಣೆಯಲ್ಲಿ ಓದಿ,ಚರ್ಚಿಸುವುದು ಬಹಳ ಮುಖ್ಯ.

- **ಪಾಠಗಳಲ್ಲಿ ಭಾಷೆ :** ಮಕ್ಕಳಿಗೆ ಸುಲಭವಾಗಿ ಅರ್ಥವಾಗುವಂತೆ ಪಾಠಗಳನ್ನು ಬರೆಯುವ ಪ್ರಯತ್ನ ಮಾಡಲಾಗಿದೆ.ಆದರೆ ವಿವರಣೆ , ಸ್ಪಷ್ಟತೆ, ನೀಡಬೇಕಾದ ಕೆಲವು ಪದಗಳು ಇವೆ. ಹೆಚ್ಚು ಸಮಾಚಾರ ಇರುವ ಪಾಠಗಳನ್ನು ಬರೆದಿಲ್ಲ. ಚರ್ಚಿಸುತ್ತಿರುವ ಭಾವನೆಗೆ ಸಂಬಂಧಿಸಿದ ಉದಾಹರಣೆಗಳನ್ನು ನೀಡಲು ಪ್ರಯತ್ನಿಸುತ್ತಿದ್ದೇನೆ. ಪ್ರತಿ ಅಧ್ಯಾಯದಲ್ಲಿ ಕೆಲವು ಮುಖ್ಯ ಭಾವನೆಗಳು ಇವೆ.ಇವುಗಳನ್ನು ಸಾಧಾರಣವಾಗಿ ಉಪಶೀರ್ಷಿಕೆಗಳಾಗಿ ನೀಡಲಾಗಿದೆ.ಒಂದೇ ಅವಧಿಯಲ್ಲಿ ಸುಮಾರು 2–3 ಉಪ ಶೀರ್ಷಿಕೆಗಳನ್ನು ಬೋಧಿಸಲು ಅವಕಾಶವಾಗುತ್ತದೆ.

- ಈ ಪಠ್ಯ ಪುಸ್ತಕದಲ್ಲಿ ಭಿನ್ನ ರಚನೆಯ ಶೈಲಿಗಳು ಉಪಯೋಗಿಸಲಾಗಿದೆ.ಪಾಠ 9ರಲ್ಲಿ ಮಾದರಿ ಕೆಲವು ಸಲ ಕಿರಣ್, ಸರಿತ ರಂತಹ ಕಲ್ಪಿತ ಕಥೆಗಳು ಇವೆ. ಇವು ಕಲ್ಪತವೇ ಆಗಿದ್ದರೂ ಆ ಭಾವನೆಯನ್ನು ವಿವರಿಸಲು ವಿವಿಧ ವಾಸ್ತವಗಳ ಆಧಾರವಾಗಿ ಬರೆಯಲಾಗಿದೆ. ಪಾಠ 6ರಲ್ಲಿ ಸಂಗರೇಣಿ ಇದ್ದಿಲು ಗಣಿಗಳ ಮಾದರಿ ಕೆಲವು ಕೇಸ್ ಸ್ಟಡಿಗಳಿವೆ.ಪಾಠ 14ರಲ್ಲಿ ಕಾಯ್ದೆ ಮಾಡುವ ಅಧಿಕಾರಿಗಳು ವಿವರಿಸುವಲ್ಲಿ ಸಮಾಚಾರ ಪಟ್ಟಿ ರೂಪದಲ್ಲಿ ಅಳವಡಿಸಲಾಗಿದೆ. ಈವಿದವಾಗಿ ಭಿನ್ನ ಶೈಲಿಗಳ ಮೂಲಕ ಭಾವನೆಗಳನ್ನು ವಿವರಿಸಲಾಗಿದೆ.

- **ಪಾಠದ ಮಧ್ಯೆ ಪಾಠದ ಕೊನೆಗೆ ಪ್ರಶ್ನೆಗಳನ್ನು ಉಪಯೋಗಿಸುವುದು :** ಪಾಠದ ಮಧ್ಯದಲ್ಲಿ ಪ್ರಶ್ನೆಗಳು ಇರುವುದು ನೀವು ಗಮನಿಸಿರಬಹುದು.ಈಪ್ರಶ್ನೆಗಳನ್ನು ಬಿಡಬೇಡಿರಿ. ಬೋಧನೆ – ಅಭ್ಯಸನ ಪ್ರಕ್ರಿಯೆಯಲ್ಲಿ ಇವು ಸಮಗ್ರಭಾಗ. ಇವು ಭಿನ್ನವಾದ ಪ್ರಶ್ನೆಗಳು. ನೀವು ಓದಿದ ಅಂಶಗಳನ್ನು ಕ್ರೋಢೀಕರಿಸಲು, ಅಂದಾಜು ಹಾಕಲು ಕೆಲವು ಪ್ರಶ್ನೆಗಳು ಉಪಯೋಗ ಬೀಳುತ್ತವೆ ಇಲ್ಲವೆ ಮುಂದಿನ ಉಪಶೀರ್ಷಿಕೆಯಲ್ಲಿ ಓದಿದಕ್ಕೆ ಸಂಬಂಧಿಸಿದ ಮತ್ತಷ್ಟು ಸಮಾಚಾರ ಶೇಖರಿಸಲು ಮತ್ತೆ ಕೆಲವು ಪ್ರಶ್ನೆಗಳು ಉಪಯೋಗ ಬೀಳುತ್ತವೆ.ಈ ಪ್ರಶ್ನೆಗಳಿಗೆ ಸಮಾಧಾನಗಳು ನೀವು ಹೇಳಬಾರದು.ತಮ್ಮಷ್ಟಕ್ಕೆ ತಾವೇ ಸಮಾಧಾನಗಳನ್ನು ಕಂಡುಕೊಳ್ಳಲು ವಿಧ್ಯಾರ್ಥಿಗಳಿಗೆ ಅವಕಾಶ ನೀಡಬೇಕು. ಈ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳಲು,ಸಮಾಧಾನಗಳ ಕುರಿತು ಮತ್ತೊಬ್ಬರೊಂದಿಗೆ ಚರ್ಚಿಸಿಕೊಳ್ಳಲು ವಿಧ್ಯಾರ್ಥಿಗಳಿಗೆ ಅನುಮತಿ ನೀಡಿರಿ.

- **ಈ ಪುಸ್ತಕದಲ್ಲಿ ವಿವಿಧ ರೀತಿಯ ಪ್ರಶ್ನೆಗಳಿವೆ:** 1)ವಿಧ್ಯಾರ್ಥಿಗಳಿಗೆ ತಮ್ಮ ಅನುಭವಗಳನ್ನು ಬರೆಯಲು ಹೇಳುವುದು; 2) ಪಾಠದಲ್ಲಿ ನೀಡಿದ ಉದಾಹರಣೆಗಳಿಂದ ತಮ್ಮ ಅನುಭವಗಳನ್ನು ಹೋಲಿಸಿಕೊಳ್ಳಿರಿ ಎನ್ನುವುದು; 3)ಪಠ್ಯ ಪುಸ್ತಕದಲ್ಲಿ ನೀಡಿದ ಎರಡು–ಮೂರು ಪರಿಸ್ಥಿತಿಗಳನ್ನು ಹೋಲಿಸಿರೆಂದು ಹೇಳುವುದು; 4)ಒಂದೇ ಕೇಸ್ ಸ್ಟಡಿ ಇಲ್ಲವೇ ಪರಿಸ್ಥಿತಿಗಳ ಮೇಲೆ ತಮ್ಮ ಅಭಿಪ್ರಾಯ ತಿಳಿಸಿರೆಂದು ಹೇಳುವ ಪ್ರಶ್ನೆಗಳು(ವಿಧ್ಯಾರ್ಥಿಗಳ ಅಭಿಪ್ರಾಯಗಳು ಕೇಳಿದಾಗ ಅವು ಎಲ್ಲಾ ಒಂದೇ ರೀತಿಯಲ್ಲಿ ಇರಬೇಕೆಂದಿಲ್ಲ)ಎಲ್ಲರನ್ನು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಬೇಕು ; 5) ಪಾಠದಲ್ಲಿ ವಿವರಿಸಿದ ಪರಿಸ್ಥಿತಿಗಳನ್ನು ಮೌಲ್ಯಮಾಪನ ಮಾಡುವ ಪ್ರಶ್ನೆಗಳು ಕೊಡಲಾಗಿದೆ.

- ತರಗತಿ ಕೋಣೆಯಲ್ಲಿ ಈ ಪ್ರಶ್ನೆಗಳನ್ನು ಶಿಕ್ಷಕರು ಭಿನ್ನ ರೀತಿಯಲ್ಲಿ ಉಪಯೋಗಿಸಿಕೊಳ್ಳಬಹುದು. ಕೆಲವು ಪ್ರಶ್ನೆಗಳ ಸಮಾಧಾನವನ್ನು ನೋಟುಪುಸ್ತಕದಲ್ಲಿ ಬರೆಸಬಹುದು. ಕೆಲವುಗಳನ್ನು ಚಿಕ್ಕ ಗುಂಪುಗಳಲ್ಲಿ ಚರ್ಚಿಸಬಹುದು. ಕೆಲವು ವ್ಯಕ್ತಿಗತ ಚಟುವಟಿಕೆಗಳಾಗಿ ಹೇಳಬಹುದು. ಎಲ್ಲಾ ಸಂದರ್ಭಗಳಲ್ಲಿ ವಿದ್ಯಾರ್ಥಿಗಳನ್ನು ತಮ್ಮ ಸ್ವಂತ ಮಾತಿನಲ್ಲಿ ಬರೆಯುವಂತೆ ಪ್ರೋತ್ಸಾಹಿಸಬೇಕು. ಎಲ್ಲಾ ವಿಧ್ಯಾರ್ಥಿಗಳ ಒಂದೇ ರೀತಿಯ ಸಮಾಧಾನ ಬರುವಂತೆ ಸೂಚನೆಗಳನ್ನು ನೀಡಬಾರದು.

SCERT TELANGANA

- ಪ್ರತಿ ಪಾಠದಲ್ಲಿ ಸುತ್ತಲೂ ರೇಖೆಗಳಿಂದ ಕೆಲ ಸಮಾಚಾರವಿದೆ.ಪಾಠದಲ್ಲಿ ಚರ್ಚಿಸಿದ ಭಾವನೆಗಳಿಗೆ ಹೆಚ್ಚು ಸಮಾಚಾರವನ್ನು ಇವು ಒದಗಿಸುತ್ತವೆ.ಇವುಗಳನ್ನು ತರಗತಿಯಲ್ಲಿ ಚರ್ಚಿಸುವುದು ಬಹಳ ಮುಖ್ಯ ಅವುಗಳ ಸುತ್ತಲೂ ಚಟುವಟಿಕೆಗಳನ್ನು ಸಹ ರೂಪಿಸಿರಿ.ಆದರೆ ಇವುಗಳನ್ನು ಮೌಲ್ಯಮಾಪನದಲ್ಲಿನ ಭಾಗವಾಗಿ ಮಾಡಬಾರದು.
- **ಪಠ್ಯಪುಸ್ತಕದಲ್ಲಿ ಉಪಯೋಗಿಸಿದ ಚಿತ್ರಗಳು :** ಸಂಪ್ರದಾಯ ಪಠ್ಯಪುಸ್ತಕದಲ್ಲಿ ಚಿತ್ರಗಳು ಪುಸ್ತಕವನ್ನು ಸುಂದರವಾಗಿರಿಸಲು ಉಪಯೋಗವಾಗುತ್ತದೆ. ಆದರೆ ಪಾಠಕ್ಕೆ ಇರುವ ಪ್ರಾಮುಖ್ಯತೆ ಈಪುಸ್ತಕದಲ್ಲಿರುವ ಚಿತ್ರಗಳಿಗೆ ಸಹ ಇದೆ. ಕಥೆಗೆ ಚಿತ್ರ ರೂಪ ನೀಡಲು ಕಾನೂನು,ನ್ಯಾಯ, ಪಾಠದಲ್ಲಿಯಂತೆ ಕೆಲವು ಚಿತ್ರಗಳು ಇರಬಹುದು.ವಿವಿಧ ಸಾಮಾಜಿಕ,ರಾಜಕೀಯ ಚಳುವಳಿಗಳಲ್ಲಿ ನಾಯಕರ ಚಿತ್ರಗಳು ನೀಡಿರಬಹುದು. ಉಳಿದ ಎಲ್ಲಾ ಸಂದರ್ಭಗಳಲ್ಲಿ ಪಾಠ ಎಷ್ಟು ಮುಖ್ಯವೋ, ಚಿತ್ರಗಳು ಅಷ್ಟೇ ಮುಖ್ಯ. ಇವು ಭಾವನೆಗಳನ್ನುವಿವರಿಸಲು ಉಪಯೋಗ ಬೀಳುತ್ತವೆ,ಇಲ್ಲವೆ ಪಾಠ್ಯಾಂಶದಲ್ಲಿನ ಭಾವಕ್ಕೆ ಚಿತ್ರರೂಪ ನೀಡುತ್ತವೆ. ಅನೇಕ ರೀತಿಯ ಚಿತ್ರಗಳನ್ನು ಉಪಯೋಗಿಸಿಕೊಳ್ಳಲು ಪ್ರಯತ್ನಿಸಿದ್ದೇನೆ.ಫೋಟೋಗಳು,ರೇಖಾಚಿತ್ರಗಳು,ಗೋಡೆ ಪತ್ರಿಕೆಗಳು ಮುಂತಾದವು. ಇವು ವಿವಿಧ ಚಾರಿತ್ರಿಕ ಕಾಲಗಳಿಗೆ ಸಂಬಂಧಿಸಿದವು.ಬಾಷೆಯಲ್ಲಿನ ಶೈಲಿ, ವೈವಿಧ್ಯತೆ ಮಾದರಿಯಲ್ಲಿ ಚಿತ್ರಗಳಲ್ಲಿಯೂ ಸಹ ವೈವಿಧ್ಯತೆ ಇದೆ.
- **ಪಟಗಳು,ಪಟ್ಟಿಕೆಗಳು,ರೇಖಾಚಿತ್ರ ಪಟಗಳು :** ಈ ಪುಸ್ತಕದಲ್ಲಿನ ಪಟಗಳು ನಮಗೆ ಭೌಗೋಳಿಕ, ಆರ್ಥಿಕ, ರಾಜಕೀಯ, ಚರಿತ್ರೆಯ ಅಂಶಗಳನ್ನು ತಿಳಿಸುತ್ತವೆ.ವಿಷಯವನ್ನು ಆಸಕ್ತಿ ಬರುವಂತಹ ರೀತಿಯಲ್ಲಿ ತಿಳಿಸಲು ಇವುಗಳನ್ನು ಉಪಯೋಗಿಸಿದ್ದೇವೆ. ಪಟ್ಟಿಕೆಗಳು,ರೇಖಾ ಚಿತ್ರಪಟಗಳೂ ಸಹ ನಿಮಗೆ ಕಾಣುತ್ತವೆ. ಪಟ್ಟಿಕೆಗಳನ್ನು,ರೇಖಾಚಿತ್ರ ಪಟಗಳನ್ನು ಓದುವುದು ಸಮಾಜ ಶಾಸ್ತ್ರದಲ್ಲಿ ಬಹು ಮುಖ್ಯ. ಭಾವನೆಗಳನ್ನು ವಿವರಿಸುವಲ್ಲಿ ಇವು ಮತ್ತಷ್ಟು ಸ್ಪಷ್ಟತೆಯನ್ನು ನೀಡುತ್ತವೆ.
- **ನಿಯೋಜಿತ ಕಾರ್ಯ ಕೆಲಸ :** ಪುಸ್ತಕದಲ್ಲಿ ವಿವಿಧ ಯೋಜನೆಗಳು ಸೂಚಿಸಲಾಗಿದೆ. ಎಲ್ಲಾ ಯೋಜನೆಗಳನ್ನು ಮಾಡುವುದು ಸಾಧ್ಯವಾಗದೇ ಇರಬಹುದು. ಪಠ್ಯಪುಸ್ತಕ ಓದುವುದರ ಮೂಲಕ ಅಂಶಗಳ ಎಲ್ಲಾ ಭಾವನೆಗಳನ್ನು ಭೋಧಿಸಲಾರೆವು. ಪ್ರಾಜೆಕ್ಟುಗಳ ಮೂಲಕ ವಿಧ್ಯಾರ್ಥಿಗಳಿಗೆ  ಸಮಾಜದಲ್ಲಿನ ವ್ಯಕ್ತಿಗಳೊಂದಿಗೆ ವ್ಯವರಿಸುವುದು ತಿಳಿಯುತ್ತದೆ. ಹೊಸ ಸಮಾಚಾರ ಶೇಖರಿಸಿ ತಮ್ಮವಾದ ಪದ್ದತಿಯಲ್ಲಿ ಜೋಡಿಸಿ ಪ್ರದರ್ಶಿಸುತ್ತಾರೆ. ಮುಖಾಮುಖಿ ಪ್ರಶ್ನೆಗಳು ತಯಾರು ಮಾಡುವುದು.ಬ್ಯಾಂಕು ಸಂದರ್ಶನಕ್ಕೆ ಏರ್ಪಾಟು ಮಾಡುವುದು. ತಾನು ಶೇಖರಿಸಿದ ಸಮಾಚಾರವನ್ನು ಚಿತ್ರಗಳು, ಪಟ್ಟಿಗಳು, ಇಲ್ಲವೇ ರೇಖಾ ಚಿತ್ರಪಟಗಳಿಂದ ಗಣಾಂಕಗಳು ಉಪಯೋಗಿಸಿ ಎಲ್ಲರಿಗೂ ತಿಳಿಸಲು ಸಿದ್ದವಾಗುವಂತಹ ಸಮಾಜಶಾಸ್ತ್ರ ನೈಪುಣ್ಯಗಳು ಮುಖ್ಯವಾದವು. ಇವು ಗುಂಪುಗಳಲ್ಲಿ ಕೆಲಸ ಮಾಡಲು, ಒಬ್ಬರ ವಿವರಗಳು, ಅಭಿಪ್ರಾಯಗಳು ಮತ್ತೊಬ್ಬರೊಂದಿಗೆ ಹಂಚಿಕೊಳ್ಳಲು ಅವು ಪ್ರೋತ್ಸಾಹಿಸುತ್ತವೆ.
- ಸಮಾಚಾರ ಕೌಶಲ್ಯಗಳಲ್ಲಿ ಪಟ್ಟಿಗಳು, ಗ್ರಾಫ್‌ಗಳು, ಪಠಕೌಶಲ್ಯಗಳಲ್ಲಿ ನಕ್ಷಗಳ ಅಭ್ಯಾಸ, ನಕ್ಷೆಗಳ ಗುರ್ತಿಸುವಿಕೆಯಂತಹವುಗಳನ್ನು ಕೂಡ ಪಾಠ್ಯಾಂಶಗಳಿಗೆ ಅನುಗುಣವಾಗಿ ಪುಸ್ತಕದಲ್ಲಿ ಇಲ್ಲದವುಗಳನ್ನು ಕೂಡ ಮೌಲ್ಯಮಾಪನದಲ್ಲಿ ಕೊಡಬಹುದು.
- ಚರ್ಚಿಸುವುದು, ಮುಖಾಮುಖಿ ನಿರ್ವಹಣೆ, ಸ್ಪರ್ಧೆ, ಪ್ರಾಜೆಕ್ಟ್‌ಗಳಂತಹವುಗಳನ್ನು ಪಾಠದ ಮಧ್ಯದಲ್ಲಿ, ''ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ''ಯ ನಂತರ ಕೊಡಲಾಗಿದೆ. ಇವು ಮಕ್ಕಳಲ್ಲಿ ಸಾಮಾಜಿಕ ಚೈತನ್ಯ, ಸೂಕ್ಷ್ಮ ತತ್ವವನ್ನು ಬೆಳೆಸುವಲ್ಲಿ ಸಮಸ್ಯೆಗಳ ಬಗ್ಗೆ ಧನಾತ್ಮಕ ಅಭಿಪ್ರಾಯ ಮೈಗೂಡಿಸಿಕೊಳ್ಳುವ ಸಲುವಾಗಿ ಸೇರಿಸಲಾಗಿದೆ. ಆದ್ದರಿಂದ ತಪ್ಪದೆ ನಿರ್ವಹಿಸಬೇಕು.

## ಕೃತಜ್ಞತೆಗಳು

**ತೆಲಂಗಾಣ ಮಾನವ ಹಕ್ಕುಗಳ ವಿದ್ಯಾ ರಾಜ್ಯ ಸಂಚಾಲಕರಾದ ಶ್ರೀ ಕೆ.ಜೋಷಿ ಅವರಿಗೆ,ಭೂಪಾಲ್‌ನಲ್ಲಿ ವೈದ್ಯ ವೃತ್ತಿಯಲ್ಲಿರುವ ಡಾ॥ಎ.ರಮಣಿ ಅವರಿಗೆ, ಶ್ರೀಮತಿ ಕೆ.ಭಾಗ್ಯಲಕ್ಷ್ಮಿ ಮಂಚಿ ಪುಸ್ತಕಂ ಇವರಿಗೆ, ನವದೆಹಲಿ ಜವಹರ್‌ಲಾಲ್ ನೆಹ್ರೂ ವಿಶ್ವವಿದ್ಯಾಲಯ ಪ್ರಾಧ್ಯಾಪಕರಾದ ಎಂ.ಎಸ್.ಎಸ್.ಪಾಂಡ್ಯನ್ ಅವರಿಗೆ,ಆಂಧ್ರಪ್ರದೇಶ್ ಸರ್ಕಾರದ ಪ್ರಾಚ್ಯವಸ್ತು ಪ್ರದರ್ಶನ ಶಾಲೆಯ ಶಾಖೆಯಲ್ಲಿ ಸ್ಥಪತಿ ಆಚಾರ್ಯ, ಈಮನಿ ಶಿವನಾಗಿರೆಡ್ಡಿ ಅವರಿಗೆ,ಆಂಧ್ರಪ್ರದೇಶ್ ಸರ್ಕಾರ ಕೇಂದ್ರ ಗ್ರಂಥಾಲಯ ಸಂಚಾಲಕರು, ಪರಿಶೋಧನಾ ವಿಭಾಗ ಸಿಬ್ಬಂದಿಯೊಂದಿಗೆ ನಾವು ನಿರ್ವಹಿಸಿದ ಕಾರ್ಯಕ್ರಮಗಳಲ್ಲಿ ಪ್ರತ್ಯಕ್ಷವಾಗಿ,ಪರೋಕ್ಷವಾಗಿ ಪಾಲ್ಗೊಂಡು ಈಪಠ್ಯ ಪುಸ್ತಕದಲ್ಲಿನ ಪಾಠಗಳನ್ನು ತಯಾರಿಸಲು ಸಹಾಯನೀಡಿದ ಎಲ್ಲರಿಗೂ ಕೃತಜ್ಞತೆಗಳು. ಈ ಪುಸ್ತಕದಲ್ಲಿ ಉಪಯೋಗಿಸಿದ ಕೆಲವು ಚಿತ್ರಗಳು, ಫ್ಲಿಕರ್, ವಿಕಿಪೀಡಿಯಾ, ಇತರ ಅಂತರ್ಜಾಲ ಸಂಪನ್ಮೂಲಗಳಿಂದ ಸೃಜನಾತ್ಮಕ ಜೊತೆ ಲೈಸೆನ್ಸ್‌ಗೆ ಒಳಪಟ್ಟು ತೆಗೆದುಕೊಂಡಿದೆ.**

ಅನೇಕ ಮಂದಿ ಪಾಠಶಾಲೆಯ ಉಪಾಧ್ಯಾಯರು, ವಿದ್ಯಾವೇತ್ತರುಗಳು ಮತ್ತು ಇತರರು ತಮ್ಮ ಸಲಹೆ ಸೂಚನೆಗಳ ಮುಖಾಂತರ ಪಠ್ಯಪುಸ್ತಕಗಳನ್ನು ನವೀಕರಿಸುವಲ್ಲಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳನ್ನು ತಿಳಿಸುತ್ತೇವೆ. ಪಠ್ಯ ಮಸ್ತಕಗಳನ್ನು ಪೂರ್ಣರೂಪದಲ್ಲಿ ಸಮೀಕ್ಷಿಸಿ ಮೆರುಗುಪಡಿಸುವಲ್ಲಿ ಸಹಕರಿಸಿದ Indian History Awareness & Research (IHAR) ಹ್ಯೂಸ್ಟರ್, ಟೆಕ್ಸಾಸ್, ಅಮೆರಿಕಾ ಸಂಯುಕ್ತ ರಾಷ್ಟ್ರಗಳವರಿಗೆ ಪ್ರತ್ಯೇಕವಾಗಿ ಕೃತಜ್ಞತೆಗಳನ್ನು ತಿಳಿಸುತ್ತೇವೆ.

SCERT TELANGANA

## ಪರಿವಿಡಿ


| ಕ್ರ.ಸಂ | ಅಧ್ಯಾಯ/ಘಟಕ | ಪುಟ ಸಂಖ್ಯೆ | | |
|---|---|---|---|---|
| | **ವಿಷಯ - I: ಭೂಮಿ ವೈವಿಧ್ಯತೆ** | | | |
| 1. | ನಕ್ಷೆಗಳ ಅಧ್ಯಯನ – ವಿಶ್ಲೇಷಣೆ | 1-17 | | ಜೂನ್ |
| 2. | ಸೂರ್ಯ – ಶಕ್ತಿ ಸಂಪನ್ಮೂಲ | 18-32 | | ಜೂನ್ |
| 3. | ಭೂಚಲನೆಗಳು – ಋತುಗಳು | 33-39 | | ಜುಲೈ |
| 4. | ಧೃವ ಪ್ರಾಂತಗಳು | 40-48 | | ಜುಲೈ |
| 5. | ಕಾಡುಗಳು , ಉಪಯೋಗ,ರಕ್ಷಣೆ | 49-61 | | ಜುಲೈ |
| 6. | ಖನಿಜಗಳು – ಗಣಿಗಳ ಅಗೆಯುವಿಕೆ | 62-74 | | ಜುಲೈ |
| | **ವಿಷಯ - II: ಉತ್ಪತ್ತಿ ವಿನಿಮಯ - ಜೀವನಾಧಾರ** | | | |
| 7. | ಹಣ –ಬ್ಯಾಂಕಿಂಗ್ | 75-87 | | ಆಗಸ್ಟ |
| 8. | ಜೀವನಾಧಾರ – ತಂತ್ರಜ್ಞಾನದ ಪ್ರಭಾವ | 88-98 | | ಆಗಸ್ಟ |
| 9. | ಸಾರ್ವಜನಿಕ ಆರೋಗ್ಯ – ಸರ್ಕಾರ | 99-108 | | ಆಗಸ್ಟ |
| | **ವಿಷಯ -III:ರಾಜಕೀಯ ವ್ಯವಸ್ಥೆಗಳು - ಆಳ್ವಿಕೆ** | | | |
| 10. | ಬ್ರಿಟೀಷ್ ನಿಜಾಂರ ಆಡಳಿತದಲ್ಲಿ ಭೂಸ್ವಾಮಿಗಳು ಸಾಗುವಳಿದಾರರು | 109-118 | | ಸೆಪ್ಟೆಂಬರ್ |
| 11A. | ರಾಷ್ಟ್ರೀಯ ಚಳುವಳಿ ಮೊದಲನೆ ಹಂತ 1885-1918 | 119-126 | | ಸೆಪ್ಟೆಂಬರ್ |
| 11B. | ರಾಷ್ಟ್ರೀಯ ಚಳುವಳಿ ಕೊನೆಯ ಹಂತ 1919-1947 | 127-137 | | ಸೆಪ್ಟೆಂಬರ್ |
| 12. | ಹೈದರಾಬಾದ್ ರಾಜ್ಯದಲ್ಲಿ ಸ್ವಾತಂತ್ರೋದ್ಯಮ | 138-150 | | ಸೆಪ್ಟೆಂಬರ್ |
| 13. | ಭಾರತ ಸಂವಿಧಾನ | 151-161 | | ಅಕ್ಟೋಬರ್ |
| 14. | ಸಂಸತ್ತು – ಕೇಂದ್ರ ಸರ್ಕಾರ | 162-173 | | ಅಕ್ಟೋಬರ್ |
| 15. | ಕಾನೂನು, ನ್ಯಾಯ – ಒಂದು ಸನ್ನಿವೇಶದ ಅಧ್ಯಯನ | 174-185 | | ನವಂಬರ್ |
| | **ವಿಷಯ - IV: ಸಾಮಾಜಿಕ ವ್ಯವಸ್ಥೀಕರಣ - ಅಸಮಾನತೆಗಳು** | | | |
| 16. | ಜಮೀಂದಾರಿ ವ್ಯವಸ್ಥೆ ರದ್ದು | 186-192 | | ನವಂಬರ್ |
| 17. | ಒಡತನ – ಅವಗಾಹನೆ | 193-204 | | ನವಂಬರ್ |
| 18. | ಮಾನವ ಹಕ್ಕುಗಳು – ಅಭಿವೃದ್ಧಿ | 205-211 | | ಡಿಸೆಂಬರ್ |
| | **ವಿಷಯ - V: ಧಾರ್ಮಿಕ - ಸಮಾಜ** | | | |
| 19. | ಸಾಮಾಜಿಕ, ಧಾರ್ಮಿಕ ಸುಧಾರಣಾ ಚಳುವಳಿಗಳು | 212-223 | | ಡಿಸೆಂಬರ್ |
| 20. | ಜಾತ್ಯಾತೀತ ಅವಗಾಹನೆ | 224-227 | | ಡಿಸೆಂಬರ್ |
| | **ವಿಷಯ -VI: ಸಂಸ್ಕೃತಿ - ಸಮಾಚಾರ** | | | |
| 21. | ಆಧುನಿಕ ಕಾಲದಲ್ಲಿನ ಕಲೆಗಳು – ಕಲಾಕಾರರು | 228-237 | | ಜನವರಿ |
| 22. | ಸಿನಿಮಾ ಮತ್ತು ಮುದ್ರಣ ಮಾಧ್ಯಮ | 238-244 | | ಫೆಬ್ರವರಿ |
| 23. | ಕ್ರೀಡೆಗಳು: ರಾಷ್ಟ್ರೀಯ ಮತ್ತು ವಾಣಿಜ್ಯ | 245-252 | | ಫೆಬ್ರವರಿ |
| 24. | ವಿಕೋಪಗಳು – ನಿರ್ವಹಣೆ | 253-260 | | ಫೆಬ್ರವರಿ |
| | **ಪುನಶ್ಚರಣೆ - ವಾರ್ಷಿಕ ಪರೀಕ್ಷೆಗಳು** | | | ಮಾರ್ಚ್ |


SCERT TELANGANA

# ರಾಷ್ಟ್ರಗೀತೆ

-ÃÌËàí ¨Ì®Ý¥Ì sÝWÌãÃ...

ಜನಗಣ ಮನ ಅಧಿನಾಯಕ ಜಯ ಹೇ |
ಭಾರತ ಭಾಗ್ಯ ವಿಧಾತಾ ||
ಪಂಜಾಬ ಸಿಂಧು ಗುಜರಾತ ಮರಾಠಾ |
ದ್ರಾವಿಡ ಉತ್ಕಲ ವಂಗಾ ||
ವಿಂಧ್ಯ ಹಿಮಾಚಲ ಯಮುನಾ ಗಂಗಾ |
ಉಚ್ಛಲ ಜಲಧಿ ತರಂಗಾ ||
ತವ ಶುಭ ನಾಮೇ ಜಾಗೇ |
ತವ ಶುಭ ಆಶಿಷ ಮಾಗೇ ||
ಗಾಹೇ ತವ  ಜಯ ಗಾಥಾ |
ಜನಗಣ ಮಂಗಳದಾಯಕ ಜಯ ಹೇ ||
ಭಾರತ ಭಾಗ್ಯ ವಿಧಾತಾ |
ಜಯ ಹೇ ! ಜಯ ಹೇ ! ಜಯ ಹೇ ||
ಜಯ ಜಯ ಜಯ ಜಯ ಹೇ |

# ಪ್ರತಿಜ್ಞೆ

**ಪೈಡಿಮರ್ರಿ ವೆಂಕಟ ಸುಬ್ಬರಾವು**

"ಭಾರತ ದೇಶ ನನ್ನ ಮಾತೃಭೂಮಿ. ಭಾರತೀಯರೆಲ್ಲರೂ ನನ್ನ ಸಹೋದರರು. ವೈವಿಧ್ಯಮಯ ಸಂಸ್ಕೃತಿಯ ಲಕ್ಷಣವು ನನಗೆ ಆತೀವ ಹೆಮ್ಮೆ ತಂದಿದೆ. ಈ ದೇಶದ ಉನ್ನತ ಸಂಸ್ಕೃತಿಯ ಮಟ್ಟವನ್ನು ತಲುಪಲು ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಸುಸಂಪನ್ನವಾದ ನನ್ನ ದೇಶವನ್ನೂ, ನನ್ನ ತಂದೆ ತಾಯಿಯರನ್ನು, ಉಪಾಧ್ಯಾಯರನ್ನೂ ಎಲ್ಲ ಹಿರಿಯರನ್ನೂ ಗೌರವಿಸುತ್ತೇನೆ. ಪ್ರತಿಯೊಬ್ಬರೊಡನೆ ಮರ್ಯಾದೆ ಯಿಂದ ನಡೆದುಕೊಳ್ಳುತ್ತೇನೆ.

ನನ್ನ ದೇಶದ ಬಗ್ಗೆ ನನ್ನ ಪ್ರಜೆಗಳ ಬಗ್ಗೆ, ಸೇವಾ ನಿಷ್ಠೆ ಪಡೆದಿರುವೆನೆಂದು ಪ್ರತಿಜ್ಞೆ ಮಾಡುತ್ತಿದ್ದೇನೆ. ಅವರ ಶ್ರೇಯೋಭಿವೃದ್ಧಿಗಳೇ ನನ್ನ ಆನಂದಕ್ಕೆ ಮೂಲ."

SCERT TELANGANA

ಘಟಕ 1

# ನಕ್ಷೆಗಳ ಅಧ್ಯಯನ - ವಿಶ್ಲೇಷಣೆ



ಚಿತ್ರ *1.1:* ಆಫ್ರಿಕಾ, ಯೂರೋಪ್, ಅಮೇರಿಕಾಗಳನ್ನು ತೋರಿಸುವ ಫೋಟೋ

ಆರನೇ ತರಗತಿಯಲ್ಲಿ ನೀವು ನಕ್ಷೆಗಳನ್ನು ತಯಾರಿಸುವುದನ್ನು ಕಲಿತಿದ್ದೀರಿ. ಎತ್ತರಗಳನ್ನು ತೋರಿಸುವ ನಕ್ಷೆಗಳ ಕುರಿತು ತಿಳಿದುಕೊಂಡಿದ್ದೀರಿ. ವಿವಿಧ ಪ್ರದೇಶಗಳಿಗೆ ಸಂಬಂಧಿಸಿದಂತೆ ಎಷ್ಟೋ ನಕ್ಷೆಗಳನ್ನು ನೀವು ಈಗಾಗಲೇ ನೋಡಿರುತ್ತೀರಿ. ಒಂದು ಪ್ರಾಂತವನ್ನು ಆಕಾಶದಿಂದ ತೆಗೆದ ಫೋಟೋಕ್ಕೂ, ಆ ಪ್ರಾಂತದ ನಕ್ಷೆಗಳಿಗೂ ನಡುವೆ ವ್ಯತ್ಯಾಸಗಳು ಏನೆಂದು ತಿಳಿಸಿ. ಉದಾಹರಣೆಗೆ ಚಿತ್ರ 1.1 ರಲ್ಲಿನ ಫೋಟೋವನ್ನು, ನಕ್ಷೆ 1ನ್ನು ನೋಡಿರಿ. ಈ ಎರಡರ ನಡುವೆ ಹೋಲಿಕೆಗಳನ್ನು ವ್ಯತ್ಯಾಸಗಳನ್ನು ಹೆಸರಿಸಬಲ್ಲೆಯಾ ?



ನಕ್ಷೆ *1:* ಆಫ್ರಿಕಾ, ಯೂರೋಪ್, ಅಮೇರಿಕಾಗಳ ನಕ್ಷೆ

ಛಾಯಾಚಿತ್ರದಂತೆ ನಕ್ಷೆ ನಿಜವಾದ ಅಂಶಗಳನ್ನು ತೋರಿಸುವುದಿಲ್ಲ. ಮುಖ್ಯವೆಂದು ಭಾವಿಸುವ ಅಂಶಗಳನ್ನು ತೋರಿಸುವುದಕ್ಕೆ ಭೌಗೋಳಿಕ ಶಾಸ್ತ್ರಜ್ಞರು ನಕ್ಷೆಗಳನ್ನು ಉಪಯೋಗಿಸುತ್ತಾರೆ. ಉದಾಹರಣೆಗೆ ಮಳೆಯ ಹಂಚಿಕೆ, ಮಣ್ಣಿನ ವಿಧಗಳು, ಜನರು ಮಾತನಾಡುವ ಭಾಷೆ, ಬೆಳೆಗಳು, ಮಾರುಕಟ್ಟೆಗಳು, ಪಾಠಶಾಲೆಗಳು, ಮೊದಲಾದವುಗಳು ಇರಬಹುದು. ಛಾಯಾಚಿತ್ರದಲ್ಲಿ ಕಾಣಿಸುವ ಮನೆ, ಮರಗಳಂತಹವುಗಳನ್ನು ನಕ್ಷೆಗಳು ತಯಾರಿಸುವವರು ಬಿಟ್ಟು ಬಿಡಬಹುದು. ನಕ್ಷೆ ತಯಾರಿಸುವವರು ಮುಖ್ಯವೆಂದು ಕೊಳ್ಳುವಂತಹವುಗಳನ್ನು ತೋರಿಸುವ ಮಾದರಿಯಾಗಿ ನಕ್ಷೆಯನ್ನು ಭಾವಿಸಬಹುದು. ಒಂದು ಪ್ರಾಂತದಲ್ಲಿ ಎಷ್ಟು ಮಳೆ ಬೀಳುತ್ತದೆ. ಎಷ್ಟು ಉಷ್ಣೋಗ್ರತೆ ಇರುತ್ತದೆ, ಅಲ್ಲಿಯ ಜನರು ಯಾವ ಭಾಷೆ ಮಾತನಾಡುತ್ತಾರೆ ಎನ್ನುವಂತ ಹವುಗಳನ್ನು ಛಾಯಾಚಿತ್ರ ತೋರಿಸಲಾರದು. ಆದರೆ ಇವುಗಳನ್ನು ನಕ್ಷೆಗಳ ಮೇಲೆ ತೋರಿಸಬಹುದು. ಆದ್ದರಿಂದಲೇ ಉದ್ದೇಶಗಳಿಗೆ ಅನುಗುಣವಾಗಿ ವಿವಿಧ ರೀತಿಯ ನಕ್ಷೆಗಳನ್ನು ತಯಾರು ಮಾಡುತ್ತಾರೆ. ಹಿಂದಿನ ಕಾಲದಲ್ಲಿ ತಯಾರಿಸಿದ ಕೆಲವು ನಕ್ಷೆಗಳನ್ನು ಈಗ ನೋಡೋಣ, ಯಾವ ಕಾರಣಕ್ಕಾಗಿ ಮಾಡಿದ್ದಾರೆ ಎನ್ನುವುದರ ಮೇಲೆ ನಕ್ಷೆಗಳು ಅನೇಕ ವಿಧಗಳಾಗಿ ಹೇಗೆ ಇರುತ್ತವೆಯೋ ತಿಳಿದುಕೊಳ್ಳೋಣ.

## ವಿವಿಧ ಕಾಲಗಳಲ್ಲಿ ನಕ್ಷೆಗಳು (Maps down the ages)

ನಕ್ಷೆಗಳಿಗೆ ಸುದೀರ್ಘ ಇತಿಹಾಸವಿದೆ. ಇತಿಹಾಸ ಪೂರ್ವ ಕಾಲದಿಂದ ಜನರು ಭೂಮಿ, ನದಿಗಳು, ಸಮುದ್ರಗಳ್ಳು, ಆಕಾಶ ಮೊದಲಾದವುಗಳಿಂದ ಕೂಡಿದ ಬಾಹ್ಯಾಕಾಶ



*ಚಿತ್ರ 1.2: ಸುಮೇರಿಯನ್ ಮಣ್ಣಿನ ಹಲಗೆ*

ಕುರಿತು ಊಹಿಸಿಕೊಂಡರು. ಆಗಾಗ ಈ ಊಹೆಗಳಿಗೆ ದೃಶ್ಯ ರೂಪವನ್ನು ಕೊಡಲಾಯಿತು. ಭೂಮಿ, ನೀರು, ಆಕಾಶ ಗಳನ್ನು ತೋರಿಸುವ ಇತಿಹಾಸ ಪೂರ್ವ ಕಾಲದ ವರ್ಣ ಕಲೆ ಗಳು ಮಧ್ಯಪ್ರದೇಶದ ಜವೋರಾದಲ್ಲಿ ಲಭಿಸಿವೆ. ವೇದ ಕಾಲ, ಪೌರಾಣಿಕ ಕಾಲಗಳಲ್ಲಿ ಜಗತ್ತಿನ ಬಗ್ಗೆ ಊಹೆಗಳು ಮುಂದುವರಿದವು. ಭೂಮಿಯು ಸಪ್ತ ಸಾಗರಗಳೊಂದಿಗೆ ಸುತ್ತುವರಿದ ಏಳು ದ್ವೀಪಗಳನ್ನು ಹೊಂದಿದ್ದು, ಕೇಂದ್ರ ಸ್ಥಾನ ದಲ್ಲಿ ಮೇರು ಪರ್ವತವನ್ನು ಹೊಂದಿ ವೃತ್ತಾಕಾರದಲ್ಲಿದೆ. ಭಾರ ತದೇಶವು (ಭರತ ವರ್ಷ) ಜಂಭೂ ದ್ವೀಪದಲ್ಲಿದೆ. ವಾಸ್ತು ಶಿಲ್ಪಗಳು ವೈಧಿಕಪರವಾದ ಯಾಗ, ಹೋಮ ಕುಂಡಗಳನ್ನು ಮತ್ತು ಭವನಗಳ ನಿರ್ಮಾಣಕ್ಕಾಗಿ ವಿಸ್ತೃತ ಯೋಜನೆಗಳನ್ನು ತಯಾರಿಸಿದರು. ಇವುಗಳಲ್ಲಿ ಕೆಲವು ಯೋಜನೆಗಳು ಮಧ್ಯೆ ಯುಗದ ಕಾಲದಲ್ಲಿ ಹೊರಬಿದ್ದವು. ಪ್ರದೇಶಗಳು, ವಿಶೇಷ ವಾಗಿ ಯಾತ್ರಾಸ್ಥಳಗಳನ್ನು ತೋರಿಸುವ ಚಿತ್ರಪಟಗಳು ನಮಗೆ ಸಾಕಷ್ಟು ಸಿಗುತ್ತವೆ. ಹಿಂದೂ ಸಮುದ್ರದ ತೀರದುದ್ದ ಕ್ಕೂ ಪ್ರಯಾಣಿಸುವ ನಾವಿಕರೂ ಸಹ ತೀರ ರೇಖೆಯ ವಿಸ್ತೃತ ನಕ್ಷೆಗಳನ್ನು, ತಪ್ಪಲು ಪ್ರಾಂತಗಳು, ದ್ವೀಪಗಳ ಸ್ಥಾನವನ್ನು ಸೂಚಿ ಸುವ ಯೋಜನೆಗಳನ್ನು ಉಪಯೋಗಿಸಿದರು.

ವಿವಿಧ ಪ್ರದೇಶಗಳ ಸ್ಥಾನಗಳನ್ನು ನಿರ್ಧಾರಿಸುವಲ್ಲಿ ಅಕ್ಷಾಂಶ-ರೇಖಾಂಶಗಳ ತಿಳಿಸುವಿಕೆ ಉಪಯೋಗಕರವಾದ ದ್ದು. ಸಾ.ಶ. 5ನೇ ಶತಮಾನದಲ್ಲಿ ಈ ಭಾವನೆಗಳನ್ನು ಆರ್ಯ ಭಟ ಉಪಯೋಗಿಸಿದಂತೆ ಕಂಡು ಬರುತ್ತದೆ. ಇವುಗಳನ್ನು ನಕ್ಷೆ ಗಳ ತಯಾರಿಯಲ್ಲಿ ಯಾವಾಗ ಉಪಯೋಗಿಸಿದಂತೆರೆಂಬು ದರ ಬಗ್ಗೆ ಸ್ಪಷ್ಟತೆ ಇಲ್ಲ.

ಮೋಘಲರ ಕಾಲದಲ್ಲಿ ಭಾರತೀಯರು ಮಧ್ಯೆ ಸಿರಿಯಾ ದವರ ಪದ್ಧತಿಗಳನ್ನು ನಕ್ಷೆಗಳ ತಯಾರಿಯಲ್ಲಿ ಅನುಸರಿಸಿ ದರು. 17ನೇ ಶತಮಾನದಲ್ಲಿ ಸಾಬಿಕ್ ಇಸ್ಫಾಹಾನ್ ಜಾನ್ ಪೂರ್‌ನಲ್ಲಿ ಒಂದು ಅಟ್ಲಾಸ್ ತಯಾರಿಸಿದನೆಂದು ಹೇಳು ತ್ತಾರೆ. ಆತನು ತನ್ನ ನಕ್ಷೆಗಳಲ್ಲಿ ಪ್ರದೇಶಗಳ ಸ್ಥಾನಗಳನ್ನು ನಿರ್ಣ ಯಿಸಲು ಅಕ್ಷಾಂಶ-ರೇಖಾಂಶಗಳನ್ನು ಉಪಯೋಗಿಸಿದನು. ಮೋಘಲ ಕಾಲದ ಕೊನೆಯಲ್ಲಿ ಬ್ರಿಟಿಷರು ಭಾರತ ದೇಶವ ನ್ನು Maping ಮಾಡಲು ಪ್ರಾರಂಭಿಸಿದಾಗ, ವಿಸ್ತೃತ ನಕ್ಷೆಗಳ ಉಪಯೋಗ ಕುರಿತು ನಾವು ತಿಳಿದುಕೊಂಡೆವು. ದುರದೃಷ್ಟ ವೆಂಬಂತೆ ಈ ನಕ್ಷೆಗಳು ನಶಿಸಿ ಹೋಗಿವೆ ಕೆಲವು ಮಾತ್ರವೇ ಲಭ್ಯ ತೆಯಲ್ಲಿವೆ. ಇಂದಿಗೂ ಉಳಿದಿರುವ ಅತಿ ಪುರಾತನವಾದ ನಕ್ಷೆಗಳು ನಾಲ್ಕು ಸಾವಿರ ವರ್ಷಗಳ ಕಾಲದವು. ಇವುಗಳನ್ನು

ಸುಮೇರಿಯನ್ನರು (ಇಂದಿನ ಇರಾಕ್) ತಯಾರಿಸಿರುವರು. ಇವುಗಳನ್ನು ಮಣ್ಣಿನ ಹಲಗೆಗಳ ಮೇಲೆ ಮಾಡಿರುವರು. ಸುಮೇರಿಯನ್ನರ ದೇವಾಲಯಗಳಿಗೆ ಬಹಳ ಭೂಮಿಗಳು ಇದ್ದವು. ಭೂಮಿಗಳಿಂದ ಬಂದ ಆದಾಯದ ಲೆಕ್ಕಗಳಿಗಾಗಿ ಭೂಮಿಗಳ ವಿವರಗಳನ್ನು ನಕ್ಷೆಗಳ ರೂಪದಲ್ಲಿ ಭದ್ರಪಡಿಸುತ್ತಿದ್ದರು.

ಮೊದಲು ಕೆಲವು 'ಪ್ರಪಂಚ' ನಕ್ಷೆಗಳನ್ನು, ಬಾಬಿಲೋನಿಯನ್ನರು (ಇಂದಿನ ಇರಾಕ್ ವಾಸಿಗಳು) ತಯಾರು ಮಾಡಿದರು. ಆಗ್ಗೆ ಅವರಿಗೆ ತಿಳಿದ ಪ್ರಪಂಚ ಅದೇ 2600 ವರ್ಷಗಳ ಹಿಂದೆ ಮಣ್ಣಿನ ಹಲಗೆಗಳ ಮೇಲೆ ಹಾಕಿದ ಚಿತ್ರ ಕೆಳಗೆ ನೋಡಿರಿ. ಪ್ರಪಂಚ ದುಂಡನೆ ತಟ್ಟೆಯಂತೆ ಇರುವುದೆಂದು ಅವರು ಊಹಿಸಿಕೊಂಡಿದ್ದರು. ಒಳಗಿನ ವಲಯದಲ್ಲಿ ಅವರಿಗೆ ತಿಳಿದ ಎಲ್ಲಾ ಪಟ್ಟಣಗಳು (ಚಿಕ್ಕ ವಲಯಗಳು), ಗ್ರಾಮಗಳು, ನದಿಗಳು,ಜವುಳು ನೆಲಗಳು, ಬೆಟ್ಟಗಳು ಇವೆ. ಬಾಬಿಲೋನ್ ಪಟ್ಟಣ ಮಧ್ಯದಲ್ಲಿ ತೋರಿಸಿರುವರು. ಒಳಗಿನ ವಲಯದ ಹೊರಗೆ 'ಕಹಿ ಸಮುದ್ರ' ಇಲ್ಲವೇ ಉಪ್ಪು ನೀರಿನ ಸಮುದ್ರ ಇದೆ. ಅದರಲ್ಲಿ ತ್ರಿಕೋನಾಕಾರದಲ್ಲಿ ಏಳು ದ್ವೀಪಗಳು ಇವೆ.



*ಚಿತ್ರ 1.3: ಬಾಬಿಲೋನಿಯನ್ ಮಣ್ಣಿನ ಹಲಗೆ*

ಅದೇ ಸಮಯದಲ್ಲಿ ಗ್ರೀಕ್ ಭೌಗೋಳಿಕ ಶಾಸ್ತ್ರಜ್ಞನಾದ ಅನಾಕ್ಸಿಮಾಂಡರ್, ಮಿಲೆಟಸ್‌ಗೆ (ಈಗ ಟರ್ಕಿಯಲ್ಲಿ ಇದೆ) ಸೇರಿದ ಹೆಕೇಟಿಯಸ್‌ರು ಹೆರೊಡೋಟಸ್‌ರು ಸಹ ವಿವಿಧ ಪ್ರದೇಶಗಳನ್ನು ಪೂರ್ವದಿಂದ ಪಶ್ಚಿಮಕ್ಕೆ, ಉತ್ತರದಿಂದ ದಕ್ಷಿಣಕ್ಕೆ ತೋರಿಸುತ್ತಾ ಪ್ರಪಂಚ ನಕ್ಷೆಗಳನ್ನು ತಯಾರಿಸಿದರು. ಬಾಬಿಲೋನಿಯನ್ನರಂತೆ ಇವರು ಸಹ ಭೂಮಿ ದುಂಡಗೆ ಇದೆ ಎಂದೂ, ಅದರ ಸುತ್ತಲೂ ಸಮುದ್ರ ಇದೆಂದು ಭಾವಿಸಿದರು. ಇವರು ಬಹಳ ಪ್ರದೇಶಗಳು ಪ್ರಯಾಣಿಸಿ




*ನಕ್ಷೆ 4: ಹೆಕೇಟಿಯಸ್‌ರನ್ನು ಆಧಾರವಾಗಿಟ್ಟುಕೊಂಡು ಹಾಕಿದ ಪ್ರಪಂಚ ಪಟ*

ತಾವು ನೋಡಿದ, ಕೇಳಿದ ಪ್ರದೇಶಗಳ ಕುರಿತು, ಜನರ ಇತಿಹಾಸದ ಕುರಿತು ಬರೆದಿದ್ದಾರೆ.

ಈ ಯಾತ್ರೆಗಳು, ವಿವರಣೆಗಳ ಆಧಾರವಾಗಿ ಅವರು ನಕ್ಷೆಗಳು ತಯಾರು ಮಾಡಿದರು. ಇವರು ತಯಾರಿಸಿದ ನಕ್ಷೆಗಳು ಈಗ ದೊರೆಯುವುದಿಲ್ಲ. ಆದರೆ ಅವರ ವಿವರಣೆಗಳ ಆಧಾರವಾಗಿ ಆ ನಕ್ಷೆಗಳನ್ನು ಚಿತ್ರಕಾರರು ಪುನಃ ತಯಾರಿಸಿದರು. ಇಂತಹ ಒಂದು ನಕ್ಷೆ ಮೇಲೆ (ನಕ್ಷೆ-2) ಇದೆ.

ಈ ನಕ್ಷೆಯಲ್ಲಿ ಗ್ರೀಸ್ ಮಧ್ಯದಲ್ಲಿ ಇರುವುದು ನೀವು ನೋಡಿರುತ್ತೀರಿ. ಪ್ರಪಂಚವನ್ನು ಯೂರೋಪ್, ಲಿಬಿಯಾ (ಆಫ್ರಿಕಾ), ಏಷಿಯಾ ಎಂದು ಮೂರು ಖಂಡಗಳಾಗಿ ವಿಭಜಿಸಿದ್ದಾರೆ. ಈ ಖಂಡಗಳನ್ನು ಮೆಡಿಟರೇನಿಯನ್ ಸಮುದ್ರ ಬೇರ್ಪಡಿಸುತ್ತದೆ. ಹತ್ತಿರ, ದೂರ ಪ್ರಾಂತಗಳ ಕುರಿತು ತಿಳಿದುಕೊಳ್ಳುವುದು, ಅವುಗಳ ನಕ್ಷೆಗಳನ್ನು ತಯಾರಿಸುವುದರ ಬಗ್ಗೆ ಗ್ರೀಕರು, ಆನಂತರ ರೋಮನ್ನರು ಆಸಕ್ತಿ ತೋರಿಸಿದ್ದಾರೆ. ಪ್ರಪಂಚವನ್ನು ಜಯಿಸಬೇಕೆಂದು, ದೂರ ಪ್ರಾಂತಗಳಲ್ಲಿ ವಸಾಹತು ಏರ್ಪಾಟುಮಾಡಿಕೊಂಡು, ಅವುಗಳೊಂದಿಗೆ ವ್ಯಾಪಾರ ಮಾಡಬೇಕೆಂದು ಅವರು ಭಾವಿಸಿದರು. 2300 ವರ್ಷಗಳ ಹಿಂದೆ ಪ್ರಪಂಚವನ್ನು ಜಯಿಸಬೇಕೆಂದು ಭಾರತ ದೇಶದವರೆಗೂ ಬಂದ ಗ್ರೀಕ್ ರಾಜ ಅಲೆಗ್ಸಾಂಡರ್‌ನ ಕುರಿತು ಕೇಳಿರುತ್ತೀರಿ. ಅದೇ ವಿಧವಾಗಿ ರೋಮನ್ ವ್ಯಾಪಾರಿಗಳು ಹಡಗುಗಳ ಮೇಲೆ ಭಾರತ ತೀರವನ್ನು ಸೇರಿ, ವ್ಯಾಪಾರ ಕೇಂದ್ರಗಳನ್ನು ಏರ್ಪಾಟು ಮಾಡಿದರು. ಇವರೆಲ್ಲರಿಗೂ ನಕ್ಷೆಗಳು ಬಹಳ ಉಪಯೋಗ ಮತ್ತು ಅವಶ್ಯಕವಾಗಿದ್ದವು.

SCERT TELANGANA

ನಾವಿಕರಿಗೆ ಉಪಯೋಗಪಡುವ ನಕ್ಷೆಗಳು ಬಹಳ ಖಚಿತತ್ವವನ್ನು ಹೊಂದಿರಬೇಕು. ಅಕ್ಷಾಂಶಗಳು, ರೇಖಾಂಶಗಳ ಆಧಾರವಾಗಿ ನಕ್ಷೆಗಳನ್ನು ಖಚಿತವಾಗಿ ತಯಾರಿಸಲು ಗ್ರೀಕರು ಪ್ರಯತ್ನಿಸಿದರು. ಇದು ಹೇಗೆ ಮಾಡಿದರೋ ನೋಡೋಣ. ಏಕಕಾಲಕ್ಕೆ ಮಧ್ಯಾಹ್ನ ಆಗುವ ಕೆಲವು ಪ್ರದೇಶಗಳನ್ನು ಗುರ್ತಿಸಲು ಪ್ರಯತ್ನಿಸಿದರು. ಅವುಗಳನ್ನು ಸೇರಿಸುತ್ತಾ ಉತ್ತರದಿಂದ ದಕ್ಷಿಣಕ್ಕೆ ಒಂದು ರೇಖೆ ಎಳೆದರು. ಇದನ್ನು 'ಮೆರಿಡಿಯನ್' (ಮಧ್ಯಾಹ್ನ ರೇಖೆ) ಇಲ್ಲವೆ 'ರೇಖಾಂಶ ' ಎನ್ನುವರು. ಮಧ್ಯಾಹ್ನ ಸಮಯದಲ್ಲಿ ಒಂದೇ ಉದ್ದ ಇರುವ ನೆರಳಿನ ಪ್ರದೇಶಗಳನ್ನು ಸೇರಿಸುತ್ತಾ ಅಕ್ಷಾಂಶಗಳನ್ನು ಸಹ ಎಳೆಯಲು ಪ್ರಯತ್ನಿಸಿದರು. ಈ ಎರಡು ವಿಧವಾದ ರೇಖೆಗಳಿಂದ ನಕ್ಷೆ ಮೇಲೆ ಚೌಕಟ್ಟುಗಳನ್ನು ಹಾಕಿ ಎಲ್ಲಾ ಪ್ರದೇಶಗಳನ್ನು ಈ ರೇಖೆಗಳ ಮೇಲೆ ಪೂರ್ವದಿಂದ ಪಶ್ಚಿಮಕ್ಕೆ ಉತ್ತರದಿಂದ ದಕ್ಷಿಣಕ್ಕೆ ಗುರ್ತಿಸಿದರು. ಇವುಗಳನ್ನು ಖಚಿತವಾಗಿ ಬಿಡಿಸುವುದು ಅಷ್ಟು ಸುಲಭವಾದ ಕೆಲಸವಲ್ಲ, ಅಕ್ಷಾಂಶಗಳು, ರೇಖಾಂಶಗಳು ಸರಿಯಾಗಿ ಬಿಡಿಸಲು 2000 ವರ್ಷಗಳು ಹಿಡಿಯಿತು. ಆದರೆ ಈ ರೇಖೆಗಳ ಆಧಾರವಾಗಿ ನಕ್ಷೆಗಳ ಮೇಲೆ ಪ್ರದೇಶಗಳನ್ನು ಗುರ್ತಿಸುವುದರಿಂದ ಯಾತ್ರಿಕರಿಗೆ, ನಾವಿಕರಿಗೆ ತಮ್ಮ ಗಮ್ಯಸ್ಥಾನವನ್ನು ಹಿಡಿದು ದಿಕ್ಕನ್ನು ಬದಲಾಯಿಸುತ್ತಾ ಅಲ್ಲಿಗೆ ಸೇರಿಕೊಳ್ಳುವುದು ಸುಲಭವಾಯಿತು. ನಾವೀಕರು ತಾವು ಸಂದರ್ಶಿಸಿದ ಪ್ರದೇಶಗಳ ಬಗ್ಗೆ ನಕ್ಷೆಗಳು ತಯಾರು ಮಾಡುವವರಿಗೆ ಹೇಳಿ ನಾವಿಕರು ಸಹಕರಿಸಿದರು. ಪ್ರಾಚೀನ ಕಾಲದಲ್ಲಿ ಪ್ರಖ್ಯಾತ ಭೌಗೋಳಿಕ ಶಾಸ್ತ್ರಜ್ಞರಲ್ಲಿ ಒಬ್ಬರಾದ ಟಾಲಮಿ ಈ ರೇಖೆಗಳನ್ನು ಉಪಯೋಗಿಸಿ ವಿವರಗಳಿಂದ ಕೂಡಿದ ನಕ್ಷೆಗಳು ತಯಾರಿಸಿದರು. ಅವುಗಳನ್ನು ತಯಾರಿಸಿ, ಬಹಳ ಕಾಲವಾಗಿರುವುದರಿಂದ ಅವು ಬಳಕೆಯಲ್ಲಿ ಇಲ್ಲ.

ಆದರೆ ಈ ನಕ್ಷೆಗಳು ಯೂರೋಪ್, ಅದರ ಸುತ್ತಮುತ್ತಲು ದೇಶಗಳಿಗೆ ಸಂಬಂಧಿಸಿದವುಗಳಿಗೆ ಸರಿಯಾದ ಸಮಾಚಾರವನ್ನು ಕೊಟ್ಟವೆಂದು ನೀವು ಗಮನಿಸಿರುತ್ತೀರಿ. ನಕ್ಷೆ ಮಧ್ಯದಲ್ಲಿ ಸಾಧಾರಣವಾಗಿ ಗ್ರೀಸ್ ಆಗಲಿ, ರೋಮ್ ಆಗಲಿ ಇರುತ್ತವೆ. ವ್ಯಾಪಾರಿಗಳು, ನಾವಿಕರು ಸಂದರ್ಶಿಸಿದ ವಿವಿಧ ದೇಶಗಳ ತೀರಪ್ರಾಂತಗಳ ಕುರಿತು ಸರಿಯಾದ ವಿವರಗಳನ್ನೇ ಈ ನಕ್ಷೆಗಳು ಕೊಟ್ಟವೆ. ಆದರೆ ಒಳಗಿನ ಪ್ರದೇಶಗಳ ಕುರಿತು ಅಷ್ಟಾಗಿ ತಿಳಿಯಪಡಿಸುತ್ತಿಲ್ಲ. ಉದಾಹರಣಗೆ ಶ್ರೀಲಂಕ ಬಗ್ಗೆ ನಾವಿಕರಿಗೆ ಚೆನ್ನಾಗಿ ತಿಳಿದಿತ್ತು. ಆದ್ದರಿಂದ ಏಷಿಯಾ ನಕ್ಷೆಯಲ್ಲಿ ಶ್ರೀಲಂಕಕ್ಕಿಂತ ಭಾರತದೇಶ ಬಹಳ ಚಿಕ್ಕದಾಗಿ ತೋರಿಸಿದ್ದಾರೆ.

ನಕ್ಷೆಗಳನ್ನು ತಯಾರಿಸಲು ಅರಬ್ ಪಂಡಿತರು, ನಾವಿಕರು ಉಪಯೋಗಿಸಿಕೊಂಡರು. ನಕ್ಷೆಗಳು ತಯಾರಿಸುವ ಪ್ರಮುಖರಲ್ಲಿ ಆಲ್ಇದ್ರಿಸಿ ಒಬ್ಬರು. ಈತನು ತನ್ನ ರಾಜನಿಗೆ ಸಾ.ಶ. 1154 ರಲ್ಲಿ ಒಂದು ಪ್ರಪಂಚ ನಕ್ಷೆಯನ್ನು ತಯಾರು ಮಾಡಿದನು. ಈ ನಕ್ಷೆಯಲ್ಲಿನ ವಿವರಗಳನ್ನು ಆರಬಿಕ್ ಭಾಷೆಯಲ್ಲಿವೆ. ಈ ನಕ್ಷೆ ಯೂರೇಷಿಯಾ ಖಂಡವನ್ನು ಪೂರ್ತಿಯಾಗಿ ತೋರಿಸಿದೆ, ಆದರೆ ಆಫ್ರಿಕಾ ಖಂಡದಲ್ಲಿ ಉತ್ತರ ಭಾಗ ಮಾತ್ರ ತೋರಿಸಿದೆ. ಆಫ್ರಿಕಾದ ದಕ್ಷಿಣ ಭಾಗ, ಆಗ್ನೇಯ ಏಷಿಯಾ ಭಾಗಗಳ ವಿವರಗಳು ತೋರಿಸಿಲ್ಲ.




*ನಕ್ಷೆ 3: ಆಲ್ ಇದ್ರಿಸಿ ಹಾಕಿದ ನಕ್ಷೆ ಕ್ರಿ.ಶ. 1154*

SCERT TELANGANA

ಈ ನಕ್ಷೆಯಲ್ಲಿ ಆಸಕ್ತಿಕಾರಕವಾದ ಅನೇಕ ಅಂಶಗಳು ಇವೆ. ಮೊದಲನೆಯದು ದಕ್ಷಿಣವನ್ನು ನಕ್ಷೆಯಲ್ಲಿ ಮೇಲ್ಭಾಗದಲ್ಲಿ, ಉತ್ತರವನ್ನು ಕೆಳಭಾಗದಲ್ಲಿ ತೋರಿಸುತ್ತಿದೆ. ಇದು ಅರೇಬಿಯಾವನ್ನು ನಕ್ಷೆ ಮಧ್ಯೆದಲ್ಲಿ ಪ್ರಮುಖವಾಗಿ ತೋರಿಸಿದೆ.

- **ಹಾಗೆ ಏಕೆ ಇದೆಯೋ ಊಹಿಸಿರಿ. ಈ ನಕ್ಷೆಯಲ್ಲಿ ಶ್ರೀಲಂಕವನ್ನು, ಭಾರತ ದೇಶವನ್ನು ಗುರ್ತಿಸಿ. (ಇದರಲ್ಲೂ ಸಹ ಶ್ರೀಲಂಕವನ್ನು ಇದ್ದುದಕ್ಕಿಂತ ದೊಡ್ಡದಾಗಿ ತೋರಿಸಿದ್ದಾರೆ).**



*ಚಿತ್ರ 5: ಬೈಬಲ್ ಪ್ರಕಾರ ಪ್ರಪಂಚದ ಮಾದರಿ*

ಟಾಲಮಿ ಪುಸ್ತಕಗಳು ಲಭಿಸದ ಮೊದಲು ಯೂರೋಪ್‌ನಲ್ಲಿ ನಕ್ಷೆಗಳು ತಯಾರು ಮಾಡುವವರು ಬೈಬಲ್‌ನಲ್ಲಿನ ಮತೀಯ ಭಾವನೆಗಳಿಂದ ಬಹಳ ಪ್ರಭಾವಿತರಾದರು, ಅದರಲ್ಲಿನ ಭಾವನೆಗಳಿಗೆ ಅನುಗುಣ ವಾಗಿ ಪ್ರಪಂಚವನ್ನು ಚಿತ್ರೀಕರಿಸಿದರು. ಆ ಕಾಲದಲ್ಲಿ ಮಾಡಿದ ಪ್ರಪಂಚ ನಕ್ಷೆಯನ್ನು ಕೆಳಗೆ ನೋಡಿರಿ.

ಈ ನಕ್ಷೆ ಬೈಬಲ್ ವರ್ಣಿಸುವ ಪ್ರಪಂಚಕ್ಕೆ ಇದು ಮಾದರಿಯಾಗಿ ಇದೆ. ಇದು ಸಮುದ್ರಗಳಿಂದ ಆವರಿಸಿದ್ದು ಏಷಿಯಾ, ಯೂರೋಪ್, ಆಫ್ರಿಕಾಗಳೆನ್ನುವ ಮೂರು ಖಂಡಗಳಾಗಿ ವಿಭಜಿಸಿದೆ. ಇವುಗಳಲ್ಲಿ ಏಸುಕ್ರಿಸ್ತನ ಜನ್ಮ ಸ್ಥಳವಾದ 'ಜೆರೊಸಲೆಂ' ಇರುವ ಏಷಿಯಾ ಖಂಡ ಎಲ್ಲವುಗಳಿಗಿಂತ ದೊಡ್ಡದೆಂದು, ಮುಖ್ಯವಾದುದೆಂದು ಭಾವಿಸಿದರು. ಆದ್ದರಿಂದಲೇ ಅದನ್ನು ಮೇಲೆ ತೋರಿಸಿದ್ದಾರೆ. ಯೂರೋಪ್, ಆಫ್ರಿಕಾ ಖಂಡಗಳು ಚಿಕ್ಕದಾಗಿ, ಕೆಳಭಾಗದಲ್ಲಿವೆ.



*ಚಿತ್ರ 6: ಟಾಲಮಿ ಪುಸ್ತಕಗಳನ್ನು ಓದಿ ಗಣಿತಶಾಸ್ತ್ರ ಅಳತೆಗಳ ಅನುಗುಣವಾಗಿ ಹಾಕಿದ ನಕ್ಷೆ*

ಸಾಧಾರಣ ಶಕೆ (ಸಾ.ಶ.) 1480 ರ ಕಾಲದಲ್ಲಿ ಟಾಲಮಿ ಪುಸ್ತಕಗಳನ್ನು ಯೂರೋಪಿಯನ್ನರು ಪುನಃ ಕಂಡು ಹಿಡಿದರು. (ಆದರೆ ಆತನು ಹಾಕಿದ ನಕ್ಷೆಗಳು ದೊರೆಯಲಿಲ್ಲ) ಟಾಲಮಿ ವಿವಿಧ ಪ್ರದೇಶಗಳನ್ನು ಸರಿಯಾಗಿ ಗುರ್ತಿಸಿದ್ದನ್ನು ನೋಡಿ ಅವರು ಆಶ್ಚರ್ಯ ಹೋದರು. ಟಾಲಮಿ ವಿವರಣೆಗಳ ಆಧಾರವಾಗಿ ಹೊಸದಾಗಿ ನಕ್ಷೆಗಳು ತಯಾರಿಸಿದರು. ಅಂಥಹಾ ಒಂದು ನಕ್ಷೆಯನ್ನು ಈ ಕೆಳಗೆ ನೋಡಬಹುದು.

ಇದಕ್ಕಿಂತ ಮೊದಲು ನೋಡಿದ ನಕ್ಷೆಯಂತಲ್ಲದೆ ದೂರಗಳು, ದಿಕ್ಕುಗಳು ಖಚ್ಚಿತವಾದ ಗಣಿತಶಾಸ್ತ್ರ ಅಳತೆಗಳ ಆಧಾರವಾಗಿ ಈ ನಕ್ಷೆ ಹಾಕಿದ್ದಾರೆ.

15 ನೇ ಶತಮಾನದಲ್ಲಿ ಅರಬ್ಬೇತರ ಪ್ರಪಂಚದಲ್ಲಿ ಹೊಸ ಪ್ರೇರಣೆಗಳಿಗೆ ಟಾಲಮಿ ಜೀವ ತುಂಬಿದನು. ಫಲವಾಗಿ ಇಟಾಲಿಯನ್, ಫ್ರೆಂಚ್, ಇಂಗ್ಲೀಷ್, ಜರ್ಮನನಂತಹ ಸಂಪ್ರದಾಯಗಳು ರೂಪು ಪಡೆದವು. ನೂತನ ಪ್ರದೇಶಗಳ ಅನ್ವೇಷಣೆ ಕಂಡು ಹಿಡಿಯುವ ಯುಗವಾದ್ದರಿಂದ ನಕ್ಷೆಗಳು ಪ್ರಾಮುಖ್ಯತೆಯನ್ನು, ಜನಾದರಣವನ್ನು ಹೊಂದಿದವು. ಮೆಡಿಟರೇನಿಯನ್ ಸಮುದ್ರದ ಮೇಲಿಂದ ಭಾರತ ದೇಶಕ್ಕೆ ಸಮುದ್ರ ಮಾರ್ಗವನ್ನು ಅರಬ್ಬರು ಮುಚ್ಚಿಹಾಕಿದರು. ಇದರಿಂದ ಭಾರತದೇಶಕ್ಕೆ ಮತ್ತೊಂದು ಸಮುದ್ರ ಮಾರ್ಗವನ್ನು ಕಂಡು ಹಿಡಿಯಲು ಪಶ್ಚಿಮ ಯೂರೋಪ್

(ಸ್ಪೆಯಿನ್, ಪೋರ್ಚಗಲ್, ಹಾಲೆಂಡ್, ಇಂಗ್ಲೆಂಡ್‌ನಂತಹ ದೇಶಗಳ) ವ್ಯಾಪಾರಿಗಳು ಹೊರಟರು. ಆ ವಿಧವಾಗಿ ಕೊಲಂಬಸ್ ಪಶ್ಚಿಮ ದಿಕ್ಕಿಗೆ ಪ್ರಯಾಣಿಸಿ ಅಮೇರಿಕಾವನ್ನು ಆಫ್ರಿಕಾವನ್ನು ಕಂಡು ಹಿಡಿದನು. ಆಫ್ರಿಕಾವನ್ನು ಸುತ್ತುವರೆದು ಹೋಗಿ ವಾಸ್ಕೋ-ಡಿ-ಗಾಮ ಭಾರತ ದೇಶವನ್ನು ತಲುಪಿದನು. ಭೂಮಿ ಚಪ್ಪಟೆಯಾಗಿ ಇಲ್ಲವೆಂದು ಚೆಂಡಿನ ಆಕಾರದಲ್ಲಿರುವ ಗೋಳವೆಂದು ನಿರೂಪಿಸಲು ಇವು ಸಹ ಸಹಾಯಕವಾದವು.

16 ನೇ ಶತಮಾನದಲ್ಲಿ ಹಾಲೆಂಡ್ ಪ್ರಮುಖ ವ್ಯಾಪಾರ ಶಕ್ತಿಯಾಗಿ ಬೆಳೆಯಿತು. ಸಮುದ್ರಯಾನ, ವ್ಯಾಪಾರಗಳಲ್ಲಿ ಹಾಲೆಂಡ್ ಆಧಿಪತ್ಯ ಸಾಧಿಸಿದ್ದರಿಂದ ಆ ದೇಶದ ನಕ್ಷೆಗಳು ತಯಾರಿಸುವವರು ತಮ್ಮ ಕೆಲಸದಲ್ಲಿ ಗಣನೀಯವಾದ ಪ್ರಗತಿ ಸಾಧಿಸಿದರು. ಡಚ್ ದೇಶ ನಕ್ಷೆ ಲೇಖಕರ ಪಿತಾಮಹನಾದ



*ನಕ್ಷೆ 8: ಗೆರಾರ್ಡಸ್ ಮೆರ್ಕೇಟರ್ (16 ನೇ ಶತಮಾನ) ಹಾಕಿದ ಪ್ರಪಂಚ ನಕ್ಷೆ*

ಗೆರಾರ್ಡ್‌ಸ್ ಮೆರ್ಕೇಟರ್ (1512-94) ಹಿಂದಿನ ಪ್ರಯತ್ನಗಳನ್ನು ಪರಿಶೀಲಿಸಿ, ನಕ್ಷೆಗಳಲ್ಲಿ ಮೂಲಭೂತ ಕೃಷಿ ಮಾಡಿದನು. ನಕ್ಷೆಗಳನ್ನು ಆತನು ಚಿತ್ರಿಸಿದ ವಿಧಾನ ಆತನ ಹೆಸರಿನ ಮೇಲೆ 'ಮೆರ್ಕೇಟರ್ ಪ್ರಕ್ಷೇಪಣೆ ' ಎಂದು ಖ್ಯಾತಿ ಪಡೆಯಿತು. ನಾವು ಉಪಯೋಗಿಸುತ್ತಿರುವ ಅನೇಕ ಪ್ರಪಂಚ ನಕ್ಷೆಗಳು ಇದರ ಆಧಾರದಿಂದಲೇ ರೂಪಿಸಲ್ಪಟ್ಟಿವೆ.

### ಪ್ರಕ್ಷೇಪಣೆ :

ಪ್ರಪಂಚ ಚೆಂಡಿನಂತೆ ದುಂಡಾಗಿ ಇದೆಂದು ನಿಮಗೆ ತಿಳಿದಿದೆ. ಆದರೆ ಇದನ್ನು ಕಾಗದದ ಮೇಲೆ ಹಾಕಿದಾಗ ಬಾಗಿದಂತೆ ತೋರಿಸಲಾರೆವು. ಆದ್ದರಿಂದ ಚಪ್ಪಟೆಯಾಗಿಯೇ ತೋರಿಸಬೇಕು. ಇದರಿಂದ ಅನಿವಾರ್ಯವಾಗಿ ಖಂಡಗಳ ರೂಪದಲ್ಲಾಗಲಿ, ದೂರಗಳಲ್ಲಾಗಲಿ ಕೆಲವು ವಕ್ರೀಕರಣಗಳು ನಡೆಯುತ್ತವೆ, ಇಲ್ಲವೇ ಪ್ರದೇಶಗಳು ತಪ್ಪು ದಿಕ್ಕಿನಲ್ಲಿ ತೋರಿಸಲ್ಪಡುತ್ತವೆ. ಮುಖ್ಯ ಪ್ರದೇಶಗಳನ್ನು ಗುರ್ತಿಸಲು ನಾವಿಕರಿಗೆ ಸರಿಯಾದ ಆಕಾರಗಳು, ದಿಕ್ಕುಗಳು ಅವಶ್ಯಕ. ಖಂಡಗಳ ಪರಿಮಾಣ, ದೂರಗಳಲ್ಲಿ ವಕ್ರೀಕರಣಗಳು ಇದ್ದರೂ ಖಂಡಗಳ ಆಕಾರ, ದಿಕ್ಕುಗಳು ಸರಿಯಾಗಿ ತೋರಿಸುವ ವಿಧಾನವನ್ನು ಮೆರ್ಕೇಟರ್ ರೂಪಿಸಿದನು. ಈ ಪದ್ದತಿಯನ್ನು ಮೆರ್ಕೇಟರ್ ಪ್ರಕ್ಷೇಪಣೆ ಎಂದು ಕರೆಯುವರು ಪ್ರಪಂಚವನ್ನು ತೋರಿಸಲು ಇಂದಿಗೂ ಬಳಸುತ್ತಿದ್ದಾರೆ.

- **ಪ್ರಾಚೀನ ಕಾಲದಲ್ಲಿ ನಕ್ಷೆಗಳ ತಯಾರಿಕೆಯನ್ನು ನಾವಿಕರು ಯಾವ ವಿಧವಾಗಿ ಪ್ರಭಾವಿತಗೊಳಿಸಿದರು ?**
- **ನಕ್ಷೆಗಳನ್ನು ತಯಾರಿಸುವವರು ತಮ್ಮ ದೇಶವನ್ನು ನಕ್ಷೆ ಮಧ್ಯದಲ್ಲಿ ಏಕೆ ಇಟ್ಟರು ?**

### ವಸಾಹತುಗಳ ಏರ್ಪಾಟು, ಅನ್ವೇಷಣೆಗಳು, ಸೈನಿಕ ವಿನಿಯೋಗ - ನಕ್ಷೆಗಳ ತಯಾರಿಕೆ

ಐರೋಪಾ ದೇಶಗಳು ಉತ್ತರ, ದಕ್ಷಿಣ ಅಮೇರಿಕಾ, ಆಫ್ರಿಕಾ, ಆಸ್ಟ್ರೇಲಿಯಾ, ಏಷಿಯಾಗಳಂತಹ ಖಂಡಗಳನ್ನು ತಮ್ಮ ವಸಾಹತುಗಳಾಗಿ ಬದಲಾಯಿಸಿಕೊಂಡಿದ್ದರಿಂದ ಆ ಪ್ರದೇಶಗಳ ಬಗ್ಗೆ, ಅಲ್ಲಿಯ ವಾತಾವರಣ, ಬೆಳೆಗಳು, ಖನಿಜ ಸಂಪನ್ಮೂಲಗಳ ಬಗ್ಗೆ, ಜನರ ಬಗ್ಗೆ ತಿಳಿದುಕೊಳ್ಳಬೇಕಾದ ಅವಶ್ಯಕತೆ ಏರ್ಪಟ್ಟಿತು.

ನಕ್ಷೆಗಳು ತಯಾರಿಸುವವರು, ಇತರರು ಇರುವ ತಂಡಗಳನ್ನು ವಿವಿಧ ಪ್ರಾಂತಗಳಿಗೆ ಕಳುಹಿಸಿ, ಶಾಸ್ತ್ರೀಯವಾಗಿ ಅಧ್ಯಯನ ಮಾಡಿ ನಕ್ಷೆಗಳನ್ನು ತಯಾರಿಸಬೇಕೆಂದು ಕೋರಿದರು. ಈ ತಂಡಗಳು ಪರ್ವತಗಳು, ಮರುಭೂಮಿ ಗಳು, ನದಿಗಳನ್ನು ದಾಟಿ, ಸ್ಥಾನಿಕ ಜನರನ್ನು ಪ್ರತಿಘಟಿಸಿ ದೇಶಗಳ ಒಳಭಾಗದ ಪ್ರಾಂತಗಳಿಗೆ ಸರಿ ತಮಗೆ ಬೇಕಾದ ಸಮಾಚಾರವನ್ನು ಸಂಗ್ರಹಿಸಿದವು. ಈ ಸಮಾಚಾರ, ನಕ್ಷೆಗಳ ಆಧಾರವಾಗಿ ವಸಾಹತು ಆಡಳಿತಗಾರರಿಗೆ ಆಯಾ ಪ್ರಾಂತಗಳ ಮೇಲೆ ತಮ್ಮ ಆಳ್ವಿಕೆಯನ್ನು ಭದ್ರಪಡಿಸಿಕೊಂಡರು. ಅಲ್ಲಿಯ ಸಂಪನ್ಮೂಗಳನ್ನು ದೋಚಿಕೊಂಡರು.

ಬ್ರಿಟೀಷ್ ಪಾಲಕರು ಭಾರತ ದೇಶವನ್ನು ತಮ್ಮ ಅಧೀನದೊಳಗೆ ತಂದುಕೊಂಡ ನಂತರ ದೇಶದ

SCERT TELANGANA




*ಚಿತ್ರ 9: ಬ್ರಿಟೀಷ್ ಆಳ್ವಿಕೆಯ ಕಾಲದ ಭಾರತ ದೇಶ ನಕ್ಷೆ*

ಮಾರುಮೂಲೆ ಪ್ರಾಂತಗಳೆಲ್ಲವುಗಳಿಂದ ವಿವರಗಳನ್ನು ತೋರಿಸುವ ನಕ್ಷೆಗಳು ತಯಾರಿಸಲು ಪ್ರಾರಂಭಿಸಿದರು. ಭಾರತ ದೇಶವನ್ನೆಲ್ಲಾ ಭೂ ಮಾಪನ ಮಾಡಿ, ನಕ್ಷೆಗಳು ತಯಾರಿಸಲು 'ಭಾರತದೇಶದ ಭೂ ಮಾಪನ 'ಎನ್ನುವ ಶಾಖೆಯನ್ನು ಏರ್ಪಾಟು ಮಾಡಿದರು. ಜೇಮ್ಸ್ ರೆನ್ನೆಲ್ ನು 'ಸರ್ವೆಯರ್ ಜನರಲ್ ' ನಾಗಿ ನೇಮಿಸಿದರು. ಭೂ ಮಾಪನದ ಆಧಾರವಾಗಿ ತಯಾರಿಸಿದ ಭಾರತದೇಶದ ಮೊಟ್ಟ ಮೊದಲ ನಕ್ಷೆಗಳನ್ನು ಆತನು ತಯಾರಿಸಿದನು. ನಕ್ಷೆ 8ನ್ನು ನೋಡಿರಿ. ಬ್ರಿಟೀಷ್ ಕಾಲದಲ್ಲಿ ತಯಾರು ಮಾಡಿದ ಭಾರತದೇಶ ನಕ್ಷೆಯೊಂದಿಗೆ ಈಗಿನ ಭಾರತದೇಶ ನಕ್ಷೆಯನ್ನು ಹೋಲಿಸಿರಿ.

ಪ್ರಪಂಚದಲ್ಲಿಯೇ ಅತ್ಯಂತ ಮುಖ್ಯವಾದ ಭೌಗೋಳಿಕ ಭೂ ಮಾಪನ 1802 ರಲ್ಲಿ ವಿಲಿಯಂ ಲಾಂಬ್ಟನ್ ಪ್ರಾರಂಭಿಸಿದನು. ಪ್ರಪಂಚದಲ್ಲಿ ಚೆನ್ನೈ ಹತ್ತಿರ ಪ್ರಾರಂಭಿಸಿ ಉತ್ತರಕ್ಕೆ ಹಿಮಾಲಯ ಪರ್ವತಗಳವರೆಗೆ ರೇಖಾಂಶಗಳ ಉದ್ದವನ್ನು ನಿರ್ಣಯಿಸಿ ವಿವಿಧ ಪ್ರದೇಶಗಳ ಎತ್ತರವನ್ನು ನಿರ್ಧರಿಸಿದನು. ಇದರ ಆಧಾರವಾಗಿ ರೇಖಾಂಶದ ಉದ್ದವನ್ನು ಲೆಕ್ಕಿಸಿದ್ದಾನೆ. ವಿವಿಧ ಪ್ರದೇಶಗಳ ಎತ್ತರಗಳನ್ನು ಕಂಡುಕೊಂಡರು. ಈ ಭೂ ಮಾಪನವನ್ನು 'ಸರ್ ಜಾರ್ಜ್' ಎವರೆಸ್ಟ್ ಪೂರ್ತಿ ಮಾಡಿದನು.ಈ ಭೂ ಮಾಪನದ ಆಧಾರದಿಂದಲೇ ಎವರೆಸ್ಟ್ ಪರ್ವತ ಪ್ರಪಂಚದಲ್ಲೆಲ್ಲಾ ಎತ್ತರವಾದ ಪರ್ವತವೆಂದು ನಿರೂಪಿಸಲ್ಪಟ್ಟಿದೆ. (ಮೊಟ್ಟ ಮೊದಲ ಬಾರಿ ಶಾಸ್ತ್ರೀಯ ಪದ್ಧತಿಗಳನ್ನು ಉಪಯೋಗಿಸಿ ಅದರ ಎತ್ತರವನ್ನು ಅಳೆದ ಜಾಜ್ ಎವರೆಸ್ಟ್ ಹೆಸರನ್ನೇ ಈ ಪರ್ವತಕ್ಕೆ ಇಟ್ಟರು) ಎಲ್ಲಾ ಎತ್ತರಗಳನ್ನು ಸಮುದ್ರ ಮಟ್ಟದಿಂದ ಅಳೆಯುತ್ತಾರಾದ್ದರಿಂದ ಈ ಭೂ ಮಾಪನ ಮಾಡುವುದು ಸಮುದ್ರ ತೀರವಾದ ಚೆನ್ನೈನಲ್ಲಿ ಪ್ರಾರಂಭವಾಯಿತು.

ಸೈನಿಕರಿಗೆ, ವೈಮಾನಿಕ ದಳಗಳಿಗೆ ಯುದ್ಧ ಸಮಯಗಳಲ್ಲಿ ನಕ್ಷೆಗಳ ತಯಾರಿಕೆ ಅವಸರ ಹೆಚ್ಚಾಯಿತು. ಮೊದಲನೇ ಎರಡನೇ ಪ್ರಪಂಚ ಯುದ್ಧಗಳ ಸಮಯದಲ್ಲಿ ಎಲ್ಲಾ

SCERT TELANGANA

ವಿವರಗಳಿಂದ ಕೂಡಿದ ಈ ನಕ್ಷೆಗಳನ್ನು ಶತ್ರುಗಳ ಕೈಯಲ್ಲಿ ಬೀಳದಂತೆ ಅನೇಕ ಸರ್ಕಾರಗಳು ಇವುಗಳನ್ನು ರಹಸ್ಯವಾಗಿ ಇಡಲು ಪ್ರಯತ್ನಿಸಿದವು. ಆದರೆ ನಮ್ಮ ಕಾಲದಲ್ಲಿ ಉಪಗ್ರಹ ಛಾಯಾ ಚಿತ್ರಗಳು ನಕ್ಷೆಗಳ ತಯಾರಿಕೆಯನ್ನು ಪೂರ್ತಿಯಾಗಿ ಬದಲಾಯಿಸಿಬಿಟ್ಟಿವೆ. ಪೂರ್ತಿ ವಿವರಗಳಿಂದ ಎಷ್ಟೋ ನಿಖರವಾದ ನಕ್ಷೆಗಳು ಈಗ ತಯಾರಾಗುತ್ತಿವೆ. ಅಷ್ಟೇ ಅಲ್ಲ, ಇವುಗಳನ್ನು ರಹಸ್ಯವಾಗಿ ಇಡುವುದು ಈಗ ಸರ್ಕಾರಗಳಿಗೆ ಸಾಧ್ಯವಾಗುವುದಿಲ್ಲ. ಅಧ್ಯಯನ ಮಾಡುವುದಕ್ಕೆ, ಉಪಯೋಗಿಸಿಕೊಳ್ಳುವುದಕ್ಕೆ ಈ ಸಮಾಚಾರ ಎಲ್ಲರಿಗೂ ಲಭಿಸುವಂತೆ ಇದೆ.

- **ನಕ್ಷೆಗಳು ಈ ವಿಧವಾಗಿ ಎಲ್ಲರಿಗೂ ಲಭ್ಯವಾಗುವಂತೆ ಇಡುವುದು ಒಳ್ಳೆಯದೇನಾ ? ಏತಕ್ಕೆ ?**
- **ಎಲ್ಲಾ ವಿವರಗಳಿಂದ ಕೂಡಿದ ನಕ್ಷೆಗಳನ್ನು ತಯಾರಿಸಲು ವಸಾಹತು ಶಕ್ತಿಗಳು ದೊಡ್ಡ ಮೊತ್ತದಲ್ಲಿ ನಿಧಿಯನ್ನು ಏಕೆ ಖರ್ಚುಮಾಡಿದರು?**
- **ಡೆವಿಡ್ ಲಿವಿಂಗ್‌ಸ್ಟನ್, ಸ್ಟ್ಯಾನ್ಲಿ ಅಮುಡ್ಸನ್‌ರಂತಹ ಪ್ರಮುಖ ಅನ್ವೇಷಕರ ಜೀವನಗಳ ಕುರಿತು ತಿಳಿದುಕೊಳ್ಳಿ. ಅವರ ಅನ್ವೇಷಣೆಗಳಿಗೆ ಆಗುವ ಖರ್ಚನ್ನು ಯಾರು ಭರಿಸಿದರು ? ಏಕೆ ?**

### ನಮ್ಮ ಕಾಲದಲ್ಲಿ ನಕ್ಷೆಗಳ ಉಪಯೋಗ :

ವ್ಯಾಪಾರ, ನೌಕಾಯಾನ, ಯುದ್ಧಗಳು, ವಸಾಹತು ಪ್ರಾಂತಗಳನ್ನು ಏರ್ಪಡಿಸಿಕೊಳ್ಳುವುದಂತಹವುಗಳಿಗಾಗಿ ನಕ್ಷೆಗಳನ್ನು ತಯಾರಿಸಿ, ಉಪಯೋಗಿಸಿದರೆಂದ ನಾವು ತಿಳಿದುಕೊಂಡೆವು. ನಮ್ಮ ಕಾಲದಲ್ಲಿ ದೇಶಗಳ ಅಭಿವೃದ್ಧಿಗೆ, ಯೋಜನೆಗಳು ತಯಾರಿಸಲು ನಕ್ಷೆಗಳನ್ನು ವ್ಯಾಪಕವಾಗಿ ವಿನಿಯೋಗಿಸುತ್ತಿದ್ದಾರೆ. ಒಂದು ಪ್ರಾಂತದಲ್ಲಿನ ಸಂಪನ್ಮೂಲಗಳು, ಆ ಪ್ರಾಂತ ಎದುರಿಸುತ್ತಿರುವ ಸಮಸ್ಯೆಗಳಂತವು ಯೋಜನೆಗಳು ತಯಾರಿಸುವವರಿಗೆ ತಿಳಿಯಬೇಕು. ನಕ್ಷೆಗಳ ಮೂಲಕ ಈ ವಿಷಯಗಳು ತಿಳಿಯುತ್ತವೆ. ಉದಾಹರಣೆಗೆ ಕುಡಿಯುವ ನೀರಿನ ಸಮಸ್ಯೆ ಇರುವ ಪ್ರದೇಶಗಳನ್ನು ತೋರಿಸುವ ನಕ್ಷೆಯನ್ನು ತಯಾರು ಮಾಡಬಹುದು. ಈ ನಕ್ಷೆಯನ್ನು ನೀರಿನ ಸಂಪನ್ಮೂಲಗಳಾದ ವರ್ಷಪಾತ, ಭೂಗರ್ಭಜಲ ನದಿಗಳ ನಕ್ಷೆಗಳೊಂದಿಗೆ ಹೋಲಿಸಬಹುದು. ಈ ಹೋಲಿಕೆಗಳ ಆಧಾರವಾಗಿ ಆ ಪ್ರಾಂತದ ಜನರೆಲ್ಲರಿಗೂ ಕುಡಿಯುವ ನೀರು ಒದಗಿಸಲು ಕೊಳವೆ ಬಾವಿಗಳನ್ನು ಅಗೆಯುವುದು, ನದಿಗಳಿಗೆ ಅಡ್ಡಲಾಗಿ ಅಣೆಕಟ್ಟು ಕಟ್ಟುವುದು, ಕೆರೆಗಳನ್ನು ಅಗೆಯುವುದು ಇಲ್ಲವೆ ದೂರ ಪ್ರಾಂತದಿಂದ ಪೈಪುಗಳ ಮೂಲಕ ನೀರನ್ನು ತರುವುದು ಇವುಗಳಲ್ಲಿ ಯಾವುದು ಉತ್ತಮವಾದ ವಿಧಾನವೋ ನಿರ್ಣಯಿಸಬಹುದು. ಅದೇ ವಿಧವಾಗಿ ನಕ್ಷೆಗಳ ಸಹಾಯದಿಂದ ವ್ಯವಸಾಯ ಅಭಿವೃದ್ಧಿಗೆ, ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪಿಸಲು, ರಸ್ತೆಗಳನ್ನು ಹಾಕಲು, ಆಸ್ಪತ್ರೆಗಳು, ಪಾಠಶಾಲೆಗಳ ನಿರ್ಮಾಣಕ್ಕೆ ಯೋಜನೆಗಳು ತಯಾರಿಸಬಹುದು.

ಹೊಸ ಪಾಠಶಾಲೆಗಳು, ವಿದ್ಯಾಲಯಗಳನ್ನು ಸ್ಥಾಪಿಸಲು ನಕ್ಷೆಗಳನ್ನು ಹೇಗೆ ಉಪಯೋಗಿಸಬಹುದೋ ತಿಳಿಸಿ. ಇದಕ್ಕಾಗಿ ಯಾವ ಯಾವ ನಕ್ಷೆಗಳನ್ನು ಅಧ್ಯಯನ ಮಾಡಬೇಕಾಗಿ ಇರುತ್ತದೆ.

ತಮ್ಮ ವ್ಯಾಪಾರ ಕಾರ್ಯಕಲಾಪಗಳು ರೂಪಿಸಿಕೊಳ್ಳುವುದಕ್ಕೆ ಸಹ ಕಂಪನಿಗಳು ನಕ್ಷೆಗಳನ್ನು ಉಪಯೋಗಿಸುತ್ತವೆ. ಉದಾಹರಣೆಗೆ ಒಂದು ಪ್ರಾಂತದಲ್ಲಿ ತಮ್ಮ ಕಾರ್ಯಕಲಾಪಗಳನ್ನು ವಿಸ್ತರಿಸಬೇಕೆಂದುಕೊಳ್ಳುವ ಮೊಬೈಲ್ ಟೆಲಿಫೋನ್ ಕಂಪನಿಗೆ ಗ್ರಾಮಗಳು, ಪಟ್ಟಣಗಳನ್ನು ತೋರಿಸುವ ನಕ್ಷೆ, ಮೈಕ್ರೋವೇವ್ ಟವರ್‌ಗಳ ನಿರ್ಮಾಣಕ್ಕೆ ಬೆಟ್ಟಗಳು, ಕಾಡುಗಳನ್ನು ತೋರಿಸುವ ನಕ್ಷೆ ಅವಸರವಾಗುತ್ತವೆ.

- **ಆಸ್ಪತ್ರೆ ಸ್ಥಾಪಿಸುವುದಕ್ಕೆ ಅನುಕೂಲವಾದ ಪ್ರಾಂತವನ್ನು ಆಯ್ದುಕೊಳ್ಳಬೇಕೆನ್ನುವ ವ್ಯಕ್ತಿಗೆ ಯಾವ ಯಾವ ನಕ್ಷೆಗಳು ಅವಸರವಾಗುತ್ತವೆ ? ಪಟ್ಟಿ ತಯಾರಿಸಿರಿ.**
- **ಯುದ್ಧ ಸಮಯದಲ್ಲಿ ಸೈನ್ಯಕ್ಕೆ ನಕ್ಷೆಗಳು ಯಾವ ವಿಧವಾಗಿ ಉಪಯೋಗವಾಗುತ್ತವೆ ?**

### ವಿವಿಧ ವಿಷಯ ನಿರ್ದೇಶಿತ (ಥೀಮಾಟಿಕ್) ನಕ್ಷೆಗಳನ್ನು ಓದುವುದು :

ನಕ್ಷೆಗಳು ಪ್ರದೇಶಗಳ ಹೆಸರುಗಳನ್ನು, ಅವುಗಳ ನಡುವೆ ದೂರಗಳನ್ನು ಮಾತ್ರವೇ ಕೊಡುವುದಿಲ್ಲವೆಂದು ಮೇಲೆ ನೋಡಿದ್ದೇವೆ. ಒಂದು ಪ್ರಾಂತದ ನೈಸರ್ಗಿಕ ಸ್ವರೂಪ (ಬೆಟ್ಟಗಳಿಂದ ಕೂಡಿದೆಯಾ, ಸಮತಲಾವಾಗಿ ಇದೆಯಾ), ಜನರ ಆರ್ಥಿಕ ಕಾರ್ಯಕಲಾಪಗಳು, ಮಾತನಾಡುವ ಭಾಷೆಗಳು, ಅಕ್ಷರಾಸ್ಯತೆಗಳಂತಹವು ತೋರಿಸುವುದಕ್ಕೆ ಸಹ ನಕ್ಷೆಗಳನ್ನು ಉಪಯೋಗಿಸಬಹುದು. ಸಾಧಾರಣವಾಗಿ ಒಂದು ನಕ್ಷೆ ಒಂದು ವಿಷಯ / ಅಂಶದ ಮೇಲೆಯೇ ಕೇಂದ್ರೀಕರಿಸುತ್ತದೆ. ಇಂತಹ ನಕ್ಷೆಗಳನ್ನು ವಿಷಯ ನಿರ್ದೇಶಿತ (ಥೀಮಾಟಿಕ್) ನಕ್ಷೆಗಳು ಎನ್ನುವರು. ಉದಾಹರಣೆಗೆ ಮಂಡಲಗಳು / ತಾಲ್ಲೂಕುಗಳು, ಜಿಲ್ಲೆಗಳು, ರಾಜ್ಯಗಳು, ದೇಶಗಳು, ರಾಜಧಾನಿಗಳಂತಹವು ತಿಳಿಯಪಡಿಸುವ

SCERT TELANGANA

ರಾಜಕೀಯ ನಕ್ಷೆಗಳು ಇವೆ. ಬೆಟ್ಟಗಳು, ನದಿಗಳು, ಪ್ರಸ್ಥಭೂಮಿಗಳಂತಹವುಗಳನ್ನು ತೋರಿಸುವ ಕೆಲವು ಭೌಗೋಳಿಕ ನಕ್ಷೆಗಳಿವೆ. ಜನರು ಭೂಮಿಯನ್ನು ಉಪಯೋಗಿಸಿಕೊಳ್ಳುತ್ತಿರುವ ವಿಧಾನವನ್ನು ತಿಳಿಯಪಡಿಸುವ 'ಭೂ ವಿನಿಯೋಗ ನಕ್ಷೆಗಳು' ಕೆಲವು ಇವೆ. ಉದಾಹರಣೆಗೆ ಒಂದು ಗ್ರಾಮದಲ್ಲಿ ವಿವಿಧ ಪ್ರಾಂತಗಳನ್ನು ಪಶುಗಳನ್ನು ಮೇಯಿಸಲು, ಆಹಾರ ಬೆಳೆಗಳು ಸಾಗುವಳಿ ಮಾಡಲು, ಹತ್ತಿಯಂತಹ ವಾಣಿಜ್ಯ ಬೆಳೆಗಳು ಬೆಳೆಸಲು, ವಸತಿ, ಪಾಠಶಾಲೆಗಳು, ಪ್ರಾರ್ಥನಾ ಸ್ಥಳಗಳು, ಅಂಗಡಿಗಳಿಗೆ ಉಪಯೋಗಿಸುತ್ತಾರೆ. ಕೆಲವು ಪ್ರಾಂತಗಳನ್ನು ಕೆರೆಗಳಿಗೆ ಮೀಸಲಿಡುತ್ತಾರೆ, ಇಲ್ಲವೆ ತಾತ್ಕಾಲಿಕವಾಗಿ ಸಾಗುವಳಿ ಮಾಡದೇ, ಬಂಜರಾಗಿ ಬಿಡುತ್ತಾರೆ. ಒಂದು ಗ್ರಾಮ ನಕ್ಷೆ ತಯಾರಿಸುವಾಗ ಇವುಗಳೆಲ್ಲವುಗಳನ್ನು ಬಿಡಿಯಾಗಿ ತೋರಿಸುವುದಕ್ಕೆ ಬೇರೆ ಬೇರೆ ಬಣ್ಣಗಳು, ಚಿಹ್ನೆಗಳನ್ನು ಉಪಯೋಗಿಸಬೇಕು. ನಕ್ಷೆಯಲ್ಲಿವಿವಿಧ ಆಚ್ಛಾದನೆ, ಭೂ ವಿನಿಯೋಗವನ್ನು ತಿಳಿಯಪಡಿಸುವ ಬಣ್ಣಗಳ ವಿವರಗಳು ಹೀಗೆ ಇವೆ.

| ಬಣ್ಣ | ಭೂ ಆಚ್ಛಾದನೆ / ಭೂ ವಿನಿಯೋಗ |
|---|---|
| ಗಾಢ (ಕಪ್ಪು) ಹಸಿರು (Dark Green) | ಕಾಡು |
| ತಿಳಿ ಹಸಿರು (Light Green) | ಹುಲ್ಲು ಭೂಮಿಗಳು |
| ಗೋಧಿ ಬಣ್ಣ (Brown) | ವ್ಯವಸಾಯಕ್ಕೆ ಅನುಕೂಲವಾದ ಭೂಮಿಗಳು |
| ಹಳದಿ ಬಣ್ಣ (Yellow) (ನೈಸರ್ಗಿಕ ನಕ್ಷೆಗಳು) | ಬೆಳೆಗಳು ಸಾಗುವಳಿಯಾಡುವ ಪ್ರಾಂತ |
| ಗಾಢ ನೇರಳೆ (Dark Grey) | ಪರ್ವತಗಳು |
| ತಿಳಿ ನೇರಳೆ (Light Grey) | ಬೆಟ್ಟಗಳು |
| ಹಳದಿ (Yellow) | ಪ್ರಸ್ಥಭೂಮಿಗಳು, ಜವುಗು ಭೂಮಿಗಳು |
| ತಿಳಿ ಕೆಂಪು (Light Red) | ಬಂಜರು ಭೂಮಿಗಳು |
| ತಿಳಿ ನೀಲಿ (Light Blue) | ಕೆರೆಗಳು, ನದಿಗಳು, ಕಾಲುವೆಗಳು, ಬಾವಿಗಳಂತಹವು |
| ಗಾಢ ನೀಲಿ (Dark Blue) | ಸಮುದ್ರಗಳು, ಮಹಾಸಮುದ್ರಗಳು |
| ಬಿಳಿ (White) | ಖನಿಜಗಳು ಲಭಿಸುವ ಪ್ರದೇಶಗಳು |
| ಕಪ್ಪು (Black) | ಮೇರೆಗಳು |

ವಿವಿಧ ಸಾಮಾಜಿಕ ಆರ್ಥಿಕ ಅಂಶಗಳನ್ನು ತೋರಿಸುವುದಕ್ಕೆ ಚುಕ್ಕೆಗಳು, ಗೆರೆಗಳು ಚಿಹ್ನೆಗಳಂತಹವು ಉಪಯೋಗಿಸಬಹುದು. ದತ್ತಾಂಶ ವಿವರಗಳನ್ನು ತೋರಿಸುವುದಕ್ಕೆ ಚುಕ್ಕೆ ಪದ್ಧತಿ, ವೃತ್ತಗಳು, ರೇಖಾನಕ್ಷೆ, ಚಾರ್ಟ್‌ಗಳನ್ನು ಉಪಯೋಗಿಸಬಹುದು. ಅಧಿಕಾರಿಕ ವಿಷಯ ನಿರ್ದೇಶಿತ ನಕ್ಷೆಗಳಲ್ಲಿ ಬಣ್ಣಗಳಲ್ಲಿ ಗಾಢದಿಂದ ತಿಳಿವರೆಗೆ (ಛಾಯ ಕ್ರಮಶ್ರೇಣಿಯನ್ನು) ಉಪಯೋಗಿಸಬಹುದು.

## ಜನಸಂಖ್ಯಾ ನಕ್ಷೆಯನ್ನು ತಯಾರು ಮಾಡಿರಿ (Make a Population Map) :

ಉದಾಹರಣೆಗೆ ವಿವಿಧ ತರಗತಿ ಕೋಣೆಗಳನ್ನು ತೋರಿಸುತ್ತಾ, ನಿಮ್ಮ ಪಾಠಶಾಲೆಯ ಕರಡು ನಕ್ಷೆಯನ್ನು ತಯಾರು ಮಾಡಿರಿ. ತರಗತಿಯಲ್ಲಿ ಪ್ರತಿ ಐದು ಮಂದಿ ವಿದ್ಯಾರ್ಥಿಗಳಿಗೆ ಒಂದು ಚಿಕ್ಕಗೆರೆ (|) ಇಡಿ. ಇದು ನಿಮ್ಮ ಪಾಠಶಾಲೆ ಜನಸಂಖ್ಯಾ ನಕ್ಷೆ ! ವಿಷಯ ಸೂಚಕದಲ್ಲಿ ಒಂದೊಂದು ಗೆರೆ ಎಷ್ಟು ಮಂದಿ ವಿದ್ಯಾರ್ಥಿಗಳನ್ನು ಸೂಚಿಸುತ್ತದೋ ಹೆಸರಿಸಿರಿ.

ಜನ ಸಂಖ್ಯಾ ನಕ್ಷೆಯಲ್ಲಿ ಬಣ್ಣಗಳ ಛಾಯ ಕ್ರಮಶ್ರೇಣಿ ಮೂಲಕ ಸಹ ತೋರಿಸಬಹುದು. ಇವುಗಳನ್ನು ಜನಸಾಂದ್ರತೆ ನಕ್ಷೆಗಳು ಎನ್ನುವರು. ಮೊದಲು ಒಂದು ಪ್ರದೇಶದಲ್ಲಿ ವಾಸಿಸುತ್ತಿರುವ ಜನಸಂಖ್ಯೆಯನ್ನು ಲೆಕ್ಕಿಸಬೇಕು. ಆ ನಂತರ ಆ ಪ್ರದೇಶದ ವೈಶಾಲ್ಯವನ್ನು ಲೆಕ್ಕಿಸಬೇಕು. ಪ್ರಾಂತ ಜನಸಂಖ್ಯೆಯನ್ನು ವೈಶಾಲ್ಯದಿಂದ ಭಾಗಿಸಬೇಕು. ಉದಾಹರಣೆಗೆ ಒಂದು ಗ್ರಾಮದ ವೈಶಾಲ್ಯ ಹತ್ತು ಚದರ ಕಿಲೋಮೀಟರ್‌ಗಳು ಇದ್ದು, ಅದರಲ್ಲಿ ಸಾವಿರ ಮಂದಿ ಜನರು ಇದ್ದರೆ. ಆ ಗ್ರಾಮದ ಜನಸಾಂದ್ರತೆ ಪ್ರತಿ ಚದರ ಕಿಲೋಮೀಟರ್‌ಗೆ ನೂರು. ಈ ಪದ್ದತಿಯನ್ನೇ ಉಪಯೋಗಿಸಿ ರಾಜ್ಯಗಳ ಜನಸಾಂದ್ರತೆಯನ್ನು ಲೆಕ್ಕಿಸಬಹುದು. ಭಾರತದೇಶದಲ್ಲಿನ ವಿವಿಧ ರಾಜ್ಯಗಳ ಜನಸಾಂದ್ರತೆಯನ್ನು ತಿಳಿಸುವ ಈ ಪಟ್ಟಿ ನೋಡಿ ತುಂಬಿರಿ.

SCERT TELANGANA

## ಜನಸಾಂದ್ರತೆ : 2011ನೇ ಜನಗಣನೆ

| ರಾಜ್ಯ | ಜನಸಾಂದ್ರತೆ | ರಾಜ್ಯ | ಜನಸಾಂದ್ರತೆ | | |
|---|---|---|---|---|---|
| ಆಂಧ್ರಪ್ರದೇಶ | 309 | ಜಮ್ಮು ಮತ್ತು ಕಾಶ್ಮೀರ | 56 | ನಾಗಾಲ್ಯಾಂಡ್ | 119 |
| ಅರುಣಾಚಲ ಪ್ರದೇಶ | 17 | ಜಾರ್ಖಂಡ್ | 414 | ಒಡಿಶಾ | 269 |
| ಅಸ್ಸಾಂ | 397 | ಕರ್ನಾಟಕ | 319 | ಪಂಜಾಬ್ | 550 |
| ಬಿಹಾರ್ | 1102 | ಕೇರಳ | 859 | ರಾಜಸ್ಥಾನ್ | 201 |
| ಛತ್ತೀಸ್‌ಘಡ್ | 189 | ಮಧ್ಯಪ್ರದೇಶ್ | 236 | ಸಿಕ್ಕಿಂ | 86 |
| ಗೋವಾ | 394 | ಮಹಾರಾಷ್ಟ್ರ | 365 | ತಮಿಳುನಾಡು | 555 |
| ಗುಜರಾತ್ | 308 | ಮಣಿಪೂರ್ | 122 | ತ್ರಿಪುರ | 350 |
| ಹರಿಯಾಣ | 573 | ಮೇಘಾಲಯ | 132 | ಉತ್ತರಾಖಂಡ್ | 189 |
| ಹಿಮಾಚಲ ಪ್ರದೇಶ | 123 | ಮಿಜೋರಾಮ್ | 52 | ಉತ್ತರ ಪ್ರದೇಶ್ | 828 |
| | | | | ಪಶ್ಚಿಮ ಬಂಗಾಳ | 1030 |

ಕೆಳಗಿನ ನಕ್ಷೆಯಲ್ಲಿ ಜನಸಾಂದ್ರತೆಯ ಆಧಾರದ ಮೇಲೆ ಸೂಚಿಕೆಯಲ್ಲಿ ಕೊಟ್ಟ ಬಣ್ಣವನ್ನು ತುಂಬಿರಿ.

**ಸೂಚಿಕೆ**

0 - 250 (yellow)
251 - 500 (blue)
1000 ಮೇಲ್ಪಟ್ಟು (purple)
501 - 750 (green)
751 - 1000 (red)




2011 ಜನಗಣತಿಯ ಪ್ರಕಾರ, ಜಮ್ಮು ಕಾಶ್ಮೀರದ ಜನಸಾಂದ್ರತೆ ಹೊಸದಾಗಿ ಏರ್ಪಟ್ಟ ಕೇಂದ್ರಪಾಲಿತ ಪ್ರಾಂತಗಳಾದ ಜಮ್ಮು ಕಾಶ್ಮೀರ ಮತ್ತು ಲಡಾಖನಲ್ಲಿ ಏಕೀಕೃತ ವಾಗಿದೆ.

*ನಕ್ಷೆ 9: ಭಾರತ ದೇಶ – ಜನಸಾಂದ್ರತೆ*

SCERT TELANGANA

## ನಕ್ಷೆಗಳಲ್ಲಿ ಸಂಪ್ರದಾಯವಾಗಿ ಬಳಸುವ ಚಿಹ್ನೆಗಳು (Conventional symbols on maps) :

ನಕ್ಷೆ ತಯಾರಿಸುವುದರಲ್ಲಿ ಕೆಲವು ಮಂದಿ ತಮ್ಮ ಸ್ವಂತ ಚಿಹ್ನೆಗಳು ಬಳಸುತ್ತಾರೆ. ಆದರೆ ನಕ್ಷೆಗಳು ತಯಾರು ಮಾಡುವವರಲ್ಲಿ ಬಹಳ ಮಂದಿ ಸಂಪ್ರದಾಯ ಚಿಹ್ನೆಗಳನ್ನು ಬಳಸುತ್ತಾರೆ. ಭಾರತ ದೇಶ ಭೂ ಮಾಪನ ಶಾಖೆ ಉಪಯೋಗಿಸುವ ಚಿಹ್ನೆಗಳನ್ನು ನಮ್ಮ ದೇಶದಲ್ಲಿ ಸಾಧಾರಣವಾಗಿ ಉಪಯೋಗಿಸುತ್ತಾರೆ. ಭಾರತದೇಶ ಭೂ ಮಾಪನ ಶಾಖೆ ಜಾರಿಗೊಳಿಸಿದ ''ಟೋಪೋಷೀಟ್ '' ಗಳಲ್ಲಿ ಇರುವ ಸಂಪ್ರದಾಯ ಚಿಹ್ನೆಗಳನ್ನು ಕೆಳಗೆ ನೋಡಬಹುದು.







SCERT TELANGANA

ಇನ್ನೊಂದು ವಿಧವಾಗಿ ಹೇಳಬೇಕೆಂದರೆ ಒಂದು ಕಾಂಟೂರು ರೇಖೆಯ ಮೇಲಿರುವ ಪ್ರದೇಶಗಳ್ಲೆವೂ ಸಮುದ್ರಮಟ್ಟದಿಂದ ಒಂದೇ ಎತ್ತರದಲ್ಲಿ ಇರುತ್ತವೆ. ಕಾಂಟೂರು ರೇಖೆಗಳನ್ನು 'ಐಸೋಲೈನ್ಸ್' ಎಂದು ಕೂಡ ಎನ್ನುತ್ತಾರೆ.



*ಚಿತ್ರ 1.4: ಇನ್ನೂ ಉತ್ತಮ ! ಇವುಗಳಿಗೆ ಸಹ ಗುರ್ತುಗಳು ಸೃಷ್ಟಿಸಿಲ್ಲ*

## ನಕ್ಷೆಗಳಲ್ಲಿ ತಗ್ಗು, ದಿನ್ನೆಗಳನ್ನು ತೋರಿಸುವಿಕೆ :

ಭೂಮಿಯ ಮೇಲೆ ತಗ್ಗು, ದಿನ್ನೆಗಳು, ಅಂದರೆ ಬೆಟ್ಟಗಳು, ಕಣಿವೆಗಳು, ಪ್ರಸ್ಥ ಭೂಮಿಗಳು, ಮೈದಾನಗಳು, ನದಿ ಪರಿವಾಹಕ ಪ್ರಾಂತಗಳು, ಕಲ್ಲು ಮರಳಿನಿಂದ ಕೂಡಿದ ಪ್ರದೇಶಗಳು ಇರುತ್ತವೆ. ನಕ್ಷೆಗಳು ಚಪ್ಪಟೆಯಾಗಿ ಇರುತ್ತವೆ. ಆದ್ದರಿಂದ ಅವುಗಳಲ್ಲಿ ತಗ್ಗು, ದಿನ್ನೆಗಳು ತೋರಿಸಲಾರೆವು. ಆದ್ದರಿಂದ ಇವುಗಳನ್ನು ತೋರಿಸುವುದಕ್ಕೆ ಕಾಂಟೂರು ರೇಖೆಗಳು ಎನ್ನುವ ಪ್ರತ್ಯೇಕ ಚಿಹ್ನೆಗಳನ್ನು ಉಪಯೋಗಿಸುತ್ತೇವೆ. ಇವುಗಳ ಬಗ್ಗೆ ನೀವು ಏಳನೇ ತರಗತಿಯಲ್ಲಿ ಓದಿದ್ದೀರಿ. ಸಮುದ್ರ ಮಟ್ಟದಿಂದ ಒಂದೇ ಎತ್ತರದಲ್ಲಿರುವ ಪ್ರದೇಶಗಳ್ಲೆವುಗಳನ್ನು ಸೇರಿಸುವ ರೇಖೆಗಳನ್ನು ಕಾಂಟೂರು ರೇಖೆಗಳು ಎನ್ನುವರು.




*ಚಿತ್ರ 1.6: ಬೆಟ್ಟಗಳು*




*ಚಿತ್ರ 1.5: ವಿನ್ಯಾಸಗಳ ತೀಕ್ಷಣೆ (ತೀರ್ವತೆ) ಯೊಂದಿಗೆ ನಕ್ಷೆ I*

*(ಸಮಮಾನ ನಕ್ಷೆ)*




*ಚಿತ್ರ 1.7: 'V' ಆಕಾರದ ಕಣಿವೆಗಳು*



SCERT TELANGANA

ಕಾಂಟೂರು ರೇಖೆಗಳನ್ನು ನಿರ್ಧಾರಿತ ಎತ್ತರಗಳ ಅಂತರಗಳಿಂದ (ಉದಾಹರಣೆಗೆ 20 ಮೀಟರ್‌ಗಳು, 50 ಮೀಟರ್‌ಗಳು,100 ಮೀಟರ್‌ಗಳ ವ್ಯತ್ಯಾಸಗಳಿಂದ) ಬಿಡಿಸುತ್ತಾರೆ. ಕಾಂಟೂರು ರೇಖೆಗಳು ಭೂಮಿಯ ಇಳಿಜಾರು ಹಾಗೆಯೇ ಸಮುದ್ರ ಮಟ್ಟದ ಮೇಲಿನ ಎತ್ತರವನ್ನು ಸೂಚಿಸುತ್ತವೆ. ಕಾಂಟೂರು ರೇಖೆಗಳು ದೂರ ದೂರದಲ್ಲಿ ಇದ್ದರೆ ಕಡಿಮೆ ಇಳಿಜಾರು ಇದೆ ಎಂದರ್ಥ.




ಚಿತ್ರ 1.8: ಬೀಜ ರೇಖೆ




ಚಿತ್ರ 1.9: ಏಳು ರೇಖೆ




ಚಿತ್ರ 1.10: ಪ್ರಸ್ಥಭೂಮಿ ಕಾಂಟೂರು ರೇಖೆಗಳು

- ಈ ಪುಸ್ತಕದಲ್ಲಿ ಭೌಗೋಳಿಕ ನದಿ ವ್ಯವಸ್ಥೆ (ಪುಟ 14), ವಾರ್ಷಿಕ ಸರಾಸರಿ ವರ್ಷಾಪಾತ (ಪುಟ 15), ಮಣ್ಣುಗಳು (ಪುಟ 16), ಕಾಡುಗಳು (ಪುಟ 55), ಖನಿಜಗಳು (ಪುಟ 66) ರಂತಹ ವಿವಿಧ ಅಂಶಗಳನ್ನು ತಿಳಿಯಪಡಿಸುವ ನಕ್ಷೆಗಳು ಕೊಡಲಾಗಿದೆ. ಈ ನಕ್ಷೆಗಳನ್ನು ಪರಿಶೀಲಿಸಿ ನಿಮ್ಮ ಜಿಲ್ಲೆಗೆ ಸಂಬಂಧಿಸಿದ ವಿವಿಧ ರೀತಿಯ ಸಮಾಚಾರವನ್ನು ಗುರ್ತಿಸಿ ಪಟ್ಟಿಯ ರೂಪದಲ್ಲಿ ಸಂಗ್ರಹಿಸಿರಿ.

### ಅಟ್ಲಾಸ್ (Atlas) :

ನಕ್ಷೆಗಳ ಸಂಗ್ರಹವನ್ನು 'ಅಟ್ಲಾಸ್' ಎನ್ನುವರು. ಸಾಧಾರಣವಾಗಿ ಇವು ವಿವಿಧ ಅಂಶಗಳ ಅನುಕ್ರಮದಲ್ಲಿ ಇರುತ್ತವೆ. ನಕ್ಷೆಗಳ ಆಧಾರದಿಂದ ವಿವಿಧ ಪ್ರದೇಶಗಳ ಕುರಿತು ಎಷ್ಟೋ ಸಮಾಚಾರವನ್ನು ಹೊಂದಬಹುದು. ಇದರ ಆಧಾರದಿಂದ ಅಲ್ಲಿ ವಾಸಿಸುವ ವಿವಿಧ ಜನರ ಜೀವನ ವಿಧಾನಗಳ ಬಗ್ಗೆ ಕುರಿತು ಊಹಿಸಿಕೊಳ್ಳಿರಿ. ಅಟ್ಲಾಸ್ ಮೂಲಕ ಅರುಣಾಚಲ ಪ್ರದೇಶಕ್ಕೆ ಸಂಬಂಧಿಸಿದಂತೆ ಮೇಲೆ ಹೆಸರಿಸಿದ ಅಂಶಗಳ ಕುರಿತು ತಿಳಿದುಕೊಂಡು ಅಲ್ಲಿಯ ಜನರ ಜೀವನ ವಿಧಾನವನ್ನು ಊಹಿಸಿರಿ ?

### ಬಾಹ್ಯಾಕಾಶ ಛಾಯಾ ಚಿತ್ರೀಕರಣ :

ವಿಮಾನಗಳು, ಹೆಲಿಕ್ಯಾಪ್ಟರ್‌ಗಳನ್ನು ಉಪಯೋಗಿಸಿ ಆಕಾಶ ಮಾರ್ಗದಲ್ಲಿ ಸಂಚರಿ ಸುತ್ತಾ ಭೂಮಿಯನ್ನು ಚಿತ್ರೀಕರಿಸುವುದೇ ಬಾಹ್ಯಾಕಾಶ ಛಾಯಾ ಚಿತ್ರೀಕರಣ. ಬಾಹ್ಯಾ ಕಾಶದಿಂದ ತೆಗೆದ ಚಿತ್ರಗಳು ನಕ್ಷೆಗಳಲ್ಲ.

SCERT TELANGANA




SCERT TELANGANA

# ತೆಲಂಗಾಣ ವಾರ್ಷಿಕ ಸರಾಸರಿ ವರ್ಷಪಾತ




## ಸರಾಸರಿ ವರ್ಷಪಾತ

ಸೆಂ.ಮೀ.ಗಳಲ್ಲಿ

- ಅಧಿಕ ವರ್ಷಪಾತ – 100 ಸೆಂ.ಮೀ.ಗಿಂತ ಹೆಚ್ಚು
- ಸಾಧಾರಣ ವರ್ಷಪಾತ – 70 ಸೆಂ.ಮೀ.-100 ಸೆಂ.ಮೀ.
- ಕಡಿಮೆ ವರ್ಷಪಾತ – 70 ಸೆಂ.ಮೀ.ಗಿಂತ ಕಡಿಮೆ

Designed and Complied By Kaarto India, Hyderabad
FOOT NOTE:- The details shown in this map are based on Survey of India & AP state Maps. All administrative bounderies are only informative, unauthorised and approximate.
The responsibility of the details in the map is with the publisher only.


ತೆಲಂಗಾಣ ಮಣ್ಣುಗಳು
N
ಛತ್ತೀಸಘಡ
ಆಂಧ್ರ ಪ್ರದೇಶ
ಆದಿಲಾಬಾದ್
ಕೋಮುರಂಭಿಂ
ನಿರ್ಮಲ
ಮಂಚಿರ್ಯಾಲ
ಜಗಿತ್ಯಾಲ
ನಿಜಾಮಾಬಾದ
ರಾಜನ್ನ ಸಿರಿಸಿಲ್ಲ
ಜಯಶಂಕರ
ಕಾಮಾರೆಡ್ಡಿ
ಸಿದ್ದಿಪೇಟ
ವರಂಗಲ
ಮೆದಕ
ಸಂಗಾರೆಡ್ಡಿ
ಭದ್ರಾದ್ರಿ
ಮೆಡ್ಚಲ
ಯಾದಾದ್ರಿ
ಮಹಬೂಬಾಬಾದ
ವಿಕಾರಾಬಾದ
ಹೈದರಾಬಾದ
ಖಮ್ಮಂ
ರಂಗಾರೆಡ್ಡಿ
ನಲ್ಗೊಂಡ
ಮಹಬೂಬನಗರ
ನಾಗರಕರ್ನೂಲ
ಜೋಗುಲಾಂಬ
ಕೆಂಪು ಮಣ್ಣು
ಕಪ್ಪು ಮಣ್ಣು
ಜಿಲ್ಲಾ ಸರಿಹದ್ದು
ರಾಷ್ಟ್ರ ಸರಿಹದ್ದು

### ಉಪಗ್ರಹ ಛಾಯಾ ಚಿತ್ರಗಳು :

ಅಂತರಿಕ್ಷದಲ್ಲಿ ಪ್ರವೇಶಪಡಿಸಲಾದ ಉಪಗ್ರಹಗಳಿಂದ ತೆಗೆದ ಭೂಮಿಯ ಮೇಲ್ಮೈ ಛಾಯಾ ಚಿತ್ರಗಳೇ ಉಪಗ್ರಹ ಛಾಯಾ ಚಿತ್ರಗಳೆನ್ನುತ್ತಾರೆ. ಇವುಗಳನ್ನು ಅನೇಕ ವಿಧಗಳಲ್ಲಿ ಉಪಯೋಗಿಸುತ್ತಾರೆ. ನಕ್ಷೆಗಳ ತಯಾರಿ, ಯೋಜನೆಗಳ ರಚನೆ ವಾತಾವರಣದ ಮಾಹಿತಿ, ಅರಣ್ಯ ಸಂರಕ್ಷಣೆ, ಯುದ್ಧತಂತ್ರ ರಚನೆ ಮೊದಲಾದವುಗಳಲ್ಲಿ ಇವುಗಳನ್ನು ಉಪಯೋಗಿಸುತ್ತಾರೆ. ನಕ್ಷೆಗಳ ತಯಾರಿ, ಯೋಜನೆಗಳ ತಯಾರಿ, ಪರಿಸರ ಪರಿಶೋಧನೆ, ಅರಣ್ಯ ಸಂರಕ್ಷಣೆ, ಯುದ್ಧ ವ್ಯೂಹಗಳು ಮೊದಲಾದವು.



ದಿನಪತ್ರಿಕೆಗಳು, ದೂರದರ್ಶನ ಚಾನಲ್‌ಗಳಲ್ಲಿ ಪ್ರಸಾರವಾಗುವ ವಾತಾವರಣ ವರದಿಯ ಬಗ್ಗೆ ನಿಮಗೆ ತಿಳಿದಿರುತ್ತದೆ. ವಾತಾವರಣವನ್ನು ಸೂಚಿಸುವ ನಕ್ಷೆಯನ್ನು ಸಂಗ್ರಹಿಸಿ, ಅಧ್ಯಯನ ಮಾಡಿ ಅದನ್ನು ವ್ಯಾಖ್ಯಾನಿಸಿರಿ.




**ಮುಖ್ಯ ಪದಗಳು**

1. ಪ್ರಕ್ಷೇಪಣೆ
2. ಸಂಕೇತಗಳು
3. ಭೂ – ಶಾಸ್ತ್ರಜ್ಞ
4. ಕಾಂಟೂರ್
5. ಕಾರ್ಟೋಗ್ರಫಿ

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ

1. ನಿಮ್ಮ ಪಾಠಶಾಲೆಯಲ್ಲಿನ ಅಟ್ಲಾಸ್‌ನಲ್ಲಿ ವಿವಿಧ ವಿಷಯ ನಿರ್ದೇಶಿತ ನಕ್ಷೆಗಳನ್ನು ಶ್ರದ್ಧೆಯಿಂದ ಅಧ್ಯಯನ ಮಾಡಿರಿ.
2. ಪ್ರಾಚೀನ ಗ್ರೀಕರ ಕಾಲಕ್ಕೂ, ಇಂದಿಗೂ ನಕ್ಷೆಗಳ ವಿನಿಯೋಗದಲ್ಲಿ ಬದಲಾವಣೆಗಳು ಬಂದಿವೆಯೆಂದು ಭಾವಿಸುತ್ತಿರುವೆಯಾ? ಹೋಲಿಕೆಗಳು, ವ್ಯತ್ಯಾಸಗಳು ಕೆಳಗಿನ ಪಟ್ಟಿಯಲ್ಲಿ ಸಂಗ್ರಹಿಸಿ.

| ವಿಷಯ | ಗ್ರೀಕರ ಕಾಲದಲ್ಲಿ | ಈಗ |
|---|---|---|
| ಹೋಲಿಕೆಗಳು | | |
| ವ್ಯತ್ಯಾಸಗಳು | | |

3. ವಸಾಹತು ಶಕ್ತಿಗಳು, ತುಪಾಕಿಗಳ ಮೂಲಕಕ್ಕಿಂತಲೂ ನಕ್ಷೆಗಳು ತಯಾರು ಮಾಡುವುದರ ಮೂಲಕ ಆ ಪ್ರಾಂತಗಳನ್ನು ಚೆನ್ನಾಗಿ ದೋಚಿಕೊಂಡರೆಂದು, ಅಧಿನದಲ್ಲಿ ಇಟ್ಟುಕೊಂಡರೆಂದು ಬಹಳ ಜನರು ಭಾವಿಸುತ್ತಾರೆ. ನೀವು ಇದರೊಂದಿಗೆ ಏಕೀಭವಿಸುತ್ತೀರಾ ? ಕಾರಣಗಳನ್ನು ತಿಳಿಸಿರಿ.
4. ಟಾಲಮಿ ಇಲ್ಲವೇ ಇದ್ರಿಸೀ ತಯಾರುಮಾಡಿದ ನಕ್ಷೆಗಳಿಗೆ ಬ್ರಿಟೀಷ್‌ನವರು ತಯಾರು ಮಾಡಿದ ನಕ್ಷೆಗಳಿಗೆ ಇರುವ ವ್ಯತ್ಯಾಸಗಳಾವುವು ?
5. ಎಂಟನೇ ಪುಟದಲ್ಲಿರುವ **''ನಮ್ಮ ಕಾಲದಲ್ಲಿ ನಕ್ಷೆಗಳ ವಿನಿಯೋಗ''** ಎನ್ನುವ ಅಂಶವನ್ನು ಓದಿ ಪ್ರಶ್ನೆಗೆ ಉತ್ತರ ಬರೆಯಿರಿ. ಪ್ರಸ್ತುತ ಕಾಲದಲ್ಲಿ ನಕ್ಷೆಗಳನ್ನು ವಿವಿಧ ಉದ್ದೇಶಗಳಿಂದ ಉಪಯೋಗಿಸುತ್ತಿದ್ದಾರೆ, ಅವು ಯಾವುವು ?
6. ವಿವಿಧ ಪ್ರಕಾರಗಳ ನಕ್ಷೆಗಳನ್ನು ಕುರಿತು ತಿಳಿದುಕೊಳ್ಳಲು ಕೆಲವು ಪ್ರಶ್ನೆಗಳನ್ನು ತಯಾರು ಮಾಡಿರಿ.

SCERT TELANGANA

ಪಾಠ 2

# ಸೂರ್ಯ - ಶಕ್ತಿ ಸಂಪನ್ಮೂಲ

ನಾವು ವಾಸಿಸುತ್ತಿರುವ ಭೂಮಿಯ ಮೇಲೆ ಎಷ್ಟೋ ವೈವಿಧ್ಯತೆ ಇದೆ. ಹಿಂದಿನ ತರಗತಿಗಳಲ್ಲಿ ನಾವು ಈ ವೈವಿಧ್ಯತೆಗಳಲ್ಲಿ ಕೆಲವು ಅಂಶಗಳಾದ ನೋಡಿದ್ದೇವೆ. ಸಮುದ್ರಗಳು, ಖಂಡಗಳು, ಪರ್ವತಗಳು, ಪ್ರಸ್ಥಭೂಮಿಗಳು, ಮೈದಾನ ಪ್ರಾಂತಗಳು, ಅತ್ಯಧಿಕ, ಕಡಿಮೆ ಮಳೆ ಬೀಳುವ ಪ್ರಾಂತಗಳು ಮೊದಲಾದವುಗಳು ನೋಡಿದೆವು. ಈ ಅಧ್ಯಾಯನದಲ್ಲಿ ನಾವು ಇನ್ನೊಂದು ವಿಧವಾದ ವೈವಿಧ್ಯತೆ ಕುರಿತು ತಿಳಿದುಕೊಳ್ಳೋಣ. ಆದರೆ ನಾವು ಇದನ್ನು ನೋಡಲಾರೆವು. ಅನುಭವ ಹೊಂದಬಲ್ಲೆವು. ಇದು ಉಷ್ಣೋಗ್ರತೆಗಳಲ್ಲಿ ವೈವಿಧ್ಯತೆ. ಬೆಳಿಗ್ಗೆ ತಂಪಾಗಿ ಇದ್ದು, ದಿನಕಳೆದಂತೆಲ್ಲಾ ಬಿಸಿಯಾಗುವುದು, ರಾತ್ರಿಯಲ್ಲಿ ಪುನಃ ತಣ್ಣಗಾಗುವುದು ನೀವು ಗಮನಿಸಿರುತ್ತೀರಿ. ಅದೇ ವಿಧವಾಗಿ ವರ್ಷದಲ್ಲಿ ಕೆಲವು ತಿಂಗಳು ಬಹಳ ಬಿಸಿಯಾಗಿ, ಮತ್ತೆ ಕೆಲವು ತಿಂಗಳು ತಂಪಾಗಿಯೂ ಇರುವುದು ಸಹ ನೀವು ಗಮನಿಸಿರುತ್ತೀರಿ. ಇದು ಒಂದು ಪ್ರದೇಶದಲ್ಲಿನ ಉಷ್ಣೋಗ್ರತೆಯಲ್ಲಿ ವ್ಯತ್ಯಾಸ ಇರುತ್ತದೆ. ಭೂಮಿಯ ಮೇಲೆ ಒಂದು ಪ್ರದೇಶಕ್ಕೂ, ಮತ್ತೊಂದು ಪ್ರದೇಶಕ್ಕೂ ಸಹ ಉಷ್ಣೊಗ್ರತೆಗಳಲ್ಲಿ ವ್ಯತ್ಯಾಸ ಇರುತ್ತದೆ. ಕೆಲವು ಪ್ರಾಂತಗಳು ಬಿಸಿಯಾಗಿ ಇದ್ದರೆ, ಕೆಲವು ಪ್ರಾಂತಗಳು ಬಹಳ ಚಳಿಯಾಗಿ ಇದ್ದು ವರ್ಷವೆಲ್ಲಾ ಮಂಜಿನಿಂದ ಹೊದಿಸಲ್ಪಟ್ಟಿರುತ್ತದೆ. ವರ್ಷದುದ್ದಕ್ಕೂ ಬಿಸಿಯಾಗಿ ಇರುವ ಭೂಮಧ್ಯರೇಖಾ ಪ್ರಾಂತಗಳ ಕುರಿತು ನೀವು ಓದಿದ್ದೀರ. ಬಹಳ ಚಳಿಯಾಗಿ ಇರುವ ಧೃವ ಪ್ರಾಂತಗಳ ಕುರಿತು ನೀವು ನಂತರ ಪಾಠಗಳಲ್ಲಿ ಓದುತ್ತೀರ.

ಎರಡು ಪ್ರದೇಶಗಳ ನಡುವೆ ಉಷ್ಣೋಗ್ರತೆಗಳಲ್ಲಿ ವ್ಯತ್ಯಾಸಗಳು ಗಾಳಿಗಳು, ಮಳೆಗಳನ್ನು ಪ್ರಭಾವಿತಗೊಳಿಸುತ್ತವೆ. ಒಂದು ಪ್ರದೇಶದಲ್ಲಿ ಬೀಳುವ ಮಳೆಯು ಸ್ವಲ್ಪಮಟ್ಟಿಗೆ ಎರಡು ಪ್ರದೇಶಗಳ ನಡುವೆ ಇರುವ ಉಷ್ಣೋಗ್ರತೆಗಳ ವ್ಯತ್ಯಾಸಗಳ ಮೇಲೆ ಆಧಾರಪಟ್ಟಿರುತ್ತದೆ.

ಉಷ್ಣೋಗ್ರತೆ, ವರ್ಷಪಾತ ಜೀವನಗಳನ್ನು ಬಹಳಾ ಪ್ರಭಾವಿತಗೊಳಿಸುತ್ತವೆ. ಸೂರ್ಯಕಿರಣ, ನೀರಿನ ಮೇಲೆ ಆಧಾರಪಟ್ಟು ಗಿಡಗಳು, ಪ್ರಾಣಿಗಳು ಬದುಕುತ್ತವೆ. ಬಹಳ ಕಡಿಮೆ ವಿಧದ ಸಸ್ಯ ಮತ್ತು ಮರಗಳು ಮಾತ್ರವೇ ಬಿಸಿಯಾಗಿ ಇರುವ ಪ್ರಾಂತಗಳಲ್ಲಿ ಬೆಳೆಯುತ್ತವೆ, ಚಳಿಯಾಗಿ ಇರುವ ಪ್ರಾಂತಗಳಲ್ಲಿ ಇನ್ನೂ ಕೆಲವು, ವಿಧದ ಮರಗಳು ಬೆಳೆಯುತ್ತವೆ. ಬಹಳ ಚಳಿಯಾಗಿರುವ ಪ್ರಾಂತಗಳಲ್ಲಿ ಯಾವ ಮರಗಳೂ ಬೆಳೆಯುವುದಿಲ್ಲ.ಈವಿಧವಾಗಿ ವೃಕ್ಷ, ಪ್ರಾಣಿ ಜೀವನದಲ್ಲಿ ವೈವಿಧ್ಯತೆ ಇರುತ್ತವೆ. ಆ ಅಧ್ಯಾಯದಲ್ಲಿ ಪ್ರಪಂಚದಲ್ಲಿರುವ ವಿವಿಧ ಪ್ರದೇಶಗಳಲ್ಲಿ ಉಷ್ಣೋಗ್ರತ 'ಗಳಲ್ಲಿರುವ ವ್ಯತ್ಯಾಸಗಳ ಕುರಿತು ತಿಳಿದುಕೊಳ್ಳೋಣ.

- **ನೀವು ವಾಸಿಸುವ ಪ್ರಾಂತಕ್ಕಿಂತ ವಿಭಿನ್ನವಾದ ವಾತಾವರಣ ಇರುವ ಪ್ರದೇಶಕ್ಕೆ ಯಾವಾಗಲಾದರೂ ಹೋಗಿದ್ದೀರಾ ? ತರಗತಿ ಕೋಣೆಯಲ್ಲಿ ವಿವರಿಸಿರಿ.**
- **ಭೂಮಿಯ ಮೆಲೆ ಉಷ್ಣತೆಗೆ ಸೂರ್ಯನು ಕಾರಣವೆಂದು ನಿಮಗೆ ಗೊತ್ತು. ಆದರೆ ಈ ಉಷ್ಣತೆ ಬೆಳಗಿನಿಂದ ಸಾಯಂಕಾಲದವರೆಗೆ, ಕಾಲಕಾಲಕ್ಕೆ ತಕ್ಕಂತೆ, ಪ್ರದೇಶದಿಂದ ಪ್ರದೇಶಕ್ಕೆ ಬದಲಾಗಲು ಕಾರಣವೇನು ? ಇಲ್ಲಿ ಉಷ್ಣೋಗ್ರತೆಗಳಲ್ಲಿ ಕೆಲವು ವ್ಯತ್ಯಾಸಗಳನ್ನು ಕೊಟ್ಟಿದ್ದೇವೆ. ಇವುಗಳಿಗೆ ಕಾರಣಗಳನ್ನು ಊಹಿಸಿ, ತರಗತಿ ಕೋಣೆಯಲ್ಲಿ ಚರ್ಚಿಸಿದ ನಂತರ ಮುಂದಕ್ಕೆ ಪಾಠ ಓದಿ**

1. **ಬೆಳಿಗ್ಗೆ ತಂಪಾಗಿಯೂ, ಮಧ್ಯಾಹ್ನ ಬಿಸಿಯಾಗಿಯೂ ಇರುತ್ತದೆ.**
2. **ಬೇಸಿಗೆಯಲ್ಲಿ ಬಿಸಿಯಾಗಿಯೂ, ಚಳಿಗಾಲದಲ್ಲಿ ಚಳಿಯಾಗಿಯೂ ಇರುತ್ತದೆ.**
3. **ಬೆಟ್ಟಗಳ ಮೇಲೆ ತಂಪಾಗಿಯೂ, ಮೈದಾನ ಪ್ರಾಂತಗಳಲ್ಲಿ ಬಿಸಿಯಾಗಿಯೂ ಇರುತ್ತದೆ.**
4. **ಭೂ ಮಧ್ಯ ರೇಖಾ ಪ್ರಾಂತದಲ್ಲಿ ಬಿಸಿಯಾಗಿಯೂ ಧೃವ ಪ್ರಾಂತಗಳಲ್ಲಿ ಚಳಿಯಾಗಿಯೂ ಇರುತ್ತದೆ.**

## ಸೂರ್ಯನ ಕಿರಣಗಳು, ಸೌರಶಕ್ತಿ : (Solar Energy and Sun's Rays)

ಭೂಗೋಳದ ಮೇಲೆ ಶಕ್ತಿಗೆ ಸೂರ್ಯನು ಪ್ರಮುಖ ಸಂಪನ್ಮೂಲ. ಸೂರ್ಯನು ಒಂದು ದೊಡ್ಡ ಶಕ್ತಿ ಕೇಂದ್ರ ಕಾಂತಿ,

SCERT TELANGANA

## <u>ಹಸಿರು ಮನೆಗಳು</u>

ಸಸಿಗಳನ್ನು ಅನುಕೂಲಕ ವಾತಾವರಣವನ್ನು ಕೃತಕವಾಗಿ ಕಲ್ಪಿಸುವುದರ ಮೂಲಕ ಎಲ್ಲ ಕಡೆಗೂ ಬೆಳೆಗಳನ್ನು ಬೆಳೆಸಲು ಮಾನವರು ಪ್ರಯತ್ತಿಸುವುದು ಆಸಕ್ತಿಕರವಾಗಿ ಇರುತ್ತದೆ. ಹೆಚ್ಚು ಚಳಿ ಇರುವ ಪ್ರದೇಶಗಳಲ್ಲಿ ಹಸಿರು ಮನೆಗಳನ್ನು ನಿರ್ಮಿಸಿ ತರಕಾರಿಗಳು, ಹಣ್ಣುಗಳು ಬೆಳೆಸುತ್ತಿದ್ದಾರೆ. ಹಸಿರು ಮನೆಗಳ ಗೋಡೆಗಳು ಪಾರದರ್ಶಕವಾಗಿ ಇದ್ದು ಬಿಸಿಲನ್ನು ಒಳಗೆ ಬರುವಂತೆ ಮಾಡುತ್ತವೆ. ಆದರೆ ಹೊರ ಹೋಗಲು ಬಿಡುವುದಿಲ್ಲ. ಭತ್ತಕ್ಕೆ ಅನುಕೂಲಕವಾಗಿ ಮಡಿಗಳು ಕಟ್ಟಿ, ನೀರೊದಗಿಸಿ ನೀರನ್ನು ನಿಲ್ಲಿಸುತ್ತಾರೆ.



*ಚಿತ್ರ 2.1: ಸಸಿಗಳಿಗಾಗಿ ಕೃತಕ ಪರಿಸರಗಳು*

ಉಷ್ಣತೆ ರೂಪದಲ್ಲಿ ಅದು ಶಕ್ತಿಯನ್ನು ಬಿಡುಗಡೆ ಮಾಡುತ್ತಾ ಇರುತ್ತದೆ. ಸೂರ್ಯನಿಂದ ನಿರಂತರವಾಗಿ ಬಿಡುಗಡೆಯಾಗುವ ಈ ಶಕ್ತಿಯನ್ನು ಸೌರ ವಿಕಿರಣ ಎನ್ನುತ್ತಾರೆ. ಯಾವುದಾದರೂ ಒಂದು ವಸ್ತುವು ಶಕ್ತಿಯನ್ನು ಬಿಡುಗಡೆ ಮಾಡುವುದನ್ನು ವಿಕಿರಣ ಎನ್ನುತ್ತಾರೆ. ಸೂರ್ಯನಿಂದ ನಮಗೆ ಶಕ್ತಿ ಸೂರ್ಯನ ಕಿರಣಗಳ ರೂಪದಲ್ಲಿ ಬರುತ್ತದೆ. ಈ ಶಕ್ತಿಯಲ್ಲಿ ಸ್ವಲ್ಪ ಭಾಗವನ್ನು ನಾವು ಕಾಂತಿ, ಶಾಖದ ರೂಪದಲ್ಲಿ ನೋಡಬಲ್ಲೆವು, ಇಲ್ಲವೇ ಅನುಭವ ಪಡೆಯುತ್ತೇವೆ. ಆದರೆ ಅತಿನೇರಳೆಯ ಕಿರಣಗಳು, ರೇಡಿಯೋ, ತರಂಗಗಳು, ಕ್ಷ-ಕಿರಣಗಳು (X-rays) ಗಳಂತಹ ರೂಪಗಳಲ್ಲಿ ಸಹ ಸೂರ್ಯನಿಂದ ನಮಗೆ ಶಕ್ತಿ ಬರುತ್ತಿರುತ್ತದೆ. ಇದನ್ನು ನಾವು ನೋಡಲಾರೆವು, ಅನುಭವ ಹೊಂದಲಾರೆವು.

ವರ್ಷದುದ್ದಕ್ಕೂ , ಹಾಗೆಯೇ ಪ್ರತಿವರ್ಷವೂ ಸೂರ್ಯನಿಂದ ಬಿಡುಗಡೆಯಾಗುವ ಶಕ್ತಿ ಸುಮಾರು ಒಂದೇ ಮೊತ್ತದಲ್ಲಿ ಇರುತ್ತದೆ.ಹಾಗಾದರೆ ಭೂಮಿ ಮೇಲೆ ಉಷ್ಣೋಗ್ರತೆಗಳಲ್ಲಿ ವ್ಯತ್ಯಾಸಗಳಿಗೆ ಕಾರಣಗಳೇನು ? ಭೂಮಿಯ ಮೇಲ್ಮೈ ಮೇಲೆ ಸೇರುವ ಸೌರವಿಕಿರಣವನ್ನು ಆಯಾತ ಸೌರ ವಿಕಿರಣ (ಇನ್ಸೊಲೇಷನ್) ಎನ್ನುವರು.

ಭೂಮಿ ವಾತಾವರಣದೊಳಗೆ ಪ್ರವೇಶಿಸುವ ಸೌರಶಕ್ತಿಯಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿ ಮಾತ್ರವೇ ಭೂಮಿ ಮೇಲ್ಮೈ ಮೇಲೆ ಸೇರುತ್ತದೆ. ಏಕೆಂದರೆ ಸೌರಶಕ್ತಿಯಲ್ಲಿ ಮೂರನೇ ಒಂದು ಭಾಗ ಭೂ ವಾತಾವರಣದಿಂದ ಪರಾವರ್ತನೆ (ಕಾಂತಿಯನ್ನು ಕನ್ನಡಿ ಪರಾವರ್ತನೆ ಮಾಡಿದಂತೆ) ಹೊಂದುತ್ತದೆ. ಇನ್ನೂ ಸ್ವಲ್ಪ ಶಕ್ತಿ ವಾತಾವರಣದ ಮೇಲ್ಪದರುಗಳಲ್ಲಿ ಚದುರಿ ಹೋಗುತ್ತದೆ, ಗ್ರಹಿಸಲ್ಪಡುತ್ತದೆ. ಸೂರ್ಯನಿಂದ ಬಿಡುಗಡೆಯಾಗುವ ಅತಿನೇರಳೆಯ ಕಿರಣಗಳಂತಹ ಅಪಾಯಕರವಾದ ಕಿರಣಗಳು ಭೂಮಿಯನ್ನು ಸೇರುವುದಿಲ್ಲ. ಈ ಕಾರಣದಿಂದಲೇ ಭೂಮಿಯ ಮೇಲೆ ಜೀವನ ಸಾಧ್ಯವಾಗಿದೆ. ಸೌರಶಕ್ತಿಯಲ್ಲಿ ಸ್ವಲ್ಪ ಭಾಗವನ್ನು ವಾತಾವರಣದಲ್ಲಿರುವ ಮೋಡಗಳು, ಹೊಗೆ, ಧೂಳು ಪರಾವರ್ತನೆ ಮಾಡುತ್ತವೆ. ಇಲ್ಲವೇ ಗ್ರಹಿಸುತ್ತವೆ. ಮೋಡಗಳಿಂದ ಆವೃತವಾದ ದಿನಗಳಲ್ಲಿ ಅಷ್ಟು ಬಿಸಿಯಾಗಿ ಇಲ್ಲದಿರುವುದು ನೀವು ಗಮನಿಸಿರುತ್ತೀರಿ.

- **ಸೌರವಿಕಿರಣ(ರೇಡಿಯೇಷನ್), ಆಯತ ಸೌರವಿಕಿರಣ (ಇನ್ಸುಲೇಷನ್)ಗಳ ನಡುವೆ ವ್ಯತ್ಯಾಸಗಳನ್ನು ತಿಳಿಸಿ.**
- **ಹೊಗೆ, ಧೂಳಿನಿಂದ ವಾತಾವರಣ ಮತ್ತಷ್ಟು ಕಲುಷಿತ ಗೊಂಡರೆ ಏನಾಗುತ್ತದೆ ?**

## ಸೂರ್ಯನ ಕಿರಣಗಳು ಮತ್ತು ಭೂಮಿಯ ಮೇಲ್ಮೈ

ಸೂರ್ಯನಕಿರಣಗಳು ಭೂಮಿಯನ್ನು ಸೇರಿದ ನಂತರ ಕೂಡ ಮೇಲ್ಮೈಯೆಲ್ಲಾ ಒಂದೇ ವಿಧವಾಗಿ ಬಿಸಿಯುಂಟು ಮಾಡುವುದಿಲ್ಲ. ಭೂಮಿ ಮೇಲ್ಮೈ ಬಾಗಿ ಇರುವುದೇ ಇದಕ್ಕೆ ಕಾರಣ. ಇದನ್ನು ಅರ್ಥಮಾಡಿಕೊಳ್ಳಲು ಇಲ್ಲಿ ಕೊಟ್ಟ ಎರಡು ಚಿತ್ರಗಳನ್ನು ಹೋಲಿಸಿರಿ.

ಈ ಚಿತ್ರಗಳನ್ನು ನೋಡಿದರೆ ಭೂಮಿಯ ಮೇಲ್ಮೈ ಬಾಗುವಿಕೆ ಕಾರಣದಿಂದ ಭೂಮಧ್ಯ ರೇಖಾ ಪ್ರಾಂತದಲ್ಲಿ ಕಡಿಮೆ ವಿಸ್ತೀರ್ಣದಲ್ಲಿ ಬೀಳುವಷ್ಟು, ಸೌರಶಕ್ತಿ, ಭೂ ಮಧ್ಯ ರೇಖೆಯಿಂದ ಉತ್ತರಕ್ಕೆ, ಇಲ್ಲವೇ ದಕ್ಷಿಣಕ್ಕೆ ಹೋಗುತ್ತಿದ್ದರೆ ಹೆಚ್ಚು ವಿಸ್ತೀರ್ಣದಲ್ಲಿ ಬೀಳುತ್ತದೆ. ಆದ್ದರಿಂದಲೇ ಧ್ರುವಗಳ ಹತ್ತಿರಕ್ಕಿಂತ ಭೂಮಧ್ಯ ರೇಖೆಯ ಹತ್ತಿರ ಬಿಸಿಯಾಗಿ ಇರುತ್ತದೆ.

ಭೂಮಧ್ಯ ರೇಖೆಯ ಹತ್ತಿರ ಸೂರ್ಯನ ಕಿರಣಗಳು ಲಂಬ $90^0$ ಕೋನದಲ್ಲಿ ಬೀಳುತ್ತಿದ್ದರೆ ಧ್ರುವಗಳ ಕಡೆಗೆ ಹೋದಂತೆಲ್ಲಾ ಓರೆಯಾಗಿ ಬೀಳುತ್ತಿರುವುದು ನೀವು ಗಮನಿಸಿರುತ್ತೀರಿ. ಭೂಮಿ ಮೇಲ್ಮೈಯನ್ನು ಸೂರ್ಯನ ಕಿರಣಗಳು ಬೀಳುವ ಕೋನವನ್ನು (Angle of Incidence) ಪತನಕೋನ ಎನ್ನುತ್ತಾರೆ. ಭೂಮಿಯ ಮೇಲ್ಮೈ ಮೇಲೆ ಬರುವ ಸೌರಶಕ್ತಿಯನ್ನು 'ಪತನ ಕೋನ' ಹೇಗೆ ಪ್ರಭಾವ ಬೀರುತ್ತದೋ ಅರ್ಥ ಮಾಡಿಕೊಳ್ಳಲು ಕೆಳಗಿನ ಪಟ್ಟಿಯನ್ನು ನೋಡಿರಿ.




*ಚಿತ್ರ 2.2: ಆಯಾತ ಸೌರವಿಕಿರಣ – ಭೂ ವಿಕಿರಣ*

| ಭೂಮಧ್ಯ ರೇಖೆ ($0^0$ ಡಿಗ್ರಿಗಳು) ಹತ್ತಿರ 100 ಯೂನಿಟ್‌ಗಳ ಆಯಾತ ಸೌರವಿಕಿರಣ ಸೇರಿದ್ದಾದರೆ. | | |
|---|---|---|
| $45^0$ ಹತ್ತಿರ | (ಉತ್ತರ ಜಪಾನ್) | 75 ಯೂನಿಟ್‌ಗಳು ಗ್ರಹಿಸುತ್ತದೆ. |
| 66 ½ $^0$ ಹತ್ತಿರ | (ಧ್ರುವ ಮಂಡಲ) | 50 ಯೂನಿಟ್‌ಗಳು ಗ್ರಹಿಸುತ್ತದೆ. |
| $90^0$ ಹತ್ತಿರ | (ಉತ್ತರ, ದಕ್ಷಿಣ ಧ್ರುವಗಳು) | 40 ಯೂನಿಟ್‌ಗಳು ಗ್ರಹಿಸುತ್ತದೆ. |

- ಸೂರ್ಯನ ಕಿರಣಗಳು ಎಲ್ಲಿ ಹೆಚ್ಚು ಓರೆಯಾಗಿ ಬೀಳುತ್ತವೆ. ಜಪಾನ್‌ನಲ್ಲಾ, ಉತ್ತರ ಧ್ರುವದ ಹತ್ತಿರಾ ?

- ಸೂರ್ಯನ ಕಿರಣಗಳ ಸಾಂದ್ರತೆ ಎಲ್ಲಿ ಹೆಚ್ಚಾಗಿ ಇರುತ್ತದೆ-ಆಂಧ್ರಪ್ರದೇಶದಲ್ಲಿಯೇ, ರಾಜಸ್ಥಾನ ದಲ್ಲಿಯೇ ?
- ಭೂಮಿ ದುಂಡಾಗಿ ಅಲ್ಲದೇ ಚಪ್ಪಟೆಯಾಗಿ ಇದ್ದರೆ ಜಪಾನ್ ಹೆಚ್ಚು ಬಿಸಿ ಹೆಚ್ಚುತ್ತದಾ, ಭೂಮಧ್ಯ ರೇಖಾ ಪ್ರಾಂತವಾ? ಇಲ್ಲವೇ ಎರಡು ಸಮನಾಗಿ ಬಿಸಿ ಹೆಚ್ಚುತ್ತವೆಯಾ ?
- ಗ್ಲೋಬನ್ನು ನೋಡಿ ಯಾವ ಪ್ರದೇಶಗಳು ಹೆಚ್ಚು ಬಿಸಿಯಾಗಿ ಇರುತ್ತವೆಯೋ, ಯಾವ ದೇಶಗಳು ತಂಪಾಗಿ ಇರುತ್ತವೆಯೋ ತಿಳಿಸಿರಿ.




*ಚಿತ್ರ 2.2: ಸೂರ್ಯನ ಕಿರಣಗಳು ಭೂಮಿಯ ಮೇಲೆ ಬೀಳುವ ಕೋನ*

ಭೂಮಧ್ಯ ರೇಖಾ ಪ್ರಾಂತದ ಹತ್ತಿರ ಸೂರ್ಯನ ಕಿರಣಗಳು ಹೆಚ್ಚು ಸಾಂದ್ರತೆ / ತೀವ್ರತೆಯಲ್ಲಿ ಬಿದ್ದರೂ ಸಾಧಾರಣವಾಗಿ ಅಲ್ಲಿ ಮಧ್ಯಾಹ್ನದಿಂದ ಮೋಡಕವಿದಿದ್ದು

SCERT TELANGANA

ನೆಲದ ಮೇಲಕ್ಕೆ ಕಡಿಮೆ ಸೂರ್ಯಕಿರಣಗಳು ಬೀಳುತ್ತವೆ. ಆದ್ದರಿಂದ ಭೂಮಧ್ಯರೇಖಾ ಪ್ರಾಂತಕ್ಕಿಂತ ಅದಕ್ಕೆ ಉತ್ತರ, ದಕ್ಷಿಣ ಪ್ರಾಂತವು ಬಿಸಿಯಾಗಿ ಇರುತ್ತದೆ.

ಆದರೆ ಇಲ್ಲಿಗೆ ಮುಗಿಯಲಿಲ್ಲ. ಸೂರ್ಯನ ಸುತ್ತಲೂ ಭೂಮಿ ಸುತ್ತುತ್ತಿರುವ ವರ್ಷದಲ್ಲಿ ಭೂಮಿಯ ಮೇಲೆ ಸೂರ್ಯನ ಕಿರಣಗಳು ಬೀಳುವ ಕೋನಗಳು ನಿರಂತರ ಬದಲಾಗುತ್ತಾ ಇರುತ್ತವೆ. ಇದರ ಕಾರಣದಿಂದ ಉತ್ತರ ಭಾಗದಲ್ಲಿ ನವಂಬರ್ – ಡಿಸೆಂಬರ್ ತಿಂಗಳುಗಳಲ್ಲಿ ಪತನ ಕೋನ ಹೆಚ್ಚಾಗುತ್ತದೆ. ಮೇ-ಜೂನ್ ತಿಂಗಳುಗಳಲ್ಲಿ ಕಡಿಮೆ ಯಾಗುತ್ತದೆ. ಮುಂದಿನ ಪಾಠದಲ್ಲಿ ಇದರ ಬಗ್ಗೆ ಮತ್ತಷ್ಟು ತಿಳಿದುಕೊಳ್ಳೋಣ.

## ಭೂಮಿ-ನೀರಿನ ಮೇಲ್ಮೈ ಮೇಲೆ ವ್ಯತ್ಯಾಸಗಳು :

ಭೂಮಿಯ ಮೇಲೆ, ಸಮುದ್ರಗಳ ಮೇಲೆ ಉಷ್ಣೋಗ್ರತೆ ಗಳಲ್ಲಿ ಬಹಳ ವ್ಯತ್ಯಾಸವಿರುತ್ತದೆ, ಬದಲಾಗುತ್ತಿರುತ್ತದೆ. ಸಮುದ್ರಗಳ ಮೇಲೆ, ಖಂಡಗಳ ಮೇಲೆ ಉಷ್ಣೋಗ್ರತೆಗಳನ್ನು ಅಳೆದರೆ ಈ ವಿಷಯ ಸ್ಪಷ್ಟವಾಗುತ್ತದೆ. ಭೂಮಿ ಶಾಖವನ್ನು ಚೆನ್ನಾಗಿ ಪ್ರಸರಿಸುವಂತೆ ಮಾಡುತ್ತದೆ. ಆದರೆ ನೀರು ಹಾಗೆ ಅಲ್ಲ. ಭೂಮಿ ಬಹಳ ಬೇಗ ಬಿಸಿಯಾಗಿ, ಬೇಗ ತಂಪಾಗುತ್ತದೆ. ಇದಕ್ಕೆ ವಿರುದ್ದವಾಗಿ ಸಮುದ್ರಗಳು ಬಿಸಿ ಹೆಚ್ಚಾಗುವುದಕ್ಕೆ ತಂಪಾಗುವುದಕ್ಕೆ ಬಹಳ ಸಮಯ ತೆಗೆದುಕೊಳ್ಳುತ್ತದೆ.

- ಭೂಮಿ, ಸಮುದ್ರ ಬಿಸಿ ಆಗುವುದರಲ್ಲಿ ವ್ಯತ್ಯಾಸವಿದೆ ಏಕೆ ?

ಪುಟ 22 ರಲ್ಲಿ ತೋರಿಸಿದ ನಕ್ಷೆಯಲ್ಲಿ ಗಾಢ ಗೋಧಿ ಬಣ್ಣವಿರುವ ಪ್ರಾಂತಗಳು ಬಹಳ ಹೆಚ್ಚು ಶಾಖವನ್ನು, ನೀಲಿ ಬಣ್ಣವಿರುವವು ಬಹಳ ಕಡಿಮೆ ಶಾಖವನ್ನು ಹೊಂದುತ್ತದೆ.

## ವಾತಾವರಣ ಬಿಸಿಯಾಗುವಿಕೆ :

ನಮ್ಮ ಸುತ್ತಲೂ ಇರುವ ವಾತಾವರಣ ಇಲ್ಲವೇ ಗಾಳಿ ಸೂರ್ಯನ ಕಿರಣಗಳಿಂದ ನೇರವಾಗಿ ಬಿಸಿಯಾಗುವುದಿಲ್ಲ. ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಕಿರಣಗಳಿಂದ ಬಿಸಿಯಾಗದಂತೆ ವಾತಾವರಣ ಅವುಗಳನ್ನು ಹೋಗಲು ಬಿಡುತ್ತದೆ. ಸೂರ್ಯನ ಕಿರಣಗಳು ಮೊದಲಿಗೆ ಭೂಮಿಯನ್ನು ಬಿಸಿಯಾಗಿಸುತ್ತವೆ. ಆನಂತರ ಭೂಮಿಯಿಂದ ಶಾಖ ವಿಕಿರಣ ಹೊಂದುತ್ತಾ ನಮ್ಮ ಸುತ್ತಲೂ ಇರುವ ಗಾಳಿ ಬಿಸಿ ಏರುತ್ತದೆ. ಆದ್ದರಿಂದಲೇ ಭೂಮಿಗೆ ಹತ್ತಿರ ಹೆಚ್ಚು ಬಿಸಿಯಾಗಿ ಇದ್ದು , ವಾತಾವರಣದಲ್ಲಿ ಮೇಲೆ ಹೋದಂತೆಲ್ಲಾ ತಂಪಾಗಿರುತ್ತದೆ.

## ಉಷ್ಣದ ಸಮತೋಲನೆ (Heat Balance) :

ಸೂರ್ಯನಿಂದ ಭೂಮಿ ಪಡೆಯುವ ಶಾಖ ವಿವಿಧ ಪದ್ಧತಿಗಳಲ್ಲಿ ಪುನಃ ವಿಕಿರಣ ಹೊಂದುತ್ತದೆ. ಮೂರನೇ ಒಂದು ಭಾಗ ಶಾಖ ಕೂಡಲೆ ಪುನಃ ಆಕಾಶದೊಳಗೆ ಪರಾವರ್ತನೆ ಹೊಂದುತ್ತದೆ. ಉಳಿದದ್ದು ಭೂಮಿಯನ್ನು ಬಿಸಿಯಾಗಿಸಿ, ನಂತರ ವಾತಾವರಣವನ್ನು ಬಿಸಿಯಾಗುವುದರ ಮೂಲಕ ಪುನಃ ಆಕಾಶದೊಳಗೆ ಹೋಗುತ್ತದೆ. ಸೂರ್ಯನಿಂದ ವಿಕಿರಣವಾಗುವ ಈ ಒಟ್ಟು ಶಾಖ ಮುಖ್ಯವಾದುದೆಂದು ನೆನಪಿಟ್ಟುಕೊಳ್ಳಬೇಕು. ಈ ಎಲ್ಲಾ ಶಾಖ ಪುನಃ ಸಂಪೂರ್ಣ ವಾಗಿ ವಿಕಿರಣ ಹೊಂದದಿದ್ದರೆ ಭೂಮಿ ಮೇಲೆ ಉಳಿದು ಹೋದರೆ ಶಾಖ ದಿನದಿನಕ್ಕೆ ಹೆಚ್ಚಾಗುತ್ತಾ ಭೂಗೋಳ ಮತ್ತಷ್ಟು ಬಿಸಿ ಏರುತ್ತಾ ಇರುತ್ತದೆ. ಇದಕ್ಕೆ ವಿರುದ್ಧವಾಗಿ ಭೂಮಿ ಪಡೆಯುತ್ತಿರುವ ಶಾಖಕ್ಕಿಂತ ಹೆಚ್ಚು ವಿಕಿರಣ ನಡೆದರೆ ಅದು ಬರುಬರುತ್ತಾ ತಂಪಾಗಿ ಬದಲಾಗುತ್ತದೆ.

ಕಣ್ಣು ದೃಷ್ಟಿ ಹರಿಯುವವರೆ ಚಪ್ಪಟೆಯಾಗಿರುವ ಪ್ರಾಂತವನ್ನು ಎಲ್ಲಿಯಾದರು ನೋಡಿದ್ದೀರಾ ? ಪ್ರತಿಯೊಂದು ಸ್ಥಳದಲ್ಲಿ ತಗ್ಗುದಿನ್ನೆಗಳಿಂದ, ಇಳಿಜಾರಿನಿಂದ ಕಂಡು ಬರುತ್ತದೆ. ಈ ಕಾರಣದಿಂದ ಭೂಮಿಗೆ ಸೇರುವ ಸೌರಶಕ್ತಿಯಲ್ಲಿ ವ್ಯತ್ಯಾಸ ಇರುತ್ತದೆ. ಚಪ್ಪಟೆಯಾದ ಭೂಮಿ ಹೆಚ್ಚು ಬಿಸಿಯಾಗುತ್ತದಾ ಇಲ್ಲವೇ ಇಳಿಜಾರಾಗಿ ಇರುವ ಭೂಮಿಯಾ ? ಪರ್ವತ ಮುಖಕ್ಕೆ ಇರುವ ಎರಡು ಇಳಿಜಾರುಗಳು ಒಂದೇ ಪರಿಮಾಣದಲ್ಲಿ ಸೂರ್ಯಕಿರಣಗಳನ್ನು ಹೊಂದುತ್ತವೆಯಾ? ಅದಕ್ಕೆ ಕಾರಣಗಳೇನು ?

ಇಂಗಾಲದ ಡೈ ಆಕ್ಸೈಡ್ (ಕಾರ್ಬನ್ ಡೈ ಆಕ್ಸೈಡ್) ನಂತಹ ಕೆಲವು ಅನಿಲಗಳು ಭೂಮಿಯಿಂದ ಶಾಖ ವಿಕಿರಣವನ್ನು ತಡೆಯುತ್ತವೆ. ಡೀಜಿಲ್, ಪೆಟ್ರೋಲ್ ನಂತಹವುಗಳ ವಿನಿಯೋಗ ಹೆಚ್ಚಾಗುವುದು. ಮರಗಳನ್ನು ಕಡಿದು ಹಾಕುವುದಂತಹವುಗಳಿಂದ ಇಂಗಾಲದ ಡೈ ಆಕ್ಸೈಡ್ ಹೆಚ್ಚಾಗುತ್ತದೆ. ವಾತಾವರಣದಲ್ಲಿ ಇಂಗಾಲದ ಡೈ ಆಕ್ಸೈಡ್‌ನ ಪ್ರಮಾಣ ಹೆಚ್ಚಾದರೆ ಶಾಖವಿಕಿರಣ ಕಡಿಮೆಯಾಗಿ ಪ್ರಪಂಚ ಉಷ್ಣೋಗ್ರತೆಗಳು ಹೆಚ್ಚಾಗುತ್ತವೆ. ಇದನ್ನೇ 'ಭೂಗೋಳ ಬಿಸಿಯಾಗುವಿಕೆ' 'Global Warming' ಎನ್ನುತ್ತಾರೆ.

SCERT TELANGANA

# ಪ್ರಪಂಚ ಸರಾಸರಿ ಉಷ್ಣೋಗ್ರತೆ



## ವಾತಾವರಣ ಉಷ್ಣೋಗ್ರತೆ

ತರಗತಿ ಕೋಣೆಗೆ ಸೆಲ್ಸಿಯಸ್ ಉಷ್ಣಮಾಪಕ (ಥರ್ಮಾಮೀಟರ್) ತೆಗೆದುಕೊಂಡು ಬನ್ನಿರಿ. ಉಷ್ಣಮಾಪಕ ಎಷ್ಟು ಉಷ್ಣೋಗ್ರತೆ ತೋರಿಸುತ್ತದೆಯೋ ಬರೆದುಕೊಳ್ಳಿ. ಇದು ನಿಮ್ಮ ತರಗತಿ ಕೋಣೆಯಲ್ಲಿನ ವಾತಾವರಣ ಉಷ್ಣೋಗ್ರತೆ

- ಬೇರೆ ಬೇರೆ ಉಷ್ಣೋಗ್ರತೆಗಳು ತಿಳಿದುಕೊಳ್ಳುವುದಕ್ಕೆ ಈ ಕೆಳಗೆ ಹೆಸರಿಸಿದವುಗಳ ಉಷ್ಣೋಗ್ರತೆಗಳು ಅಳೆಯಿರಿ. ಅಳೆಯುವುದಕ್ಕೆ ಮೊದಲು ಅವುಗಳ ಉಷ್ಣೋಗ್ರತೆ ಎಷ್ಟು ಇರುತ್ತದೋ ಊಹಿಸಿ ಅಂದಾಜು ಮಾಡಿರಿ.

| ವಸ್ತು | ಉಷ್ಣೋಗ್ರತೆ | |
|---|---|---|
| | ಅಂದಾಜು | ಅಳತೆ |
| ಬಕೆಟ್‌ನಲ್ಲಿನ ನೀರು | | |
| ಮಂಜುಗಡ್ಡೆ | | |
| ಗ್ಲಾಸ್‌ನಲ್ಲಿರುವ ತಣ್ಣನೆಯ ನೀರು | | |
| ಸ್ನಾನಕ್ಕೆ ಇಟ್ಟುಕೊಂಡ ಬಿಸಿನೀರು | | |

- 10°C ನಿಂದ 110°C ವರೆಗೆ ಅಳೆಯಬಲ್ಲ ಉಷ್ಣ ಮಾಪಕವನ್ನು ಉಪಯೋಗಿಸುವುದು ಒಳ್ಳೆಯದು. ಇಂತಹ ಉಷ್ಣಮಾಪಕ ಉಪಯೋಗಿಸಿ ಕುದಿಯುತ್ತಿರುವ ನೀರು, ಬಿಸಿಯಾಗಿರುವ ಟೀ ಉಷ್ಣೋಗ್ರತೆಗಳನ್ನು ಅಳೆಯಿರಿ.

ಪ್ರತಿ ತಿಂಗಳು ಒಂದು ವಾರದ ದಿನಗಳವರೆಗೆ ಉಷ್ಣೋಗ್ರತೆಗಳು ಅಳೆದರೆ ಬೇಸಿಗೆ , ಚಳಿಕಾಲ , ಮಳೆಕಾಲಗಳಲ್ಲಿ ನಡೆಯುವ ಉಷ್ಣೋಗ್ರತೆಗಳ ಬದಲಾವಣೆಗಳನ್ನು ತಿಳಿದುಕೊಳ್ಳಬಹುದು.

- ಮುಂಬರುವ ಒಂದು ವಾರದ ದಿನಗಳವರೆಗೆ ಪ್ರತಿ ದಿನ ಒಂದೇ ಪ್ರದೇಶ, ಒಂದೇ ಸಮಯದಲ್ಲಿ ವಾತಾವರಣ ಉಷ್ಣೋಗ್ರತೆಗಳು ತೆಗೆದುಕೊಳ್ಳಿ (ಇದಕ್ಕೆ ನೆರಳಿಲ್ಲಿರುವ ಪ್ರದೇಶಗಳನ್ನು ಆಯುದ್ದುಕೊಳ್ಳಿ)

ಉಷ್ಣಮಾಪಕ




ಪ್ರತಿ ದಿನ ಉಷ್ಣೋಗ್ರತೆ ಅಳೆಯುವುದಕ್ಕೆ ಮೊದಲು ಅದನ್ನು ಊಹಿಸಿ ಅಂದಾಜು ಮಾಡಿರಿ. ಇವುಗಳನ್ನು ಒಂದು ಪುಸ್ತಕದಲ್ಲಿ ದಾಖಲು ಮಾಡಿರಿ.

ಪ್ರದೇಶ ______________________

ಸಮಯ ______________________

ತಿಂಗಳು ______________________

| ದಿನಾಂಕ | ವಾತಾವರಣ ಉಷ್ಣೋಗ್ರತೆ | |
|---|---|---|
| | ಅಂದಾಜು | ಅಳತೆ |
| | | |
| | | |
| | | |
| | | |
| | | |
| | | |
| | | |

- ಹೀಗೆ ಒಂದು ವಾರದವರೆಗೆ ಬೇರೆ ಬೇರೆ ತಿಂಗಳುಗಳ ಉಷ್ಣೋಗ್ರತೆಗಳು ದಾಖಲು ಮಾಡಿರಿ.
- ನೀವು ದಾಖಲು ಮಾಡಿದ ಒಂದು ವಾರದ ದಿನಗಳ ಉಷ್ಣೋಗ್ರತೆಗಳ ಸರಾಸರಿಯನ್ನು ಕಂಡು ಹಿಡಿಯಿರಿ.
- ವಿವಿಧ ವಾರಗಳ ಉಷ್ಣೋಗ್ರತೆಗಳಲ್ಲಿ ವ್ಯತ್ಯಾಸಗಳ ಕುರಿತು ಚರ್ಚಿಸಿರಿ.

SCERT TELANGANA

### ಅತ್ಯಧಿಕ , ಅತ್ಯಲ್ಪ ಉಷ್ಣೋಗ್ರತೆಗಳು :

ಭೂಮಿಗೆ ಸೇರಿಕೊಂಡ ಅತ್ಯಂತ ಹೆಚ್ಚು, ಅತ್ಯಂತ ಕಡಿಮೆ ಉಷ್ಣೋಗ್ರತೆಗಳನ್ನು ಶಾಸ್ತ್ರಜ್ಞರು ದಾಖಲು ಮಾಡಿದ್ದಾರೆ. 1922 ಜೂಲೈನಲ್ಲಿ ಲಿಬಿಯಾ (ಆಫ್ರಿಕಾ)ದಲ್ಲಿನ ಅಜೀಜಿಯಾದಲ್ಲಿ ಅತ್ಯಧಿಕ ಉಷ್ಣೋಗ್ರತೆಯಾದ $57.8^0$ C ದಾಖಲು ಮಾಡಿದ್ದಾರೆ. ಅದೇ ವಿಧವಾಗಿ ಅಂಟಾರ್ಕಟಿಕಾದಲ್ಲಿನ ವ್ಲಾಡಿವೊಸ್ಟಾಕ್ ಕೇಂದ್ರದಲ್ಲಿ 1983 ಜೂಲೈನಲ್ಲಿ ಅತ್ಯಂತ ಕಡಿಮೆಯಾಗಿ $-89.2^0$C ಸೆಲ್ಸಿಯಸ್ ಉಷ್ಣೋಗ್ರತೆಯನ್ನು ದಾಖಲು ಮಾಡಿದರು.

ಉಷ್ಣೋಗ್ರತೆ –5°C ಅಥವಾ –89°C ಇರುವುದೆಂದರೆ ಏನೆಂದು ನಿಮಗೆ ಗೊತ್ತಾ ? ನೀರು 100°C ಗೆ ಸೇರಿದರೆ ಕುದಿಯುತ್ತವೆಂದು, 0°C ಗೆ ಸೇರಿದರೆ ಗಡ್ಡೆಕಟ್ಟಿಕೊಳ್ಳುತ್ತವೆ ಎಂದು ನಿಮಗೆ ತಿಳಿದಿರಬೇಕು. ಸೊನ್ನೆಗಿಂತ ಕಡಿಮೆ ಉಷ್ಣೋಗ್ರತೆಗಳಲ್ಲಿ –273.16°C ಅತ್ಯಲ್ಪವಾದುದು. ಉಷ್ಣೋಗ್ರತೆ ಇದಕ್ಕಿಂತ ಕಡಿಮೆಯಾಗುವುದಿಲ್ಲ. ಉಷ್ಣೋಗ್ರತೆಗಳು ಸೊನ್ನೆಗಿಂತ ಕಡಿಮೆಯಾದರೆ ಇಷ್ಟು ಡಿಗ್ರಿಗಳ ಮೈನಸ್ ಎನ್ನುವರು. ಕೆಳಗೆ ಇರುವ ಸಂಖ್ಯಾ ರೇಖೆಯನ್ನು ನೋಡಿರಿ. ಈ ಸಂಖ್ಯಾ ರೇಖೆಯ ಮೇಲೆ ಗುರ್ತಿಸಿದ ಧನ, ಋಣ ಸಂಖ್ಯೆಗಳನ್ನು ಗಮನಿಸಿರಿ. ಇವುಗಳ ಆಧಾರದಿಂದ ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಿರಿ.

-5 -4 -3 -2 -1 0 1 2 3 4 5 6 7

- ಯಾವ ಉಷ್ಣೋಗ್ರತೆ ಹೆಚ್ಚು : 5°C ಇಲ್ಲವೇ –5°C ?
- ಈ ಎರಡು ಉಷ್ಣೋಗ್ರತೆಗಳಲ್ಲಿ ಯಾವ ಉಷ್ಣೋಗ್ರತೆಯ ಹತ್ತಿರ ಹೆಚ್ಚು ಚಳಿ ಅನಿಸುತ್ತದೆ ?

- –5°C ನಿಂದ 5°C ವರೆಗೆ ಎಷ್ಟು ಡಿಗ್ರಿಗಳ ವ್ಯತ್ಯಾಸವಿದೆ ?
- ಕೆಳಗೆ ತಿಳಿಸಿದ ಉಷ್ಣೋಗ್ರತೆಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ ?

  ಸೊನ್ನೆಗೆ ಕಡಿಮೆ $88^0$ C, ನೀರು ಗಡ್ಡೆ ಕಟ್ಟಿಕೊಳ್ಳುವುದಕ್ಕೆ $38^0$ C ಮೇಲ್ಪಟ್ಟು, ನೀರು ಗಡ್ಡೆಕಟ್ಟಿಕೊಳ್ಳುವುದಕ್ಕೆ $32^0$ C ಕಡಿಮೆ
- ಈ ದಿನ ನಿಮ್ಮ ತರಗತಿ ಕೋಣೆಯಲ್ಲಿ ಉಷ್ಣೋಗ್ರತೆಯನ್ನು ಅಳೆದಿದ್ದೀರಾ ? ಸೊನ್ನೆಗೆ ಕಡಿಮೆ $88^0$C ಅಂದರೆ ನೀವು ಅಳೆದ ಉಷ್ಣೋಗ್ರತೆಗಿಂತ ಎಷ್ಟು ಕಡಿಮೆ ?
- ಮನುಷ್ಯನ ಶರೀರದ ಉಷ್ಣೋಗ್ರತೆ ಸಾಧಾರಣವಾಗಿ 37°C ಇರುತ್ತದೆ. ಉಷ್ಣೋಗ್ರತೆ 50°C ಇದ್ದರೆ ಮನುಷ್ಯನ ಸಾಧಾರಣ ಉಷ್ಣೋಗ್ರತೆಗಿಂತ ಎಷ್ಟು ಹೆಚ್ಚು ಇದ್ದಂತೆ ?
- ಉಷ್ಣೋಗ್ರತೆ –5°C ಇದ್ದರೆ ಮನುಷ್ಯನ ಸಾಧಾರಣ ಉಷ್ಣೋಗ್ರತೆಗಿಂತ ಎಷ್ಟು ಕಡಿಮೆ ಇದ್ದಂತೆ ?
- ಈ ಉಷ್ಣೋಗ್ರತೆಗಳನ್ನು ಹೆಚ್ಚಿನಿಂದ ಕಡಿಮೆ ಕ್ರಮದಲ್ಲಿ ಬರೆಯಿರಿ. 12°C, –16°C, 29°C, 0°C, –4°C.
- ಮೇಲೆ ಕೊಟ್ಟ ಉಷ್ಣೋಗ್ರತೆಗಳಲ್ಲಿ ಯಾವುದರ ಹತ್ತಿರ ಎಲ್ಲವುದಕ್ಕಿಂತ ಬಿಸಿಯಾಗಿ ಇರುತ್ತದೆ ?
- ಮೇಲೆ ಕೊಟ್ಟ ಉಷ್ಣೋಗ್ರತೆಗಳಲ್ಲಿ ಯಾವುದರ ಹತ್ತಿರ ಎಲ್ಲವುದಕ್ಕಿಂತ ಚಳಿಯಾಗಿರುತ್ತದೆ ?



*ಚಿತ್ರ 2.4: ಉಷ್ಣೋಗ್ರತೆಯನ್ನು ಪ್ರಭಾವಿತಗೊಳಿಸುವ ಕಾರಕಗಳು.*

SCERT TELANGANA

## ಉಷ್ಣೋಗ್ರತೆಗಳನ್ನು ದಾಖಲುಗೊಳಿಸುವುದು

ಸಿಕ್ಸ್ ಗರಿಷ್ಠ, ಕನಿಷ್ಠ ಉಷ್ಣಮಾಪಕವನ್ನು ಉಪಯೋಗಿಸಿ ಒಂದು ದಿನದ ಅತ್ಯಧಿಕ, ಅತ್ಯಲ್ಪ ಉಷ್ಣೋಗ್ರತೆಗಳನ್ನು ದಾಖಲು ಮಾಡಿರಿ. ಒಂದು ದಿನದಲ್ಲಿ ಅತ್ಯಧಿಕ, ಅತಿ ಕಡಿಮೆ ಉಷ್ಣೋಗ್ರತೆಗಳು ಯಾವಾಗ ದಾಖಲಾದವೋ ನೋಡಿರಿ. ಹೀಗೆ ಒಂದು ತಿಂಗಳು ಮಾಡಿದ ನಂತರ ಗರಿಷ್ಠ ಉಷ್ಣೋಗ್ರತೆಗಳನ್ನು ಬರೆದು ಆ ಪ್ರದೇಶಕ್ಕೆ ಸರಾಸರಿ ಗರಿಷ್ಠ ಉಷ್ಣೋಗ್ರತೆ ಎಷ್ಟೋ ತಿಳಿದುಕೊಳ್ಳಿರಿ. (ಗರಿಷ್ಠ ಉಷ್ಣೋಗ್ರತೆಗಳೆಲ್ಲವನ್ನು ಕೂಡಿ ಒಂದು ತಿಂಗಳಲ್ಲಿನ ದಿನಗಳಿಂದ ಭಾಗಿಸಬೇಕು) ಈ ವಿಧವಾಗಿ ಆ ಪ್ರಾಂತಕ್ಕೆ ಒಂದು ತಿಂಗಳಲ್ಲಿ ಸರಾಸರಿ ಗರಿಷ್ಠ ಉಷ್ಣೋಗ್ರತೆ, ಸರಾಸರಿ ಕನಿಷ್ಠ ಉಷ್ಣೋಗ್ರತೆಗಳು ತಿಳಿದುಕೊಳ್ಳಬಹುದು.

ಹೈದರಾಬಾದುನಲ್ಲಿ ಪ್ರತಿ ತಿಂಗಳಲ್ಲಿ ಸರಾಸರಿ ಉಷ್ಣೋಗ್ರತೆಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ನೋಡಿರಿ.

**ಪಟ್ಟಿ 1: (ಹೈದರಾಬಾದ್ ತಿಂಗಳಿನ ಸರಾಸರಿ ಉಷ್ಣೋಗ್ರತೆಗಳು)**

| ತಿಂಗಳು | ಗರಿಷ್ಠ °C | ಕನಿಷ್ಠ °C |
|---|---|---|
| ಜನವರಿ | 28 | 16 |
| ಫೆಬ್ರವರಿ | 32 | 18 |
| ಮಾರ್ಚ್ | 35 | 21 |
| ಏಪ್ರೀಲ್ | 38 | 24 |
| ಮೇ | 39 | 26 |
| ಜೂನ್ | 34 | 24 |
| ಜೂಲೈ | 31 | 23 |
| ಆಗಸ್ಟ್ | 30 | 22 |
| ಸೆಪ್ಟೆಂಬರ್ | 31 | 22 |
| ಆಕ್ಟೋಬರ್ | 31 | 21 |
| ನವಂಬರ್ | 28 | 17 |
| ಡಿಸೆಂಬರ್ | 28 | 15 |

*ಗ್ರಾಫ್: 1 (ಹೈದರಾಬಾದ್ ಪಟ್ಟಣ ಪ್ರತಿ ತಿಂಗಳ ಸರಾಸರಿ ಉಷ್ಣೋಗ್ರತೆ)*




ಪಟ್ಟಿ-1 ರಲ್ಲಿನ ವಿವರಗಳನ್ನು ಉಪಯೋಗಿಸಿಕೊಂಡು ಅದೇ ಗ್ರಾಫ್‌ನಲ್ಲಿಯೇ ಹೈದರಾಬಾದ್‌ಗೆ ತಿಂಗಳ ಪ್ರಕಾರ ಸರಾಸರಿ ಕನಿಷ್ಠ ಉಷ್ಣೋಗ್ರೆಗಳ ರೇಖೆಯನ್ನು ಬಿಡಿಸಿರಿ. ಮೊದಲ ಎರಡು ತಿಂಗಳದ್ದು ಮಾಡಿದ ಗ್ರಾಫ್ ಮೇಲೆ ಇದೆ.

ಮೇಲೆ ಕೊಟ್ಟಿರುವ ಗ್ರಾಫ್, ಪಟ್ಟಿ-1ರಲ್ಲಿ ಪರಿಶೀಲಿಸಿ ಹೈದಾರಬಾದ್‌ಗೆ ಸಂಬಂಧಿಸಿದಂತೆ ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳು ನೀಡಿರಿ.

- ಹೈದರಾಬಾದ್‌ನಲ್ಲಿ ನವಂಬರ್‌ನಲ್ಲಿ ಎಷ್ಟು ಚಳಿಯಾಗಿ ಇರುತ್ತದೆ ?
- ಹೈದರಾಬಾದ್‌ನಲ್ಲಿ ಯಾವ ತಿಂಗಳಲ್ಲಿ ಗರಿಷ್ಠ ಉಷ್ಣೋಗ್ರತೆ ಹೆಚ್ಚಾಗಿ ಇರುತ್ತದೆ ?
- ವರ್ಷದಲ್ಲಿ ಅತ್ಯಧಿಕ ಗರಿಷ್ಠ ಉಷ್ಣೋಗ್ರತೆ, ಅತಿ ಕಡಿಮೆ ಕನಿಷ್ಠ ಉಷ್ಣೋಗ್ರತೆಗೆ ನಡುವೆ ವ್ಯತ್ಯಾಸ ಎಷ್ಟು?

SCERT TELANGANA

- ಹೈದರಾಬಾದ್‌ನಲ್ಲಿ ಬಹಳ ಬಿಸಿಯಾಗಿರುವ ಮೂರು ತಿಂಗಳುಗಳು ಯಾವುವು ?
- ಬಹಳ ಚಳಿಯಾಗಿರುವ ಮೂರು ತಿಂಗಳುಗಳು ಯಾವುವು ?
- ಹೈದರಾಬಾದ್‌ನಲ್ಲಿ ಜನವರಿಯಲ್ಲಿ ಸರಾಸರಿ ಗರಿಷ್ಠ ಉಷ್ಣೋಗ್ರತೆ ಎಷ್ಟು ?
- ಜೂನ್‌ನಿಂದ ಡಿಸೆಂಬರ್‌ವರೆಗೆ ಹೈದರಾಬಾದ್‌ನಲ್ಲಿ ಸರಾಸರಿ ಕನಿಷ್ಠ ಉಷ್ಣೋಗ್ರತೆ ಕಡಿಮೆಯಾಗುತ್ತಾ ಇದೆ. ಸರಾಸರಿ ಗರಿಷ್ಠ ಉಷ್ಣೋಗ್ರತೆ ಸಹ ಕಡಿಮೆಯಾಗುತ್ತಾ ಇದೆಯಾ ?
- ಮೇ ತಿಂಗಳಲ್ಲಿ ಗರಿಷ್ಠ , ಕನಿಷ್ಠ , ಸರಾಸರಿ ಉಷ್ಣೋಗ್ರತೆಗಳಲ್ಲಿ ವ್ಯತ್ಯಾಸ ಎಷ್ಟು ?
- ಆಗಸ್ಟ್ ತಿಂಗಳಲ್ಲಿ ಗರಿಷ್ಠ , ಕನಿಷ್ಠ ಸರಾಸರಿ ಉಷ್ಣೋಗ್ರತೆಗಳಲ್ಲಿ ವ್ಯತ್ಸಾಸ ಎಷ್ಟು ?
- ಮೇಲಿನ ಎರಡು ಪ್ರಶ್ನೆಗಳಿಗೆ ನಿಮ್ಮ ಉತ್ತರಗಳ ಆಧಾರವಾಗಿ ಗರಿಷ್ಠ , ಕನಿಷ್ಠ ಸರಾಸರಿ ಉಷ್ಣೋಗ್ರತೆಗಳ ವ್ಯತ್ಯಾಸ ಹೈದರಾಬಾದ್‌ನಲ್ಲಿ ಬೇಸಿಗೆಯಲ್ಲಿ ಹೆಚ್ಚಾಗಿದೆಯಾ ಇಲ್ಲವೇ ಮಳೆಕಾಲದಲ್ಲಿ ಹೆಚ್ಚಾಗಿ ಇದೆಯಾ ?

## ವಿವಿಧ ಪ್ರಾಂತಗಳ ಉಷ್ಣೋಗ್ರತೆಗಳಲ್ಲಿ ವ್ಯತ್ಯಾಸಗಳಿರುತ್ತವೆ.

## (Different Places Have Different Temperatures)

ಬೇರೆ ಬೇರೆ ಪ್ರಾಂತಗಳಲ್ಲಿ ಉಷ್ಣೋಗ್ರತೆಗಳಲ್ಲಿ ವ್ಯತ್ಯಾಸಗಳು ಇರುತ್ತವೆಂದು ನಿಮಗೆ ತಿಳಿದಿದೆ. ಈ ವಿಧವಾಗಿ ಉಷ್ಣೋಗ್ರತೆಗಳಲ್ಲಿ ವ್ಯತ್ಯಾಸಗಳು ಏಕೆ ಇರುತ್ತವೆಯೋ ನಿಮಗೆ ಗೊತ್ತಾ ? ಇದಕ್ಕೆ ಅನೇಕ ಕಾರಣಗಳಿವೆ. ಈಗ ನಾವು ಕೆಲವು ಕಾರಣಗಳನ್ನು ಪರಿಶೀಲಿಸೋಣ.

ಸಮುದ್ರಕ್ಕೆ ಹತ್ತಿರವಾಗಿ, ದೂರವಾಗಿರುವ ಪ್ರಾಂತಗಳ ನಡುವೆ ಸಾಮಾನ್ಯವಾಗಿ ಉಷ್ಣೋಗ್ರತೆಗಳಲ್ಲಿ ವ್ಯತ್ಯಾಸಗಳಿರುತ್ತವೆ.

ಪರ್ವತದ ಮೇಲೆ, ಪರ್ವತದ ಕೆಳಗೆ ಉಷ್ಣೋಗ್ರತೆಗಳಲ್ಲಿ ವ್ಯತ್ಯಾಸಗಳಿರುತ್ತವೆ. ಭೂಮಧ್ಯ ರೇಖೆಯಿಂದ ಉತ್ತರಕ್ಕೆ, ಇಲ್ಲವೇ ದಕ್ಷಿಣಕ್ಕೆ ಪ್ರಯಾಣ ಮಾಡುತ್ತಿದ್ದರೆ ಉಷ್ಣೋಗ್ರತೆಗಳು ಕಡಿಮೆಯಾಗುತ್ತವೆ ಎಂದು ನಿಮಗೆ ತಿಳಿದಿದೆ.

## ಸಮುದ್ರ ಪ್ರಭಾವಿತ, ಖಂಡಾಂತರ ಶೀತೋಷ್ಣ ಸ್ಥಿತಿಗಳು

ನಾವು ಹೈದರಾಬಾದ್ ಸರಾಸರಿ ಉಷ್ಣೋಗರತೆಗಳನ್ನು ನೋಡಿದ್ದೇವೆ. ಹೈದರಾಬಾದ್ ಸಮುದ್ರಕ್ಕೆ ಬಹಳ ದೂರದಲ್ಲಿದೆ. ಸಮುದ್ರಕ್ಕೆ ಹತ್ತಿರವಾಗಿರುವ ಪನಾಜಿ (ಗೋವಾ) ಪಟ್ಟಣ ಉಷ್ಣೋಗ್ರತೆಗಳನ್ನು ಈಗ ಪರಿಶೀಲಿಸೋಣ.

**ಪಟ್ಟಿ 2:** (ಪನಾಜಿ ಪಟ್ಟಣದ **ತಿಂಗಳಿನ ಸರಾಸರಿ ಉಷ್ಣೋಗ್ರತೆಗಳು**)

| ತಿಂಗಳು | ಗರಿಷ್ಠ °C | ಕನಿಷ್ಠ °C |
|---|---|---|
| ಜನವರಿ | 32 | 19 |
| ಫೆಬ್ರವರಿ | 32 | 21 |
| ಮಾರ್ಚ್ | 32 | 23 |
| ಏಪ್ರೀಲ್ | 33 | 25 |
| ಮೇ | 33 | 26 |
| ಜೂನ್ | 30 | 24 |
| ಜೂಲೈ | 29 | 24 |
| ಆಗಸ್ಟ್ | 28 | 24 |
| ಸೆಪ್ಟೆಂಬರ್ | 29 | 24 |
| ಅಕ್ಟೋಬರ್ | 32 | 24 |
| ನವಂಬರ್ | 33 | 22 |
| ಡಿಸೆಂಬರ್ | 32 | 21 |

ತಿಂಗಳ ಸರಾಸರಿ ಕನಿಷ್ಠ ಮತ್ತು ಗರಿಷ್ಠ ಉಷ್ಣೋಗ್ರತೆಗಳನ್ನು ನಕ್ಷೆ 2ರಲ್ಲಿ ಸೂಚಿಸಲಾಗಿದೆ :

- ಪನಾಜಿಯಲ್ಲಿ ಯಾವ ತಿಂಗಳಲ್ಲಿ ಕನಿಷ್ಠ ಉಷ್ಣೋಗ್ರತೆ ಅತಿ ಕಡಿಮೆಯಲ್ಲಿದೆ ? ಅದು ಎಷ್ಟು ?
- ಪನಾಜಿಯಲ್ಲಿ ಬಹಳ ಬಿಸಿಯಾಗಿರುವ ತಿಂಗಳು ಯಾವುದು ? ಆ ತಿಂಗಳಲ್ಲಿ ಸರಾಸರಿ ಉಷ್ಣೋಗ್ರತೆ ಎಷ್ಟು ?

SCERT TELANGANA

*ಗ್ರಾಫ್: 2 (ಪನಾಜಿ ಪಟ್ಟಣ ಪ್ರತಿ ತಿಂಗಳ ಸರಾಸರಿ ಉಷ್ಣೋಗ್ರತೆ)*




- ಹೈದರಾಬಾದ್, ಪನಾಜಿಗಳ ಉಷ್ಣೋಗ್ರತೆಗಳನ್ನು ಹೋಲಿಸಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡಿ.

  ಜನವರಿಯಲ್ಲಿ ಯಾವ ಪ್ರದೇಶದಲ್ಲಿ ಹೆಚ್ಚು ಚಳಿಯಾಗಿರುತ್ತದೆ ?

  ಜೂನ್‌ನಲ್ಲಿ ಯಾವ ಪ್ರದೇಶದಲ್ಲಿ ಹೆಚ್ಚು ಬಿಸಿಯಾಗಿರುತ್ತದೆ?

  ಯಾವ ಪ್ರದೇಶದಲ್ಲಿ ವರ್ಷದುದ್ದಕ್ಕೂ ಉಷ್ಣೋಗ್ರತೆ ಹೆಚ್ಚು ಕಡಿಮೆ ಒಂದೇ ವಿಧವಾಗಿ ಇರುತ್ತದೆ ?

ಪನಾಜಿಯಲ್ಲಿ ವರ್ಷವೆಲ್ಲಾ ಉಷ್ಣೋಗ್ರತೆಗಳಲ್ಲಿ ವ್ಯತ್ಯಾಸ ಅಷ್ಟು ಹೆಚ್ಚಾಗಿ ಏಕೆ ಇಲ್ಲ ? ಅದು ಸಮುದ್ರ ತೀರದಲ್ಲಿ ಇದೆ ಆದ್ದರಿಂದ ! ಸಮುದ್ರವನ್ನು ಬಿಸಿಯಾಗಿಸುವಿಕೆ ಸೂರ್ಯನಿಗೆ ಅಷ್ಟು ಸುಲಭ ಅಲ್ಲ. ಸಮುದ್ರ ಬಹಳ ಬಿಸಿಯಾಗದು ಬಹಳ ತಂಪಾಗದು ಆದ್ದರಿಂದ ಅದರ ಮೇಲಿನ ಗಾಳಿ ಸಹ ಬಹಳ ಬಿಸಿಯಾಗದು. ಬಹಳ ತಂಪಾಗದು, ಆದ್ದರಿಂದ ಸಮುದ್ರ ತೀರದಲ್ಲಿರುವ ಪ್ರದೇಶಗಳಲ್ಲಿ ಸಾಮಾನ್ಯವಾಗಿ ವರ್ಷವೆಲ್ಲಾ ಶೀತೋಷ್ಣಸ್ಥಿತಿಗಳು ಒಂದೇ ವಿಧವಾಗಿರುತ್ತವೆ. ಇದನ್ನೇ ಸಮುದ್ರ ಪ್ರಭಾವಿತ ಶೀತೋಷ್ಣಸ್ಥಿತಿ ಎನ್ನುವರು.

ಇದಕ್ಕೆ ಭಿನ್ನವಾಗಿ ಹೈದರಾಬಾದ್ ಸಮುದ್ರಕ್ಕೆ ಬಹಳ ದೂರದಲ್ಲಿದೆ. ಹೈದರಾಬಾದ್‌ನಲ್ಲಿ ಶೀತೋಷ್ಣಸ್ಥಿತಿಗಳು ಬಹಳ ಬದಲಾಗದಂತೆ ಮಾಡುವ ಸಮುದ್ರ ಪ್ರಭಾವಿಲ್ಲ. ಬೇಸಿಗೆಯಲ್ಲಿ ಭೂಮಿ ಹೆಚ್ಚಾಗಿ ಬಿಸಿಯಾದ ಕಾರಣದಿಂದ ಗಾಳಿ ಸಹ ಹೆಚ್ಚಾಗಿ ಬಿಸಿಯೇರುತ್ತದೆ. ಚಳಿಕಾಲದಲ್ಲಿ ಭೂಮಿಯ ಉಷ್ಣೋಗ್ರತೆಗಳು ಕಡಿಮೆಯಾಗುವುದರಿಂದ ಗಾಳಿಯೂ ಸಹ ಹೆಚ್ಚಾಗಿ ತಂಪಾಗಿರುತ್ತದೆ. ಹೀಗೆ ಗರಿಷ್ಠ ಕನಿಷ್ಠ ಉಷ್ಣೋಗ್ರತೆಗಳಲ್ಲಿ ಬಹಳ ವ್ಯತ್ಯಾಸ ಇರುವುದದನ್ನು ಖಂಡಾಂತರ್ಗತ ಶೀತೋಷ್ಣಸ್ಥಿತಿ ಎನ್ನುವರು.

## ಎತ್ತರ - ಉಷ್ಣೋಗ್ರತೆ (Height and Temperature)

ಸುಡು ಬೇಸಿಗೆಯಲ್ಲಿ ಮೈದಾನ ಪ್ರಾಂತಗಳಲ್ಲಿನ ಕೆಲವು ಮಂದಿ ಬಿಸಿಲಿನಿಂದ ತಪ್ಪಿಸಿಕೊಳ್ಳುವುದಕ್ಕೆ ಊಟಿ, ಸಿಮ್ಲಾದಂತಹ ಪರ್ವತ ಪ್ರಾಂತ ಪ್ರದೇಶಗಳಿಗೆ ಹೋಗುತ್ತಿರುತ್ತಾರೆ. ಎತ್ತರವಾಗಿರುವ ಪರ್ವತಗಳಲ್ಲಿ ಬೇಸಿಗೆ ತಿಂಗಳಲ್ಲಿಯೂ ಸಹ ಉಷ್ಣೋಗ್ರತೆಗಳು ಕಡಿಮೆ ಇರುತ್ತವೆ. ಪರ್ವತಗಳಲ್ಲಿ ಎತ್ತರವಾದ ಪ್ರಾಂತಗಳಲ್ಲಿ ಅತಿ ಕಡಿಮೆ ಉಷ್ಣೋಗ್ರತೆಗಳಿರುತ್ತವೆ. ಎತ್ತರ ಪ್ರದೇಶಗಳಿಗೆ ಹೋದಂತೆಲ್ಲಾ ಉಷ್ಣೋಗ್ರತೆಗಳು ಕಡಿಮೆಯಾಗುತ್ತಿರುತ್ತವೆ.

ದೆಹಲಿ, ಸಿಮ್ಲಾಗಳ ಮಾಸಿಕ ಸರಾಸರಿ ಉಷ್ಣೋಗ್ರತೆಗಳನ್ನು ತೋರಿಸುವ ರೇಖಾ ಚಿತ್ರಪಟಗಳನ್ನು (3,4) ನೋಡಿರಿ. ಪ್ರತಿ ತಿಂಗಳಲ್ಲಿಯೂ ದೆಹಲಿಗಿಂತ ಸಿಮ್ಲಾದಲ್ಲಿ ಉಷ್ಣೋಗ್ರತೆಗಳು ಕಡಿಮೆ ಇವೆಯೆಂದು ಸ್ಪಷ್ಟವಾಗುತ್ತದೆ.

ಸಮುದ್ರ ಮಟ್ಟದಿಂದ ದೆಹಲಿ 200 ಮೀಟರ್‌ಗಳ ಎತ್ತರದಲ್ಲಿದೆ. ಅದೇ ಸಿಮ್ಲಾ 2200 ಮೀಟರ್‌ಗಳ ಎತ್ತರದಲ್ಲಿದೆ. ಸಾಮಾನ್ಯವಾಗಿ ಸಮುದ್ರಮಟ್ಟದಿಂದ ಸಾವಿರ ಮೀಟರ್‌ಗಳ ಎತ್ತರಕ್ಕೆ ಹೋದರೆ ಉಷ್ಣೋಗ್ರತೆಗಳು 6.4°C ರಷ್ಟು ಕಡಿಮೆಯಾಗುತ್ತವೆ. ಎತ್ತರವಾದ ಬೆಟ್ಟಗಳು ,

*ಗ್ರಾಫ್: 3 (ದೆಹಲಿ ಪಟ್ಟಣ ಪ್ರತಿ ತಿಂಗಳ ಸರಾಸರಿ ಉಷ್ಣೋಗ್ರತೆ)*




SCERT TELANGANA

*ಗ್ರಾಫ್: 4 (ಸಿಮ್ಲಾ ಪಟ್ಟಣ ಪ್ರತಿ ತಿಂಗಳ ಸರಾಸರಿ ಉಷ್ಣೋಗ್ರತೆ)*




ಪರ್ವತಗಳಲ್ಲಿ ಕಡಿಮೆ ಉಷ್ಣೋಗ್ರತೆಗಳಿಂದ ಅಲ್ಲಿ ಬೆಳೆಯುವ ಗಿಡ , ಮರಗಳಲ್ಲಿಯೂ ಸಹ ವ್ಯತ್ಯಾಸವಿರುತ್ತದೆ.

- ಸಿಮ್ಲಾದಲ್ಲಿ ಯಾವ ತಿಂಗಳಲ್ಲಿ ಗರಿಷ್ಠ ಉಷ್ಣೋಗ್ರತೆ ಹೆಚ್ಚು ಇರುತ್ತದೆ ? ಅದು ಎಷ್ಟು ?
- ದೆಹಲಿಯಲ್ಲಿ ಯಾವ ತಿಂಗಳಲ್ಲಿ ಗರಿಷ್ಠ ಉಷ್ಣೋಗ್ರತೆ ಹೆಚ್ಚು ಇರುತ್ತದೆ ? ಅದು ಎಷ್ಟು ?
- ಸೆಪ್ಟೆಂಬರ್‌ನಲ್ಲಿ ಸಿಮ್ಲಾದಲ್ಲಿ ಸರಾಸರಿ ಉಷ್ಣೋಗ್ರತೆ ______°C ಆದರೆ ದೆಹಲಿಯಲ್ಲಿ ______°C.
- ಯಾವುದು ಹೆಚ್ಚು ಚಳಿಯಾಗಿರುತ್ತದೆ : ಜನವರಿಯಲ್ಲಿ ದೆಹಲಿ ಇಲ್ಲವೇ ಜೂಲೈನಲ್ಲಿ ಸಿಮ್ಲಾ?

### ವಿಲೋಮ (Inversion) :

ಕೆಲವು ಸಲ, ಪ್ರತ್ಯೇಕವಾಗಿ ಚಳಿಗಾಲದ ಬೆಳಗಿನ ವೇಳೆಯಲ್ಲಿ ಭೂಮಿ ಬಹಳ ಕಡಿಮೆ ಉಷ್ಣೋಗ್ರತೆ ಹೊಂದಿರುತ್ತದೆ. ಭೂಮಿಯ ಮೇಲಿರುವ ಹುಲ್ಲು, ಸಸಿಗಳ ಮೇಲೆ ಮಂಜಿನ ಹನಿಗಳು (ದ್ರವಭವನ ಕಂಡೆನ್ಸೇಷನ್ ) ಏರ್ಪಡುತ್ತಿರುತ್ತವೆ. ಹಗಲಿನ ಅವಧಿ ಕಡಿಮೆಯಾಗಿರುವುದರಿಂದ ಆಯಾತ ಸೌರ ವಿಕಿರಣ ಕಡಿಮೆ ಇದ್ದು, ರಾತ್ರಿ ಸಮಯ ಹೆಚ್ಚು ಇದ್ದು , ಸೌರವಿಕಿರಣ ಹೆಚ್ಚಾಗಿ ಇಲ್ಲದಿದ್ದುದರಿಂದ ಭೂಮಿಗೆ ಹತ್ತಿರದಲ್ಲಿ ಉಷ್ಣೋಗ್ರತೆ ಬಹಳ ಕಡಿಮೆ ಇರುತ್ತದೆ. ಇದನ್ನೇ ವಿಲೋಮನುಪಾತ ಎನ್ನುವರು

- ಉಷ್ಣೋಗ್ರತೆ ಹೀಗೆ ಇರುಲು ಬೇರೆ ಕಾರಣಗಳನ್ನು ಊಹಿಸಿರಿ?
- ವಿಲೋಮ ನಡೆದರೆ ಏನಾಗುತ್ತದೆ ?
- ದೆಹಲಿಗಿಂತ ಸಿಮ್ಲಾ ಎಷ್ಟು ಮೀಟರ್‌ಗಳ ಎತ್ತರದಲ್ಲಿದೆ
- ಸಮುದ್ರ ಮಟ್ಟದಿಂದ ಎರಡು ಪ್ರದೇಶಗಳ ಎತ್ತರಗಳಲ್ಲಿರುವ ವ್ಯತ್ಯಾಸಗಳ ಆಧಾರದಿಂದ ಆ ಎರಡರ ಉಷ್ಣೋಗ್ರತೆಗಳಲ್ಲಿ ಎಷ್ಟು ವ್ಯತ್ಯಾಸ ಇರುತ್ತದೋ ಲೆಕ್ಕಿಸಿ.

## ಭೂಮಧ್ಯ ರೇಖೆಗೆ ಹತ್ತಿರವಾಗಿ, ದೂರವಾಗಿರುವ ಪ್ರಾಂತಗಳ ಉಷ್ಣೋಗ್ರತೆಗಳು

## (Temperatures in Places Near and Far from the Equator)

ಏಳನೇ ತರಗತಿಯಲ್ಲಿ ಭೂಮಧ್ಯ ರೇಖೆಗೆ ಹತ್ತಿರ ಇರುವ ನೈಜೀರಿಯಾದ ಬಗ್ಗೆ, ಉತ್ತರಕ್ಕೆ ಮೇಲೆ ಇರುವ ಫ್ರಾನ್ಸ್ ಬಗ್ಗೆ ಸಹ ಓದಿದ್ದೇವೆ. ಉತ್ತರಕ್ಕೆ ಇನ್ನೂ ಮೇಲೆ ಇರುವ ಆರ್ಕ್‌ಟಿಕ್ ಟಂಡ್ರಾ ಬಗ್ಗೆ ನಂತರದ ಪಾಠಗಳಲ್ಲಿ ಓದುತ್ತೇವೆ. ಇಂಡೋನೇಷಿಯಾದಂತಹ ಭೂಮಧ್ಯ ರೇಖಾ ಪ್ರಾಂತದಲ್ಲಿ ವರ್ಷವೆಲ್ಲಾ ಬಿಸಿಯಾಗಿ ಇರುತ್ತದೆಂದೂ, ಅಲ್ಲಿ ಚಳಿಗಾಲ ಇರುವುದಿಲ್ಲವೆಂದೂ ತಿಳಿದುಕೊಂಡಿದ್ದೇವೆ. ಭೂಮಧ್ಯ ರೇಖೆಯಿಂದ ಉತ್ತರಕ್ಕಾಗಲಿ, ದಕ್ಷಿಣಕ್ಕಾಗಲಿ ಹೋದರೆ ಅಲ್ಲಿ ಬಹಳ ಚಳಿಯಾಗಿರುತ್ತದೆ. ಬೇಸಿಗೆ, ಚಳಿಗಾಲಗಳೆಂದು ಬೇರೆಯಾಗಿರುತ್ತವೆ. ಭೂಮಧ್ಯ ರೇಖೆಗೆ ಹತ್ತಿರವಾಗಿ, ದೂರವಾಗಿ ಇರುವ ಪ್ರಾಂತಗಳ ಉಷ್ಣೋಗ್ರತೆಗಳು ಪರಿಶೀಲಿಸಿದರೆ ಈ ವಿಷಯ ಚೆನ್ನಾಗಿ ಅರ್ಥವಾಗುತ್ತದೆ.



*ಚಿತ್ರ 2.5: ಗ್ಲೋಬ್ – ಏಷಿಯಾದ ಕಡೆ*

- ಮೇಲಿನ ಚಿತ್ರದಲ್ಲಿ ಸಿಂಗಪೂರ್, ಷಾಂಘೈ, ವ್ಲಾಡಿವೊಸ್ಟಾಕ್‌ಗಳನ್ನು ಗುರ್ತಿಸಿರಿ.

SCERT TELANGANA

ಕೆಳಗೆ ಇರುವ ರೇಖಾ ಚಿತ್ರಪಟದಲ್ಲಿ ಸಿಂಗಪೂರ್, ಷಾಂಘೈ, ವ್ಲಾಡಿವೊಸ್ಟಾಕ್‌ಗಳ ಸರಾಸರಿ ಗರಿಷ್ಠ ಉಷ್ಣೋಗ್ರತೆಗಳಿವೆ. ಸೂಚನೆಯಲ್ಲಿ ಆ ಪ್ರಾಂತಗಳ ಸರಾಸರಿ ವಾರ್ಷಿಕ ಉಷ್ಣೋಗ್ರತೆಗಳು ಸಹ ಇವೆ. ಪ್ರತಿ ತಿಂಗಳು ಗರಿಷ್ಠ ಕನಿಷ್ಠ ಉಷ್ಣೋಗ್ರತೆಗಳೆಲ್ಲವನ್ನು ಕೂಡಿ ಆ ತಿಂಗಳಲ್ಲಿನ ದಿನಗಳಿಂದ ಭಾಗಿಸುವುದರ ಮೂಲಕ ಸರಾಸರಿ ವಾರ್ಷಿಕ ಉಷ್ಣೋಗ್ರತೆ ಲೆಕ್ಕಿಸಬಹುದು. 'ಸಿಂಗಪೂರ್ ಸರಾಸರಿ ಷಾಂಘೈಗಿಂತ ಬೆಚ್ಚಗೆ ಇರುತ್ತದಾ ?'' ದಂತಹ ಪ್ರಶ್ನೆಗಳಿಗೆ ಉತ್ತರ ನೀಡಲು ಇಂತಹ ಸಮಾಚಾರ ಉಪಯೋಗಪಡುತ್ತದೆ.

ಭೂಮಧ್ಯ ರೇಖೆಗೆ ಹತ್ತಿರವಾಗಿರುವ ಪ್ರಾಂತಗಳು ಸಾಮಾನ್ಯವಾಗಿ ಹೆಚ್ಚು ಬಿಸಿಯಾಗುತ್ತದೆ. ಭೂಮಧ್ಯ ರೇಖೆಗೆ ದೂರವಾಗಿರುವ ಪ್ರಾಂತಗಳಲ್ಲಿ ವಾರ್ಷಿಕ ಸರಾಸರಿ ಉಷ್ಣೋಗ್ರತೆಗಳು ಕಡಿಮೆ ಇರುತ್ತವೆ.

*ಗ್ರಾಫ್: 5 (ಸಿಂಗಪೂರ್, ಷಾಂಘೈ, ವ್ಲಾಡಿವೊಸ್ಟಾಕ ಮಾಸಿಕ ಸರಾಸರಿ ಗರಿಷ್ಠ ಉಷ್ಣೋಗ್ರತೆಗಳು)·*




ಸೂಚಿಕೆ

| ನಗರ | ವಾರ್ಷಿಕ ಸರಾಸರಿ ಉಷ್ಣೋಗ್ರತೆ |
|---|---|
| ವ್ಲಾಡಿವೊಸ್ಟಾಕ್ | $3.9^0C$ |
| ಷಾಂಘೈ | $15.3^0C$ |
| ಸಿಂಗಪೂರ್ | $27.8^0C$ |

- ರೇಖಾ ಚಿತ್ರಪಟದಲ್ಲಿ ಕೊಟ್ಟಿರುವ ಮೂರು ಪ್ರದೇಶಗಳಲ್ಲಿ ಭೂಮಧ್ಯ ರೇಖೆಗೆ ಹತ್ತಿರವಾಗಿ ಯಾವುದು ಇದೆ ?
- ಆ ಪ್ರದೇಶದಲ್ಲಿ ಸರಾಸರಿ ವಾರ್ಷಿಕ ಉಷ್ಣೋಗ್ರತೆ ಎಷ್ಟು ?

- ಅಲ್ಲಿ ಚಳಿಗಾಲಕ್ಕಿಂತ ಬೇಸಿಗೆ ಕಾಲದಲ್ಲಿ ಸಾಮಾನ್ಯವಾಗಿ ಬಹಳ ಬಿಸಿಯಾಗಿ ಇರುತ್ತದಾ ?
- ಸಿಂಗಪೂರ್‌ನಲ್ಲಿ ಚಳಿಗಾಲದಲ್ಲಿ ಇದ್ದಷ್ಟು ಬಿಸಿಯಾಗಿ ವ್ಲಾಡಿವೋಸ್ಟಾಕ್‌ನಲ್ಲಿ ಬೇಸಿಗೆಯಲ್ಲಿ ಇರುತ್ತದಾ ?
- ಜೂಲೈನಲ್ಲಿ ಸಾಮಾನ್ಯವಾಗಿ ಸಿಂಗಪೂರ್‌ನಲ್ಲಿ ಹೆಚ್ಚು ಬಿಸಿಯಾಗಿ ಇರುತ್ತದಾ ಇಲ್ಲವೇ ಷಾಂಘೈನಲ್ಲಾ ?
- ರೇಖಾ ಚಿತ್ರ ಪಟದಲ್ಲಿ ತೋರಿಸಿದ ಮೂರು ಪ್ರದೇಶಗಳಲ್ಲಿ ಎಲ್ಲಿ ಉಷ್ಣೋಗ್ರತೆಗಳಲ್ಲಿ ತೀವ್ರವಾದ ವ್ಯತ್ಯಾಸಗಳಿವೆ ?
- ಷಾಂಘೈನಲ್ಲಿ ಅತ್ಯಂತ ಬಿಸಿಯಾಗಿರುವ ತಿಂಗಳು ಯಾವುದು ?
- ಅಲ್ಲಿ ಸರಾಸರಿ ವಾರ್ಷಿಕ ಉಷ್ಣೋಗ್ರತೆ ಎಷ್ಟು ?
- ಈ ಪ್ರದೇಶದಲ್ಲಿ ಸರಾಸರಿ ವಾರ್ಷಿಕ ಉಷ್ಣೋಗ್ರತೆ ಅತಿ ಕಡಿಮೆಯಾಗಿರುವ ತಿಂಗಳು ಯಾವುದು ?

### ಉಷ್ಣೋಗ್ರತೆ ನಕ್ಷೆಗಳು (Temperature maps) :

ಭಾರತ ದೇಶ ಬಹಳ ವಿಶಾಲವಾದ ದೇಶ ವಿವಿಧ ಪ್ರಾಂತಗಳ ಉಷ್ಣೋಗ್ರತೆಗಳಲ್ಲಿ ಬಹಳ ವ್ಯತ್ಯಾಸಗಳಿರುತ್ತವೆ. ಯಾವ ಪ್ರದೇಶಗಳು ಬಿಸಿಯಾಗಿರುತ್ತವೆಯೋ, ಯಾವುವು ಚಳಿಯಾಗಿರುತ್ತವೆಯೋ ತಿಳಿದುಕೊಳ್ಳುವುದಕ್ಕೆ ಉಷ್ಣೋಗ್ರತೆ ನಕ್ಷೆಯನ್ನು ಉಪಯೋಗಿಸಬಹುದು.

ನಿಮ್ಮ ಅಟ್ಲಾಸ್‌ನಲ್ಲಿ ಜನವರಿ ತಿಂಗಳಲ್ಲಿ ಸರಾಸರಿ ಉಷ್ಣೋಗ್ರತೆಗಳು ತೋರಿಸುವ ಭಾರತ ದೇಶದ ನಕ್ಷೆಯನ್ನು ನೋಡಿರಿ.

ಆ ತಿಂಗಳ ಗರಿಷ್ಠ, ಕನಿಷ್ಠ ಉಷ್ಣೋಗ್ರತೆಗಳ ಸರಾಸರಿ ಲೆಕ್ಕಿಸುವುದರ ಮೂಲಕ ಸರಾಸರಿ ಉಷ್ಣೋಗ್ರತೆ ಬರುತ್ತದೆ. ಈ ನಕ್ಷೆಯಲ್ಲಿ ಭಾರತ ದೇಶವನ್ನು ವಿವಿಧ ಭಾಗಗಳಾಗಿ ವಿಭಜಿಸಿದ್ದಾರೆ. ಒಂದೊಂದು ಭಾಗಕ್ಕೆ ಬೇರೆ ಬೇರೆ ಬಣ್ಣ ಕೊಟ್ಟಿರುವರು. ಸೂಚಿಕೆಯನ್ನು ನೋಡುವುದರ ಮೂಲಕ ಈ ಭಾಗಗಳಲ್ಲಿ ಜನವರಿ ಸರಾಸರಿ ಉಷ್ಣೋಗ್ರತೆ ಎಷ್ಟೋ ತಿಳಿದುಕೊಳ್ಳಬಹುದು.

- ಅಟ್ಲಾಸ್‌ನಲ್ಲಿನ ನಕ್ಷೆಗಳ ಮೂಲಕ ಈ ಪ್ರದೇಶಗಳ ಅಕ್ಷಾಂಶಗಳು, ಜನವರಿಯಲ್ಲಿನ ಸರಾಸರಿ ಉಷ್ಣೋಗ್ರತೆಗಳು ತಿಳಿದುಕೊಳ್ಳಿರಿ. ಮೊದಲನೆಯದು ಭರ್ತಿ ಮಾಡಲಾಗಿದೆ.

SCERT TELANGANA

| ಪ್ರದೇಶ | ಅಕ್ಷಾಂಶ | ಉಷ್ಣೋಗ್ರತೆ ಜನವರಿಯಲ್ಲಿ |
|---|---|---|
| ಹೈದರಾಬಾದ್ ತೆಲಂಗಾಣ | | 17Nಉ.ಅ. 20-22.5°C ನಡುವೆ |
| ಆಗ್ರಾ, ಉ.ಪ್ರ. | | |
| ಮಧುರೈ ತ.ನಾ. | | |
| ನಾಗಪೂರ್, ಮ | | |

ಅಟ್ಲಾಸಿನಲ್ಲಿನ ನಕ್ಷೆಯ ಪ್ರಕಾರ ಭಾರತ ದೇಶದಲ್ಲಿ ಜನವರಿಯಲ್ಲಿ 30°C ಸರಾಸರಿ ಉಷ್ಣೋಗ್ರತೆಗಿಂತ ಹೆಚ್ಚು ಇರುವ ಪ್ರದೇಶಗಳು ಯಾವು ಇಲ್ಲ. (ಇದು ಸರಾಸರಿ ಎನ್ನುವ ವಿಷಯವನ್ನು ನೆನಪಿಟ್ಟುಕೊಳ್ಳಿ. ಕೆಲವು ಪ್ರದೇಶಗಳಲ್ಲಿ, ಜನವರಿಯಲ್ಲಿ 30°C. ಗಿಂತ ಬಿಸಿಏರುವ ದಿನಗಳು ಕೆಲವು ಇದ್ದೇ ಇರುತ್ತವೆ )

ನಕ್ಷೆ ನೋಡಿ (ಜನವರಿಯಲ್ಲಿ) ಸಾಮಾನ್ಯವಾಗಿ ಸರಾಸರಿ ಉಷ್ಣೋಗ್ರತೆ ಹೆಚ್ಚಾಗಿರುವ ಪ್ರದೇಶಗಳು ಯಾವುವೋ ಹೇಳಿರಿ.

ಈ ಪ್ರದೇಶಗಳಿಗೆ ಉತ್ತರಕ್ಕೆ ಹೋದರೆ ಜನವರಿಯಲ್ಲಿ ಸರಾಸರಿ ಉಷ್ಣೋಗ್ರತೆ ಹೆಚ್ಚಾಗಿರುತ್ತದಾ ? ಕಡಿಮೆ ಯಾಗಿರುತ್ತದಾ ?

## ಉತ್ತರ ಪ್ರಾಂತಗಳಲ್ಲಿ ಚಳಿಗಾಲದಲ್ಲಿ ಬಹಳ ಚಳಿಯಾಗಿ ಏಕೆ ಇರುತ್ತದೆ ?

ಕೆಳಗಿರುವ ಪಟ್ಟಿಯಲ್ಲಿ ಭಾರತ ದೇಶದಲ್ಲಿನ ಕೆಲವು ಪಟ್ಟಣಗಳಲ್ಲಿ ಜನವರಿ 10ರಂದು ಸೂರ್ಯೋದಯ, ಸೂರ್ಯಸ್ತದ ಸಮಯಗಳಿವೆ. ಇವುಗಳನ್ನು ಆಧಾರವಾಗಿಟ್ಟುಕೊಂಡು ಕೆಳಗಿರುವ ಪ್ರಶ್ನೆಗಳಿಗೆ ಉತ್ತರ ನೀಡಿ.

| ಪ್ರದೇಶ | ಸೂರ್ಯೋದಯ | ಸೂರ್ಯಸ್ತ |
|---|---|---|
| ಹೈದರಾಬಾದ್ ತೆಲಂಗಾಣ | 6:49 | 5:58 |
| ಆಗ್ರಾ, ಉ.ಪ್ರ. | 7.09 | 5.42 |
| ಮಧುರೈ, ತ.ನಾ. | 6:37 | 6:12 |
| ನಾಗಪೂರ್, ಮಹಾ | 6:53 | 5:48 |
| ವಿಶಾಖಪಟ್ಟಣ, ಆಂ.ಪ್ರ. | 6:29 | 5:38 |
| ಕೋರಿಯಾ, ನಾಗಲ್ಯಾಂಡ್ | 6:02 | 4:40 |

- ಮೇಲೆ ಇರುವ ಆರು ಪಟ್ಟಣಗಳಲ್ಲಿ ಮೊದಲು ಸೂರ್ಯೋದಯ ಎಲ್ಲಿ ಆಗುತ್ತದೆ ?
- ಯಾವ ಪಟ್ಟಣದಲ್ಲಿ ಎಲ್ಲವುದಕ್ಕಿಂತ ಕೊನೆಗೆ ಸೂರ್ಯಾಸ್ತವಾಗುತ್ತದೆ ?
- ಈ ಆರು ಪಟ್ಟಣಗಳಲ್ಲಿ ಹಗಲಿನ ಅವಧಿ ಎಷ್ಟು? (ಸೂರ್ಯೋದಯದಿಂದ ಸೂರ್ಯಸ್ತದ ನಡುವಿನ ಅವಧಿ ಹಗಲಿನ ಅವಧಿಯಾಗುತ್ತದೆ)
- ದಕ್ಷಿಣ ನಗರಗಳಿಗಿಂತ ಉತ್ತರದ ನಗರಳಲ್ಲಿ ಹಗಲಿನ ಸಮಯ ಹೆಚ್ಚು ಅಥವಾ ಕಡಿಮೆ ಇರುತ್ತದೆಯೇ ?
- ಮೇಲಿನ ಪ್ರಶ್ನೆಗಳ ಆಧಾರವಾಗಿ ನೀವು ಚಳಿಗಾಲದಲ್ಲಿ ಉತ್ತರ ಭಾರತವು ದಕ್ಷಿಣ ಭಾರತಕ್ಕಿಂತ ತಂಪಾಗಿರುತ್ತದೆ ಏತಕ್ಕಾಗಿ ಎಂದು ಕಾರಣ ಹೇಳಬಲ್ಲಿರಾ ?

### ಮುಖ್ಯಪದಗಳು

1. ವಾತಾವರಣ
2. ಭೂಮಧ್ಯರೇಖಾ ಪ್ರಾಂತ
3. ಘನೀಭವನ
4. ಸೌರವಿಕಿರಣ
5. ಆಯಾತ ಸೌರವಿಕಿರಣ
6. ಪತನ ಕೋನ
7. ಶಾಖ ಸಮತೋಲನೆ
8. ಗರಿಷ್ಠ ಉಷ್ಣೋಗ್ರತೆ
9. ಕನಿಷ್ಠ ಉಷ್ಣೋಗ್ರತೆ
10. ಉಷ್ಣ ವಿಲೋಮ
11. ಭೂಗೋಳ ಬಿಸಿಯಾಗುವಿಕೆ

SCERT TELANGANA

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ

1) ತಪ್ಪು ವಾಕ್ಯಗಳನ್ನು ಸರಿ ಮಾಡಿರಿ –

a) ಒಂದು ಪ್ರದೇಶ ಸಮುದ್ರಕ್ಕೆ ಹತ್ತಿರವಾಗಿ ಇದ್ದರೆ, ಭೂಮಧ್ಯ ರೇಖೆಯಿಂದ ಎಷ್ಟು ದೂರದಲ್ಲಿದೆ ಎನ್ನುವುದರೊಂದಿಗೆ ಸಂಬಂಧವಿಲ್ಲದೆ ಯಾವಾಗಲೂ ತಂಪಾಗಿರುತ್ತದೆ.

b) ಭೂಮಿಯಿಂದ ಮೇಲೆ ಹೋದಂತೆ ಸೂರ್ಯನಿಗೆ ಹತ್ತಿರವಾಗಿ ಹೋಗುತ್ತಾರಾದ್ದರಿಂದ ಬಹಳ ಬಿಸಿಯಾಗಿರುತ್ತದೆ.

c) ಸೂರ್ಯನು ಮೊದಲು ಗಾಳಿಯನ್ನು ಬಿಸಿ ಮಾಡಿ, ನಂತರ ಭೂಮಿಯನ್ನು ಬಿಸಿ ಮಾಡುತ್ತಾನೆ.

d) ಭೂಗೋಳ ಬಿಸಿಯಾಗುವುದಕ್ಕೆ ಪ್ರಾಣ ವಾಯುವು (ಆಕ್ಸಿಜನ್)ನಿಂದ ಸಂಬಂಧವಿದೆ.

2. ಪಟ್ಟಿ-2ರಲ್ಲಿ ಅತ್ಯಧಿಕ ಉಷ್ಣೋಗ್ರತೆಗೆ, ಪಟ್ಟಿ-1 ರಲ್ಲಿ ಅತಿ ಕಡಿಮೆ ಉಷ್ಣೋಗ್ರತೆಗೆ ಎಷ್ಟು ವ್ಯತ್ಯಾಸವಿದೆ ?

3. ಡಿಸೆಂಬರ್ 6 ರಿಂದ ಬೆಳಿಗ್ಗೆ 10 ಗಂಟೆಗಳಿಗೆ ಮಾಸ್ಕೋದಲ್ಲಿ ಉಷ್ಣೋಗ್ರತೆ –8°C ಎಂದು ಕೊಳ್ಳೋಣ. ಇಪ್ಪತ್ತು ನಾಲ್ಕು ಗಂಟೆಗಳ ನಂತರ ಉಷ್ಣೋಗ್ರತೆ 12°C ಹೆಚ್ಚು ಇದೆ. ಡಿಸೆಂಬರ್ 7 ರಂದು ಬೆಳಿಗ್ಗೆ 10 ಗಂಟೆಗಳಿಗೆ ಅಲ್ಲಿಯ ಉಷ್ಣೋಗ್ರತೆ ಎಷ್ಟು ?

4. ದೆಹಲಿ, ಮುಂಬೈ ಬಯಲು ಪ್ರದೇಶದಲ್ಲಿ ಇವೆ. ಸಮುದ್ರ ಮಟ್ಟದಿಂದ ಅವುಗಳ ಎತ್ತರ 300 ಮೀಟರ್‌ಗಳ ಒಳಗೆ ಇರುತ್ತದೆ. ಅವುಗಳ ಮಾಸಿಕ ಸರಾಸರಿ ಉಷ್ಣೋಗ್ರತೆಗಳಲ್ಲಿ ಅಷ್ಟು ವ್ಯತ್ಯಾಸ ಏಕೆ ಇದೆ ? ಈ ಎರಡು ನಗರಗಳಲ್ಲಿ ಯಾವ ತಿಂಗಳಲ್ಲಿ ಸರಾಸರಿ ಉಷ್ಣೋಗ್ರತೆಗಳು ಸುಮಾರು ಒಂದೇ ಆಗಿರುತ್ತವೆ ? ಅವುಗಳಿಗೆ ಕಾರಣಗಳು ವಿವರಿಸಿರಿ.

5. ಜೋಧ್‌ಪುರ್‌ನಲ್ಲಿ ಮಾಸಿಕ ಸರಾಸರಿ ಗರಿಷ್ಠ, ಕನಿಷ್ಠ ಉಷ್ಣೋಗ್ರತೆಗಳು ಕೆಳಗಿನ ಪಟ್ಟಿಯಲ್ಲಿವೆ. ಇವುಗಳಿಂದ ರೇಖಾ ಚಿತ್ರಪಟ ಬಿಡಿಸಿ. ವರ್ಷದಲ್ಲಿ ಬಹಳ ಬಿಸಿಯಾಗಿ, ಬಹಳ ತಂಪಾಗಿರುವ ತಿಂಗಳುಗಳು ಯಾವುವು ?

ಜೋಧ್‌ಪುರ್ , (ರಾಜಸ್ಥಾನ್)ನಲ್ಲಿ ಮಾಸಿಕ ಸರಾಸರಿ ಗರಿಷ್ಠ, ಕನಿಷ್ಠ ಉಷ್ಣೋಗ್ರತೆಗಳು (°C)

| ತಿಂಗಳು | ಜನ | ಫೆಬ್ರ | ಮಾರ್ಚ್ | ಏಪ್ರೀ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆ | ಅಕ್ಟೋ | ನವ | ಡಿಸೆ |
|---|---|---|---|---|---|---|---|---|---|---|---|---|
| ಕನಿಷ್ಠ | 9 | 12 | 17 | 22 | 27 | 29 | 27 | 25 | 24 | 20 | 14 | 11 |
| ಗರಿಷ್ಠ | 25 | 28 | 33 | 38 | 42 | 40 | 36 | 33 | 35 | 36 | 31 | 27 |

6. A, B, C ಎನ್ನುವ ಮೂರು ಪ್ರದೇಶಗಳ ಸರಾಸರಿ ಗರಿಷ್ಠ, ಉಷ್ಣೋಗ್ರತೆಗಳು ಕೆಳಗಿನ ಪಟ್ಟಿಯಲ್ಲಿವೆ. ಅವುಗಳ ರೇಖಾ ಚಿತ್ರಪಟ ತಯಾರು ಮಾಡಿರಿ. ಪಟ್ಟಿ, ರೇಖಾಚಿತ್ರಪಟಗಳು ನೋಡಿ ಆ ಪ್ರದೇಶಗಳ ಕುರಿತು ನೀವು ಏನನ್ನು ಊಹಿಸಬಲ್ಲಿರಿ.

| ತಿಂಗಳು | ಜನ | ಫೆಬ್ರ | ಮಾರ್ಚ್ | ಏಪ್ರೀ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆ | ಅಕ್ಟೋ | ನವ | ಡಿಸೆ |
|---|---|---|---|---|---|---|---|---|---|---|---|---|
| A | 23 | 26 | 33 | 38 | 41 | 39 | 34 | 33 | 33 | 33 | 29 | 25 |
| B | -3 | 1 | 6 | 12 | 17 | 21 | 25 | 24 | 21 | 14 | 8 | 2 |
| C | 31 | 32 | 33 | 32 | 32 | 29 | 29 | 29 | 30 | 30 | 30 | 31 |

SCERT TELANGANA

7. ಜನವರಿಯಲ್ಲಿ ಸಿಮ್ಲಾ, ತಿರುವನಂತಪುರಂಗಳ ಸರಾಸರಿ ಉಷ್ಣೋಗ್ರತೆಗಳಲ್ಲಿ ವ್ಯತ್ಯಾಸಗಳಿಗೆ ಮೂರು ಕಾರಣಗಳನ್ನು ನೀಡಿರಿ, (ಅಟ್ಲಾಸ್ ನೋಡಿರಿ)

8. ಭೂಪಾಲ್, ದೆಹಲಿ, ಮುಂಬೈ ಸಿಮ್ಲಾಗಳಲ್ಲಿ ಯಾವ ಎರಡು ಪ್ರದೇಶಗಳಲ್ಲಿ ಒಂದೇ ವಿಧವಾದ ಉಷ್ಣೋಗ್ರತೆ ಮಾದರಿಯನ್ನು ಹೊಂದಿರುತ್ತವೆ ? ಈ ಎರಡು ಪ್ರದೇಶಗಳ ನಡುವೆ ಹೋಲಿಕೆಗಳಿಗೆ ಕಾರಣಗಳು ವಿವರಿಸಿರಿ.

9. ಕೆಳಗೆ ಇರುವ ರೇಖಾಚಿತ್ರಪಟವನ್ನು ನೋಡಿ ಕೆಳಗಿನ ಪ್ರಶ್ನೆಗಳಿಗೆ ಉತ್ತರವನ್ನು ನೀಡಿರಿ.




ಬೆಂಗಳೂರಿನ ಉಷ್ಣೋಗ್ರತೆಯನ್ನು ತೋರಿಸುವ ನಕ್ಷೆ

a) ಜುಲೈನಲ್ಲಿ ಸರಾಸರಿ ಗರಿಷ್ಠ ಉಷ್ಣೋಗ್ರತೆ ಎಷ್ಟು ?

b) ಡಿಸೆಂಬರ್ ತಿಂಗಳಲ್ಲಿ ಸಾಮಾನ್ಯವಾಗಿ ಎಷ್ಟು ಬಿಸಿಯಾಗಿರುತ್ತದೆ ?

c) ಜೂನ್ ತಿಂಗಳಲ್ಲಿ ಸಾಮಾನ್ಯವಾಗಿ ಎಷ್ಟು ಚಳಿಯಾಗಿರುತ್ತದೆ ?

d) ಹಗಲು, ರಾತ್ರಿ, ಉಷ್ಣೋಗ್ರತೆಗಳಲ್ಲಿ ವ್ಯತ್ಯಾಸ ಮೇ ತಿಂಗಳಲ್ಲಿಹೆಚ್ಚಾಗಿರುತ್ತದಾ ಇಲ್ಲವೇ ಆಗಸ್ಟ್‌ನಲ್ಲಾ ?

e) ಬೇಸಿಗೆ ತಿಂಗಳುಗಳು ಯಾವುವು ?

10. ನಿತಿನ್ ಥರ್ಮಾಲ್ ವಿದ್ಯುತ್ ಉತ್ತಮವಾದದ್ದು ಎನ್ನುತ್ತಿದ್ದಾನೆ. ಆದರೆ ಪದ್ಮ ಸೌರ ವಿದ್ಯುತ್ ಉತ್ತಮವೆಂದು ಎನ್ನುತ್ತಿದ್ದಾಳೆ. ಇವರಲ್ಲಿ ಯಾರನ್ನು ಬೆಂಬಲಿಸುತ್ತೀಯಾ ? ಏಕೆ ?

11. 27ನೇ ಪುಟದಲ್ಲಿನ 'ಎತ್ತರ – ಉಷ್ಣೋಗ್ರತೆ ' ಅಂಶವನ್ನು ಓದಿ ವ್ಯಾಖ್ಯಾನಿಸಿರಿ.

ಚರ್ಚೆ : ಸೂರ್ಯನು ಜೀವಜಗತ್ತಿನ ಮೂಲಭೂತ ಶಕ್ತಿ ಸಂಪನ್ಮೂಲ. ಗಿಡಗಳು ಸೂರ್ಯಕಿರಣವನ್ನು ಆಹಾರವನ್ನಾಗಿ ಬದಲಾಯಿಸುವ ಕಾರ್ಖಾನೆಗಳು. ಅಂತಹ ಗಿಡಗಳನ್ನು, ಅರಣ್ಯವನ್ನು ನಾವು ಬೆಳೆಸುತ್ತಿದ್ದೇವೆಯೇ? ಕಡಿತಗೊಳಿಸುತ್ತಿದ್ದೇವೆಯೇ ? ಗಿಡಗಳಿಂದಾಗುವ ಪ್ರಯೋಜನೆಗಳು, ಮರವನ್ನು ಬೆಳೆಸುವಲ್ಲಿ ನಮ್ಮ ಕರ್ತವ್ಯಗಳ ಬಗ್ಗೆ ಚರ್ಚಿಸಿರಿ.

ಪ್ರಾಜೆಕ್ಟ್ : ನಿಮ್ಮ ಗ್ರಾಮ/ಪ್ರಾಂತದಲ್ಲಿನ ಕೆಲವು ಕುಟುಂಬಗಳನ್ನು ಪರಿಶೀಲಿಸಿ ಕೆಳಗಿನ ಪಟ್ಟಿಯನ್ನು ಪೂರ್ಣಗೊಳಿಸಿ.

| ಕ್ರ. | ಕುಟುಂಬ | ಬಳಸುತ್ತಿರುವ ವಿದ್ಯುತ್ | ಬಲ್ಬಿನ ವಿಧಗಳು | | | ವಿದ್ಯುತ್ ಬಿಲ್ಲು |
|---|---|---|---|---|---|---|
| ಸಂ. | ಯಜಮಾನನ ಹೆಸರು | ಬಲ್ಬುಗಳ ಸಂಖ್ಯೆ | ಬಲ್ಬ | ಟ್ಯೂಬು | ಸಿ.ಎಫ್.ಎಲ್. | ರೂ.ಗಳಲ್ಲಿ |
| | | | | | | |

ವಿದ್ಯುತ್ ಉಳಿತಾಯ ಮಾಡುವ ವಿಧಾನಗಳ ಮೇಲೆ ಕುಟುಂಬಗಳನ್ನು ಚೈತನ್ಯಗೊಳಿಸಿ 3 ತಿಂಗಳ ನಂತರ, ಪುನಃ ಸರ್ವೆಮಾಡಿಸಿ. ವಿದ್ಯುತ್ ಬಿಲ್ಲಿನಲ್ಲಿ ಆದ ವ್ಯತ್ಯಾಸಗಳನ್ನು ಹೋಲಿಸಿರಿ.

SCERT TELANGANA

ಪಾಠ 3

# ಭೂಚಲನೆಗಳು - ಋತುಗಳು

## ಬದಲಾಗುತ್ತಿರುವ ಕಾಲಗಳು (Changing Seasons)

ಅನೇಕ ಗಿಡಗಳು, ಪ್ರಾಣಿಗಳೊಂದಿಗೆ ಬೆರೆತು ಮನುಷ್ಯರು ಸಹಜೀವನ ಮಾಡುತ್ತಿದ್ದಾರೆ. ಕಾಲ ಕಳೆಯುತ್ತಿರುವ ಕ್ರಮದಲ್ಲಿ ನಮ್ಮ ಪರಿಸರಗಳಲ್ಲಿ ನಿರಂತರ ಬದಲಾವಣೆಗಳು ಗಮನಿಸುತ್ತಾ ಇರುತ್ತೇವೆ. ಗಿಡಗಳು, ಮರಗಳು ಹೂ ಮತ್ತು ಹಣ್ಣುಗಳನ್ನು ಬೀಡುತ್ತವೆ. ಪ್ರಾಣಿಗಳ ಪ್ರವರ್ತನೆಗಳಲ್ಲಿ ಬದಲಾವಣೆ ಇರುತ್ತದೆ. ತಿಂಗಳುಗಳು ಕಳೆಯುತ್ತಿದ್ದಂತೆ ಕೆಲವು ಗಿಡಗಳ ಎಲೆಗಳನ್ನು ಉದುರಿಸುವುದು ಗಮನಿಸಿರುತ್ತೀರಾ, ಕೆಲವು ಕಾಲ ಬೋಳಾಗಿದ್ದು, ಹೊಸ ಚಿಗುರು ಹುಟ್ಟುತ್ತದೆ. ಪುನಃ ಹೂ , ಹಣ್ಣು ಬಿಡುತ್ತವೆ. ಅದೇ ವಿಧವಾಗಿ ವರ್ಷದಲ್ಲಿ ವಿವಿಧ ಕಾಲಗಳಲ್ಲಿ ಬೇರೆ ಬೇರೆ ವಿಧದ ಹಣ್ಣು, ತರಕಾರಿಗಳು ಬರುವುದು ಗಮನಿಸಿರುತ್ತೀರಿ. ಕೆಲವು ತಿಂಗಳಲ್ಲಿ ಬಹಳ ಬಿಸಿಯಾಗಿರುತ್ತದೆ. ಮತ್ತೆ ಕೆಲವು ತಿಂಗಳಲ್ಲಿ ಬಹಳ ಚಳಿಯಾಗಿ ಇಲ್ಲವೇ ಮಳೆ ಬೀಳುತ್ತಾ ಇರುತ್ತದೆ.

- ನೀವು ಗಮನಿಸಿದ ಮುಖ್ಯವಾದ ಕಾಲಗಳು ಸಂಬಂಧಗಳು ಹೋಲಿಸಿರಿ.
- ಪ್ರತಿ ಕಾಲದಲ್ಲಿ ಏನು ನಡೆಯುತ್ತದೋ ವಿವರಿಸಿರಿ. ಎಷ್ಟು ಬಿಸಿಯಾಗುತ್ತದೆ, ಎಷ್ಟು ಮಳೆ ಬೀಳುತ್ತದೆ. ಗಿಡಗಳು, ಮರಗಳು, ಪ್ರಾಣಿಗಳಿಗೆ ಏನಾಗುತ್ತದೆ. ತಿನ್ನಲು ಏನು ಆಹಾರ ದೊರೆಯುತ್ತದೆ.
- ಕಾಲುಗಳು ಭಿನ್ನವಾಗಿರುವ ದೂರ ಪ್ರಾಂತಗಳಿಂದ ಬಂದವರು ಯಾರಾದರೂ ನಿಮ್ಮ ತರಗತಿಯಲ್ಲಿ ಇರುವರೇನೋ ತಿಳಿದುಕೊಳ್ಳಿ. ಅಲ್ಲಿ ಏನು ನಡೆಯುತ್ತದೋ ಅವರನ್ನು ವಿವರಿಸಿರೆಂದು ಹೇಳಿರಿ.

ಭಾರತ ಉಪಖಂಡದಲ್ಲಿ ಬಹುಮಟ್ಟಿಗೆ ಬೇಸಿಗೆ, ಮಳೆಗಾಲ ಮತ್ತು ಚಳಿಗಾಲ ಇರುತ್ತವೆ. ದಕ್ಷಿಣದಲ್ಲಿನ ತಮಿಳುನಾಡು, ಕೇರಳ, ಅಂಡಮಾನ್‌ಗಳಲ್ಲಿ ಚಳಿಗಾಲದಲ್ಲಿ ಚಳಿ ಅಧಿಕವಾಗಿರುವುದಿಲ್ಲ. ಹಾಗೆಯೇ ಈಶಾನ್ಯ ರಾಜ್ಯಗಳಲ್ಲಿ ಬೇಸಿಗೆಯಲ್ಲಿ ಅಧಿಕ ಬಿಸಿ ಇರುವುದಿಲ್ಲ. ಆದರೆ ಉತ್ತರ ಭಾರತದಲ್ಲಿ ಅಧಿಕ ಭಾಗ ಈ ಮೂರು ಕಾಲದಲ್ಲಿ ಬೇಸಿಗೆಯಲ್ಲಿ ಅಧಿಕ ಉಷ್ಣೋಗ್ರತೆ, ಚಳಿಗಾಲದಲ್ಲಿ ಚಳಿ, ಮಳೆಗಾಲದಲ್ಲಿ ಮಳೆ, ಋತು ಪವನಗಳು ಇರುತ್ತವೆ.

ಪ್ರಾಚೀನ ಸಂಸ್ಕೃತಿ ಸಾಹಿತ್ಯವು ಒಂದು ವರ್ಷವನ್ನು ಪ್ರಧಾನ 3 ಕಾಲಗಳಲ್ಲಿ, ಪ್ರತಿ ಎರಡು ಕಾಲಗಳ ನಡುವೆ ಒಂದು ಕಾಲವನ್ನು ಜೋಡಿಸುತ್ತಾ ಒಟ್ಟು 6 ಕಾಲಗಳಾಗಿ ವಿಭಜಿಸಿದೆ. ಇವುಗಳನ್ನು ಗ್ರೀಷ್ಮ, ವರ್ಷ, ಶರತ್, ಹೇಮಂತ, ಶಿಶಿರ ಋತುಗಳೆಂದು ಕರೆಯುತ್ತಾರೆ. ಪ್ರತಿ ಋತುವು ಕೆಲವು ಕೃಷಿ ಕಾರ್ಯಗಳು, ಹಬ್ಬಗಳೊಂದಿಗೆ ಸಂಬಂಧ ಹೊಂದಿರುತ್ತದೆ. ಮರಗಳು ಹೊಸ ಚಿಗುರನ್ನು ಹಾಕಿ, ಬೆಳೆ ಮನೆಗೆ ಬರುವ ವೇಳೆ ಚಳಿಗಾ

*ಚಿತ್ರ 3.1: ವಿವಿಧ ಕಾಲಗಳಲ್ಲಿ ಲಾನ್ಸ್ಟರ್ (ಅಮೇರಿಕಾ ಸಂಯುಕ್ತ ರಾಷ್ಟ್ರಗಳು) ನಲ್ಲಿನ ಒಂದು ವೃಕ್ಷ*



ಲ ಮುಗಿದು ವಸಂತ ಋತು ಬರುತ್ತದೆ. ಈ ಋತುವಿನಲ್ಲಿ ಭಾರತದೇಶದಲ್ಲಿ ಅನೇಕರು ಹೊಸವರ್ಷವನ್ನು ಸ್ವಾಗತಿಸುತ್ತಾ ವಸಂತ ಪಂಚಮಿ, ಹೋಲಿ, ಯುಗಾದಿ, ಗುಡಿಪಾಡ್ವಾ, ವಿಷ್ಣು ಬಿಹು, ಬೈಸಾಕಿ ಮತ್ತು ಪುಲ್‌ನಂದು ಹಬ್ಬಗಳನ್ನು ಆಚರಿಸುತ್ತಾರೆ. ಭಾರತದ ಅನೇಕ ಕಡೆಗಳಲ್ಲಿ ಗ್ರೀಷ್ಮ ಋತುವಿನಲ್ಲಿ ಅಧಿಕ ಉಷ್ಣೋಗ್ರತೆ ಇರುತ್ತದೆ. ಮಳೆಗಾಲದಲ್ಲಿ ಮಳೆ ಬೀಳುವುದರೊಂದಿಗೆ ಕೃಷಿ ಕೆಲಸಗಳು ಪ್ರಾರಂಭವಾಗುತ್ತವೆ. ಶರದೃತುವಿನಲ್ಲಿ ನಿರ್ಮಲಾಕಾಶವಿದ್ದು ಮಳೆಗಾಲದ ಬೆಳೆ ಸಿದ್ದವಾಗಿರುತ್ತದೆ. ಈ ಋತುಗಳಲ್ಲಿ ದಸರಾ, ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ. ಈ ಋತುವಿನ ನಂತರ ದೇಶಾದ್ಯಂತ ಅಹ್ಲಾದಕರ ವಾತಾವರಣವಿರುವ ಹೇಮಂತ ಋತು ಆರಂಭವಾಗುತ್ತದೆ. ನಂತರದ ಶಿಶಿರ ಋತುವಿನಲ್ಲಿ ಅಧಿಕ ಚಳಿ ಇರುವ ಕಾಲ ಅದಾಗಿರುತ್ತದೆ. ಹಿಮಾಲಯ ಪರ್ವತಗಳಲ್ಲಿ ಅಧಿಕವಾಗಿ ಹಿಮ ಬೀಳುವ ಕಾಲವಿದು. ಲೋಹಿರಿ, ಪೊಂಗಲ್ ಮತ್ತು ಮಕರ ಸಂಕ್ರಾಂತಿಯಂತಹ ಹಬ್ಬಗಳು ಈ ಋತುವಿನಲ್ಲಿ ಆಚರಿಸುತ್ತಾರೆ.

ಕೆಳಗೆ ಕೊಟ್ಟಿರುವ ಚಿತ್ರ (3.1) ನ್ನು ಜಾಗರೂಕತೆಯಿಂದ ಗಮನಿಸಿರಿ.

- ಚಿತ್ರಗಳಲ್ಲಿ ಇರುವುದು ಒಂದೇ ಮರವಾ ಇಲ್ಲವೇ ಬೇರೆ ಬೇರೆ ಮರಗಳಾ ?
- ಈ ಮರಗಳಲ್ಲಿ ಯಾವ ವ್ಯತ್ಯಾಸಗಳು ಗಮನಿಸಿದ್ದೀರಿ?

ಮೊದಲನೇ ಚಿತ್ರದಲ್ಲಿ ವೃಕ್ಷ, ಪರಿಸರಗಳು ಮಂಜಿನಿಂದ ಮುಚ್ಚಿವೆ. ಮೂರನೇ ಚಿತ್ರದಲ್ಲಿ ಮಂಜು ಇಲ್ಲ. ಅದೇ ಮರ ಹೊಸ ಚಿಗುರುತ್ತಾ ಇದೆ.

ಎರಡನೇ ಚಿತ್ರದಲ್ಲಿ ಅದೇ ವೃಕ್ಷ ಪೂರ್ಣವಾಗಿ ಬೆಳೆದ ಎಲೆಗಳಿಂದ ಇದೆ. ಕೊನೆಯ ಚಿತ್ರದಲ್ಲಿಯೂ ಸಹ ಅದೇ ವೃಕ್ಷ ಇದೆ. ಅದರ ಎಲೆಗಳು ಕೆಂಪಾಗಿ ಪಕ್ವವಾಗಿ ಉದುರುತ್ತಿವೆ. ಈ ಬದಲಾವಣೆಗಳು ಏಕೆ ನಡೆಯುತ್ತಿವೆಯೋ ನಿಮಗೆ ಗೊತ್ತಾ ? ಹೌದು, ಕಾಲಗಳಿಂದಲೇ ಈ ಬದಲಾವಣೆಗಳು ಸಂಭವಿಸುತ್ತಿವೆ.

ನಿಮ್ಮ ಪರಿಸರಗಳು ಮಂಜಿನಿಂದ ಮುಚ್ಚಿರುವುದು ಎಂದಾದರೂ ನೋಡಿದ್ದೀರಾ ? ನೀರಿನಿಂದ ತುಂಬಿರುವುದು ನೋಡಿರುತ್ತೀರಾಗಲೀ ಮಂಜಿನಿಂದ ಮುಚ್ಚಿರುವುದು ನೀವು ನೋಡಿರುವುದಿಲ್ಲ. ನಮ್ಮ ಭೂಮಿಯ ಮೇಲೆ ಸ್ವಲ್ಪ ಪ್ರಾಂತದಲ್ಲಿ ಬಹಳ ಚಳಿಯಾಗಿ ಇದ್ದು ಮಳೆಗೆ ಬದಲಾಗಿ ಮಂಜು ಬೀಳುತ್ತದೆ. ನೀವು ನೋಡಿದ ವೃಕ್ಷದ ಚಿತ್ರ ಅಮೇರಿಕಾದಲ್ಲಿಯ ಓಹಿಯೋನಲ್ಲಿಯದು. ಉತ್ತರ ಪ್ರಾಂತದ ದೇಶಗಳಲ್ಲಿ ಚಳಿಗಾಲದಲ್ಲಿ ಮಂಜು ಬಹಳ ಬೀಳುತ್ತದೆ. ಅಲ್ಲಿ ಬೇಸಿಗೆಯಲ್ಲಿ ಬಹಳ ತಂಪಾಗಿ ಇರುವುದಿಲ್ಲವಾಗಲಿ ನಮ್ಮ ದೇಶದೊಳಗಿಂತ ತಂಪಾಗಿಯೋ ಇರುತ್ತದೆ. ಆದರೆ ತಮಾಷೆಯಾದ ವಿಷಯ ಏನೆಂದರೆ ಆದೇಶಗಳಲ್ಲಿ ಹಗಲಿನ ಅವಧಿ ಬಹಳ ಹೆಚ್ಚಾಗಿ ಇರುತ್ತದೆ – ಎಷ್ಟು ಹೆಚ್ಚು ಎಂದರೆ ಅರ್ಧರಾತ್ರಿ ಸಮಯದಲ್ಲೂ ಸಹ ಸೂರ್ಯನು ಕಾಣಿಸುತ್ತಾನೆ !

'ಅರ್ಧ ರಾತ್ರಿ ಸೂರ್ಯನ ಉದಯಿಸುವ ದೇಶ' ಎಂದು ಯಾವ ದೇಶವನ್ನು ಕರೆಯುವರೋ ತಿಳಿದುಕೊಂಡು ಅದನ್ನು ಗ್ಲೋಬ್ ಮೇಲೆ ಗುರ್ತಿಸಿರಿ. ಅದರ ಅಕ್ಷಾಂಶ ತಿಳಿದುಕೊಂಡು ತೆಲಂಗಾಣ ಅಕ್ಷಾಂಶದೊಂದಿಗೆ ಹೋಲಿಸಿರಿ.

ಗ್ಲೋಬಿನ ಮೇಲೆ ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ, ಚಿಲಿ ದೇಶಗಳನ್ನು ಗುರ್ತಿಸಿರಿ. ಇವು ಭೂಮಧ್ಯ ರೇಖೆಗೆ ದಕ್ಷಿಣಕ್ಕೆ ಇರುತ್ತವೆ. ಆದ್ದರಿಂದ ಇವನ್ನು ದಕ್ಷಿಣಾದಿ ಖಂಡಗಳಲ್ಲಿನ ದೇಶ ಎಂದು ಕರೆಯುವರು. ಈ ದೇಶಗಳಲ್ಲಿ ಕಾಲಗಳ ಚಕ್ರ ವಿಭಿನ್ನವಾಗಿರುತ್ತದೆ. ನಮಗೆ ಬೇಸಿಗೆ ಇದ್ದಾಗ ಅವರಿಗೆ ಚಳಿಗಾಲ, ನಮಗೆ ಚಳಿಗಾಲ ಇದ್ದಾಗ ಅವರಿಗೆ ಬೇಸಿಗೆ ಕಾಲ ಇರುತ್ತದೆ ಭೂಮಧ್ಯ ರೇಖೆಗೆ ದಕ್ಷಿಣಕ್ಕೆ ಇರುವ ಎಲ್ಲಾ ಪ್ರಾಂತಗಳಲ್ಲೂ ಹೀಗೆಯೇ ಇರುತ್ತದೆ.

- ಗ್ಲೋಬ್‌ನ್ನು ನೋಡಿ, ಭೂಮಧ್ಯರೇಖೆಗೆ ದಕ್ಷಿಣಕ್ಕೆ ಇರುವ ದೇಶಗಳನ್ನು ಗುರ್ತಿಸಿರಿ.

ಏಷಿಯಾ : ...................................................

ಆಫ್ರಿಕಾ : ...................................................

ಯೂರೋಪ್ : ...............................................

ಉತ್ತರ ಅಮೆರಿಕಾ : ......................................

ದಕ್ಷಿಣ ಅಮೆರಿಕಾ : .....................................

ಆಸ್ಟ್ರೇಲಿಯಾ : ............................................

- ಭೂಮಧ್ಯ ರೇಖೆಗೆ ಸಂಪೂರ್ಣವಾಗಿ ಉತ್ತರಕ್ಕೆ ಇರುವ ಖಂಡ ಯಾವುದಾದರೂ ನಿಮಗೆ ಕಾಣಿಸಿದೆಯಾ ?
- ಭೂಮಧ್ಯ ರೇಖೆಗೆ ಸಂಪೂರ್ಣವಾಗಿ ದಕ್ಷಿಣಕ್ಕೆ ಇರುವ ಖಂಡ ಯಾವುದಾದರೂ ನಿಮಗೆ ಕಾಣಿಸಿದೆಯಾ?
- ಭೂಮಧ್ಯ ರೇಖೆಗೆ ಉತ್ತರಕ್ಕೆ, ದಕ್ಷಿಣಕ್ಕೆ ವಿಸ್ತರಿಸಿದ ಖಂಡ ಯಾವುದಾದರೂ ನಿಮಗೆ ಕಾಣಿಸಿದೆಯಾ ?
- ಕಾಲಗಳ ಮಾಯಾಜಾಲಕ್ಕೆ ಸಂಬಂಧಿಸಿದಂತೆ ಪ್ರತಿಯೊಬ್ಬರು ಮೂರು ಪ್ರಶ್ನೆಗಳನ್ನು ಬರೆಯಿರಿ. ಅವುಗಳಿಗೆ ಉತ್ತರಗಳು ಕಂಡುಕೊಳ್ಳಲು ಪ್ರಯತ್ನಿಸೋಣ.



SCERT TELANGANA

ಇಂತಹ ಪ್ರಶ್ನೆಗಳು ಇರುವುದು ನಿಮಗೆ ಮಾತ್ರ ಅಲ್ಲ. ಸಾವಿರಾರು ವರ್ಷಗಳಿಂದ ಮನುಷ್ಯರು ಈ ವಿಷಯಗಳ ಮೇಲೆ ಪರಿಶೋಧನೆಗಳು ಮಾಡಿ ಕ್ರಮೇಣ ಉತ್ತರಗಳನ್ನು ಕಂಡು ಹಿಡಿದರು. ಕಾಲಗಳು ಹೇಗೆ ಸಂಭವಿಸುತ್ತಾ ಇವೆಯೇ, ಕೆಲವು ಪ್ರಾಂತಗಳು ಬೆಚ್ಚಗೆಯಾಗಿ, ಕೆಲವು ಪ್ರಾಂತಗಳು ತಂಪಾಗಿ ಏಕೆ ಇವೆಯೋ, ಉತ್ತರ, ದಕ್ಷಿಣಾರ್ಧಗೋಳಗಳಲ್ಲಿ ಕಾಲಗಳು ವಿರುದ್ಧವಾಗಿ ಏಕೆ ಇವೆಯೋ ಎಂದು ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ.

### ಕಾಲಗಳ ಕ್ರಮವನ್ನು ಪ್ರಭಾವಗೊಳಿಸುವ ಅಂಶಗಳು

ಇವನ್ನು ಅರ್ಥಮಾಡಿಕೊಳ್ಳಲು ಅನೇಕ ಅಂಶಗಳ ನಡುವೆ ಇರುವ ಸಂಕೀರ್ಣ ಸಂಬಂಧಗಳನ್ನು ಅರ್ಥಮಾಡಿಕೊಳ್ಳಬೇಕು. ಇವು :

1) ಭೂಮಿ ಚಂಡಿನಂತೆ ಗೋಳಾಕಾರದಲ್ಲಿರುವುದು, ಅದರ ಮೇಲ್ಮೈ ಬಾಗಿರುವುದು.
2) ಭೂಮಿ ತನ್ನ ಅಕ್ಷದ ಮೇಲೆ ದಿನಕ್ಕೆ ಒಂದು ಸಲ ತನ್ನ ಸುತ್ತಲೂ ತಾನು ತಿರುಗುವುದು (ಭೂಭ್ರಮಣ).
3) ಸೂರ್ಯನ ಸುತ್ತಲೂ ಭೂಮಿ ಸುತ್ತುವ ಕಾಲದೊಂದಿಗೆ ಹೋಲಿಸಿದರೆ ತನ್ನ ಸುತ್ತಲೂ ತಾನು ಸುತ್ತುವ ಅಕ್ಷ ಬಾಗಿರುವಿಕೆ.
4) ಇದರ ಕುರಿತು ಒಂದು ವರ್ಷ ಅವಧಿಯಲ್ಲಿ ಸೂರ್ಯನ ಸುತ್ತಲೂ ಭೂಮಿ ಸುತ್ತುವುದು (ಭೂ ಪರಿಭ್ರಮಣ).

### 1. ಭೂಮಿಯ ಮೇಲ್ಮೈ ಬಾಗಿ ಇರುವುದು (Curvature of the Earth) :

ಭೂಮಿ ಗೋಳಾಕಾರದಲ್ಲಿ ಇರುವುದರಿಂದ ಬೇರೆ ಬೇರೆ ಪ್ರಾಂತಗಳಲ್ಲಿ ಬಿಸಿಯಾಗುವಿಕೆಯಲ್ಲಿ ವ್ಯತ್ಯಾಸಗಳುಇವೆ ಎಂದು ನೀವು ಹಿಂದಿನ ಪಾಠಗಳಲ್ಲಿ ತಿಳಿದುಕೊಂಡಿದ್ದೀರ. ಧೃವಗಳೊಂದಿಗೆ ಹೋಲಿಸಿದರೆ ಭೂಮಧ್ಯ ರೇಖೆಗೆ ಹತ್ತಿರವಾಗಿರುವ ಪ್ರಾಂತಗಳು ಬಹಳ ಬಿಸಿ ಏರುತ್ತವೆಂದು ನೀವು ತಿಳಿದುಕೊಂಡಿದ್ದೀರ.

### 2. ಭೂಮಿ ಅಕ್ಷದ ಮೇಲೆ ತನ್ನ ಸುತ್ತಲೂ ತಾನು ಸುತ್ತವುದು (Earth's Rotation on its Axis)

ಬುಗುರಿ ಸುತ್ತಿದಂತೆಯೇ ಭೂಮಿ ಸಹ ತನ್ನ ಸುತ್ತಲೂ ತಾನು ಗಿರಗಿರಾ ಸುತ್ತುತ್ತದೆ. ಅದು ಹಾಗೆ ಯಾವುದರ ಮೇಲೆ ಸುತ್ತತ್ತಿದೆ ? ಉತ್ತರ, ದಕ್ಷಿಣ ಧೃವಗಳನ್ನು ಸೇರಿಸುವ ಊಹಾ ರೇಖೆಯ ಮೇಲೆ ಸುತ್ತತ್ತಿದೆ. ಈ ರೇಖೆಯನ್ನೇ ಅಕ್ಷ ಎಂದು ಕರೆಯುವರು. ಭೂಮಿಯ ಮೇಲಿನ ಎಲ್ಲಾ ಪ್ರಾಂತಗಳು ಈ ರೇಖೆಯ ಮೂಲಕ ದಿನಕ್ಕೆ ಒಂದು ಬಾರಿ ಹಾದು ಹೋಗುತ್ತವೆ. ಇನ್ನೊಂದು ವಿಧವಾಗಿ ಹೇಳಬೇಕೆಂದರೆ ತನ್ನ ಅಕ್ಷದ ಮೇಲೆ ನಾವು ಒಂದು ಬಾರಿ ಸುತ್ತಿ ಬರಲು ಭೂಮಿಗೆ




*ಚಿತ್ರ 3.2: ಭೂಮಿ ಭ್ರಮಣ (ಪಶ್ಚಿಮದಿಂದ ಪೂರ್ವಕ್ಕೆ)*

24 ಗಂಟೆಗಳು ಹಿಡಿಯುತ್ತದೆ. ಅದು ಪಶ್ಚಿಮದಿಂದ ಪೂರ್ವಕ್ಕೆ ಸುತ್ತುತ್ತಿದೆ. ನಿಮ್ಮ ಮುಂದೆ ಗ್ಲೋಬ್ ಇಟ್ಟುಕೊಂಡು ಎಡಗಡೆಯಿಂದ ಬಲಕ್ಕೆ ತಿರುಗಿಸಿದರೆ ಹೇಗೆ ಇರುತ್ತದೋ ಭೂಮಿ ಹಾಗೆ ಸುತ್ತುತ್ತಿರುತ್ತದೆ. ಗ್ಲೋಬಿನಲ್ಲಿ ಪಶ್ಚಿಮ ಭಾಗ ಪೂರ್ವದ ಕಡೆಗೆ ಸುತ್ತುವುದು ನಿಮಗೆ ಕಾಣಿಸುತ್ತದೆ.

ಭೂಮಿ ತನ್ನ ಸುತ್ತಲೂ ತಾನು ಸುತ್ತುತ್ತಿರುವಾಗ ಅದರೊಂದಿಗೆ ಅದರ ಮೇಲಿರುವ ಗಾಳಿ, ಮೋಡಗಳು, ಪಕ್ಷಿಗಳು ಎಲ್ಲವೂ ಸುತ್ತುತ್ತವೆ. ಆದ್ದರಿಂದಲೇ ನಾವು ಬಸ್‌ನಲ್ಲಿಯೇ, ರೈಲಿನಲ್ಲಯೇ ಪ್ರಯಾಣಿಸುವಾಗ ಹೊಂದುವ ಅನುಭವ ಭೂಮಿ ತನ್ನ ಸುತ್ತಲೂ ತಾನು ಸುತ್ತುತ್ತಿರುವಾಗ ಆಗುವುದಿಲ್ಲ.

ಭೂಮಿ ಪಶ್ಚಿಮದ ಕಡೆಯಿಂದ ಪೂರ್ವಕ್ಕೆ ಸುತ್ತುತ್ತಿರುವುದರಿಂದಲೇ ನಮಗೆ ಸೂರ್ಯನು, ಚಂದ್ರನು ನಕ್ಷತ್ರಗಳು ಪೂರ್ವಕ್ಕೆ ಉದಯಿಸಿ, ಪಶ್ಚಿಮಕ್ಕೆ ಅಸ್ತಮಿಸುತ್ತವೆ ಎನ್ನುವ ಕಲ್ಪನೆ ಮೂಡುತ್ತದೆ.

ಭೂಮಿ ತನ್ನ ಸುತ್ತಲೂ ತಾನು ಸುತ್ತುವುದರಿಂದ ಹಗಲು, ರಾತ್ರಿಗಳು ಸಂಭವಿಸುತ್ತವೆ – ಸೂರ್ಯನಿಗೆ ಎದುರಾಗಿರುವ ಭೂ ಭಾಗದಲ್ಲಿ ಹಗಲು ಉಂಟಾಗುತ್ತದೆ. ಸೂರ್ಯನಿಗೆ ಎದುರಾಗಿರುವ ಪ್ರಾಂತ ಬದಲಾಗುತ್ತಾ ಇರುವುದರಿಂದ ಸ್ಥಳೀಯ ಉಷ್ಣೋಗ್ರತೆಗಳು, ಗಾಳಿಗಳ ಚಲನೆಗಳು ಎಷ್ಟೋ ಪ್ರಭಾವಿತವಾಗುತ್ತವೆ.

**ಚಟುವಟಿಕೆ :**

ಗ್ಲೋಬ್‌ನ್ನು ತೆಗೆದುಕೊಂಡು ಸ್ವಲ್ಪ ದೂರದಿಂದ ಅದರ ಮೇಲೆ ಟಾರ್ಚ್ ಲೈಟ್ ಬೆಳಕು ಪ್ರಸರಿಸುವಂತೆ ಮಾಡಿರಿ.

SCERT TELANGANA

ಟಾರ್ಚ್ ಕಾಂತಿಯಿಂದ ಗ್ಲೋಬಿನ ಮೇಲೆ ಅರ್ಧಭಾಗ ಪ್ರಕಾಶವಂತವಾಗುತ್ತದೆ. ಈ ಬೆಳಕಿನ ಮುಂದೆ ಗ್ಲೋಬನ್ನು ಸುತ್ತುತ್ತಾ ಇದ್ದರೂ ಅರ್ಧಭಾಗವೇ ಬೆಳಕು ಇರುತ್ತದೆ.

ಇದೇ ವಿಧವಾಗಿ ಸೂರ್ಯನು ಸಹ ಎಲ್ಲಾ ಸಮಯದಲ್ಲೂ ಭೂಮಿಯ ಅರ್ಧಭಾಗವನ್ನು ಪ್ರಕಾಶಗೊಳಿಸುತ್ತಾನೆ. ಸೂರ್ಯ ಪ್ರಕಾಶಗೊಳಿಸುವ ಗೋಳಾಕಾರ ಅಂಚನ್ನು ಪ್ರಕಾಶ ವೃತ್ತ ಎನ್ನುವರು. ಭೂಮಿಯನ್ನು ಬೆಳಕಿನಲ್ಲಿರುವ ಅರ್ಧ, ಕತ್ತಲಲ್ಲಿರುವ ಅರ್ಧವಾಗಿ ಈ ಮಹಾವೃತ್ತ ವಿಭಜಿಸುತ್ತದೆ.

ಭೂಮಿ ತನ್ನ ಅಕ್ಷದ ಮೇಲೆ ತನ್ನ ಸುತ್ತಲೂ ತಾನು ಸುತ್ತದಿದ್ದರೆ ಏನಾಗುತ್ತದೆ ? ಸೂರ್ಯನ ಕಡೆಗಿರುವ ಭೂ ಭಾಗಕ್ಕೆ ಮಾತ್ರ ಯಾವಾಗಲೂ ಸೂರ್ಯನ ಬೆಳಕು, ಶಾಖ ಲಭಿಸುತ್ತಿರುತ್ತವೆ. ಉಳಿದ ಭಾಗ ಕತ್ತಲೆಯಲ್ಲಿ, ಬಹಳ ತಂಪಾಗಿರುತ್ತದೆ. ಇದರ ಫಲವಾಗಿ ಎರಡು ಪ್ರಾಂತಗಳೂ ಜೀವನಕ್ಕೆ ಅನುಕೂಲವಾಗಿ ಇರುವುದಿಲ್ಲ–ಸೂರ್ಯನ ಕಡೆಗಿರುವ ಭೂಭಾಗ ಬಹಳ ಬಿಸಿಯೇರುತ್ತದೆ. ಕತ್ತಲಲ್ಲಿರುವ ಭೂಭಾಗ ಬಹಳ ತಂಪಾಗುತ್ತದೆ. ಭೂ ಭ್ರಮಣದಿಂದ ಭೂಮಿ ಎಲ್ಲಾ ಪ್ರತಿ ದಿನ ಶಾಖ, ಬೆಳಕು ದೊರೆಯುತ್ತದೆ.

### 3. ಭೂಮಿ 'ಬಾಗಿ' ಇರುವುದು, ಸೂರ್ಯನ ಸುತ್ತಲೂ ಪರಿಭ್ರಮಣ (Earth's 'Tilt' and Revolution Around the Sun) :

ಭೂಮಿ ತನ್ನ ಸುತ್ತಲೂ ತಾನು ಸುತ್ತತ್ತಲೇ ಸೂರ್ಯನ ಸುತ್ತಲೂ ಸಹ ಸುತ್ತುತ್ತದೆ. ಅಂದರೆ ಅದು ಬುಗರಿಯಂತೆ ದುಂಡಾಗಿ ಸುತ್ತತ್ತಲೇ ಮುಂದಕ್ಕೆ ಚಲಿಸುತ್ತಾ ಸೂರ್ಯನ ಸುತ್ತಲೂ ಪ್ರದಕ್ಷಿಣೆ ಮಾಡುತ್ತಿದೆ. ಸೂರ್ಯ ಸುತ್ತಲೂ ಭೂಮಿ ಸುತ್ತುವುದನ್ನು 'ಪರಿಭ್ರಮಣ' ಎನ್ನುತ್ತಾರೆ ಎಂದು ತಿಳಿದುಕೊಂಡಿದ್ದೇವೆ. ಒಂದು ಪರಿಭ್ರಮಣಕ್ಕೆ 365 ದಿನಗಳು 5.56 ಗಂಟೆಗಳು ಹಿಡಿಯುತ್ತದೆ. ಈ ಕಾಲವೇ ಭೂಮಿಯ ಮೇಲೆ ಒಂದು ವರ್ಷ. ಇದು ಭೂಮಿಯ ಮೇಲೆ ಕಾಲಗಳನ್ನು ಹೇಗೆ ಉಂಟುಮಾಡುತ್ತದೆ ?

ಭೂಮಿ ಕೇವಲ ಸೂರ್ಯನ ಸುತ್ತಲೂ ಸುತ್ತುತ್ತಿದ್ದರೆ ಆಯಾ ಪ್ರಾಂತಗಳಲ್ಲಿ ವರ್ಷವೆಲ್ಲಾ ಒಂದೇ ಕಾಲ ಇರುತ್ತಿತ್ತು. ಹೆಚ್ಚು ಬಿಸಿಲು ಬೀಳುವ ಪ್ರಾಂತಕ್ಕೆ ವರ್ಷವೆಲ್ಲಾ ಹೆಚ್ಚು ಬಿಸಿಲು ಬೀಳುತ್ತಾ ಇರುತ್ತಿತ್ತು. ಹಾಗೆಯೇ ತಂಪಾಗಿರುವ ಪ್ರಾಂತಗಳು ತಂಪಾಗಿ ಇರುತ್ತಿದ್ದವು. ಆದರೆ ಹೀಗೆ ನಡೆಯುತ್ತಾ ಇಲ್ಲ. ಭೂಮಿ ಪರಿಭ್ರಮಣದ ಅಕ್ಷ ಬಾಗಿ (ವಾಲುವಿಕೆ) ಇದೆ. ಇದು ವರ್ಷವೆಲ್ಲಾ ಒಂದೇ ದಿಕ್ಕಿಗೆ ಇರುತ್ತದೆ. 'ವಾಲಿರುವ ಅಕ್ಷ' ಎಂದರೇನು ?

ಸೂರ್ಯನ ಸುತ್ತಲೂ ಭೂಮಿ ಒಂದೇ ಸಮಕ್ಷೇತ್ರದಲ್ಲಿ, ಒಂದೇ ದಾರಿಯಲ್ಲಿ ಸುತ್ತುತ್ತಿರುತ್ತದೆ ಇದನ್ನೇ ಕಕ್ಷೆ ಎನ್ನುತ್ತಾರೆ. ಈ ಸಮಕ್ಷೇತ್ರವನ್ನು ಕಕ್ಷೆ ಸಮಕ್ಷೇತ್ರ ಎನ್ನುತ್ತಾರೆ.

ಭೂಮಿ ಪರಿಭ್ರಮಣದ ಅಕ್ಷ ಈ ಸಮಕ್ಷೇತ್ರದ ಮೇಲೆ ಲಂಬವಾಗಿ ಇರುವುದಿಲ್ಲ (ಅಂದರೆ $90^0$ ಕೋನ ಏರ್ಪಡುವುದಿಲ್ಲ), ಅದು ವಾಲಿದ್ದು $66.5^0$ ಕೋನ ಹೊಂದಿರುತ್ತದೆ. ಇನ್ನೊಂದು ಅರ್ಥದಲ್ಲಿ ಹೇಳಬೇಕೆಂದರೆ ಅದು $23.5^0$ ಯಷ್ಟು ವಾಲಿರುತ್ತದೆ ($90^0$-$66.5^0$= $23.5^0$). ಈ ಭಾವನೆಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಕೆಳಗಿನ ಚಿತ್ರಗಳನ್ನು ನೋಡಿರಿ.

ಸೂರ್ಯನ ಸುತ್ತಲೂ ಭೂಮಿ ಸುತ್ತುತ್ತಾ ಇದ್ದಾಗ ವರ್ಷವೆಲ್ಲಾ ಅದರ ಅಕ್ಷ ಒಂದೇ ಕಡೆಗೆ ಬಾಗಿರುತ್ತದೆ. ಅದು ಧ್ರುವ ನಕ್ಷತ್ರದ ದಿಕ್ಕಿಗೆ ತೋರಿಸುತ್ತಾ ಇರುತ್ತದೆ. (ರಾತ್ರಿ




*Fig 3.3: Seasons and the Sun and orbital plane*

SCERT TELANGANA



*ಚಿತ್ರ : 3.4: ಚಂದ್ರನ ಮೇಲಿಂದ ಭೂಮಿಯ ಛಾಯಚಿತ್ರ*

ವೇಳೆಯಲ್ಲಿ ಉತ್ತರಕ್ಕೆ ಧ್ರುವನಕ್ಷತ್ರವನ್ನು ನೋಡಬಹುದು) ಇದನ್ನು ಅಕ್ಷ ಧ್ರುವತ್ವ (ಪೊಲಾರಿಟಿ ಆಫ್ ಆಕ್ಸಿಸ್) ಎನ್ನುತ್ತಾರೆ.

ಈ ವಿಧವಾಗಿ ಸೂರ್ಯನ ಸುತ್ತಲೂ ಭೂಮಿ ಸುತ್ತುತ್ತಿದ್ದರೆ ಏನಾಗುತ್ತದೋ ಕೆಳಗಿನ ಚಿತ್ರಗಳಲ್ಲಿ ನೋಡಬಹುದು. ಕೆಲವು ತಿಂಗಳಲ್ಲಿ (ಜೂನ್) ಉತ್ತರಾರ್ಧಗೋಳ ಸೂರ್ಯನ ದಿಕ್ಕಿನ ಕಡೆಗೆ ಇದ್ದರೆ, ಇನ್ನೂ ಕೆಲವು ತಿಂಗಳಲ್ಲಿ ದಕ್ಷಿಣಾರ್ಧಗೋಳ ಸೂರ್ಯನ ದಿಕ್ಕಿನ ಕಡೆಗೆ ಬಾಗಿರುತ್ತದೆ. ಈ ಕಾರಣವಾಗಿ ಉತ್ತರಾರ್ಧ ಗೋಳದಲ್ಲಿ ಬೇಸಿಗೆ ಇದ್ದಾಗ, ದಕ್ಷಿಣಾರ್ಧಗೋಳದಲ್ಲಿ ಚಳಿಗಾಲ ಆಗುತ್ತದೆ. ಆರು ತಿಂಗಳ ನಂತರ (ಡಿಸೆಂಬರ್‌ನಲ್ಲಿ) ಪರಿಸ್ಥಿತಿ ಬದಲಾಗುತ್ತದೆ.

ವಾಸ್ತವವಾಗಿ ಆಕಾಶದಿಂದ ಭೂಮಿಯನ್ನು ನೋಡಿದಾಗ ನಮಗೆ ಅಕ್ಷವಾಗಲೀ, ವಾಲುವಿಕಯಾಗಲೀ ಕಾಣಿಸುವುದಿಲ್ಲ. ನಮಗೆ ಸೂರ್ಯ, ಚಂದ್ರ ಕಾಣಿಸಿದಂತೆಯೇ ಭೂಮಿ ಸಹ ದುಂಡನೇ ತಟ್ಟೆಯಂತೆ ಕಾಣಿಸುತ್ತದೆ. ಈ ಬಾಗಿರುವುದು ಎನ್ನುವುದು ಊಹಾಜನಿತವಾದ ಅಕ್ಷ ರೇಖೆಯಿಂದ ಇದೆ ಆದ್ದರಿಂದ ಅದು ನಮಗೆ ಕಾಣಿಸುವುದಿಲ್ಲ.

ಉತ್ತರಾರ್ಧಗೋಳದಲ್ಲಿ ಚಳಿಗಾಲ, ದಕ್ಷಿಣಾರ್ಧ ಗೋಳದಲ್ಲಿ ಬೇಸಿಗೆಕಾಲ ಆಗುತ್ತವೆ. ಮಾರ್ಚ್, ಸೆಪ್ಟೆಂಬರ್‌ದಂತಹ ಕೆಲವು ತಿಂಗಳಿಗೆ ಸೂರ್ಯನಿಗೆ ನೇರವಾಗಿ ಭೂಮಧ್ಯರೇಖೆ ಇದ್ದಾಗ ಉತ್ತರಾರ್ಧ, ದಕ್ಷಿಣಾರ್ಧ ಗೋಳಗಳಿಗೆ ಒಂದೇ ಮೊತ್ತದಲ್ಲಿ ಸೂರ್ಯನಿಂದ ಶಾಖ ಲಭಿಸುತ್ತದೆ.

- ಸೂರ್ಯನ ಸುತ್ತಲೂ ಭೂಮಿ ಸುತ್ತುತ್ತಿದೆ. ಆದರೆ ಅಕ್ಷ ವಾಲಿ ಇಲ್ಲವೆಂದು ಊಹಿಸಿಕೊಳ್ಳಿ. ಆಂಧ್ರಪ್ರದೇಶ್‌ದಲ್ಲಿ ಕಾಲಗಳಲ್ಲಿ ಬದಲಾವಣೆಗಳಿಗೆ ಅದು ಯಾವ ವಿಧವಾಗಿ ಪ್ರಭಾವ ಬೀರುತ್ತದೆ ?
- ಇದು ಈ ಅಧ್ಯಾಯ ಪ್ರಾರಂಭದಲ್ಲಿ ನೋಡಿದ ಚಿತ್ರಗಳಲ್ಲಿ ಉತ್ತರ ಪ್ರಾಂತಗಳಲ್ಲಿ ಕಾಲಗಳ ಬದಲಾವಣೆಗಳನ್ನು ಯಾವ ವಿಧವಾಗಿ ಪ್ರಭಾವ ಬೀರುತ್ತದೆ ?

## ಭೂಮಿ ಮೇಲೆ ಉಷ್ಣೋಗ್ರತೆ ಪಟ್ಟಿಗಳು (Temperature Belts on the Earth)

ಭೂಮಿಯ ಅಕ್ಷ ವಾಲಿ ಇರುವುದು, ಗೋಳಾಕಾರದಲ್ಲಿ ಇರುವುದು ಕೂಡಿ ಭೂಮಿಯ ಮೇಲೆ ಸೂರ್ಯನ ಶಾಖ ಹಂಚುವಿಕೆಯ ಮೇಲೆ ಹೇಗೆ ಪ್ರಭಾವ ಬೀರುತ್ತದೋ ನೋಡೋಣ. ಸೂರ್ಯನ ಕಿರಣಗಳು ಭೂಮಿ ಮೇಲ್ಮೈಯನ್ನು ತಾಕಿದಾಗ ಸೂರ್ಯನಿಗೆ ಅಭಿಮುಖವಾಗಿರುವ ಪ್ರಾಂತದಲ್ಲಿ ನೇರವಾಗಿಯೂ, ಉಳಿದ ಪ್ರಾಂತಗಳಲ್ಲಿ ಕೋನದಲ್ಲಿಯೂ ಬೀಳುತ್ತವೆಯೆಂದು ಇದಕ್ಕೆ ಮೊದಲು ತಿಳಿದುಕೊಂಡಿದ್ದೇವೆ. ಎರಡು ಧ್ರುವಗಳ ಕಡೆಗೆ ಹೋದಂತೆಲ್ಲಾ ಈ ಕೋನ ಹೆಚ್ಚಾಗುತ್ತದೆ. ಸೂರ್ಯನ ಕಿರಣಗಳು ನೇರವಾಗಿ ಬೀಳುವ ಪ್ರಾಂತದಲ್ಲಿ ಬಿಸಿಯಾಗಿಯೂ, ಕೋನದಲ್ಲಿ ಬೀಳುವ ಪ್ರಾಂತದಲ್ಲಿ ಕಡಿಮೆ ಬಿಸಿಯಾಗಿಯೂ ಇರುತ್ತದೆ.

ಅಕ್ಷದ ಮೇಲೆ ಭೂಮಿಯ ವಾಲಿ ಇರುವುದರಿಂದ ಸೂರ್ಯನಿಗೆ ನೇರವಾಗಿರುವ ಪ್ರಾಂತ ವರ್ಷವೆಲ್ಲಾ ಬದಲಾಗುತ್ತಿರುತ್ತದೆ. ಮಾರ್ಚ್ ತಿಂಗಳಲ್ಲಿ ಸೂರ್ಯನ ಕಿರಣಗಳು ಭೂಮಧ್ಯ ರೇಖೆಯ ಮೇಲೆ ನೇರವಾಗಿ ಬೀಳುತ್ತಿರುತ್ತವೆ. ಜೂನ್‌ನಲ್ಲಿ ಉತ್ತರಾರ್ಧಗೋಳದಲ್ಲಿ ಕರ್ಕಾಟಕ ವೃತ್ತದ ಮೇಲೆ ನೇರವಾಗಿ ಬೀಳುತ್ತಿರುತ್ತವೆ. ಸೂರ್ಯನ ಸುತ್ತಲೂ ಭೂಮಿ ಸುತ್ತುತ್ತಾ ಇರುವ ಕ್ರಮದಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ಪುನಃ ಭೂಮಧ್ಯ ರೇಖೆಯ ಮೇಲೆ ಸೂರ್ಯನ ಕಿರಣಗಳು ನೆರವಾಗಿ ಬೀಳುತ್ತಿರುತ್ತವೆ. ಡಿಸೆಂಬರ್‌ನಲ್ಲಿ ದಕ್ಷಿಣಾರ್ಧಗೋಳದಲ್ಲಿ ಮಕರ ವೃತ್ತದ ಮೇಲೆ ನೇರವಾಗಿ ಬೀರುತ್ತಿರುತ್ತವೆ. ಅಂದರೆ ವರ್ಷದಲ್ಲಿ ಯಾವುದೋ ಒಂದು ಸಮಯದಲ್ಲಿ ಸೂರ್ಯನ ಕಿರಣಗಳು ನೇರವಾಗಿ ಬೀಳುವ ಒಂದು ಪ್ರಾಂತ ಇರುತ್ತದೆ. ಕರ್ಕಾಟಕ ವೃತ್ತದಿಂದ ಮಕರ ವೃತ್ತದವರೆಗೆ ಇರುವ ಈ ಪ್ರಾಂತವನ್ನು ಉಷ್ಣವಲಯ (ಪಟ್ಟಿ) ಎನ್ನುತ್ತಾರೆ. ಈ ಪಟ್ಟಿ ಸೂರ್ಯನಿಂದ ಬಹಳ ಹೆಚ್ಚು ಶಾಖವನ್ನು ಪಡೆಯುತ್ತದೆ.

SCERT TELANGANA

ಜೂನ್ 21·– ಕರ್ಕಾಟಕ ವೃತ್ತದ ಮೇಲೆ ಸೂರ್ಯ.
ಮಾರ್ಚ್ 21 – ಸೆಪ್ಟಂಬರ್ 23 ಭೂಮಧ್ಯ ರೇಖೆಯ ಮೇಲೆ ಸೂರ್ಯ.
ಡಿಸೆಂಬರ್ 22– ಮಕರ ವೃತ್ತದ ಮೇಲೆ ಸೂರ್ಯ.
ಮಾರ್ಚ್ 21 – ಸೆಪ್ಟಂಬರ್ 23 ರಂದು ಪ್ರಪಂಚ ವ್ಯಾಪ್ತವಾಗಿ ಹಗಲು, ರಾತ್ರಿ ಸಮಾನವಾಗಿರುತ್ತದೆ! ಈ ಎರಡು ದಿನಗಳನ್ನು ವಿಷ ಗಳಿಗೆಗಳು ಎನ್ನುತ್ತಾರೆ.

ಈ ಉಷ್ಣವಲಯದಿಂದ ಉತ್ತರ ದಿಕ್ಕಿಗೆ, ಇಲ್ಲವೇ ದಕ್ಷಿಣ ದಿಕ್ಕಿಗೆ ಪ್ರಯಾಣಿಸಿದರೆ ಬೇಸಿಗೆಯಲ್ಲಿ ಬಿಸಿಯಾಗಿ ಇರುವ ಚಳಿಗಾಲದಲ್ಲಿ ಚಳಿ ಚಳಿಯಾಗಿ ಇರುವ ಪ್ರಾಂತ ಬರುತ್ತದೆ. ಇದು ಸಮಶಿತೋಷ್ಣ ವಲಯ. ಈ ವಲಯದ ಉತ್ತರ ಭಾಗಗಳಲ್ಲಿ ಚಳಿಗಾಲದಲ್ಲಿ ಮಂಜು ಬೀಳುತ್ತದೆ.

- ತೆಲಂಗಾಣ ಉಷ್ಣವಲಯದಲ್ಲಿ ಇದೆಯಾ, ಸಮಶೀತೋಷ್ಣವಲಯದಲ್ಲಿ ಇದೆಯಾ ತಿಳಿದುಕೊಳ್ಳಿ.
- ಯಾವ ತಿಂಗಳಲ್ಲಾದರೂ ಸೂರ್ಯನ ಕಿರಣಗಳು ಆಂಧ್ರಪ್ರದೇಶದಲ್ಲಿ ನೇರವಾಗಿ ಬಿಳುತ್ತವೆಯಾ ? ಬಿದ್ದರೆ, ಯಾವ ತಿಂಗಳಲ್ಲಿ ?
- ದೆಹಲಿ ಯಾವ ವಲಯದಲ್ಲಿ ಇದೆಯೋ ತಿಳಿದುಕೊಂಡು, ಚಳಿಗಾಲದಲ್ಲಿ ಅಲ್ಲಿ ಮಂಜು ಬೀಳುತ್ತದೆಯೇನೋ ತಿಳಿದುಕೊಳ್ಳಿ.

ಸಮಶೀತೋಷ್ಣ ವಲಯದಿಂದ ಇನ್ನೂ ಉತ್ತರಾಭಿಮುಖವಾಗಿ ಇಲ್ಲವೇ ದಕ್ಷಿಣಾಭಿಮುಖವಾಗಿ ಪ್ರಯಾಣ ಮಾಡಿದರೆ ಧೃವ ಪ್ರಾಂತಗಳನ್ನು ಸೇರುವಿರಿ. ಇಲ್ಲಿ ಕಾಲಗಳು ಬಹಳ ವಿಚಿತ್ರವಾಗಿರುತ್ತವೆ. ಚಳಿಗಾಲದಲ್ಲಿ ಈ ಪ್ರಾಂತಗಳು ಸೂರ್ಯನಿಗೆ ಅತ್ತ ಕಡೆಗೆ ಇರುತ್ತದೆ. ಆಗ ಹಗಲು ಸಹ ಸೂರ್ಯ ಇರುವುದಿಲ್ಲ! ಅಂದರೆ ಧೃವಗಳ ಹತ್ತಿರ ಆರು ತಿಂಗಳವರೆಗೆ ಸೂರ್ಯ ಕಾಣಿಸುವುದಿಲ್ಲ. ಆ ನಂತರ ಈ ಪ್ರಾಂತಗಳು ಆರು ತಿಂಗಳು 24 ಗಂಟೆಗಳೂ ಸೂರ್ಯನಿಗೆ ಅಭಿಮುಖವಾಗಿಯೇ ಇರುತ್ತವೆ. ಅಂದರೆ ರಾತ್ರಿ, ಕತ್ತಲು ಇರುವುದಿಲ್ಲ ! ಆರು ತಿಂಗಳಗಳವರೆಗೆ ಹಗಲು, ಆರು ತಿಂಗಳಗಳವರೆಗೆ ರಾತ್ರಿ ಇರುವ ಪ್ರಾಂತ ! ಹಗಲು ಇರುವ ಸಮಯದಲ್ಲಿಯೂ ಸಹ ಸೂರ್ಯನ ಕಿರಣಗಳು ಬಹಳ ಓರೆಯಾಗಿ ಬೀಳುತ್ತವೆ. ಸೂರ್ಯ ಆಕಾಶದಲ್ಲಿ ಮೇಲೆ ಏರುವುದಿಲ್ಲ. ಸೂರ್ಯೋದಯ ಆಗುವ ಪ್ರದೇಶಕ್ಕೆ (ಇದನ್ನೇ ಕ್ಷಿತಿಜ ರೇಖೆ ಇಲ್ಲವೇ ದಿಗಂತ ಎನ್ನುವರು) ಸ್ವಲ್ಪ ಎತ್ತರದಲ್ಲಿಯೇ ಇರುತ್ತದೆ. ಆದ್ದರಿಂದಲೇ ಅಲ್ಲಿ ಅಷ್ಟಾಗಿ ಬಿಸಿ ಏರುವುದಿಲ್ಲ. ಉಳಿದ ಆರು ತಿಂಗಳು ಅಲ್ಲಿ ತೀರ್ವವಾದ ಚಳಿ – ಎಷ್ಟು ಚಳಿ ಎಂದರೆ ಆರ್ಕಟಿಕ್ ಸಮುದ್ರ ವರ್ಷವೆಲ್ಲಾ ಗಡ್ಡೆ ಕಟ್ಟಿಕೊಂಡೇ ಇರುತ್ತದೆ. ಆ ಚಳಿಗೆ ಮಣ್ಣು ಸಹ ಕಲ್ಲಿನಂತೆ ಗಡ್ಡೆ ಕಟ್ಟಿಕೊಂಡು ಮರಗಳ ಬೇರುಗಳು ಸಹ ಚೊಚ್ಚಿಕೊಂಡು ಹೋಗಲಾರವು. ಆದ್ದರಿಂದ ಈ ಪ್ರಾಂತದಲ್ಲಿ ಗಿಡಗಳೇ ಬೆಳೆಯುವುದಿಲ್ಲ. ಆರು ತಿಂಗಳವರೆಗೆ ಸೂರ್ಯ ಇದ್ದಾಗ ಮಂಜು ಕರಗುತ್ತದೆ. ಸಮುದ್ರವೂ ಸಹ ಸ್ವಲ್ಪ ಕರಗುತ್ತದೆ. ಪಾಚಿಯಂತಹ ಸಸ್ಯಗಳು, ಕೆಲವು ಹೂ ಬಿಡುವ ಗಿಡಗಳು ಮಾತ್ರವೇ ಬೆಳೆಯುತ್ತವೆ.



*ಚಿತ್ರ 3.5:* ಸೂರ್ಯೋದಯ ಪೂರ್ವದ ಕಾಲದಲ್ಲಿ ಉತ್ತರ ಧೃವ ಪ್ರಾಂತವು ಹೀಗೆ ಕಾಣಿಸುತ್ತದೆ.

### ಮುಖ್ಯ ಪದಗಳು

| | | |
|---|---|---|
| 1. ಕಾಲಗಳು | 2. ಭೂಮಿ ಮೇಲ್ಮೈ ಭಾಗಿರುವುದು. | 3. ಭೂಮಿ ಅಕ್ಷವಾಲಿರುವುದು. |
| 4. ಮಂಜು ಬೀಳುವುದು | 5. ಉಷ್ಣೋಗ್ರತಾ ವಲಯಗಳು | 6. ದಿಗಂತ |

SCERT TELANGANA

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ

1. ನಿಮ್ಮ ಪ್ರಾಂತದಲ್ಲಿ ಬೆಳೆಯುವ ಬೆಳೆಗಳಿಗೂ, ಕಾಲಗಳಿಗೂ ನಡುವೆ ಸಂಬಂಧವೇನಾದರೂ ಇದೆಯಾ ? ಹಿರಿಯರೊಂದಿಗೆ, ಸ್ನೇಹಿತರೊಂದಿಗೆ ಚರ್ಚಿಸಿ ಇದರ ಮೇಲೆ ಚಿಕ್ಕ ಪ್ರಬಂಧ ಬರೆಯಿರಿ.

2. ಚಳಿಗಾಲದಲ್ಲಿ ಆಂಧ್ರಪ್ರದೇಶದಲ್ಲಿ ಮಂಜು ಬೀಳದೇ ಇರುವುದಕ್ಕೆ ಕಾರಣವೇನು ?

3. ನಮಗೆ ಮಳೆಗಾಲವಿದೆ. ಭೂಮಿ ಪರಿಭ್ರಮಣಕ್ಕೂ, ಸೂರ್ಯನ ಕಿರಣಗಳು ಬೀಳುವ ರೀತಿಗೂ – ಮಳೆಗಾಲಕ್ಕೂ ನಡುವೆ ಸಂಬಂಧವೇನು ? ಮಳೆ, ಬೇಸಿಗೆಯಲ್ಲಿ ಬೀಳುತ್ತವೆಯಾ ಇಲ್ಲವೇ ಚಳಿಗಾಲದಲ್ಲಿಯಾ ಇಲ್ಲವೇ ಎರಡರ ಮಧ್ಯದಲ್ಲಿಯಾ ?

4. ನಿಮ್ಮ ಪ್ರಾಂತದಲ್ಲಿ ವಿವಿಧ ತಿಂಗಳಲ್ಲಿ ಸೂರ್ಯೋದಯ, ಸೂರ್ಯಾಸ್ತ ಸಮಯಗಳ ಸಮಾಚಾರ ಸಂಗ್ರಹಿಸಿರಿ (ಸ್ಥಳೀಯ ದಿನ ಪತ್ರಿಕೆಗಳ ಮೂಲಕ ಈ ವಿಷಯ ತಿಳಿಯುತ್ತದೆ) ಪ್ರತಿ ದಿನ ಹಗಲು, ರಾತ್ರಿಗಳ ಕಾಲಾವಧಿ ಎಷ್ಟೋ ಎಲ್ಲ ತಿಂಗಳುಗಳಿಗೂ ಲೆಕ್ಕಿಸಿ. ಇದರಲ್ಲಿ ಏನಾದರೂ ಒಂದು ಪದ್ಧತಿ ಕಾಣಿಸುತ್ತಿದೆಯಾ ?

5. ಭೂ ಭ್ರಮಣದ ಬಗ್ಗೆ ನಿಮ್ಮ ತಂದೆ ತಾಯಿಗಳಿಗೆ ಇಲ್ಲವೇ ತಮ್ಮ ತಂಗಿಯರಿಗೆ ವಿವರಿಸಿರಿ, ಅವರಿಗೆ ಬಂದ ಸಂಶಯಗಳು, ಪ್ರಶ್ನೆಗಳು ಬರೆದುಕೊಳ್ಳಿ.

6. ಭೂಮಿ ತನ್ನ ಸುತ್ತಲೂ ತಾನು ಸುತ್ತದೆ, ಒಂದು ವರ್ಷದ ಅವಧಿಯಲ್ಲಿ ಸೂರ್ಯನ ಸುತ್ತಲೂ ಸುತ್ತುತ್ತಿದಯೆಂದು ಊಹಿಸಿಕೊಳ್ಳಿ. ಇದರಿಂದ ಬೇರೆ ಬೇರೆ ಪ್ರಾಂತಗಳಲ್ಲಿ ಉಷ್ಣೋಗ್ರತೆಗಳು, ಕಾಲಗಳಲ್ಲಿ ಎಂತಹ ಬದಲಾವಣೆ ಇರುತ್ತದೆ?

7. ಉತ್ತರಾರ್ಧ, ದಕ್ಷಿಣಾರ್ಧಗೋಳದಲ್ಲಿನ ಸಮಶೀತೋಷ್ಣ ವಲಯಗಳಲ್ಲಿ ಒಂದೊಂದು ದೇಶವನ್ನು ಗುರ್ತಿಸಿರಿ. ಆ ದೇಶಗಳಲ್ಲಿ ಕಾಲಗಳನ್ನು ನಿಮ್ಮ ಪ್ರಾಂತದ ಕಾಲಗಳೊಂದಿಗೆ ಹೋಲಿಸಿರಿ. ಮೇ – ಜೂನ್ ತಿಂಗಳುಗಳಲ್ಲಿ ಯಾವ ಪ್ರಾಂತ ಬಿಸಿಯಾಗಿರುತ್ತದೆ. ಡಿಸೆಂಬರ್ – ಜನವರಿ ತಿಂಗಳುಗಳಲ್ಲಿ ಇಲ್ಲವೇ ಮಾರ್ಚ್ – ಸೆಪ್ಟೆಂಬರ್ ತಿಂಗಳಲ್ಲಿ ಯಾವ ಪ್ರಾಂತ ಚಳಿಯಾಗಿರುತ್ತದೆ ?

8. ಭಾರತ ದೇಶದಲ್ಲಿನ ಆರು ಋತುಗಳಾವುವು ?

9. ಈ ಪಾಠದಲ್ಲಿನ ಮೊದಲನೇ ಪ್ಯಾರಾಗ್ರಾಫ್ ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :

   ಮಾನವ ಜೀವನವನ್ನು ಋತುಗಳು ಹೇಗೆ ಪ್ರಭಾವಿತಗೊಳಿಸುತ್ತವೆ ?

SCERT TELANGANA

ಅಧ್ಯಾಯ 4

# ಧೃವ -ಪ್ರಾಂತಗಳು

ಆರನೇ, ಏಳನೇ ತರಗತಿಗಳಲ್ಲಿ ಇಲ್ಲಿಯವರೆಗೆ ನೋಡಿರುವುದಕ್ಕಿಂತ ಪೂರ್ಣವಾಗಿ ಭಿನ್ನವಾದ ಪ್ರಾಂತದ ಬಗ್ಗೆ ನೀವು ಈ ಅಧ್ಯಾಯದಲ್ಲಿ ತಿಳಿದುಕೊಳ್ಳಲಿದ್ದೀರಿ. ಈ ಪ್ರಾಂತದಲ್ಲಿ ಅನೇಕ ತಿಂಗಳುಗಳವರೆಗೆ ನಿರಂತರವಾಗಿ ಹಗಲು, ರಾತ್ರಿಗಳು ಇರುತ್ತವೆ. ನಮ್ಮ ದೇಶದಲ್ಲಿರುವಂತೆ ಪ್ರತಿದಿನ ಸೂರ್ಯೋದಯ, ಸೂರ್ಯಾಸ್ತಗಳು ಇರುವುದಿಲ್ಲ. ಇಂತಹ ಪ್ರದೇಶವನ್ನು ನೀವು ಊಹಿಸಬಲ್ಲಿರಾ? ಈ ಪ್ರದೇಶ ಬಹಳ ಚಳಿಯಿಂದ ಕೂಡಿರುತ್ತದೆ. ಎಷ್ಟು ಚಳಿಯಾಗಿ ಇರುತ್ತದೆಂದರೆ ಎಲ್ಲಿ ನೋಡಿದರೂ ಮಂಜು ಮಂಜುಗಡ್ಡೆಗಳೆ – ಭೂಮಿ ಮೇಲೆ ಮಂಜು, ಹಳ್ಳಗಳಲ್ಲಿ ಮಂಜು, ನದಿಗಳಲ್ಲಿ ಮಂಜು, ಕೊನೆಗೆ ಸಮುದ್ರವೂ ಸಹ ಘನೀಭವಿಸಿ ಹೋಗುತ್ತದೆ. (6ನೇ ತರಗತಿಯಲ್ಲಿಓದಿದ 2ನೇ ಪಾಠವನ್ನು ನೆನಪಿಸಿಕೊಳ್ಳಿ.)



*ನಕ್ಷೆ 1: ಪ್ರಪಂಚ ನಕ್ಷೆಯಲ್ಲಿ ■ ಧೃವ ಪ್ರಾಂತ*




*ನಕ್ಷೆ 2: ಇನ್ನೂ ಹತ್ತಿರದಿಂದ ಧೃವ ಪ್ರಾಂತ*

## ಧೃವ ಪ್ರಾಂತ ಎಲ್ಲಿದೆ ? (Where is the Polar Region?)

ಗ್ಲೋಬಿನ ಮೇಲೆ ಉತ್ತರ ಧೃವ, ದಕ್ಷಿಣ ಧೃವಗಳನ್ನು ನೋಡಿರುವಿರಿ. ಧೃವಗಳ ಹತ್ತಿರವಿರುವ ಪ್ರಾಂತವನ್ನು 'ಧೃವ ಪ್ರಾಂತ' ಎನ್ನುವರು. ಈ ಅಧ್ಯಾಯದಲ್ಲಿ ನೀವು ಉತ್ತರ ಧೃವ ಪ್ರಾಂತದ ಬಗ್ಗೆ ತಿಳಿದುಕೊಳ್ಳುವಿರಿ. ನಕ್ಷೆ 1ನ್ನು ನೋಡಿರಿ. ಇದು ಉತ್ತರ ಧೃವ, ಅದರ ಸುತ್ತಮುತ್ತಲಿನ ಪ್ರಾಂತವನ್ನು ತೋರಿಸುತ್ತದೆ. ಧೃವ ಪ್ರಾಂತ ಬೇರೆ ಬಣ್ಣದಲ್ಲಿ ತೋರಿಸಲ್ಪಟ್ಟಿದೆ. ಈ ಪ್ರಾಂತದ ಮೇರೆಗಳನ್ನು ಗಮನಿಸಿರಿ. ಇದನ್ನು 'ಆರ್ಕ್‌ಟಿಕ್ ವೃತ್ತ' ಎನ್ನುವರು.

- ಈ ಪ್ರಾಂತದಲ್ಲಿ ಯಾವ ಯಾವ ಖಂಡಗಳ ಭಾಗಗಳಿವೆ ?

ಧೃವ ಪ್ರಾಂತದಲ್ಲಿರುವ ಖಂಡಗಳ ಉತ್ತರ ಭಾಗಗಳನ್ನು ಟಂಡ್ರಾ ಪ್ರಾಂತ ಎನ್ನುತ್ತಾರೆ. ಟಂಡ್ರಾ ಎಂದರೆ ಬಹಳ ತಂಪಾಗಿರುವ ಪ್ರಾಂತ ಎಂದರ್ಥ. ಟಂಡ್ರಾ ಪ್ರಾಂತದಲ್ಲಿ ಬಹಳ ಕಡಿಮೆ ಸೂರ್ಯನ ಬೆಳಕು ಬೀಳುತ್ತದೆ ಆದ್ದರಿಂದ ಇಲ್ಲಿ ಪ್ರತ್ಯೇಕವಾದ ಸಸ್ಯಗಳ ವಿಧಗಳಿರುತ್ತವೆ. ಇವನ್ನು 'ಟಂಡ್ರಾ ವೃಕ್ಷ ಸಂಪತ್ತು' ಎನ್ನುತ್ತಾರೆ.

- ಭೂಮಧ್ಯ ರೇಖೆಯಿಂದ ದೂರಕ್ಕೆ ಹೋದಂತೆಲ್ಲಾ ಏನಾಗುತ್ತದೋ ನೆನಪಿಗೆ ತಂದುಕೊಳ್ಳಿ.

SCERT TELANGANA



*ಚಿತ್ರ 4.1 : ಟಂಡ್ರಾ ಪ್ರಾಂತದಲ್ಲಿ ಶೀತಕಾಲ*



*ಚಿತ್ರ 4.2: ಟಂಡ್ರಾ ಪ್ರಾಂತದಲ್ಲಿ ಬೇಸಿಗೆ ಕಾಲ*

## ಟಂಡ್ರಾದಲ್ಲಿ ಕಾಲಗಳು (Seasons in the Tundra) :

ಟಂಡ್ರಾ ಪ್ರಾಂತದಲ್ಲಿ ಬಹಳ ಚಳಿಯಾಗಿರುತ್ತದೆ. ಅಲ್ಲಿ ಎಷ್ಟು ಚಳಿಯಾಗಿರುತ್ತದೋ ಊಹಿಸಿಕೊಳ್ಳುವುದು ಕೂಡ ಕಷ್ಟ. ನಮ್ಮ ದೇಶದಲ್ಲಿ ಸೂರ್ಯ ಪ್ರತಿದಿನ ಉದಯಿಸುತ್ತಾನೆ. ಅಸ್ತಮಿಸುತ್ತಾನೆ. ಆದರೆ ಟಂಡ್ರಾ ಪ್ರಾಂತದಲ್ಲಿ ಹೀಗೆ ನಡೆಯುವುದಿಲ್ಲ. ನವ್ಹೆಂಬರ್, ಡಿಸೆಂಬರ್, ಜನವರಿ ತಿಂಗಳುಗಳಲ್ಲಿ ಸೂರ್ಯ ಉದಯಿಸುವುದೇ ಇಲ್ಲ. ಆದ್ದರಿಂದ ಬಹಳ ಕತ್ತಲೆಯಾಗಿರುತ್ತದೆ. ಟಂಡ್ರಾದಲ್ಲಿ ಇದು ಚಳಿಗಾಲ, ಈ ತಿಂಗಳುಗಳಲ್ಲಿ ಚಳಿ ಬಹಳ ತೀವ್ರವಾಗಿರುತ್ತದೆ. ಬಹಳ ಚಳಿಯಾಗಿದ್ದಾಗ ನೀರು ಘನೀಭವಿಸಿ ಮಂಜಾಗಿ ಬದಲಾಗುತ್ತದೆ ಎಂದು ನಿಮಗೆ ಗೊತ್ತು. ಈ ತೀವ್ರವಾದ ಚಳಿಗೆ ನದಿಗಳು, ಸರೋವರಗಳು, ಸಮುದ್ರದಲ್ಲಿರುವ ನೀರು ಘನೀಭವಿಸುತ್ತವೆ. ಬಲವಾದ ಶೀತಲ ಗಾಳಿಗಳು ಬೀಸುತ್ತವೆ. ಮಂಜು ಬೀಳುತ್ತದೆ.

ತೀವ್ರವಾದ ಚಳಿ, ಕತ್ತಲು, ನೀರು ಘನೀಭವಿಸುವುದಂತಹ ಕಾರಣಗಳಿಂದ ಸಸ್ಯಗಳೆಲ್ಲ ಸತ್ತು ಹೋಗುತ್ತವೆ. ಪಕ್ಷಿಗಳು, ಪ್ರಾಣಿಗಳೂ ಸಹ ಈ ಪ್ರಾಂತವನ್ನು ಬಿಟ್ಟು ಬೇರೆ ಪ್ರಾಂತಗಳಿಗೆ ವಲಸೆ ಹೋಗುತ್ತವೆ. ಈ ಪ್ರಾಂತವೆಲ್ಲಾ ಕತ್ತಲೆಯಾಗಿ, ನಿರ್ಜನವಾಗಿ ನಿರ್ಮಾನುಷ್ಯವಾಗಿ ಬದಲಾಗುತ್ತದೆ.

### ಬೇಸಿಗೆ (Summer) :

ಟಂಡ್ರಾ ಪ್ರಾಂತದಲ್ಲಿ ಫೆಬ್ರವರಿ ಮಾರ್ಚ್ ತಿಂಗಳಲ್ಲಿ ಸೂರ್ಯನು ಪ್ರಕಾಶಿಸಲು ಪ್ರಾರಂಭಿಸುತ್ತಾನೆ. ಪ್ರಾರಂಭದಲ್ಲಿ ಸೂರ್ಯ ಒಂದುವರೆ ಗಂಟೆ ಮಾತ್ರವೇ ಇದ್ದು ಅಸ್ತಮಿಸುತ್ತಾನೆ ಸೂರ್ಯ ಇರುವ ಸಮಯ ಕ್ರಮೇಣ 2 ಗಂಟೆಗಳಿಗೆ, 6 ಗಂಟೆಗಳಿಗೆ, 8 ಗಂಟೆಗಳಿಗೆ, 16 ಗಂಟೆಗಳಿಗೆ, ಬೆಳೆದು ಕೊನೆಗೆ 24 ಗಂಟೆಗಳವರೆಗೆ, ಅಂದರೆ ದಿನವೆಲ್ಲಾ ಸೂರ್ಯ ಪ್ರಕಾಶಿಸುತ್ತಲೇ ಇರುತ್ತಾನೆ ! ಮೇ ನಿಂದ ಜೂಲೈವರೆಗೆ ಮೂರು ತಿಂಗಳವರೆಗೆ ಸೂರ್ಯ ಅಸ್ತಮಿಸುವುದೇ ಇಲ್ಲ. ಆದರೆ ಸೂರ್ಯ ಎಂದೂ ನೆತ್ತಿಯ ಮೇಲೆ ಬಾರದು ಕ್ಷಿತಿಜದ (ಭೂಮಿ, ಆಕಾಶ ಸೇರಿದಂತೆ ಅನಿಸುವ ಪ್ರದೇಶವನ್ನು ಕ್ಷಿತಿಜ ಇಲ್ಲವೇ ದಿಗಂತ ಎನ್ನುವರು) ಹತ್ತಿರವೇ ಇರುತ್ತಾನೆ. ಸೂರ್ಯ ಆಕಾಶದ ಮೇಲ್ಗಡೆ ಬರುವುದಿಲ್ಲವಾದ್ದರಿಂದ ಈ ಪ್ರಾಂತ ಬಿಸಿಯಾಗುವುದಿಲ್ಲ.

ಬೇಸಿಗೆ ಇರುವ ಮೂರು ತಿಂಗಳುಗಳಲ್ಲಿ ಸಹ ಇಲ್ಲಿ ಚಳಿಯಾಗಿಯೇ ಇರುತ್ತದೆ. ಆದರೆ ಚಳಿಗಾಲಕ್ಕೆ ಹೋಲಿಸಿದರೆ ಚಳಿ ಸ್ವಲ್ಪ ಕಡಿಮೆಯಾಗಿರುತ್ತದೆ. ವಾತಾವರಣ ಸ್ವಲ್ಪ ಬೆಚ್ಚಗಾಗುವುದರಿಂದ ಹಿಮ ಕರಗುತ್ತದೆ. ಚಳಿಗಾಲವನ್ನು ಘನೀಭವಿಸಿದ ನದಿಗಳು ಕರಗಿ, ಪ್ರವಹಿಸಲು ಪ್ರಾರಂಭಿಸುತ್ತವೆ. ಸರೋವರಗಳು ನೀರಿನಿಂದ ತುಂಬುತ್ತವೆ.

SCERT TELANGANA

ದೊಡ್ಡ ದೊಡ್ಡ ಮಂಜುಗಡ್ಡೆಗಳು ಸಡಿಲವಾಗುತ್ತವೆ. ಇವು ನೀರಿನಲ್ಲಿ ತೇಲುತ್ತಾ ಸಮುದ್ರದೊಳಕ್ಕೆ ಪ್ರವೇಶಿಸುತ್ತವೆ. ಇವುಗಳನ್ನು 'ಐಸ್‌ಬರ್ಗ್ಸ್' ಎನ್ನುತ್ತಾರೆ.

ಚಳಿಗಾಲದಲ್ಲಿ ಘನೀಭವಿಸಿ, ನಿರ್ಜನವಾಗಿ ಬದಲಾದ ಪ್ರದೇಶ ಬೇಸಿಗೆಯಲ್ಲಿ ಬಣ್ಣಗಳು ತುಂಬಿಕೊಂಡು ಸಜೀವವಾಗಿ ಬದಲಾಗುತ್ತದೆ. ಬೇಸಿಗೆ ಬರುವುದರೊಂದಿಗೆ ಎಲ್ಲೆಲ್ಲೂ ಬಣ್ಣ ಬಣ್ಣದ ಸಸ್ಯಗಳು, ಪಾಚಿ, ಹುಲ್ಲು, ಪೊದೆಗಳು ಬೆಳೆಯುತ್ತವೆ. ಇವುಗಳು ಹೂಗಳು, ಹಣ್ಣುಗಳು ಅನೇಕ ಬಣ್ಣಗಳಲ್ಲಿರುತ್ತವೆ. ಇವುಗಳನ್ನು ತಿನ್ನಲು ಅನೇಕ ಪಕ್ಷಿಗಳು, ಪ್ರಾಣಿಗಳು ಬರುತ್ತವೆ.

## ವೃಕ್ಷ ಸಂಪತ್ತು (Vegetation) :

- ಹಿಂದಿನ ಪುಟದಲ್ಲಿರುವ ಚಿತ್ರಗಳಲ್ಲಿ ನಿಮಗೆ ಏನಾದರೂ ಗಿಡಗಳು ಕಾಣಿಸಿದ್ದಾವೆಯೇ ?

ಚಳಿ ಕಾರಣದಿಂದ ಈ ಪ್ರಾಂತದಲ್ಲಿನ ಮಣ್ಣಿನ ಮೇಲಿನ ಪೊರೆ ವರ್ಷದುದ್ದಕ್ಕೂ ಕಲ್ಲಿನಂತೆ ಗಡ್ಡೆಕಟ್ಟಿಕೊಂಡಿರುತ್ತದೆ. ಇದನ್ನು 'ಪರ್ಮಾಫ್ರಾಸ್ಟ್'-ಶಾಶ್ವತವಾಗಿ ಗಡ್ಡೆಕಟ್ಟಿಕೊಂಡು ಹೋಗುವುದು ಎನ್ನುತ್ತಾರೆ. ಬಹಳ ಕಡಿಮೆ ಮಣ್ಣು ಇರುತ್ತದೆ ಯಾದ್ದರಿಂದ ಕೆಲವು ಚಿಕ್ಕ ಸಸ್ಯಗಳು ಮಾತ್ರವೇ ಬೆಳೆಯಬಲ್ಲವು ಮಣ್ಣು ಗಟ್ಟಿಯಾಗಿರುವುದರಿಂದ ದೊಡ್ಡ ಮರಗಳು ಬೆಳೆಯುವುದು ಕಷ್ಟ. ಒಂದುವೇಳೆ ಬೆಳೆದರೂ ಇಲ್ಲಿಯ ಬಲವಾದ ಗಾಳಿ, ತುಫಾನುಗಳಿಂದ ಅವು ಕೀಳಲ್ಪಟ್ಟು ಹಾನಿಗೊಳಗಾಗುತ್ತವೆ. ಆದ್ದರಿಂದ ಟಂಡ್ರಾದಲ್ಲಿ ಅಧಿಕ ಭಾಗ ಎಂತಹ ಗಿಡಗಳು ಇಲ್ಲದಂತೆಯೇ ಇರುತ್ತದೆ.

- ಟಂಡ್ರಾದಲ್ಲಿನ ಬೇಸಿಗೆಯ ಬಗ್ಗೆ ಐದು ವಿಷಯಗಳು ಹೇಳಿರಿ ?
- ಬಿಟ್ಟ ಸ್ಥಳ ತುಂಬಿರಿ :
  ಸೂರ್ಯ______ ತಿಂಗಳುಗಳಲ್ಲಿ ಕಾಣಿಸುವುದಿಲ್ಲ.
  ಈ ಸಮಯದಲ್ಲಿ_______ ನೀರು ________ ಗಿಡಗಳು ________ .
- ಟಂಡ್ರಾ ಪ್ರಾಂತದಲ್ಲಿನ ಜನರಿಗೆ ಚಳಿಗಾಲದಲ್ಲಿ ಹೇಗೆ ಲಭಿಸುತ್ತದೆ ?

## ಟಂಡ್ರಾ ಪ್ರಾಂತದ ಜನರು : ಎಸ್ಕಿಮೊಗಳು
## (The People: Eskimos)

ವಿಶಾಲವಾದ ಗಿಡಗಳಿಲ್ಲದ ಮೈದಾನಗಳಿಂದ, ಘನೀಭವಿಸಿದ ಸಮುದ್ರಗಳಿಂದ, ಬೀಳು, ಕಲ್ಲುಮಯವಾದ ದ್ವೀಪಗಳಿಂದ ಆರ್ಕಿಟಿಕ್ ಪ್ರಾಂತ ಇರುತ್ತದೆ. ಈ ಅತ್ಯಂತ ಚಳಿ ಪ್ರದೇಶ ಎಸ್ಕಿಮೊಗಳ ನಿವಾಸ ಪ್ರಾಂತ. ಗ್ರೀನ್‌ಲ್ಯಾಂಡ್, ಕೆನಾಡಾ, ಅಲಾಸ್ಕಾ, ಸೈಬೀರಿಯಾಗಳಲ್ಲಿ ಚೆಲ್ಲಾಪಿಲ್ಲಿಯಾಗಿ, ಚಿಕ್ಕ ಚಿಕ್ಕ ನಿವಾಸ ಪ್ರಾಂತಗಳಲ್ಲಿ ಇವರು ಇರುತ್ತಾರೆ. ಸಾವಿರಾರು ವರ್ಷಗಳವರೆಗೆ ಎಸ್ಕಿಮೊಗಳು ಇತರರೊಂದಿಗೆ ಸಂಬಂಧವಿಲ್ಲದೆ ಜೀವಿಸಿದರು. ಮೀನು ಹಿಡಿಯುವುದು, ಬೇಟೆಯಾಡುವುದರ ಮೂಲಕ ಅವರು ಆಹಾರವನ್ನು ಪಡೆಯುತ್ತಾರೆ. ತಮ್ಮ ಪ್ರಾಂತಕ್ಕೆ ಅನುಕೂಲವಾದ ಜೀವನ ವಿಧಾನವನ್ನು ಅವರು ರೂಪಿಸಿಕೊಂಡಿದ್ದಾರೆ.

ಧೃವ ಪ್ರಾಂತದ ತೀವ್ರವಾದ ಪರಿಸ್ಥಿತಿಗಳನ್ನು ತಟ್ಟಿಕೊಳ್ಳುವಂತೆ ಎಸ್ಕಿಮೋಗಳ ಸಂಪ್ರದಾಯ ಜೀವನ ಇರುತ್ತದೆ. ಇಂದಿನ ಕಾಲದವರೆಗೆ ಎಸ್ಕಿಮೊಗಳು ಅನುಸರಿಸಿದ ಈ ಜೀವನ ವಿಧಾನದ ಬಗ್ಗೆ ಇಲ್ಲಿ ತಿಳಿದುಕೊಳ್ಳುತ್ತೇವೆ.

'ಎಸ್ಕಿಮೊ ' ಎನ್ನುವ ಪದಕ್ಕೆ ಬಹಳ ಮಂದಿ ಅಂಗೀಕರಿಸುವ ಅರ್ಥ 'ಮಂಜು ಬೂಟುಗಳ ವ್ಯಕ್ತಿ ' ಎಸ್ಕಿಮೊಗಳೆಂದು ಕರೆಯಲ್ಪಡುವವರಲ್ಲಿ ಎರಡು ಮುಖ್ಯ ಪಂಗಡಗಳಿವೆ. ಅವು ಇನ್ಯುಯಿಟ್, ಯೂಪಿಕ್. ಅವರ ಭಾಷೆಯಲ್ಲಿ ಇನ್ಯುಯಿಟ್ ಎಂದರೆ 'ಪ್ರಜೆಗಳು' ಇಲ್ಲವೇ 'ನಿಜವಾದ ಪ್ರಜೆಗಳು' ಎಂದು. ಸೈಬೀರಿಯಾ (ಇಂದಿನ

*ಚಿತ್ರ : 4.3 ಧೃವ ಪ್ರಾಂತದ ಜನರ ಭಾವಚಿತ್ರ, 1930 ರಲ್ಲಿ ತೆಗೆದದ್ದು.*



SCERT TELANGANA



*ಚಿತ್ರ 4.4: ವಾಲ್‌ರಸ್ ಎನ್ನುವ ಪ್ರಾಣಿ ದಂತಗಳಿಂದ ಸಬೀರಿಯಾನ್ ಯುಪಿಕ್ ಮಹಿಳೆ, ಬಹಳ ಪುರಾತನವಾದ ಫೋಟೋ*

- ಟಂಡ್ರಾ ಪ್ರಾಂತದಲ್ಲಿ ಎಲ್ಲಾ ಯುಗಗಳಲ್ಲಿ ಮನುಷ್ಯರು ವಾಸಿಸದೇ ಇರುವುದಕ್ಕೆ ಕಾರಣವೇನು ?

### ತಂಡ ಜೀವನ (Group Life) :

ಎಸ್ಕಿಮೊಗಳು ಬಹಳ ಚಿಕ್ಕ ತಂಡಗಳಲ್ಲಿ ವಾಸಿಸುತ್ತಾರೆ. 500 ಜನಸಂಖ್ಯೆಗೆ ಮೀರಿದ ಗ್ರಾಮಗಳು ಉತ್ತರ ಅಲಾಸ್ಕಾ ತೀರದಲ್ಲಿವೆ. ಪೂರ್ವ ಪ್ರಾಂತದಲ್ಲಿ (ಗ್ರೀನ್ ಲ್ಯಾಂಡ್, ಬಾಫಿನ್ ದ್ವೀಪ, ಲಾಬ್ರಾಡಾರ್ ಗಳಲ್ಲಿ) ಸಾಧಾರಣ ವಾಗಿ ಒಂದು ತಂಡದಲ್ಲಿ 25-45 ಜನರಿರುತ್ತಾರೆ. ಈ ಪೂರ್ವ ತಂಡಗಳು ಕಾಲಾನುಗುಣ ಕಾರ್ಯಕ್ರಮಗಳಿಂದ ಆಧಾರಪಟ್ಟು ವರ್ಷವಿಡೀ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಂಚಾರ ಜೀವನ ನಡೆಸುತ್ತಿರುತ್ತವೆ. ಚಳಿಗಾಲದಲ್ಲಿ ತೀರದ ಹತ್ತಿರ ಇದ್ದು ಸಮುದ್ರದ ಸೀಲ್ ಪ್ರಾಣಿಗಳನ್ನು, ಮೀನುಗಳನ್ನು ಹಿಡಿಯುತ್ತಾರೆ. ಬೇಸಿಗೆಯಲ್ಲಿ ಸಮುದ್ರದಿಂದ ಒಳ ಪ್ರದೇಶಗಳಲ್ಲಿ ಹಿಮಸಾರಂಗ (ಕಾರಿಬೊ) ಎನ್ನುವ ಪ್ರಾಣಿಗಳನ್ನು ಬೇಟೆಯಾಡುತ್ತಾ ಹಣ್ಣುಗಳು ಸಂಗ್ರಹಿಸುತ್ತಾ ಜೀವನ ನಡೆಸುತ್ತಾರೆ. ಈ ವಿಧವಾಗಿ ಅವರು ತಮ್ಮ ಸಂಚಾರ ಜೀವನದಲ್ಲಿ 1100 ಕಿ.ಮೀ. ಗಳು ಸಂಚರಿಸುತ್ತಾರೆ. ನಾಯಿಗಳು ಎಳೆಯುವ ಹಿಮ ಬಂಡಿಗಳನ್ನು ಸಾರಿಗೆಗಾಗಿ ಉಪಯೋಗಿಸುತ್ತಾರೆ. ನೀರಿನಲ್ಲಿ 'ಉಮಿಯಾಕ್' ಎನ್ನುವ ಹಡಗುಗಳನ್ನು ಉಪಯೋಗಿಸುತ್ತಾರೆ.



ಚಿತ್ರ 4.5: ಹಾರ್ಪೂನ್ ಆಯುಧ

ಅನುಕೂಲವಾಗಿ ಇಲ್ಲದ ಇಂತಹ ವಾತಾವರಣದಲ್ಲಿ ಜೀವನ ಸಾಗಿಸಲು ಎಸ್ಕಿಮೋಗಳು ತಂಡವಾಗಿ ಕೂಡಿ ಕೆಲಸ ಮಾಡಬೇಕು. ಬೇಟೆ ಯಂತಹ ಕೆಲಸಗಳಲ್ಲಿ ತಂಡದ ಸದಸ್ಯರೆಲ್ಲರೂ ಕೂಡಿ ಕೆಲಸ ಮಾಡುತ್ತಾರೆ. ಉದಾಹರಣೆಗೆ ಪೂರ್ವತಂಡಗಳಲ್ಲಿ ಚಳಿಗಾಲದಲ್ಲಿ ಘನೀಭವಿಸಿದ ಸಮುದ್ರಗಳಲ್ಲಿ ಸೀಲ್ ಪ್ರಾಣಿಗಳು ಉಸಿರಾಡುವ ರಂಧ್ರಗಳ ಹತ್ತಿರ ಅವುಗಳನ್ನು ಭೇಟೆಯಾಡಲು 10-12 ಜನ ಬೇಟೆಗಾರರು ಸೇರಿ ಕೆಲಸ ಮಾಡುವುದು

ಉತ್ತರ ಏಷಿಯಾದಲ್ಲಿನ ಅಫ್ಘಾನದಿಂದ ಬಂದವರ ವಾರಸುದಾರರೇ ಎಸ್ಕಿಮೋಗಳು.

ಎಸ್ಕಿಮೊ ಭಾಷೆಯನ್ನು ಸಾವಿರಾರು ವರ್ಷಗಳಿಂದ ಮಾತನಾಡುತ್ತಿದ್ದಾರೆ. ಆದರೆ ಇದಕ್ಕೆ ಇಂದಿನ ಕಾಲದವರೆಗೆ ಲಿಪಿ ಏರ್ಪಟ್ಟಿಲ್ಲ. ಇದರಲ್ಲಿ ಪ್ರಧಾನವಾಗಿ ಮೂರು ಭಾಷೆಗಳಿವೆ. ಅಲ್ಯುಯಿಟ್, ಯುಪಿಕ್, ಇನ್ಯುಪಿಕ್, ಉತ್ತರ ಅಲಾಸ್ಕಾದಿಂದ ಗ್ರೀನ್‌ಲ್ಯಾಂಡ್‌ವರೆಗೆ ಇನ್ಯುಪಿಕ್ ಮಾತನಾಡುತ್ತಾರೆ. ಈ ಭಾಷೆ ಮಾತನಾಡುವವರೇ ಬಹಳ ಜನರಿದ್ದಾರೆ. ಆದರೆ ಎಸ್ಕಿಮೊಗಳಲ್ಲಿ ಸ್ವಲ್ಪ ಸ್ವಲ್ಪ ವ್ಯತ್ಯಾಸಗಳಿಂದ ಇನ್ಯುಪಿಕ್‌ನಲ್ಲಿ ಅನೇಕ ಪ್ರಾದೇಶಿಕ ಉಪಭಾಷೆಗಳಿವೆ. ಯುಪಿಕ್‌ನಲ್ಲಿನ ಪ್ರಾದೇಶಿಕ ಉಪಭಾಷೆಗಳನ್ನು ನೈರುತ್ಯ ಅಲಾಸ್ಕಾದಲ್ಲಿ, ಸೈಬೀರಿಯಾದಲ್ಲಿ ಮಾತನಾಡುತ್ತಾರೆ.

ಐದು ಸಾವಿರ ವರ್ಷಗಳ ಹಿಂದೆ ಏಷಿಯಾದಿಂದ ಬೇರಿಂಗ್ ಜಲಸಂಧಿ ದಾಟಿಕೊಂಡು ಎಸ್ಕಿಮೊಗಳು ಮೊದಲ ಬಾರಿ ಉತ್ತರ ಅಮೇರಿಕಾಲದಲ್ಲಿ ಪ್ರವೇಶಿಸಿದರು. ಅವರು ಶೀಘ್ರವಾಗಿ ಉತ್ತರ ಕೆನಾಡಕ್ಕೆ, ಗ್ರೀನ್‌ಲ್ಯಾಂಡ್‌ಗೆ ವಿಸ್ತರಿಸಿದರು. ಕೆಲವು ಎಸ್ಕಿಮೊ ಪಂಗಡಗಳು ಪುನಃ ಪಶ್ಚಿಮದ ಕಡೆಗೆ ಪ್ರಯಾಣಿಸಿ ಬೇರಿಂಗ್ ಸಮುದ್ರ ಪ್ರಾಂತದಲ್ಲಿ ಸ್ಥಿರಪಟ್ಟವು. ಈಗ ಎಸ್ಕಿಮೊ ಜನಸಂಖ್ಯೆ ಅಷ್ಟು ಹೆಚ್ಚಾಗಿ ಇಲ್ಲ ಆದರೂ ಅದು ಅಭಿವೃದ್ಧಿ ಯಾಗುತ್ತಿದೆ. ಸೈಬೀರಿಯಾದಲ್ಲಿ 2,000 ಅಲಾಸ್ಕದಲ್ಲಿ 30,000 ಕೆನಡಾದಲ್ಲಿ 22,500 ಗ್ರೀನ್ ಲ್ಯಾಂಡ್‌ನಲ್ಲಿ 43,000 ಎಸ್ಕಿಮೊ ಗಳಿದ್ದಾರೆ. ಉತ್ತರದ ಕಾಡುಗಳ ಅಂಚುಗಳಲ್ಲಿ ಕೆಲವು ಎಸ್ಕಿಮೊ ಪಂಡಗಳಿವೆ. ಆದರೆ ಬಹಳ ಜನರು ಕಾಡುಗಳ ಉತ್ತರಕ್ಕೆ ಇರುವ ಗಿಡಗಳಿಲ್ಲದ ಟಂಡ್ರಾ ಪ್ರಾಂತದಲ್ಲಿ, ಆರ್ಕಟಿಕ್ ಮೈದಾನಗಳಲ್ಲಿ ಇರುತ್ತಿದ್ದಾರೆ.

SCERT TELANGANA

ಅವಶ್ಯಕ. ಹಿಮಸಾರಂಗ (ಕಾರಿಬೋ) ದಂತಹ ಪ್ರಾಣಿಗಳನ್ನು, ತಿಮಿಂಗಲದಂತಹ ಸಮುದ್ರದ ದೊಡ್ಡ ಸಸ್ತನಿಗಳನ್ನು ಬೇಟೆಯಾಡುವುದಕ್ಕೆ 100 ಜನರವರೆಗೆ ಇರುವ ದೊಡ್ಡ ತಂಡಗಳು ಅವಶ್ಯಕವಾಗುತ್ತದೆ. ಬಲೆಗಳಿಂದ ಮೀನು ಹಿಡಿಯುವುದು, ಹಣ್ಣುಗಳು ಸಂಗ್ರಹಿಸುವುದು. ಕರಡಿ ಜಾಡನ್ನು ಕಂಡು ಹಿಡಿಯುವುದು. ಇಂತಹ ಕೆಲಸಗಳನ್ನು ಒಬ್ಬರು, ಇಲ್ಲವೆ ಕುಟುಂಬ ಸದಸ್ಯರು ಮಾಡುತ್ತಾರೆ.

### ಬೇಟೆ, ಮೀನು ಹಿಡಿಯುವುದು (Hunting and Fishing)

ಬೇಟೆಯಾಡುವುದು, ಮೀನು ಹಿಡಿಯುವುದರ ಮೇಲೆ ಎಸ್ಕಿಮೊಗಳು ಆಧಾರಪಟ್ಟು ಇರುತ್ತಾರಾದ್ದರಿಂದ ಈ ಕೆಲಸಗಳಲ್ಲಿ ಅವರಿಗೆ ಎಷ್ಟೋ ನೈಪುಣ್ಯವಿರುತ್ತದೆ. ಕಾರಿಬೋ ಪ್ರಾಣಿಗಳನ್ನು ಸುಮಾರು ಎಲ್ಲಾ ಎಸ್ಕಿಮೊ ತಂಡಗಳು ಬೇಟೆಯಾಡುತ್ತವೆ. ಬೇಸಿಗೆ ಕಾಲದಲ್ಲಿಯೂ, ವಸಂತ ಋತು ಆರಂಭದಲ್ಲಿಯೂ ಕಾರಿಬೋಗಳನ್ನು ಬೇಟೆಯಾಡುತ್ತಾರೆ. ಕೆಲವು ಪ್ರದೇಶಗಳಲ್ಲಿ ಎಸ್ಕಿಮೊಗಳು ಸಾಲಾಗಿ ನಿಂತು ಕಾರಿಬೋಗಳು ಸರೋವರದೊಳಗೆ ಇಲ್ಲವೇ ಕಿರಿದಾಗಿರುವ ಹೊಳೆಗಳೊಳಗೆ ಹೋಗುವಂತೆ ಮಾಡಿ ಅವುಗಳ ಮೇಲೆ ಭರ್ಚಿಗಳು, ಬಾಣಗಳು, ಹರ್ಪೂನ್‌ಗಳಿಂದ ದಾಳಿ ಮಾಡುತ್ತಾರೆ. ಕೆಲವು ಸಲ ಎಸ್ಕಿಮೊಗಳು ಕಲ್ಲಿನ ಕುಪ್ಪೆಗಳನ್ನು ಬಹಳ ದೊಡ್ಡ ಸಾಲಿನಲ್ಲಿ ಜೋಡಿಸುತ್ತಾರೆ. ಈ ಕಲ್ಲಿನ ಕುಪ್ಪೆಗಳು ದೂರದಿಂದ ಕಾರಿಬೋಗಳಿಗೆ ಮನುಷ್ಯರಂತೆ ಕಾಣಿಸುತ್ತವೆ. ಇದರಿಂದ ಅವು ಹಿಂದಕ್ಕೆ ಮರಳಿ ಹಿಡಿಯಲ್ಪಡುತ್ತವೆ.

ಕೆಲವು ತಂಡಗಳಿಗೆ ಮೀನು ಹಿಡಿಯುವುದರೊಂದಿಗೆ ಬೇಟೆಯು ಅಷ್ಟೇ ಮುಖ್ಯ. ಆಳವಾಗಿರುವ ಕೆಸರು ನೀರಿನಲ್ಲಾಗಲೀ, ಮಂಜಿನಲ್ಲಿರುವ ರಂಧ್ರಗಳಲ್ಲಿ ಯಿಂದಾಗಲೀ ಮೀನುಗಳನ್ನು ಹಿಡಿದುಕೊಳ್ಳುತ್ತಾರೆ. ನೀರಿಗೆ ಅಡ್ಡಲಾಗಿ ಕಲ್ಲುಗಳಿಂದ ಚಿಕ್ಕ ಅಣೆಕಟ್ಟುಗಳು ಕಟ್ಟಿ, ಅವುಗಳ ಹಿಂದೆ ಸ್ವಚ್ಛವಾದ ನೀರಿನಲ್ಲಿ ಭರ್ಚಿಗಳಿಂದ ಚುಚ್ಚಿ ಮೀನುಗಳನ್ನು ಹಿಡಿದುಕೊಳ್ಳುತ್ತಾರೆ. ಹಳ್ಳ ಗಳಲ್ಲಿ ನಡೆಯುತ್ತಾ ಈ ಅಣೆಕಟ್ಟುಗಳ ಹಿಂದಕ್ಕೆ ಮೀನು ಗಳು ಸೇರುವಂತೆ ಮಾಡುತ್ತಾರೆ. ಮೂರು ಹಲ್ಲುಗಳಿರುವ ಭರ್ಚಿ ಯಿಂದ ನಿಪುಣರಾದ ಬೇಟೆಗಾರರು ಈ ಮೀನುಗಳನ್ನು ಹಿಡಿದುಕೊಳ್ಳುತ್ತಾರೆ. ಮೀನುಗಳು ಹಿಡಿದುಕೊಳ್ಳುವುದಕ್ಕೆ ಮುಳ್ಳು ಇಲ್ಲದ ಮೂಳೆಯನ್ನು ಕೊಕ್ಕೆಯಾಗಿ ಬಳಸುತ್ತಾರೆ. ಇದನ್ನು ಚಿಕ್ಕ ದಾರಕ್ಕೆ ಕಟ್ಟಿ ಚಳಿಗಾಲದಲ್ಲಿ ಮಂಜಿನಲ್ಲಿರುವ ರಂಧ್ರಗಳ ಹತ್ತಿರ, ವಸಂತಕಾಲದಲ್ಲಿ ಹೊಳೆದಡದ ಹತ್ತಿರ, ಮೀನುಗಳು ಹಿಡಿಯುತ್ತಾರೆ. ಹಾರ್ಪೂನ್ ಎನ್ನುವ ಉಪಕರಣವನ್ನು ಬೀಸಿ ಸೀಲ್ ಪ್ರಾಣಿಗಳನ್ನು ಹಿಡಿದುಕೊಳ್ಳುತ್ತಾರೆ.



*ಚಿತ್ರ : 4.6: ಹಿಮಸಾರಂಗ (ಕಾರಿಬೋ)*



*ಚಿತ್ರ 4.7: ಸ್ಲೆಡ್ಜ್ ಗಾಡಿ*

ನೀರಿನ ಮೇಲೆ ತೇಲುವ ಮಂಜುಗಡ್ಡೆಗಳ ಮೇಲಿಂದ, ಇಲ್ಲವೇ ಕಯಾಕ್ (ಕಟ್ಟಿಗೆಯ ಚೌಕಟ್ಟಿನ ಮೇಲೆ ಪ್ರಾಣಿಗಳ ಚರ್ಮದಿಂದ ಎಳೆದು ಮಾಡಿದ ಒಂದುವಿಧವಾದ ಹಡಗು) ಮೇಲಿನಿಂದ ಈ ಹಾರ್ಪೂನ್‌ಗಳನ್ನು ಬೀಸುತ್ತಾರೆ.

### ಆಹಾರ (Food) :

ಎಸ್ಕಿಮೋಗಳ ಆಹಾರದಲ್ಲಿ ಪ್ರಧಾನವಾಗಿ ಮಾಂಸ, ಮೀನು, ಕೊಬ್ಬು ಪದಾರ್ಥಗಳಿರುತ್ತವೆ. ತರಕಾರಿಗಳು ಬಹಳ ವಿರಳ. ಅವರು ಆಹಾರವನ್ನು ಸ್ವಲ್ಪವೂ ವ್ಯರ್ಥ ಮಾಡುವುದಿಲ್ಲ ಬೇಟೆಯಾಡುವುದು, ಮೀನುಗಳು ಹಿಡಿಯುವುದರ ಮೇಲೆ ಎಸ್ಕಿಮೊಗಳು ಆಧಾರಪಟ್ಟಿರುತ್ತಾರೆ. ಆದ್ದರಿಂದ ಮೀನುಗಳು, ಪ್ರಾಣಿಗಳು ಸಾಕಷ್ಟು ದೊರೆಯದಿದ್ದಾಗ ಹಸಿವು ಮತ್ತು ಅರೆ ಹೊಟ್ಟೆಯಿಂದ ಇರುವುದು ಅವರಿಗೆ ಅಭ್ಯಾಸ. ಮಣ್ಣು ಶಾಶ್ವತವಾಗಿ ಗಡ್ಡೆ ಕಟ್ಟಿರುವವರೆಗೆ ಅಗೆದು ಬೇಸಿಗೆಯಲ್ಲಿ ಹಿಡಿದುಕೊಂಡ ಮೀನುಗಳು, ಪ್ರಾಣಿಗಳನ್ನು ಹೂತಿಡುವುದರ ಮೂಲಕ ಸಂಗ್ರಹಿಸುತ್ತಾರೆ. ಅವುಗಳ ಮೇಲೆ ಕಲ್ಲು ಇಡುವುದರ ಮೂಲಕ ಇತರ ಪ್ರಾಣಿಗಳು ತಿನ್ನದಂತೆ ಕಾಪಾಡಿಕೊಳ್ಳುತ್ತಾರೆ.

SCERT TELANGANA

ಎಸ್ಕಿಮೊಗಳು ವಾಸಿಸುವ ಪ್ರಾಂತದಲ್ಲಿ ಮಾಂಸ ಬೇಯಿಸಲು ಇಲ್ಲವೇ ಸುಡಲು ಕಟ್ಟಿಗೆಗಳ ಕೊರತೆ ಇರುತ್ತದೆ. ಇದರಿಂದ ಮೀನುಗಳನ್ನು, ಮಾಂಸವನ್ನು ಹಸಿಯಾಗಿಯೇ ತಿನ್ನುತ್ತಾರೆ. ಹಸಿ ಮಾಂಸ. ಮೀನುಗಳು ಗಡ್ಡೆಕಟ್ಟುವಂತೆ ಮಾಡಿ ಚಿಕ್ಕ ತುಂಡುಗಳಾಗಿ ಕತ್ತರಿಸಿ ಸೀಲ್ ಇಲ್ಲವೇ ತಿಮಿಂಗಲದ ಎಣ್ಣೆಯಲ್ಲಿ ಮುಳುಗಿಸುತ್ತಾರೆ. ಕೆಲವು ವಿಧದ ಮಾಂಸ, ಪ್ರತ್ಯೇಕವಾಗಿ ಸಮುದ್ರದ ದೊಡ್ಡ ಸಸ್ತನಿಗಳ ಮಾಂಸ ಸ್ವಲ್ಪ ಕೊಳೆತ ನಂತರ ತಿನ್ನುತ್ತಾರೆ. (ಇದರಿಂದ ಗಟ್ಟಿಯಾಗಿರುವ ಮಾಂಸ ಸ್ವಲ್ಪ ಮೆತ್ತಗಾಗಿ ಸುಲಭವಾಗಿ ಜೀರ್ಣವಾಗುತ್ತದೆ.) ಆಹಾರ ಬೇಯಿಸುವುದು ಎಂದರೆ ಸಾಧಾರಣವಾಗಿ ಕುದಿಸುವುದೇ ಆಗುತ್ತದೆ. ಎಣ್ಣೆ ದೀಪಗಳಿಂದ ಆಹಾರವನ್ನು ಕುದಿಸುತ್ತಾರೆ.


*ಚಿತ್ರ 4.8: ಅಲಾಸ್ಕಾದಲ್ಲಿನ ಕಾಮಿಕ್ (1999) ಇನ್ಯೂಯಿಟ್ ಜನರು*

## ಆಶ್ರಯ (Shelter) :

'ಇಗ್ಲೂ' ಎನ್ನುವ ಎಸ್ಕಿಮೊ ಶಬ್ದಕ್ಕೆ ಆಶ್ರಯ ಎಂದು ಅರ್ಥ. ಇಗ್ಲೂ ಅಂದರೆ ಮಂಜಿನಿಂದ ಮಾಡಿದ ದುಂಡನೆ ಮನೆಗಳೆಂದು ನಾವು ಅಂದುಕೊಳ್ಳುತ್ತೇವೆ. ಆದರೆ ಯಾವ ವಿಧವಾದ ಮನೆಯನ್ನಾದರೂ ಇಗ್ಲೂ ಎಂದೇ ಕರೆಯುತ್ತಾರೆ.

ಬೇಸಿಗೆಯಲ್ಲಿ ಬಹಳ ಜನ ಎಸ್ಕಿಮೊಗಳು ಪ್ರಾಣಿ ಚರ್ಮಗಳಿಂದ ಮಾಡಿದ ಗುಡಾರಗಳಲ್ಲಿ ವಾಸಿಸುತ್ತಾರೆ. ಕಟ್ಟಿಗೆ ಚೌಕಟ್ಟಿನ ಮೇಲೆ ಭಾರವಾಗಿರುವ ವಾಲಾರಸ್ ಚರ್ಮವನ್ನು ಹೊಂದಿಸುವುದರ ಮೂಲಕ ಪಶ್ಚಿಮ ಅಲಾಸ್ಕಾದಲ್ಲಿ ಚಳಿಗಾಲಕ್ಕೆ ದೊಡ್ಡ ದೊಡ್ಡ ಗುಡಾರಗಳನ್ನು ತಯಾರು ಮಾಡುತ್ತಾರೆ. ಅಲಾಸ್ಕಾ ಉತ್ತರ ತೀರದಲ್ಲಿ ಮರದ ದಿಮ್ಮಿಗಳು, ತಿಮಿಂಗಲದ ಪಕ್ಕೆಲುಬುಗಳಿಂದ ಗೋಳಾಕಾರದ ಮನೆಗಳು ಕಟ್ಟುತ್ತಾರೆ. ಭೂಮಿಯಲ್ಲಿ ಚಿಕ್ಕ ಕುಣಿ ಅಗೆದು, ಅದರ ಮೇಲೆ ದುಂಡನೆ ಮೇಲ್ಚಾವಣಿ ಹಾಕಿ ಗಡ್ಡೆಕಟ್ಟಿದ ಮಣ್ಣಿನಿಂದ ಮುಚ್ಚುತ್ತಾರೆ. ಗ್ರೀನ್‌ಲ್ಯಾಂಡ್‌ನಲ್ಲಿ ಕಲ್ಲಿನ ಹಲಗೆಗಳಿಂದ ಮನೆಗಳು ಕಟ್ಟುತ್ತಾರೆ.

ಪೂರ್ವ, ಮಧ್ಯ ಪ್ರಾಂತಗಳಲ್ಲಿ ಮಾತ್ರವೇ ಮಂಜು ಮನೆಗಳನ್ನು ಉಪಯೋಗಿಸುತ್ತಾರೆ. ಮಂಜನ್ನು ತಟ್ಟಿ (ಮಂಜು ಗಡ್ಡೆಗಳು ಅಲ್ಲ) ಇಟ್ಟಿಗೆಗಳಂತೆ ಮಾಡಿ ಗೋಳಾಕಾರದ ಮೇಲ್ಚಾವಣಿ ಕಟ್ಟುತ್ತಾರೆ. ಪ್ರಯಾಣಗಳು ಮಾಡುವ ಸಮಯದಲ್ಲಿ ಚಿಕ್ಕದಾದ ಸುರಂಗ ಮಾರ್ಗದಂತಹ ಪ್ರವೇಶದಿಂದ ಚಿಕ್ಕ ಮಂಜು ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಚಳಿಗಾಲದಲ್ಲಿ ಇರುವುದಕ್ಕೆ ದೊಡ್ಡ ಮಂಜು ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಈ ದೊಡ್ಡ ಮನೆಗಳಿಗಿರುವ ದೊಡ್ಡ ಸುರಂಗ ಮಾರ್ಗದಂತಹ ಪ್ರವೇಶಗಳು ಸರಕನ್ನು ಸಂಗ್ರಹಿಸಲು ಸಹ ಉಪಯೋಗಪಡುತ್ತವೆ. ಈ ಪ್ರವೇಶ ಮನೆಯಲ್ಲಿ ನೆಲ ಮಟ್ಟಕ್ಕಿಂತ ಕೆಳಗೆ ಇರುತ್ತದೆ.

ಮನೆಯ ಹಿಂಭಾಗದಲ್ಲಿ ಅರ್ಧ ಭಾಗದಲ್ಲಿ, ಬಾಗಿಲಿಗೆ ಎರಡು ಕಡೆಗಳಲ್ಲೂ ಒಂದು ಮೀಟರ್ ಎತ್ತರ ಇರುವ ಮಂಜು ಬೆಂಚಿಗಳು ಇರುತ್ತವೆ. ಹಿಂದಕ್ಕೆ ಇರುವ ಮಂಜು ಬೆಂಚು ಪ್ರಾಣಿ ಚರ್ಮದಿಂದ ಹೊದಿಸಿದ್ದು ಮಲಗಿಕೊಳ್ಳಲು ಉಪಯೋಗಿಸುತ್ತಾರೆ. ಮಲಗಲು ಇರುವ ಬೆಂಚ್‌ಗಳು ಕಪಾಟುಗಳನ್ನು ಹೊಂದಿದ್ದು, ಆಹಾರ ಸಂಗ್ರಹಿಸಿ ಇಟ್ಟುಕೊಳ್ಳಲು, ಬಟ್ಟೆಗಳನ್ನು ಒಣಗಿಸಲು ಉಪಯೋಗಿಸುತ್ತಾರೆ. ಬೆಳಕು, ಶಾಖವನ್ನು ಕೊಡುವ ಎಣ್ಣೆ ದೀಪಗಳು ಸಹ ಇಲ್ಲಿಯೇ ಇರುತ್ತವೆ. ಒಂದೊಂದು ಸಲ ಎರಡು ದೊಡ್ಡ ಮಂಜಿನ ಮನೆಗಳನ್ನು ಸುರಂಗದ ಮೂಲಕ ಸೇರಿಸುತ್ತಾರೆ. ಸೀಲ್ ಪ್ರಾಣಿ ಚರ್ಮಗಳನ್ನು ಸೇರಿಸಿ ಹೊಲಿದು ಮಂಜಿನ ಮನೆಗಳ ಮೇಲಿಂದ ಹಾಕಿ ಅವುಗಳನ್ನು ಮುಚ್ಚುತ್ತಾರೆ.

- ಅವರ ಪರಿಸರಗಳಲ್ಲಿ ದೊರೆಯುವ ಸಂಪನ್ಮೂಲಗಳನ್ನು ಮನೆಗಳು ಕಟ್ಟಿಕೊಳ್ಳುವುದಕ್ಕೆ ಹೇಗೆ ಉಪಯೋಗಿಸಿಕೊಳ್ಳುತ್ತಾರೆ?
- ವಾತಾವರಣ ಅವರ ಮನೆಗಳ ನಿರ್ಮಾಣವನ್ನು ವಾತಾವರಣ ಹೇಗೆ ಪ್ರಭಾವ ಮಾಡುತ್ತದೆ ?

## ಬಟ್ಟೆಗಳು, ಹಸ್ತಕೌಶಲ್ಯ (Clothing and Crafts)

ಎಸ್ಕಿಮೊಗಳು ಮುಕ್‌ಲುಕ್‌ಗಳೆನ್ನುವ ಬೂಟುಗಳು, ಪ್ಯಾಂಟುಗಳು, ಮುಸುಕುಳ್ಳ ಕೋಟುಗಳು (ಇವುಗಳನ್ನು ಪಾರ್ಕಾಗಳೆನ್ನುತ್ತಾರೆ) ಧರಿಸುತ್ತಾರೆ. ಇವುಗಳೆಲ್ಲವುಗಳನ್ನು ಪ್ರಾಣಿ ಚರ್ಮಗಳಿಂದ ಮಾಡುತ್ತಾರೆ. ಸ್ತ್ರೀಯರು, ಪುರುಷರು ಧರಿಸುವ ಬಟ್ಟೆಗಳಲ್ಲಿ ಸ್ವಲ್ಪ ವ್ಯತ್ಯಾಸಗಳಿರುತ್ತವೆ. ಪುರುಷರು ಧರಿಸುವ ಪರ್ಕಾಗಳಿಗೆ ಮುಂದೆ, ಹಿಂದೆ ಜೋತಾಡುವ ದೊಡ್ಡ ದೊಡ್ಡ ಬಟ್ಟೆ ಅಂಚುಗಳಿರುತ್ತವೆ. ಚಳಿಗಾಲದಲ್ಲಿ ಎಸ್ಕಿಮೊಗಳು

SCERT TELANGANA



*ಚಿತ್ರ 4.9: ಅಲಸ್ಕಾದಲ್ಲಿನ ಇನ್ಯುಯಿಟ್ ಜನರು (1912)*

ಎರಡು ಪದರುಗಳಲ್ಲಿ ಬಟ್ಟೆಗಳು ಧರಿಸುತ್ತಾರೆ. ಕಾರಿಬೋ ಮರಿಯ ಚರ್ಮ ಮೃದುವಾಗಿ, ಬೆಚ್ಚಗೆ ಇರುತ್ತದೆ, ಆದ್ದರಿಂದ ಚಳಿಗಾಲದಲ್ಲಿ ಅದನ್ನು ಇಷ್ಟಪಡುತ್ತಾರೆ. ತೀರದಲ್ಲಿ ವಾಸಿಸುವ ತಂಡಗಳು ಬೇಸಿಗೆ, ವಸಂತಕಾಲದ ಕೊನೆಯಲ್ಲಿ ಸೀಲ್ ಚರ್ಮವನ್ನು ಇಷ್ಟಪಡುತ್ತಾರೆ. ಅದು ನೀರಿನಲ್ಲಿ ತೋಯುವುದಿಲ್ಲ ಆದರೆ ಗಟ್ಟಿಯಾಗಿ ಇರುವುದರಿಂದ ಕಷ್ಟ ಕರವಾಗಿರುತ್ತದೆ. ಬಟ್ಟೆಗಳು ಸಾಧಾರಣವಾಗಿ ಕಸೂತಿ ಕೆಲಸ (ಎಂಬ್ರಾಯಿಡರೀ) ಮಾಡಿರುತ್ತವೆ. ಅಂಚುಗಳು ಸುಂದರವಾಗಿ ಹೋಲಿದು ಇರುತ್ತವೆ. ವಿಧವಿಧದ ಬಣ್ಣಗಳ ಪ್ರಾಣಿ ಚರ್ಮಗಳನ್ನು ಕತ್ತರಿಸಿ ಸೇರಿಸಿ ಹೋಲಿಯುವುದರಿಂದ ಪರ್ಕಾಗಳ ಮೇಲೆ ಡಿಜೈನ್‌ಗಳು ಹಾಕುತ್ತಾರೆ.

ಪ್ರತಿದಿನ ಉಪಯೋಗಿಸುವ ವಸ್ತುಗಳು ಉಪಕರಣ ಗಳನ್ನು ಎಸ್ಕಿಮೊಗಳು ಅಲಂಕರಿಸುತ್ತಾರೆ. ಈ ಅಲಂಕರಣೆ ಯಿಂದ ಪ್ರತಿ ವ್ಯಕ್ತಿಯ ವಸ್ತುಗಳು ಒಂದು ಪ್ರತ್ಯೇಕತೆಯನ್ನು ಪಡೆಯುತ್ತವೆ. ಮೂಳೆ, ದಂತ, ಕಟ್ಟಿಗೆ, ಸಾಫ್ಟ್‌ಸ್ಟೋನ್ ಎನ್ನುವ ಮೃದುವಾದ ಕಲ್ಲಿನಿಂದ ಪ್ರಾಣಿಗಳ, ಮನುಷ್ಯರ ಚಿಕ್ಕ ಚಿಕ್ಕ ಗೊಂಬೆಗಳೇ ಅಲ್ಲದೇ ಆಯುಧಗಳು ಉಪಕರಣಗಳು ಸಹ ತಯಾರು ಮಾಡುತ್ತಾರೆ. ಉಪಕರಣಗಳನ್ನು ಉಪಯೋಗಿ ಸುವ ವ್ಯಕ್ತಿಯ ಕೈಗೆ ಹೊಂದಿಕೊಳ್ಳುವಂತೆ ಅವುಗಳನ್ನು ಜಾಗ್ರತೆಯಿಂದ ಕೆತ್ತುತ್ತಾರೆ. ಪೆಸಿಫಿಕ್, ಬಹುದೂರ ಪಶ್ಚಿಮ ಪ್ರಾಂತಗಳಲ್ಲಿ ಕಟ್ಟಿಗೆಯಿಂದ ಮುಖವಾಡಗಳನ್ನು ಕೆತ್ತಿ ಬಣ್ಣಗಳು ಹಾಕಿ, ರೆಕ್ಕೆಗಳು, ಪ್ರಾಣಿ ಚರ್ಮಗಳಿಂದ ಅಲಂಕರಿಸುತ್ತಾರೆ.

### ಧಾರ್ಮಿಕ ನಂಬಿಕೆಗಳು (Religious Beliefs) :

ಜೀವನ, ಆರೋಗ್ಯ, ರೋಗಗಳು ಹಸಿವು, ಮರಣಗಳ ಬಗ್ಗೆ ಎಸ್ಕಿಮೊಗಳ ಧರ್ಮ ಪ್ರತ್ಯೇಕ ಆಸಕ್ತಿ ತೋರಿಸುತ್ತದೆ. ಇವುಗಳೆಲ್ಲವುಗಳನ್ನು ಆತ್ಮಗಳು ನಿಯಂತ್ರಿಸುತ್ತವೆ ಎಂದು ಎಸ್ಕಿಮೊ ಗಳು ನಂಬಿಕೆ ಇಡುತ್ತಾರೆ. ಎಲ್ಲಾ ಎಸ್ಕಿಮೊ ಪಂಗಡಗಳು ಶಿಲ ಎನ್ನುವ ಆಲೌಕಿಕ ಶಕ್ತಿ ಯನ್ನು, ಆತ್ಮಗಳನ್ನು (ಜೀವನ ಆರೋಗ್ಯ, ಆಹಾರ ದೇವತೆಯಾದ ಸೆಡ್ನಾದಂತಹ ದೇವತೆಗಳು) ನಂಬುತ್ತವೆ. ಮನುಷ್ಯರು ಪ್ರಾಣಿಗಳ ಆತ್ಮಗಳು ಮರಣ ಹೊಂದಿದ ನಂತರ ಸಹ ಜೀವಿಸುತ್ತವೆ ಎಂದು ಅವರು ನಂಬುತ್ತಾರೆ. ಆದರೆ ಪ್ರತಿ ಪಂಗಡಕ್ಕೂ ತಮ್ಮದೇ ಆದ ನಂಬಿಕೆಗಳು, ಸಂಪ್ರಾದಾಯಗಳಿರುತ್ತವೆ. ಪ್ರತಿ ವ್ಯಕ್ತಿ, ಕುಟುಂಬ ಇಲ್ಲವೇ ಪಂಗಡಕ್ಕೆ ಒಂದು 'ನಿಷೇಧಿ ಸಲ್ಪಟ್ಟದ್ದು' (ಟಾಬೂ) ಇರುತ್ತದೆ. ಇದರ ಪ್ರಕಾರ ಅವರು ಪ್ರತ್ಯೇಕವಾಗಿ ಕೆಲವು ವಿಧವಾದ ಆಹಾರಗಳನ್ನು ಸೇವಿಸಬಾರದು ಎನ್ನುವ ಆಚಾರಗಳಿ ರುತ್ತವೆ. ಜನನ, ಮರಣಗಳ ಸಮಯದಲ್ಲಿ ಇಲ್ಲವೇ ಬೇಟೆ ದೊರೆತಾಗ ಇಲ್ಲವೇ ದೊರಕದೇ ಇದ್ದಾಗ ಪ್ರತಿ ಪಂಗಡಗಳು ದೊಡ್ಡ ಮಟ್ಟದಲ್ಲಿ ಸಂಭ್ರಮಗಳು ಮಾಡಿಕೊಳ್ಳುತ್ತವೆ. ಈ ಆಚಾರಗಳನ್ನು ನಿರ್ವಹಿಸುವವರನ್ನು ಷಮನಗಳೆನ್ನುತ್ತಾರೆ. ಆತ್ಮ ಗಳ ಪ್ರಪಂಚದೊಂದಿಗೆ ಅನುಸಂಧಾನಕ್ಕೆ ಈ ಷಮನಗಳು ಸಹಾಯ ಮಾಡುತ್ತಾರೆಂದು ನಂಬುತ್ತಾರೆ. ತಮ್ಮ ಆಚಾರಗಳಲ್ಲಿ ಮಾಯಾಜಾಲವನ್ನು ನಾಟಕೀಯತೆಯನ್ನು, ಅಚೇತನವನ್ನು ಷಮನಗಳು ಉಪಯೋಗಿಸುತ್ತಾರೆ.

### ವಿನೋದ (Recreation) :

ಕುಸ್ತಿ, ಓಟದ ಪಂದ್ಯ, ಹಾರ್ಪೂನ್‌ಗಳು ಬೀಸುವುದು ಇಂತಹವುಗಳಲ್ಲಿ ಸ್ಪರ್ಧೆಗಳು ಇತರ ಆಟಗಳು ಕಾರ್ಯಕ್ರಮ ಗಳು ಬಹಳ ಜನಾದರಣ ಹೊಂದಿರುತ್ತವೆ. ಕಥೆಗಳು ಹೇಳು ವುದು, ಹಾಡುವುದು, ತಮ್ಮಟೆ ಬಾರಿಸುವುದು, ಆಡುವುದು ದಂತಹವು ಧಾರ್ಮಿಕ ಆಚಾರಗಳಲ್ಲಿ ಭಾಗವಾದಂತೆ ನೈಪುಣ್ಯ ಇರುವ ಆಟಗಳು ಸಹ ಆಗಾಗ್ಗೆ ಇವುಗಳಲ್ಲಿ ಭಾಗವಾಗುತ್ತವೆ. ಪಂಗಡಗಳು ಒಂದಕ್ಕೊಂದು ಸೇರಿದಾಗ, ಸಂಭ್ರಮಗಳು ಆಚರಿಸಿಕೊಳ್ಳುವಾಗ ಮಾಂಸ, ಕೊಬ್ಬು ಪದಾರ್ಥಗಳಿಂದ ದೊಡ್ಡ ಮಟ್ಟದಲ್ಲಿ ಔತಣ ಮಾಡುತ್ತಾರೆ.

### ಹೊರಗಿನ ಪ್ರಪಂಚದೊಂದಿಗೆ ಸಂಬಂಧಗಳು (Contacts with the Outside World)

ಎಸ್ಕಿಮೊಗಳು ಮೊಟ್ಟಮೊದಲು ನೋಡಿದ ಹೊರಗಿ ನವರು ಐಸ್‌ಲ್ಯಾಂಡ್‌ನಿಂದ ಬಂದ ಗ್ರೀನ್‌ಲ್ಯಾಂಡ್‌ನಲ್ಲಿ ನಿವಾಸ ಏರ್ಪಡಿಸಿಕೊಂಡ ವೈಕಿಂಗ್‌ಗಳು ಐಸ್‌ಲ್ಯಾಂಡ್ ವಾಸಿ ಗಳೊಂದಿಗೆ ಎಸ್ಕಿಮೊಗಳ ಸಂಬಂಧಗಳು ಸುಮಾರು 1200ರಲ್ಲಿ ಪ್ರಾರಂಭವಾಗಿ 1400 ವರ್ಷದವರೆಗೆ ಮುಂದುವರೆದವು.

SCERT TELANGANA

1576-78ರಲ್ಲಿ ಬಾಫಿನ್ ದ್ವೀಪಗಳನ್ನು ಬ್ರಿಟೀಷ್ ಸಮುದ್ರ ಯಾತ್ರಿಕನು ಮಾರ್ಟಿನ್ ಫ್ರಾಸ್ ಬಿಷರ್ ಸಂದರ್ಶಿಸಿದ ನಂತರ ಇತರ ಯುರೋಪ್ ವಾಸಿಗಳು ಎಸ್ಕಿಮೊ ಪ್ರಾಂತದಲ್ಲಿ ಮತ್ತಷ್ಟು ಒಳಭಾಗಕ್ಕೆ ಅನ್ವೇಷಣೆಗಳು ಪ್ರಾರಂಭಿಸಿದರು. ಡೇನಿಷ್, ನಾರ್ವೇಜಿಯನ್, ಇಂಗ್ಲಿಷ್ ಅನ್ವೇಷಕರು ಸಮುದ್ರಗಳ ಮೇಲೆ ಉತ್ತರ ಪ್ರಾಂತಗಳ ಕೊನೆಯವರೆಗೂ ಹೋಗಿ ಚೈನಾಗೆ ಪ್ರಖ್ಯಾತವಾದ ವಾಯುವ್ಯ ಮಾರ್ಗವನ್ನು ಕಂಡುಹಿಡಿದರು. 1728ಕ್ಕೆ ರಷ್ಯನ್ನರು, ಸೈಬೀರಿಯಾ, ಉತ್ತರ ಅಲಾಸ್ಕಾಗಳಿಗೆ ಸೇರಿಕೊಂಡರು. ಪೆಸಿಫಿಕ್ ಮಹಾಸಮುದ್ರ, ಆರ್ಕ್ಟಿಕ್ ಸಮುದ್ರದಿಂದ ವಾಯುವ್ಯ ಮಾರ್ಗವನ್ನು ಕಂಡುಹಿಡಿಯುವುದಕ್ಕೆ ಅನ್ವೇಷಕರು ಮಾಡಿದ ಪ್ರಯತ್ನದಿಂದ ಯುರೋಪಿಯನ್ನರೊಂದಿಗೆ ಎಸ್ಕಿಮೊಗಳ ಸಂಪರ್ಕ ಪ್ರಾರಂಭವಾಯಿತು. ಆದರೆ 1800ರ ಕೊನೆಯವರೆಗೆ ಉತ್ತರ ಆರ್ಕ್ಟಿಕ್ ದ್ವೀಪಗಳಲ್ಲಿ ಇರುತ್ತಿದ್ದ ಎಸ್ಕಿಮೊ ಪಂಗಡಗಳಿಗೆ ಹೊರಗಿನವರಿಂದ ಯಾವುದೇ ರೀತಿಯ ಸಂಬಂಧಗಳಿಲ್ಲ.

1850ರ ನಂತರ ಅಮೇರಿಕಾ, ಯೂರೋಪ್ ದೇಶಗಳಿಂದ ತಿಮಿಂಗಲಗಳ ಬೇಟೆಗಾರರು ಪ್ರಾಣಿಗಳ ಚರ್ಮ ವ್ಯಾಪಾರಿಗಳು ಬರುವುದರೊಂದಿಗೆ ಎಸ್ಕಿಮೊಗಳಲ್ಲಿ ಬಹಳ ಬದಲಾವಣೆಗಳು ಬಂದಿವೆ. ತಿಮಿಂಗಲಗಳನ್ನು ಬೇಟೆಯಾಡುವವರಿಗೋಸ್ಕರ ಎಸ್ಕಿಮೊಗಳು ಕೆಲಸ ಮಾಡಲು ಪ್ರಾರಂಭಿಸಿದರು. ಅವರಿಗೆ ಪ್ರಾಣಿಗಳ ಚರ್ಮಗಳನ್ನು ಮಾರಲು ಪ್ರಾರಂಭಿಸಿದರು. ಹೊರಗಿನವರು ಎಸ್ಕಿಮೊಗಳಿಗೆ ತುಪಾಕಿಗಳು, ಇತರ ಉಪಕರಣಗಳನ್ನು ಸರಬರಾಜು ಮಾಡುತ್ತಿದ್ದರು. ಹೊಸ ಆಯುಧಗಳು, ಉಪಕರಣಗಳಿಂದ ಪ್ರಾಣಿಗಳ ಚರ್ಮಕ್ಕೆ ಬೇಡಿಕೆ ಹೆಚ್ಚಾಗಿದ್ದುದರಿಂದ ಪ್ರಾಣಿಗಳನ್ನು ದೊಡ್ಡ ಸಂಖ್ಯೆಯಲ್ಲಿ ಕೊಲ್ಲಲಾರಂಭಿಸಿದರು. ಕೆಲವು ಪ್ರಾಂತಗಳಲ್ಲಾದರೆ ಈ ತೀರ್ವ ಬೇಟೆಯಿಂದ ಕಾರಿಬೋ ಸೀಲ್ ಪ್ರಾಣಿಗಳು ನಾಶವಾಗಿವೆ.

ಹೊರಗಿನವರು ಬರುವುದರಿಂದ ಎಸ್ಕಿಮೊಗಳಿಗೆ ರೋಗ ನಿರೋಧಕ ಶಕ್ತಿ, ಇಲ್ಲವೇ ಸಹಜ ನಿವಾರಣೆ ಇಲ್ಲದ ಹೊಸ ರೋಗಗಳು ಬಂದವು. ಈ ರೋಗಗಳಲ್ಲಿ ಸಿಡುಬು(Small Pox) , ಕ್ಷಯ, ಶೀತಜ್ವರ, ನ್ಯುಮೋನಿಯಾದಂತಹ ಅಪಾಯಕರವಾದವು ಸಹ ಇವೆ. 1800ರ ನಂತರ ಆರ್ಕ್ಟಿಕ್ ಪ್ರಾಂತದಲ್ಲಿ ವರ್ಷದುದ್ದಕ್ಕೂ ಯೂರೋಪಿಯನ್ನರು ವಾಸಿಸಲು ಆರಂಭಿಸಿದರು. ಇದರಿಂದ ಈ ರೋಗಗಳು ಬಹಳ ಅಪಾಯಕರವಾಗಿ ಬದಲಾಗಿವೆ.

ಎಸ್ಕಿಮೊಗಳು, ಹೊರಗಿನವರ ನಡುವಿನ ಸಂಬಂಧವನ್ನು 'ಅಭಿವೃದ್ಧಿ, ಪತನ' ಎನ್ನುತ್ತಾರೆ. ಅಲೆ, ಅಲೆಗಳಾಗಿ ಹೊರಗಿನಿಂದ ಬಂದವರಿಂದ ಕೆಲವು ಕಾಲದವರೆಗೆ ಸಂಪತ್ತು, ವಿದ್ಯೆ, ಉದ್ಯೋಗ ಒದಗಿಸಲ್ಪಟ್ಟವು. ಆ ನಂತರ ಬಡತನ, ಎಸ್ಕಿಮೊಗಳು ಚೆಲ್ಲಾಪಿಲ್ಲಿಯಾಗುವಂತಹ ಅನಾಹುತಗಳು ಪರಿಣಮಿಸಿದವು.

ಮೇಲೆ ಹೆಸರಿಸಿದ ಒಂದೊಂದರಿಂದ ಎಸ್ಕಿಮೊಗಳಿಗೆ ವಿಭಿನ್ನ ಸಾಮಾಜಿಕ, ಆರ್ಥಿಕ ಶಕ್ತಿಗಳೊಂದಿಗೆ ಸಂಬಂಧಗಳು ಏರ್ಪಟ್ಟವು. ಒಂದು ಕಾಲದಲ್ಲಿ ಯಾರು ಹೋಗುವುದಕ್ಕೆ ಸಾಧ್ಯವಾಗದೇ ಇರುವ ಉತ್ತರ ಪ್ರಾಂತಗಳು ಈಗ ವಿಮಾನಯಾನ, ರಾಷ್ಟ್ರೀಯ ಹೆದ್ದಾರಿಗಳು, ಶಕ್ತಿಯುತವಾದ ಹಡಗುಗಳು ಉಪಗ್ರಹ ಪ್ರಸಾರಗಳ ಕಾರಣದಿಂದ ಎಲ್ಲರಿಗೂ ಕೈಗಟಕುವಂತೆ ಬಂದವು. ಈ ಬದಲಾವಣೆಗಳ ಫಲವಾಗಿ ಎಸ್ಕಿಮೊಗಳ ಜೀವನ ವಿಧಾನ ಮೇಲೆ ತೀರ್ವವಾದ ಒತ್ತಡ ಏರ್ಪಟ್ಟಿದೆ.



*ಚಿತ್ರ 4.10: ಚುಕೋಟದಲ್ಲಿ ವಾಲ್‌ರಸ್ ಬೇಟೆ (2000)*

SCERT TELANGANA

- ಹೊರಗಿನವರಿಂದ ಏರ್ಪಟ್ಟ ಸಂಬಂಧಗಳ ಕಾರಣದಿಂದ ಟಂಡ್ರಾ ಪ್ರಾಂತ ವಾಸಿಗಳ ಜೀವನಗಳು, ಅಭಿವೃದ್ಧಿಯಾದವಾ ? ನಾಶವಾದವಾ ? ನಿಮ್ಮ ಉತ್ತರಕ್ಕೆ ಕಾರಣಗಳನ್ನು ತಿಳಿಸಿರಿ.
- ಈ ಪಾಠದಲ್ಲಿನ ಚಿತ್ರಗಳನ್ನು ನೋಡಿರಿ. ಎಸ್ಕಿಮೊಗಳ ಬಟ್ಟೆಗಳಲ್ಲಿ, ಬೇಟೆಯಾಡುವ ವಿಧಾನಗಳಲ್ಲಿ ಎಂತಹ ಬದಲಾವಣೆಗಳು ಬಂದಿವೆ ?

## ಮುಖ್ಯ ಪದಗಳು

| | | |
|---|---|---|
| 1. ಆರ್ಕಿಟಿಕ್ ವಲಯ | 2. ಟಂಡ್ರಾ ವೃಕ್ಷ ಸಂಪತ್ತು | 3. ಐಸ್‌ಬರ್ಗ್ಸ್ |
| 4. ಎಸ್ಕಿಮೊಗಳು | 5. ಕಯಾಕ್ | 6. ಇಗ್ಲೂ |

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ

1. ತಪ್ಪಾಗಿರುವ ವಾಕ್ಯಗಳನ್ನು ಸರಿಯಾದ ವಾಸ್ತವಾಂಶಗಳೊಂದಿಗೆ ಪುನಃ ಬರೆಯಿರಿ :
   a) ಪ್ರಾಣಿಗಳ ಭಾಗಗಳನ್ನು ಕೇವಲ ಬಟ್ಟೆಗಳಿಗೆ ಮಾತ್ರವೇ ಉಪಯೋಗಿಸುತ್ತಿದ್ದರು.
   b) ಆಹಾರದಲ್ಲಿ ಪ್ರಧಾನ ಭಾಗ ತರಕಾರಿಗಳು.
   c) ಟಂಡ್ರಾ ಪ್ರಾಂ ತ ಜನರು ಪ್ರಖ್ಯಾತಿ ಹೊಂದಿದ ಆಟಗಳಿಗೆ ಅವರ ದಿನನಿತ್ಯ ಜೀವನಗಳಿಂದ ಸಂಬಂಧವಿದೆ.
   d) ಹೊರಗಿನವರ ಜೊತೆ ಸಂಬಂಧಗಳಿಂದ ಅವರ ಆರೋಗ್ಯ ಪ್ರಭಾವಕ್ಕೊಳಗಾಯಿತು.
2. ಏಳನೆ ತರಗತಿಯಲ್ಲಿ ನೀವು ಭೂಮಧ್ಯರೇಖಾ ಪ್ರಾಂತದ ಕುರಿತು ಓದಿದ್ದುದರ ಆಧಾರದಿಂದ ಧೃವ ಪ್ರಾಂತದಲ್ಲಿ ವ್ಯತ್ಯಾಸಗಳು ಏನೆಂದು ಹೇಳಿರಿ ?
3. ಟಂಡ್ರಾ ಪ್ರಾಂಥದ ಜನರ ಜೀವನ ಅಲ್ಲಿಯ ವಾತಾವರಣದ ಮೇಲೆ ಹೇಗೆ ಆಧಾರಪಟ್ಟಿದೆ ? ಕೆಳಗಿನ ಅಂಶಗಳಲ್ಲಿ ಇದನ್ನು ವಿವರಿಸಿರಿ.

| ಆಹಾರ | ಬಟ್ಟೆಗಳು | ಪ್ರಯಾಣಗಳು | ನಿವಾಸ |
|---|---|---|---|
| | | | |
| | | | |

4. ನೀವು ವಾಸಿಸುತ್ತಿರುವ ಪ್ರಾಂತಕ್ಕೂ, ಈ ಪಾಠದಲ್ಲಿ ನೀವು ಓದಿದ ಪ್ರಾಂತಕ್ಕೂ ನಡುವೆ ಬಹಳ ವ್ಯತ್ಯಾಸಗಳಿವೆ. ಈ ಅಧ್ಯಾಯದಲ್ಲಿನ ಉಪಶೀರ್ಷಿಕೆಗಳ ಪ್ರಕಾರ ವ್ಯತ್ಯಾಸಗಳೆಲ್ಲವುಗಳನ್ನು ಪಟ್ಟಿಮಾಡಿರಿ. ಈಗ ನಿಮ್ಮ ಪ್ರಾಂತದಲ್ಲಿನ, ಟಂಡ್ರಾ ಪ್ರಾಂತದಲ್ಲಿನ ವಿವರಗಳು, ಚಿತ್ರಗಳಿಂದ ಒಂದು ಗೋಡೆ ಪತ್ರಿಕೆಯನ್ನು ತಯಾರು ಮಾಡಿರಿ.
5. ಒಂದು ದಿನವೆಲ್ಲಾ ಸೂರ್ಯ ಇರುವುದಿಲ್ಲವೆಂದು, ಮತ್ತೊಂದು ದಿನ ಸೂರ್ಯ ಅಸ್ತಮಿಸುವುದಿಲ್ಲವೆಂದು ಊಹಿಸಿಕೊಳ್ಳಿ. ನಿಮ್ಮ ದಿನನಿತ್ಯದ ಜೀವನದಲ್ಲಿ ಎಂತಹ ಬದಲಾವಣೆಗಳು ಮಾಡುತ್ತೀರ ? ಅವುಗಳ ಕುರಿತು ಕುಪ್ತವಾಗಿ ಬರೆಯಿರಿ.
6. ನಿಮ್ಮ ಹತ್ತಿ ರವಿರುವ ಅಟ್ಲಾಸ್ ಸಹಾಯದಿಂದ ಎಸ್ಕಿಮೋಗಳಿಗೆ ಸೇರಿದ ಯಾವುದಾದರೂ ಐದು ಪ್ರಾಂತಗಳನ್ನು ಪ್ರಪಂಚ ಪಟದಲ್ಲಿ ಗುರ್ತಿಸಿರಿ.

SCERT TELANGANA

ಪ್ರಕರಣ 5

# ಕಾಡುಗಳು - ಉಪಯೋಗ, ರಕ್ಷಣೆ

- ನಿಮ್ಮಲ್ಲಿ ಕೆಲವು ಮಂದಿಗೆ ಹತ್ತಿರದಲ್ಲಿರುವ ಕಾಡು ತಿಳಿದೇ ಇರುತ್ತದೆ – ಅಲ್ಲಿಯ ಮರಗಳು, ಸಸ್ಯಗಳು, ಪ್ರಾಣಿಗಳು, ಕಲ್ಲುಗಳು, ಹಳ್ಳಗಳು, ಪಕ್ಷಿಗಳು, ಕೀಟಗಳು ನೋಡಿರುತ್ತೀರ. ಇವುಗಳ ಬಗ್ಗೆ ತಿಳಿದಿರುವವರು ವಿವರಿಸೆಂದು ಹೇಳಿರಿ. ಅಲ್ಲಿ ಏನು ಮಾಡುತ್ತಾರೋ ? ಹೇಳೆಂದು ತಿಳಿಸಿರಿ.
- ಉರುವಲು ಕಟ್ಟಿಗೆ, ಎಲೆಗಳು, ಹಣ್ಣುಗಳು ಇಲ್ಲವೇ ಗಡ್ಡೆಗಳು ಸಂಗ್ರಹಿಸುವುದಕ್ಕೆ ನೀವು ಎಂದಾದರೂ ಕಾಡಿಗೆ ಹೋಗಿದ್ದೀರಾ? ಅದರ ಬಗ್ಗೆ ತರಗತಿಯಲ್ಲಿ ವಿವರಿಸಿರಿ. ನಿಮ್ಮ ಪ್ರಾಂತದಲ್ಲಿ ಕಾಡಿನಿಂದ ಜನರು ಸಂಗ್ರಹಿಸುವ ವಸ್ತುಗಳ ಪಟ್ಟಿ ತಯಾರು ಮಾಡಿರಿ. ಹಾಗೆ ಸಂಗ್ರಹಿಸಿದವುಗಳನ್ನು ಏನು ಮಾಡುತ್ತಾರೆ ?
- ಹಿಂದಿನ ತರಗತಿಗಳಲ್ಲಿ ನೀವು ಕಾಡುಗಳ ಬಗ್ಗೆ, ಅಲ್ಲಿ ವಾಸಿಸುವ ಜನರ ಬಗ್ಗೆ ಓದಿದ್ದೀರ, ಅವುಗಳನ್ನು ನೆನಪಿಸಿಕೊಂಡು ಕಾಡು ಜನರ ಬಗ್ಗೆ ಮಾತನಾಡಿರಿ.
- ತರಗತಿಯಲ್ಲಿ ಪ್ರತಿಯೊಬ್ಬರು ಕಾಡಿನ ಚಿತ್ರ ಬಿಡಿಸಿ ಅವುಗಳನ್ನು ಹೋಲಿಸಿರಿ.
- ನಮ್ಮ ಜಾನಪದ ಕಥೆಗಳು, ಪುರಾಣಗಳು ಹಲವು ಬಾರಿ ಕಾಡುಗಳನ್ನು ಪ್ರಸ್ತಾಪಿಸಿವೆ. ಅಂತಹ ಕಥೆ ಯಾವುದಾದರೂ ತರಗತಿಯಲ್ಲಿ ಹೇಳಿರಿ.
- ಅನೇಕ ಕಾಡುಗಳನ್ನು ಜನರು ಪವಿತ್ರವೆಂದು ಭಾವಿಸಿ ಪೂಜಿಸುತ್ತಾರೆ. ದೇವ, ದೇವತೆಗಳು ವಾಸಿಸುವ ಪ್ರಾಂತಗಳಾಗಿ ಕೆಲವು ಕಾಡುಗಳ ಪ್ರಖ್ಯಾತಿ ಪಡೆದಿವೆ. ಅವುಗಳ ಬಗ್ಗೆ ತಿಳಿದುಕೊಂಡು ತರಗತಿ ಕೋಣೆಯಲ್ಲಿ ಹೇಳಿರಿ.

## ಕಾಡು ಎಂದರೇನು ? (What is a Forest?)

ಕಾಡು ಎಂದರೆ ಒಬ್ಬೊಬ್ಬರಿಗೆ ಒಂದೊಂದು ಭಾವನೆ ಹುಟ್ಟುತ್ತದೆ. ಕಾಡುಗಳಲ್ಲಿ ಪ್ರಾಣಿಗಳು, ಹಾವುಗಳು, ಕೀಟಗಳು, ಆಳವಾದ ಕಣಿವೆಗಳು, ಕಡಿದಾದ ಪರ್ವತಗಳು ಅಥವಾ ಬಂಡೆಗಳು, ಕಲ್ಲುಗಳು ಇರುತ್ತವೆಯೆಂಬ ಅಭಿಪ್ರಾಯದಿಂದ ಕೆಲವು ಜನರು ಕಾಡೆಂದರೆ ಭಯಪಡುತ್ತಾರೆ.ಕೆಲ ಜನರು ಯಾವುದೇ ಭಯ ಇಲ್ಲದಂತೆ ತಮ್ಮ ಮನೆಯಲ್ಲಿದ್ದಂತೆ ಕಾಡುಗಳಲ್ಲಿ ನಡೆಯುತ್ತಾ ಆಟವಾಡುತ್ತಾ ಇರುತ್ತಾರೆ. ಕೆಲವು ಜನರಿಗೆ ಕಾಡುಗಳೆಂದರೆ ಪವಿತ್ರ ಸ್ಥಾನಗಳು, ಅಲ್ಲಿಯ ದೇವತೆಗಳನ್ನು ಪೂಜಿಸುತ್ತಾರೆ. ಇನ್ನೂ ಸ್ವಲ್ಪ ಜನರು ಅದು ಕಟ್ಟಿಗೆ, ಬಿದಿರು, ಬೀಡಿ ಎಲೆಗಳಂತಹ ಸಂಪನ್ಮೂಲಗಳು ದೊರೆಯುವ ಪ್ರದೇಶ, ಪ್ರಾಣಿಗಳನ್ನು ಬೇಟೆಯಾಡುವ ಪ್ರದೇಶ ಸಂಗ್ರಹಿಸಿದ ಇವುಗಳನ್ನು ಮಾರುಕಟ್ಟೆಯಲ್ಲಿ ಮಾರುತ್ತಾರೆ.

ಅದೇ ವಿಧವಾಗಿ ಬೇರೆ ಬೇರೆ ಜನರು ಕಾಡುಗಳನ್ನು ಬೇರೆ ಬೇರೆಯಾಗಿ ಉಪಯೋಗಿಸಿಕೊಳ್ಳುತ್ತಾರೆ. ಕೆಲವು ಜನರು ಕಾಡುಗಳಲ್ಲಿ ಚಿಕ್ಕ ಚಿಕ್ಕ ಮನೆಗಳಲ್ಲಿ ಇರುತ್ತಾ ತಮ್ಮ ಮನೆಗಳ ಸುತ್ತಲೂ ಕೆಲವು ತರಕಾರಿಗಳನ್ನು ಬೆಳೆಸುತ್ತಾರೆ. ಹಣ್ಣುಗಳು, ಗಡ್ಡೆಗೆಣಸುಗಳನ್ನು ಶೇಖರಿಸುತ್ತಾರೆ. ಚಿಕ್ಕ ಪ್ರಾಣಿಗಳನ್ನು ಬೇಟೆಯಾಡು ತ್ತಾರೆ. ಕೆಲವು ಜನರು ತಮ್ಮ ಕುರಿಗಳು, ಮೇಕೆಗಳು, ಆಕಳುಗಳು ಎಮ್ಮೆಗಳಂತಹ ಪಶುಗಳನ್ನು ಕಾಡುಗಳಲ್ಲಿ ಮೇಯಿಸುತ್ತಾರೆ. ಕೆಲವು ಜನರು ಕಾಡಿನಲ್ಲಿ ಸ್ವಲ್ಪ ಪ್ರದೇಶವನ್ನು ಕಡಿದು ಪೊಡು ವ್ಯವಸಾಯ ಮಾಡುತ್ತಾರೆ. ಆರನೇ ತರಗತಿಯಲ್ಲಿ ಕೂನವರಂ ಬೆಟ್ಟಗಳಲ್ಲಿ ವಾಸಿಸುವ ಜನರ ಬಗ್ಗೆ ಓದಿದ್ದೀರ. ಕೆಲವು ಜನರು ಕಾಡುಗಳಲ್ಲಿ ಮರಗಳನ್ನು, ಬಿದಿರನ್ನು ಕಡಿದು ಕಾಗದದ ಮಿಲ್ಲುಗಳಿಗೆ, ಪಟ್ಟಣಗಳಲ್ಲಿ ವಸ್ತುಗಳು ತಯಾರಿಸುವವರಿಗೆ ಮಾರುತ್ತಾರೆ. ಕೆಲವು ಜನರು ಕಾಡುಗಳನ್ನು ಹೊಲಗಳಾಗಿ, ಪ್ರೇಕ್ಷಣೀಯ ಸ್ಥಳಗಳಾಗಿ, ಆಣೆಕಟ್ಟುಗಳು ಕಟ್ಟಿ ನೀರನ್ನು ಸಂಗ್ರಹಿಸುವ ರೀಜರ್ವಾಯರ್‌ಗಳಾಗಿ ಬದಲಾಯಿಸಬಹುದೆಂದು ತಿಳಿಯುತ್ತಾರೆ.

ಕಾಡುಗಳನ್ನು ಉಪಯೋಗಿಸಿಕೊಳ್ಳುತ್ತಿರುವುದು ಮನುಷ್ಯರೊಂದೇ ಅಲ್ಲವೆಂದು ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಮರಗಳು, ಸಸ್ಯಗಳು, ಹುಲ್ಲು ಜಾತಿಗಳು, ಪಕ್ಷಿಗಳು, ಕೀಟಗಳು, ಪ್ರಾಣಿಗಳು ಮೀನುಗಳಂತಹ ಅಸಂಖ್ಯಾತ ಜೀವಗಳು ಕಾಡುಗಳಲ್ಲಿ ಇರುತ್ತಾ ಅವುಗಳನ್ನು



SCERT TELANGANA

ಉಪಯೋಗಿಸಿಕೊಳ್ಳುತ್ತವೆ. ಆದ್ದರಿಂದ ನಾವು ಕಾಡುಗಳ ಬಗ್ಗೆ ಆಲೋಚಿಸುವಾಗ ಅವುಗಳ ಬಗ್ಗೆ ಸಹ ಆಲೋಚಿಸಬೇಕು.

- ಕಾಡು ಎಂದರೇನು ? ಕಾಡನ್ನು ಅನೇಕ ವಿಧಗಳಲ್ಲಿ ವ್ಯಾಖ್ಯಾನಿಸಬಹುದು. ಕಾಡಿಗೆ ವ್ಯಾಖ್ಯೆ ಬರೆಯಿರಿ?
- ಇವುಗಳನ್ನು ತರಗತಿಯಲ್ಲಿ ಚರ್ಚಿಸಿ ಅಧಿಕ ವಿದ್ಯಾರ್ಥಿಗಳಿಗೆ ಸರಿಯಾದವುಗಳೆಂದು ಕಾಣುವ ಅಂಶಗಳನ್ನು ಬರೆಯಿರಿ ?

ನಾವು ಕಾಡನ್ನು ಹೇಗೆ ನೋಡುತ್ತೇವೆ ಎನ್ನುವುದರ ಆಧಾರದ ಮೇಲೆ ಅದರ ವ್ಯಾಖ್ಯಾನ ಆಧಾರಪಟ್ಟಿರುತ್ತದೆ. ಉದಾಹರಣಗೆ 'ಮರಗಳಿಂದಿರುವ ವಿಶಾಲವಾದ ಭೂಭಾಗ' ಎನ್ನುವುದು. ಒಂದು ಸುಲಭವಾದ ವ್ಯಾಖ್ಯೆ. ಇದು ಉಪಯೋಗರವಾಗಿರುವ ವ್ಯಾಖ್ಯೆಯಾದರೂ ಇದಕ್ಕೆ ಅನೇಕ ಇತಿಮಿತಿಗಳಿವೆ. ಉದಾಹರಣೆಗೆ ಎಷ್ಟು ವಿಶಾಲವಾದದ್ದು ಎನ್ನುವ ಪ್ರಶ್ನೆ ಮೂಡುತ್ತದೆ. ಮರಗಳಿಂದ ಅಂದರೆ ಏನು ? ಮರಗಳು ಎಷ್ಟು ದಟ್ಟವಾಗಿರಬೇಕು ? ಹಣ್ಣಿನ ತೋಟಗಳ ಂತಹವುಗಳಲ್ಲೂ ಸಹ ಮರಗಳಿರುತ್ತವೆ. ಇವುಗಳಿಗೂ, ಕಾಡುಗಳಿಗೂ ವ್ಯತ್ಯಾಸಗಳು ತೋರಿಸಬೇಕಾ, ಬೇಡವಾ? ಮರಗಳ ಕೆಳಗೆ ಬೆಳೆಯುವ ಪೊದೆಗಳು, ಪ್ರಾಣಿಗಳು, ಪಕ್ಷಿಗಳು, ಕೀಟಗಳು ಇಲ್ಲದೆ ಅದನ್ನು ಕಾಡು ಎನ್ನಬಹುದೇ ? ನಾವು ಕೊಡುವ ಯಾವ ವ್ಯಾಖ್ಯಾನಕ್ಕಾದರೂ ಇಂತಹವೇ ಅನೇಕ ಪ್ರಶ್ನೆಗಳಿರುಬಹುದು.

ಆದರೂ ಕಾಡು ಎಂದರೆ ಸಮಗ್ರ ಅವಗಾಹನೆ ಏರ್ಪಡಿಸಿ ಕೊಳ್ಳಬೇಕಾದ ಅವಸರ ವಿದೆ. ಬಹಳ ಕಾಡು ಗಳಲ್ಲಿ ಕೆಳಗೆ ಹೆಸರಿಸಿದ ಅಂಶಗಳಿರುಬಹುದು.

1. ವಿಶಾಲವಾದ ಭೂಭಾಗ - ಉದ್ದ, ಅಗಲಗಳಲ್ಲಿ ಅನೇಕ ಕೀಲೋ ಮೀಟರ್‌ಗಳಿರಬೇಕು.

2. ಮರಗಳು, ಅದರ ಕೆಳಗೆ ಬೆಳೆಯುವ ಪೊದೆಗಳು, ಸಸ್ಯಗಳು, ಹುಲ್ಲು ಜಾತಿಗಳು, ಬಳ್ಳಿಗಳು. ಇವು ಬೆಳೆಯಲು ಮಾನವರು ಮಧ್ಯ ಪ್ರವೇಶಿಸುವ ಅವಶ್ಯಕತೆ ಇರುವುದಿಲ್ಲ.

3. ಗಣನೀಯವಾದ ಜೀವ ವೈವಿದದ್ಯತೆ- ಅನೇಕ ವಿಧದ ಮರಗಳು, ಪ್ರಾಣಿಗಳು ಸಹಜವಾಗಿ ಜೀವಿಸುತ್ತಾ, ಯಾವುದೇ ಮಧ್ಯ ಪ್ರವೇಶವಿಲ್ಲದೆ ಅಭಿವೃದ್ಧಿ ಹೊಂದುತ್ತವೆ.

4. ಭಾರತ ದೇಶದಲ್ಲಿ ಬಹಳ ಕಾಡುಗಳಲ್ಲಿ ಜನರು ವಾಸಿಸುತ್ತಿರುತ್ತಾರೆ. ಕಾಡುಗಳನ್ನು ನಾಶಮಾಡದಂತೆ, ಅವುಗಳಿಗೆ ಅನುಗುಣವಾಗಿ ತಮ್ಮ ಜೀವನಗಳನ್ನು ಆಳವಡಿಸಿಕೊಂಡು ಇವರು ಅಲ್ಲಿ ವಾಸಿಸುತ್ತಿದ್ದಾರೆ.

ಕಾಡುಗಳ ಸುತ್ತಮುತ್ತಲಲ್ಲಿರುವ ಜನರು ಅವುಗಳನ್ನು ಆಹಾರ, ಮನೆಕಟ್ಟಿಕೊಳ್ಳಲು, ವ್ಯವಸಾಯ ಉಪಕರಣಗಳಿಗೆ ಕಟ್ಟಿಗೆ, ಉರುವಲು, ಪಶುಗಳನ್ನು ಮೇಯಿಸುಲು, ಪೂಜೆಗಳು ಮಾಡುವುದಕ್ಕೆ ಏಕಾಂತವಾಗಿ ಸಮಯ ಕಳೆಯಲು ಇಂತಹ ಅನೇಕ ಅವಸರಗಳಿಗೆ ಉಪಯೋಗಿಸಿಕೊಳ್ಳುತ್ತಾರೆ. ಕಾಡುಗಳಿಗೆ ದೂರದಲ್ಲಿರುವವರು ಸಹ ಮಾರುಕಟ್ಟೆಗಳಲ್ಲಿ ಕಟ್ಟಿಗೆ, ಗಿಡಮೂಲಿಕಗಳನ್ನು ಕೊಳ್ಳುವುದರ ಮೂಲಕ ಕಾಡುಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಕಾಡಿನ ಉತ್ಪತ್ತಿಗಳನ್ನು ಸಂಗ್ರಹಿಸಿ ಮಾರುವುದರ ಮೂಲಕ ಅನೇಕ ಜನರು ಜೀವನಾಧಾರ ಪಡೆಯುತ್ತಿದ್ದಾರೆ. ಕಾಡುಗಳ ಹಲವು ಪ್ರಯೋಜನಗಳ ನಡುವೆ ಘರ್ಷಣೆಗಳು ಹೇಗೆ ಏರ್ಪಡುತ್ತಿವೆಯೋ, ಅವುಗಳನ್ನು ಹೇಗೆ ಪರಿಹರಿಸುತ್ತಿದ್ದಾರೋ ನಂತರ ನೋಡೋಣ.

- ಕಾಡುಗಳು ಇರುವುದ



*ಚಿತ್ರ 5.1: ಕಾಡಿನ ಹಿನ್ನೆಲೆಯಲ್ಲಿ ಮೇಲಿನ ಚಿತ್ರಕ್ಕೆ ಒಂದು ವ್ಯಾಖ್ಯೆ ಬರೆಯಿರಿ.*

SCERT TELANGANA

ಮುಖ್ಯವಾ ? ಕಾಡುಗಳೆಲ್ಲ ವುಗಳನ್ನು ಕಡಿದು, ವ್ಯವಸಾಯಕ್ಕೆ ಗಣಿಗಳು ಅಗೆಯಲು, ಕೈಗಾರಿಕಗಳ ನಿರ್ಮಾಣಕ್ಕೆ ಮಾನವರ ವಾಸಕ್ಕೆ ಉಪಯೋಗಿಸಿದರೆ ಏನಾಗುತ್ತದೆ ? ಕಾಡುಗಳು ಇಲ್ಲದೆ ನಾವು ಜೀವಿಸಲಾರೆವಾ ? ನಿಮ್ಮ ತರಗತಿಯಲ್ಲಿ ಚರ್ಚಿಸಿರಿ.

## ಕಾಡುಗಳ ಪ್ರಕಾರಗಳು, ಅವುಗಳಿರುವ ಪ್ರದೇಶಗಳು (Location and Types of forests)

ಕಾಡುಗಳು ಎಲ್ಲಿ ಬೆಳೆಯುತ್ತವೆ ? ಈ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟ, ಏಕೆಂದರೆ ಕೆಲವು ಸಾವಿರ ವರ್ಷಗಳ ಹಿಂದೆ ಮಣ್ಣು, ಸೂರ್ಯರಶ್ಮಿ, ಮಳೆ ಇರುವ ಪ್ರತಿ ಸ್ಥಳದಲ್ಲಿ ಕಾಡುಗಳು ಬೆಳೆಯುತ್ತಿದ್ದವು. ಆರ್ಕಟಿಕ್ ಪ್ರಾಂತದಲ್ಲಿ, ಮಂಜಿನಿಂದ ಮುಚ್ಚಲ್ಪಟ್ಟ ಹಿಮಾಲಗಳಲ್ಲಿ, ಮರಳು, ಕಲ್ಲುಗಳಿಂದ ಇರುವ ಮರುಭೂಮಿಗಳಲ್ಲಿ ಮರಳಿನಿಂದ ಕೂಡಿದ ತೀರ ಪ್ರಾಂತದಲ್ಲಿ ಮಾತ್ರ ಕಾಡುಗಳಿಲ್ಲ. ಈ ಪ್ರಾಂತ ಗಳನ್ನು ಬಿಟ್ಟು ಉಳಿದ ಎಲ್ಲಾ ಸ್ಥಳಗಳಲ್ಲಿ ಕಾಡುಗಳು ಬೆಳೆಯುತ್ತಿದ್ದವು. ಆದರೆ ಮನುಷ್ಯರು ವ್ಯವಸಾಯ ಹಿಡಿದು ಊರು ಪಟ್ಟಣಗಳಲ್ಲಿ ವಾಸಿಸಲು ಪ್ರಾರಂಭಿಸಿದ ನಂತರ ವ್ಯವಸಾಯ, ಗಣಿಗಳು, ಹಣ್ಣಿನ ತೋಟಗಳು, ಕೈಗಾರಿಕೆಗಳಂತಹವುಗಳಿಗಾಗಿ ಕಾಡುಗಳನ್ನು ಕಡಿದು ಹಾಕಲು ಪ್ರಾರಂಭಿಸಿದರು. 20ನೇ ಶತಮಾನದ ಆರಂಭದ ಹೊತ್ತಿಗೆ ವ್ಯವಸಾಯಕ್ಕೆ ಅನುಕೂಲವಲ್ಲದ ಪ್ರಾಂತಗಳಲ್ಲಿ ಮಾತ್ರವೇ ಕಾಡುಗಳು ಉಳಿದವು. ಬೆಟ್ಟಗಳು, ಗುಡ್ಡಗಳಿರುವ ಪ್ರಾಂತಗಳು, ಜೌಗುಭೂಮಿಗಳು, ಬಹಳ ತಂಪಾಗಿರುವ ಪ್ರಾಂತಗಳು, ಇಲ್ಲವೆ ಜನರ ವಾಸಕ್ಕೆ ದೂರವಾಗಿರುವ ಪ್ರಾಂತಗಳಲ್ಲಿ ಮಾತ್ರವೇ ಕಾಡುಗಳು ಉಳಿದಿವೆ.

- ನಿಮ್ಮ ಊರಿಗೆ, ಪಟ್ಟಣಕ್ಕೆ ಹತ್ತಿರದಲ್ಲಿರುವ ಕಾಡು ಪ್ರಾಂತ ಯಾವುದು ? ಈ ಪ್ರಾಂತ ವ್ಯವಸಾಯ ಭೂಮಿಯಾಗಿ, ಗಣಿಗಳಾಗಿ, ವಾಸ ಪ್ರಾಂತಗಳಾಗಿ ಬದಲಾಗದಂತೆ ಇನ್ನೂ ಗಿಡಗಳಿಂದ ಏಕೆ ಇದೆಯೋ ತಿಳಿದುಕೊಳ್ಳಿರಿ.

ವಿವಿಧ ಪ್ರಮಾಣಗಳ ಆಧಾರವಾಗಿ ಕಾಡುಗಳನ್ನು ವರ್ಗೀಕರಿಸಬಹುದು. ಉದಾಹರಣೆಗೆ ಮರಗಳ ದಟ್ಟತೆಯನ್ನು ಹಿಡಿದು ಕಾಡುಗಳನ್ನು ವರ್ಗೀಕರಿಸಬಹುದು. ಬಹಳ ದಟ್ಟವಾದ, ಪೊದೆಗಳಿಂದ ಕೂಡಿದ ಕ್ಷೀಣತೆಗೆ ಗುರಿಯಾದ ಕಾಡುಗಳಾಗಿ ಇವುಗಳನ್ನು ವರ್ಗೀಕರಿಸ ಬಹುದು. ಈ ವರ್ಗೀಕರಣದಿಂದ ಕಾಡುಗಳು ಎಲ್ಲಿ ದಟ್ಟವಾಗಿ ಇವೆಯೋ, ಎಲ್ಲಿ ಕ್ಷೀಣತೆಗೆ ಗುರಿಯಾಗಿವೆಯೋ ತಿಳಿದುಕೊಳ್ಳ ಬಹುದು. ಕಾಡುಗಳಲ್ಲಿ ಯಾವ ವಿಧದ ಮರಗಳು ಬೆಳೆಯುತ್ತವೆ ಎನ್ನುವುದರ ಆಧಾರವಾಗಿ ಸಹ ಅವುಗಳನ್ನು ವರ್ಗೀಕರಿಸಬಹುದು. ವರ್ಷಪಾತ, ಉಷ್ಣೋಗ್ರತೆಗಳ ಆಧಾರವಾಗಿ, ಒಣಗಿದ, ಒದ್ದೆಯಾದ ಬಿಸಿಯಾಗಿರುವ ನೆಲಗಳ ಆಧಾರವಾಗಿ ಏರ್ಪಡುವ ಪ್ರತ್ಯೇಕ ವಾತಾವರಣ ಪರಿಸ್ಥಿತಿಗಳಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಮರಗಳ ವಿಧಗಳು ಬೆಳೆಯುತ್ತವೆ. ಉದಾಹರಣೆಗೆ ಬಹಳ ತಂಪಾಗಿದ್ದು, ಮಂಜು ಸಹ ಸುರಿಯುವ ಪ್ರಾಂತಗಳಲ್ಲಿ ಮಾತ್ರವೇ ಕೊನಿಫೆರಸ್ ಜಾತಿಗೆ ಸೇರಿದ ದೇವದಾರು ಮರಗಳು ಬೆಳೆಯುತ್ತವೆ. ಬಿಸಿಯಾಗಿದ್ದು, ಒಂದು ಮಾದರಿ ಮಳೆ ಬೀಳುವ ಪ್ರಾಂತದಲ್ಲಿ ತೇಗದಂತಹ ಕೆಲವು ವಿಧಗಳ ಮರಗಳು ಬೆಳೆಯುತ್ತವೆ. ಮರಗಳ ಸಾಂದ್ರತೆ ಕೂಡ ವರ್ಷಪಾತ ಉಷ್ಣೋಗ್ರತೆಗಳ ಮೇಲೆ ಆಧಾರಪಟ್ಟಿರುತ್ತದೆ.

ಕೆಲವು ವಿಧಗಳ ಪ್ರಧಾನ ಕಾಡುಗಳು ಕುರಿತು ಇಲ್ಲಿ ತಿಳಿದುಕೊಳ್ಳೋಣ.

### 1. ನಿತ್ಯಹರಿದ್ವರ್ಣದ ಕಾಡುಗಳು (Evergreen Forests):

ಅತಿ ಹೆಚ್ಚು ವರ್ಷಪಾತದೊಂದಿಗೆ ಅಧಿಕ ಉಷ್ಣೋಗ್ರತೆ ಗಳಿರುವ ಭೂಮಧ್ಯರೇಖಾ ಪ್ರಾಂತಗಳು, ಕೇರಳ, ಅಂಡಮಾನ್‌ನಗಳಲ್ಲಿ ನಿತ್ಯಹರಿದ್ವರ್ಣ (ಸದಾ ಹಸಿರಾಗಿರುವ ಮರಗಳು) ಕಾಡುಗಳಿರುತ್ತವೆ. ಮರಗಳು ಎಲೆಗಳನ್ನು ಉದುರಿಸಲು, ಪುನಃ ಚಿಗುರು ಹುಟ್ಟುವುದಕ್ಕೂ ನಡುವೆ ಬಹಳ ಕಡಿಮೆ ಸಮಯವಿರುತ್ತದೆ. ಆದ್ದರಿಂದ ಅವು ಸದಾ ಹಸಿರಾಗಿರುತ್ತವೆ. ನಿರಂತರವಾಗಿ ಬೆಳೆಯುವುದಕ್ಕೆ ತೇವಾಂಶ ಉಷ್ಣತೆ ದೊರೆಯುತ್ತಾ ಇರುತ್ತವೆಯಾದ್ದರಿಂದ ಹೀಗೆ ನಡೆಯುತ್ತದೆ. ಅದೇ ವಿಧವಾಗಿ ಒಂದು ವಿಧದ ಮರಗಳು ಎಲೆಗಳು ಉದುರಿಸಿದಾಗ ಮತ್ತೊಂದು ವಿಧದ ಮರ ಎಲೆಗಳಿಂದ ಹಸಿರಾಗಿರುತ್ತವೆ. ಕದಂಬ, ಬಿದಿರು, ನೇರಳೆದಂತಹ ಮರಗಳು ಈ ಕಾಡುಗಳಲ್ಲಿರುತ್ತವೆ. ಇಂತಹ ಕಾಡುಗಳು ನಮ್ಮ ರಾಜ್ಯದಲ್ಲಿಲ್ಲ.

ಹಿಮಾಲಯಗಳಲ್ಲಿ ಬೇರೆ ವಿಧದ ನಿತ್ಯ ಹರಿದ್ವರ್ಣ ಕಾಡುಗಳಿವೆ. ಇವು ವರ್ಷವೆಲ್ಲಾ ಹಸಿರಾಗಿರುವ ದೇವದಾರು ಮರಗಳ ಕಾಡುಗಳು ಆದರೆ ಇವುಗಳ ಎಲೆಗಳು ಸಣ್ಣದಾಗಿ

SCERT TELANGANA



*ಚಿತ್ರ 5.2: (ಮೇಲೆ) ಪಶ್ಚಿಮ ಕಣ್ಣಿವೆಯಲ್ಲಿನ ಆನೈಮುಡಿಯಲ್ಲಿನ ನಿತ್ಯಹರಿದ್ವರ್ಣದ ಕಾಡುಗಳು. (ಕೆಳಗೆ) ಹಿಮಾಲಯಗಳಲ್ಲಿನ ಗುಲ್‌ಮಾರ್ಗ್‌ನಲ್ಲಿ ಮಂಜಿನಿಂದ ತುಂಬಿದ ದೇವದಾರು ಮರಗಳ ಕಾಡು.*

ಸೂಜಿಯಂತೆ ಇರುತ್ತವೆ. ಈ ಮರಗಳು ಹೂಬಿಡುವುದಿಲ್ಲ, ಶಂಕುಗಳಂತಹ ಪುನರುತ್ಪತ್ತಿ ಭಾಗಗಳು ಇರುತ್ತವೆ. ಈ ಮರಗಳು ಮಂಜು ಬೀಳುವ ಪ್ರಾಂತದಲ್ಲಿ ಬೆಳೆಯುತ್ತವೆ. ಆದ್ದರಿಂದ ಎಲೆಗಳ ಮೇಲೆ ಮಂಜು ನಿಲ್ಲದಂತೆ ಅವು ಸೂಜಿಗಳಂತೆ ಸಣ್ಣಗೆ ಇರುತ್ತವೆ. ಈ ಮರಗಳು ಹೂ ಬಿಡುವುದಿಲ್ಲ.ಮರ ಕೂಡ ಅಂಚಿನ ಮನೆಯ ಮೇಲ್ಛಾವಣಿ ಯಂತೆ ಮಧ್ಯದಲ್ಲಿ ಎತ್ತರವಾಗಿದ್ದು ಮಂಜು ನಿಲ್ಲದಂತೆ ಎರಡೂ ಕಡೆಗಳಲ್ಲಿ ಕೆಳಗೆ ಇರುತ್ತದೆ.

### 2. ಎಲೆ ಉದುರಿಸುವ ಕಾಡುಗಳು (Deciduous Forests) :

ಕೆಲವು ತಿಂಗಳುಗಳವರೆಗೆ ಮಾತ್ರ ಮಳೆ ಬಿದ್ದು ವರ್ಷದಲ್ಲಿ ಒಣಗಿ ಬಿಸಿಯಾಗಿರುವ ಪ್ರಾಂತಗಳಲ್ಲಿ ಈ ವಿಧವಾದ ಕಾಡುಗಳು ಬೆಳೆಯುತ್ತವೆ ಬಹಳ ಬಿಸಿಯಾಗಿರುವ ತಿಂಗಳುಗಳಲ್ಲಿ ಈ ಮರಗಳು ಎಲೆಗಳನ್ನು ಉದುರಿಸುತ್ತವೆ. ಮರಗಳ ಎಲೆಗಳ ಮೂಲಕ ತೇವಾಂಶ ನಷ್ಟವಾಗುತ್ತದೆ. ಆದ್ದರಿಂದ ಬಿಸಿಯಾಗಿರುವ ತಿಂಗಳುಗಳಲ್ಲಿ ಎಲೆಗಳು ಉದುರಿಸುವ ಮೂಲಕ ತೇವಾಂಶ ನಷ್ಟವಾಗದಂತೆ ನೋಡಿಕೊಳ್ಳುತ್ತವೆ. ಮರಗಳು ತಮ್ಮ ಆಹಾರ ತಯಾರು

SCERT

ಮಾಡಿಕೊಳ್ಳುವಂತೆ ಮಳೆಗಾಲಕ್ಕೆಲ್ಲಾ ಅವು ಹೊಸ ಎಲೆಗಳು ಚಿಗುರೊಡೆಯುತ್ತವೆ. ನಮ್ಮ ರಾಜ್ಯದಲ್ಲಿ ಕಡಿಮೆ ಮಳೆ, ಅದೂ ಕೆಲವು ತಿಂಗಳುಗಳು ಮಾತ್ರವೇ ಬೀಳುತ್ತವೆ. ವರ್ಷದಲ್ಲಿ ಹೆಚ್ಚು ಕಾಲ ಬಿಸಿಯಾಗಿ ಇರುವುದರಿಂದ ಹೆಚ್ಚಾಗಿ ಎಲೆಗಳು ಉದುರಿಸುವ ಕಾಡುಗಳೇ ಇವೆ.

ನಮ್ಮ ರಾಜ್ಯದಲ್ಲಿ ಎಲೆಗಳು ಉದುರಿಸುವ ಕಾಡುಗಳು ಎರಡು ವಿಧಗಳಿವೆ. ಒಂದು ವಿಧದಲ್ಲಿ ಹೆಚ್ಚು ಮಳೆ, ಮತ್ತೊಂದು ವಿಧದಲ್ಲಿ ಕಡಿಮೆ ಮಳೆ ಬೀಳುತ್ತದೆ. ಹೆಚ್ಚು ಮಳೆ ಬೀಳುವ ಎಲೆಗಳು ಉದುರಿಸುವ ಕಾಡುಗಳಲ್ಲಿ ವೇಗಿ, ಏಗಿಸ, ಮದ್ದಿ(ಅರ್ಜುನ) ಬಂಡಾರು, ಜೆಟ್ಟಿಗಿನಂತಹ ವೃಕ್ಷಗಳಿರುತ್ತವೆ.

ನಮ್ಮ ರಾಜ್ಯದ ಕೊಮರಂಭೀಮ್, ಅದಿಲಾಬಾದ್, ಮಂಚಿರ್ಯಾಲ, ಜಯಶಂಕರ್, ನಾಗರಕರ್ನೂಲ್ ಮತ್ತು ಭದ್ರಾದ್ರಿ ಜಿಲ್ಲೆಯಲ್ಲಿವೆ.

ಕಡಿಮೆ, ಮಳೆ ಬೀಳುವ ಪ್ರಾಂತದಲ್ಲಿ ಮದ್ದಿ, ತೇಗ, ಬೆಳವಲ, ಏಗಿಸ, ಏಪಿ, ಚಿಗುರು, ಬಿಲ್ಲು, ಬೇವು, ದಿರಿಶನ, ಬೂರುಗ, ಮೆದುಗದಂತಹ ವೃಕ್ಷಗಳಿರುತ್ತವೆ. ಈ ವಿಧವಾದ



*ಚಿತ್ರ 5.3: ಬೇಸಿಗೆಯಲ್ಲಿ ತೇಗ ಮರಗಳು (ಆದಿಲಾಬಾದ)*

*ಚಿತ್ರ 5.3: ಹುಲಿ ಸಂರಕ್ಷಿತ ಅಡವಿಗಳು(ಆಮ್ರಾಬಾದ)*




ಕಾಡುಗಳು ನಮ್ಮ ರಾಜ್ಯದಲ್ಲಿ ವಿಶಾಲವಾಗಿ ಆದಿಲಾಬಾದ್ ವರಂಗಲ್, ವೈಎಸ್‌ಆರ್ ಕಡಪ, ಕರ್ನೂಲ್, ಖಮ್ಮಂ, ನಿಜಾಮಾಬಾದ್, ಕರೀರಂನಗರ್ ಜಿಲ್ಲೆಗಳಲ್ಲಿ ಹೇರಳವಾಗಿವೆ. ಮಹಬೂಬ್‌ನಗರ್ ಜಿಲ್ಲೆಯಲ್ಲಿನ ಕೆಲವು ಪ್ರಾಂತಗಳಲ್ಲಿ ವಿಸ್ತರಿಸಿವೆ.

*ಚಿತ್ರ 5.4: ಮುಳ್ಳಿನ ಪೊದೆಗಳು*



## 3. ಮುಳ್ಳುಕಂಟಿಯ ಕಾಡುಗಳು (Thorny Forests)

ಬಹಳ ಕಡಿಮೆ ವರ್ಷಪಾತ, ಅಧಿಕ ಉಷ್ಣೋಗ್ರತೆಗಳು ಇರುವ ಶುಷ್ಕ ಪ್ರಾಂತಗಳಲ್ಲಿ ಈ ವಿಧವಾದ ಕಾಡುಗಳು ಬೆಳೆಯುತ್ತವೆ. ಈಚಲ, ಬುಲುಸು ರೇಗದಂತಹ ವೃಕ್ಷಗಳು ಇಲ್ಲಿ ಬೆಳೆಯುತ್ತವೆ. ಇಂತಹ ಕಾಡುಗಳು ಮಹಬೂಬ್‌ನಗರ್, ಮೆದಕ್, ನಲ್ಗೊಂಡ ಜಿಲ್ಲೆಗಳಲ್ಲಿವೆ. ಈ ಜಿಲ್ಲೆಗಳಲ್ಲಿ ಮಳೆ ಬೀಳುವಿಕೆ ಬಹಳ ಕಡಿಮೆಯಾಗಿದ್ದು, ಮರುಭೂಮಿಯಂತಹ ಪರಿಸ್ಥಿತಿಗಳಿವೆ ಎಂದು ನಿಮಗೆ ನೆನಪಿದ್ದೇ ಇರುತ್ತದೆ. ಈ ವಿಧವಾದ ಮರಗಳಿಗೆ ಬಹಳ ಚಿಕ್ಕ ಎಲೆಗಳು, ಮುಳ್ಳುಗಳು ಇದ್ದು ನೀರಿನ ನಷ್ಟವನ್ನು ಕಡಿಮೆ ಮಾಡುತ್ತವೆ. ಈ ವಿಧವಾದ ಕಾಡುಗಳು ಅಷ್ಟು ದಟ್ಟವಾಗಿ ಇರುವುದಿಲ್ಲ ಕಡಿಮೆ ಮರಗಳು, ಪೊದೆಗಳು ಹೆಚ್ಚು ಖಾಲಿ ಪ್ರದೇಶಗಳಿರುತ್ತವೆ.

## 4. ಸಮುದ್ರ ತೀರದ ಜೌಗು ಕಾಡುಗಳು (Littoral (sea coast) and swamp forests)

ಕಾಡುಗಳು ಹೆಚ್ಚಾಗಿ ಸಮುದ್ರ ತೀರಗಳಲ್ಲಿ ಜೌಗು ನೆಲಗಳಲ್ಲಿಯೂ, ಬೆಳೆಯುತ್ತದೆ. ಉಪ್ಪು ನೀರಿಗೆ ಸಮುದ್ರ ಅಲೆಗಳ ಪ್ರವಾಹಕ್ಕೆ ಅನುಗುಣವಾಗಿ ಈ ವೃಕ್ಷಗಳು ಬೆಳೆಯುತ್ತವೆ. (ಸಮುದ್ರ ಅಲೆಗಳು ಈ ಪ್ರಾಂತಗಳನ್ನು ದಿನದಲ್ಲಿ ಕೆಲವು ಗಂಟೆಗಳವರೆಗೆ ಮುಳುಗಿಸಿದ ನಂತರ ಹಿಂದಕ್ಕೆ ಸರಿಯುತ್ತದೆ. ಅಂದರೆ ಕೆಲವು ಗಂಟೆಗಳವರೆಗೆ ಉಪ್ಪು

SCERT TELANGANA

ನೀರಿ ನಿಂದಲೂ, ಕೆಲವು ಗಂಟೆಗಳವರೆಗೆ ನೀರು ಇಲ್ಲದಂತೆಯೂ ಇರುತ್ತದೆ.) ಈ ಕಾಡುಗಳನ್ನು ಮ್ಯಾನ್‌ಗ್ರೋವ್ ಕಾಡುಗಳು ಎನ್ನುತ್ತಾರೆ. ಇಂತಹ ಕ್ಲಿಷ್ಟ ಪರಿಸ್ಥಿತಿಗಳಲ್ಲಿ ಬದುಕಲು ಈ ವೃಕ್ಷಗಳು ಕೆಲವು ಪ್ರತ್ಯೇಕ ಲಕ್ಷಣಗಳನ್ನು ಅಳವಡಿಸಿಕೊಂಡಿದೆ. ಉಪ್ಪು, ಪೊನ್ನ, ಬೊಡ್ಡುಪೊನ್ನ, ಉರಡ, ಮ್ಯಾನ್ ಗ್ರೋವ್, ಬಿಳಿ ಮ್ಯಾನ್‌ಗ್ರೋವ್, ಗುಂಡು ಮ್ಯಾನ್‌ಗ್ರೋವ್, ಕದಿಲಿ ಬೆಲ್ಲದಂತಹವು ಈ ಪ್ರಾಂತದಲ್ಲಿರುವ ಪ್ರಧಾನವಾದ ವೃಕ್ಷಗಳು.

- ಸಮುದ್ರ ತೀರದಲ್ಲಿನ ಪ್ರತ್ಯೇಕ ಪರಿಸ್ಥಿತಿಗಳಿಗೆ ಮ್ಯಾನ್‌ಗ್ರೋವ್ ವೃಕ್ಷಗಳು ಹೇಗೆ ಹೊಂದಿ ಕೊಂಡಿವೆಯೋ ಕಂಡುಕೊಳ್ಳಿರಿ.
- ನೈಜೀರಿಯಾದಲ್ಲಿನ ಭೂಮಧ್ಯ ರೇಖಾಪ್ರಾಂತ ಕಾಡುಗಳ ಕುರಿತು ಓದಿಕೊಂಡಿದ್ದು ನೆನಪಿರುತ್ತದೆ. ತೆಲಂಗಾಣದಲ್ಲಿನ ಕಾಡುಗಳಿಗೂ, ಭೂಮಧ್ಯ ರೇಖಾ ಪ್ರಾಂತದ ಕಾಡುಗಳಿಗೂ ನಡುವೆ ಮುಖ್ಯವಾದ ವ್ಯತ್ಯಾಸಗಳೇನು ?
- ತೆಲಂಗಾಣ ಕಾಡುಗಳನ್ನು ತೋರಿಸುವ ನಕ್ಷೆ (ಪಕ್ಕದ ಪುಟದಲ್ಲಿ) ಯನ್ನು ನೋಡಿರಿ. ನಿಮ್ಮ ಜಿಲ್ಲೆಯಲ್ಲಿ ಕಾಡುಗಳು ಇವೆಯಾ ? ಇದ್ದರೆ, ಅವು ಎಂತಹ ಕಾಡುಗಳು ?

## ತೆಲಂಗಾಣದಲ್ಲಿ ಕಾಡುಗಳು (Forests of Andhra Pradesh)

ನಮ್ಮ ರಾಜ್ಯದಲ್ಲಿನ ಮುಖ್ಯವಾದ ಅಡವಿಗಳ ಕುರಿತು ತಿಳಿದುಕೊಂಡಿರಿ. ಆದರೆ ನಮ್ಮ ಅಡವಿಗಳು ಎಷ್ಟು ದೊಡ್ಡವು? ಅವು ಬೆಳೆಯುತ್ತಿವೆಯಾ ? ಕಡಿಮೆಯಾಗುತ್ತಿವೆಯಾ? ತಿಳಿದುಕೊಳ್ಳೋಣ ಬನ್ನಿ. ರಾಜ್ಯದಲ್ಲಿ 26,904 ಚದರ ಕಿ.ಮೀ.ಗಳಷ್ಟು ಕಾಡುಗಳಿವೆ ಎಂದು ಸರ್ಕಾರ ಪ್ರಕಟಿಸಿದೆ. ರಾಜ್ಯದಲ್ಲಿ ಒಟ್ಟು ಭೂ ವಿಸ್ತೀರ್ಣದಲ್ಲಿ ಇದು ಶೇಕಡ 24% ರಷ್ಟು, ಇಲ್ಲವೇ ಕಾಲುಭಾಗ. ಆದರೆ ಇದು ಸಂಪೂರ್ಣ ಕಾಡು ಅಲ್ಲ. ಕೇವಲ ಶೇಕಡ 16.74% ರಷ್ಟು ವಿಸ್ತೀರ್ಣ ಕಾಡು ಎನ್ನಬಲ್ಲ ವೃಕ್ಷಗಳಿವೆ. ಅಂದರೆ ಶೇಕಡ 7% ರಷ್ಟು ಕಾಡುಗಳು ವಾಸ್ತವಕ್ಕೆ ಬಹಳ ಕಡಿಮೆ ವೃಕ್ಷಗಳಿಂದ, ಖಾಲಿ ಪ್ರದೇಶಗಳಿಂದ ಇವೆ. ಇರುವ ಸ್ವಲ್ಪ ಕಾಡು ಸಹ ಮರಗಳು ಕಡಿದು ಹಾಕುವುದರಿಂದ, ಆಕ್ರಮಣಗಳಿಂದ, ಗಣಿಗಳ ಅಗೆಯುವಿಕೆಯಿಂದ ಕಡಿಮೆಯಾಗುತ್ತಾ ಇದೆ. ನಮ್ಮ ರಾಜ್ಯದಲ್ಲಿ ಪ್ರತಿ ವರ್ಷ ನೂರು 30 ಚದರ ಕಿ.ಮೀ.ಗಳವರೆಗೆ ಕಾಡು ಕಡಿಮೆಯಾಗುತ್ತಾ ಇದೆ.

- ಈ ಪರಿಸ್ಥಿತಿ ಸರಿಯಾದುದ್ದೇನಾ ? ತರಗತಿಯಲ್ಲಿ ಚರ್ಚಿಸಿರಿ.

## ಬುಡಕಟ್ಟು ಜನರು (ಗಿರಿಜನರು), ಕಾಡುಗಳು (Tribal people and Forests)

ಅಡವಿಗಳನ್ನು ಉಪಯೋಗಿಸಿಕೊಳ್ಳುತ್ತಾ ಅಡವಿಯಲ್ಲಿಯೇ ವಾಸಿಸುವ ಮನುಷ್ಯರು ಇಲ್ಲದ ಅಡವಿಗಳನ್ನು ಊಹಿಸಿಕೊಳ್ಳುವುದು ಕಷ್ಟ. ನಮ್ಮ ರಾಜ್ಯದಲ್ಲಿ ಕಡುಬಡವರ ಜೀವನಕ್ಕೆ ಅರಣ್ಯಗಳು ಪ್ರಮುಖ ಸಂಪನ್ಮೂಲಗಳನ್ನು ಒದಗಿಸುತ್ತಿವೆ. ತೆಲಂಗಾಣದಲ್ಲಿ ಶೇಕಡ 75 ರಷ್ಟು ಜನರು ಅರಣ್ಯ ಉತ್ಪನ್ನಗಳನ್ನು ಶೇಖರಿಸಿ ಸ್ಥಳೀಯ ಮಾರುಕಟ್ಟೆಯಲ್ಲಿ ಮಾರುವುದರ ಮೂಲಕ ಜೀವನೋಪಾದಿಯನ್ನು ಹೊಂದುತ್ತಿದ್ದಾರೆ. ಜನರು ಶೇಖರಿಸುವ ಅರಣ್ಯ ಉತ್ಪನ್ನಗಳ ಪಟ್ಟಿಯನ್ನು ನೀವು ತಯಾರಿಸುತ್ತಿರುವಿರಿ. ಇದರಲ್ಲಿ ಸುಮಾರು 60 ವಸ್ತುಗಳು ಇರುತ್ತವೆ.

ಜಿವನಾಧಾರಕ್ಕಾಗಿ ಕಾಡುಗಳ ಮೇಲೆ ಆಧಾರಪಟ್ಟವರಲ್ಲಿ ಬುಡಕಟ್ಟು ಜನರು ಎಲ್ಲರಿಗಿಂತ ಮುಖ್ಯವಾದವರು. ಬುಡಕಟ್ಟು ಜನರು ಸಾವಿರಾರು ವರ್ಷಗಳಿಂದ ಕಾಡುಗಳಲ್ಲಿ ಇರುತ್ತಾ ಅವುಗಳನ್ನು ಕಾಪಾಡುತ್ತಾ ತಮ್ಮ ಜೀವನಾಧಾರಕ್ಕಾಗಿ ಉಪಯೋಗಿಕೊಳ್ಳುತ್ತಿದ್ದಾರೆ. ಇವರ ಬಗ್ಗೆ ಹಿಂದಿನ ತರಗತಿಗಳಲ್ಲಿ ನೀವು ಓದಿಕೊಂಡಿದ್ದೀರಿ.

ಇಂದಿಗೂ ಕೂಡ ತೆಲಂಗಾಣದಲ್ಲಿ 60% ರಷ್ಟು ಕಾಡುಗಳು ಬುಡಕಟ್ಟು ಜನರು ವಾಸಿಸುವ ಪ್ರಾಂತಗಳಲ್ಲಿವೆ. ಅದೇ ವಿಧವಾಗಿ ರಾಜ್ಯದಲ್ಲಿನ ಬುಡಕಟ್ಟು ಜನರಲ್ಲಿ ಶೇಕಡ 60% ರಷ್ಟು ಮಂದಿ ಕಾಡುಗಳಲ್ಲಿ ವಾಸಿಸುತ್ತಿದ್ದಾರೆ. ಬುಡಕಟ್ಟು ಜನರು ಕಾಡುಗಳನ್ನು ಹೇಗೆ ಉಪಯೋಗಿಸಿ ಕೊಳ್ಳುತ್ತಾರೆ ? ಕೂನವರಂ ಬೆಟ್ಟಗಳಲ್ಲಿನ ಕೊಂಡರೆಡ್ಡಿಗಳು ಕಾಡುಗಳನ್ನು ಪೋಡು ವ್ಯವಸಾಯಕ್ಕೆ, (ಹಣ್ಣುಗಳು ಗಡ್ಡೆಗಳಂತಹ) ಆಹಾರ ಪದಾರ್ಥಗಳನ್ನು, ಮಾರುವುದಕ್ಕೆ ಬೀಡಿ ಎಲೆಗಳು, ಗಿಡಮೂಲಿಕೆಗಳು, ಬಿದಿರು, ಹುಣಿಸೆಹಣ್ಣಿ ದಂತಹವು ಸಂಗ್ರಹಿಸಲು ಉಪಯೋಗಿಸಿಕೊಳ್ಳುತ್ತಾರೆ.

SCERT TELANGANA

# ತೆಲಂಗಾಣ ಕಾಡುಗಳು




SCERT TELANGANA

ಮೈದಾನ ಪ್ರಾಂತಗಳ ಗ್ರಾಮಗಳಲ್ಲದ್ದಂತೆ ಬುಡಕಟ್ಟು ಜನರಲ್ಲಿ ಭೂಮಿ ವೈಯಕ್ತಿಕ ಆಸ್ತಿ ಎನ್ನುವ ಭಾವನೆ ಇಲ್ಲ. ಗ್ರಾಮ ಹಿರಿಯರ ಅನುಮತಿಯೊಂದಿಗೆ ಬುಡಕಟ್ಟಿನ ಸದಸ್ಯರೆಲ್ಲರೂ ಕಾಡನ್ನು ಉಪಯೋಗಿಸಿಕೊಳ್ಳುತ್ತಾರೆ. ಪ್ರತಿ ಕುಟುಂಬಕ್ಕೆ ಸ್ವಲ್ಪ ಮಟ್ಟಿಗೆ ಭೂಮಿ ಮೇಲೆ ಸಂಪ್ರದಾಯ ಹಕ್ಕು ಇರುತ್ತದೆ. ಪೋಡು ವ್ಯವಸಾಯ ಎಂದರೆ ಪ್ರತಿ ಕೆಲವು ವರ್ಷಗಳಿಗೆ ಸಾಗುವಳಿ ಮಾಡುವ ಭೂಮಿ ಬದಲಾಗುತ್ತಾ ಇರುತ್ತದೆ. ಆದ್ದರಿಂದ ಭೂ ಯಜಮಾನ್ಯಕ್ಕೆ ಸಂಬಂಧಿಸಿದ ಸ್ಥಿರವಾದ ದಾಖಲೆಗಳು ಏನು ಇರುವುದಿಲ್ಲ. ಅಷ್ಟೇ ಅಲ್ಲದೇ ಜನಸಂಖ್ಯೆ ಬೆಳೆದು ಹೊಸ ಕುಟುಂಬಗಳು ಏರ್ಪಟ್ಟಾಗ ಹೊಸದಾಗಿ ಕಾಡನ್ನು ಕಡೆದು ಸಾಗುವಳಿ ಮಾಡುವುದಕ್ಕೆ ಗ್ರಾಮದ ಹಿರಿಯರು ಅನುಮತಿ ಕೊಡುತ್ತಾರೆ. ಬ್ರಿಟೀಷ್ ಆಳ್ವಿಕೆಯ ಮೊದಲು ಕಾಡುಗಳನ್ನು ಬುಡಕಟ್ಟು ಜನರು ತಮ್ಮವೆಂದು ಭಾವಿಸಿದ್ದರು. ಆದರೆ ಅವರಿಗೆ ಅದು ಪವಿತ್ರ ಪ್ರದೇಶ. ಕಾಡಿಗೆ, ಕಾಡಿನ ಪ್ರಾಣಿಗಳಿಗೆ ನಷ್ಟವಾಗದಂತೆ ಕಾಡನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಪ್ರಾಣಿಗಳನ್ನು ಬೇಟೆಯಾಡಿದಾಗ, ಪೋಡುಗಾಗಿ ಕಾಡನ್ನು ಕಡೆದಾಗ ಅವು ಪುನರುದ್ದರಣೆಯಾಗುವಂತೆ ನೋಡುತ್ತಿದ್ದರು. ರೈತ ಕುಟುಂಬ ಹೊಲಗಳ ಸಂರಕ್ಷಣೆ ಮಾಡಿದಂತೆ ಬುಡಕಟ್ಟು ಜನರು ಕಾಡುಗಳನ್ನು ಸಂರಕ್ಷಿಸುತ್ತಾ, ಅವುಗಳನ್ನು ಉಪಯೋಗಿಸಿಕೊಳ್ಳುತ್ತಿದ್ದರು.

- ಕಾಡುಗಳನ್ನು ಜನರು ಉಪಯೋಗಸಿಕೊಳ್ಳುತ್ತಾ, ಅವುಗಳನ್ನು ಸಂರಕ್ಷಿಸುವುದು ಸಾಧ್ಯವೇನಾ ? ಮರಗಳನ್ನು ಕಡಿದು, ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ಹಣ ಸಂಪಾದಿಸಬಹುದೆಂದು ಯಾರಾದರೂ ಆಸೆ ತೋರಿದರೆ ಅವರು ಏನು ಮಾಡಿ ಇರುತ್ತಿದ್ದರು?

ನಮ್ಮ ದೇಶದಲ್ಲಿ ಎರಡು ನೂರು ವರ್ಷಗಳ ಬ್ರಿಟೀಷ್ ಆಳ್ವಿಕೆಯಲ್ಲಿ ಬುಡಕಟ್ಟು ಜನರು ಕ್ರಮೇಣ ಕಾಡುಗಳ ಮೇಲೆ ತಮ್ಮ ಅಧಿಕಾರವನ್ನು, ಹಕ್ಕುಗಳನ್ನು ಕಳೆದುಕೊಂಡರು. ಅಂದಿನಿಂದ ಕಾಡುಗಳು ವೇಗವಾಗಿ ನಾಶವಾಗುತ್ತಾ ಹೋದವು. ಇದು ಎರಡು ವಿಧಗಳಲ್ಲಿ ನಡೆಯಿತು. ಮೊದಲನೆಯದು, ರೈಲು ಮಾರ್ಗಗಳ ನಿರ್ಮಾಣ, ಹಡಗುಗಳ ತಯಾರಿಕೆ, ಕಾರ್ಖಾನೆಗಳು, ಮನೆಗಳು, ಕಟ್ಟಿಗೆ ಸಾಮಾಗ್ರಿಗಳಂತಹವುಗಳಿಗಾಗಿ ಕಟ್ಟಿಗೆಗೆ ಬೇಡಿಕೆ ಗಣನೀಯವಾಗಿ ಹೆಚ್ಚಿತು. ಏಳನೇ ತರಗತಿಯಲ್ಲಿ ಓದಿದಂತೆ ಕಾಗದದ ಮಿಲ್ಲಿನಂತಹ ಅನೇಕ ಕೈಗಾರಿಕೆಗಳಿಗೆ ಮರದ ತಿರುಳು ಕೊಡುವ ಕಟ್ಟಿಗೆ ದೊಡ್ಡ ಮೊತ್ತದಲ್ಲಿ ಬೇಕಾಗುತ್ತದೆ. ಈ ವಿಧವಾದ ಒತ್ತಡದಿಂದ ಬಹಳ ವಿಸ್ತೀರ್ಣದಲ್ಲಿ ಕಾಡುಗಳನ್ನು ಕಡಿದು ಕಟ್ಟಿಗೆಯನ್ನು ಮಾರಾಟ ಮಾಡಿಕೊಂಡರು. ಅನೇಕ ಪ್ರಾಂತಗಳಲ್ಲಿ ಟೀ, ಕಾಫಿ, ರಬ್ಬರ್‌ನಂತಹ ತೋಟಗಳು ಬೆಳೆಸಲು ಅನಂತರದ ಕಾಲದಲ್ಲಿ ವೇಗವಾಗಿ ಬೆಳೆಯುವ ನೀಲಗಿರಿ (ಯೂಕಲಿಪ್ಟಸ್) ಬಿದಿರು ಗಿಡಗಳು ಬೆಳೆಸಲು ಕಾಡುಗಳನ್ನು ಕಡಿದು ಹಾಕಿದರು. ಈ ವಿಧವಾಗಿ ಕಾಡಿನ ವಿಸ್ತೀರ್ಣ ಗಣನೀಯವಾಗಿ ಕಡಿಮೆಯಾಗಿದೆ.

- ನೀಲಗಿರಿ ವೃಕ್ಷಗಳು, ಟೀ ತೋಟಗಳಿಗೂ, ಕಾಡಿಗೂ ನಡುವೆ ಏನಾದರೂ ವ್ಯತ್ಯಾಸಗಳು ಇವೆಯಾ ? ತರಗತಿಯಲ್ಲಿ ಚರ್ಚಿಸಿರಿ.

ಎರಡನೇಯದು, ಬ್ರಿಟೀಷ್ ಸರ್ಕಾರ ಅಧಿಕ ಲಾಭ ಹೊಂದುವಂತೆ ಕಾಡುಗಳು ಕಡಿಯುವುದನ್ನು ನಿಯಂತ್ರಿಸಬೇಕೆ ಂದುಕೊಂಡಿತು. ಉಳಿದಿರುವ ಕಾಡುಗಳನ್ನು ಕಾಪಾಡಬೇಕೆ ಂದುಕೊಂಡಿತು. 1864 , 1878 ರಲ್ಲಿ ಕಾಯಿದೆಗಳು ಮಾಡಿ ಅರಣ್ಯಶಾಖೆಯನ್ನು ಏರ್ಪಾಟು ಮಾಡಿ ಅದಕ್ಕೆ ಅರಣ್ಯಗಳ ಮೇಲೆ ನಿಯಂತ್ರಣವನ್ನು ಒಪ್ಪಿಸಲಾಯಿತು. ಕಾಯ್ದೆಗಳನ್ನು ತಮ್ಮ ಅಧೀನದಲ್ಲಿರುವ ಪ್ರಾಂತಗಳಿಗೆ ನಿಜಾಂ ಸರ್ಕಾರ ಮಾಡಿತು. ಕಾಡುಗಳಿಗೆ 'ರಕ್ಷಿತ ', 'ರಿಜರ್ವ' (ಕಾಯ್ದಿಟ್ಟು) ಅರಣ್ಯಗಳೆಂದು ವರ್ಗೀಕರಿಸುವ ಮೂಲಕ ಬುಡಕಟ್ಟು ಜನರಿಗೆ, ಅರಣ್ಯ ವಿನಿಯೋಗದಾರರಿಗೆ ಸಂಪ್ರದಾಯವಾಗಿ ಬಂದಿದ್ದ ಹಕ್ಕುಗಳನ್ನು ಈ ಕಾಯ್ದೆ ಅನುಮತಿಸಲಿಲ್ಲ. ರಿಜರ್ವ ಅರಣ್ಯಗಳೊಳಗೆ ಯಾರು ಪ್ರವೇಶಿಸಲು ಅನುಮತಿ ಇಲ್ಲ. 'ರಕ್ಷಿತ' ಅರಣ್ಯಗಳನ್ನು ಜನರು ವಿನಿಯೋಗಿಸಿಕೊಳ್ಳಬಹುದು. ತಲೆಯ ಮೇಲೆ ಕಟ್ಟಿಗೆಯ ಹೊರೆಯನ್ನು ತೆಗೆದುಕೊಂಡು ಹೋಗಬಹುದು. ಸ್ವಂತ ಅವಸರಗಳಿಗೆ ಅರಣ್ಯ ಉತ್ಪತ್ತಿಗಳು ಸಂಗ್ರಹಿಸಬಹುದು. ಪಶುಗಳನ್ನು ಮೇಯಿಸಬಹುದು. ಆದರೆ ಇಲ್ಲಿ ಸಹ ವೃಕ್ಷಗಳು ಕಡಿದು ಹಾಕುವುದರ ಮೇಲೆ ಅನೇಕ ನಿಬಂಧನೆಗಳಿವೆ. ಅರಣ್ಯ ಶಾಖೆ ವಿಧಿಸಿದ ಪರಿಮಿತಿಗಳಿಗೆ ಮೀರಿ ಪಶುಗಳನ್ನು ಮೇಯಿಸಬಾರದು.

ಆದರೆ ಕಾಡುಗಳಲ್ಲಿ ಬಹಳ ಜನರು ಅವುಗಳ ಮೇಲೆ ಆಧಾರಪಟ್ಟು ಜೀವಿಸುತ್ತಿದ್ದಾರೆಂದು ನಮಗೆ ಗೊತ್ತು. ಆ ಸಮಯದಲ್ಲಿ ಸರ್ಕಾರ ಅವರ ಬಗ್ಗೆ ಹಿಡಿಸಿಕೊಳ್ಳಲ್ಲಿಲ್ಲ. ಅರಣ್ಯ ಪ್ರಾಂತ ಎಂದು ನಿರ್ಧರಿಸುವ ಇಲ್ಲವೇ ಗುರ್ತಿಸುವ ಸಮಯದಲ್ಲಿ ಬುಡಕಟ್ಟು ಜನರು ಬಳಸಿಕೊಳ್ಳುತ್ತಿರುವ ಕಾಡನ್ನು ಸರ್ಕಾರಕ್ಕೆ ಸೇರಿದ ಕಾಡು ಎಂದು ಪ್ರಕಟಿಸಿತು.

SCERT TELANGANA

ಮೈದಾನ ಪ್ರಾಂತಗಳ ಗ್ರಾಮಗಳಂತೆ ಅಲ್ಲದೆ ಬುಡಕಟ್ಟು ಜನರು ಯಾವುದೇ ವಿಧವಾದ ಒಡೆತನದ ದಾಖಲೆಗಳು ಕೃಷಿ ಪಾಸ್ ಪುಸ್ತಕಗಳು ಇಲ್ಲದಂತೆ ಅವುಗಳನ್ನು ಸಾಗುವಳಿ ಮಾಡುತ್ತಿದ್ದರಿಂದ ಹೀಗೆ ನಡೆಯಿತು. ತೆಲಂಗಾಣದಲ್ಲಿನ ಉತ್ತರ ಜಿಲ್ಲೆಗಳಲ್ಲಿ ಗೊಂಡುಗಳು ಸ್ಥಿರ ವ್ಯವಸಾಯ ಮಾಡುತ್ತಿದ್ದರು, ಆದರೆ ಕೊಲ್ಲಾಂಗಳಂತಹ ಬುಡಕಟ್ಟುಗಳು ಬೆಟ್ಟಗಳ ಇಳಿಜಾರುಗಳ ಮೇಲೆ ಪೋಡು ವ್ಯವಸಾಯ ಮಾಡುತ್ತಿದ್ದರು. ಸ್ಥಿರ ವ್ಯವಸಾಯ ಮಾಡುವ ಗೊಂಡ್ಲುಗಳು ಕೂಡ ಸ್ವಲ್ಪ ಭೂಮಿಗಳು ಬೀಳುಬಿಟ್ಟು ಒಂದಾದ ನಂತರ ಒಂದರಂತೆ ಬದಲಾಯಿಸಿ ಎರಡು ವರ್ಷಗಳಿಗೆ ಒಂದು ಬಾರಿ ಸಾಗುವಳಿ ಮಾಡುತ್ತಿದ್ದರು. ರಿಜರ್ವ ಕಾಡುಗಳನ್ನು ಗುರ್ತಿಸುವ ಪ್ರಕ್ರಿಯೆ ಇವುಗಳೆಲ್ಲವುಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಿಲ್ಲ. ಒಂದು ಲೇಖನಿ ಪೆಟ್ಟಿನಿಂದ ಬುಡಕಟ್ಟು ಜನರ ಹಕ್ಕುಗಳು ಸಲ್ಲದಂತೆ ಆದವು. ಅವರನ್ನು ಬಲವಂತವಾಗಿ ಅರಣ್ಯದಿಂದ ಹೊರಗೆ ಹಾಕಲಾರಂಭಿಸಿದರು.




ಒಂದು ಕ್ರಿಯೆಯ ಫಲವಾಗಿ ತಮ್ಮ ಸ್ವಂತ ಪ್ರಾಂತಗಳಲ್ಲಿ ಬುಡಕಟ್ಟು ಜನರು ನಿರಾಶ್ರಯರಾಗಿ ಹೋದರು ! ಇಷ್ಟಕ್ಕೆ ನಿಲ್ಲದೆ ಸರ್ಕಾರ ಇತರ ಪ್ರಾಂತದ ಜಮೀನುದಾರರಿಗೆ, ರೈತರಿಗೆ ಈ ಭೂಮಿಯನ್ನು ವ್ಯವಸಾಯಕ್ಕೆ ಕೊಟ್ಟು ಆದಾಯ ಪಡೆಯಬೇಕೆಂಬ ಕಾತುರದಲ್ಲಿದೆ. ಯಾವ ಹಕ್ಕುಗಳು ಇಲ್ಲದೇ ಹೋದರು, ಬುಡಕಟ್ಟು ಜನರು ಈಗ ಈ ಭೂಸ್ವಾಮಿಗಳ ಹತ್ತಿರ ಕೂಲಿಗಳಾಗಿ ಕೆಲಸ ಮಾಡಬೇಕಾಗಿಬಂದಿದೆ. ಬುಡಕಟ್ಟು ಜನರು ಸಾಗುವಳಿ ಮಾಡಿಕೊಳ್ಳುವುದಕ್ಕೆ ಅನುಮತಿ ನೀಡಿದ ಭೂಮಿಗಳಿಗೆ ಅವರು ದೊಡ್ಡ ಮೊತ್ತದಲ್ಲಿ ಕಂದಾಯ ಕಟ್ಟಬೇಕಾಗಿ ಬರುತ್ತಿತ್ತು. ಈ ಮೊತ್ತವನ್ನು ಸಲ್ಲಿಸುವುದಕ್ಕೆ ಅವರು ಯಾವಾಗಲೂ ವ್ಯಾಪಾರಿಗಳಿಂದ ಸಾಲ ತೆಗೆದುಕೊಳ್ಳಬೇಕಾಗಿ ಬರುತ್ತಿತ್ತು. ಕೊನೆಗೆ ತಮ್ಮ ಭೂಮಿಗಳನ್ನು ಆ ಬಡ್ಡಿ ವ್ಯಾಪಾರಿಗಳಿಗೇ ಮಾರಾಟಮಾಡಿಕೊಳ್ಳಬೇಕಾಗಿ ಬರುತ್ತಿತ್ತು. ಈ ವಿಧವಾಗಿ ತಮಗೆ ಇರುವ ಸ್ವಲ್ಪ ಭೂಮಿಯನ್ನು ಸಹ ಬಹಳ ಜನರು ಕಳೆದುಕೊಂಡರು.

ಆ ಕಾಲದಲ್ಲಿ ಏರ್ಪಟ್ಟ ಅರಣ್ಯ ಶಾಖೆಗೆ ಕಾಡುಗಳ ರಕ್ಷಣೆ, ಹೊಸ ಗಿಡಗಳನ್ನು ನೆಡುವುದು, 'ಕಾಡುಗಳಿಂದ ಬೆಳೆ ತೆಗೆಯುವುದು', ಅಂದರೆ ಉತ್ತಮವಾಗಿ ಬೆಳೆದ ವೃಕ್ಷಗಳನ್ನು ಕಡಿದು, ಅವುಗಳನ್ನು ಮಾರುವುದರ ಮೂಲಕ ಸರ್ಕಾರಕ್ಕೆ ಆದಾಯ ಬರುವಂತೆ ಮಾಡುವಂತಹ ಜವಾಬ್ದಾರಿಗಳು ಇರುತ್ತಿದ್ದವು. ಅರಣ್ಯಶಾಖೆ ಅಧಿಕಾರಿಗಳಾಗಿ ಸಾಮಾನ್ಯವಾಗಿ ದೂರ ಪ್ರಾಂತದ ಶ್ರೀಮಂತ ಕುಟುಂಬಗಳಿಗೆ ಸೇರಿದವರು ಇರುತ್ತಿದ್ದರು. ಬುಡಕಟ್ಟು ಜನರಿಗೆ ಏನು ತಿಳಿಯದೆಂದು, ಅವರು ಬಹಳ ಅಪಾಯಕರವಾದವರೆಂದು ಈ ಅಧಿಕಾರಿಗಳು ಭಾವಿಸುತ್ತಿದ್ದರು. ಬುಡಕಟ್ಟು ಜನರ ಬಗ್ಗೆ ಎಷ್ಟು ಮಾತ್ರವೂ ಸಹಾನುಭೂತಿ ಇರುತ್ತಿರಲಿಲ್ಲ. ನಿಸ್ಸಹಾಯಕರಾದ ಬುಡಕಟ್ಟು ಜನರನ್ನು ಅವರು ಶೋಷಣೆಗೆ ಗುರಿಪಡಿಸುತ್ತಿದ್ದರು, ಮೊಸಗೊಳಿಸುತ್ತಿದ್ದರು. ಸತತವಾಗಿ ಕಿರುಕುಳ ಕೊಡುತ್ತಿದ್ದರು. ಅರಣ್ಯ ಸಂರಕ್ಷಣೆ ಹೆಸರಿನಿಂದ 1920 ರಲ್ಲಿ ಕಾಡುಗಳಿಂದ ದೊಡ್ಡ ಮೊತ್ತದಲ್ಲಿ ಬುಡಕಟ್ಟು ಜನರನ್ನು ಹೊರದೂಡಿದರು. ಈ ಕ್ರಿಯೆಗಳು 1940 ರವರೆಗೆ ಮುಂದುವರೆದವು. ಇದರಿಂದ ಬುಡಕಟ್ಟು ಜನರು ಕೊನೆಯಿಲ್ಲದ ಅಭದ್ರತೆಗೆ ಗುರಿಯಾದರು.

ಬುಡಕಟ್ಟು ಜನರು ಇವುಗಳಿಗೆ ವಿರುದ್ಧವಾಗಿ ಮೊದಲಿನಿಂದಲೂ ಹೋರಾಡಿದ್ದಾರೆ. ಈಶಾನ್ಯ ಪ್ರಾಂತದಂತಹುಗಳಲ್ಲಿ ಸರ್ಕಾರದಿಂದ ಸ್ವಲ್ಪ ರಕ್ಷಣೆಯನ್ನು ಸಹ ಹೊಂದಿದವರಾದರು.

- ಕಳೆದ 200 ವರ್ಷಗಳಲ್ಲಿ ಕಾಡುಗಳು ಕಡಿಮೆಯಾಗುತ್ತಾ ಇರುವುದಕ್ಕೆ ಕಾರಣಗಳ ಪಟ್ಟಿ ತಯಾರು ಮಾಡಿರಿ. ಇದಕ್ಕೆ ಪೋಡು ವ್ಯವಸಾಯ ಸಹ ಒಂದು ಕಾರಣವಾ ? ನಿಮ್ಮ ಅಭಿಪ್ರಾಯಗಳನ್ನು ತಿಳಿಸಿರಿ.
- ಕಾಡನ್ನು ಬುಡಕಟ್ಟು ಜನರು ರಕ್ಷಿಸುವುದಕ್ಕೂ, ಅರಣ್ಯಾಧಿಕಾರಿಗಳು ರಕ್ಷಿಸುವುದಕ್ಕೂ ನಡುವೆ ವ್ಯತ್ಯಾಸಗಳೇನು ?

SCERT TELANGANA

- ಸರ್ಕಾರ ವಿಧಿಸಿದ ಭೂಮಿ ಕಂದಾಯವನ್ನು ಬುಡಕಟ್ಟು ಜನರು ಕಟ್ಟಲಾರದೇ ಹೋಗುವುದಕ್ಕೆ ಕಾರಣಗಳೇನು ?

ಸ್ವಾತಂತ್ರ್ಯ ಬಂದ ಸಮಯದಲ್ಲಿ ಬುಡಕಟ್ಟು ಜನರನ್ನು ಕಾಡುಗಳಲ್ಲಿ ತಮ್ಮ ಸಂಪ್ರದಾಯ ಜೀವನಗಳನ್ನು ಮುಂದುವರಿಸುವುದಕ್ಕೆ ಬಿಡಬೇಕಾ ಇಲ್ಲವೇ ಸ್ಥಿರ ವ್ಯವಸಾಯ ಆಧುನಿಕ ವಿದ್ಯೆ, ಕೈಗಾರಿಕಾ ಕೆಲಸ ಆವಲಂಭಿಸುವಂತೆ ಮಾಡಬೇಕಾ ಎಂದು ರಾಷ್ಟ್ರೀಯ ನಾಯಕರು ಚರ್ಚಿಸಿದರು.

- ಯಾವ ಪದ್ದತಿ ಅನುಸರಿಸಿದ್ದರೆ ಚೆನ್ನಾಗಿರುತ್ತಿತ್ತೋ ತರಗತಿಯಲ್ಲಿ ಚರ್ಚಿಸಿರಿ.

## 1988-90ರಲ್ಲಿ ಬಂದ ಬದಲಾವಣೆ (The change in 1988-90)

ಬುಡಕಟ್ಟು ಜನರಿಗೆ ಕಾಡುಗಳ ಮೇಲೆ ಯಾವುದೇ ಹಕ್ಕುಗಳು ಕೊಡದಂತೆ ಅವರ ಅಭಿವೃದ್ಧಿಯ ಕುರಿತು ಆಲೋಚಿಸಲಾರೆವೆಂದು, ಅದೇ ವಿಧವಾಗಿ ಅವರ ಕ್ರಿಯಾತ್ಮಕ ಭಾಗವಹಿಸುವಿಕೆ ಇಲ್ಲದೆ ಕಾಡುಗಳನ್ನು ಸಂರಕ್ಷಿಸಲಾರೆವೆಂದು 1988 ಕ್ಕೆ ಸರ್ಕಾರ ಗುರ್ತಿಸಿತು. ಕಾಡುಗಳ ರಕ್ಷಣೆ, ಪುನರುದ್ದರಣ, ಅಭಿವೃದ್ಧಿಗಳಲ್ಲಿ ಬುಡಕಟ್ಟು ಜನರನ್ನು ಭಾಗವಹಿಸುವಂತೆ ಮಾಡುವುದು ಪ್ರಧಾನ ಕರ್ತವ್ಯವಾಗಿ 'ರಾಷ್ಟ್ರೀಯ ಅರಣ್ಯ ನೀತಿ 1988' ಗುರ್ತಿಸಿತು.ಕಾಡುಗಳಲ್ಲಿ ಅವುಗಳ ಸುತ್ತಮುತ್ತಲು ವಾಸಿಸುವ ಜನರಿಗೆ ಲಾಭದಾಯಕ ಉದ್ಯೋಗಾವಕಾಶ ಕಲ್ಪಿಸಬೇಕೆಂದು ಕೂಡ ಇದು ಗುರ್ತಿಸಿತು. ಕಾಡುಗಳ ರಕ್ಷಣೆಯಲ್ಲಿಯೂ, ಕ್ಷೀಣತೆಗೆ ಗುರಿಯಾದ ಕಾಡುಗಳ ಅಭಿವೃದ್ಧಿಯಲ್ಲಿಯೂ ಕಾಡುಗಳಿಗೆ ಹತ್ತಿರದಲ್ಲಿ ವಾಸಿಸುವ ಗ್ರಾಮದ ಜನರನ್ನು ಪಾಲುದಾರರನ್ನಾಗಿ ಮಾಡಬೇಕೆಂದು ಸರ್ಕಾರ ನಿರ್ಧರಿಸಿತು. ಕ್ಷೀಣತೆಗೆ ಗುರಿಯಾದ ಕಾಡುಗಳನ್ನು ಪುನರುದ್ದರಣ, ಅಭಿವೃದ್ಧಿಯಲ್ಲಿ ಅರಣ್ಯಶಾಖೆ, ಅರಣ್ಯ/ಹಳ್ಳಿ ಜನರ ನಡುವೆ ಕ್ರಿಯಾಶೀಲ ಸಹಕಾರಕ್ಕೆ ಇದು ನಾಂದಿಯಾಯಿತು. ಈ ವಿಧವಾಗಿ 1988 ರಲ್ಲಿ ಆಚರಣೆಯಲ್ಲಿ ಬಂದ ಹೊಸ ನೀತಿ ಜಂಟಿ ಅರಣ್ಯ ಒಡೆತನಕ್ಕೆ (ಜೆ.ಎಫ್.ಎಂ.) ದಾರಿ ಮಾಡಿತು. ಇದರ ಅಂಗವಾಗಿ ಅರಣ್ಯಶಾಖೆ, ಸ್ಥಳೀಯ ಜನರು ಸೇರಿ ಗಿಡಗಳನ್ನು ನೆಡುತ್ತಾರೆ. ಕ್ಷೀಣತೆಗೆ ಗುತಿಯಾದ ಕಾಡುಗಳ ಪುನರುದ್ದರಣೆಯನ್ನುಕೈಗೊಳ್ಳುತ್ತಾರೆ. ಹುಲ್ಲು ಇತರ ಚಿಕ್ಕ ಚಿಕ್ಕ ಅರಣ್ಯ ಉತ್ಪತ್ತಿಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ಅಲ್ಲಿಯ ಜನರಿಗೆ ಅನುಮತಿ ನೀಡಿದರು.

ಈ ಕಾರ್ಯಕ್ರಮಕ್ಕೆ ಸಾಮಾಜಿಕ ಅರಣ್ಯ ಒಡೆತನ (Community Forest Management, CFM) ಎಂದು ಆಂಧ್ರಪ್ರದೇಶ್ ಸರ್ಕಾರ ಹೆಸರು ಬದಲಾಯಿಸಿತು. ಅರಣ್ಯಶಾಖೆ, ಸ್ಥಳೀಯ ಜನರು ಸೇರಿ ಕೆಲಸ ಮಾಡುವಂತೆ ಈ ಕಾರ್ಯಕ್ರಮ ಸಹಾಯಪಟ್ಟಿತು. ಆದರೆ ಅರಣ್ಯ ಪುನರುದ್ದರಣೆಗಾಗಿ ಬುಡಕಟ್ಟು ಜನರು ಅದಕ್ಕೆ ಮೊದಲಿನಿಂದ ಸಾಗುವಳಿ ಮಾಡುತ್ತಿರುವ ಪೋಡು ಭೂಮಿಗಳನ್ನು ಅಡವಿ ಅಭಿವೃದ್ಧಿಗಾಗಿ ಬಿಟ್ಟು ಬಿಡಬೇಕಾಗಿತ್ತು. ಇದೇ ಸಮಯದಲ್ಲಿ ಕಾಡು ಪ್ರಾಣಿಗಳ ಸಂರಕ್ಷಣೆಗೆ ಕಾಡುಗಳಲ್ಲಿ ಅನೇಕ ಹುಲಿಗಳ ಅಭಯಾರಣ್ಯಗಳು ಏರ್ಪಾಟಾಗಿವೆ.

- ಸಿ.ಎಫ್.ಎಂ. (CFM) ಇತರ ಸಾಮಾಜಿಕ ಅರಣ್ಯ ಯೋಜನೆಗಳಿಗೆ ಸಂಬಂಧಿಸಿದಂತೆ ನಿಮ್ಮ ಹಿರಿಯರ ಅನುಭವಗಳನ್ನು ತಿಳಿದುಕೊಳ್ಳಿ.
- ಬುಡಕಟ್ಟು ಜನರ ಅಭಿವೃದ್ಧಿಗೆ ಕಾಡು ಮುಖ್ಯ ಅಲ್ಲವೆಂದು ಸರ್ಕಾರ ಏಕೆ ಭಾವಿಸಿದೆ.

## (ಅರಣ್ಯ ಹಕ್ಕುಗಳ ಕಾಯ್ದೆ, 2006) (Forest Rights Act, 2006)

ಈ ಬದಲಾವಣೆಗೆ ವಿರುದ್ಧವಾಗಿ ಬುಡಕಟ್ಟು, ಜನರು ಪ್ರತಿಭಟನೆ ವ್ಯಕ್ತಪಡಿಸುತ್ತಾ, ಹೋರಾಡುತ್ತಾ ಬಂದರು. ಇವರ ಪರವಾಗಿ ಅನೇಕ ಸ್ವಚ್ಛಂದ ಸಂಸ್ಥೆಗಳು ಸಹಾಯಕ್ಕೆ ಬಂದವು. ಕಾಡುಗಳ ಮೇಲೆ ಬುಡಕಟ್ಟು ಜನರ ಹಕ್ಕುಗಳಿಗಾಗಿ ರಾಷ್ಟ್ರೀಯ ಹಂತದಲ್ಲಿ ಪ್ರಚಾರ ಚಳುವಳಿಯನ್ನು ಕೈಗೊಂಡವು. ಸುಧೀರ್ಘ ಚರ್ಚೆಗಳ ನಂತರ 2006 ರಲ್ಲಿ ಸಂಸತ್ತು ಅರಣ್ಯ ಹಕ್ಕುಗಳ ಕಾಯ್ದೆಯನ್ನು ಮಾಡಿತು. ಬುಡಕಟ್ಟು ಜನರಿಗೆ ಸೇರಿದ ಕಾಡುಗಳಲ್ಲಿ ಅವರಿಗೆ ಸಂಪ್ರಾದಾಯವಾಗಿ ಬರುತ್ತಿರುವ ಹಕ್ಕುಗಳನ್ನು ತಿರಸ್ಕರಿಸಿ ಕಳೆದ ಎರಡು ನೂರು ವರ್ಷಗಳಿಂದ ಬುಡಕಟ್ಟು ಜನರಿಗೆ ತೀವ್ರ ಅನ್ಯಾಯ ಮಾಡಿದ್ದೇವೆಂದು ಮೊದಲಬಾರಿ ಅಂಗೀಕರಿಸಿದರು. ಬುಡಕಟ್ಟು ಜನರ ಹಕ್ಕುಗಳನ್ನು ಪುನರುದ್ಧರಿಸಿದಂತೆ ಕಾಡುಗಳನ್ನು ಸಂರಕ್ಷಿಸುವುದು ಅಸಾಧ್ಯವೆಂದು ಸಹ ಗುರ್ತಿಸಿದರು.

ಈ ಹೊಸ ಕಾಯ್ದೆಯನ್ನು ಮಾಡುವುದಕ್ಕೆ ಮೂರು ಪ್ರಧಾನ ಕಾರಣಗಳನ್ನು ಅದು ತಿಳಿಸಿದೆ.

ಮೊದಲನೆಯದು, ಕಾಡುಗಳನ್ನು ಸಂರಕ್ಷಿಸುವುದಲ್ಲದೇ ಅದೇ ಸಮಯದಲ್ಲಿ ಅರಣ್ಯ ವಾಸಿಗಳಿಗೆ ಜೀವನಾಧಾರ ಕಲ್ಪಿಸುವುದು, ಆಹಾರ ಭದ್ರತೆ ಇರುವಂತೆ ನೋಡಿಕೊಳ್ಳುವುದು. ಎರಡನೇಯದು, ಕಾಡುಗಳ ಸುಸ್ಥಿರತೆ ಉಳಿವಿಗಾಗಿ, ಅಂತರ್ಭಾಗವಾದ ಅರಣ್ಯವಾಸಿಗಳು ತಲೆ

SCERT TELANGANA



*1. ಒಂದಾನೊಂದು ಕಾಲದಲ್ಲಿ ಮನುಷ್ಯರು ನಮ್ಮ ಮಧ್ಯೆ ಇರುತ್ತಿದ್ದರು.*



*2. ಆ ನಂತರ ಬೇಲಿ ಹಾಕಿಕೊಂಡು ನಮ್ಮನ್ನು ಹೊರಗೆ ಇಟ್ಟರು.*



3. ಅವರು ಮತ್ತಷ್ಟು ಹಳ್ಳಿಗಳು, ಪಟ್ಟಣಗಳನ್ನು ನಿರ್ಮಿಸಿ ಕಾಡ ಎನ್ನುವುದು ಇಲ್ಲದಂತೆ ವೃಕ್ಷಗಳನ್ನು ಕಡಿದು ಹಾಕಿದರು. ಆದರೂ ಇನ್ನೂ 'ರಿಜರ್ವ ಕಾಡು ' ಎನ್ನುತ್ತಾರೆ



4. ಮನುಷ್ಯರಿಂದ ಪ್ರಾಣಿಗಳಿಗೆ ರಕ್ಷಣೆ ಇದೆಯಾ ? ಯಾವುದಾದರೂ ರಕ್ಷಿತ ಅರಣ್ಯದ ಬಗ್ಗೆ ನೀವು ಕೇಳಿರುವಿರಾ?

ತಲಾಂತರಗಳಿಂದ ಸಾಗುವಳಿ ಮಾಡುತ್ತಿರುವ ಭೂಮಿಗಳ ಮೇಲೆ, ವಾಸ ಪ್ರಾಂತಗಳ ಮೇಲೆ ಹಕ್ಕುಗಳನ್ನು ವಸಾಹತು ಆಳ್ವಿಕೆಯಲ್ಲಿ ಸ್ವತಂತ್ರ್ಯ ಬಂದ ನಂತರ ಕೂಡ ಗುರ್ತಿಸದೇ ಹೋಗುವುದರಿಂದ ಚಾರಿತ್ರಿಕ ಅನ್ಯಾಯ ನಡೆದಿದೆ.

ಮೂರನೇಯದು, ಸರ್ಕಾರ ಕೈಗೊಂಢ ಅಭಿವೃದ್ಧಿ ಕಾರ್ಯಗಳಿಂದ (ಅಣೆಕಟ್ಟುಗಳು, ಹುಲಿಗಳ ಅಭಯಾರಣ್ಯ ಗಳಂತಹವು) ನಿರಾಶ್ರಿತರಾದವರೊಂದಿಗೆ ಕೂಡಿ ಅರಣ್ಯ ವಾಸಿಗಳ ಭೂಮಿ ಹಕ್ಕುಗಳು, ಕಾಡುಗಳೊಳಗೆ ಹೋಗುವ ಹಕ್ಕುಗಳ ವಿಷಯದಲ್ಲಿ ದೀರ್ಘಕಾಲಿಕವಾಗಿ ಮುಂದುವರೆ ಯುತ್ತಿರುವ ಅಭದ್ರತೆಯನ್ನು ಪರಿಷ್ಕರಿಸುವುದು.

ಈ ಕಾಯ್ದೆಯಿಂದ ಅರಣ್ಯವಾಸಿಗಳಿಗೆ, ಸಂಪ್ರದಾಯ ವಾಗಿ ಅರಣ್ಯ ವಸ್ತುಗಳ ಮೇಲೆ ಆಧಾರಪಟ್ಟವರಿಗೆ ಕಾಡುಗಳ ಮೇಲೆ ತಮ್ಮ ಹಕ್ಕುಗಳು ಪುನಃ ದೊರೆತವು. ಸಾಗುವಳಿ ಮಾಡುತ್ತಿರುವ ಭೂಮಿಗಳಿಗೆ ಕೃಷಿ ಪಾಸ್ ಪುಸ್ತಕಗಳು ಬಂದವು. ಈ ಕಾಯ್ದೆಯನ್ನು ಯೋಗ್ಯ ರೀತಿಯಲ್ಲಿ ಜಾರಿಗೆ ತಂದರೆ ತಲತಲಾಂತರಗಳಿಂದ ಬುಡಕಟ್ಟು ಜನರಿಗೆ ನಡೆ ಯುತ್ತಿರುವ ಅನ್ಯಾಯವನ್ನು ಸ್ವಲ್ಪ ಮಟ್ಟಿಗೆ ಸರಿಪಡಿಸಬಹುದು.

- ಕಳೆದ 200 ವರ್ಷಗಳಿಂದ ಬುಡಕಟ್ಟು ಜನರಿಗೆ ನಡೆದ ಅನ್ಯಾಯವನ್ನು ಈ ಕಾಯ್ದೆ ಎಷ್ಟರ ಮಟ್ಟಿಗೆ ತೀರಿಸುತ್ತದೆ ?

ಕಾಡುಗಳ ಸಂರಕ್ಷಣೆಗಾಗಿ ಕೆಲಸ ಮಾಡುತ್ತಿರುವ ಅನೇಕ ಮಂದಿ ಈ ಕಾಯ್ದೆಯಿಂದ ಕಾಡುಗಳನ್ನು ಸಂಪ್ರದಾಯವಾಗಿ ಬರುತ್ತಿರುವ ಕುಟುಂಬ ಅವಸರಗಳಿಗಾಗಿ ಅಲ್ಲದೇ ಇತರ ವಾಣಿಜ್ಯ ಅವಸರಗಳಿಗಾಗಿ ಉಪಯೋಗಿಸಿಕೊಂಡು ಆ ಕಾಡುಗಳು ಮತ್ತಷ್ಟು ನಾಶಹೊಂದುತ್ತವೆಂದು ಆಂದೋಳನ ಹೊಂದುತ್ತಿದ್ದಾರೆ. ಇದಕ್ಕೆ ವಿರುದ್ಧವಾಗಿ ಕೆಲವು ಮಂದಿ ಸಂಪ್ರದಾಯವಾಗಿ ಅರಣ್ಯ ಸಂರಕ್ಷಣೆ ಮಾಡುತ್ತಿರುವ ಅರಣ್ಯವಾಸಿಗಳನ್ನೇ ಪ್ರಧಾನ ರಕ್ಷಕರಾಗಿ ಮಾಡುವುದರ ಮೂಲಕ ಕಾಡುಗಳನ್ನು ಇನ್ನೂ ಚೆನ್ನಾಗಿ ಕಾಪಾಡಬಹುದೆಂದು ಭಾವಿಸುತ್ತಿದ್ದಾರೆ.

- ಈ ವಿಷಯವನ್ನು ತರಗತಿಯಲ್ಲಿ ಚರ್ಚಿಸಿರಿ – ಬುಡಕಟ್ಟು ಜನರಿಗೆ ನಡೆದ ಅನ್ಯಾಯಗಳನ್ನು ಸರಿ ಮಾಡಲು ಇದೇ ಸರಿಯಾದ ಮಾರ್ಗವಾ ? ಕಾಡುಗಳನ್ನು ಕಾಪಾಡುವುದರಲ್ಲಿ ಇದು ಹೇಗೆ ಉಪಯೋಗಪಡುತ್ತದೆ ? ಇದಕ್ಕೆ ಯಾವ ಇತರ ಕ್ರಮಗಳು ಕೈಗೊಳ್ಳಬೇಕು ?

## ಉಪಾಧ್ಯಾಯರ ಸಹಾಯದಿಂದ ಕಾಯ್ದೆಯಲ್ಲಿನ ಕೆಳಗಿನ ಅಂಶಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿರಿ.

a. ಕಾಡುಗಳಲ್ಲಿ ಇರುತ್ತಿರುವ ಪರಿಶಿಷ್ಟ ಪಂಗಡ, ಇಲ್ಲವೇ ಸಂಪ್ರದಾಯವಾಗಿ ಕಾಡುಗಳಲ್ಲಿ ಇರುತ್ತಿರುವ ಇತರ ಜಾತಿಗಳಿಗೆ ಸೇರಿದವರು ತಮ್ಮ ಜೀವನಾಧಾರಕ್ಕೆ ಸ್ವತಃ ಸಾಗುವಳಿ ಮಾಡಿಕೊಳ್ಳುವ ಭೂಮಿಯ ಮೇಲೆ, ಒಬ್ಬರಾಗಿ ಇಲ್ಲವೇ ಸಮೂಹವಾಗಿ ವಾಸಿಸುವುದಕ್ಕೆ ಏರ್ಪಡಿಸಿಕೊಂಡ ನಿವಾಸ ಪ್ರಾಂತದ ಮೇಲೆ ಈ ಕಾಯ್ದೆಯ ಮೂಲಕ ಹಕ್ಕು ಲಭಿಸುತ್ತದೆ. (ಅಲ್ಲಿರುವ ಹಕ್ಕು )

b. ನಿಸ್ತಾರ್‌ದಂತಹ ಸಾಮೂಹಿಕ ಹಕ್ಕುಗಳು.

c. ಗ್ರಾಮದ ಮೇರೆಯ ಒಳಗೆ ಇಲ್ಲವೇ ಹೊರಗೆ ಸಂಪ್ರದಾಯವಾಗಿ ಸಂಗ್ರಹಿಸುತ್ತಾ ಬರುತ್ತಿರುವ ಕಟ್ಟಿಗೆಯೇತರ ಅರಣ್ಯ ಉತ್ಪತ್ತಿಗಳನ್ನು ಸಂಗ್ರಹಿಸುವ, ಉಪಯೋಗಿಸಿಕೊಳ್ಳುವ, ಮಾರುವ ಹಕ್ಕು, ಅವುಗಳ ಮೇಲೆ ಒಡೆತನ.

d. ಮೀನು ಹಿಡಿಯುವುದು, ಜಲಾಶಯಗಳು, ಪಶುಗಳನ್ನು ಮೇಯಿಸುವುದಂತಹ ಸಾಮೂಹಿಕ ವಿನಿಯೋಗ ಹಕ್ಕುಗಳು.

e. ವ್ಯವಸಾಯ ಪೂರ್ವ ಸಮಾಜಗಳು, ಆದಿ (ಪ್ರಿಮಿಟಿವ್) ಗಿರಿಜನ ಗುಂಪುಗಳ ವಾಸ, ಸಂಚಾರಕ್ಕೆ ಸಂಬಂಧಿಸಿದ ಸಾಮೂಹಿಕ ಹಕ್ಕುಗಳು.

g. ಅರಣ್ಯ ಭೂಮಿಗಳ ಮೇಲೆ ಸ್ಥಳೀಯ ಇಲ್ಲವೇ ರಾಜ್ಯ ಸರ್ಕಾರ ಕೊಟ್ಟಿರುವ ಗುತ್ತಿಗೆ, ಹಕ್ಕು, ಗ್ರಾಂಟುನಂತಹವುಗಳನ್ನು ಕೃಷಿ ಪಾಸು ಪುಸ್ತಕಗಳಾಗಿ ಬದಲಾಯಿಸಿಕೊಳ್ಳುವ ಹಕ್ಕು.

h. ಅರಣ್ಯ ಗ್ರಾಮಗಳು, ಪುರಾತನ ವಾಸಗಳಂತಹವುಗಳಲ್ಲಿ ವಾಸಿಸುವ ಹಕ್ಕುಗಳು ಹಾಗೆ ಬದಲಾಯಿಸಿಕೊಳ್ಳುವ ಹಕ್ಕು.

i. ಜಂಟೀ ಅರಣ್ಯ ಸಂಪನ್ಮೂಲಗಳ ರಕ್ಷಣೆ, ಪುನರುದ್ಧರಣೆ, ಸಂರಕ್ಷಣೆ, ಒಡೆತನ ಹಕ್ಕುಗಳು.

k. ಜೀವ ವೈವಿಧ್ಯತೆಯನ್ನು ಉಪಯೋಗಿಸಿಕೊಳ್ಳುವ ಹಕ್ಕು, ಜೀವ ವೈವಿಧ್ಯತೆ, ಸಾಂಸ್ಕೃತಿಕ ವೈವಿಧ್ಯತೆಗೆ ಸಂಬಂಧಿಸಿದ ಸಂಪ್ರದಾಯ ವಿಜ್ಞಾನ, ಬೌದ್ಧಿಕ ಸಂಬಂಧಿತ ಆಸ್ತಿಗಳ ಮೇಲೆ ಜಂಟೀ ಹಕ್ಕು.

SCERT TELANGANA

## ಮುಖ್ಯ ಪದಗಳು

1. ಕಾಡುಗಳ ಪುನರುದ್ಧರಣೆ 2. ಕಾಡುಗಳನ್ನು ಕಡಿದು ಹಾಕವುದು 3.ನಿತ್ಯ ಹರಿದ್ವರ್ಣದ ಕಾಡುಗಳು 4.ಎಲೆ ಉದುರುವ ಕಾಡುಗಳು 5. ರಿಜರ್ವ್ ಕಾಡುಗಳು 6. ಜೌಗು ಕಾಡುಗಳು 7. ಅರಣ್ಯ ಒಡೆತನ

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ

1. ಕೆಳಗಿನ ವಾಕ್ಯಗಳೊಂದಿಗೆ ನೀವು ಅಂಗೀಕರಿಸುವಿರಾ ? ಅಂಗೀಕರಿಸುವುದಕ್ಕೆ, ಅಂಗೀಕರಿಸದೇ ಇರುವುದಕ್ಕೆ ಕಾರಣಗಳನ್ನು ತಿಳಿಸಿರಿ.

a. ಕಾಡುಗಳನ್ನು ಸಂರಕ್ಷಿಸುವುದಕ್ಕೆ ವೈಯಕ್ತಿಕ ಆಸ್ತಿ ಎನ್ನುವ ಭಾವನೆ ಮುಖ್ಯವಾದದ್ದು.

b. ಕಾಡುಗಳೆಲ್ಲವನ್ನು ಮನುಷ್ಯರು ಕಾಪಾಡಬೇಕು.

c. ಕಳೆದ ಕೆಲವು ಶತಮಾನಗಳಿಂದ ಭೂಮಿಯ ಮೇಲೆ ವಾಸಿಸುತ್ತಿರುವ ಜನರು ತಮ್ಮ ಜೀವನಾಧಾರಕ್ಕೆ ಕಾಡುಗಳ ಮೇಲೆ ಆಧಾರಪಡುವುದು ಕಡಿಮೆಯಾಗಿದೆ.

2. ಕಳೆದ ಕೆಲವು ಶತಮಾನಗಳಲ್ಲಿ ಅರಣ್ಯ ವಿನಿಯೋಗದಲ್ಲಿ ಬಂದ ಮುಖ್ಯ ಬದಲಾವಣೆಗಳೊಂದಿಗೆ ಒಂದು ಪಟ್ಟಿ ತಯಾರು ಮಾಡಿರಿ. ಹಿಂದಿನ ತರಗತಿಯ ಪಾಠ್ಯ ಪುಸ್ತಕಗಳು ನೋಡಬೇಕಾದ ಅವಶ್ಯಕತೆ ಬರಬಹುದು.

| ಅಂಶ | ಬುಡಕಟ್ಟು ಜನರ ಜೀವನದ ಮೇಲೆ ಪ್ರಭಾವ | ಕಾಡಿನ ಮೇಲೆ ಪ್ರಭಾವ |
|---|---|---|
| ವ್ಯವಸಾಯದ ಉದಯ | | |
| ವಸಾಹತು ಶಕ್ತಿಗಳ ಆಗಮನ | | |
| ಸರ್ಕಾರದ ನಿಯಮಗಳು | | |

3. ಮೇಲೆ ಕೊಟ್ಟವುಗಳ ಆಧಾರವಾಗಿ, ಇಲ್ಲವೆ ಕಾಡುಗಳ ಕುರಿತು ನಿಮಗೆ ತಿಳಿದಿರುವ ವಿಷಯದ ಆಧಾರದ ಮೇಲೆ ನೀವು ವಾಸಿಸುತ್ತಿರುವ ಪ್ರದೇಶಕ್ಕೆ ಹತ್ತಿರದಲ್ಲಿರುವ ಕಾಡನ್ನು ಈ ಕೆಳಗಿನ ಅಂಶಗಳಲ್ಲಿ ವಿವರಿಸಿರಿ.

| ವೃಕ್ಷಗಳ ದಟ್ಟತೆ | ಕಾಣಿಸುವ ವೃಕ್ಷಗಳು | ವೃಕ್ಷಗಳ ಪ್ರತ್ಯೇಕ ಅಂಶಗಳು |
|---|---|---|
| | | |

4. ತೆಲಂಗಾಣ – ಕಾಡುಗಳ ನಕ್ಷೆಯನ್ನು ಪರಿಶೀಲಿಸಿ ಯಾವ ಜಿಲ್ಲೆ / ಜಿಲ್ಲೆಗಳು ಅತ್ಯಧಿಕವಾಗಿ ಕಾಡುಗಳಿಂದ ಆವರಿಸಲ್ಪಟ್ಟು ಇವೆಯೇ ತಿಳಿಸಿ.

5. ಒಂದು ಪಾಠಶಾಲೆಯಲ್ಲಿ ಕೆಲವು ಮಂದಿ ವಿದ್ಯಾರ್ಥಿಗಳು 'ವನ ಮಹೋತ್ಸವ ಕಾರ್ಯಕ್ರಮ ' ದಲ್ಲಿ ಪಾಲ್ಗೊಂಡು ಕೆಲವು ಗಿಡಗಳನ್ನು ನೆಟ್ಟರು. ಇದಕ್ಕೆ ನೀನು ಹೇಗೆ ಸ್ಪಂದಿಸುವಿ ?

6. ''ತೆಲಂಗಾಣದಲ್ಲಿ ಕಾಡುಗಳು '' ಶೀರ್ಷಿಕೆ ಕೆಳಗೆ ಇರುವ ಪ್ಯಾರಾವನ್ನು ಓದಿ ಕೆಳಗಿನ ಪ್ರಶ್ನೆಗೆ ಉತ್ತರ ಬರೆಯಿರಿ.

ನಮ್ಮ ರಾಜ್ಯದಲ್ಲಿ ಅರಣ್ಯ ವಿಸ್ತೀರ್ಣದ ಅಭಿವೃದ್ಧಿಗಾಗಿ ನೀನು ಸೂಚಿಸುವ ಸಲಹೆಗಳು ಯಾವುವು ?

7. ಈ ಪಾಠದಲ್ಲಿ ನೀಡಿದ ವಿವಿಧ ಪ್ರಕಾರ ಅಡವಿಗಳ ಚಿತ್ರಗಳು ಇರುವ ಪ್ರದೇಶಗಳನ್ನು ನಿಮ್ಮ ಹತ್ತಿರ ಇರುವ ಅಟ್ಲಾಸ್‌ನಲ್ಲಿ ಗುರ್ತಿಸಿರಿ. ಇವುಗಳ ಮಧ್ಯೆ ಇರುವ ಹೋಲಿಕೆಗಳು, ವ್ಯತ್ಯಾಸಗಳನ್ನು ನೀವು ಗುರ್ತಿಸಬಲ್ಲಿರಾ ?

8. ಸತತ ಹರಿದ್ವರ್ಣ ಕಾಡುಗಳಿಗೆ , ಎಲೆ ಉದಿರಿಸುವ ಕಾಡುಗಳಿಗೆ ಇರುವ ವ್ಯತ್ಯಾಸಗಳೇನು ? 59ನೇ ಪೇಜಿಯಲ್ಲಿರುವ ಚಿತ್ರಗಳನ್ನು ಪರಿಶೀಲಿಸಿ ಒಂದು ವ್ಯಾಖ್ಯಾ ಬರೆಯಿರಿ.

SCERT TELANGANA

ಪ್ರಕರಣ **6**

# ಖನಿಜಗಳು, ಗಣಿಗಳ – ಅಗೆಯುವಿಕೆ

## ನಿಮ್ಮ ಮನೆಯಲ್ಲಿನ ಖನಿಜಗಳು
## (Minerals in our houses)

ನಿಮ್ಮ ಮನೆಯನ್ನು ಮಣ್ಣಿನಿಂದ ತಯಾರಿ ಸಿದ ಇಟ್ಟಿಗೆ, ಸಿಮೆಂಟು, ಮರಳು ಬೆರೆಸಿ ಗೋಡೆಗಳನ್ನು ಕಟ್ಟಿರುತ್ತಾರೆ. ಗೋಡೆಗಳಿಗೆ ಬಿಳಿ ಸುಣ್ಣವನ್ನು ಬಳೆದಿರುತ್ತಾರೆ. ನೆಲಕ್ಕೆ ಕಡಪಕಲ್ಲು ಹಾಕಿರುತ್ತಾರೆ. ಕಂಭಗಳಿಗೆ ಇತರೆ ಗ್ರಾನೈಟ್ ಕಲ್ಲುನ್ನು ಬಳಸಿರುತ್ತಾರೆ. ಇವುಗಳಲ್ಲಿ ಅನೇಕ ಮಣ್ಣು, ಮರಳು, ಸುಣ್ಣ, ಕಡಪಕಲ್ಲು ಅಥವಾ ಗ್ರಾನೈಟ್ ಕಲ್ಲು. ಖನಿಜಗಳು ಭೂಮಿಯಿಂದ ದೊರಕುವಂತಹವು. ಮನೆಯಲ್ಲಿ ನೋಡಿದರೆ ಕಬ್ಬಿಣ, ರಾಗಿ, ಸೀಸೆ, ಕ್ರೊಂ, ಅಲ್ಯುಮಿನಿಯಂ ನಂತಹ ಲೋಹಗಳಿಂದ ತಯಾರಿಸಿದ ವಸ್ತುಗಳು ಕಾಣಿಸುತ್ತವೆ. ನೀವು ಬೆಳ್ಳಿ ಬಂಗಾರದಿಂದ ತಯಾರಿಸಿದ ಆಭರಣಗಳನ್ನು ಧರಿಸಿಕೊಂಡಿರಬಹುದು. ಗಣಿಗಳಿಂದ ಅಗೆದು ತೆಗೆದ ಖನಿಜಗಳಿಂದ ಈ ಲೋಹಗಳನ್ನು ಬೇರ್ಪಡಿಸುತ್ತಾರೆ. ನಾವು ಪೆಟ್ರೋಲ್, ಡಿಜೆಲ್, ಕಿರೋಸಿನ್‌ನಂತಹ ಇಂಧನಗಳನ್ನು ಬಳಸುತ್ತಿದ್ದೇವೆ. ಕಚ್ಚಾತೈಲ ಎನ್ನುವ ಖನಿಜ ಎಣ್ಣೆಯಿಂದ ಇವುಗಳನ್ನು ತೆಗೆಯುತ್ತಾರೆ. ಕಲ್ಲಿದ್ದಲು, ಸಹಜವಾಯುವಿ ನಂತಹ ಇತರ ಇಂಧನಗಳು ಕೂಡ ಖನಿಜಗಳ ಸ್ವರೂಪಗಳೇ. ಇನ್ನೂ ಹೇಳಲೇಬೇಕೆಂದರೆ ಬಾವಿಗಳು, ಕೊಳವೆ ಬಾವಿಗಳಿಂದ ಹೊರ ತೆಗೆಯುವ ಭೂಗರ್ಭ ಜಲ ಕೂಡ ಖನಿಜವೇ. ಇನ್ನೊಂದು ಮಾತಿನಲ್ಲಿ ಹೇಳಬೇಕೆಂದರೆ ಭೂಮಿಯೊಳಗೆ ದೊರೆಯುವ ಪ್ರತಿಯೊಂದು (ಸಸ್ಯಗಳು, ಪ್ರಾಣಿಗಳ ರೂಪದಲ್ಲಿ ಇಲ್ಲದಂತವುದು) ಖನಿಜವೇ ಆಗುತ್ತದೆ.

## ನವೀಕರಿಸುವ (ಪುನರುತ್ಪತ್ತಿ), ಮುಗಿದು ಹೋಗುವ ಸಂಪನ್ಮೂಲಗಳು
### (Renewable and non-renewable resources)

ಪರಿಸರ ಶಾಸ್ತ್ರಜ್ಞರು ಸಂಪನ್ಮೂಲಗಳನ್ನು ಎರಡು ಭಾಗಗಳಾಗಿ ವಿಭಜಿಸಿದ್ದಾರೆ. (1) ನವೀಕರಿಸುವ (2) ಮುಗಿದು ಹೋಗುವ ಸಂಪನ್ಮೂಲಗಳು.

ಕಟ್ಟಿಗೆಯಂತೆ ಮತ್ತೇ, ಮತ್ತೇ ಪಡೆಯುವ ಸಂಪನ್ಮೂಲಗಳನ್ನು ನವೀಕರಿಸುವ ಸಂಪನ್ಮೂಲಗಳು ಎನ್ನುತ್ತಾರೆ.

ಒಂದು ಮರವನ್ನು ಕಡಿದರೆ, ಮತ್ತೊಂದು ಮರವನ್ನು ಬೆಳೆಸಬಹುದು. ಕೆಲವು ವರ್ಷಗಳ ನಂತರ ಅದು ಕಟ್ಟಿಗೆಯನ್ನು ಕೊಡುತ್ತದೆ ಎಂದು ಆಶಿಸಬಹುದು. ಆದರೆ ಗುಡ್ಡಗಳಿಂದ ದೊರೆಯುವ ಗ್ರಾನೈಟನ್ನು ತೆಗೆದು ಮಾರಿದರೆ ಮತ್ತೊಂದು ಕಲ್ಲನ್ನು ನೆಟ್ಟರೆ ಅಥವಾ ಯಾವುದೇ ರೀತಿಯಿಂದ ತಯಾರು ಮಾಡಬಲ್ಲೆವಾ ? ಈ ಸಂಪನ್ಮೂಲಗಳನ್ನು ಪುನಃ ತಯಾರು ಮಾಡಬಲಾರೆವು. ಆದ್ದರಿಂದ ಇವುಗಳನ್ನು ಮುಗಿದು ಹೋಗುವ ಸಂಪನ್ಮೂಲಗಳು ಅಥವಾ ನವೀಕರಿಸಲಾಗದ ಸಂಪನ್ಮೂಲಗಳು ಎನ್ನುತ್ತಾರೆ. ಅನೇಕ ವಿಧವಾದ ಖನಿಜಗಳು ನವೀಕರಿಸಲಾಗವು ಇವುಗಳನ್ನು ಬಳಸುತ್ತಾ ಹೋದಂತೆ ಯಾವುದೋ ಒಂದು ಹಂತದಲ್ಲಿ ಇವು ನಮಗೆ ಉಳಿದಿರುವುದಿಲ್ಲ. ಉದಾಹರಣೆಗೆ ಬಂಗಾರವನ್ನು ತೆಗೆದು ಕೊಳ್ಳೋಣ. ಬಹಳ ಆಳವಾದ ಗಣಿಗಳಲ್ಲಿ ಇದು ಪರಿಮಿತವಾದ ಪ್ರಮಾಣದಲ್ಲಿ ಮಾತ್ರವಿದೆ. ಭಾರತ ದೇಶದಲ್ಲಿ ಏಕೈಕ ಬಂಗಾರದ ಗಣಿಯಾದ ಕೋಲಾರ್ ಚಿನ್ನದ ಗಣಿಯಲ್ಲಿ ಚಿನ್ನ ಮುಗಿದು ಹೋದದ್ದರಿಂದ ಅದನ್ನು ಮುಚ್ಚಿ ಹಾಕಿದರು. ಅದೇ ರೀತಿ ಕಲ್ಲಿದ್ದಲು, ಕಚ್ಚಾತೈಲ, ಭೂಮಿ ಮೇಲೆ ಇವುಗಳ ಉಳುವಿಕೆ ಪರಿಮಿತ ಪ್ರಮಾಣದಲ್ಲಿವೆ. ಇವುಗಳನ್ನು ಉಪಯೋಗಿಸಿ ಬಿಟ್ಟರೆ ಇನ್ನೂ ಭವಿಷ್ಯತ್ತಿನಲ್ಲಿ ಬರುವ ತಲೆಮಾರುಗಳಿಗೆ ಇಲ್ಲದಂತಾಗುತ್ತದೆ. ಇವುಗಳನ್ನು ನವೀಕರಿಸಲಾಗದ ಇಂಧನಗಳೇನ್ನುತ್ತಾರೆ.

- ರೈಲು, ಕಾರು ನಡೆಸಲು ಅವಕಾಶವಿಲ್ಲದ ಪ್ರಪಂಚವನ್ನು ನೀವು ಊಹಿಸಿರಿ.
- ತನ್ನಷ್ಟಕ್ಕೆ ತಾನೇ ನವೀಕರಿಸಿ ಕೊಳ್ಳುವ ಖನಿಜದ ಹೆಸರೊಂದನ್ನು ಹೇಳಿ. ಈ ಪ್ರಕ್ರಿಯೆಯಲ್ಲಿ ನಾವು ಹೇಗೆ ಸಹಕರಿಸಬಲ್ಲೆವು ?
- ನಾವು ಬಳಸುತ್ತಿದ್ದರೂ ಮುಗಿದು ಹೋಗದ ನಾವು ಏನು ಮಾಡದಿದ್ದರೂ ನವೀಕರಿಸದ ಇಂಧನ ಸಂಪನ್ಮೂಲ ಯಾವುದು ಹೇಳಿರಿ ?

SCERT TELANGANA

- ಈ ಕೆಳಗೆ ಕೊಟ್ಟ ಸಹಜ ವಸ್ತುಗಳಲ್ಲಿ ನವೀಕರಿಸುವ, ಮುಗಿದು ಹೋಗುವ ಸಂಪನ್ಮೂಲಗಳನ್ನು ವರ್ಗೀಕರಿಸಿ
- ಖನಿಜವಾದರೆ ಟಿಕ್ಕು (✓) ಗುರ್ತಿಸಿ, ಖನಿಜವಾಗದಿದ್ದರೆ ಇಂಟು (✕) ಬಿದಿರು, ಕಲ್ಲಿದ್ದಲು ಸಮುದ್ರದ ನೀರು, ಮಣ್ಣು, ಇರುವೆಗಳು, ಮರಳು ಕಬ್ಬಿಣ, ವಜ್ರ, ಮರಗಳು, ಕಚ್ಚಾತೈಲ, ಹುಲ್ಲು, ಗಾಳಿ, ಅಮೃತ ಶಿಲೆ, ಮೀನು, ಬಾವಿನೀರು, ಸೂರ್ಯರಶ್ಮಿ.

| ನವೀಕರಿಸುವ ಸಂಪನ್ಮೂಲಗಳು | ನವೀಕರಿಸಲಾಗದ ಸಂಪನ್ಮೂಲಗಳು | ಖನಿಜಗಳು |
|---|---|---|
| 1 ಬಿದಿರು | | ✕ |
| 2 | ಕಲ್ಲಿದ್ದಲು | ✓ |
| 3 | | |
| 4 | | |

- ಕೆಳಗೆ ಕೊಟ್ಟ ಖನಿಜಗಳಲ್ಲಿ ಲೋಹಗಳು ಲೋಹಗಳಲ್ಲದವುಗಳನ್ನು ವರ್ಗೀಕರಿಸಿ, ಇಂಧನ ಸಂಪನ್ಮೂಲಗಳನ್ನು ಹೆಸರಿಸಿ. ಕಬ್ಬಿಣದ ಅದಿರು, ಬ್ಯಾಕ್ಸೈಟ್ (ಅಲ್ಯುಮಿನಿಯಂ ಅದಿರು, ಕಲ್ಲಿದ್ದಲು, ರಾಗಿ ಅದಿರು, ಸುಣ್ಣದ ಕಲ್ಲು, ಜಿಪ್ಸಂ, ಮೈಕಾ ಭೂಗರ್ಭ ಜಲಗಳು, ಕಚ್ಚಾ ತೈಲ, ಕಲ್ಲುಪ್ಪು ಮರಳು, ವಜ್ರದ ಹರಳು.

| ಲೋಹಗಳು | ಅಲೋಹಗಳು | ಇಂಧನ ಸಂಪನ್ಮೂಲಗಳು |
|---|---|---|
| ಕಬ್ಬಿಣದ ಅದಿರು | | |
| | | |
| | | |
| | | |
| | | |

## ಕೆಲವು ಮುಖ್ಯವಾದ ಖನಿಜಗಳು, ಅವುಗಳ ಉಪಯೋಗಗಳು (Some important minerals and their uses)

ಕಬ್ಬಿಣದ ಅದಿರು, ಮರಳು, ಕಚ್ಚಾತೈಲ, ಸುಣ್ಣದ ಕಲ್ಲು, ಕಲ್ಲಿದ್ದಲಿನಂತಹ ಕೆಲವು ಖನಿಜಗಳ ಉಪಯೋಗಗಳು ನಿಮಗೆ ತಿಳಿದೇ ಇರುತ್ತದೆ. ಆಧುನಿಕ ಕೈಗಾರಿಕೆಗಳಲ್ಲಿ ಅನೇಕ ವಿಧವಾದ ಖನಿಜಗಳನ್ನು ಉಪಯೋಗಿಸುತ್ತಿದ್ದೇವೆ. ಅದಕ್ಕಾಗಿ ಈ ಖನಿಜಗಳು ನಮ್ಮ ಜೀವನದಲ್ಲಿ ಬಹಳ ಮುಖ್ಯ ಭಾಗಗಳಾಗಿವೆ. ಕೆಲವು ಮುಖ್ಯವಾದ ಖನಿಜಗಳ ಉಪಯೋಗ ಕುರಿತು ಇಲ್ಲಿ ತಿಳಿದುಕೊಳ್ಳೋಣ. ನೀವು ಗ್ರಂಥಾಲಯ ಇಲ್ಲವೇ ಇಂಟರ್‌ನೆಟ್‌ನಲ್ಲಿ ನೋಡಿ ಇವುಗಳ ಕುರಿತು ಮತ್ತಷ್ಟು ಮಾಹಿತಿಯನ್ನು ಸಂಗ್ರಹಿಸಬಹುದು.

**ಬಾಕ್ಸೈಟ್ (Bauxite) :** ಬಾಕ್ಸೈಟ್ ಅದಿರಿನಿಂದ ಅಲ್ಯುಮಿನಿಯಂನ್ನು ಹೊರ ತೆಗೆಯುತ್ತಾರೆ. ಅಲ್ಯೂಮಿನಿಯಂ ಬಹಳ ಕಡಿಮೆ ಬಾರವಿರುವುದರಿಂದ ನಮ್ಮ ಜೀವನದಲ್ಲಿ ಬಹಳ ಮುಖ್ಯವಾದ ಖನಿಜವಾಗಿ ಬದಲಾಗಿದೆ. ವಿಮಾನಗಳು, ಮನೆಯ ಪಾತ್ರೆಗಳು, ವಿದ್ಯುತ್ ತಂತಿ, ಯಂತ್ರಗಳನ್ನು ತಯಾರು ಮಾಡುವಲ್ಲಿ, ಆಹಾರ ಪದಾರ್ಥಗಳ ಪ್ಯಾಕೇಜಿನಲ್ಲಿ ಇದನ್ನು ವಿಸ್ತಾರವಾಗಿ ಉಪಯೋಗಿಸುತ್ತಿದ್ದಾರೆ.

**ಮೈಕಾ (ಅಭ್ರಕ) (Mica) :** ಇದು ಒಂದು ಹೊಳೆಯುವ ಖನಿಜ. ವಿದ್ಯುತ್ ಎಲೆಕ್ಟ್ರಾನಿಕ್ ಕೈಗಾರಿಕೆಗಳಲ್ಲಿ ಇದನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಉಪಯೋಗಪಡುವ ಅನೇಕ ಗುಣಗಳು ಇದಕ್ಕಿವೆ. ಇದು ಸಣ್ಣನೆಯ ಪದರಿನಂತೆ ಇರುತ್ತದೆ. ಇದು ವಿದ್ಯುತ್ ನಿರೋಧಕ ಶಕ್ತಿ ಹೊಂದಿದೆ.

**ಕ್ರೋಂ (Chrome) :** ಸ್ಟೆನ್‌ಲೆಸ್‌ಸ್ಟೀಲ್, ಪಾತ್ರೆಗಳನ್ನು ತಯಾರು ಮಾಡಲು ಇದನ್ನು ಉಪಯೋಗಿಸುತ್ತಾರೆ. (ಕಬ್ಬಿಣ ರಾಗಿಯಂತೆ ) ಇದು ತುಕ್ಕು ಹಿಡಿಯುವುದಿಲ್ಲ. ಆದ್ದರಿಂದ ಇದನ್ನು ಅನ್ನ ಮಾಡಲು, ಆಮ್ಲಗಳಂತಹ ಕೈಗಾರಿಕಾ ದ್ರವ್ಯಗಳನ್ನು ಸಂಗ್ರಹಿಸಲು ಉಪಯೋಗಿಸುತ್ತಾರೆ.

**ಆಸ್ಬೆಸ್ಟಾಸ್ (Asbestos) :** ಇದು ಬಿಸಿಯನ್ನು ನಿರೋಧಿಸುವ ಪದಾರ್ಥ, ಇದನ್ನು ಕೈಗಾರಿಕೆಗಳಲ್ಲೂ, ಮನೆಗಳ ಮೇಲ್ಛಾವಣೆಗೆ ಹೆಚ್ಚಾಗಿ ಬಳಸುತ್ತಾರೆ. ಆದರೆ ಅವುಗಳ ಮೇಲೆ ಕೆಲಸ ಮಾಡುವವರ ಆರೋಗ್ಯ ಹಾಳಾಗುತ್ತದೆ. ಆದ್ದರಿಂದ ಇದನ್ನು ಪ್ರಪಂಚವೆಲ್ಲಾ ಭಾಗದಲ್ಲಿ ಪ್ರಸ್ತುತ ಇದನ್ನು ನಿಷೇಧಿಸುತ್ತಿದ್ದಾರೆ.

**ಬೆರೈಟಿಸ್ (Barytes) :** ಇದು ಕೆಲವು ಖನಿಜಗಳ ಸಮೂಹ ಇದರಿಂದ ಬೇರಿಯಂ ಎನ್ನುವ ಮೂಲಕವನ್ನು ಹೊರ ತೆಗೆಯುತ್ತಾರೆ. ಕೈಗಾರಿಕೆ, ವೈದ್ಯ ಸೇವೆಗೆ ಅವಶ್ಯಕತೆಗಾಗಿ ಬೇರಿಯಂನನ್ನು ಉಪಯೋಗಿಸುತ್ತಾರೆ. ಕಚ್ಚಾ ತೈಲ, ಸಹಜವಾಯುಗಳಂತ ವುಗಳಿಗಾಗಿ ಬಹಳ ಆಳಕ್ಕೆ ಅಗೆಯಲು ಬೆರೈಟಿಸ್‌ನ್ನು ಉಪಯೋಗಿಸುತ್ತಾರೆ.

**ಫೆಲ್ಡ್‌ಸ್ಪಾರ್ (Feldspar) :** ಗಾಜು (ವಾಷ್ ಬೆಸಿನ್) ನಂತಹ ಸೆರಾಮಿಕ್ ವಸ್ತುಗಳನ್ನು ತಯಾರು ಮಾಡಲು ಇದು ಕಚ್ಚಾ ವಸ್ತುವಾಗಿ ಉಪಯೋಗವಾಗುತ್ತದೆ.

SCERT TELANGANA

## ತೆಲಂಗಾಣದಲ್ಲಿನ ಖನಿಜ ಸಂಪನ್ಮೂಲಗಳು
## (Mineral Resources of Andhra Pradesh)

ನಮ್ಮ ರಾಜ್ಯ ಭಿನ್ನ ಭೌಗೋಳಿಕ ಲಕ್ಷಣಗಳಿಂದ ಕೂಡಿದ್ದು, ಅನೇಕ ವಿವಿಧ ಖನಿಜ ಸಂಪನ್ಮೂಲಗಳು ಸಮೃದ್ಧಿಯಾಗಿರುವುದರಿಂದ ಕೈಗಾರಿಕೆಗಳಿಗೆ ಅನುಕೂಲವಾಗಿದೆ. ನಮ್ಮ ರಾಜ್ಯವು ವಿವಿಧ ಖನಿಜಗಳ ಆಗರವಾಗಿದೆ. ಪ್ರತ್ಯೇಕವಾಗಿ ಇದ್ದಿಲು, ಕಬ್ಬಿಣದ ಅದಿರು, ಸುಣ್ಣದ ಕಲ್ಲು, ಮ್ಯಾಂಗನೀಸ್, ಕ್ವಾರ್ಟ್ಸ್, ಪೆಲ್ಡ್‌ಸ್ಪಾರ್, ಜೇಡಿಮಣ್ಣು, ಬೆರೈಟೀಸ್, ಯುರೇನಿಯಂ, ಅಮೃತಶಿಲೆ, ಬಣ್ಣ ಬಣ್ಣದ ಗ್ರಾನೈಟ್ ಸಿಗುತ್ತವೆ.

ನಮ್ಮ ರಾಜ್ಯದಲ್ಲಿ ಬೈಯಾರಮ್ ಮೀಸಲು ಅರಣ್ಯದಲ್ಲಿ ಸಾಮಾನ್ಯ ವಿಧದ ಕಬ್ಬಿಣ ಅದಿರಿನ ನಿಕ್ಷೇಪಗಳು ಅಲ್ಲಲ್ಲಿ ಹರಡಿವೆ. ಮಹಾಬೂಬಾಬಾದ್ ಜಿಲ್ಲೆಯ ರೆವೆನ್ಯೂ ಮತ್ತು ಪಟ್ಟಾ ಭೂಮಿಯಲ್ಲಿ ಪ್ಲೋಟ್ ಐರನ್ ದಾಸ್ತಾನುಗಳಿವೆ. ಪೆದ್ದಪಲ್ಲಿ, ಮಂಚಿರ್ಯಾಲ ಮತ್ತು ವರಂಗಲ್ ಜಿಲ್ಲೆಗಳಲ್ಲಿ ಕಡಿಮೆ ಗುಣಮಟ್ಟದ ಕಬ್ಬಿಣ ಅದಿರಿನ ನಿಕ್ಷೇಪಗಳು ಅಲ್ಲಲ್ಲಿ ಹರಡಿವೆ. ನಲ್ಗೊಂಡ, ವಿಕಾರಾಬಾದ, ಪೆದ್ದಪಲ್ಲಿ ಮತ್ತು ಮಂಚಿರ್ಯಾಲ ಜಿಲ್ಲೆಗಳಲ್ಲಿ ಸಿಮೆಂಟ್ ಕೈಗಾರಿಕೆಗಳು ವಿಸ್ತಾರವಾದ ಸುಣ್ಣದ ಕಲ್ಲಿನ ನಿಕ್ಷೇಪಗಳನ್ನು ಬಳಸಿಕೊಳ್ಳುತ್ತಿವೆ. ಕರೀಂನಗರ ಜಿಲ್ಲೆಯಲ್ಲಿ ಪ್ರತ್ಯೇಕತೆ ಹೊಂದಿದ ಟಾನ್‌ಬ್ರೌನ್ ಗ್ರಾನೈಟ್ ನಿಕ್ಷೇಪವು ಪ್ರವೈಟ್ ಸಂಸ್ಥೆಗಳಿಂದ ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡಲಾಗುತ್ತಿದೆ. ಗೋಧಿ/ಕೆಂಪು ಬಣ್ಣದ ನಿಷ್ಪತ್ತಿ ಪ್ರಮಾಣ ಆಧಾರವಾಗಿದ್ದ ಅಮೃತ ಶಿಲೆಯನ್ನು ಚೈನಾ ಮತ್ತು ಆಗ್ನೇಯ ಏಷ್ಯಾ ದೇಶಗಳಿಗೆ ಹೆಚ್ಚಾಗಿ ರಫ್ತು ಮಾಡಲಾಗುತ್ತಿದೆ.

*ನಕ್ಷೆ 1: ತೆಲಂಗಾಣ ಖನಿಜಗಳು*




ದಕ್ಷಿಣ ಭಾರತ ದೇಶದಲ್ಲಿಯೇ ಅತ್ಯಧಿಕವಾಗಿ ಮೇಲ್ಹಾವಣಿಗೆ ಬಳಸುವ ತಾಂಡೂರ್ ನೀಲಿ ಸುಣ್ಣದ ಬಂಡೆಗಳು (ಶಾಬಾದ್ ಬಂಡೆಗಳು) ರಂಗಾರೆಡ್ಡಿ ಜಿಲ್ಲೆಯಲ್ಲಿ ಲಭಿಸುತ್ತವೆ. ನಲ್ಗೊಂಡ ಜಿಲ್ಲೆಯ ಲಂಬಾಪೂರ್, ನಮ್ಮಾಪೂರ್ ಮತ್ತು ಎಲ್ಲಾಪುರಂ ಗ್ರಾಮಗಳಲ್ಲಿ 11ಮಿ.ಟನ್. ಯುರೇನಿಯಮ್ ನಿಕ್ಷೇಪಗಳಿವೆ.

ದಕ್ಷಿಣ ಭಾರತದಲ್ಲಿ ತೆಲಂಗಾಣ ರಾಜ್ಯ ಅತ್ಯಂತ ಹೆಚ್ಚು ಕಲ್ಲಿದ್ದಿಲಿನ ನಿಕ್ಷೇಪಗಳನ್ನು ಹೊಂದಿದ್ದ ಸಿಂಗರೇಣಿ ಕಾಲರೀಸ್ ಕಂಪೆನೀ ಲಿಮಿಟೆಡ್ ಮುಖಾಂತರ ಅಗಿಯುವಿಕೆ ನಡೆಯುತ್ತಿದೆ.

| ತೆಲಂಗಾಣ ಖನಿಜಗಳ ನಕ್ಷೆ ನೋಡಿ ಕೆಳಗಿನ ಪಟ್ಟಿಯನ್ನು ತುಂಬಿರಿ | |
|---|---|
| ಜಿಲ್ಲೆ | ಖನಿಜ |
| | |
| | |
| | |
| | |

## ಖನಿಜಗಳನ್ನು ಹೊರ ತೆಗೆಯುವಿಕೆ
## (Mining the Minerals)

ಭೂಮಿಯನ್ನು ಅಗೆಯುವಿಕೆ, ಇಲ್ಲವೇ ಗಣಿಗಳ ಅಗೆಯುವಿಕೆ ಎನ್ನುವ ಪ್ರಕ್ರಿಯೆಯ ಮೂಲಕ ಖನಿಜಗಳನ್ನು ಮಾನವ ಬಳಕೆಗೆ ಹೊರ ತೆಗೆಯುತ್ತಾರೆ. ಗಣಿಗಳ ಅಗೆಯುವಿಕೆಗೆ ಅನೇಕ ಪದ್ಧತಿಗಳಿವೆ. ದೊಡ್ಡ ಕುಣಿ ತೋಡಿ, ಖನಿಜಗಳನ್ನು ಬೆಳಕಿಗೆ ತೆಗೆಯುತ್ತಾ ಇರಬಹುದು. ಗುಡ್ಡಗಳನ್ನು ಸ್ಫೋಟಗೊಳಿಸಿ ತೊಲಗಿಸಿ ಗ್ರಾನೈಟ್ ಅರಳಿನಂತಹವು ತೆಗೆಯುತ್ತಾರೆ. ಇಂತಹವುಗಳನ್ನು 'ಓಪೆನ್ ಕಾಸ್ಟ್ ಮೈನಿಂಗ್ '' ಎನ್ನುತ್ತಾರೆ. ಬೂಮಿ ಬಹಳ ಆಳದಲ್ಲಿರುವ ಖನಿಜಗಳನ್ನು ಹೊರ ತೆಗೆಯಲು ಭೂಗರ್ಭ ಸುರಂಗ ಮಾರ್ಗ ನಿರ್ಮಿಸಬಹುದು. ಇದನ್ನು 'ಭೂಗರ್ಭ ಮೈನಿಂಗ್ ' ಎನ್ನುತ್ತಾರೆ.

SCERT TELANGANA

ಭೂಗರ್ಭ ಜಲಗಳನ್ನು ಹೊರ ತೆಗೆಯಲು ಕೊಳವೆ ಬಾವಿಗಳನ್ನು ಅಗೆದಹಾಗೆ ಕಚ್ಚಾತೈಲ, ಸಹಜ ವಾಯುವನ್ನು ಹೊರ ತೆಗೆಯಲು ಆಳವಾಗಿ ಬಾವಿಗಳನ್ನು ತೋಡುತ್ತಾರೆ. ಮುಂಬೈ ಹತ್ತಿರ ಬಾಂಬೆ ಹೈ ನ ಮಾದರಿಯಲ್ಲಿ ಬಹಳ ಪ್ರದೇಶಗಳಲ್ಲಿಸಮುದ್ರ ತಳ ಭಾಗದಲ್ಲಿಡ್ರಿಲ್ಲಿಂಗ್ ಮಾಡುತ್ತಾರೆ.

ಗಣಿಗಳ ಅಗೆಯುವಿಕೆಯಲ್ಲಿ ಅನೇಕ ಪದ್ಧತಿಗಳಿಂದ ಭೂಮಿಯ ಮೇಲ್ಮೈ ಪ್ರದೇಶ ಹಾನಿಗೊಳಗಾಗುತ್ತದೆ. ಅಂದರೆ ಅಡವಿಗಳನ್ನು ನಾಶ ಮಾಡುವುದಾಗಿರಬಹುದು. ವಾಸಿಸುವ ಪ್ರಾಂತಗಳನ್ನು , ವ್ಯವಸಾಯ ಭೂಮಿಯನ್ನು ನಾಶಮಾಡುವುದಾಗಿರಬಹುದು. ಇಲ್ಲವೆ ದೊಡ್ಡ ತಗ್ಗುಗಳು ಅಥವಾ ಗುಡ್ಡಗಳು ತಯಾರಾಗುವುದಾಗಬಹುದು. ಖನಿಜ ಲವಣಗಳನ್ನು ಶುಭ್ರಪಡಿಸಲು ಗಣಿಗಳ ಹತ್ತಿರ ದೊಡ್ಡ ಪ್ರಮಾಣದಲ್ಲಿ ನೀರುಬೇಕಾಗುತ್ತದೆ. ಇದರ ಕಾರಣವಾಗಿ ಹತ್ತಿರದಲ್ಲಿರುವ ನದಿಗಳು, ನೀರಿನ ಮೂಲಗಳು ಕಲುಷಿತ ವಾಗುತ್ತವೆ. ಇದರಿಂದ ಭೂಮಿಯನ್ನು ಭವಿಷ್ಯದ ಪ್ರಯೋಜನೆಗಳಿಗಾಗಿ ಬಳಸುವುದು ಸಾಧ್ಯವಾಗುವುದಿಲ್ಲ. ಅಲ್ಲಿ ವಾಸಿಸುವ ಗಿರಿಜನರು, ರೈತರು ಆ ಭೂಮಿಯನ್ನು ಬಿಟ್ಟು ಹೋಗಬೇಕಾಗುತ್ತದೆ. ಗಣಿಗಳ ಅಗೆಯುವಿಕೆಯಿಂದ ಸುತ್ತಮುತ್ತ ವಾಸಿಸುವ ಜನರು ಕೂಡ ಸಮಸ್ಯೆಗಳನ್ನು ಎದುರಿಸ ಬೇಕಾಗುತ್ತದೆ. ಇದೇ ಸಮಯದಲ್ಲಿ ಗಣಿಗಳು ಬಹಳ ಜನರಿಗೆ ಉದ್ಯೋಗ ಒದಗಿಸುತ್ತವೆ. ಇವರಿಗಾಗಿ ಅಕ್ಕಪಕ್ಕದಲ್ಲಿ ಹೊಸದಾಗಿ ಕಾಲನಿಗಳನ್ನು ನಿರ್ಮಿಸುತ್ತಿದ್ದಾರೆ. ಗಣಿಗಳ ಮೂಲಕ ಭಾರತ ದೇಶದಲ್ಲಿ ಸುಮಾರು ಹತ್ತು ಲಕ್ಷ ಜನರಿಗೆ, ಆಂಧ್ರಪ್ರದೇಶದಲ್ಲಿ ಲಕ್ಷಕ್ಕಿಂತ ಹೆಚ್ಚು ಜನರಿಗೆ ಉದ್ಯೋಗ ದೊರುಕುತ್ತಿದೆ. ಗಣಿ ಕಾರ್ಮಿಕರ ಜೀವನ ಬಹಳ ಹಾನಿಕರವಾಗಿರುತ್ತದೆ. ಅವರು ನಿರಂತರ ಅಪಘಾತಗಳನ್ನು ಎದುರಿಸುತ್ತಾರೆ. ವಿಷಪೂರಿತವಾದ ಗಾಳಿ ಸೇವನೆಯಿಂದ ದೀರ್ಘಕಾಲಿಕವಾಗಿ ಅವರ ಆರೋಗ್ಯ ಹಾನಿಗೊಳಗಾಗುತ್ತದೆ.

- ಈ ಕೆಳಗಿನ ಚಿತ್ರವನ್ನು ನೋಡಿ ಅವುಗಳಲ್ಲಿ ಯಾವುದು ಓಪೆಕಾಸ್ಟ್ ಗಣಿಗಳ ಅಗೆಯುವಿಕೆಯೊ, ಭೂಗರ್ಭ ಅಗೆಯುವಿಕೆಯೊ, ಕಚ್ಚಾತೈಲಕ್ಕಾಗಿ ಕೊಳವೆಬಾವಿಗಳ ಅಗೆಯುವಿಕೆಯೋ ತಿಳಿಸಿರಿ.
- ನಿಮ್ಮ ಪ್ರಾಂತದಲ್ಲಿ ಗಣಿಗಳ ಅಗೆಯುವಿಕೆ ಕೆಲಸ ನಡೆಯುತ್ತಿದ್ದರೆ ಅಲ್ಲಿ ಕೆಲಸ ಮಾಡುವ, ವಾಸಿಸುವ ಜನರ ಬಗ್ಗೆ ತಿಳಿದುಕೊಳ್ಳಿರಿ. ಸುತ್ತಮುತ್ತ ವಾತಾವರಣವನ್ನು ಗಣಿಗಳ ಅಗೆಯುವಿಕೆಯಿಂದ ಎಷ್ಟು ಜನರು ಪ್ರಯೋಜನ ಪಡೆಯುತ್ತಾರೆ ತಿಳಿದುಕೊಳ್ಳಿ.


Fig 6.2 (b) Granite Quary


ಚಿತ್ರ 6.1


ಚಿತ್ರ 6.3

SCERT TELANGANA

## ಖನಿಜಗಳು ಯಾರಿಗೆ ಸೇರುತ್ತವೆ ?
## (To whom do the Minerals Belong?)

ಖನಿಜಗಳು ಸಾಧಾರಣವಾಗಿ ಭೂಮಿಯ ಒಳಪದರಿನಲ್ಲಿ ಇರುತ್ತವೆ. ಇವು ಯಾವ ಒಬ್ಬ ವ್ಯಕ್ತಿಗೆ ಸೀಮಿತವಲ್ಲ. ಇವು ದೇಶದ ಪ್ರಜೆಗಳಿಗೆಲ್ಲಾ ಸೇರಿರುತ್ತವೆ. ಇವುಗಳನ್ನು ಎಲ್ಲರ ಪ್ರಯೋಜನಕ್ಕಾಗಿ ಬಳಸಬೇಕು. ಅದಕ್ಕಾಗಿ ದೇಶದಲ್ಲಿನ ಎಲ್ಲಾ ಖನಿಜ ಸಂಪತ್ತನ್ನು ಆ ದೇಶ ಸರ್ಕಾರದ ಆಸ್ತಿ ಎಂದು ಪರಿಗಣಿಸುತ್ತಾರೆ. ದೇಶದಲ್ಲಿನ ಜನರೆಲ್ಲರ ಪ್ರಯೋಜನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರ ಆ ಖನಿಜಗಳನ್ನು ಉಪಯೋಗಿಸುತ್ತದೆ.

- ಖನಿಜಗಳನ್ನು ಸರ್ಕಾರ ಹೇಗೆ ಉಪಯೋಗಿಸಿಕೊಳ್ಳುತ್ತದೆ ?

ಸ್ವಾತಂತ್ರ್ಯ ಬಂದ ಸಮಯದಲ್ಲಿ ಗಣಿಗಳು ಬಹಳಷ್ಟು ಖಾಸಗಿ ಕಂಪನಿಗಳು. ವ್ಯಕ್ತಿಗಳ ಕೈಯಲ್ಲಿದ್ದವು. ಅವರು ಅತಿ ಕಡಿಮೆ ಸಮಯದಲ್ಲಿ ಅತಿ ಹೆಚ್ಚು ಲಾಭದ ಮೇಲೆ ಆಸಕ್ತಿ ತೋರಿದಷ್ಟು, ಗಣಿಗಳನ್ನು ಸಕ್ರಮವಾಗಿ ಅಭಿವೃದ್ಧಿಪಡಿಸುವುದರ ಮೇಲಿಯಾಗಲಿ, ಕಾರ್ಮಿಕರ ಸುರಕ್ಷತೆ ಕಡೆ ಗಮನವರಿಸಲಿಲ್ಲ. 1970ರಲ್ಲಿ ಸರ್ಕಾರ ಗಣಿಗಳೆಲ್ಲವನ್ನು ರಾಷ್ಟ್ರೀಕರಿಸಿತ್ತು. ಪ್ರಸ್ತುತ ಬಹಳಷ್ಟು ಗಣಿಗಳು ಸರ್ಕಾರದ ಅಧೀನದಲ್ಲಿದ್ದಾವೆ. ಗಣಿಗಳ ಅಗೆಯುವಿಕೆಯನ್ನು ಕೂಡ ಸರ್ಕಾರವೇ ನಿರ್ವಹಿಸಿ ಖನಿಜಗಳನ್ನು ಅನೇಕ ಕಾರ್ಖಾನೆಗಳಿಗೆ ಇಲ್ಲವೇ ವ್ಯಾಪಾರಸ್ಥರಿಗೆ ಮಾರುವುದು, ಇಲ್ಲವೇ ರಫ್ತು ಮಾಡುವುದು. ಇದರ ಮೂಲಕ ಗಣಿಗಳ ಅಗೆಯುವಿಕೆಯನ್ನು ನಿಯಂತ್ರಿಸಿ ಅವು ದುರುಪಯೋಗವಾಗದಂತೆ ಸರ್ಕಾರ ನೋಡಿಕೊಳ್ಳುತ್ತದೆ. ಅದೇ ವಿಧವಾಗಿ ಪ್ರಜೆಗಳಿಗೆ, ಪ್ರತ್ಯೇಕವಾಗಿ ಗಣಿ ಕಾರ್ಮಿಕರಿಗೆ ಹಾನಿಕರವಲ್ಲದ ಪದ್ಧತಿಗಳನ್ನು ಅವಲಂಬಿಸುವಂತೆ ನೋಡಿಕೊಳ್ಳುತ್ತದೆ. ಅಷ್ಟೇ ಅಲ್ಲದೇ ಇಂಧನಗಳು, ಬೆಲೆ ಬಾಳುವ ಲೋಹಗಳಂತವು ಕೇವಲ ಲಾಭದೃಷ್ಟಿಯಿಂದ ಕೆಲಸ ಮಾಡುವ ಖಾಸಗಿ ಕಂಪನಿಗಳ ಕೈಯಲ್ಲಿ ಇಲ್ಲದಂತೆ ಪ್ರಜೆಗಳ ಪ್ರಯೋಜನಗಳಿಗೋಸ್ಕರ ಉಪಯೋಗವಾಗುವಂತೆ ನೋಡಿಕೊಂಡಿತು. ಆದರೆ ಗಣಿಗಳ ಅಗೆಯುವಿಕೆಗೆ ಸರ್ಕಾರ ಆಧುನಿಕ ಸಂಕೀರ್ಣ ತಾಂತ್ರಿಕ ವಿಜ್ಞಾನವನ್ನು ಪ್ರವೇಶಪಡಿಸಲಾರದೇ ಹೋಯಿತು. ಸರ್ವೆ ನಡೆಸಿ ಖನಿಜಗಳ ಹೊಸ ನಿಕ್ಷೇಪಗಳನ್ನು ಕಂಡುಕೊಳ್ಳಲಾರದಾಯಿತು. ಇದರ ಫಲವಾಗಿ ಖನಿಜ ಸಂಪತ್ತಿನ ಅನ್ವೇಷಣೆ ಬೆಳವಣಿಗೆ ಇಲ್ಲದಂತಾಯಿತು. ಇದರ ಪ್ರತಿಫಲವಾಗಿ ಸರ್ಕಾರ ನಿಯಂತ್ರಣಕ್ಕೊಳಪಟ್ಟು ಖನಿಜಗಳ ಅಗೆಯುವಿಕೆ, ಅವುಗಳ ಮಾರಾಟವನ್ನು ಖಾಸಗಿ ಕಂಪನಿಗಳಿಗೆ ಅನುಮತಿ ನೀಡಬೇಕೆಂದು ನಿರ್ಧರಿಸಿತು. 1993 ರಲ್ಲಿ ಹೊಸ ರಾಷ್ಟ್ರೀಯ ಖನಿಜ ವಿಧಾನವನ್ನು (A New National Mineral Policy) ಪ್ರಕಟಿಸಿತು. ಸರ್ಕಾರ ಗಣಿಗಳನ್ನು ಖಾಸಗಿ ಕಂಪನಿಗಳಿಗೆ ಗೇಣಿಗೆ (Lease) ಕೊಟ್ಟು ಅವುಗಳನ್ನು ನಿರ್ವಹಣೆ ಜವಾಬ್ದಾರಿ ನೀಡಿತು. ಖಾಸಗಿ ಕಂಪನಿಗಳು ಅಗೆದು, ಮಾರಾಟ ಮಾಡಿದ ಖನಿಜಗಳನ್ನು ಸರ್ಕಾರಕ್ಕೆ ಗೌರವಧನ (Royalty) ಸಲ್ಲಿಸಬೇಕು. ಈ ವಿಧವಾಗಿ ಗಣಿಗಳ ಅಗೆಯುವಿಕೆಯ ಮೇಲೆ ಸರ್ಕಾರಕ್ಕೆ ನಿಯಂತ್ರಣಾಧಿಕಾರವಿರುತ್ತಲೇ ಅಲ್ಪ ಆದಾಯ ಸಮಕೂರುತ್ತದೆ. ಅದೇ ಸಮಯದಲ್ಲಿ ಬಂಡವಾಳ ಹೂಡಿ ಹೊಸ ತಾಂತ್ರಿಕ ವಿಜ್ಞಾನ ತೆಗೆದುಕೊಂಡು ಬರಲು ಖಾಸಗಿ ಕಂಪನಿಗಳಿಗೆ ಪ್ರೋತ್ಸಾಹ ಲಭಿಸುತ್ತದೆ. ಅಣು ಇಂಧನಗಳಿಗೆ ಸಂಬಂಧಿಸಿದ ಗಣಿಗಳ ಅಗೆಯುವಿಕೆ ಒಟ್ಟು ಈಗಲೂ ಸರ್ಕಾರದ ಕೈಯಲ್ಲಿಯೇ ಇದೆ.

ಈ ಪದ್ಧತಿಯ ಫಲಿತವಾಗಿ ಕಳೆದ ಇಪ್ಪತ್ತು ವರ್ಷಗಳಲ್ಲಿ ಅಗೆಯುವಿಕೆ ತೀವ್ರ ಬೆಳವಣಿಗೆಯಾಯಿತು. ಗಣಿಗಳ ಸಂಖ್ಯೆ ಅಗೆದು ತೆಗೆಯುವ ಖನಿಜಗಳು ಈ ರಂಗದಲ್ಲಿ ಉದ್ಯೋಗಗಳಂತಹು ಗಣನೀಯವಾಗಿ ಬೆಳೆದವು.

ಆದರೆ ಪರಿಸರ, ಸುರಕ್ಷತೆಯ ಅಂಶಗಳಿಗೆ ಕಿವಿಗೊಡದೇ, ಸರ್ಕಾರ ನೀಡಿದ ಅನುಮತಿಗಿಂತ ಎಷ್ಟೋ ಹೆಚ್ಚಿನ ಮೊತ್ತದಲ್ಲಿ ಖಾಸಗಿ ಕಂಪನಿಗಳು ಅಡ್ಡಿ ಆತಂಕವಿಲ್ಲದಂತೆ ಗಣಿಗಳನ್ನು ಅಗೆಯುತ್ತಿವೆ. ಹೆಚ್ಚಿನ ಸಂಖ್ಯೆಯಲ್ಲಿ ಗಣಿಗಳ ಅಗೆಯುವಿಕೆಯಿಂದ ದೀರ್ಘಕಾಲ ಸುಸ್ಥಿರತ್ವಕ್ಕೆ ಭಂಗಕಲಗುತ್ತದೆ. ಅಷ್ಟೇ ಅಲ್ಲದೇ ಸರ್ಕಾರಕ್ಕೆ ಗೌರವಧನ ಸಲ್ಲಿಸದಂತೆ ಖಾಸಗಿ ಕಂಪನಿಗಳು ಖನಿಜಗಳನ್ನು ಸಾಗಿಸುತ್ತಿವೆ ಎಂದರೆ ನಿಜವಾಗಿ ಖನಿಜಗಳು ಯಾರಿಗೆ ಸೇರುತ್ತವೆಯೋ ಆ ಜನರಿಗೆ ಯಾವುದೇ ಲಾಭ ಜರುಗುತ್ತಿಲ್ಲ. ಅಷ್ಟೇ ಅಲ್ಲದೇ ಪರಿಸರ ದೃಷ್ಟಿಯಿಂದ ಬಹಳ ನಷ್ಟ ಉಂಟುಮಾಡಬಹುದು. ಉದಾಹರಣೆಗೆ ಹಳ್ಳಗಳು, ನದಿಗಳಿಂದ ಹೆಚ್ಚಿನ ಮಟ್ಟದಲ್ಲಿ ಮರಳು ತೆಗೆದು ಹಾಕಿದರೆ ನದಿ ಪ್ರವಾಹಗಳನ್ನು ಪ್ರಭಾವಗೊಳಿಸಿ ಪ್ರವಾಹಗಳಿಗೆ ದಾರಿ ಮಾಡಿಕೊಡಬಹುದು. ಅಥವಾ ಬೇಗನೆ ಒಣಗಿ ಹೋಗಬಹುದು. ಭೂಗರ್ಭ ಜಲ ಗಣಿಗಳ ಅಗೆಯುವಿಕೆಗೆ ಹೆಚ್ಚಿನ ಮಟ್ಟದಲ್ಲಿ ಖರ್ಚು ಆಗುತ್ತದೆ. ಆದ್ದರಿಂದ ಹೊಸ ಕಂಪನಿಗಳು ಈ ವಿಧಾನವನ್ನು ಕೈತ್ತಿಕೊಳ್ಳದೇ

SCERT TELANGANA

'ಓಪೆನ್‌ಕಾಸ್ಟ್ ' ಪದ್ದತಿಯಲ್ಲಿ ಗಣಿ ಅಗೆಯುವಿಕೆಗೆ ಆಸಕ್ತಿ ತೋರಿಸುತ್ತಿವೆ. ಈ ಪದ್ದತಿಯಲ್ಲಿ ಗಣಿಗಳ ಅಗೆಯುವಿಕೆ ಬಹಳ ಕಡಿಮೆ ಖರ್ಚಾಗುತ್ತದೆ. ಅಗೆದು ಹಾಕಿದ ಮಣ್ಣಿನ ರಾಶಿಗಳು, ಅಗೆದಾಗ ಏರ್ಪಟ್ಟ ಕುಣಿಗಳನ್ನು ಸರಿ ಮಾಡದಿದ್ದರೆ ನದಿ ಪ್ರವಾಹಗಳಿಗೆ ಅಡ್ಡ ಬೀಳುವಂತಹ ತೀವ್ರ ಪರಿಸರ ಸಮಸ್ಯೆಗಳು ಎದುರಾಗುತ್ತವೆ.

- ನಮ್ಮ ಖನಿಜಗಳನ್ನು ಅಗೆಯಲು ಖಾಸಗಿ ಕಂಪನಿಗಳು ಅನುಮತಿಕೊಡುವುದರಿಂದ ಲಾಭ ನಷ್ಟಗಳನ್ನು ಚರ್ಚಿಸಿರಿ. ಅವುಗಳನ್ನು ಹೇಗೆ ನಿಯಂತ್ರಿಸ ಬಹುದು? ಪರಿಸರ ಸಮಸ್ಯೆಗಳು ತಲೆ ಎತ್ತದಂತೆ ಏನು ಮಾಡಬಹುದು ?
- ಖನಿಜ ಸಂಪನ್ಮೂಲಗಳ ನಿಜವಾದ ಯಜಮಾನರು ದೇಶದ ಪ್ರಜೆಗಳೆಲ್ಲರೂ ಆದರೆ ಅವರೆಲ್ಲರ ಒಳತಿಗಾಗಿ ಅವು ಉಪಯೋಗ ಬೀಳುವಂತೆ ಹೇಗೆ ನಿರ್ಧರಿಸಿಕೊಳ್ಳಬಹುದು ?
- ಮುಂದಿನ ತಲೆಮಾರಿಗೆ, ಎಂದರೆ ನಮ್ಮ ಮಕ್ಕಳಿಗೆ ಕೂಡ ಈ ಸಂಪನ್ಮೂಲಗಳು ಬೇಕಾ, ಬೇಡಾ ? ಈ ಸಂಪನ್ಮೂಲಗಳು ಮುಗಿದುಹೋಗದಂತೆ ಅವರಿಗೆ ಕೂಡ ದೊರಕುವಂತೆ ಹೇಗೆ ನೋಡಿಕೊಳ್ಳ ಬಹುದು?

## ಸಿಂಗರೇಣಿ ಕಲ್ಲಿದ್ದಲು ಗಣಿಗಳು
## Singareni Coalfields

ಖಮ್ಮಂ, ಖರೀಮ್‌ನಗರ್, ಅದಿಲಾಬಾದ್, ವರಂಗಲ್ ಜಿಲ್ಲೆಗಳಲ್ಲಿ ವಿಶಾಲವಾದ ಕಲ್ಲಿದ್ದಲು ಗಣಿಗಳಿವೆ. ಈ ಕಲ್ಲಿದ್ದಲು 'ಸಿಗರೇಣಿ ಕಾಲರೀಸ್ ಕಂಪನಿ ಲಿಮಿಟೆಡ್ (Singareni Collieries Company Limited, SCCL) ಬೆಳಕಿಗೆ ತಂದಿತು. ಇದನ್ನು ಮೊದಲು 1886ರಲ್ಲಿ ಒಂದು ಖಾಸಗಿ ಬ್ರಿಟೀಷ್ ಕಂಪನಿ ಸ್ಥಾಪಿಸಿತು. (British mining company in 1886) 1920 ರಲ್ಲಿ ಇದನ್ನು ಹೈದರಾಬಾದು ನಿಜಾಮ್ ಕೊಂಡುಕೊಂಡನು. ಸ್ವಾತಂತ್ರ್ಯ ಬಂದ ನಂತರ ಭಾರತ ಸರ್ಕಾರ ಇದನ್ನು ರಾಷ್ಟ್ರೀಕರಣ ಮಾಡಿತು. ಪ್ರಸ್ತುತ SCCL ಭಾರತ ಸರ್ಕಾರ, ರಾಜ್ಯ ಸರ್ಕಾರ ಜಂಟಿ ಕಂಪನಿ – ತೆಲಂಗಾಣದಲ್ಲಿ ತೋರಿಸಿದ ನಾಲ್ಕು ಜಿಲ್ಲೆಗಳಲ್ಲಿ ಈ ಕಂಪನಿ ಪ್ರಸ್ತುತ 15 ಓಪೆನ್‌ಕಾಸ್ಟ್ ಗಣಿಗಳಲ್ಲಿ 35 ಭೂಗರ್ಭ ಗಣಿಗಳಲ್ಲಿ ಅಗೆಯುವಿಕೆ ಕೈಗೊಂಡಿದೆ. ಈ ಕಂಪನಿಗಳಲ್ಲಿ 65,000 ಉದ್ಯೋಗಗಳಿವೆ. (2015).

ಪ್ರಖ್ಯಾತ ಹೊಂದಿದ ಸಿಂಗರೇಣಿ ಕಲ್ಲಿದ್ದಲಿನಲ್ಲಿ ಒಂದು ಗಣಿಯನ್ನು ಇಬ್ಬರು ಶಿಕ್ಷಕರು ಸಂದರ್ಶಿಸಿದರು.

ಹೈದರಾಬಾದು ಬಸ್ಸು ನಿಲ್ದಾಣದಲ್ಲಿ ಕೊತ್ತಗೂಡಂಗೆ ಹೊರಟ ಬಸ್ಸು ಹತ್ತಿದೆವು. ಕೊತ್ತಗೂಡೆಂನಲ್ಲಿ ಇಳಿದು SCCL ಕಾರ್ಯಾಲಯಕ್ಕೆ ಭೇಟಿ ನೀಡಿ ಗಣಿಗಳನ್ನು ಸಂದರ್ಶಿಸಲು ಅನುಮತಿ ಪಡೆದೆವು. ಕೊತ್ತಗೂಡೆಂನಿಂದ ಪಶ್ಚಿಮವಾಗಿ 40 ಕಿ.ಮೀ. ಪ್ರಯಾಣಿಸಿ 'ಇಲ್ಲಂದು' ಸೇರಿಕೊಂಡೆವು. ಇಲ್ಲಿ ಕೂಡ ಈ ಕೆಳಗಿನ ಚಿತ್ರ 6.4 ನೋಡಿರಿ.



*ಚಿತ್ರ 6.4 : ಕಲ್ಲಿದ್ದಲು ಗಣಿ ಪ್ರವೇಶ ದ್ವಾರ*

SCCL ಕಾರ್ಯಾಲಯಕ್ಕೆ ಹೊರಟ ನಂ. 21 ಇಂಕ್ಲೈನ್‌ನೊಳಗೆ ಹೊರಡಲು ಅನುಮತಿ ತೆಗೆದುಕೊಂಡೆವು.

ಗೂಡ್ಸ್ ರೈಲು ನಿಂತಿರುವ ರೈಲ್ವೆ ಅಳಿ ಮೇಲಿರುವ ಕಬ್ಬಿಣದ ಸೇತುವೆ ದಾಟಿದೆವು. ಗಣಿ ಪ್ರವೇಶ ದ್ವಾರದ ಹತ್ತಿರ ರಕ್ಷಣಾಅಧಿಕಾರಿ ನಮಗೆ ಭೇಟಿಯಾದನು. ಭೂಮಿಯ ಒಳಗಿನ ಪದರಿನಲ್ಲಿ ಕಲ್ಲಿದ್ದಲು ದೊರೆಯುತ್ತದೆ ಎಂದು ಆತನು ವಿವರಿಸಿದನು. ಮೇಲಿಂದ ಅಗೆಯುವುದು ಪ್ರಾರಂಭಿಸಿದರೆ

SCERT TELANGANA

ಮೊದಲು ಮಣ್ಣು ಬರುತ್ತದೆ. ಆ ನಂತರ ಕಲ್ಲು ನೀರು ಬರುತ್ತವೆ. 200 – 300 ಅಡಿಗಳ ಒಳಗಿನವರೆಗೆ ಹೋದರೆ ಕಲ್ಲಿದ್ದಲಿನ ಪೊದರು ದೊರೆಯುತ್ತದೆ. ಒಂದು ಪ್ರಾಂತದಲ್ಲಿ ಕಲ್ಲು ಅಥವಾ ಮಣ್ಣಿನಿಂದ ಬೇರೆ ಮಾಡಿದ ಅನೇಕ ಕಲ್ಲಿದ್ದಲು ಪದರುಗಳಿರಬಹುದು.

### ಅಪಘಾತಗಳು, ಸುರಕ್ಷತಾ ಕ್ರಮಗಳು

## Danger and Safety Measures

ಅಪಘಾತಗಳು ನಡೆಯುವ ಸಂಭವವಿದೆ ಆದ್ದರಿಂದ ಗಣಿಯೊಳಗೆ ಪ್ರವೇಶಿಸುವುದು ಯಾವಾಗಲೂ ಅಪಾಯ ದಿಂದ ಕೂಡಿದ ಕೆಲಸವೆಂದು ಸುರಕ್ಷಾ (ಭದ್ರತ) ಅಧಿಕಾರಿ ವಿವರಿಸಿದನು. ಒಂದು ಸುರಂಗ ಬೀಳಬಹುದು. ಇಲ್ಲವೆ ನೀರಿನಿಂದ ತುಂಬಿ ಹೋಗಬಹುದು. ವಿಷವಾಯುವಿನಿಂದ ತುಂಬಿ ಗಾಳಿಯಾಡದೆ ಇರಬಹುದು. ಅಗ್ನಿ ಪ್ರಮಾದ ಸಂಭವಿಸಬಹುದು. ಇಂತಹ ಅಪಘಾತಗಳನ್ನು ನಿವಾರಿಸಲು ಆಡಳಿತ ವಿಶಾಲವಾದ ಸುರಕ್ಷತೆ ಏರ್ಪಡಿಸಿದೆ. ಎಂದು ಆತನು ನಮಗೆ ವಿವರಿಸಿದನು. ನಾವು ಕೂಡ ಸರಿಯಾದ ಜಾಗ್ರತೆಗಳನ್ನು ಪಾಲಿಸಬೇಕು. ಅಪಘಾತಗಳು ನಡೆದಾಗ ಭದ್ರತಾ ಪೆಟ್ಟಿಗೆಯಲ್ಲಿನ ಸಲಕರಣೆಯಿಂದ ಹೇಗೆ ಎದುರಿಸಬೇಕೆಂದು ವಿವರಿಸಿದನು. ಸುರಕ್ಷಾ ಪರಿಕರಗಳು ತೆಗೆದುಕೊಂಡು ಗಣಿಯೊಳಗೆ ಇಳಿಯಲು ನಾವು ಸಿದ್ದವಾದೆವು. ಮಾಸ್ಟರ್ ಪಾಯಿಂಟ್ ಹತ್ತಿರ ಹಾಜರಾಗಿ ಕಂಪ್ಯೂಟರ್‌ನಲ್ಲಿ ನಮೂದಿಸಿಕೊಂಡೆವು.

- ಈ ಸಲಕರಣೆಗಳು ಏನೆಂದು ಹೇಳಿರಿ ?
- ಕಟ್ಟಿಗೆ ಉಪಯೋಗವೇನು ?



ಚಿತ್ರ 6.5: ಸುರಕ್ಷಾ ಪರಿಕರಗಳು

- ಶಿರಸ್ತ್ರಾಣದ (helmet) ದ ಮೇಲೆ ದೀಪ ಏಕೆ ಇದೆ?
- ಚಿತ್ರದಲ್ಲಿನ ದೀಪ ಗುರ್ತಿಸಿದ್ದೀರಾ ? ಇದು ಏಕೆ ಉಪಯೋಗ ಬೀಳುತ್ತದೆ ?
- ಕೆಳಗೆ ಕೊಟ್ಟ ಹಾಮಿ ಪತ್ರ ನೋಡಿರಿ ಯಾವ ಯಾವ ಷರತ್ತುಗಳಿಗೆ ನಾವು ಒಪ್ಪಿಗೆ ನೀಡುವಂತಾಯಿತು ?

ಈಗ ನಾವು ಗಣಿ ಮುಖದ್ವಾರ ಸೇರಿಕೊಂಡೆವು. ಮನುಷ್ಯರನ್ನು ಒಳಗೆ ಹೊರಗೆ ತೆಗೆದುಕೊಂಡು ಹೋಗಲು ಅಲ್ಲಿ ಒಂದು ಲಿಫ್ಟ್ ಇರುತ್ತದೆ. ಮೂರು ಗಣಿ ಕಾರ್ಮಿಕರು ಸುರಕ್ಷಾ ಅಧಿಕಾರಿಯೊಂದಿಗೆ ನಾವಿಬ್ಬರೂ ಲಿಫ್ಟ್‌ನೊಳಗೆ ಪ್ರವೇಶಿಸಿದೆವು. ಲಿಫ್ಟ್ ನಿರ್ವಾಹಕನು ಬಾಗಿಲು ಮುಚ್ಚಿ ಕೆಳಗೆ ಇರುವ ಲಿಫ್ಟ್ ನಿರ್ವಾಹಕನಿಗೆ ಗಂಟೆ ಬಾರಿಸುವ ಮೂಲಕ ಸೂಚನೆ ನೀಡಿದನು.




ಚಿತ್ರ 6.6: ಸಮಯ ಪ್ರಜ್ಞೆ ಸೂಚಿಸುವ ಫಲಕ

### ಗಣಿಯೊಳಗೆ (Inside the mine) :

ನಮ್ಮ ಲಿಫ್ಟ್ ಭೂಗರ್ಭದೊಳಕ್ಕೆ 500 ಅಡಿಗಳ ಆಳ ಸೇರಿತು. ಒಂದು ಆಳವಾದ ಬಾವಿಯೊಳಗೆ ಪ್ರವೇಶಿಸುವಂತಿತ್ತು . ಲಿಫ್ಟ್ ವೇಗವಾಗಿ ಕೆಳಗೆ ಇಳಿಯುವುದು ಹೊರತೆ ಎಲ್ಲಿಯೋ ನೀರು ಬೀಳುತ್ತಿರುವ ಶಬ್ದ ಕೇಳಿಸಿದಂತಾದ್ದರಿಂದ ನಾವು ಸ್ವಲ್ಪ ಭಯಕ್ಕೆ ಒಳಗಾದೆವು. 'ಗಣಿಗಳು ಅಗೆದಾಗ ನೀರು ಬರುತ್ತವೆ. ನೀರನ್ನು ಹೊರ ಹಾಕದಿದ್ದರೆ ಗಣಿಗಳು ನೀರಿನಿಂದ ತುಂಬಿಹೋಗುತ್ತವೆ.



SCERT TELANGANA

ನೀರೆಲ್ಲವನ್ನೂ ಒಂದು ಮಡುವಿಗೆ (ಹೊಂಡ) ಸೇರಿಸಿ ಅಲ್ಲಿಂದ ಪಂಪುಗಳ ಮೂಲಕ ಹೊರ ಹಾಕುತ್ತಾರೆ. ಮಡುವಿನೊಳಗೆ ಸೇರುತ್ತಿರುವ ನೀರಿನ ಸಪ್ಪಳ ನೀವು ಕೇಳಿದ್ದೀರಿ' ಎಂದು ವಿವರಿಸಿದನು. ಸುರಕ್ಷತಾಧಿಕಾರಿ ಗಣಿಗಳಲ್ಲಿ ಈ ಅಂಶವನ್ನು ಗಮನಿಸಲು ಕಂಪನಿಯಲ್ಲಿ ಪ್ರಾಜೆಕ್ಟ್, ಯೋಜನೆ ತಯಾರಿಸುವ ವಿಭಾಗವಿದೆ ಎಂದು ಕೂಡ ಆತನು ತಿಳಿಸಿದನು. ಲಿಫ್ಟ್ ನಿಂತ ನಂತರ 'ಮೈನ್‌ಷಾಫ್ಟ್' ಎನ್ನುವ ಸಣ್ಣನೆಯ ಸುರಂಗದೊಳಗೆ ಪ್ರವೇಶಿಸಿದೆವು. ಪ್ರವೇಶಿಸುತ್ತಿರುವ ನಮಗೆ ವಿದ್ಯುತ್ ತಂತಿಗಳು, ನೀರಿನ ಪೈಪುಗಳು, ಸಣ್ಣನೆಯ ರೈಲು ಮಾರ್ಗಗಳಂತಹವು ಕಂಡು ಬಂದವು. ಕಲ್ಲಿದ್ದಲು ಅಗೆದ ನಂತರ ಸಣ್ಣ ಸಣ್ಣ ವಾಗೀನುಗಳಲ್ಲಿ ತುಂಬಿ ಈ ರೈಲು ಅಳಿಗಳ ಮೇಲೆ ಲಿಫ್ಟ್‌ಗಳ ವರೆಗೆ ಎಳೆದು ಕೊಂಡು ಹೋಗುತ್ತಾರೆ. ಅಲ್ಲಿಂದ ಲಿಫ್ಟ್ ಮೂಲಕ ಮೇಲಕ್ಕೆ ತೆಗೆದುಕೊಂಡು ಹೋಗುತ್ತಾರೆ. ನಿಜಕ್ಕೆ ನಾವು ಒಂದು ಕಲ್ಲಿನ ಪದರು (ಇದನ್ನು 'ಕೋಲ್‌ಸೀಮ್' ಎಂದು ಕೂಡ ಕರೆಯುತ್ತಾರೆ) ದ್ವಾರ ಹೊರಟ್ಟಿದೆವೆಂದು ಮಾರ್ಗದರ್ಶಿ ಹೇಳಿದರು ಎಂದರೆ ನಮಗೆ ಎರಡೂ ಕಡೆ, ಮೇಲೆ ಕೆಳಗೆ ಕಲ್ಲಿದ್ದಲೇ, ಗೋಡೆಗಳು ಕಪ್ಪು ಬಣ್ಣ ಮಾತ್ರವಲ್ಲದೇ ಪ್ರಕಾಶಿಸುವಂತೆ ಕಾಣುತ್ತಿದುದ್ದು ನಮಗೆ ಆಶ್ಚರ್ಯವನ್ನು ಉಂಟು ಮಾಡಿತು. ಕಲ್ಲಿದ್ದಲು ಅವನತಿಗೆ ದಾರಿಯಾಗದೇ, ಆಕ್ಸೀಕರಣಗೊಳ್ಳದಂತೆಯೂ ಕಾಂತಿ ಪ್ರತಿಬಿಂಬಿಸಿ ಬೆಳಕು ನೀಡಲು ಗೋಡೆಗಳಿಗೆ ಡೋಲ್‌ಮೈಟ್ ಬಳೆಯುತ್ತಾರೆಂದು ನಮ್ಮ ಮಾರ್ಗದರ್ಶಿ ಹೇಳಿದರು.



*ಚಿತ್ರ 6.7: ಡೋಲೋಮೈಟ್ ಬಳೆದ ಕಲ್ಲಿದ್ದಲಿನ ಗೋಡೆ*

### ಕಲ್ಲಿದ್ದಲಿನ ಸ್ಫೋಟ (Blasting the coal) :

ಕಲ್ಲಿದ್ದಲು ಅಗೆಯುವ ಪ್ರಾಂತವನ್ನು 'ಮುಖ' (ಪೇಸ್) ಎನ್ನುತ್ತಾರೆ. ಪ್ರತಿದಿನ ಮೇಲ್ವಿಚಾರಕರು ಕಲ್ಲಿದ್ದಲಿನ ಪದರನ್ನು ಪರಿಶೀಲಿಸಿ ಆ ದಿನ ಅಗೆಯುವಿಕೆಗೆ ಸೂಚನೆಗಳನ್ನು ನೀಡುತ್ತಾರೆ. ಎಲ್ಲಿ ಅಗೆಯಬೇಕೋ, ಎಂತಹ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕೊ ತಿಳಿಸುತ್ತಾರೆ. ಬೇರೆ ಬೇರೆ ಗುಂಪುಗಳಿಗೆ ಬೇರೆ ಬೇರೆ ಕೆಲಸ ಒಪ್ಪಿಸುತ್ತಾರೆ.

ನೂಮಾಟಿಕ್ ಕಡ್ಡಿಗಳನ್ನು ಇರಿಸಲು ರಂಧ್ರಗಳನ್ನು ಮಾಡುತ್ತಿದ್ದಾರೆ. ಅವು ಜಾರಿ ಹೋಗದಂತೆ ಇರಲು ರೆಸಿನ್ (ಅಂಟು ಪದಾರ್ಥ) ಪೊಟ್ಟಣಗಳನ್ನು ಇಡುತ್ತಿದ್ದಾರೆ. ಒಂದು ವಿದ್ಯುತ್ ಪರಿಕರದಲ್ಲಿ ಸ್ಫೋಟಗೊಳ್ಳುವಂತೆ ಮಾಡುತ್ತಾರೆ. ಈ ಸ್ಫೋಟಕ್ಕೆ ಕಲ್ಲಿನಂತೆ ಇರುವ ಕಲ್ಲಿದ್ದಲು ಪುಡಿಯಾಗುತ್ತದೆ. ಖಾಲಿಯಾದ ಸ್ಥಳದಲ್ಲಿ ಕಲ್ಲಿದ್ದಲನ್ನು ಕೊಯ್ದು ರಫ್ತು ಮಾಡುತ್ತಾರೆ. ಈ ಪದ್ಧತಿಯನ್ನು 'ಸ್ಫೋಟಿಸುವುದು' (ಬ್ಲಾಸ್ಟಿಂಗ್) ಎನ್ನುತ್ತಾರೆ. ಇದು ಅಪಘಾತಗಳಿಂದ ಕೂಡಿದ್ದಾಗಿದೆ. ಒಂದೊಂದು ಸಲ ಸ್ಫೋಟದಿಂದ ಕಲ್ಲಿದ್ದಲಿನ ಪದರು ಕತ್ತರಿಸಿ ಬಿದ್ದು ಕಾರ್ಮಿಕರು ಮರಣ ಹೊಂದುತ್ತಾರೆ ಆದ್ದರಿಂದ ಈ ಕೆಲಸವನ್ನು ಬಹಳ ಜಾಗ್ರತೆಯಿಂದ, ಶಿಸ್ತಿನಿಂದ ನಿರ್ವಹಿಸಬೇಕು. ಗಣಿ ಕಾರ್ಮಿಕರ ಮೇಲೆ ಮೇಲ್ಛಾವಣಿ ಕತ್ತರಿಸಿ ಬೀಳದಂತೆ ಮತ್ತೊಂದು ಗುಂಪಿನ ಕಾರ್ಮಿಕರು ಕಬ್ಬಿಣ ಬಟ್ಟೆ ಫಲಕ, ಮರದ ದಿಮ್ಮಿಗಳು ಅಲ್ಲಿ ನಿಲ್ಲಿಸುತ್ತಾರೆ. ಇನ್ನೊಂದು ಗುಂಪು ಬೈರಿಂಗೆ ಯಂತ್ರ (ಡ್ರಿಲ್ಲಿಂಗ್) ದಿಂದ ಸಿದ್ಧವಾಗಿದೆ. ಇದನ್ನು ಎಲ್ಲಿಗೆ ಬೇಕೆಂದರೆ ಅಲ್ಲಿಗೆ ತೆಗೆದುಕೊಂಡು ಹೋಗಬಹುದು. ಸ್ಫೋಟದ ನಂತರ ಇದರಿಂದ ಕಲ್ಲಿದ್ದಲನ್ನು ಕತ್ತರಿಸುತ್ತಾರೆ. ಸ್ಫೋಟದ ರಂಧ್ರ ತಯಾರಾಗಿದೆ. ಇದನ್ನು ಚಿತ್ರ 6.7. ರಲ್ಲಿ ನೋಡಿರಿ.

ಸ್ಫೋಟಕ್ಕೆ ಎಲ್ಲಾ ಸಿದ್ಧವಾದ ನಂತರ ಎಲ್ಲರು ಪ್ರಮಾದ ವಿಲ್ಲದ ಪ್ರದೇಶಕ್ಕೆ ಸೇರಿದರು. ಆಗ ಮುನ್ನೆಚ್ಚರಿಕೆಗೆ ಒಂದು ಸೀಟಿ ಊದಿ ಸ್ಫೋಟವಾಗುವುದ (ಡಿಟೋನೇಟರ್)ನ್ನು ತುಳಿದರು.

SCERT TELANGANA



*ಚಿತ್ರ 6.8:*
(ಎಡಭಾಗ) ಡಿಟೊನೇಟರ್
(ಬಲಭಾಗ) ಬ್ಯಾಟರಿ
(ಕೆಳಗೆ ಎಡಭಾಗ) ಸ್ಫೋಟ
ಪದಾರ್ಥದಲ್ಲಿ ರಂಧ್ರ
ತುಂಬುವುದು (ಕೆಳಗೆ ಬಲಭಾಗ)
ಸ್ಫೋಟಗೊಳ್ಳುವ ಪದಾರ್ಥಗಳು







ಇದಕ್ಕಿಂದತೆ ಗಣಿ ತುಂಬಾ ಸ್ಫೋಟದ ಶಬ್ದದಿಂದ ಪ್ರತಿಧ್ವನಿಸಿತು. ಭೂಕಂಪ ಸಂಭವಿಸಿದಂತೆ ನೆಲ, ಗೋಡೆಗಳು ಕೂಡ ಅದಿರಿದವು. ಎಲ್ಲಾ ದೂಳು ಹೊಗೆ ತುಂಬಿಕೊಂಡಿತು. ಸ್ವಲ್ಪ ಸಮಯಕ್ಕೆ ಪುನಃ ಸೀಳು ಕೇಳಿಸಿದ ನಂತರ ನಾವೆಲ್ಲಾ ದ್ವಾರಕ್ಕೆ ಹೋದೆವು. ದೂಳು ನಿಧಾನವಾಗಿ ಕಡಿಮೆಯಾಗುತ್ತಿದೆ ಇಬ್ಬರೂ, ಮೂವರು ಗಣಿ ಕಾರ್ಮಿಕರು ಕೆಮ್ಮುತ್ತಾ ದೂಳಿನ ಮೋಡದೊಳಗೆ ಪ್ರವೇಶಿಸಿದರು. ಕೆಳಗೆ ಬಿದ್ದ ಕಲ್ಲಿದ್ದಲಿನ ಮೇಲೆ ನಡೆಯುತ್ತಾ ಕಡ್ಡಿಗಳಿಂದ ಕಲ್ಲಿದ್ದಲು ಸ್ಫೋಟಿಸಿದ ಪ್ರದೇಶಗಳನ್ನು ಪರಿಶೀಲಿಸುತ್ತಿದ್ದಾರೆ. ಒಂದು ಕಡೆ ಮೇಲ್ಭಾವಣಿ ದುರ್ಬಲವಾಗಿದೆ. ಕಟ್ಟಿಗೆ ತೊಲೆಗಳು, ಮರದ ಕಂಬಗಳಿಂದ ಅಲ್ಲಿ ದಿಮ್ಮಿಗಳನ್ನು ನಿಲ್ಲಿಸಿದ್ದರು.

## ಕಲ್ಲಿದ್ದಲು ಸಾರಿಗೆ (Transporting coal) :

ಈ ಗಣಿಗಳಲ್ಲಿ ಕಲ್ಲಿದ್ದಲನ್ನು ಕನ್ವೆಯರು ಬೆಲ್ಟುಗಳಿಂದ ಸಾಗಿಸುತ್ತಾರೆ. ಇದಕ್ಕೆ ಮೊದಲು ಗಣಿ ಕಾರ್ಮಿಕರು ಕಲ್ಲಿದ್ದಲನ್ನು ಚಿಕ್ಕ ಬಂಡಿಗಳಲ್ಲಿ ತುಂಬಿ ತೆಗೆದುಕೊಂಡು ಹೋಗುತ್ತಿದ್ದರು. ಈಗ ಯಂತ್ರ ಪರಿಕರಗಳು ಕಲ್ಲಿದ್ದಲನ್ನು ಕನ್ವೆಯರ್ ಬೆಲ್ಟುಮೇಲೆ ಎತ್ತಿದರೆ ಅವು ಕಲ್ಲಿದ್ದಲನ್ನು ಮೇಲಕ್ಕೆ ತೆಗೆದುಕೊಂಡು ಹೋಗುತ್ತವೆ. ಅಲ್ಲಿ ಕಲ್ಲಿದ್ದಲನ್ನು ಗುಣಮಟ್ಟದ ಆಧಾರದ ಮೇಲೆ ಬೇರೆ ಮಾಡಿ ಟ್ರಕ್ಕುಗಳು, ರೈಲ್ವೆ ವ್ಯಾಗನುಗಳಿಗೆ ತುಂಬುತ್ತಾರೆ. ಮುಖ್ಯವಾಗಿ ಸರ್ಕಾರ ಥರ್ಮಲ್ ವಿದ್ಯುತ್ ಉತ್ಪತ್ತಿ ಕೇಂದ್ರಗಳಿಗೆ ಕಲ್ಲಿದ್ದಲನ್ನು ಸಿಂಗರೇಣಿ ಸರಬರಾ ಮಾಡುತ್ತದೆ. ಉಳಿದ ಕಲ್ಲಿದ್ದಲನ್ನು ಇತರ ಕಂಪನಿಗಳು ಕೊಂಡುಕೊಳ್ಳುತ್ತವೆ.

## ಕ್ಷೇಮಾಭಿವೃದ್ಧಿ (ಕಲ್ಯಾಣ) (Welfare) :

ರಸ್ತೆಗಳು, ಕುಡಿಯುವ ನೀರಿನಂತಹ ಸೌಕರ್ಯಗಳಿಂದ ಸಿಂಗರೇಣಿ ಕಾಲರೀಸ್ ಗೃಹ ವಸತಿ ನೀಡುತ್ತದೆ. ನಾಮಮಾತ್ರ ಬೆಲೆಗಳಲ್ಲಿ ವಿದ್ಯುತ್ ಸರಬರಾಜು ಮಾಡುತ್ತದೆ. ಶಾಲೆಗಳು, ಆಸ್ಪತ್ರೆಗಳನ್ನು ಸ್ಥಾಪಿಸುತ್ತದೆ.

## ಸುರಕ್ಷತೆ, ಆರೋಗ್ಯ ಪರೀಕ್ಷೆ (Safety and Health Checkups)

ಗಣಿಗಳ ಸುರಕ್ಷತೆಗೆ ಡೈರೆಕ್ಟರ್ ಜನರಲ್ ಹಂತದಲ್ಲಿ ಒಬ್ಬ ಅಧಿಕಾರಿ ಇರುತ್ತಾನೆ. ಸುರಕ್ಷತಾ ಅಂಶಗಳು, ಕಾರ್ಮಿಕರಿಗೆ

ನಡೆಸುವ ವೈದ್ಯ ಪರೀಕ್ಷೆಗಳನ್ನು ಆತನು, ಪರಿಶೀಲಿಸುತ್ತಿರುತ್ತಾನೆ ಗಣಿ ಒಳಗೆ ಕೆಲಸ ಮಾಡುವ ಕಾರ್ಮಿಕರು ಅಪಘಾತಗಳನ್ನು ಎದುರಿಸುವುದು ಮಾತ್ರವಲ್ಲದೇ ನಿರಂತರ ಕಲ್ಲಿದ್ದಲು ಧೂಳುನ್ನು ಉಸಿರಾಡುತ್ತಾರೆ. ಇದರಿಂದ ಭಯಂಕರವಾದ 'ಕಪ್ಪು ಶ್ವಾಸಕೋಶಗಳು' ಎಂಬ ಒಂದುವಿಧವಾಗ ಕ್ಷಯ ರೋಗ ಬರುವ ಅವಕಾಶವಿದೆ. ಗಣಿ ಕಾರ್ಮಿಕರು ವೈದ್ಯ ಪರೀಕ್ಷೆ ಚಿಕಿತ್ಸೆಗೆ ಸಂಬಂಧಿಸಿ ವಿವರಣಾತ್ಮಕ ಮಾರ್ಗದರ್ಶನ ಗಳಿವೆ. 45 ವರ್ಷದೊಳಗಿನ ಉದ್ಯೋಗದಾರರಿಗೆ ಪ್ರತಿ ಐದು ವರ್ಷಕ್ಕೆ ಒಂದು ಸಾರಿ ಸಂಪೂರ್ಣ ವೈದ್ಯ ಪರೀಕ್ಷೆಗಳು ಮಾಡುತ್ತಾರೆ. 45 ವರ್ಷಗಳ ಮೇಲ್ಪಟ್ಟ ಉದ್ಯೋಗದಾರರಿಗೆ ಈ ಪರೀಕ್ಷೆಗಳು ಪ್ರತಿ ಮೂರು ವರ್ಷಗಳಿಗೊಮ್ಮೆ ನಡೆಸುತ್ತಾರೆ. ಕಪ್ಪು ಶ್ವಾಸಕೋಶಗಳ ರೋಗ ಬಂದ ಗಣಿ ಕಾರ್ಮಿಕರನ್ನು ಸಾಧಾರಣವಾಗಿ ಗಣಿಗಳಲ್ಲಿ ಮಾತ್ರವಲ್ಲದೆ ಬೇರೆ ವಿಭಾಗಗಳಿಗೆ ಬದಲಿಸುತ್ತಾರೆ.

### ಗಣಿಗಳಕೈಗಾರಿಕೆ, ಗಣಿ ಅಗೆಯುವರಲ್ಲಿಹೊಸಧೋರಣೆಗಳು (New trends in Mining industry and miners)

ಇತ್ತೀಚಿನ ಕಾಲದಲ್ಲಿ, ಪ್ರತ್ಯೇಕವಾಗಿ ಥರ್ಮಲ್ ವಿದ್ಯುತ್ ಉತ್ಪತ್ತಿ ಕೇಂದ್ರಗಳಿಂದ ಕಲ್ಲಿದ್ದಲಿಗೆ ಬಹಳ ಬೇಡಿಕೆ ಹೆಚ್ಚುತ್ತಿದೆ. ಆದರೆ ಕಡಿಮೆ ಉತ್ಪಾದನೆಯಿಂದ ನಮ್ಮ ಗಣಿಗಳು ಈ ಬೇಡಿಕೆಗೆ ತಕ್ಕಂತೆ ಸರಬರಾಜು ಮಾಡದೇ ಹೋಗುತ್ತಿವೆ. ಆದ್ದರಿಂದ ಓಪೆನ್‌ಕಾಸ್ಟ್ ಗಣಿಗಳ ಅಗೆಯುವಿಕೆಗೆ ಮಾರಟದ ಮೂಲಕ ಉತ್ಪತ್ತಿ ಹೆಚ್ಚಿಸಲು SCCL ಯೋಜನೆತಯಾರಿಸುತ್ತಿದೆ. ಪ್ರಸ್ತುತ 15 ಓಪೆನ್‌ಕಾಸ್ಟ್ ಗಣಿಗಳನ್ನು ನಿರ್ವಹಿಸುತ್ತಿದೆ. ಖಾಸಗಿ ಗುತ್ತಿಗೆದಾರರ ಮೂಲಕ ಸಂಪೂರ್ಣ ಸ್ವಯಂ ಚಾಲಿತ ಯಂತ್ರಗಳನ್ನು ಪ್ರವೇಶಪಡಿಸಿದರು. ಇವುಗಳ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಕಲ್ಲಿದ್ದಲು ಉತ್ಪತ್ತಿಯಾಗುತ್ತದೆ. ಆದರೆ ಕಡಿಮೆ ಜನರಿಗೆ ಉದ್ಯೋಗ ದೊರೆಯುತ್ತದೆ. ಓಪೆನ್‌ಕಾಸ್ಟ್ ಅಗೆಯುವಿಕೆ ಪ್ರಾರಂಭಿಸಿದ ಪ್ರಾಂತಗಳಲ್ಲಿ ಕಲ್ಲಿದ್ದಲು ನಿಕ್ಷೇಪಗಳು 10-15 ವರ್ಷಗಳಲ್ಲಿ ಮುಗಿದುಹೋಗುತ್ತವೆ. ಆ ನಂತರ ಅಲ್ಲಿ ಅಗೆಯಲು ಏನು ಇರುವುದಿಲ್ಲ.

ಭೂಗರ್ಭ ಗಣಿಗಳು ಕ್ರಮೇಣ ಮುಚ್ಚಿ ಹಾಕುವುದು ಮತ್ತು ಉಪರಿತಲ ಗಣಿಗಳಿಗೆ ಬದಲಾಗುವುದರಿಂದ ಬಹಳಷ್ಟು ಜನ ಗಣಿ ಕಾರ್ಮಿಕರು ತಮ್ಮ ಉದ್ಯೋಗವನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಕಾರ್ಮಿಕರು ಭಾವಿಸುತ್ತಾರೆ. ಸ್ಥಿರ ಉದ್ಯೋಗಗಳ ಸ್ಥಾನದಲ್ಲಿ ಒಪ್ಪಂದ ಕಾರ್ಮಿಕರು ಸೇರುವುದರಿಂದ ಕಾರ್ಮಿಕರ ಕಾನೂನುಗಳಿಗೆ ರಕ್ಷಣೆ ಇಲ್ಲದಂತಾಗುತ್ತದೆ. ಈಗಲೇ ಸ್ಥಿರ ಉದ್ಯೋಗಿಗಳ ಸಂಖ್ಯೆ ಒಂದು ಲಕ್ಷದಿಂದ 65000 ಕ್ಕೆ ಕ್ಷೀಣಿಸಿದೆ.

**2009 ಜೂನ್ 29 ರಂದು ಪ್ರಸಾರ ಮಾಡಿದ ಈ ವಾರ್ತೆಯನ್ನು ಓದಿರಿ**

**ಸಿಂಗರೇಣಿ ಓಪನ್‌ಕಾಸ್ಟ್ ಕಲ್ಲಿದ್ದಲಿನ ಗಣಿಯಿಂದ ಉಂಟಾದ ಸಮಸ್ಯೆಗಳು**

ನಮ್ಮ ಪ್ರತಿನಿಧಿ :

ವರಂಗಲ್, ಜೂನ್ 28 : ಕಲ್ಲಿದ್ದಲಿಗೆ ಇರುವ ಬೇಡಿಕೆಯನ್ನು ದೃಷ್ಟಿಯಲ್ಲಿಟ್ಟು ಕೊಂಡು ಓಪೆನ್‌ಕಾಸ್ಟ್ ಗಣಿ ಅಗೆಯುವಿಕೆ ಯನ್ನು ಕೈಗೊಳ್ಳಬೇಕೆಂದು ಸಿಂಗರೇಣಿ ಕಾಲರೀಸ್ ಕಂಪನಿ ಲಿಮಿಟೆಡ್ ಎಸ್.ಸಿ.ಸಿ.ಎಲ್ ನಿರ್ಣಯಿಸಿದ. ಈ ನೀರ್ಣಯದಿಂದ 200 ಗ್ರಾಮಗಳು ಪ್ರಭಾವಕೊಳಗಾಗಬಹುದು. 20,000 ಜನ ನಿರಾಶ್ರೀತರಾಗಬಹುದು. ಈ ಗಣಿಗಳಿಂದ 3,000 ಹೆಕ್ಟೇರ್ ಅಡವಿಗಳು ಕೂಡ ಪ್ರಭಾವಕ್ಕೆ ಒಳಗಾಗುತ್ತವೆ ಎಂದು ಅಂದಾಜು. ''ಭೂಗರ್ಭ ಗಣಿಗಳ ಮೂಲಕ ದಿನಕ್ಕೆ 1,500 ಟನ್ನುಗಳ ಕಲ್ಲಿದ್ದಲು ಅಗೆದರೆ ಓಪೆನ್‌ಕಾಸ್ಟ್ ಮೂಲಕ ದಿನಕ್ಕೆ ಹತ್ತು ಸಾವಿರ ಟನ್ನು ಕಲ್ಲಿದ್ದಲು ತೆಗೆಯ ಬಹುದು. ಇದಕ್ಕೆ ಖರ್ಚು ಕೂಡ ಬಹಳ ಕಡಿಮೆಯಾಗುತ್ತದೆ ''. ಎಸ್.ಸಿ.ಸಿ.ಎಲ್‌ನಲ್ಲಿ ಉನ್ನತಾಧಿ ಕಾರಿಯೊಬ್ಬರು ತಿಳಿಸಿದರು. ಇದು ಹೀಗಿರಬೇಕಾದರೆ, ಓಪೆನ್‌ಕಾಸ್ಟ್ ಗಣಿಗಳ ಅಗೆಯುವಿಕೆಯಿಂದ ಸಾವಿರಾರು ಕುಟುಂಬ ಗಳು ಹಾಳಾಗುತ್ತವೆ. ನೂರಾರು ಸಂಖ್ಯೆಯಲ್ಲಿ ಗ್ರಾಮಗಳು ಹೊಡೆತಕ್ಕೆ ಒಳಗಾಗುತ್ತವೆ. ಸ್ಥಳೀಯ ಜೀವನಾಧಾರಗಳು ಇಲ್ಲದಂತಾ ಗುತ್ತವೆ. ಕಂಪನಿ ಅಧಿಕಾರಿ ಪ್ರಕಾರ ಅಡವಿಗಳು ಕಡೆದು ಹಾಕಿದಂತ ವಿಸ್ತೀರ್ಣದಲ್ಲಿ ಹೊಸ ಅಡವಿಗಳು ಬೆಳೆಸುತ್ತಾರೆ. ಅದಕ್ಕೆ ಆಗುವ ಖರ್ಚನ್ನು ತುಂಬುತ್ತಾರೆ. ಒಂದು ಹೆಕ್ಟಾರಿಗೆ 4.38 ರಿಂದ 10.43 ಲಕ್ಷ ರೂಪಾಯಿಗಳು ಇದಕ್ಕೆ ಸಲ್ಲಿಸುತ್ತಾರೆಂದು ಆ ಅಧಿಕಾರಿ ಹೇಳಿದರು. ಈ ಗಣಿಗಳಿಂದ ಮಣ್ಣು, ಕಲ್ಲು, ಗುಡ್ಡಗಳಾಗಿ ಏರ್ಪಟ್ಟು ಹಳ್ಳ, ನದಿ ಪ್ರವಾಹಗಳಿಗೆ ತೊಂದರೆ ಉಂಟುಮಾಡುತ್ತವೆ ಎಂದು, ಭೂಗರ್ಭ ಜಲ ಕಲುಷಿತವಾಗುತ್ತವೆ ಎಂದು ಕುಡಿಯುವ ನೀರು ಕೊರತೆ ಏರ್ಪಡುತ್ತದೆ ಎಂದು ಸ್ಥಳೀಯ ಜನರು ದೂರು ನೀಡುತ್ತಿದ್ದರೆ.

SCERT TELANGANA



*ಚಿತ್ರ : 6.9: ಜಲಗಂ ವೆಂಗಳರಾವು ಓಪೆನ್ ಕಾಸ್ಟಮೈನ್-ಸತ್ತುಪಲ್ಲಿ*

- ಈ ಸಮಸ್ಯೆಯನ್ನು ಹೇಗೆ ಪರಿಷ್ಕರಿಸ ಬಹುದು ? ಪರಿಸರ, ಭೂಮಿಯನ್ನು ನಷ್ಟ ಪಡಿಸುತ್ತಾ ಜೀವನೋಪಾದಿಗಳು ನಷ್ಟಹೋಗುವಂತೆ ಮಾಡುತ್ತಾ ಕಡಿಮೆ ಖರ್ಚಿನಲ್ಲಿ ಕಲ್ಲಿದ್ದಲು ಅಗೆಯುವಿಕೆ ಕೈಗೊಳ್ಳುವುದು ಸಮಂಜಸವಾದುದ್ದೇನಾ ?

### ಸತ್ತುಪಲ್ಲಿ – ಓಪನ್ ಕಾಸ್ಟ್ ಗಣಿ

### (Open Cast Mine at Sathupally )

ತೆಲಂಗಾಣ ರಾಜ್ಯದಲ್ಲಿ ಖಮ್ಮಂ ಜಿಲ್ಲೆ ಸತ್ತುಪಲ್ಲಿ ಗ್ರಾಮದಲ್ಲಿ ಜಲಗಂ ವೆಂಗಳರಾವ್ ಓಪನ್ ಕಾಸ್ಟ್ ಇದ್ದಿಲು ಗಣಿಗಳಿವೆ. ಕಲ್ಲಿದ್ದಲು ನಿಕ್ಷೇಪಗಳನ್ನು ಗುರ್ತಿಸಿದಾಕ್ಷಣ ಸಿಂಗರೇಣಿ ಕಾಲರೀಸ್ ಕಂಪೆನಿ ಲಿಮಿಟೆಡ್ ಅವರು ಇದರ ಗುಣಮಟ್ಟವನ್ನು ನಿರ್ಧಾರಿಸಲು ಪರೀಕ್ಷೆ ನಿರ್ವಹಿಸಿದರು. ಅವರು ನಿರ್ವಹಿಸಿದ ಸರ್ವೆ ಪ್ರಕಾರ ಸತ್ತುಪಲ್ಲಿ ಪ್ರಾಂತದಲ್ಲಿ ಸುಮಾರು ಐವತ್ತು ವರ್ಷಗಳ ವರೆಗೆ ಕಲ್ಲಿದ್ದಲು ಲಭಿಸುತ್ತದೆ ಎಂದು ಅಂದಾಜು ಮಾಡಲಾಗಿದೆ. ಈ ಗಣಿಗಾರಿಕೆಯಲ್ಲಿ ಭೂಮಿಯನ್ನು ಕಳೆದುಕೊಂಡ ರೈತರಿಗೆ ಪರಿಹಾರವಾಗಿ ಇತರ ಪ್ರಾಂತದಲ್ಲಿ ಭೂಮಿಯನ್ನಾಗಲೀ, ಸಿಂಗರೇಣಿ ಗಣಿಗಳಲ್ಲಿ ಉದ್ಯೋಗವಾಗಲೀ ಕಲ್ಪಿಸಿದರು. ಸತ್ತುಪಲ್ಲಿ ಓಪನ್ ಕಾಸ್ಟ್ ಗಣಿಗಳು 2005 ರಲ್ಲಿ ಪ್ರಾರಂಭವಾದವು.

ಇಲ್ಲಿನಡೆಯುವ ಕೆಲಸಕ್ಕೆ ಬುಲ್ಡೊಜರ್‌ಗಳು, ಮೋಟರ್ ಗ್ರೇಡರ್‌ಗಳು, ಷಾವಲ್ಸ್‌ಗಳು, ಡ್ರಿಲ್‌ಗಳು ವಾಟರ್ ಸ್ಪ್ರೀಕ್ಲರ್ಸ್, ಟಿಪ್ಪರ್ ಟ್ರಕ್ಸ್, ಡಂಪರ್ಸ್ ಮತ್ತು ಹೆಚ್ಚಿನ ಪ್ರಮಾಣದ ಇದ್ದಿಲನ್ನು ರವಾನಿಸುವ ಸಲುವಾಗಿ ವಿವಿಧ ತರಹದ ಭಾರೀ ವಾಹನಗಳನ್ನು, ಯಂತ್ರಗಳನ್ನು ಉಪಯೋಗಿಸುತ್ತಿದ್ದಾರೆ. ಓಪನ್ ಕಾಸ್ಟ್ ಮೇಲ್ಪದರಿನಲ್ಲಿರುವ ಮಣ್ಣನ್ನು, ಕಲ್ಲುಗಳನ್ನು ಷಾವಲ್ಸ್ ಮತ್ತು ಬುಲ್ಡೊಜರ್ಸ್‌ಗಳಿಂದ ತೊಲಗಿಸುತ್ತಾರೆ. ನಂತರ ಒಂದು ಕ್ರಮ ಪದ್ಧತಿಯಲ್ಲಿ ಬೆಂಚಿಗಳನ್ನು ರಚಿಸುತ್ತಾರೆ. (ಬೆಂಚಿಗಳು ಎಂದರೆ ಗಣಿಯಲ್ಲಿಯ ಇದ್ದಿಲನ್ನು ತೊಲಗಿಸಿದ ಪ್ರಾಂತದ ಭಾಗ) ಎಲ್ಲಾ ಬೆಂಚಿಗಳನ್ನು ಸೇರಿಸುತ್ತಾ ಗಣಿಯ ತಳಭಾಗದ ವರೆಗೂ ರಸ್ತೆಯನ್ನು ಹಾಕುತ್ತಾರೆ. ಸ್ಫೋಟಿಸುವುದರಿಂದ ಬೆಂಚಿಗಳ ಪಕ್ಕದಲ್ಲಿರುವ ಮಣ್ಣು ಕಲ್ಲುಗಳನ್ನು ತೊಲಗಿಸುತ್ತಾರೆ. ಈ ಬೆಂಚಿಗಳಲ್ಲಿಯ ಇದ್ದಿಲನ್ನು ಸ್ಫೋಟಿಸಿ ಷಾವಲ್ಸ್ ಮತ್ತು ಡಂಪರ್‌ಗಳ ಮೂಲಕ ಟಿಪ್ಪರ್, ಟ್ರಕ್‌ಗಳಲ್ಲಿ ತುಂಬಿ ರವಾಣಿಸುತ್ತಾರೆ. ಇದ್ದಿಲನ್ನು ಕೋಲ್ ಹ್ಯಾಡಿಲಿಂಗ್ ವಿಭಾಗಕ್ಕೆ



*ಚಿತ್ರ : 6.10: ಷಾವಲ್ ಡಂಪರ್ ಹೊಂದಾಣಿಕೆಯಿಂದ ಇದ್ದಿಲನ್ನು ಅಗಿಯುತ್ತಿರುವುದು*

SCERT TELANGANA



ಚಿತ್ರ : 6.11: ಸತ್ತುಪಲ್ಲಿ ಗಣಿಯಿಂದ ಹೊರಬಿದ್ದ ವ್ಯರ್ಥ ಪದಾರ್ಥಗಳ ಗುಡ್ಡ

ರವಾನಿಸಿ ಅಲ್ಲಿಂದ ರೈಲ್ವೆ ವ್ಯಾಗನ್‌ಗಳು, ಲಾರಿಗಳ ಮೂಲಕ ವಿದ್ಯುತ್ ಉತ್ಪಾದಕ ಕೇಂದ್ರಗಳಿಗೆ, ಸಿಮೆಂಟ್ ಕೈಗಾರಿಕೆಗಳಿಗೆ, ಇದ್ದಿಲು ಅಗತ್ಯವಿರುವ ಇತರ ಕೈಗಾರಿಕೆಗಳಿಗೆ ಕಳಿಸುತ್ತಾರೆ. ಪ್ರತಿನಿತ್ಯ ಜೆ.ವಿ.ಆರ್. ಓಪನ್ ಕಾಸ್ಟ್ ಗಣಿಯಿಂದ ಸುಮಾರು 10 ಸಾವಿರ ಟನ್‌ಗಳಷ್ಟು ಇದ್ದಿಲನ್ನು ಅಗೆದು ರವಾನಿಸುತ್ತಾರೆ.

ಭೂಗರ್ಭ ಗಣಿಗಳೊಂದಿಗೆ ಹೋಲಿಸಿದಾಗ ಓಪನ್‌ಕಾಸ್ಟ್ ಗಣಿಗಳ ಅಗಿಯುವಿಕೆ ತುಂಬಾ ಖರ್ಚಿನದಾಗಿದೆ. ಈ ಗಣಿಗಳು ವಾತಾವರಣವನ್ನು ಕಲುಷಿತಗೊಳಿಸುತ್ತವೆ. ಉದಾಹರಣೆಗೆ ಲಂಕಪಲ್ಲಿ ಮೀಸಲು ಅಡವಿ ಪ್ರಾಂತದೊಂದಿಗೆ ಸುಮಾರು 550 ಹೆಕ್ಟೇರ್ ವ್ಯವಸಾಯ ಕ್ಷೇತ್ರವು ಬೀಳು ಭೂಮಿಯಾಗಿ ಪರಿವರ್ತನೆಯಾಗಿದೆ. SCCL ಅವರು ಈ ಪ್ರಾಂತದಲ್ಲಿ ಗಿಡಗಳನ್ನು ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳುವುದರ ಮೂಲಕ ಕಾಲುಷ್ಯ ನಿಯಂತ್ರಣ ಮಾಡಲು ಪ್ರಯತ್ನಿಸುತ್ತಿದ್ದಾರೆ.

ಈ ಗಣಿಯಲ್ಲಿ 700 ಜನ ಕಾರ್ಮಿಕರಿದ್ದಾರೆ. ಇದರಲ್ಲಿ 400 ಜನ ಶಾಶ್ವತ ಉದ್ಯೋಗಿಗಳಾಗಿದ್ದರೆ ಉಳಿದವರು ಒಪ್ಪಂದ ಕಾರ್ಮಿಕರು. ಈ ಗಣಿಯಲ್ಲಿ ಹೆಚ್ಚಾಗಿ ಗಂಡಸರೆ ಕೆಲಸ ಮಾಡುತ್ತಾರೆ. SCCL ಉತ್ಪತ್ತಿ ಖರ್ಚನ್ನು ಕಡಿಮೆಗೊಳಿಸಲು ಮೇಲ್ಪದರಿನಲ್ಲಿಯ ಕಲ್ಲು, ಮಣ್ಣನ್ನು ತೊಲಗಿಸಲು ಪ್ರೈವೈಟ್ ವ್ಯಕ್ತಿಗಳ ಸೇವೆಯನ್ನು ಉಪಯೋಗಿಸಿಕೊಳ್ಳುತ್ತದೆ.



ಚಿತ್ರ : 6.12: ಕೋಲ್ ಹ್ಯಾಂಡಿಗ್ ಪ್ಲಾಂಟ್ ಹತ್ತಿರ ಟ್ರಕ್ಕಿನೊಳಗೆ ಇದ್ದಿಲನ್ನು ತುಂಬುವ ಚಿತ್ರ

ಈಗ ಗಣಿಗಳಲ್ಲಿ ಇದ್ದಿಲನ್ನು ಹೇಗೆ ತೆಗೆಯುತ್ತಾರೆ, ಅಲ್ಲಿನ ಜನರ ಮೇಲೆ ಜೀವನ ವಿಧಾನದ ಮೇಲೆ ಅದರ ಪ್ರಭಾವ ಹೇಗೆ ಇರುವುದೋ ನಿಮ್ಮ ಅರಿವಿಗೆ ಬಂದಿರುತ್ತದೆ. ಸಹಜ ಸಂಪನ್ಮೂಲಗಳನ್ನು ಬಳಸಿಕೊಳ್ಳುವಾಗ ಪರಿಸರವನ್ನು ಸಂರಕ್ಷಿಸಿಕೊಳ್ಳಲು ಇರುವ ವಿವಿಧ ಮಾರ್ಗಗಳನ್ನು ದೃಷ್ಠಿಯಲ್ಲಿಟ್ಟುಕೊಳ್ಳುವುದು ಅವಸರ.

- ಸಿಂಗರೇಣಿ ಕಲ್ಲಿದ್ದಲು ಕಂಪೆನಿ ಒಪ್ಪಂದ ಕಾರ್ಮಿಕರನ್ನೇ ಉದ್ಯೋಗಿಗಳಾಗಿ ಏಕೆ ತೆಗೆದುಕೊಳ್ಳುತ್ತಾರೆ ಎಂಬುದನ್ನು ನೀವು ಭಾವಿಸುತ್ತೀರಿ.
- ಗಣಿಗಳಿಗಾಗಿ ತಮ್ಮ ವ್ಯವಸಾಯ ಕ್ಷೇತ್ರಗಳನ್ನು ಕಳೆದುಕೊಂಡ ರೈತರಿಗೆ ಏನಾಗಿರಬಹುದು ?
- ಓಪನ್‌ಕಾಸ್ಟ್ ಮೈನಿಂಗ್‌ಗಾಗಿ ಭಾರೀ ಯಂತ್ರ ಸಾಮಗ್ರಿಗಳನ್ನು ಬಳಸುವುದು ಅಗತ್ಯವೆಂದು ನೀವು ಭಾವಿಸುತ್ತೀರಾ ?
- ಓಪನ್‌ಕಾಸ್ಟ್ ಮೈನಿಂಗ್‌ನಲ್ಲಿ ಪುರುಷರಿಗೆ ಮಾತ್ರ ಏಕೆ ಉದ್ಯೋಗಗಳನ್ನು ನೀಡುತ್ತಾರೆ ?
- ಕೆಳಗಿರುವವುಗಳಲ್ಲಿ ಯಾವುದು ಅತ್ಯಂತ ಪ್ರಧಾನ ವಾದುದು ? ಉತ್ಪತ್ತಿಗೆ ಆಗುವ ಖರ್ಚನ್ನು ಕಡಿಮೆ ಗೊಳಿಸುವುದು ಅಥವಾ ಮಾಲಿನ್ಯದಿಂದ ಪರಿಸರವನ್ನು ರಕ್ಷಿಸುವುದು.
- ಈ ಗಣಿಗಳಲ್ಲಿ ಶಾಶ್ವತ ಉದ್ಯೋಗಿಗಳನ್ನು ಮಾತ್ರ ನಿಯಮಿಸಿದರೆ ಏನಾಗುತ್ತದೆ ?

### ಮುಖ್ಯ ಪದಗಳು

1. ಖನಿಜಗಳು
2. ಓಪೆನ್‌ಕಾಸ್ಟ್ ಗಣಿಗಳ ಅಗೆಯುವಿಕೆ
3. ಭೂಗರ್ಭ ಗಣಿಗಳ ಅಗಿಯುವಿಕೆ
4. ನವೀಕರಿಸುವ (ಪುನರುತ್ಪತ್ತಿ) ಸಂಪನ್ಮೂಲಗಳು
5. ಮುಗಿದು ಹೋಗುವ ಸಂಪನ್ಮೂಲಗಳು
6. ಕಲ್ಲಿದ್ದಲು
7. ಬೆರೈಟೀಸ್

SCERT TELANGANA

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ

1. ಭೂಗರ್ಭ ಗಣಿ ಸಂದರ್ಶನವನ್ನು ತೋರಿಸುವ ಫ್ಲೋ ಚಾರ್ಟ್ ತಯಾರು ಮಾಡಿರಿ ?
2. 1. ಗಣಿಗಳಲ್ಲಿ ಕೆಲಸ ಮಾಡುತ್ತಿರುವಾಗ

   2. ಉದ್ಯೋಗದಲ್ಲಿರುವಾಗ ಪ್ರಧಾನ ಆರೋಗ್ಯ ಸಮಸ್ಯೆಗಳು, ಮುನ್ನೆಚ್ಚರಿಕೆ ಕ್ರಮಗಳು, ಗಣಿಕಾರ್ಮಿಕ ರಕ್ಷಣೆಗಾಗಿ ತೆಗೆದುಕೊಳ್ಳುವ ಜಾಗ್ರತೆಗಳು ಎನ್ನುವ ಶೀರ್ಷಿಕೆಯಿಂದ ಪಟ್ಟಿ ತಯಾರು ಮಾಡಿರಿ.
3. ಜಾನಕಿ ಪ್ರಸ್ತುತ ವ್ಯವಸಾಯ ಕೂಲಿಯಾಗಿ ಕೆಲಸ ಮಾಡುತ್ತಾಳೆ. ಆಕೆಗೆ ಗಣಿ ಕಾರ್ಮಿಕರಲ್ಲಿ ತಾನು ಒಬ್ಬಳಾಗಬೇಕೆಂಬುದು ಇದೆ. ಆಕೆ ಕೆಲಸದಲ್ಲಿ ಎಂತಹ ಬದಲಾವಣೆಗಳು ಬರುತ್ತವೋ , ಉದ್ಯೋಗ ರಂಗ ಚಿತ್ರ , ಆರೋಗ್ಯ ಸಮಸ್ಯೆಗಳಂತಹು ಆಕೆಗೆ ವಿವರಿಸಿರಿ.
4. ಯಂತ್ರಗಳು, ಮಾನವ ಶ್ರಮ ಉಪಯೋಗಿಸುವಾಗ ಗಣಿಗಳಲ್ಲಿ ಕಾರ್ಮಿಕರ ಅವಸರದಲ್ಲಿ ವ್ಯತ್ಯಾಸಗಳನ್ನು ಹೆಸರಿಸಿ.
5. ಆರ್ಥಿಕ ಪರಿಸ್ಥಿತಿಗೆ ಗಣಿ ಅಗೆಯುವಿಕೆಗೆ ನೆರವಾದ ಅಂಶವನ್ನು ಈ ಅಧ್ಯಾಯನದಲ್ಲಿ ಹೇಗೆ ಗುರ್ತಿಸಿದ್ದೀರಿ ?
6. ತೆಲಂಗಾಣ ಭೂಪಟದಲ್ಲಿ ಖನಿಜಗಳಿರು ಪ್ರಾಂತವನ್ನು ನಿಮ್ಮ ಜಿಲ್ಲೆಯಲ್ಲಿ ಗುರ್ತಿಸಿ.
7. ಈ ಶೀರ್ಷಿಕೆಯ ಖನಿಜಗಳ ಒಡೆತನ ಯಾರಿಗೆ ಪ್ಯಾರಾವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :

   ಖನಿಜಗಳು ಯಾವ ಒಬ್ಬ ವ್ಯಕ್ತಿಗೆ ಸಂಬಂಧಿಸಿದವಲ್ಲ.ಅವು ಎಲ್ಲರಿಗೆ ಸಂಬಸಿದವು ಎಂಬುದನ್ನು ಹೇಗೆ ನಿರ್ಧರಿಸುವಿರಿ?
8. ಈ ಕೆಳಗಿನ ಚಿತ್ರಗಳನ್ನು ನೋಡಿ ಇದರಲ್ಲಿ ಎರಡು ರೀತಿಯ ಜನರು ವಿವಿಧ ವಾಖ್ಯೆಗಳನ್ನು ನೀಡಿದ್ದಾರೆ.ಅವರು ಗಣಿಗಳ ಬಗ್ಗೆ ಏನನ್ನು ಮಾತನಾಡುತ್ತಿದ್ದಾರೆ?




9. ಖನಿಜ ಸಂಪನ್ಮೂಲಗಳು ದೇಶಾಭಿವೃದ್ಧಿಗೆ ಯಾವ ವಿಧವಾಗಿ ಸಹಾಯವಾಗುತ್ತದೆ ?
10. ವಿವಿಧ ಖನಿಜಗಳು, ಅವುಗಳ ಉಪಯೋಗಗಳನ್ನು ತಿಳಿಸುವ ಪಟ್ಟಿಯನ್ನು ತಿಳಿಸಿರಿ.

SCERT TELANGANA

# 7 ಹಣ - ಬ್ಯಾಂಕಿಂಗ್

## ಹಣ ಇಲ್ಲದೇ ವ್ಯಾಪಾರ

ಮೋಹನ್ ರಾಗಿಯನ್ನು ತೆಗೆದುಕೊಂಡು ಶ್ಯಾಮಲ ಹತ್ತಿರ ಮಾವಿನಹಣ್ಣು ಕೊಂಡುಕೊಳ್ಳಬೇಕೆಂದು ಬಂದನು. ಶ್ಯಾಮಲ್ ರಾಗಿಯನ್ನು ಎರಡು ಸಮ ರಾಶಿಗಳಾಗಿ ಮಾಡಿದಳು. ಒಂದು ರಾಶಿಯಲ್ಲಿನ ರಾಗಿಯ ಭಾರಕ್ಕೆ ಸಮಾನವಾಗಿ ಮೋಹನ್‌ಗೆ ಕೆಲವು ಮಾವಿನ ಹಣ್ಣು ಕೊಟ್ಟಳು. ಮೋಹನ್ ಮಾವಿನ ಹಣ್ಣುಗಳನ್ನು ಮನೆಗೆ ತೆಗೆದುಕೊಂಡು ಹೋದನು. ಎರಡು ರಾಶಿಗಳ ರಾಗಿಯನ್ನು ಶ್ಯಾಮಲ ಉಳಿಸಿ ಕೊಂಡಳು. ಮಾವಿನ ಹಣ್ಣಿನ ಮಾರುವ ಬೆಲೆ ಒಟ್ಟು ರಾಗಿಗೆ ದ್ವಿಗುಣ ಭಾಗ. ಧಾನ್ಯದ ದ್ವಿಗುಣ ಭಾಗಕ್ಕೆ ಮಾವಿನ ಹಣ್ಣಿನ ಮಾರಾಟ ನಡೆಯಿತು. ಇತರ ವಿಧವಾಗಿ ಕೂಡ ಮಾರಾಟ ಜರುಗಬಹುದು. ಉದಾಹರಣೆಗೆ ದಾನ್ಯದೊಂದಿಗೆ ಸಮಾನವಾಗಿ.



ಆದಿಲಾಬಾದ್ ಜಿಲ್ಲೆಯಲ್ಲಿ ಕೆಲವು ಗ್ರಾಮಗಳಲ್ಲಿ ಮಕ್ಕಳು ಅಕ್ಕಿ ಕೊಟ್ಟು ಬಿದಿರಿನಿಂದ ಮಾಡಿದ ಗೊಂಬೆಗಳನ್ನು ತೆಗೆದುಕೊಳ್ಳುತ್ತಾರೆ. ಈವಿಧವಾಗಿ ಹಣ್ಣವಿಲ್ಲದೆ ಒಂದು ವಸ್ತುವನ್ನು ಕೊಟ್ಟು ಮತ್ತೊಂದು ವಸ್ತುವನ್ನು ತೆಗೆದುಕೊಳ್ಳುವುದನ್ನು ವಸ್ತುವಿನಿಮಯ ಎನ್ನುತ್ತಾರೆ.

ಕಮ್ಮಾರರು ರೈತರಿಗೆ ನೇಗಿಲು, ಬಂಡಿಚಕ್ರಗಳು, ಎತ್ತಿನಬಂಡಿಯಂತಹವುಗಳನ್ನು ತಯಾರುಮಾಡಿ ಕೊಡುತ್ತಿದ್ದರು. ಆದರೆ ಈ ಕೆಲಸಗಳಿಗೆ ಹಣವಿಲ್ಲದೆ ಪ್ರತಿ ವರ್ಷ ಬೆಳೆ ಬಂದ ನಂತರ ಸ್ವಲ್ಪ ದಾನ್ಯ ತೆಗೆದುಕೊಳ್ಳುತ್ತಿದ್ದರು.

- ಹಣವಿಲ್ಲದೆ ನಡೆಯುವ ಬದಲಾವಣೆಗಳು ಏನಾದರೂ ನಿಮಗೆ ಗೊತ್ತಾ ?
- ಹಳೆಬಟ್ಟೆಗಳು, ಪ್ಲಾಸ್ಟಿಕ್ ಸಾಮಾನು, ದಿನಪತ್ರಿಕೆಗಳು ದಾನ್ಯವನ್ನು(ಕಾಳು)ಕೊಟ್ಟು ಯಾವುದಾದರೂ ವಸ್ತುಗಳನ್ನು ನೀವು ಕೊಂಡುಕೊಂಡಿರಬಹುದು. ಈ ವಿನಿಮಯಗಳು ಹೇಗೆ ನಡೆದವೋ ಚರ್ಚಿಸಿರಿ.

ಮತ್ತೊಂದು ಉದಾಹರಣೆಯಲ್ಲಿ ಗೋಪಾಲನ ಹತ್ತಿರ ಮೇಕೆ ಇದೆ. ಆತನಿಗೆ ಅಕ್ಕಿ ಬೇಕಾಗಿದೆ. ಗೋಪಾಲನು ಶೀನನ ಹತ್ತಿರ ಹೋದನು. ಶೀನನಿಗೆ ಮೇಕೆ ಬೇಕು. ಆದರೆ ಆತನ ಹತ್ತಿರ ಅಕ್ಕಿ ಇಲ್ಲ, ಗೋದಿ ಇವೆ. ಭತ್ತ ಬೆಳೆಯುವ ರಾಮನನ್ನು ಗೋಪಾಲನು ಭೇಟಿಯಾದನು. ಆದರೆ ರಾಮನಿಗೆ ಅಕ್ಕಿಯ ಬದಲಿಗೆ ಮೇಕೆ ತೆಗೆದುಕೊಳ್ಳಲು ಆತನಿಗೆ ಇಷ್ಟವಿಲ್ಲ. ಆತನಿಗೆ ಬೇಕಾದದ್ದು ಗೋದಿ.



SCERT TELANGANA

● **ಈ ಕೆಳಗಿನ ಪಟ್ಟಿಯನ್ನು ಪೂರ್ಣಗೊಳಿಸಿರಿ.**

| | **ಗೋಪಾಲ** | **ಶೀನು** | **ರಾಮು** |
|---|---|---|---|
| ಬೇಕಾಗಿದೆ | | | |
| ಮಾರ ಬೇಕಾಗಿದೆ | | | |

- ಮೇಲಿನ ಪಟ್ಟಿಯಿಂದ ನೀವು ಯಾವ ನಿರ್ಧಾರಕ್ಕೆ ಬರುತ್ತೀರಿ ?
- ಗೋಪಾಲ್‌ಗೆ, ಶೀನನಿಗೆ ಮಧ್ಯ ವಸ್ತು ವಿನಿಮಯ ಏಕೆ ಸಾಧ್ಯವಾಗಲಿಲ್ಲ ನಿಮ್ಮ ಸ್ವಂತ ಮಾತಿನಲ್ಲಿ ವಿವರಿಸಿರಿ ?
- ಹಣದ ವಿನಿಯೋಗ ಇದಕ್ಕೆ ಸಹಾಯ ಪಡುತ್ತದಾ? ಕೆಳಗಿನ ಖಾಲಿ ಸ್ಥಳಗಳನ್ನು ಪೂರ್ತಿ ಮಾಡಿ.
- ಗೋಪಾಲ ತನ್ನ ಮೇಕೆಯನ್ನು ಕೊಟ್ಟು ......., ತೆಗೆದುಕೊಂಡರೆ ಆಗ ಗೋಪಾಲ್ ಈ ಹಣವನ್ನು ಉಪಯೋಗಿಸಿ ......... ನಿಂದ ಅಕ್ಕಿಯನ್ನು ಕೊಳ್ಳುತ್ತಾನೆ. ಈಗ ......... ಈ ಹಣದಿಂದ ಶೀನನಿಂದ ....... ಕೊಳ್ಳುತ್ತಾನೆ.
- ಗ್ರಾಮಗಳಲ್ಲಿ, ಪಟ್ಟಣಗಳಲ್ಲಿ ಅಗಸರು, ಕ್ಷೌರಿಗರು ಮತ್ತು ನೀರುಗಾರರು (ಬಾವಿ ನೀರನ್ನು ಕಾವಲು ಕಾಯುವವರು) ಮೊದಲಾದವರು ಅವರ ಕೆಲಸಕ್ಕೆ ತಕ್ಕ ಸಂಬಳ ಕೊಡುತ್ತಾರಾ ? ನಿಮ್ಮ ತಂದೆ – ತಾಯಿಯಂದಿರನ್ನು ಕೇಳಿ ತಿಳಿದುಕೊಳ್ಳಿ .

## ಹಣದ ವಿನಿಮಯ (Exchange with Money)

ಹಣ ವಿನಿಯೋಗಿಸಿದರೆ ಸರಕುಗಳ ಬದಲಾವಣೆಯಲ್ಲಿ ಸಮಸ್ಯೆಗಳಿರುವುದಿಲ್ಲ. ಆಗ ಯಾವುದಾದರೂ ವಸ್ತುಗಳು ಅಂದವಾಗಿರುವ ವ್ಯಕ್ತಿ ಅವುಗಳ ಅವಶ್ಯಕತೆ ಇದ್ದು, ಆತನಿಗೆ ಬೇಕಾದವುಗಳಿರುವ ವ್ಯಕ್ತಿಗೊಸ್ಕರ ಅಲೆದಾಡುವ ಕೆಲಸವಿಲ್ಲ. ಹಣ ಮಾಧ್ಯಮವಾಗಿ ಕೆಲಸ ಮಾಡುತ್ತದೆ. ಈ ಬದಲಾವಣೆಗೆ ಹಣವನ್ನು ವಿನಿಯೋಗಿಸಿದರೆ ಆ ಹಣ ಮತ್ತೆ ಉಪಯೋಗಿಸಿಕೊಳ್ಳ ಬಹುದು. ಈ ಪರಿಸ್ಥಿತಿಯನ್ನು ಮೇಲಿನ ಉದಾಹರಣೆಯಲ್ಲಿ ನೋಡಿದೆವು. ಹಣ ಎಲ್ಲರಿಗೂ ಒಪ್ಪಿಕೊಳ್ಳಲು ಯೋಗ್ಯವಾದಾಗ ಇದು ಸಾಧ್ಯ ವಾಗುತ್ತದೆ. ಅಂದರೆ ಯಾವು ದಾದರೂ ಮಾರು ವವರು ತಮ್ಮ ವಸ್ತುಗಳಿಗೆ ಬದಲಾಗಿ ಹಣ ತೆಗೆದು ಕೊಳ್ಳುತ್ತಾರೆ. ಏನೆ ಕೊಳ್ಳಬೇಕೆಂದವರು ಅದಕ್ಕೆ ಹಣ ಸಲ್ಲಿಸಿದರೆ ಸರಿಹೋಗುತ್ತದೆ. ಯಾವುದೇ ಸರಕು, ಸೇವೆಗೆಯಾದರೂ ಹಣ ಕೊಟ್ಟು ಕೊಳ್ಳ ಬಹುದು. ಅಂದರೆ ಹಣವನ್ನು ಸರಕು ಸೇವೆಗಳಿಂದ ವಿನಿಮಯ ಮಾಡಿಕೊಳ್ಳಬಹುದು. ಹಣಕ್ಕೆ ಅದರಷ್ಟಕ್ಕೆ ಯಾವುದೇ ಉಪಯೋಗ ಇಲ್ಲದಿರಬಹುದು. ವಿನಿಮಯದಲ್ಲಿ ಹಣ ವಹಿಸುವ ಪಾತ್ರದಿಂದ ಎಲ್ಲರಿಗೂ ಅದು ಬೇಕಾಗುತ್ತದೆ. ಹಣದ ರೂಪದಲ್ಲಿ ಸಾಲ ತೆಗೆದುಕೊಂಡು, ಪುನಃ ಹಿಂದಿರುಗಿಸಬಹುದು.

- ಗೋಪಾಲ್, ಶೀನ, ರಾಮು ಮಧ್ಯ ವ್ಯಾಪಾರದಲ್ಲಿ ಹಣ ಹೇಗೆ ಉಪಯೋಗವಾಗುತ್ತದೆ ? ಫ್ಲೋ ಚಾರ್ಟ್ ಸಹಾಯದಿಂದ ವಿವರಿಸಿರಿ.
- ಮೇಲೆ ವಿವರಿಸಿದ ರೀತಿಯಲ್ಲಿ ಹಣದ ಪಾತ್ರ ವಿನಿಮಯ ಮಾಧ್ಯಮವಾಗಿ ಕೆಲಸ ಮಾಡುವ ಎಂದರೆ ಅದನ್ನು ನೀವು ಸಮ್ಮತಿಸುತ್ತಿರಾ ? ಕಾರಣ ಕೊಟ್ಟು ವಿವರಿಸಿರಿ.
- ವಸ್ತು ವಿನಿಯಮ ವ್ಯವಸ್ಥೆಯಲ್ಲಿ ನೀವು ಕೂದಲು ಕತ್ತರಿಸಿದ ವ್ಯಕ್ತಿಗೆ ಹೇಗೆ ಸಲ್ಲಿಸುತ್ತಿರಿ ? ಚರ್ಚಿಸಿರಿ.

ವಸ್ತು ವಿನಿಯಮಕ್ಕೆ ಮತ್ತೊಂದು ಸಮಸ್ಯೆ ಇದೆ.

**ಗೋಪಾಲ** : ಈ ಮೇಕೆಯ ಬದಲಾಗಿ ಎಷ್ಟು ಚೀಲಗಳ ಧಾನ್ಯ ಕೊಡುತ್ತಿಯ ?

**ಸೀತಯ್ಯ** : ನಾಲ್ಕು ಚೀಲಗಳು

**ಗೋಪಾಲ** : ನನಗೆ ಎರಡು ಚೀಲ ಅಕ್ಕಿ ಎರಡು ಚೀಲ ಗೋದಿ ಬೇಕು ಕೊಡು ಎಂದನು.

**ಸೀತಯ್ಯ** : ನನ್ನ ಹತ್ತಿರ ಗೋದಿ ಇಲ್ಲ, ಬೇಕಾದರೆ ಅಡುಗೆ ಎಣ್ಣೆ, ಬೇಳೆಕಾಳುಗಳಿವೆ ತೆಗೆದು ಕೊಳ್ಳಿ

**ಗೋಪಾಲ** : ನನಗೆ ಬೇಳೆಕಾಳುಗಳು ಬೇಡ. ಸಕ್ಕರೆ ಬೇಕು.

**ಸೀತಯ್ಯ** : ನಾನು ............ ಕೊಡುತ್ತೇನೆ.

**ಗೋಪಾಲ** : ನಾನು ............ ಕೊಡುತ್ತೇನೆ.

SCERT TELANGANA



ವಸ್ತು ವಿನಿಮಯದಲ್ಲಿ ಒಂದು ವಸ್ತುವಿನ ಬೆಲೆಯನ್ನು ಮತ್ತೊಂದು ವಸ್ತುವಿನ ಬೆಲೆಯೊಂದಿಗೆ ನಿರ್ಣಯಿಸಬೇಕು. ಅನೇಕ ಸರಕುಗಳಿಂದ ವಿನಿಮಯ ಮಾಡಬೇಕಾಗಿದ್ದರೆ, ಇದು ಬಹಳ ಕಷ್ಟವಾಗುತ್ತದೆ. ಇದರಿಂದ ವಿನಿಮಯ, ಇಲ್ಲವೆ ವ್ಯಾಪಾರ ಬಹಳ ಕಷ್ಟವಾಗುತ್ತದೆ. ಇದು ಅಷ್ಟು ಸುಲಭವಲ್ಲ. ಅದಕ್ಕಾಗಿ ಇತರ ವಿನಿಮಯ ವಿಧಾನಗಳು ಏರ್ಪಟ್ಟವು. ಅವುಗಳ ಕುರಿತು ನಂತರ ಓದೋಣ. ಆದರೆ ಇದುವರೆಗೆ, ಪ್ರತ್ಯೇಕವಾಗಿ ಗ್ರಾಮಗಳಲ್ಲಿ (ಹಳ್ಳಿ) ವಸ್ತು ವಿನಿಮಯ ಇನ್ನೂ ಜಾರಿಯಲ್ಲಿದೆ.

- ಮೇಲೆ ಕೊಟ್ಟ ಉದಾಹರಣೆಯಲ್ಲಿ ವ್ಯಾಪಾರ ಪೂರ್ಣಗೊಳ್ಳುವಂತೆ ಸಂಭಾಷಣೆಯನ್ನು ಪೂರ್ಣಗೊಳಿಸಿ.
- ತನ್ನ ಮೇಕೆಯನ್ನು ಗೋಪಾಲ ಎಷ್ಟು ಅಕ್ಕಿಯಿಂದ ವಿನಿಮಯ ಮಾಡಿಕೊಳ್ಳಬೇಕು ?

- ನೀವಾಗಲಿ ಸಂತೆಯಲ್ಲಿ ವ್ಯಾಪಾರಸ್ಥರಾಗಲಿ ಹಣ ಉಪಯೋಗಿಸದಿದ್ದರೆ ಏನಾಗುತ್ತದೆ ? ಸಂಕ್ಷಿಪ್ತವಾಗಿ ಟಿಪ್ಪಣಿ ಬರೆಯಿರಿ.
- ಸರಕುಗಳು, ಸೇವೆಗಳ ಬೆಲೆಯನ್ನು ಹಣದಿಂದ ಅಳೆಯಬಹುದಾ ? ವಿವರಿಸಿರಿ.

ಗೋಪಾಲ್ ಹತ್ತಿರ ಮೇಕೆ ಇದೆ. ಆತನು ಕಡ್ಡಿಪೆಟ್ಟಿಗೆ ತೆಗೆದುಕೊಳ್ಳಬೇಕು. ಇದು ನ್ಯಾಯವಾದ ವಿನಿಮಯ ಆಗುತ್ತದಾ ? ಮೇಕೆಯನ್ನು ವಿಭಜಿಸಲಾರನು ಆದ್ದರಿಂದ ಅದರಲ್ಲಿ ಸ್ವಲ್ಪ ಭಾಗ ಕೊಟ್ಟು ಕಡ್ಡಿಪೆಟ್ಟಿಗೆ ತೆಗೆದುಕೊಳ್ಳಲು ಸಾಧ್ಯವಿಲ್ಲ. ಆದರೆ ಹಣದಿಂದ ನೀವು ಸಣ್ಣ ಸಣ್ಣ ವಸ್ತುಗಳನ್ನು ಕೂಡ ಕೊಂಡುಕೊಳ್ಳಬಲ್ಲಿರಿ. ಹಣವನ್ನು ವಿಭಜಿಸಬಹುದು. ರೂಪಾಯಿಗಳು, ಪೈಸೆಗಳಿವೆ. ತರಕಾರಿಯಂತಹ ಸರಕುಗಳು ಬೇಗನೆ ಹಾಳಾಗುತ್ತವೆ. ಆದ್ದರಿಂದ ಅವುಗಳನ್ನು ಬೇಗನೆ ವಿನಿಮಯ ಮಾಡಿಕೊಳ್ಳಬೇಕೆಂಬುದು ನಿಮಗೆ ಗೊತ್ತು. ಸರಕುಗಳನ್ನು ಹಣಕ್ಕೆ ಮಾರುವ ಮೂಲಕ ಇಂತಹ ಸಮಸ್ಯೆಗಳೆಲ್ಲಾ ಪರಿಷ್ಕಾರವಾಗುತ್ತವೆ. ಹಣ ಬಹಳ ಕಾಲವಿರುತ್ತದೆ. ಭವಿಷ್ಯದ ವಿನಿಯೋಗಕ್ಕೆ ಹಣವನ್ನು ಕಾದಿಡಬಹುದು. ಕುರಿ, ಮೇಕೆ, ಅಕ್ಕಿಯಂತಹ ಸರಕುಗಳು ಸಂಗ್ರಹಿಸಲು ಬಹಳ ಸ್ಥಳ ಬೇಕಾಗುತ್ತದೆ. ಅಷ್ಟೇ ಅಲ್ಲದೆ ನಿಮ್ಮ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳಲು ಅವುಗಳನ್ನು ಮಾರುಕಟ್ಟೆಗೆ ಬಂಡಿ ಇಲ್ಲವೆ ಲಾರಿಗಳಲ್ಲಿ ರವಾನಿಸಬೇಕು. ಆದರೆ ಹಣಕ್ಕೆ ಅಷ್ಟು ಸ್ಥಳ ಅವಸರವಿರುವುದಿಲ್ಲ. ಚೀಲ ಇಲ್ಲ ಪ್ಯಾಕೇಟ್ (ಪರ್ಸು)ಗಳಲ್ಲಿ ಅದನ್ನು ಎಲ್ಲಿಗೆ ಬೇಕಾದರೂ ತೆಗೆದುಕೊಂಡು ಹೋಗಬಹುದು. ಅದು ಸಾಗಿಸಲು ಸುಲಭವಾದಂತದ್ದು.

## ಪರಿಣಾಮ ಕ್ರಮದಲ್ಲಿ ಹಣ
## (Evolution of forms of Money)

ಪ್ರಪಂಚವೆಲ್ಲಾ ಜನರು ವಸ್ತು ವಿನಿಮಯ ವಿಧಾನವನ್ನು ಅವಲಂಬಿಸಿದ್ದಾರೆ. ಅದರಲ್ಲಿ ಸಮಸ್ಯೆಗಳನ್ನು ಕೂಡ ಎದುರಿಸುತ್ತಿದ್ದಾರೆ. ವ್ಯಾಪಾರ ವಿಸ್ತರಿಸಿದಾಗ ಅನೇಕ ಸರಕುಗಳನ್ನು ಕೊಂಡು ಮಾರುತ್ತಿದ್ದರು. ಅವುಗಳನ್ನು ದೂರ ಪ್ರಾಂತಗಳಿಗೆ ರಫ್ತು ಕೂಡ ಮಾಡುತ್ತಿದ್ದರು. ಇಂತಹ ಪರಿಸ್ಥಿತಿಯಲ್ಲಿ ಎಲ್ಲಾ ಸಮಾಜದಲ್ಲಿ ಯಾವುದೋ ಒಂದು ರೂಪದಲ್ಲಿ ಹಣ ಚಲಾವಣೆಗೆ ಬಂದಿತು. ಉದಾಹರಣಗೆ ಬಹಳ ಪುರಾತನ ಕಾಲದಲ್ಲಿ ದಾನ್ಯ, ಪಶುಗಳನ್ನು ಸಂಪತ್ತಾಗಿ

SCERT TELANGANA




*ಚಿತ್ರ 7.1: ವಿವಿಧ ಕಾಲದ ರಾಜರ ನಾಣ್ಯಗಳು*

ಉಪಯೋಗಿಸುತ್ತಿದ್ದರು. ಆದರೆ ಇವುಗಳ ಸಂಗ್ರಹಣೆ, ರಫ್ತು ಕಷ್ಟದ ಕೆಲಸವಾಗಿತ್ತು. ಅವುಗಳಿಗೆ ರೋಗಗಳು ಬರುವ ಸಾಧ್ಯತೆ ಇದೆ. ಆದ್ದರಿಂದ ಅವುಗಳ ಬಾಳಿಕೆ ಕೂಡ ಸಮಸ್ಯೆಯಾಗಿತ್ತು.

ಕಾಲ ಕ್ರಮೇಣದಲ್ಲಿ ಅಪರೂಪದ, ಆಕರ್ಷಣೆಯವಾದ ಲೋಹಗಳನ್ನು ವಿನಿಮಯ ಮಾಧ್ಯಮವಾಗಿ ಪ್ರಜೆಗಳು ಉಪಯೋಗಿಸಲು ಜನರು ಪ್ರಾರಂಭಿಸಿದರು. ರಾಗಿ, ಇತ್ತಾಳೆ, ಬೆಳ್ಳಿ, ಬಂಗಾರದಂತಹ ಹಾಳಾಗದಂತೆ ಬಹಳ ಕಾಲ ಇರುತ್ತವೆ. ಸಣ್ಣ ಭಾಗಗಳಾಗಿ ಮಾಡಬಹುದು. ಸುಲಭವಾಗಿ ರವಾನಿಸಬಹುದು. ಇದು ಕೊರೆತೆಯ ವಸ್ತುವಾದ್ದರಿಂದ ಇದನ್ನು ಎಲ್ಲರೂ ಅಂಗೀಕರಿಸುತ್ತಾರೆ. ಪ್ರಜೆಗಳು ತಮ್ಮ ಕೈಯಲ್ಲಿರುವ ಹಣ ಮೌಲ್ಯವುಳ್ಳದ್ದು ಬೇರೆಯವರು ಅದನ್ನು ಅಂಗೀಕರಿಸುತ್ತಾರೆಂದು ಜನರಿಗೆ ಗೊತ್ತು. ಆದ್ದರಿಂದ ತಮ್ಮ ಸರಕುಗಳನ್ನು ಹಣಕ್ಕೆ ಮಾರಿಕೊಳ್ಳುತ್ತಿದ್ದರು. ದಾನ್ಯ, ಪಶುಗಳ ಬೆಲೆ ಕಡಿಮೆಯಾದಂತೆ ಹಣದ ಬೆಲೆ ಕಡಿಮೆಯಾಗುತ್ತದೆಂದು ಅವರು ಭಯ ಪಡುವ ಅವಸರವಿಲ್ಲ. ಆದರೆ ವಸ್ತು ವಿನಿಮಯದಲ್ಲಿನ ಎಲ್ಲಾ ಸಮಸ್ಯೆಗಳು ಈ ವಿಧವಾದ ಹಣದಿಂದ ಪರಿಷ್ಕಾರವಾಗಲಿಲ್ಲ. ಹೊಸ ಸಮಸ್ಯೆಗಳು ಕೂಡ ಸಂಭವಿಸಿದವು. ಲೋಹಗಳಿಂದ ವಿನಿಮಯ ಮಾಡುವಾಗ ಪ್ರತಿ ಸಾರಿ ಅದನ್ನು ಅಳತೆ ಮಾಡಬೇಕಾಗುತ್ತಿತ್ತು. ನಂತರ ಲೋಹಗಳ ಗುಣಮಟ್ಟದ ಕಡೆ ವ್ಯಾಪಾರಸ್ಥರಿಗೆ ಅನುಮಾನ ಉಂಟಾಗುತ್ತಿತ್ತು. ವಿನಿಮಯದಲ್ಲಿ ಸ್ವಚ್ಛವಾದ ಬೆಳ್ಳಿ, ಬಂಗಾರ ದೊರೆಯದೆ ಹೋಗಬಹುದು. ಕೆಲವು ಸಮಯದ ನಂತರ ವಿನಿಯೋಗಕ್ಕೆ ಉಪಯೋಗಿಸಿದ ಲೋಹ ಗುಣಮಟ್ಟದಲ್ಲಿ ನಂಬಿಕೆ ದೊಡ್ಡ ಸಮಸ್ಯೆಯಾಗಿ ಬದಲಾಯಿತು. ಈ ಪರಿಸ್ಥಿತಿಯಲ್ಲಿ ಕೆಲವು ಜನ ರಾಜರು ಮೇಲೆ ಹೆಸರಿಸಿದ ಸಮಸ್ಯೆಗಳನ್ನು ಕೆಲವರು ಪರಿಷ್ಕರಿಸುತ್ತಾ ಅವರಿಗೆ ಅನುಕೂಲವಾದ ವಿಧಾನಗಳನ್ನು ರೂಪಿಸಿದ್ದರು. ಪ್ರಮಾಣಿಕವಾದ ಆಕೃತಿ, ತೂಕ, ಗುಣಮಟ್ಟವನ್ನು ಹೊಂದಿದ ನಾಣ್ಯಗಳನ್ನು ರಾಜರ ಟಂಕ ಶಾಲೆಯಲ್ಲಿ ತಯಾರು ಮಾಡಲು ಪ್ರಾರಂಭಿಸಿದರು. ಪ್ರತಿ ಸಾರಿ ಇವುಗಳನ್ನು ತೂಕ ಹಾಕುವ ಕೆಲಸವಿಲ್ಲ. ಗುಣಮಟ್ಟಕ್ಕೆ ಸಂಬಂಧಿಸಿದಂಥೆ ಭರವಸೆ (ನಂಬಿಕೆ) ಏರ್ಪಟ್ಟಿತು. ಅವುಗಳನ್ನು ತೆಗೆದುಕೊಂಡು ಹೋಗುವುದು ಸುಲಭ. ರೋಮನ್ನರ ಕಾಲದಲ್ಲಿ ಬೀಸೆಂಟ್ ಎಂಬ ಬಂಗಾರದ ನಾಣ್ಯವು ಗುಣಮಟ್ಟದಿಂದ ಕೂಡಿತು. ಮೌರ್ಯರ ಕಾಲದಲ್ಲಿ ಪಾಣಾ ಎನ್ನುವ ಬೆಳ್ಳಿ ನಾಣ್ಯ ಗುಣಮಟ್ಟದಿಂದ ಕೂಡಿತು. ವ್ಯಾಪಾರಸ್ಥರು, ಪ್ರಜೆಗಳು ನಾಣ್ಯಗಳನ್ನು ಹಣದ ರೂಪದಲ್ಲಿ ಅನುಮೋದಿಸುತ್ತಾ ಸಾಗಿದರು.

- ಹಣವಾಗಿ ಲೋಹಗಳನ್ನು ಏಕೆ ಆಯ್ದುಕೊಂಡರು ?
- ನಾಣ್ಯಗಳನ್ನು ಮುದ್ರಿಸುವುದು ಉತ್ತಮ ಆಲೋಚನೆಯೇ ?
- ನಾಣ್ಯಗಳನ್ನು ಮುದ್ರಿಸುವುದರಿಂದ ಆಡಳಿತಗಾರರಿಗೆ ಎಂತಹ ಪ್ರಯೋಜನವಿರುತ್ತದೆ ? ಮೂರು ಕಾರಣಗಳನ್ನು ಹೆಸರಿಸಿರಿ.

## ಕಾಗದದ ಹಣ, ಬ್ಯಾಂಕುಗಳ ಅವಶ್ಯಕತೆ (Paper Money and Emergence of Banks)

ದೊಡ್ಡ ಮೊತ್ತದಲ್ಲಿ ಸರಕುಗಳನ್ನು ಕೊಂಡು, ಮಾರುವವರು ಈ ವ್ಯಾಪಾರಸ್ಥರಿಗಾಗಿ ದೊಡ್ಡ ಮೊತ್ತದಲ್ಲಿ ಬೆಳ್ಳಿ, ಬಂಗಾರ ನಾಣ್ಯಗಳನ್ನು ಭದ್ರಪಡಿಸುವ ಪ್ರದೇಶಗಳ ಗೋಸ್ಕರ ಹುಡುಕಲು ಪ್ರಾರಂಭಿಸಿದರು. ಅವರು ಹಣಕ್ಕೆ ರಕ್ಷಣೆ ಕಲ್ಪಿಸುವ ಅಕ್ಕಸಾಲಿಗರ ಹತ್ತಿರ ಹೋದರು. ಅಕ್ಕಸಾಲಿಗನು ತಕ್ಕ ಜಾಗ್ರತೆಗಳನ್ನು ತೆಗೆದುಕೊಂಡು ಅವುಗಳನ್ನು ಭದ್ರಪಡಿಸಿ ಅವರಿಗೆ ಅವಶ್ಯಕತೆ ಇದ್ದಾಗ ಅವುಗಳನ್ನು ದೊರೆಯುವಂತೆ ರಕ್ಷಿಸುತ್ತಿದ್ದನು. ಈ ವಿಧಾನ ಖ್ಯಾತಿ ಹೊಂದಿತ್ತು. ಅಕ್ಕಸಾಲಿಗರ ಮೇಲೆ ಮತ್ತು ಸರಫ್ (ಸಾಲ ಕೋಡುವವ)ಗಳ ಮೇಲೆ ನಂಬಿಕೆ ಹೆಚ್ಚಾಯಿತು.

ಅಕ್ಕಸಾಲಿಗರು ಸಾಲಗಳನ್ನು ಕೂಡ ಕೊಡುತ್ತಿದ್ದರು. ಇವರಿಗೆ ಅನೇಕ ಪ್ರಸಿದ್ಧಿ ಹೊಂದಿದ ಪಟ್ಟಣ ಗಳಲ್ಲಿ ಶಾಖೆಗಳಿದ್ದವು. ಈ ವಿಧಾನ ಕಾಗದದ ಹಣ ಇಲ್ಲವೆ ಹುಂಡಿಗಳೆನ್ನುವ ಹೊಸ ವಿಧಾನಕ್ಕೆ ದಾರಿ ಮಾಡಿಕೊಟ್ಟಿತು. ಉದಾಹರಣೆಗೆ ಸೋಮು ವಿಜಯವಾಡಕ್ಕೆ ಸೇರಿದ ಯಂತ್ರ

SCERT TELANGANA

ಪರಿಕರಗಳ ವ್ಯಾಪಾರಿ. ಹೈದರಾಬಾದ್‌ನಲ್ಲಿನ ಚಂದು ಹತ್ತಿರ ಯಂತ್ರಗಳನ್ನು ಕೊಂಡುಕೊಳ್ಳಲು ಹೋದನು. ಹೈದರಾಬಾದ್‌ಗೆ ಸಾಗಿಸಲು ಬಂಗಾರದ ನಾಣ್ಯಗಳು ತೆಗೆದುಕೊಂಡು ಹೋಗುವುದು ಅಪಾಯಕರವಾದ್ದರಿಂದ ತನ್ನ ಹತ್ತು ಬಂಗಾರದ ನಾಣ್ಯಗಳನ್ನು ಅಕ್ಕಸಾಲಿಗನ ಹತ್ತಿರವಿಟ್ಟು ಆತನ ಹತ್ತಿರದಿಂದ ತನ್ನ ಹೆಸರಿನಲ್ಲಿ ಒಂದು ರಶೀದು ಪಡೆದನು. ಆ ರಶೀದು ಏನು ತಿಳಿಸುತ್ತದೆ ಎಂದರೆ ನಾನು 10 ಬಂಗಾರದ ನಾಣ್ಯಗಳನ್ನು ಕಟ್ಟುತ್ತೇನೆಂದು ಪ್ರಮಾಣ ಮಾಡುತ್ತಿದ್ದೇನೆ. ಈಗ ಚಂದುನಿಂದ ಸೋಮು ಯಂತ್ರಗಳನ್ನು ಕೊಂಡನು. ಅಕ್ಕಸಾಲಿಗನು ಕೊಟ್ಟ ರಶೀದಿಯನ್ನು ಚಂದುಗೆ ಕೊಟ್ಟು ಅವರ ಖಾತೆಯಿಂದ ಹತ್ತು ನಾಣ್ಯಗಳನ್ನು ತೆಗೆದುಕೊ ಎಂದು ಸೋಮು ಹೇಳಿದನು. ಆ ಖಾತೆಗೆ ಯಾವಾಗ ಬೇಕೋ ಆಗ ಹೋಗಿ 10 ನಾಣ್ಯಗಳನು ತೆಗೆದುಕೊಳ್ಳಬಹುದೆಂದು ಚಂದುಗೆ ಗೊತ್ತು ಆದರೆ ಅತನು ನಾಣ್ಯಗಳನ್ನು ತೆಗೆದುಕೊಳ್ಳಲು ಹೋಗಲಿಲ್ಲ. ಕಬ್ಬಿಣ, ಉಕ್ಕನ್ನು ಮಾರುವ ಸಯ್ಯದ್ ಹತ್ತಿರಕ್ಕೆ ಹೋಗಿ ಅವನ್ನು ಕೊಂಡುಕೊಂಡನು, ಅದಕ್ಕೆ ಬದಲಾಗಿ ಸೋಮು ಕೊಟ್ಟ ಹತ್ತು ನಾಣ್ಯಗಳ ರಶೀದಿ ಕೊಟ್ಟನು. ಆ ಅಕ್ಕಸಾಲಿಗನಿಂದ ಹತ್ತು ನಾಣ್ಯಗಳು ತೆಗೆದುಕೋ ಎಂದು ಸಯ್ಯದ್‌ಗೆ ಹೇಳಿದನು. ಆ ಅಕ್ಕಸಾಲಿಗನು ಎಲ್ಲರಿಗೂ ಗೊತ್ತು ಆದ್ದರಿಂದ, ರಶೀದು ತೋರಿಸಿದವರಿಗೆ ನಾಣ್ಯಗಳು ಕೊಡುತ್ತಾನೆಂಬ ನಂಬಿಕೆ ಇದೆ. ಆದ್ದರಿಂದ ಸಯ್ಯದ್ ಯಾವುದೇ ಅಭ್ಯಂತರವಿಡದೆ ರಶೀದಿಯನ್ನು ತೆಗೆದು ಕೊಂಡನು. ಸೋಮು ಮೊದಲು ತೆಗೆದುಕೊಂಡ ರಶೀದು ಆರ್ಥಿಕ ವ್ಯವಸ್ಥೆಯಲ್ಲಿ ಒಬ್ಬರಿಂದ ಮತ್ತೊಬ್ಬರಿಗೆ ಚಲಾವಣೆಯಾಗುತ್ತಾ, ಚಲಾವಣೆಯ ಮಧ್ಯಮವಾಗಿ ಎಲ್ಲರ ಅಂಗೀಕಾರ ಪಡೆದಿದೆ. ಇಂತಹ ರಶೀದಿ ಮೇಲೆ ಇರುವ ನಂಬಿಕೆಯ ಕಾರಣವಾಗಿ ಹೊಸ ವಿಧವಾಗಿ ಹಣವು ಕೆಲಸ ಮಾಡುತ್ತದೆ.

ಭಾರತದೇಶದಲ್ಲಿ ಮೊದಲು ಬ್ಯಾಂಕರರಾದ ಬೆಂಗಾಲ್‌ಗೆ ಸೇರಿದ ಜಗತ್‌ಸೇರ್‌ರು, ಪಾಟ್ನಾಗೆ ಸೇರಿದ ಷಾ, ಸೂರತ್‌ಗೆ ಸೇರಿದ ಅರುಣ್ ಜೀನಾಥ್‌ಜಿ, ಮದ್ರಾಸಿಗೆ ಸೇರಿದ ಚೆಟ್ಟಿಯಾರ್ ಮೊದಲಾದವರು ಎಷ್ಟೋ ಹಣವನ್ನು ಖ್ಯಾತಿಯನ್ನು ಅನುಭವಿಸಿದ್ದಾರೆ. ಅವರ ರಶೀದಿಗಳನ್ನು ಹುಂಡಿಗಳೆನ್ನುವ ಕಾಗದದ ಹಣವನ್ನು ದೇಶವೆಲ್ಲಾ ಮತ್ತು ವಿದೇಶದಲ್ಲೂ ಕೂಡ ಅಂಗೀಕರಿಸುತ್ತಿದ್ದರು.

ಬ್ಯಾಂಕುಗಳು ಆವಿರ್ಭವಿಸಲು ಮತ್ತೊಂದು ವಿಭಿನ್ನವಾದ ಕಥೆಯನ್ನು ನೋಡೋಣ. 1606ರಲ್ಲಿ ಯುರೋಪ್‌ನಲ್ಲಿ ಆಮ್‌ಸ್ಟಾರ್‌ಡಾಮ್ ಪ್ರಧಾನ ವಾಣಿಜ್ಯ ಕೇಂದ್ರವಾಗಿತ್ತು. ಇಲ್ಲಿ ವಿನಿಮಯಕ್ಕೆ ಸರ್ಕಾರ ಅಂಗೀಕರಿಸಿದ 846 ವಿಧಗಳ ಬಂಗಾರ, ಬೆಳ್ಳಿ ನಾಣ್ಯಗಳಿದ್ದವು. ಆದರೆ ವ್ಯಾಪಾರಸ್ಥರು ಒಬ್ಬರಿಗೊಬ್ಬರು ಸಂದೇಹಿಸುತ್ತಾ ಇದ್ದರು. ಈ ನಾಣ್ಯಗಳ ಬಾರ, ಗುಣಮಟ್ಟದ ಕಡೆ ಯಾರಿಗೂ ನಂಬಿಕೆ ಇರಲಿಲ್ಲ. ಆಮ್‌ಸ್ಟಾರ್‌ಡಾಮ್ ವ್ಯಾಪಾರಿಗಳೆ ಸಮಾವೇಶ ಗೊಂಡು ಈ ಸಮಸ್ಯೆಗೆ ಪ್ರತ್ಯೇಕ ಪರಿಷ್ಕಾರವನ್ನು ಕಂಡು ಹಿಡಿದರು. ಆ ನಗರ ಒಡೆತನದಲ್ಲಿರುವ ಒಂದು ಬ್ಯಾಂಕನ್ನು ಅವರು ಸ್ಥಾಪಿಸಿದರು. ಒಬ್ಬ ವ್ಯಾಪಾರಗಾರ ತನ್ನ ನಾಣ್ಯಗಳನ್ನು ಬ್ಯಾಂಕಿಗೆ ತೆಗೆದುಕೊಂಡು ಹೋಗಿ ಕೊಟ್ಟರೆ ಬ್ಯಾಂಕು ಆತನು ಕೊಟ್ಟ ನಾಣ್ಯಗಳ ತೂಕ, ಗುಣಮಟ್ಟವನ್ನು ಪರಿಶೀಲಿಸಿ ಒಂದು ರಶೀದು ಕೊಟ್ಟು ಆತನ ಹೆಸರಿನ ಒಂದು ಖಾತೆಯನ್ನು ತೆಗೆಯುತ್ತದೆ. ಆ ವ್ಯಾಪಾರಿ ತನಗೆ ಬೇಕೆಂದಾಗ ಸ್ವಚ್ಛವಾದ ಬಂಗಾರ ಪಡೆಯಬಹುದು. ಅವಸರವಾದರೆ ಇದರಲ್ಲಿ ಸ್ವಲ್ಪ ಮೊತ್ತ ಇನ್ನೊಬ್ಬ ವ್ಯಕ್ತಿಗೆ ಬದಲಿಸಬಹುದು. ವ್ಯಾಪಾರಸ್ಥರಿಗೆ ಇದು ಅನುಕೂಲವಾಗಿದೆ.

ಬ್ಯಾಂಕು ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿತ್ತು. ಅದನ್ನು ವ್ಯಾಪಾರಸ್ಥರೆಲ್ಲರೂ ನಂಬುತ್ತಿದ್ದರು. ನಾಣ್ಯಗಳಿಗೆ ಬದಲಾಗಿ ಬ್ಯಾಂಕು ರಶೀದಿಯನ್ನು ಕೇಳುತ್ತಿದ್ದರು. ಇಲ್ಲವೆ ತಮ್ಮ ಖಾತೆಯಲ್ಲಿ ಬದಲಿ ಮಾಡು ಎನ್ನುತ್ತಿದ್ದರು. ಕೇಳಿದಾಗ ಬ್ಯಾಂಕು ತಮಗೆ ಸ್ವಚ್ಛವಾದ ಬಂಗಾರ ಕೊಡುತ್ತದೆ ಎಂದು ವ್ಯಾಪಾರಸ್ಥರಿಗೆ ನಂಬಿಕೆಯಿತ್ತು. ಬ್ಯಾಂಕಿನಲ್ಲಿ ಜಮ ಮಾಡಿದ ಮೊತ್ತ ಹೊಸ ವಿಧವಾದ ಹಣವಾಗಿ ಬದಲಾಯಿತು. ಈ ಬ್ಯಾಂಕು ವ್ಯಾಪಾರ ಬೆಳೆದು ಅದು ಎರಡು ಶತಮಾನಗಳವರೆಗೆ ಜಯಶಾಲಿಯಾಗಿ ಕೆಲಸ ಮಾಡಿತು.

- ಅಕ್ಕಸಾಲಿಗರು ಕೊಟ್ಟ ರಶೀದಿಗಳು ಹಣವಾಗಿ ಏಕೆ ಕೆಲಸ ಮಾಡುತ್ತವೆ ?
- ಅಕ್ಕಸಾಲಿಗರ ನಂಬಿಕೆ ವಿಫಲಗೊಳ್ಳುವ ಸಂದರ್ಭಗಳಾವುವು ?
- ಆಮ್‌ಸ್ಟಾರ್‌ಡಾಮ್‌ನಲ್ಲಿ ವ್ಯಾಪಾರಸ್ಥರು ಎಂತಹ ಸಮಸ್ಯೆಗಳನ್ನು ಎದುರಿಸಿದರು ? ಅವುಗಳಿಗೆ ಅವರು ಯಾವ ಪರಿಷ್ಕಾರವನ್ನು ಕಂಡುಕೊಂಡರು ?
- ಎರಡು ಶತಮಾನಗಳ ನಂತರ ಈ ಬ್ಯಾಂಕು ನಾಶ ಹೊಂದಿದವು. ಇದಕ್ಕೆ ಕಾರಣಗಳೇನಾಗಿರಬಹುದು ಚರ್ಚಿಸಿರಿ.
- ಪ್ರಸ್ತುತ ದಿನಗಳಲ್ಲಿ ರೂಪಾಯಿ ನೋಟುಗಳ ಮೇಲೆ ಇರುವ ಭರವಸೆ ಓದಿರಿ. ಯಾರು ಭರವಸೆ ಕೊಡುತ್ತಿದ್ದಾರೆ ? ಯಾರಿಗೆ ? ಇದು ಏಕೆ ಮುಖ್ಯ? ಚರ್ಚಿಸಿರಿ.

SCERT TELANGANA

# ಬ್ಯಾಂಕಿಂಗ್ (BANKING)

## ಆಧುನಿಕ ಬ್ಯಾಂಕುಗಳು (Modern Banks)

- ನೀವು ಯಾವಾಗಾದರೂ ಬ್ಯಾಂಕು ಒಳಗಡೆ ಹೋಗಿದ್ದೀರಾ ? ನಿಮಗೆ ಗೊತ್ತಿರುವ ಕೆಲವು ಬ್ಯಾಂಕುಗಳ ಹೆಸರುಗಳನ್ನು ಹೇಳಿರಿ.
- ನೀವು ಬ್ಯಾಂಕು ಒಳಗಡೆ ಹೋದರೆ ವಿವಿಧ ಕೌಂಟರುಗಳ ಹತ್ತಿರ ಖಾತೆಯ ಪುಸ್ತಕಗಳು / ಕಂಪ್ಯೂಟರ್ ಸಹಾಯದಿಂದ ಖಾತೆದಾರರೊಂದಿಗೆ ವ್ಯವಹರಿಸುವ ಉದ್ಯೋಗಸ್ಥರು ಕಂಡುಬರುತ್ತಾರೆ. ಕೆಲವು ಕೌಂಟರುಗಳ ಹತ್ತಿರ ಖಾತೆದಾರರು ಹಣವನ್ನು ಜಮ ಮಾಡುವುದು, ಕೆಲವು ಹತ್ತಿರ ಹಣ ತೆಗೆದುಕೊಳ್ಳುವುದು ಕೂಡ ನೋಡಿರುತ್ತೀರಿ. ಒಂದು ಕ್ಯಾಬಿನೆಟ್ ಬ್ಯಾಂಕು ಮೇನೇಜರ್ ಕುಂತಿರುತ್ತಾರೆ. ಈ ಬ್ಯಾಂಕು ಉದ್ಯೋಗಸ್ಥರು ಏನು ಮಾಡುತ್ತಾರೆ?

## ವಾಣಿಜ್ಯ ಬ್ಯಾಂಕುಗಳು (Commercial Banks)

ವಾಣಿಜ್ಯ ಲಾವಾದೇವಿಗಳನ್ನು ನಿರ್ವಹಿಸುವುದೇ ಬ್ಯಾಂಕಿಂಗ್ ಇದರಲ್ಲಿ ಪ್ರಜೆಗಳ ಹತ್ತಿರದಿಂದ ಹಣ ಜಮ ಮಾಡಿಕೊಳ್ಳುತ್ತಾರೆ. ಈ ಹಣವನ್ನು ಒಂದು ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ಬದಲಿಸಬಹುದು. ವ್ಯಾಪಾರಸ್ಥರು, ಕೈಗಾರಿಕಾಗಾರರು, ರೈತರು, ವ್ಯಕ್ತಿಗಳಿಗೆ ಬ್ಯಾಂಕುಗಳು ಸಾಲ ಕೂಡ ಕೊಡುತ್ತವೆ. ಇಂತಹ ಬ್ಯಾಂಕುಗಳನ್ನು ವಾಣಿಜ್ಯ ಬ್ಯಾಂಕುಗಳು ಎನ್ನುತ್ತಾರೆ. ಈ ಎರಡು ವಿಧವಾದ ಅಂಶಗಳನ್ನು ಪರಿಶೀಲಿಸೋಣ.

## ಹಣ ಜಮ (Deposits) :

ಪ್ರಜೆಗಳು ಬ್ಯಾಂಕುಗಳಲ್ಲಿ ಸಂಗ್ರಹಿಸಿಕೊಳ್ಳುವ ಹಣವನ್ನು ಜಮ ಎನ್ನುತ್ತಾರೆ. ಬ್ಯಾಂಕುಗಳಲ್ಲಿ ಹಣ ಜಮ ಮಾಡುವಲ್ಲಿ ಅನೇಕ ವಿಧಾನಗಳಿವೆ. ಇವುಗಳಲ್ಲಿ ಕೆಲವನ್ನು ಕುರಿತು ಇಲ್ಲಿ ತಿಳಿದುಕೊಳ್ಳೋಣ.

## ಉಳಿತಾಯ ಖಾತೆಗಳು, ಜಮಗಳು( ಠೇವಣಿಗಳು) (Savings Deposits or Savings Accounts)

ಗೀತ ತನ್ನ ಸಂಬಳದಿಂದ 5000 ರೂಪಾಯಿಗಳು ಉಳಿತಾಯ ಮಾಡಿದಳು. ಆ ಮೊತ್ತವನ್ನು ಭದ್ರವಾಗಿ ಸಂಗ್ರಹಿಸಬೇಕೆಂದು ಕೊಂಡಳು. ಆಕೆ ತನ್ನ ಮನೆಗೆ ಹತ್ತಿರದಲ್ಲಿ ಇರುವ ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ ಶಾಖೆಗೆ ಹೋಗಿ ಅಲ್ಲಿ ಒಂದು ಉಳಿತಾಯ ಖಾತೆ ತೆಗೆದಳು. ಆ ಹಣದ ಮೇಲೆ ಆಕೆಗೆ ಸ್ವಲ್ಪ ಬಡ್ಡಿ ಬರುತ್ತದೆ. ಹಣ ಕ್ಷೇಮವಾಗಿರುತ್ತದೆ. ಎಲ್ಲವುದಕ್ಕಿಂತಲು ಮುಖ್ಯವಾದದ್ದು, ಯಾವಾಗಬೇಕೆಂದರೆ ಆಗ ಆಕೆ ಹಣ ತೆಗೆದುಕೊಳ್ಳಬಹುದು. ಕೇಳಿದಾಗ ಹಣ ಕೊಡುತ್ತೇನೆ ಎಂಬ ಭರವಸೆ ಬ್ಯಾಂಕು ಕೊಡುತ್ತದೆ.

### ತಿಳಿದುಕೊಳ್ಳಿ

- ಗೀತ ಎ.ಟಿ.ಎಂ.ಗೆ ಹೋಗಿ ಹಣ ಹೇಗೆ ತೆಗೆದು ಕೊಳ್ಳಬಹುದು ?
- ಆಕೆ ತನ್ನ ಖಾತೆ ಇರುವ ಬ್ಯಾಂಕಿಗೆ ಹೋದರೆ ಏನು ಮಾಡುತ್ತದೆ ?

### ಬ್ಯಾಂಕಿನಲ್ಲಿಯೇ ಹಣವನ್ನು ಏಕೆ ಉಳಿತಾಯ ಮಾಡಬೇಕು?

- ಹಣವನ್ನು ಮನೆಯಲ್ಲಿಯೇ ಇಟ್ಟುಕೊಂಡರೆ ಬಡ್ಡಿ ಬರುವುದಿಲ್ಲ. ಅದೇ ಬ್ಯಾಂಕಿನಲ್ಲಿ ಜಮ ಮಾಡಿದರೆ ನಮ್ಮ ಹಣಕ್ಕೆ ಬಡ್ಡಿ ಬಂದು ಹಣ ಬೆಳೆಯುತ್ತದೆ.
- ಗ್ರಾಮೀಣ ಪ್ರಾಂತಗಳಲ್ಲಿನ ಬಡಜನರ ಆದಾಯಗಳು ಅಪಸವ್ಯ ಕ್ರಮದಲ್ಲಿ ಇರುತ್ತವೆ. ಅಷ್ಟೇ ಅಲ್ಲದೇ ಅವರ ಆದಾಯವನ್ನು ಊಹಿಸುವುದು ಅಸಾಧ್ಯ ಅದೇ ವಿಧವಾಗಿ ಸರಿಯಾಗಿ ಬೆಳೆ ಬರದಿದ್ದರೆ, ಕೂಲಿ ಸಿಗದೇ ಇದ್ದಾಗ, ಕುಟುಂಬದಲ್ಲಿ ಊಹಿಸದ ಮರಣ ಸಂಭವಿಸಿದಾಗ, ವಿವಾಹಗಳಿಗಾಗಿ, ಹಬ್ಬಗಳ ಸಮಯದಲ್ಲಿ, ಜನರು ಹಣಕ್ಕಾಗಿ ಪರದಾಡ ಬೇಕಾಗುತ್ತದೆ. ಇಂತಹ ಪರಿಸ್ಥಿತಿಗಳಲ್ಲಿ ಬ್ಯಾಂಕ್ ಅಕೌಂಟ್‌ನಲ್ಲಿ ಮುಂದಾಲೋಚನೆಯಿಂದ ಹಣವನ್ನು ಉಳಿಸಿದರೆ ಆ ಹಣ ಅವರವರ ಅಗತ್ಯಗಳಿಗೆ ಅನುಕೂಲವಾಗಿರುತ್ತವೆ. ಅಷ್ಟೆ ಅಲ್ಲದೇ ಬ್ಯಾಂಕಿನಲ್ಲಿ ಹಣಕ್ಕೆ ರಕ್ಷಣೆ ಇರುತ್ತದೆ.
- ನೀವು ಸಂಪಾದಿಸಿದ ಹಣ ಜಮ ಇಡುವ ಬ್ಯಾಂಕಿಗೆ ಸರಕಾರದ ಮಾನ್ಯತೆ ಇದೆಯೋ ಇಲ್ಲವೋ ತಿಳಿದುಕೊಳ್ಳಿರಿ. ನಿಮ್ಮ ಅಕೌಂಟಿನ ವಿವರಗಳನ್ನು ಯಾರಿಗೂ ತಿಳಿಸಬೇಡಿ. ನಿಮ್ಮ ಅಕೌಂಟಿನ ನಿರ್ವಹಣೆಗೆ ಎಷ್ಟು ಮುಖ್ಯವೋ ಅದರ ವಿವರಗಳನ್ನು ಗುಟ್ಟಾಗಿಡುವುದು ಅಷ್ಟೇ ಮುಖ್ಯ.

### ಬೇಸಿಕ್ ಸೇವಿಂಗ್ ಬ್ಯಾಂಕ್ ಡಿಪಾಜಿಟ್ ಅಕೌಂಟ್ (BSBDA)

- ಕನಿಷ್ಠಮೂಲ ಧನವಿಲ್ಲದ (Zero balance) ಅಥವಾ ಕಡಿಮೆ ಮೂಲಧನದಿಂದ ಖಾತೆ ತೆರೆಯುವುದು.
- ಖಾತೆಯನ್ನು ಆರಂಭಿಸುವ ವ್ಯಕ್ತಿಗಳಿಗೆ ವಯಸ್ಸು, ಆದಾಯ, ಜಮಾ ಮಾಡಬೇಕಾದ ಕನಿಷ್ಠ ಹಣದಂ

SCERT TELANGANA

ಥಹ ಷರತ್ತುಗಳು ಇರುವುದಿಲ್ಲ.

- ತಿಂಗಳಿಗೆ 4 ಸಾರಿ ಹಣ ಪಡೆಯಲು (ATM ಉಪಯೋಗಿಸಿ ಪಡೆದವುಗಳೊಂದಿಗೆ) ಅವಕಾಶ ಕಲ್ಪಿಸಲಾಗಿದೆ.
- ಹಣ ಪಡೆಯುವುದು, ಡಿಪಾಸಿಟ್ (ಠೇವಣಿ) ಮಾಡುವುದು, ಎಲೆಕ್ಟ್ರಾನಿಕ್ ಹಣ ವಿನಿಮಯ ಮಾರ್ಗಗಳು/ಚೆಕ್ಕುಗಳ ಮೂಲಕ ಹಣವನ್ನು ಜಮಾ ಮಾಡುವಂತಹ ಸೇವೆಗಳನ್ನು ಪಡೆಯಬಹುದು.
- ಪ್ರಧಾನ ಮಂತ್ರಿ ಜನ್‌ಧನ್ ಯೋಜನೆ (PMJDY) : ಕೇಂದ್ರಸರಕಾರವು ಪ್ರಧಾನಮಂತ್ರಿ ಜನ್ ಧನ್ (PMJDY) ಯೋಜನೆಯನ್ನು ಆಗಸ್ಟು 2014 ರಂದು ಪ್ರಾರಂಭಿಸಿದೆ. ದೇಶದ ಬಡ ಜನರೆಲ್ಲರೂ Zero balance ನೊಂದಿಗೆ ಖಾತೆಯನ್ನು ತೆರೆಯುವ ಸೌಕರ್ಯ

### ಚಿಕ್ಕ ಖಾತೆ (Small Account)

ಒಂದುವೇಳೆ ಮೂಲ ಉಳಿತಾಯಖಾತೆ, ಸುಲಭ ತರಗೊಳಿಸಿದ "Know your customer (KYC)" ಷರತ್ತುಗಳಿಂದ ಆರಂಭಿಸಿದ್ದಾದರೆ ಇದು ಚಿಕ್ಕ ಖಾತೆಯನ್ನಾಗಿ ಪರಿಗಣಿಸಲಾಗುವುದು. ಚಿಕ್ಕ ಖಾತೆಗಳಿಗೆ ಈ ಕೆಳಗಿನ ಷರತ್ತುಗಳು ಅನ್ವಯವಾಗುತ್ತವೆ.

- ಈ ಖಾತೆಯ ಒಟ್ಟು ಜಮಾ ಒಂದು ವರ್ಷದಲ್ಲಿ ಒಂದು ಲಕ್ಷವನ್ನು ದಾಟಬಾರದು.
- ಈ ಖಾತೆಯಲ್ಲಿ ಯಾವುದೇ ಸಮಯದಲ್ಲಾಗಲೀ 50,000/= ಗರಿಷ್ಠ ಜಮಾ ಇರಬಾರದು.
- ನಗದು ರೂಪದಲ್ಲಾಗಲೀ, ಇತರ ವಿನಿಮಯ ರೂಪದಲ್ಲಾಗಲಿ ಹಣವನ್ನು ಪಡೆಯುವುದನ್ನು ಒಂದು ತಿಂಗಳಿನಲ್ಲಿ 10,000/- ರೂ. ಗಳಿಗಿಂತ ಅಧಿಕವಾಗಿರಬಾರದು.
- ಚಿಕ್ಕ ಖಾತೆಗಳು ಮೊದಲು 12 ತಿಂಗಳುಗಳವರೆಗೆ ಜಾರಿಯಲ್ಲಿರುತ್ತವೆ. ನಂತರ ಖಾತಾದಾರರು ಸಂಬಂಧಿಸಿದ ದಾಖಲಾತಿಗಳನ್ನು ಅಧಿಕಾರಿಕವಾಗಿ ಅರ್ಜಿ ಸಲ್ಲಿಸಿದ್ದನ್ನು ಸಾಬೀತು ಪಡಿಸಿದಲ್ಲಿ ಇದನ್ನು ಪುನಃ 12 ತಿಂಗಳುಗಳ ವರೆಗೆ ಪುನರುದ್ದರಿಸಬಹುದು.

ಯಾವಾಗಲೂ ಕ್ರೆಡಿಟ್ ಬ್ಯಾಲೆನ್ಸ್‌ನಲ್ಲಿ ಉಳಿಸಿಕೊಂಡಿದ್ದಾದರೆ ಇತರ ಬ್ಯಾಂಕಿಂಗ್ ಸೌಕರ್ಯಗಳಾದ ಇಂಟರ್‌ನೆಟ್ ಬ್ಯಾಂಕಿಂಗ್, ATM/ಡೆಬಿಟ್ ಕಾರ್ಡ್ ಮತ್ತು ಚೆಕ್‌ಬುಕ್ಸ್ ಪಡೆದುಕೊಳ್ಳಬಹುದು.

### ಕರೆಂಟ್ ಖಾತೆ ಜಮ (Current Account Deposits)

ಬಹಳ ಜನ ವ್ಯಾಪಾರದಾರರು, ಅಂಗಡಿಯವರು, ಕಂಪನಿಗಳಿಗೆ ಪ್ರತಿದಿನ ಆದಾಯ, ಖರ್ಚು ದೊಡ್ಡ




ಚಿತ್ರ 7.2: ಬ್ಯಾಂಕುಗಳಲ್ಲಿ ಹಣ

ಪ್ರಮಾಣದಲ್ಲಿರುತ್ತವೆ. ಸರಕುಗಳನ್ನು ಕೊಳ್ಳುವುದು, ಸಂಬಳಗಳು ಸಲ್ಲಿಸುವಂತವುಗಳಿಗಾಗಿ ಅನೇಕ ಬಾರಿ ಬ್ಯಾಂಕಿನಿಂದ ಹಣ ತೆಗೆದುಕೊಳ್ಳಬೇಕಾಗುತ್ತದೆ. ಅದೇ ರೀತಿ ದೊಡ್ಡ ದೊಡ್ಡ ವ್ಯಾಪಾರ ಸಂಸ್ಥೆಗಳಿಗೆ ತಮ್ಮ ಸರಕುಗಳು, ಸೇವೆಗಳು ಕೊಂಡುಕೊಳ್ಳುವುದರಿಂದ ಪ್ರತಿ ದಿನ ಹಣ ಬರುತ್ತಿರುತ್ತದೆ. ತಮಗೆ ವಿವಿಧ ವಸ್ತುಗಳು ಸರಪರ ಮಾಡಿದವರಿಗೆ, ಕೆಲಸ ಮಾಡಿದವರಿಗೆ ಸಂಬಳ ಮಾಡಬೇಕಾಗಿರುತ್ತದೆ. ಈ ವಿಧವಾದ ಹಣದ ಅವಸರಗಳಿಗೆ ಬ್ಯಾಂಕುಗಳು ಕರೆಂಟ್ ಖಾತೆ ಎಂಬ ಪ್ರತ್ಯೇಕ ಖಾತೆಯನ್ನು ಹೊಂದಿರುತ್ತದೆ. ಕರೆಂಟ್ ಖಾತೆಯಿಂದ ಎಷ್ಟು ಬಾರಿಯಾದರೂ ಹಣವನ್ನು ತೆಗೆದುಕೊಳ್ಳಬಹುದು. ಜಮ ಮಾಡಬಹುದು. ಇವುಗಳ ಮೇಲೆ ನಿರ್ಬಂಧ ಇರುವುದಿಲ್ಲ. ಚೆಕ್ಕು ಮೂಲಕ ವ್ಯಾಪಾರಸ್ಥರು ಕೈಗೊಳ್ಳಬಹುದು. ಆದ್ದರಿಂದ ದೊಡ್ಡ ಮೊತ್ತದಲ್ಲಿ ನಗದು ರೂಪದಲ್ಲಿ ವ್ಯವಹಿಸುವ ಅಪಾಯವಿರುವುದಿಲ್ಲ. ಆದರೆ ಕರೆಂಟು ಖಾತೆಯಲ್ಲಿರುವ ಒಟ್ಟು ಹಣದ ಮೇಲೆ ಬ್ಯಾಂಕು ಯಾವುದೇ ಬಡ್ಡಿ ವಿಧಿಸುವುದಿಲ್ಲ. ಬದಲಾಗಿ ಸೇವಾ ಸುಂಕ ವಸೂಲು ಮಾಡುತ್ತದೆ.

### ಫಿಕ್ಸ್‌ಡ್ ಡಿಪಾಜಿಟ್ (Fixed Deposit) :

- ಉಳಿತಾಯ ಖಾತೆ, ಕರೆಂಟು ಖಾತೆಗಳ ನಡುವಿನ ವ್ಯತ್ಯಾಸವೇನು ?

ಮಾನಸ್ವಿನಿಯವರ ತಾತಯ್ಯ ಆಕೆಗೆ ಒಂದು ಬಹುಮಾನ ಕೊಡಬೇಕೆಂದು ಕೊಂಡನು. ಆತನು ಆಕೆಗೆ ರೂ 10,000/- ಫಿಕ್ಸ್‌ಡ್ ಡಿಪಾಜಿಟ್ ಪತ್ರ ಕೊಟ್ಟನು. ಐದು ವರ್ಷಗಳವರೆಗೆ ನೀನು ಕಾಲೇಜಿಗೆ ಸೇರಬೇಕಾದಷ್ಟು ಈ ಮೊತ್ತ ಬೆಳೆಯುತ್ತದೆ. ಎಂದು ಅವರ ತಾತ ಹೇಳಿದನು. ಆ ಹಣ ಹೇಗೆ ಬೆಳೆಯುತ್ತದೆ?

ಫಿಕ್ಸ್‌ಡ್ ಡಿಪಾಜಿಟ್ ಅಥವಾ ಟರ್ಮ್ (ಕಾಲಾವಧಿ)

SCERT TELANGANA

ಡಿಪಾಜಿಟ್ ಎನ್ನುವುದನ್ನು ಅದು ಹಾಕಿದ ಕಾಲದೊಳಗೆ ಹಣ ತೆಗೆದುಕೊಳ್ಳಲು ಇಲ್ಲ. ಅದು ಒಂದು ವರ್ಷ, ಎರಡು ವರ್ಷ, ಐದು ಅಥವಾ ಏಳು ವರ್ಷಗಳಾಗಬಹುದು. ಫಿಕ್ಸ್‌ಡ್ ಡಿಪಾಜಿಟ್ ಮೇಲೆ ಹೆಚ್ಚು ಬಡ್ಡಿ ದೊರೆಯುತ್ತದೆ.

## ಬ್ಯಾಂಕು ವ್ಯವಸ್ಥೆ ಹೇಗೆ ಕೆಲಸ ಮಾಡುತದೆ ? (How does the system work?)

ಒಂದು ಬ್ಯಾಂಕು ಖಾತೆಯಲ್ಲಿ ಜಮ ಮಾಡಿದ ಚೆಕ್ಕಿನ ಮೂಲಕ ಮತ್ತೊಂದು ಖಾತೆಗೆ ಹಣ ಬದಲಾಯಿಸಬಹುದು. ಬ್ಯಾಂಕಿಂಗ್ ವ್ಯವಸ್ಥೆ ನಿರ್ವಹಿಸುವ ಈ ವಿಧಾನದಿಂದ ಬ್ಯಾಂಕುಗಳಲ್ಲಿ ಮಾಡಿದ ಜಮ ಹಣದಂತೆ ಕೆಲಸ ಮಾಡುತ್ತದೆ. ಅಂದರೆ ಬ್ಯಾಂಕು ಜಮ ಹಣಕ್ಕೆ ಸಮಾನ.

ಅನೇಕ ಪಟ್ಟಣ, ನಗರಗಳಲ್ಲಿ ಎಲ್ಲಾ ಬ್ಯಾಂಕು ಪ್ರತಿನಿಧಿಗಳು ಪ್ರತಿದಿನ ಸಮಾವೇಶಗೊಂಡು ಆ ದಿನ ಪ್ರತಿ ಬ್ಯಾಂಕಿಗೆ ಇತರ ಬ್ಯಾಂಕುಗಳಿಂದ ಬರಬೇಕಾಗಿದ್ದ ಮೊತ್ತವನ್ನು, ಹಾಗೆ ಇತರ ಬ್ಯಾಂಕುಗಳಿಗೆ ಕಟ್ಟಬೇಕಾದ ಮೊತ್ತವನ್ನು ನಿರ್ಧರಿಸಿಕೊಳ್ಳುತ್ತವೆ. ಸಹಿಮಾಡಿದ ಚೆಕ್ಕುಗಳನ್ನು ಒಬ್ಬರಿಗೊಬ್ಬರು ಬದಲಾಹಿಸಿ ಕೊಳ್ಳುತ್ತಾರೆ. ಒಂದು ಬ್ಯಾಂಕು ಕ್ಲಿಯರಿಂಗ್ ಬ್ಯಾಂಕಾಗಿ ಕೆಲಸ ಮಾಡುತ್ತದೆ. ಆ ಬ್ಯಾಂಕಿನಲ್ಲಿ ಉಳಿದ ಬ್ಯಾಂಕುಗಳಿಗೆಲ್ಲಾ ಖಾತೆಗಳಿರುತ್ತವೆ. ಬ್ಯಾಂಕುಗಳ ಮಧ್ಯ ವಸೂಲು, ಜಮ ಮಾಡು (ಕಟ್ಟು)ವುದನ್ನು ಈ ಕ್ಲಿಯರಿಂಗ್ ಬ್ಯಾಂಕು ನಿರ್ವಹಿಸುತ್ತದೆ.

ಹೊಸ ವಿಧಾನದಲ್ಲಿ ಎಲ್ಲಾ ಬ್ಯಾಂಕುಗಳು, ಅವುಗಳ ಎಲ್ಲಾ ಶಾಖೆಗಳು ಕಂಪ್ಯೂಟರ್ ಮೂಲಕ ಅನುಬಂಧಗೊಂಡಿರುತ್ತವೆ. ಎಲ್ಲಾ ಬ್ಯಾಂಕು ಖಾತೆಗಳನ್ನು, ಅವರ ಸಹಿಯನ್ನು ಎಲ್ಲಿ ಇದ್ದರೂ ಖಾತೆಯಲ್ಲಾದರೂ ಸರಿನೋಡಿಕೊಳ್ಳಬಹುದು ಆದ್ದರಿಂದ ಬ್ಯಾಂಕು ಪ್ರತಿನಿಧಿಗಳನ್ನು ಕಲಿಯಬೇಕಾದ ಕೆಲಸವಿಲ್ಲ. ಅದೇ ರೀತಿ ಬೇರೆ ಊರಿನಲ್ಲಿರುವ ಶಾಖೆಗಳಿಗೆ ಬ್ಯಾಂಕುಗಳು ಚೆಕ್ಕುಗಳನ್ನು ಕಳುಹಿಸುವ ಅವಸರವಿಲ್ಲ. ಒಂದು ಬ್ಯಾಂಕು7 ಮತ್ತೊಂದು ಬ್ಯಾಂಕು ಮಧ್ಯ ಲಾವಾದೇವಿಗಳನ್ನು ಅನುಸಂದಾನಗೊಳಿಸಿರುವ ಕಂಪ್ಯೂಟರ್ ಮೂಲಕ ನಿರ್ವಹಿಸುತ್ತಾರೆ. ಇದರಿಂದ ಕೆಲಸ ಬಹಳ ಸುಲಭ ಮಾತ್ರವಲ್ಲದೆ ಬಹಳ ಬೇಗ ಕೂಡ ಮುಗಿಯುತ್ತದೆ.

- ಉಳಿತಾಯಕ್ಕಾಗಿ ಫಿಕ್ಸ್‌ಡ್ ಡಿಪಾಜಿಟ್ಟ್‌ನ್ನು ಯಾವಾಗ ಉಪಯೋಗಿಸಿಕೊಳ್ಳಬೇಕು ?
- ಬಡ್ಡಿ 8% ಶೇಕಡ ಆದರೆ, 5 ವರ್ಷಗಳ ನಂತರ ಮಾನಸ್ವಿನಿಗೆ ಎಷ್ಟು ಹಣ ಬರುತ್ತದೆ ?
- ವೈದ್ಯ ಖರ್ಚಿಗಾಗಿ ಆಕೆಗೆ ಅತ್ಯವಸರವಾಗಿ ಹಣ ಅವಸರವಾಯಿತು ಎಂದುಕೊಳ್ಳೋಣ. ಬ್ಯಾಂಕಿನಲ್ಲಿ ಇರುವ ಫಿಕ್ಸ್‌ಡ್ ಡಿಪಾಜಿಟ್‌ನಿಂದ ಆ ಮೊತ್ತವನ್ನು ಆಕೆ ತೆಗೆದುಕೊಳ್ಳಬಹುದಾ ? ತೆಗೆದುಕೊಂಡರೆ ಏನಾಗುತ್ತದೆ ?

## ಚೆಕ್ಕುಗಳು (Cheques)

ಪ್ರಸ್ತುತ ಹಣವನ್ನು ಕಟ್ಟಲು, ತೆಗೆದುಕೊಳ್ಳಲು ಚೆಕ್ಕುಗಳನ್ನು ವಿಶಾಲ ವಾಗಿ ಉಪಯೋಗಿ ಸುತ್ತಿದ್ದಾರೆ. ಯಾರಿಗಾ ದರೂ ಹಣ ಕೊಡಬೇಕೆಂ ದರೆ ಆ ವ್ಯಕ್ತಿ ಹೆಸರಿನ ಮೇಲೆ ಚೆಕ್ಕು ಕೊಡುತ್ತಾರೆ. ಬೇರೆ ಊರಿನಲ್ಲಿರುವ ವ್ಯಕ್ತಿಗೆ ಹಣ ಕಳುಹಿಸ ಬೇಕೆಂದರೆ ಆ ವ್ಯಕ್ತಿ ಹೆಸರಿನ ಮೇಲೆ ಚೆಕ್ಕು ಬರೆದು ಅದನ್ನು ಪೋಸ್ಟ್‌ನಲ್ಲಿ ಕಳುಹಿಸಬಹುದು. ಬ್ಯಾಂಕು ಮೂಲಕ ಮತ್ತೊಬ್ಬರ ಖಾತೆಯೊಳಗೆ ಹಣವನ್ನು ಬದಲಾಯಿಸಲು ಕೂಡ ಚೆಕ್ಕನ್ನು ಉಪಯೋಗಿಸಬಹುದು. ವ್ಯಾಪಾರಿಗಳಲ್ಲಿ ಹಣ ತೆಗೆದುಕೊಳ್ಳುವುದು. ಕಟ್ಟುವುದಕ್ಕೆ ಸಂಬಂಧಿಸಿದ ಅನೇಕ ವ್ಯಾಪಾರಿಗಳಿರುತ್ತವೆ. ಈ ವ್ಯಾಪಾರಗಳಲ್ಲಿ ಮಾಧ್ಯಮವಾಗಿ ಚೆಕ್ಕುಗಳು ಮುಖ್ಯ ಪಾತ್ರವಹಿಸುತ್ತವೆ.

ಚೆಕ್ಕು ಹೇಗೆ ಬರೆಯಬೇಕೋ ಒಂದು ಉದಾಹರಣೆ ಪೇಜಿ 83 ನೋಡಿರಿ.

ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್‌ನಲ್ಲಿ ಚಂದ್ರ ಒಬ್ಬ ಖಾತೆದಾರ. ಆತನು ಕಂಚೆರ್ಲ ಸುಜತಾಳಿಗೆ ರೂ.1,75,000/- ಗಳು ಕಟ್ಟಬೇಕು. ಆತನು ಕಂಚರ್ಲ ಸುಜಾತ ಹೆಸರಿನ ಮೇಲೆ ಕ್ರಾಸ್ ಚೆಕ್ ಕೊಡುತ್ತಾನೆ.




ಚಿತ್ರ 7.3: ಮಾದರಿ ಚೆಕ್ಕು



SCERT TELANGANA

- ನಿಮ್ಮ ನೋಟ್‌ಪುಸ್ತಕದಲ್ಲಿ ಬ್ಯಾಂಕ್ ಚೆಕ್ಕ್‌ನ ಚಿತ್ರವನ್ನು ಬರೆದು ನಿಮ್ಮ ಪಕ್ಕದಲ್ಲಿ ಕೂತಿದ್ದ ಗೆಳೆಯನ ಹೆಸರಿನ ಮೇಲೆ ರೂ.1,50,000/- ಮೇಲೆ ಕಟ್ಟಲು ಒಂದು ಬ್ಯಾಂಕ್ ಚೆಕ್ಕು ಬರೆಯಿರಿ.
- ಕ್ರಾಸ್ ಮಾಡಿದ ಚೆಕ್ಕು ಕೊಡುವುದು ಏಕೆ ಉತ್ತಮ? ಚರ್ಚಿಸಿರಿ.
- ಚಂದ್ರ, ಕಂಚರ್ಲ ಸುಜಾತ ಖಾತೆಗೆ ರೂ.1,75,000/- ರೂಪಾಯಿಗಳನ್ನು ಎಲೆಕ್ಟ್ರಾನಿಕ್ ಪದ್ಧತಿಗಳಲ್ಲಿ ಹೇಗೆ ಡಿಪಾಜಿಟ್ ಮಾಡಬೇಕು. ಅದು ಹೇಗೆ ನಡೆಯುತ್ತದೆ. ಅದಕ್ಕೆ ಆತನಿಗೆ ಯಾವ ಸಮಾಚಾರ ಅವಸರ ಬ್ಯಾಂಕಿಗೆ ಭೇಟಿ ನೀಡಿ ವಿವರಗಳನ್ನು ಬರೆಯಿರಿ.
- ಚೆಕ್ಕು ಉಪಯೋಗಿಸದಂತೆ ಎಲೆಕ್ಟ್ರಾನಿಕ್ ಪದ್ಧತಿಯಲ್ಲಿ ಬ್ಯಾಂಕು ಮೂಲಕ ನೇರವಾಗಿ ಯಾವ ಯಾವ ಸಂದಾಯ ಮಾಡುತ್ತಾರೋ ಚರ್ಚಿಸಿ, ಅವುಗಳ ಪಟ್ಟಿ ತಯಾರಿಸಿ.

## ಡಿಮಾಂಡ್ ಡ್ರಾಫ್ಟ್ (D.D)

ಶ್ಲೋಕ ಎಂಬ ವಿದ್ಯಾರ್ಥಿನಿ P.U.C. ಸೀಟು ಪಡೆಯಲು ಅರ್ಜಿಸಲ್ಲಿಸಬೇಕಾಗಿದೆ. ಇದಕ್ಕಾಗಿ ಅವಳು ಅರ್ಜಿಯ ಜೊತೆ D.D.ಯನ್ನು ಸಂಬಂಧಿಸಿದ ಅಧಿಕಾರಿಗಳಿಗೆ ಕಳುಹಿಸಬೇಕಾಗಿದೆ.

ಕೆಲವು ಸಂಸ್ಥೆಗಳ ಸೇವೆಯನ್ನು ಪಡೆಯಬೇಕಾದರೆ ಸ್ವಲ್ಪ ಹಣವನ್ನು ಮುಂಚಿತವಾಗಿಯೇ ಸಂಬಂಧಿತ ಸಂಸ್ಥೆಗಳಲ್ಲಿ ತುಂಬಬೇಕು. ಈ ಹಣವನ್ನು D.D. ರೂಪದಲ್ಲಿ ಕಟ್ಟಬೇಕು. ಬ್ಯಾಂಕುಗಳು ನಮಗೆ ಒದಗಿಸುವ ಸವಲತ್ತುಗಳಲ್ಲಿ D.D. ಗಳೂ ಸೇರಿವೆ. D.D. ಗಳನ್ನು ಕೊಡಲು ಸ್ವಲ್ಪ ಹಣವನ್ನು ಸೇವಾತೆರಿಗೆಯಾಗಿ ಪಡೆಯುತ್ತಾರೆ. ಉದಾ: ಶ್ಲೋಕ ರೂ. 1000/- D.D. ತೆಗೆಯಬೇಕಾದರೆ ಬ್ಯಾಂಕಿಗೆ ರೂ. 30/- ಸೇವಾತೆರಿಗೆ ಸೇರಿ ರೂ. 1030/- ನೀಡಿ D.D. ಪಡೆಯಬೇಕು. D.D. ಯ ವಿನಿಮಯ ಬೆಲೆಯು D.D. ಯಲ್ಲಿ ನಮೂದಿಸಿದ ಬೆಲೆಗೆ ಸಮಾನವಾಗಿರುತ್ತದೆ. D.D. ಯಾರ ಹೆಸರಿಗೆ ಇರುತ್ತದೆಯೋ ಅರು ಈ D.D. ಯನ್ನು ಹಣವನ್ನಾಗಿ ಬದಲಿಸಿಕೊಳ್ಳಬಹುದು. ಅದೇ ಚೆಕ್ಕುಗಳಾದರೆ ಚೆಕ್ಕು ಕೊಟ್ಟವರ ಖಾತೆಯಲ್ಲಿ ಹಣ ಇರದಿದ್ದರೆ ಬ್ಯಾಂಕುಗಳು ಹಣ ಕೊಡುವುದಿಲ್ಲ. ಆಗ ಚೆಕ್ಕುಗಳು ತಿರಸ್ಕರಿಸಲ್ಪಡುತ್ತವೆ. ಅದೇ D.D. ಆದರೆ ಆ ಪರಿಸ್ಥಿತಿ ಇರುವುದಿಲ್ಲ, ಬ್ಯಾಂಕಿನ ಮುಂಗಡವಾಗಿ ಹಣ ಕೊಟ್ಟು -- ತೆಗೆದುಕೊಂಡಿರುತ್ತೇವೆ. ಆದ್ದರಿಂದ ವಿಧಗಳ ಪಾವತಿಗೆ D.D. ಗಳು ಆಮೋದಯೋಗ್ಯವಾಗಿರುತ್ತವೆ.

- ಚೆಕ್ಕುಗಳು - D.D. ಗಳ ನಡುವಿನ ವ್ಯತ್ಯಾಸಗಳೇನು ?
- ಚೆಕ್ಕುಗಳಿಗಿಂತ D.D. ಗಳು ಹೇಗೆ ಆಮೋದಯೋಗ್ಯವಾಗಿವೆ ?

### ಮಕ್ಕಳಿಗಾಗಿ ಬ್ಯಾಂಕ್ ಖಾತೆಗಳು :

- ಯಾವುದೇ ವಯಸ್ಸಿನ ಚಿಕ್ಕ ಮಕ್ಕಳು ಬಾಲಕ/ಬಾಲಕಿಯರ ಸಂರಕ್ಷಕರ ಅಥವಾ ಕಾನೂನಿನ ಪ್ರಕಾರ ನಿಯಮಿತವಾದ ಸಂರಕ್ಷಕರ ಮೂಲಕ ಉಳಿತಾಯ/ಫಿಕ್ಸ್/ರಿಕರಿಂಗ್ ಬ್ಯಾಂಕ್ ಡಿಪಾಜಿಟ್ ಖಾತೆಯನ್ನು ತೆರೆಯಬಹುದು.
- ಬ್ಯಾಂಕಿನಲ್ಲಿ ಜಾರಿಯಲ್ಲಿರುವ ನಷ್ಟನಿರ್ವಹಣೆ ವ್ಯವಸ್ಥೆಯನ್ನಾಧರಿಸಿ 10 ವII ವಯಸ್ಸು ಮೀರಿದ ಮಕ್ಕಳು ಸ್ವತಃ ಖಾತೆಯನ್ನು ತೆರೆದು, ವಿನಿಮಯ ಮಾಡಿಕೊಳ್ಳಲು ಅನುಮತಿಕೊಡಬೇಕು.
- ಇಂಟರ್ನೆಟ್ ಬ್ಯಾಂಕಿಂಗ್, A.T.M./ಡೆಬಿಟ್ ಕಾರ್ಡ್, ಚೆಕ್ಕು ಪುಸ್ತಕ ಮೊದಲಾದ ಬ್ಯಾಂಕಿಂಗ್ ಸವಲತ್ತುಗಳನ್ನು ಕೊಡಬಹುದು. ಆದರೆ ಈ ಕಿರಿಯ ಖಾತೆಗಳಿಂದ ಜಮಾಯಿಸಿದ ಹಣದಿಂದ ಮಾತ್ರವೇ ತೆಗೆದುಕೊಳ್ಳಲು ಅವಕಾಶವಿದೆ.

## ಸಾಲ (Loans) :

ಬ್ಯಾಂಕು ಎನ್ನುವುದು ಒಂದು ವ್ಯಾಪಾರ ಸಂಸ್ಥೆ. ಹಣ ಜಮ ಮಾಡಿದವರಿಗೆ ಅದು ಬಡ್ಡಿ ಕೊಡಬೇಕು. ಉದ್ಯೋಗಸ್ಥರಿಗೆ ವೇತನ ನೀಡಬೇಕು. ಸಾಧನೆ ಸಲಕರಣೆಗಳನ್ನು ಕೊಂಡು, ನಿರ್ವಹಿಸಬೇಕು. ಬಾಡಿಗೆ ಸಲ್ಲಿಸಬೇಕು, ಬ್ಯಾಂಕು ನಡೆಸಲು ಬೇಕಾದ ಇತರ ಖರ್ಚುಗಳನ್ನು ತುಂಬಬೇಕು. ಅಂತಿಮವಾಗಿ ಲಾಭ ಪಡೆಯಬೇಕು. ಆಗಾದರೆ ಅದಕ್ಕೆ ಆದಾಯ ಹೇಗೆ ಬರುತ್ತದೆ ?

ಪ್ರಜೆಗಳು ಉಳಿತಾಯ ಮಾಡಿದ ಹಣ ಜಮ ರೂಪದಲ್ಲಿ ಬ್ಯಾಂಕಿಗೆ ಸೇರುತ್ತದೆ. ಅವಶ್ಯಕತೆ ಇದ್ದಾಗ ತಮ್ಮ ಹಣ ತಮಗೆ ದೊರೆಯುತ್ತದೆ ಎಂಬ ನಂಬಿಕೆ ಇರುವವರೆಗೆ ಹಣ ಜಮ ಮಾಡಿದವರು ಅದನ್ನು ತಿರುಗಿ ತೆಗೆದುಕೊಳ್ಳಬೇಕೆಂದು ಕೊಳ್ಳುವುದಿಲ್ಲ. ಬಹಳ ಜನ ತಿಂಗಳ ಮೊದಲಿಗೆ ಹಣ ತೆಗೆದುಕೊಳ್ಳುತ್ತಾರೆ. ಹಣ ಜಮ ಮಾಡಿದವರು ರೈತರಾದರೆ ಅವರಿಗೆ ಕೆಲವು ಪ್ರತ್ಯೇಕ ಸಮಯದಲ್ಲಿ (ಮಳೆಗಾಲದಲ್ಲಿ) ಹಣದ ಅವಶ್ಯಕತೆ ಉಂಟಾಗುತ್ತದೆ. ತಮ್ಮ ಹತ್ತಿರ ಜಮವಾದ ಹಣದಲ್ಲಿ ಸ್ವಲ್ಪ ಮೊತ್ತವನ್ನೇ ನಗದು ರೂಪದಲ್ಲಿ ಇಟ್ಟುಕೊಂಡರೆ ಅವಶ್ಯಕತೆ

SCERT TELANGANA

ಇದ್ದವರಿಗೆ ಹಣ ಕೊಡಬಹುದು ಎಂಬ ಅನುಭವದ ಮೇಲೆ ಬ್ಯಾಂಕುಗಳು ಗ್ರಹಿಸಿವೆ. ಬೇಕೆಂದಾಗ ಹಣ ತೆಗೆದುಕೊಂಡು, ತಮ್ಮ ಖಾತೆಯಲ್ಲಿನ ಹಣವನ್ನು ಸಲ್ಲಿಸಲು ಉಪಯೋಗಿಸುವಷ್ಟು ಕಾಲ ಬ್ಯಾಂಕುಗಳ ಮೇಲೆ ಜನರ ನಂಬಿಕೆ ಮುಂದುವರಿಯುತ್ತದೆ.

ಇನ್ನೊಂದೆಡೆ ಬ್ಯಾಂಕುಗಳು ಪ್ರಜೆಗಳಿಗೆ ಸಾಲ ಕೊಡುತ್ತವೆ. ಈ ಸಾಲವನ್ನು ಅವರು ಬಡ್ಡಿ ಜೊತೆ ತಿರುಗಿ ಕೊಡುತ್ತಾರೆ. ಬ್ಯಾಂಕುಗಳು ಸರ್ಕಾರಕ್ಕೆ ಕೂಡ ಸಾಲ ಕೊಟ್ಟು ಬಡ್ಡಿಯನ್ನು ಪಡೆಯುತ್ತವೆ. ಬ್ಯಾಂಕುಗಳು ನೀಡಿದ ಸಾಲದ ಮೇಲೆ ಬರುವ ಬಡ್ಡಿ ಅದರ ಆದಾಯವಾಗುತ್ತದೆ.

- ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳುವವರೆಲ್ಲರಿಂದ ಒಂದೇ ವಿಧವಾದ ಬಡ್ಡಿ ವಸೂಲು ಮಾಡುತ್ತಾರಾ?
- ಸಾಲ ತೆಗೆದುಕೊಂಡವರು ಯಾರಾದರೂ ತಿರುಗಿ ಬ್ಯಾಂಕಿಗೆ ಸಲ್ಲಿಸಿದಿದ್ದರೆ ಏನಾಗುತ್ತದೆ ?

## ಸಾಲದ ವಿಧಗಳು (Types of Loans) :

ವ್ಯಾಪಾರದಾರರು, ಕೈಗಾರಿಕೆದಾರರು, ವಿದ್ಯಾರ್ಥಿಗಳು (ಶೈಕ್ಷಣಿಕ ಸಾಲ) ರೈತರು ಕೈ ಕೆಲಸದಾರಂತಹ ಅನೇಕ ಜನರಿಗೆ ಬ್ಯಾಂಕುಗಳು ಸಾಲ ಕೊಡುತ್ತವೆ. ಇವುಗಳಲ್ಲಿ ಕೆಲವನ್ನು ನೋಡೋಣ.

ರಹೀಮ್‌ನೊಬ್ಬ ಸಣ್ಣ ರೈತ. ಆತನಿಗಿರುವ 4 ಎಕರೆ ಭೂಮಿಯಲ್ಲಿ ಭತ್ತ ಬೆಳೆಸುತ್ತಾನೆ. ಬೀಜಬಿತ್ತುವ ಸಮಯದಲ್ಲಿ ಬೀಜಗಳಿಗೆ,ಗೊಬ್ಬರಕ್ಕೆ ಆತನಿಗೆ ಹಣ ಅವಶ್ಯಕತೆ ಉಂಟಾಯಿತು. ಆತನು ರೂ. 10,000 ರೂಪಾಯಿಗಳ ಸಾಲ ಮಾಡಿದನು. ಆತನು ತನ್ನ ಬೆಳೆಯನ್ನು ವತ್ತೆ ಹಿಟ್ಟು (ಬರವಸೆಗೆ ನೀಡಿ) ಬೆಳೆ ಮಾರಿದ ನಂತರ ವರ್ಷದೊಳಗೆ ರಹೀಮ್ ತನ್ನ ಸಾಲ ತೀರಿಸುತ್ತಾನೆ.

ಲೀಲಾ ಒಂದು ಪ್ಲಾಟು ಕೊಂಡುಕೊಳ್ಳಬೇಕೆಂದು ಕೊಂಡಳು. ಆ ಪ್ಲಾಟು ವತ್ತೆಹಿಟ್ಟು ಬ್ಯಾಂಕಿನಿಂದ 8 ಲಕ್ಷ ರೂಪಾಯಿಗಳ ಮನೆ ಸಾಲ ತೆಗೆದುಕೊಂಡಳು. ಪ್ರತಿ ತಿಂಗಳು ಆಕೆ ಸಂಬಂಳದಿಂದ ಸ್ವಲ್ಪ ಮೊತ್ತ ಉಳಿಸಿ ಬ್ಯಾಂಕಿಗೆ ಜಮ ಮಾಡುತ್ತಾಳೆ. ಬ್ಯಾಂಕು ಸಾಲ ಮೊತ್ತ ತೀರಿಸಿದ ನಂತರವೇ ಪ್ಲಾಟಿಗೆ ಸಂಬಂಧಿಸಿದ ಪತ್ರಗಳು ಆಕೆ ಕೈಗೆ ತಲುಪುತ್ತವೆ.

ಶಾಂತ ಸ್ವಯಂ ಸಹಕಾರ ಸಂಘದಲ್ಲಿ(SHG)ನ ಸದಸ್ಯಳು. ಆಕೆ ಮನೆ ದುರಸ್ತಿ (ರಿಪೇರಿ)ಗೊಸ್ಕರ ಬ್ಯಾಂಕಿನಿಂದ ಸಾಲ ತೆಗೆದುಕೊಂಡಳು. ಆಕೆ ಭರವಸೆಯಾಗಿ ಯಾವುದೇ ಆಸ್ತಿಯನ್ನು ನೋಡಿಸುವ ಅವಸರವಿಲ್ಲ. ತಮ್ಮ ಸದಸ್ಯರು ಸಾಲ ತಿರುಗಿ ಸಲ್ಲಿಸುವಂತೆ ನೋಡಿಕೊಳ್ಳುವ ಜವಾಬ್ದಾರಿ ಸಂಘ ತೆಗೆದುಕೊಳ್ಳುತ್ತದೆ.

ರೋಹಿತ ಒಂದು ಖಾಸಗಿ ಕಂಪೆನಿಯ ಉದ್ಯೋಗಿ. ಆತನು ಕೆಲಸಕ್ಕೆ ಹೋಗಲು ದ್ವಿಚಕ್ರ ವಾಹನ ಖರೀದಿಸಬೇಕೆಂದುಕೊಂಡನು. ಬ್ಯಾಂಕಿಗೆ ಅಗತ್ಯ ಪತ್ರಗಳನ್ನು ಕೊಟ್ಟು ರೂ. 50,000/- ವಾಹನ ಸಾಲವನ್ನು 4 ವ॥ ಗಳ ಕಾಲ ಮಿತಿಯೊಂದಿಗೆ ತೆಗೆದುಕೊಂ




*ಚಿತ್ರ 7.7: ಬ್ಯಾಂಕು ಕೆಲಸ ಮಾಡುವ ವಿಧಾನ*



©SCERT TELANGANA

ಡನು. ಈ ಸಾಲವನ್ನು EMI (Equal Monthaly Instalment) ಮೂಲಕ ಪ್ರತಿ ತಿಂಗಳು ತನ್ನ ಸಂಬಳದಲ್ಲಿ ಕಡಿತಮಾಡಲಾಗುತ್ತಿತ್ತು. ಬ್ಯಾಂಕು ವಸೂಲು ಮಾಡುವ ಬಡ್ಡಿದರವು ತೆಗೆದುಕೊಂಡ ಸಾಲ, ಕಾಲಪರಿಮಿತಿಯನ್ನು ಆಧರಿಸಿ ಬದಲಾಗುತ್ತಿರುತ್ತದೆ.



*ಚಿತ್ರ 7.8: SHG ಸದಸ್ಯರ ಮೀಟಿಂಗ್*

ಅನೇಕ ರೀತಿಯ ಜನರು, ವಿವಿಧ ರೀತಿಯ ಅವಶ್ಯಕತೆಗಳಿಗೋಸ್ಕರ ಬ್ಯಾಂಕಿನ ನೀತಿ, ನಿಯಮಗಳಿಗೆ ಒಳಪಟ್ಟು ಸಾಲ ತೆಗೆದುಕೊಳ್ಳಬಹುದು. ಬಡ್ಡಿ ಶೇಕಡ, ಭರವಸೆ, ನೀಡಬೇಕಾದ ಪತ್ರಗಳನ್ನು ತಿರುಗಿ ಸಲ್ಲಿಸುವ ವಿಧಾನದಂತಹವುಗಳನ್ನೆಲ್ಲಾ ಈ ಸಾಲ (ಋಣ) ನಿರ್ಭದನೆಯ ಭಾಗವಾಗಿರುತ್ತವೆ.

- ಬ್ಯಾಂಕು ಸಾಲ ನೀಡುವಾಗ ಜಾಮೀನು ಏಕೆ ತೆಗೆದುಕೊಳ್ಳುತ್ತವೆ ?
- ಸಾಲ ತೆಗೆದುಕೊಳ್ಳಲು ಬ್ಯಾಂಕುಗಳು ಉತ್ತಮ, ಬಡ್ಡಿ ವ್ಯಾಪಾರಸ್ಥರಾ ? ಏಕೆ ?
- ವೈಯಕ್ತಿಕವಾಗಿ ತೆಗೆದುಕೊಳ್ಳುವ ಸಾಲಕ್ಕೆ, ಸ್ವಯಂ ಸಹಕಾರ ಸಂಘದಿಂದ ತೆಗೆದುಕೊಳ್ಳುವ ಸಾಲಕ್ಕೆ ವ್ಯತ್ಯಾಸವೇನು ?

**ಡಿಜಿಟಲ್ ಪಾವತಿ ವಿಧಾನ :**

1. NEFT (National Electronic Fund Transfer) ಮೂಲಕ ಒಬ್ಬ ವ್ಯಕ್ತಿ ಅಥವಾ ಒಂದು ಸಂಸ್ಥೆ ತನ್ನ ಖಾತೆಯಿಂದ ಮತ್ತೊಂದು ಖಾತೆಗೆ ಎಷ್ಟು ಹಣವಾದರೂ ಬದಲಿಮಾಡಬಹುದು.
2. RTGS (Real Time Gross Settlement) ನಿಂದ ಒಬ್ಬ ವ್ಯಕ್ತಿ ಅಥವಾ ಸಂಸ್ಥೆ ತನ್ನ ಖಾತೆಯಿಂದ ಕನಿಷ್ಠ 2 ಲಕ್ಷ ಮತ್ತು ಗರಿಷ್ಠ ಎಷ್ಟಾದರೂ ಹಣವನ್ನು ಬದಿಲಿ ಮಾಡಬಹುದು.
3. IMPS (Immedeate Payment Service) ಮೂಲಕ ಒಬ್ಬ ವ್ಯಕ್ತಿ ಅಥವಾ ಸಂಸ್ಥೆ ತನ್ನ ಖಾತೆಯಿಂದ ಮತ್ತೊಂದು ಖಾತೆಗೆ ಹಣವನ್ನು ಫೋನಿನ ಮೂಲಕ, Net Banking ಮೂಲಕ ಅಥವಾ ATM ಮೂಲಕ ತಕ್ಷಣ ಬದಲಾಯಿಸಬಹುದು. ಖಾತಾದಾರರು ಈ ಸೌಕರ್ಯವನ್ನು ಪಡೆಯಲು ತನ್ನ ಮೊಬೈಲ್ ನಂಬರನ್ನು ಬ್ಯಾಂಕಖಾತೆಯೊಂದಿಗೆ ಸಂಯೋಜಿಸಬೇಕಾಗುತ್ತದೆ. ಖಾತಾದಾರರು ವರ್ಷಾದ್ಯಂತ ರಜೆಗಳಲ್ಲಿಯೂ ಉಪಯೋಗಿಸಿಕೊಳ್ಳಬಹುದು.
4. UPI (Unified Payment Interface) ಮೂಲಕ ಹಣವನ್ನು ವರ್ಗಾಯಿಸಬೇಕಾದವರ ಹೆಸರು, ಖಾತೆ ಸಂಖ್ಯೆ, ಬ್ಯಾಂಕಿನ ಹೆಸರು, VPA (Virtual Payment Addvess) ಆಗಲೀ ಆಧಾರ ಕಾರ್ಡ್ ಸಂಖ್ಯೆಯನ್ನಾಗಲಿ ಕೊಡಬೇಕು. IFSC ಕೋಡ್ ಅಗತ್ಯವಿಲ್ಲ. ಈ ಎರಡರಲ್ಲಿ ಯಾವುದಾದರೂ ಒಂದರ ಮೂಲಕ ಹಣವನ್ನು ತಕ್ಷಣದಲ್ಲಿ ಬದಲಾಯಿಸಬಹುದು. BHIM (Bharath Interface for Money) ಎಂಬ ಆ್ಯಪ್ ಮೂಲಕ ನಾವು UPI ವಿಧಾನವನ್ನು ಬಳಸುತ್ತಾ ಸರಳ ಮತ್ತು ತಕ್ಷಣ ಲೇವಾದೇವಿಯನ್ನು ಮಾಡಬಹುದು.
5. USSD (Unstructured Supplementary Service Data) ಮೂಲಕ ಕಡಿಮೆ ಪ್ರಮಾಣದ ಹಣವನ್ನು ಚರವಾಣಿ ಬ್ಯಾಂಕಿಂಗ್ ಸಹಾಯದಿಂದ ಲೇವಾದೇವಿ ಮಾಡಬಹುದು. ಈ ಸದುಪಾಯವನ್ನು ಎಲ್ಲಾ ತರಹದ ಚರವಾಣಿ ಘಟಕದೊಂದಿಗೆ ಪಡೆಯಬಹುದು. ಈ ಸದುಪಾಯವನ್ನು ಅಗತ್ಯತೆಯನ್ನು ಅನುಸರಿಸಿ ಎಲ್ಲಾದರೂ, ಯಾರೊಂದಿಗಾದರೂ ಉಪಯೋಗಿಸಿಕೊಳ್ಳಬಹುದು.
6. ರೂಪೇ ಕಾರ್ಡ್ : ಈ ಸೌಲಭ್ಯದಿಂದ ಹಣ ಪಾವತಿಸಲು ಡೆಬಿಟ್ ಕಾರ್ಡ್/ಕ್ರೆಡಿಟ್ ಕಾರ್ಡ್ ಮೂಲಕ ಕೂಡ ಮಾಡಬಹುದು. ಖಾತಾದಾರರ ಸೌಲಭ್ಯಕ್ಕಾಗಿ National Payments Corporation of India ಕಡಿಮೆ ಖರ್ಚು ಅಧಿಕ ಸುರಕ್ಷತೆಯ ಸೌಕರ್ಯಗಳೊಂದಿಗೆ ರೂಪೇ ಕಾರ್ಡುಗಳನ್ನು ಪ್ರಾರಂಭಿಸಿದೆ. ಜನ್‌ಧನ್ ಯೋಜನೆಯಡಿ ಪ್ರತಿ ಖಾತಾದಾರರು ರೂಪೇ ಕಾರ್ಡ್ ಪಡೆಯಲು ಅರ್ಹರಾಗಿದ್ದಾರೆ. ಮೇಲಿನ ನಾಲ್ಕು ಸೇವೆಗಳಿಗೆ IFSC ಕೋಡ್ ಮತ್ತು ಅಂತರ್ಜಾಲದ ಅಗತ್ಯವಿದೆ. ಆದರೆ USSO ಮೂಲಕ IFSC ಕೋಡ್ ಮತ್ತು ಇಂಟರ್‌ನೆಟ್ ಇಲ್ಲದೆಯೂ ಸಹ ಲೇವಾದೇವಿ ಮಾಡಬಹುದು.

IFSC (Indian Financial System Code)

SCERT TELANGANA

ಪ್ರತಿ ಬ್ಯಾಂಕು 11 ಅಂಕೆಗಳ ಸಂಖ್ಯೆಯನ್ನು ಹೊಂದಿರುತ್ತದೆ. ಮೊದಲ ನಾಲ್ಕು ಅಂಕೆಗಳು ಬ್ಯಾಂಕಿನ ಕೋಡ್‌ಸಂಖ್ಯೆ ಮತ್ತು ಉಳಿದ ಅಂಕೆಗಳು ಬ್ಯಾಂಕು ಶಾಖೆಯ ಕೋಡ್‌ನ್ನು ಸೂಚಿಸುತ್ತದೆ.

### ಇಂಟರ್‌ನೆಟ್ ಬ್ಯಾಂಕಿಂಗ್ (Internet banking)

ಪ್ರಸ್ತುತ ಕಂಪ್ಯೂಟರ್‌ಗಳು, ಇಂಟರ್‌ನೆಟ್‌ಗಳನ್ನು ಎಲ್ಲಾ ಕಡೆ ಬಳಸುತ್ತಿದ್ದಾರೆ. ಅನೇಕ ಬ್ಯಾಂಕುಗಳಲ್ಲಿ ಉದ್ಯೋಗಿಗಳು, ಯಂತ್ರಗಳನ್ನು ನಿರ್ವಹಿಸುವ ಟೆಲ್ಲರ್ ಕೌಂಟರು ಸ್ಥಾನವನ್ನು ಆಟೋಮೆಟಿಕ್ ಟೆಲ್ಲರ್ ಮಿಷನ್ (Automated Teller Machine, ATM) ತೆಗೆದುಕೊಳ್ಳುತ್ತಿವೆ. ಬ್ಯಾಂಕಿಂಗ್ ಕಾರ್ಯಕ್ರಮಗಳನ್ನು ಇಂಟರ್‌ನೆಟ್ ಇರುವ ಕಂಪ್ಯೂಟರ್ ನಿಂದ, ಎಲೆಕ್ಟ್ರಾನಿಕ್ ಪ್ರಸಾರ ಮಾಧ್ಯಮಗಳಿಂದ ನಿರ್ವಹಿ ಸುತ್ತಿದ್ದಾರೆ. ಇದನ್ನೆ ಎಲೆಕ್ಟ್ರಾನಿಕ್ ಅಥವಾ ಇಂಟರ್‌ನೆಟ್ ಬ್ಯಾಂಕಿಂಗ್ ಎನ್ನುತ್ತಾರೆ. ಅನೇಕ ಬ್ಯಾಂಕುಗಳು ಡೆಬಿಟ್‌ಕಾರ್ಡ್, ಕ್ರೆಡಿಟ್‌ಕಾರ್ಡ್, ನೆಟ್ ಬ್ಯಾಂಕಿಂಗ್ ಪೋನ್ ಬ್ಯಾಂಕಿಂಗ್ ನಂತಹವುಗಳ ಮೂಲಕ ತಮ್ಮ ಖಾತೆದಾರರಿಗೆ ಆನ್‌ಲೈನ್ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುತ್ತಿವೆ.

ಇಂಟರ್‌ನೆಟ್ ಬ್ಯಾಂಕಿಂಗ್ ಮೂಲಕ ಒಬ್ಬ ವ್ಯಕ್ತಿ ತನ್ನ ಬ್ಯಾಂಕ್ ಖಾತೆಯಿಂದ ಮತ್ತೊಬ್ಬ ವ್ಯಕ್ತಿಗೆ ಸೇರಿದ ಮತ್ತೊಂದು ಬ್ಯಾಂಕು ಖಾತೆಗೆ ಹಣವನ್ನು ಬದಲಾವಣೆ ಮಾಡಬಹುದು. ವಸ್ತುಗಳನ್ನು ಕೊಳ್ಳಬಹುದು. ಮಾರುಬಹುದು. ಬಂಡವಾಳ ಹೂಡಬಹುದು. ಸಾಲಗಳು ತಿರಿಗಿ ಕಟ್ಟಬಹುದು. ಕರೆಂಟು, ಪೋನಿನಂತಹ ಇತರ ಬಿಲ್ಲುಗಳು ಸಲ್ಲಿಸಬಹುದು.

ಇಂಟರ್‌ನೆಟ ಬ್ಯಾಂಕಿಂಗ್‌ನಿಂದ ಖಾತೆದಾರನಿಗೆ ತನ್ನ ಬ್ಯಾಂಕಿಗೆ ಹೋಗುವ ಕೆಲಸ ಕಾಗದವನ್ನು ತುಂಬುವ ಕೆಲಸದಂತ ತೊಂದರೆಗಳು ಕಡಿಮೆಯಾಗುತ್ತದೆ. ಒಂದು ಕ್ಲಿಕ್ ಮೂಲಕ ಯಾರಾದರೂ ಅವರ ಹಣವನ್ನು ಬದಲೀ



ಚಿತ್ರ 7.5: ಎ.ಟಿ.ಎಮ್.ನಿಂದ ಹಣ ತೆಗೆಯುತ್ತಿರುವ ವ್ಯಕ್ತಿ

ಮಾಡಬಹುದು. ಬಿಲ್ಲುಗಳ ಸಂದಾಯದಂತಹವು ಸುಲಭವಾಗಿ ಮಾಡಬಹುದು. ಕೆಲಸ ಹೆಚ್ಚಾಗಿ ಇರುವವರು ಇಂಟರ್‌ನೆಟ್ ಬ್ಯಾಂಕಿಂಗ್‌ಗೆ ಪ್ರಾಮುಖ್ಯತೆ ಕೊಡುತ್ತಾರೆ. ರಘುಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸಿಕಿಂದರಾಬಾದ್‌ನಲ್ಲಿ ಖಾತೆ ಇದೆ. ಆತನು ಆನ್‌ಲೈನ ಬ್ಯಾಕಿಂಗ್‌ಗಾಗಿ ಹೆಸರು ನಮೂದಿಸಿಕೊಂಡನು. ರಘು ತನ್ನ ಫೋನ್ ಬಿಲ್ಲು ಸಂದಾಯಿಸಲು ಎಸ್.ಬಿ.ಐ. ಬ್ಯಾಂಕು ವೆಬ್‌ಸೈಟ್‌ನಲ್ಲಿ ತನ್ನ ಯುಜರ್ ಹೆಸರು, ಪಾಸ್‌ವರ್ಡ್ ಉಪಯೋಗಿಸಿ ಪ್ರವೇಶಿಸಿದನು, ಅದರಲ್ಲಿ ಆನ್‌ಲೈನ್ ಮೂಲಕ ಫೋನ್ ಬಿಲ್ಲು ಸಂದಾಯ ಎನ್ನುವುದನ್ನು ಆಯ್ಕೆ ಮಾಡಿಕೊಳ್ಳುವನು. ತನ್ನ ಫೋನ್ ನಂಬರ್, ಕಟ್ಟುವ ಮೊತ್ತವನ್ನು ಟೈಪ್ ಮಾಡುತ್ತಾನೆ. ಆ ಮೊತ್ತ ಆತನ ಎಸ್.ಬಿ.ಐ. ಖಾತೆಯಲ್ಲಿ ಕಡಿಮೆ ಮಾಡುತ್ತಾರೆ. ಇನ್‌ವಾಯಿಸ್ ತಯಾರಾಗುತ್ತದೆ. ಆನ್‌ಲೈನ್ ಸೇವೆಗಳ ಮೂಲಕ ಸಲ್ಲಿಸುವುದರಿಂದ ಸಮಯ, ಶ್ರಮ ಉಳಿತಾಯವಾಗುತ್ತದೆ. ಅಷ್ಟೇ ಅಲ್ಲದೆ ಸಕಾಲಕ್ಕೆ ಬಿಲ್ಲುಗಳು ಸಲ್ಲಿಸಬಹುದು.




ಚಿತ್ರ 7.6: ಮೇಲಿನ ಚಿತ್ರದ ಮೂಲಕ ಹಣ ಕಟ್ಟಲು ಮೊಬೈಲ್ ನಂಬರ್‌ನ್ನು ಕೂಡ ನಮೋದಿಸಿಕೊಳ್ಳವುದನ್ನು ಗಮನಿಸಬಹುದು.

SCERT TELANGANA

## ಮುಖ್ಯ ಪದಗಳು

| | | | |
|---|---|---|---|
| 1. ವಸ್ತುವಿನಿಯಮ | 2. ಹಣದ ಪ್ರಕಾರಗಳು | 3. ಜಮ | 4. ಉಳಿತಾಯ |
| 5. ಸಾಲ | 6. ಬಡ್ಡಿ | 7. ಚೆಕ್ಕು | |

1. ಬ್ಯಾಂಕುಗಳಲ್ಲಿ ಹಣ ಸಂಗ್ರಹಿಸುವುದರಿಂದ ಏನಾದರೂ ನಷ್ಟಗಳು, ಸಮಸ್ಯೆಗಳು ಇರುತ್ತವೆಯಾ? ಆಲೋಚಿಸಿ ಬರೆಯಿರಿ?
2. ಹಣದ ವಿನಿಯಮವನ್ನು ಚೆಕ್ಕುಗಳು ಯಾವ ವಿಧವಾಗಿ ಸುಲಭಗೊಳಿಸಿವೆ ?
3. ಬ್ಯಾಂಕು ತನ್ನ ಹತ್ತಿರ ಸ್ವಲ್ಪ ಹಣವನ್ನು ಮಾತ್ರವೇ ನಗದು ರೂಪದಲ್ಲಿಟ್ಟುಕೊಳ್ಳುತ್ತದೆ. ಹೀಗೆ ಏಕೆ ನಡೆಯುತ್ತದೆ ? ಇದರಿಂದ ಬ್ಯಾಂಕಿಗೆ ಲಾಭವೇನು ?
4. ಸಾಲಗಳಲ್ಲಿ ಬಹಳವುಗಳನ್ನು ಮಾಫಿ ಮಾಡಿದರೆ (ಎಂದರೆ ಸಾಲ ತೆಗೆದುಕೊಂಡವರು ತಿರುಗಿ ಹಣ ಕಟ್ಟುವ ಅವಶ್ಯಕತೆ ಇಲ್ಲ) ಅದು ಬ್ಯಾಂಕು ಕೆಲಸದ ರೀತಿಯನ್ನು ಯಾವ ವಿಧವಾಗಿ ಪ್ರಭಾವಿತಗೊಳಿಸುತ್ತದೆ ?
5. ಒಂದು ಸಮಯಕ್ಕೆ ನಿಗದಿಪಡಿಸಿದ ಫಿಕ್ಸ್‌ಡ್ ಡಿಪಾಜಿಟ್ಟಿನ ಮೇಲೆ ಪ್ರಜೆಗಳಿಗೆ ಲಭಿಸುವ ಬಡ್ಡಿಕ್ಕಿಂತ ಅದೇ ಸಮಯದಕ್ಕೆ ತೆಗೆದುಕೊಂಡ ಸಾಲದ ಮೇಲೆ ಹೆಚ್ಚು ಬಡ್ಡಿ ಸಲ್ಲಿಸಬೇಕು. ಹೀಗೆ ಏಕೆ ಇರಬೇಕು ?
6. ಈ ವರ್ಷ ಮಳೆ ಆಶಿಸಿದಷ್ಟು ಬಿದ್ದಿಲ್ಲ ಹೀಗೆ ನಡೆದಾಗ ರೈತರು ತೆಗೆದುಕೊಂಡ ಸಾಲದಲ್ಲಿ ಅರ್ಧ ಮಾತ್ರ ಸಲ್ಲಿಸಬೇಕೆಂದು ಕೆಲವು ಜನ ನೀರಿಕ್ಷಿಸುತ್ತಾರೆ. ಮುಂದಿನ ವರ್ಷದ ಬೆಳೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ತೆಗೆದುಕೊಂಡ ಸಾಲ ಮೊತ್ತ ಹಿಂದಕ್ಕೆ ಸಲ್ಲಿಸಬೇಕೆಂದ ಕೆಲವು ಜನ ನೀರಿಕ್ಷಿಸುತ್ತಾರೆ. ನಿಮ್ಮ ಅಭಿಪ್ರಾಯದ ಪ್ರಕಾರ ಬ್ಯಾಂಕುಗಳು ಏನು ಮಾಡಬೇಕು? ನಿಮ್ಮ ಕಾರಣ ಕೊಡಿ.
7. ಸಾಲದ ಪ್ರಕಾರಗಳು ಶೀರ್ಷಿಕೆ ಕೆಳಗಿರುವ ಪೇರಾವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ನಿಮ್ಮ ಪ್ರಾಂತದಲ್ಲಿ ತೆಗೆದುಕೊಂಡು ಸಾಲದ ಪ್ರಕಾರಗಳನ್ನು ಹೆಸರಿಸಿ.
8. ಸ್ವಯಂ ಸಹಕಾರ ಸಂಘದ ಮೂಲಕ ಸಾಲ ಪಡೆದ ಸದಸ್ಯರಿಗೆ ಸಾಲಗಳು ಉಪಯೋಗಕರವಾಗಿ ಇದ್ದಾವೆಯಾ ? ಹೇಗೆ?

**ಚಟುವಟಿಕೆ :** ನಿಮಗೆ ಎರಡು ಸಾವಿರ ರೂಪಾಯಿಗಳು ಅವಶ್ಯಕತೆ ಇದೆ. ಒಂದು ಚೆಕ್ಕು ಬರೆದು ನಿಮ್ಮ ತಂಗಿಗೆ ಕೊಟ್ಟು ಹಣ ತೆಗೆದುಕೊಂಡು ಬಾ ಎಂದು ಕಳುಹಿಸಿರಿ.

## ಪ್ರಾಜೆಕ್ಟ್ (PROJECT )

ಬ್ಯಾಂಕುಗಳಿಗೆ ಹೋಗಿ ಅಥವಾ ಬ್ಯಾಂಕು ಅಧಿಕಾರಿಯನ್ನು ನಿಮ್ಮ ಶಾಲೆಗೆ ಕರೆದು ಈ ಕೆಳಗಿನ ವಿಷಯಗಳನ್ನು ತಿಳಿದುಕೊಳ್ಳಿರಿ.

a) ನಿಮ್ಮ ಹೆಸರಿನ ಮೇಲೆ ಉಳಿತಾಯ ಖಾತೆ ತೆರೆಯುವ ವಿಧಾನ.

b) ಬ್ಯಾಂಕುಗಳು ಚೆಕ್ಕುಗಳ ಮೊತ್ತವನ್ನು ಹೇಗೆ ಸಲ್ಲಿಸುತ್ತವೆ ?

c) ನೆಫ್ಟ್ (NEFT) ವರ್ಗಾವಣೆ ಬ್ಯಾಂಕುಗಳು ಹೇಗೆ ಮಾಡುತ್ತವೆ ?

d) ಎ.ಟಿ.ಎಮ್. ಕೆಲಸ ಮಾಡಲು ಭದ್ರತೆ ಪರವಾಗಿ ಎಂತಹ ಜಾಗ್ರತೆ ಅವಶ್ಯಕ ? ಕಂಪ್ಯೂಟರ್ ಏನು ಸರಿ ನೋಡುತ್ತದೆ ?

e) ಚೆಕ್ಕು ಮೂಲಕವೇ ಅಲ್ಲದೆ ಡ್ರಾಫ್ಟು / ಆನ್‌ಲೈನ್ ವ್ಯಾಪಾರದಾರರ ಮೂಲಕ ಕೂಡ ಹಣ ವರ್ಗಾವಣೆ ಮಾಡಬಹುದು. ಆ ವಿವರಗಳನ್ನು ತಿಳಿದುಕೊಳ್ಳಿ.

f) ಹಣ ಪಡೆಯುವ ವ್ಯಕ್ತಿಗೆ ಚೆಕ್ಕನ್ನು ಹೋಲಿಸಿದರೆ ಆನ್‌ಲೈನ್ ಲಾವಾದೇವಿಯಿಂದ ಪ್ರಯೋಜವೇನು ?

- ಹಣ, ನೋಟು, ನಾಣ್ಯಗಳು ಮತ್ತು ಬ್ಯಾಂಕುಗಳ ಕಾರ್ಯಕಲಾಪಗಳ ಬಗ್ಗೆ ಪ್ರಶ್ನೆ ಮಾಡುವಂತೆ ಮಕ್ಕಳನ್ನು ಪ್ರೋತ್ಸಾಹಿಸಿರಿ.

www.rbi.org.in ನಲ್ಲಿ ಕಾಮಿಕ್ಸ್, ಥಿಮ್ಸ್, ಆರ್ಥಿಕ ಲಾವಾದೇವಿಗಳಿಗಾಗಿ ಅಂತರ್ಜಾಲವನ್ನು ಸಂದರ್ಶಿಸಿರಿ.

SCERT TELANGANA

# 8 ಜೀವನಾಧಾರ - ತಂತ್ರಜ್ಞಾನದ ಪ್ರಭಾವ

## ತಂತ್ರಜ್ಞಾನದಲ್ಲಿ ಬದಲಾವಣೆ

## Changes in Technology

ತಂತ್ರಜ್ಞಾನವನ್ನು ನಾವು ದಿನಾಲು ನೋಡುತ್ತೇವೆ. ಉಪಯೋಗಿಸಿಕೊಳ್ಳುತ್ತಾ ಇರುತ್ತೇವೆ. ಟಿ.ವಿ. ಇಟ್ಟಾಗ, ಮೊಬೈಲ್ ಫೋನ್‌ನಲ್ಲಿ ಮಾತನಾಡಿದಾಗ, ಕಂಪ್ಯೂಟರ್‌ನಲ್ಲಿ ಕೆಲಸ ಮಾಡುತ್ತಿದ್ದರೂ ನೀವು ಅತ್ಯಂತ ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸಿಕೊಳ್ಳುತ್ತಿದ್ದೀರಿ. ಇದು ಹೊಸ ಉತ್ಪತ್ತಿಗೆ ದಾರಿ ಮಾಡಿಕೊಡುತ್ತದೆ. ಇಲ್ಲವೆ ಯಾವುದಾದರೂ ಕೆಲಸ ವಿಧಾನವನ್ನು ಅಭಿವೃದ್ಧಿಪಡಿಸುವುದು ಇಲ್ಲವೆ ಯಾವುದಾದರೂ ಹೇಗೆ ಮಾಡಲಾಗಿದೆ ಎನ್ನುವ ಜ್ಞಾನವನ್ನು ಪ್ರತಿದಿನ ಜೀವನದ ಅವಸರಗಳಿಗೆ ಉಪಯೋಗಿಸಿಕೊಂಡರೆ ತಂತ್ರಜ್ಞಾನ ಆಗುತ್ತದೆ. ಪೆನ್ಸಿಲ್ ಕೆತ್ತಿದರೂ, ತರಕಾರಿ ಕತ್ತರಿಸಿದರೂ, ಬೇರೆ ಬೇರೆ ಪಾತ್ರೆಗಳಲ್ಲಿ ಅಡುಗೆ ಮಾಡಿದರೂ ನೀವು ತಾಂತ್ರಿಕ ಜ್ಞಾನವನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ನಾವು ಬಳಸುವ ಸಣ್ಣ ಸಣ್ಣ ಪರಿಕರಗಳಿಂದ, ದೊಡ್ಡ ಪ್ರಮಾಣದ ಯಂತ್ರಗಳವರೆಗೆ ಎಲ್ಲವೂ ತಂತ್ರಜ್ಞಾನದ ಭಾಗವೇ ಮನೆಯಲ್ಲಿಯಾಗಿರಬಹುದು. ಕಾರ್ಖಾನೆಗಳಲ್ಲಿ ಆಗಬಹುದು ಇಲ್ಲವೇ ಪ್ರಸಾರ ಮಧ್ಯಾಮಗಳಲ್ಲಾಗಬಹದು. ರಫ್ತುಗಳಲ್ಲಾಗಬಹದು.

ಪ್ರಸ್ತುತ ಅಂತರಿಕ್ಷ ಪರಿಶೋಧನೆ, ಕೈಗಾರಿಕೆಗಳು ರಫ್ತುಗಳಂತಹವುಗಳಲ್ಲಿ ವಿನಿಯೋಗದಲ್ಲಿರುವ ಎಲ್ಲಾ ವಿಧವಾದ ಬಾರಿ ಯಂತ್ರಗಳನ್ನು ಕುರಿತು ಆಲೋಚಿಸಿರಿ. ಇವು ಕಾಲಕಳೆದಂತೆ ಅಭಿವೃದ್ಧಿ ಹೊಂದಿವೆ. ಕೈಗಾರಿಕಾ ಕ್ರಾಂತಿ ಕುರಿತು 18, 19ನೇ ಶತಮಾನದಲ್ಲಿ ಉತ್ಪತ್ತಿ ವಿಧಾನದಲ್ಲಿ ಬಂದ ಭಯಂಕರ ಬದಲಾವಣೆ ಕುರಿತು ನೀವು ಇದಕ್ಕೆ ಮೊದಲು ತರಗತಿಯಲ್ಲಿ ಓದಿದ್ದೀರಿ.

- ಈ ಕೈಗಾರಿಕಾ ಕ್ರಾಂತಿಗೆ ಸಹಕರಿಸುವವರು ಯಾರು?

ಆವಿರಿ ಯಂತ್ರದಿಂದ ಕಾರ್ಖಾನೆಗಳಲ್ಲಿ ಕೆಲಸದ ವಿಧಾನ ಸಂಪೂರ್ಣವಾಗಿ ಬದಲಾಗಿದೆ. ಆ ನಂತರ ವಿದ್ಯುತ್ ನಂತಹ ಹೊಸ ಇಂಧನ ಸಂಪನ್ಮೂಲದಿಂದ ಈ ದಿನ ನಾವು ನೋಡುತ್ತಿರುವ ಕಾರ್ಖಾನೆಗಳು ಉದಯಿಸಿವೆ. ಒಂದು ಹೊಸ ಯಂತ್ರವನ್ನು ಇಲ್ಲವೆ ಉತ್ಪತ್ತಿ ವಿಧಾನವನ್ನು ಮೊದಲ ಬಾರಿ ಕಂಡುಹಿಡಿದಾಗ ಅದನ್ನು ಶೋಧನೆ (ಆವಿಷ್ಕರಣೆ) ಎನ್ನುತ್ತಾರೆ. ಆದರೆ ಈ ಆಲೋಚನೆಗಳು ದಿನ ಕಳೆದಂತೆ ಉಪಯೋಗಕ್ಕೆ ಬರಲು ಎಷ್ಟೋ ಸಮಯವಿಡಿಯುತ್ತದೆ. ಇದು ಅನೇಕ ಅಂಶಗಳ ಮೇಲೆ ಆಧಾರಪಟ್ಟಿರುತ್ತದೆ. ಇದು ತಂತ್ರಜ್ಞಾನ ಅಭಿವೃದ್ಧಿಪಡಿಸುವುದಾಗಿರಬಹುದು. ಹೊಸ ವಿಧಾನಗಳು ಖರ್ಚು ಕಡಿಮೆ ಮಾಡುವುದಾಗಿರಬಹುದು ಅಥವಾ ಹೊಸ ಉತ್ಪತ್ತಿ ವಿಧಾನಕ್ಕೆ ಅನುಮೋದನೆ ದೊರೆಯುವುದಾಗಿರಬಹುದು. ತಂತ್ರಜ್ಞಾನದಲ್ಲಿ ಅಭಿವೃದ್ಧಿ ಅಥವಾ ಬೆಳೆವಣಿಗೆ ಪೂರ್ತಿಯಾಗಿ ಹೊಸ ಯಂತ್ರಗಳಿಂದ (ಎಕ್ಸ್‌ರೆ ಯಂತ್ರಗಳು, ಕೈಮಗ್ಗಗಳು)ದಾಗ ಬಹುದು. ಕಚ್ಚಾ ಪದಾರ್ಥಗಳಲ್ಲಿ (ರಬ್ಬರಿಗೆ ಬದಲಾಗಿ ಪ್ಲಾಸ್ಟಿಕ್) ಬದಲಾವಣೆಯಿಂದಾಗಬಹುದು. ಇಲ್ಲವೆ ಉತ್ಪತ್ತಿ ಪ್ರಕ್ರಿಯೆಗಳ ಪುನಃ ವ್ಯವಸ್ಥೀಕರಣದಿಂದಾಗಬಹುದು.



*ಚಿತ್ರ 8.1: ಕೈಮಗ್ಗ ನೇಯುವ ಸ್ತ್ರೀ*

SCERT TELANGANA





*ಚಿತ್ರ : 8.2 (ಎಡಗಡೆ) ತಾಳೆಹಣ್ಣು ಹಿಂಡುತ್ತಿರುವ ಕೋಯಾ ಸ್ತ್ರೀ ಪುರುಷರು 1940 ಚಿತ್ರ . (ಬಲಗಡೆ)ಹೈದರಾಬಾದ್‌ನಲ್ಲಿ ಜಮಖಾನ(ಕಂಬಳಿ) ನೇಕಾರರು.*

ಉದಾಹರಣೆಗೆ ಅಮೇರಿಕಾದಲ್ಲಿ ಕಾರುಗಳ ಉತ್ಪತ್ತಿಯನ್ನು ತೀರ್ವಗೊಳಿಸಲು ಹೆನ್ರಿ ಫೋರ್ಡು ಅಸೆಂಬ್ಲಿ ಲೈನ್ ವಿಧಾನವನ್ನು ಪ್ರವೇಶಪಡಿಸಿದನು. ಇದರಿಂದ ಕಾರ್ಖಾನೆಗಳಲ್ಲಿ ಉತ್ಪತ್ತಿ ಹೆಚ್ಚಾಗಿ, ದೊಡ್ಡ ಸಂಖ್ಯೆಯಲ್ಲಿ ಸರಕುಗಳು ತಯಾರಾಗ ತೊಡಗಿದವು. ದಿನಕಳೆದಂತೆ ಜೀವನದ ವಿನಿಯೋಗಕ್ಕೆ ಬಂದವುಗಳಲ್ಲಿ ಅಂತರ್ ದಹನ ಇಂಜಿನ್‌ಗಳು ಹೊಸ ಪದಾರ್ಥಗಳು, ರಸಾಯನಿಕ ಉತ್ಪತ್ತಿಗಳು, ರೇಡಿಯೋದಂತಹ ಪ್ರಸಾರ ಮಾಧ್ಯಮಗಳು, ಕಂಪ್ಯೂಟರ್ ಮೊದಲಾದವುಗಳನ್ನು ಹೆಸರಿಸಬಹುದು. ತಂತ್ರಜ್ಞಾನದಲ್ಲಿ ಬದಲಾವಣೆ ಒಂದು ಹೊಸ ಉತ್ಪತ್ತಿಗೆ ದಾರಿ ಮಾಡಿಕೊಡಬಹುದು. ಇಲ್ಲವೇ ಅದೇ ಸರಕು ಅಥವಾ ಸೇವೆಯನ್ನು ಹೊಸ ವಿಧವಾಗಿ ಉತ್ಪತ್ತಿ ಮಾಡಬಹುದು / ಒದಗಿಸಬಹುದು. ಈ ಹೊಸ ಪರಿಕರಣಗಳ ತಯಾರು ಮಾಡಲು ಕಚ್ಚಾಪದಾರ್ಥಗಳು ಒದಗಿಸಲು (ಉದಾಹರಣೆಗೆ ಕಬ್ಬಿಣ, ಕಲ್ಲಿದ್ದಲು ನಂತಹ) ಹೊಸ ಉದ್ಯೋಗಗಳು ಏರ್ಪಡುತ್ತವೆ. ಈ ಯಂತ್ರಗಳ ವಿನಿಮಯ ಕೂಡ ಹೊಸ ಉದ್ಯೋಗಗಳಿಗೆ ದಾರಿ ಮಾಡಿಕೊಡುತ್ತದೆ. ಉದಾಹರಣೆಗೆ ಉಕ್ಕು, ಕಬ್ಬಿಣ ಉಪಯೋಗಿಸಿ ಕಾರು, ಬಸ್ಸುಗಳನ್ನು ತಯಾರು ಮಾಡುತ್ತಾರೆ. ಇವುಗಳಿಂದ ಡ್ರೈವರ್‌ಗಳು (ಚಾಲಕರು) ಮೆಕಾನಿಕ್‌ಗಳು, ಪೆಟ್ರೋಲ್ ಬಂಕುಗಳಂತವುಗಳಿಗೆ ಬೇಡಿಕೆ ಹೆಚ್ಚಾಗುತ್ತದೆ.

- ನಿಮ್ಮ ಸುತ್ತಮುತ್ತಲು ವಾಸಿಸುವ ಜನರ ಜೀವನವನ್ನು ಕಂಪ್ಯೂಟರ್‌ಗಳು ಹೇಗೆ ಬದಲಾಯಿಸಿವೆ ?
- ವಿನೋದವನ್ನು ತಂತ್ರಜ್ಞಾನವು ಬದಲಾಯಿಸಿದಾ ? ಹೇಗೆ ?
- ಮೊದಲು ಆವಿರಿಯಂತ್ರ ಉದಯವನ್ನು ಕುರಿತು ತಿಳಿದುಕೊಳ್ಳಿ. ಭಾರತ ದೇಶದಲ್ಲಿ ರೈಲು ಮಾರ್ಗ ನಿರ್ಮಾಣಕ್ಕೆ ಇದು ಹೇಗೆ ದಾರಿ ಮಾಡಿಕೊಡುತ್ತದೆ?
- ನಿಮ್ಮ ಸುತ್ತಮುತ್ತ ಪ್ರಾಂತಗಳಲ್ಲಿ, ಪಟ್ಟಣಗಳಲ್ಲಿ, ನಗರಗಳಲ್ಲಿ ಸೌರಶಕ್ತಿಯನ್ನು ಉಪಯೋಗಿಸಿಕೊಳ್ಳು ವುದನ್ನು ನೀವು ನೋಡಿದ್ದೀರಾ ? ಒಂದು ಪಟ್ಟಿ ತಯಾರಿಸಿ. ಈ ಇಂಧನವನ್ನು ಇನ್ನೂ ಹೆಚ್ಚಾಗಿ ಏಕೆ ಉಪಯೋಗಿಸಿಕೊಳ್ಳುತ್ತಿಲ್ಲ ? ಚರ್ಚಿಸಿರಿ.

ತಂತ್ರಜ್ಞಾನವನ್ನು ಎಲ್ಲಾ ಸಮಯದಲ್ಲಿ ಸ್ವಾಗತಿಸುವುದಿಲ್ಲ ಹೊಸ ಯಂತ್ರಗಳಿಂದ ತಮ್ಮ ಉದ್ಯೋಗಗಳು ಇಲ್ಲದಂತಾಗು ತ್ತವೆ ಎಂದು ಜನರು ಭಯ ಪಡುತ್ತಾರೆ ? ಉದಾಹರಣೆಗೆ 19 ನೇ ಶತಮಾನದಲ್ಲಿ ಇಂಗ್ಲಾಂಡ್‌ನಲ್ಲಿ ತಮ್ಮ ಉದ್ಯೋಗ ವನ್ನು ವಿದ್ಯುತ್ ಶಕ್ತಿ ಮಗ್ಗಗಳು ತೆಗೆದುಕೊಳ್ಳುತ್ತವೆ ಎಂದು ಕೈ ಕೆಲಸಗಾರರು ಅವುಗಳನ್ನು ತೀರ್ವವಾಗಿ ವಿರೋಧಿಸಿದರು. ವ್ಯವಸಾಯದಲ್ಲಿ (ಭತ್ತ) ಕತ್ತರಿಸುವ ಯಂತ್ರಗಳ ಕಡೆ ಕೂಡ ಪ್ರಜೆಗಳ ಪ್ರತಿಸ್ಪಂದನೆ ಇದೇ ವಿಧವಾಗಿದೆ. ಭಾರತ ದೇಶದಲ್ಲಿ ಮೊದಲು ಕಂಪ್ಯೂಟರ್‌ಗಳನ್ನು ಪ್ರವೇಶಪಡಿಸಿದಾಗ ತಮ್ಮ

SCERT TELANGANA

ಉದ್ಯೋಗಗಳು ಹೋಗುತ್ತವೆ ಎಂದು ಜನರು ಭಾವಿಸಿದರು.

ಕೆಲವು ಉದ್ಯೋಗಗಳು ಕಡಿಮೆಯಾಗುವ ಮಾತು ನಿಜ. ಆದರೆ ಕೆಲವು ಹೊಸ ಉದ್ಯೋಗಗಳು ಕೂಡ ಹುಟ್ಟುತ್ತವೆ. ಆದರೆ ತಂತ್ರಜ್ಞಾನ ಸಮಾಜದಲ್ಲಿ ವಿವಿಧ ಮಾರ್ಗಗಳನ್ನು ಬೇರೆ ಬೇರೆಯಾಗಿ ಪ್ರಭಾವಿತಗೊಳಿಸುತ್ತದೆ. ಈ ಪರಿಸ್ಥಿತಿಗೆ ಪರಿಷ್ಕಾರವಿದೆಯಾ ? ಒಟ್ಟಿನಲ್ಲಿ ಪ್ರಯೋಜನಗಳಿವೆಯಾ ? ಇವುಗಳನ್ನು ವಿಶ್ಲೇಷಿಸಲು ಭಾರತ ದೇಶದಲ್ಲಿ ಮೂರು ವಿಭಿನ್ನ ಅವಸ್ಥೆಗಳನ್ನು ಪರಿಶೀಲಿಸೋಣ.

## ವ್ಯವಸಾಯದಲ್ಲಿ ತಾಂತ್ರಿಕ ಬದಲಾವಣೆಗಳು (Technological change in Agriculture)

ಸ್ವಾತಂತ್ರ್ಯ ಪೂರ್ವದಲ್ಲಿ ವ್ಯವಸಾಯ ಸಂಪ್ರದಾಯಿಕ ಪದ್ಧತಿಯಲ್ಲಿ ನಡೆಯುತ್ತಿತ್ತು. ರೈತರು ಭತ್ತ, ಗೋಧಿ, ತರಕಾರಿ ಹತ್ತಿಯಂತಹ ಬೆಳೆ ಬೆಳೆಸುತ್ತಿದ್ದರು. ವ್ಯವಸಾಯ ಪ್ರಧಾನವಾಗಿ ಮಳೆಯ ಮೇಲೆ ಆಧಾರಪಟ್ಟಿರುತ್ತಿತ್ತು. ಕೆಲವು ಪ್ರಾಂತಗಳಲ್ಲಿ ಬಾವಿ, ನದಿಗಳಿಂದ ವ್ಯವಸಾಯಕ್ಕೆ ನೀರು ಲಭಿಸುತ್ತಿದ್ದವು. ಅಧಿಕ ಪ್ರಮಾಣದಲ್ಲಿ ರೈತರು ವರ್ಷದಲ್ಲಿ ಒಂದು ಬೆಳೆ ಮಾತ್ರ ಬೆಳೆಸುತ್ತಿದ್ದರು. ಮರದ ನೇಗಿಲು ಕುಡುಗೋಲು, ಸಲಿಕೆ, ಗಢಾರೆಯಂತಹ ಸಾಧಾರಣ ಉಪಕರಣಗಳನ್ನು ಬೆಳೆ ಬೆಳೆಸುವಲ್ಲಿ ಉಪಯೋಗಿಸುತ್ತಿದ್ದರು. ಮುಂದಿನ ವರ್ಷಕ್ಕೆ ರೈತರು ಸ್ವತಃ ಬೀಜಗಳನ್ನು ಭದ್ರಪಡಿಸಿಕೊಳ್ಳುತ್ತಿದ್ದರು. ಸರಕುಗಳನ್ನು ರಪ್ಪು ಮಾಡಲು, ಹೊಲ ಹೂಳಲು ಇತರ ವ್ಯವಸಾಯ ಕೆಲಸಗಳಿಗೆ ಎತ್ತುಗಳನ್ನು ಉಪಯೋಗಿಸುತ್ತಿದ್ದರು. ವ್ಯವಸಾಯ ಉತ್ಪತ್ತಿ ಪ್ರಧಾನವಾಗಿ ಸ್ವತಃ ಬಳಕೆಗೆ ಉಪಯೋಗಿಸಿಕೊಳ್ಳುತ್ತಿದ್ದರು. ಸ್ವಲ್ಪ ಪ್ರಮಾಣ ಉತ್ಪತ್ತಿಯನ್ನು ಮಾತ್ರ ಮಾರುಕಟ್ಟೆಯಲ್ಲಿ ಮಾರುತ್ತಿದ್ದರು.

ಸ್ವಾತಂತ್ರ್ಯ ನಂತರ ಸರ್ಕಾರ ಅಣೆಕಟ್ಟು ಕಟ್ಟಿ ನೀರಾವರಿ ಸೌಕರ್ಯವನ್ನು ಅಭಿವೃದ್ಧಿ ಪಡಿಸುತ್ತಿದೆ. ಕೊಳವೆ ಬಾವಿಗಳ ಬಳಕೆಯನ್ನು ಪ್ರೋತ್ಸಾಹಿಸ ತೊಡಗಿತು. ನೀರು ಮೇಲೆತ್ತಲು ವಿದ್ಯುತ್ ಅಥವಾ ಡಿಜಿಲ್‌ನಿಂದ ನಡೆಸುವ ಮೋಟಾರು ಪಂಪುಗಳನ್ನು ಬಳಸತೊಡಗಿದರು.

ವ್ಯವಸಾಯವನ್ನು ತೀವ್ರವಾಗಿ ಪ್ರಭಾವ ಪಡಿಸುವ ಹೊಸ ತಂತ್ರಜ್ಞಾನ ದಾರಿ ಮಾಡಿತು. ದೇಶದಲ್ಲಿ ಕೆಲವು ಪ್ರಾಂತಗಳಲ್ಲಿ ಹೊಲಗಳಿಗೆ ವರ್ಷ ಪೂರ್ತಿ ನೀರಾವರಿ ವ್ಯವಸ್ಥೆ ಒದಗಿಸುತ್ತಾ ಬಂದರು ಪರಿಶೋಧನಾ ಕೇಂದ್ರಗಳಲ್ಲಿ ರೂಪು ಹೊಂದಿದ ಅಧಿಕ ಬೆಳೆ ನೀಡುವ ವಿಧಾನಗಳು ಬೆಳಕಿಗೆ ಬಂದಿವೆ. ರಸಾಯನಿಕ ಗೊಬ್ಬರ, ಕ್ರಿಮಿನಾಶಕಗಳನ್ನು ಸಹಕಾರ ಸಂಘಗಳು ಅಥವಾ ಮಾರುಕಟ್ಟೆ ಅಂಗಡಿಗಳಲ್ಲಿ ಮಾರಾಟಕ್ಕೆ ಪ್ರಾರಂಭಿಸಿದರು. ವಿವಿಧ ಕೆಲಸಗಳಿಗೆ ಟ್ರಾಕ್ಟರ್‌ಗಳಂತಹ ಹೊಸ ಯಂತ್ರ ಉಪಕರಣಗಳನ್ನು ಕೊಂಡು ವಿನಿಯೋಗಿಸಲು ರೈತರು ಪ್ರೋತ್ಸಾಹಿಸಿದರು.

## ತಂತ್ರಜ್ಞಾನದ ಪ್ರಭಾವ (Impact of Technology)

**ಉತ್ಪತ್ತಿಯಲ್ಲಿ ಬೆಳವಣಿಗೆ:** ವ್ಯವಸಾಯದಲ್ಲಿ ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸಿ ರೈತರು ಅಧಿಕ ಮೊತ್ತದಲ್ಲಿ ಆಹಾರ ದಾನ್ಯಗಳು, ಇತರ ಉತ್ಪತ್ತಿಗಳನ್ನು ಬೆಳೆಸುತ್ತಾ ಬಂದರು. ಬೆಳೆ ಬೆಳೆಯುವ ಅದೇ ಭೂಮಿಗಳಲ್ಲಿ ರೈತರು ಹೆಚ್ಚಿನ ಪ್ರಮಾಣದಲ್ಲಿ ಉತ್ಪತ್ತಿ ಮಾಡುತ್ತಾ ಬಂದರು. ಕೆಳಗೆ ಕೊಟ್ಟ ಪಟ್ಟಿಯನ್ನು ಪರಿಶೀಲಿಸಿ ಭತ್ತ, ಗೋಧಿ, ತೃಣ ದಾನ್ಯಗಳು ಕಾಳುಗಳಂತಹುಗಳ ಉತ್ಪತ್ತಿಯಲ್ಲಿ ಕಳೆದ ನಾಲ್ಕು ಶತಮಾನಗಳ ಕಾಲದಲ್ಲಿ ಭಾರತ ದೇಶ ಉತ್ಪತ್ತಿ ಎರಡರಷ್ಟು ಬೆಳೆದಿತು. 1990ರಲ್ಲಿ ಮತ್ತು 21ನೇ ಶತಮಾನ ಪ್ರಾರಂಭದಲ್ಲಿ ರೈತರು ಪ್ರತಿವರ್ಷ 200 ಮಿಲಿಯನ್ ಟನ್ನುಗಳ ಆಹಾರ ಧಾನ್ಯಗಳನ್ನು ಉತ್ಪತ್ತಿ ಮಾಡಿದರು..

**ಭಾರತ ದೇಶದಲ್ಲಿ ಆಹಾರ, ಧಾನ್ಯಗಳ ವಾರ್ಷಿಕ ಉತ್ಪತ್ತಿ**

| ಕಾಲ | ಕೈಗಾರಿಕೆಯಲ್ಲಿನ ಉತ್ಪಾದನೆ,ವರ್ಷಕ್ಕೆ ಟನ್ನುಗಳಲ್ಲಿ |
|---|---|
| 1961-75 | 101 |
| 1976-90 | 157 |
| 1991-2009 | 229 |




SCERT TELANGANA

## ಉತ್ಪತ್ತಿ ಪ್ರಕ್ರಿಯೆಯಲ್ಲಿ ಬದಲಾವಣೆಗಳು
## Changes in production process

ವ್ಯವಸಾಯಕ್ಕೆ ಯಂತ್ರಗಳನ್ನು ಉಪಯೋಗಿಸುವುದು ಕೂಡ ಉತ್ಪತ್ತಿ ಪ್ರಕ್ರಿಯೆಯಲ್ಲಿ ಗಣನೀಯ ಬದಲಾವಣೆ ತಂದಿತು. ಕೆಲವು ಪ್ರಾಂತಗಳಲ್ಲಿ ರೈತರು ವರ್ಷದಲ್ಲಿ ಎರಡು ಬೆಳೆ ಬೆಳೆಸುವುದು, ಪ್ರಾರಂಭಿಸಿದರು. ಇದರಿಂದ ಕೂಲಿಗಾರರಿಗೆ ಉಪಾದಿ ಅವಕಾಶ ಹೆಚ್ಚಾಯಿತು.

ವ್ಯವಸಾಯ ಯಂತ್ರಗಳ ವಿನಿಯೋಗಕ್ಕೆ ಬಂದಿದ್ದರಿಂದ ವ್ಯವಸಾಯ ಕೂಲಿಗಳು, ವರ್ಷಪೂರ್ತಿ ಜೀತದಾಳುಗಳಾಗಿ ಕೆಲಸ ಮಾಡುವುದಕ್ಕಿಂತ ದಿನಕೂಲಿಗಳಾಗಿ ಕೆಲಸ ಮಾಡಲು ಆಸಕ್ತಿ ತೋರಿಸುತ್ತಾ ಬಂದರು. ದಿನಕೂಲಿಗಳಾಗಿ ಇದ್ದರೆ ಯಾವ ರೈತ ಹೆಚ್ಚು ಕೂಲಿಕೊಟ್ಟರೆ ಅವರಿಗೆ ಕೆಲಸ ಮಾಡಲು ಮಾಡುವ ಸ್ವತಂತ್ರ್ಯ ಇರುತ್ತದೆ. ಆದರೆ ವರ್ಷ ಪೂರ್ತಿ ಕೆಲಸ ಸಿಗುತ್ತದೆ. ಎಂಬ ಭರವಸೆ ಇರುವುದಿಲ್ಲ. ವ್ಯವಸಾಯಕ್ಕೆ ಕೆಲಸ ಗಳಿಗೆ ಬಹಳ ಇರುವ ಭತ್ತ ನಾಟುವ ಭತ್ತ ಕೊಯ್ಯುವ ಸಮಯದಲ್ಲಿ ಮಾತ್ರವೇ ಕೂಲಿದಾರರು ಹೆಚ್ಚು ಕೂಲಿಯನ್ನು ಕೇಳುವ ಅವಕಾಶವಿದೆ. ಆದರೆ ಈಗಿನ ಕಾಲದಲ್ಲಿ ದೊಡ್ಡ ರೈತರು ಈ ಕೆಲಸವನ್ನು ಯಂತ್ರಗಳಿಂದ ಮಾಡಿಸಿಕೊಳ್ಳಲು ಆಸಕ್ತಿ ತೋರಿಸುತ್ತಾರೆ. ಕೂಲಿದಾರರು ಒಂದು ಕಡೆ ಕೆಲಸ ಹೆಚ್ಚಾಗಿದೆ. ಆದರೆ ಮತ್ತೊಂದು ಕಡೆ ಸಂಪ್ರದಾಯ ಬದ್ಧವಾಗಿ ಮಾಡುವ ಕೆಲಸಗಳು ಮುಚ್ಚಿಹೋಗಿವೆ.

## ಪಶುಗಳ ಬಳಕೆಯಲ್ಲಿ ಇಳಿಮುಖ
## (Decline in the use of animal power)

ರಫ್ಟುಗಳಿಗೆ, ಅನೇಕ ಇತರ ವ್ಯವಸಾಯ ಕೆಲಸಗಳಿಗೆ ಟ್ರಾಕ್ಟರ್‌ಗಳನ್ನು ಉಪಯೋಗಿಸುವುದು ಪ್ರಾರಂಭಿಸಿದರು. ಊಳುವುದು, ಬಿತ್ತುವುದು, ಕಳೆ ಕೀಳುವುದು ಕತ್ತರಿಸುವ ಉಪಕರಣಗಳಲ್ಲಿ ಸಂಕೇತ ಗಣನೀಯವಾದ ಬದಲಾವಣೆಗೆ ದಾರಿ ಮಾಡಿಕೊಂಡವು. ಕಾಲಕಳೆದಂತೆ ವ್ಯವಸಾಯದಲ್ಲಿ ಪಶುಗಳ ಉಪಯೋಗ ಕಡಿಮೆಯಾಗುತ್ತಿದೆ. ಈ ವಿಷಯ ಕೆಳಗಿನ ಗ್ರಾಫ್ - 2 ನಲ್ಲಿ ನೋಡಬಹುದು.

ಗ್ರಾಫ್: 2 ಭಾರತ ವ್ಯವಸಾಯದಲ್ಲಿ ಪ್ರಾಣಿಗಳ ಬಳಕೆ (% ಗಳಲ್ಲಿ)




ದೊಡ್ಡ ದೊಡ್ಡ ಪ್ರಮಾಣದ ರೈತರು ಮಾತ್ರ ಆಧುನಿಕ ವ್ಯವಸಾಯ ಪದ್ಧತಿಗಳನ್ನು ಉಪಯೋಗಿಸಿಕೊಳ್ಳುವುದು ಸಾಧ್ಯವಾಗುತ್ತಿದೆ. ಆದ್ದರಿಂದ ಸಣ್ಣ ರೈತರಿಗೆ ಇವುಗಳನ್ನು ಉಪಯೋಗಿಸಿಕೊಳ್ಳಲಾಗುತ್ತಿಲ್ಲ. ಇದರಿಂದ ಇವರು ವರ್ಷದಲ್ಲಿ ಕೆಲವು ಸಮಯ ಇತರರ ಹೊಲಗಳಲ್ಲಿ ಅಥವಾ ಪಟ್ಟಣಗಳಲ್ಲಿ ಕೆಲಸ ಮಾಡುತ್ತಾ ಹೋದರು.

## ಭತ್ತ ಕತ್ತರಿಸುವ ಯಂತ್ರದಿಂದ ಉದ್ಯೋಗ ನಷ್ಟ
## (Loss of employment because of Combined Harvester)

ಭತ್ತ ಕತ್ತರಿಸುವ ಯಂತ್ರವನ್ನು ಇತ್ತೀಚಿನ ಕಾಲದಲ್ಲಿ ಹೆಚ್ಚಾಗಿ ಬಳಸುತ್ತಿದ್ದಾರೆ. ಈ ಯಂತ್ರ ಭತ್ತವನ್ನು ಕತ್ತರಿಸುತ್ತದೆ. ಧಾನ್ಯವನ್ನು ನುರಿಸುತ್ತದೆ. ತೆನೆ ಬಡಿದು. ಧಾನ್ಯವನ್ನು - ಹೊಟ್ಟನ್ನು ಬೇರ್ಪಡಿಸುತ್ತದೆ. ಈ ಮೂರು ಕೆಲಸವನ್ನು ಮಾಡುವುದರಿಂದ ಇದನ್ನು ಕಂಬೈನ್ಡ್ ಹಾರ್ವೆಸ್ಟರ್ ಎನ್ನುತ್ತಾರೆ

ಚಿತ್ರ 8.3: ಭತ್ತ ಕತ್ತರಿಸುವ ಯಂತ್ರ



ಭತ್ತ ಕತ್ತರಿಸುವ ಯಂತ್ರವನ್ನು ಉಪಯೋಗಿಸುವುದರಿಂದ ಸಕಾಲದಲ್ಲಿ ಭತ್ತ ಕತ್ತರಿಸಲು ಸಾಧ್ಯವಾಗುತ್ತದೆ. ಇದರಿಂದ ಭತ್ತ ಕತ್ತರಿಸಲು ಕಡಿಮೆ ಸಮಯವಿಡಿಯುತ್ತದೆ. ಬೆಳೆ ನಷ್ಟವಾಗುವುದಿಲ್ಲ. ಇದರಿಂದ ರೈತರು ಕೆಲಸದ ಒತ್ತಡ ಸಮಯದಲ್ಲಿ ಕೂಲಿಗಳ ಕೊರತೆಯನ್ನು ಎದುರಿಸಬಹುದು. ಆಂಧ್ರ ಪ್ರದೇಶ್, ಒರಿಸ್ಸಾ ತೀರ ಪ್ರಾಂತಗಳಲ್ಲಿ ವಾತಾವರಣ ಅಸಮ ತೋಲನೆ ಎದುರಿಸಲು ಕೂಡ ಇದು ಸಹಾಯ ಬೀಳುತ್ತದೆ. ಇದರಿಂದ ವಿಳಂಬವಾಗದಂತೆ ರೈತರು ಎರಡು ಬೆಳೆಯನ್ನು ಬೆಳೆಸುತ್ತಿದ್ದಾರೆ. ರೈತರು ಕೂಲಿಗಳ ಮೇಲೆ ಆಧಾರಪಡುವುದು ಕೂಡ ಕಡಿಮೆಯಾಗಿದೆ.

SCERT TELANGANA

2003ರಲ್ಲಿ ಭತ್ತ ಕತ್ತರಿಸುವ ಯಂತ್ರ ಬಳಕೆಯನ್ನು ಕುರಿತು ಈ ಕೆಳಗಿನ ವಿಷಯಗಳನ್ನು ಪ್ರಕಟಿಸಿದೆ. ರೈತರಿಗೆ ಎಕರೆಗೆ ಒಂದು ಕ್ವಿಂಟಾಲು ಧಾನ್ಯ ಸುಲಭವಾಗಿ ಸಿಗುತ್ತದೆಎ. ಕೂಲಿದಾರರಿಂದ ಬೆಳೆ ಕತ್ತರಿಸಿದರೆ ಈ ಕೈ ಬೆಳೆ ಉದುರಿ ಹೋಗಿ ನಷ್ಟವಾಗುತ್ತದೆ. ಭತ್ತ ಕತ್ತರಿಸುವ ಯಂತ್ರದಲ್ಲಿ ಗಂಟೆಗೆ 1100-1400 ರೂಪಾಯಿ ತೆಗೆದುಕೊಳ್ಳುತ್ತಾರೆ. ದೊಡ್ಡ ರೈತರು ತಮ್ಮ ಭತ್ತ ಕತ್ತರಿಸುವ ಯಂತ್ರವನ್ನು ಬಾಡಿಗೆ ಕೊಟ್ಟು ಸುಲಭವಾಗಿ ಸಂಪಾದಿಸುತ್ತಿದ್ದಾರೆ.

ಭತ್ತ ಕತ್ತರಿಸುವ ಯಂತ್ರದಿಂದ ಒಂದು ಗಂಟೆಯಲ್ಲಿ ಒಂದು ಎಕರೆ ಭತ್ತವನ್ನು ಕತ್ತರಿಸಬಹುದು. ಇದೇ ಕೂಲಿದಾರರಿಂದ ಮಾಡಿದರೆ ಐದು ಮಂದಿ ವ್ಯಕ್ತಿಗಳು 4 ದಿನಗಳ ಕಾಲ ಕೆಲಸ ಮಾಡಬೇಕಾಗಿರುತ್ತದೆ. ಹತ್ತು ಜನ ಕೂಲಿಗಳನ್ನು ಇಟ್ಟುಕೊಂಡರೆ ಅವರು ಎರಡು ದಿನಗಳಲ್ಲಿ ಈ ಕೆಲಸ ಪೂರ್ತಿ ಮಾಡುತ್ತಾರೆ. ಉದಾಹರಣೆಗೆ ಸಾವಿರ ಎಕರೆಗಳ ಭತ್ತ ಸಾಗುವಳಿರುವ ಗ್ರಾಮದಲ್ಲಿ 250 ಕೂಲಿಗಳಿದ್ದಾರೆ ಅಂದುಕೊಳ್ಳೋಣ. ಭತ್ತ ಕತ್ತರಿಸುವ ಯಂತ್ರವನ್ನು ಉಪಯೋಗಿಸಿದರೆ ಅದು ದಿನಕ್ಕೆ 18 ಗಂಟೆಗಳ ಕೆಲಸ ಮಾಡಿ 55 ದಿನಗಳಲ್ಲಿ ಕೆಲಸ ಪೂರ್ತಿ ಮಾಡುತ್ತದೆ. ಆದರೆ ಇದರಿಂದ 250 ಕೂಲಿಗಳು 80 ದಿನಗಳ ಕೆಲಸ ಕಳೆದುಕೊಳ್ಳುತ್ತಾರೆ.

ವ್ಯವಸಾಯ ಯಂತ್ರಗಳನ್ನು ವಿಶಾಲವಾಗಿ ಬಳಸುವುದರಿಂದ ಕೂಲಿದಾರರಿಗೆ ಕೆಲಸವಿಲ್ಲದಂತಾಗುತ್ತದೆ. ವ್ಯವಸಾಯ ಕೂಲಿದಾರರಿಗೆ, ಇತರ ಹೊಲಗಳಲ್ಲಿ ಕೆಲಸ ಮಾಡುವ ಸಣ್ಣ ರೈತರಿಗೆ ಕೆಲಸ ದೊರೆಯುತ್ತಿಲ್ಲ. ಗ್ರಾಮಗಳಲ್ಲಿ ತಕ್ಕಷ್ಟು ಉದ್ಯೋಗ ದೊರೆಯದಿದ್ದಾಗ ಜನರು ಎಲ್ಲಿಗೆ ಹೋಗಬೇಕು ಪಟ್ಟಣಗಳಲ್ಲಿ ಕೆಲಸ ಉದ್ಯೋಗ ಅವಕಾಶಗಳು ಅಷ್ಟಾಗಿಲ್ಲ.

- ವ್ಯವಸಾಯ ಉತ್ಪತ್ತಿಯಲ್ಲಿ ಭತ್ತ ಕತ್ತರಿಸುವ ಯಂತ್ರವನ್ನು ಉಪಯೋಗಿಸುವುದರಿಂದ ಲಾಭಗಳೇನು ? ಮೇಲೆ ಹೆಸರಿಸಿದ ವಿಷಯದಿಂದ ಒಂದು ಪಟ್ಟಿ ತಯಾರು ಮಾಡಿರಿ.
- ಅನೇಕ ಗ್ರಾಮಗಳಲ್ಲಿ ವ್ಯವಸಾಯ ಕೂಲಿದಾರರು ಪ್ರತ್ಯೇಕವಾಗಿ ಮಹಿಳಾ ಕೂಲಿಗಾರರು, ಭತ್ತ ಕತ್ತರಿಸುವ ಯಂತ್ರ ಬಳಕೆಯಲ್ಲಿ ಗೊಂದಲಕ್ಕೆ ಒಳಗಾಗಿದ್ದಾರೆ ಏತಕ್ಕಾಗಿ.
- ಭತ್ತ ಕತ್ತರಿಸುವ ಯಂತ್ರವನ್ನು ಉಪಯೋಗಿಸುವುದರಿಂದ ವ್ಯವಸಾಯ ಕೂಲಿಗಾರರು ಕಳೆದುಕೊಳ್ಳುವ ಕೆಲಸಗಳನ್ನು ಬರೆಯಿರಿ ?

- ಭಾರತ ದೇಶದಲ್ಲಿ ಬಹಳ ಜನ ಬಡ ಕೂಲಿಗಾರರಿದ್ದಾರೆ, ಗ್ರಾಮೀಣ ಪ್ರಾಂತಗಳಲ್ಲಿ ನಿರುದ್ಯೋಗ ತೀವ್ರವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಭತ್ತ ಕತ್ತರಿಸುವ ಯಂತ್ರವನ್ನು ಉಪಯೋಗಿಸುವುದು ಸರಿಯಾದದ್ದೇನಾ ?

ಯಂತ್ರಗಳ ಬಳಕೆಯಿಂದ ವ್ಯವಸಾಯ ಕೂಲಿಗಾರರ ಕೆಲಸದಲ್ಲಿ ಕೂಡ ಬದಲಾವಣೆ ಉಂಟಾಗಿದೆ. ವಿವಿಧ ವ್ಯವಸಾಯ ಕೆಲಸಗಳಿಗೆ ಟ್ರಾಕ್ಟರ್ ನಡೆಸುವುದು, ಪಂಪು ಸೆಟ್‌ಗಳನ್ನು ಉಪಯೋಗಿಸಿ ನೀರು ಒದಗಿಸುವುದು. ಸಿಂಪಡಿಕೆ ಉಪಕರಣಗಳನ್ನು ಉಪಯೋಗಿಸುವುದು, ರಾಸಾಯನಿಕ ಗೊಬ್ಬರದ ಬಳಕೆ ಭತ್ತ ಕತ್ತರಿಸುವ ಯಂತ್ರ, ತೆನೆ ಬಡಿಯುವ ಯಂತ್ರದಿಂದ ಕೆಲಸ ಮಾಡುವ ಕೆಲಸಗಳು ಬಂದಿವೆ. ಅನೇಕ ಸಣ್ಣ ಪಟ್ಟಣಗಳಲ್ಲಿ ವ್ಯವಸಾಯ ಉಪಕರಣಗಳು ಸರಿಪಡಿಸುವ ಮೆಕಾನಿಕ್ ಷೇಡ್‌ಗಳು ಏರ್ಪಟ್ಟವು. ಇದರಿಂದ ಹೊಸ ಉದ್ಯೋಗಗಳು ಏರ್ಪಟ್ಟವು, ಆದರೆ ಇವುಗಳಿಂದ ದೊಡ್ಡ ಸಂಖ್ಯೆಯಲ್ಲಿ ಕೆಲಸ ದೊರೆಯುವುದಿಲ್ಲ.

- ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರ ಮೂಲಕ ಗ್ರಾಮೀಣ ಪ್ರಾಂತಗಳಲ್ಲಿ ಕೆಲಸ ದೊರಕಿಸಬಹುದು ಎಂಬ ವಿವಾದವಿದೆ. ಕೂಲಿಗಾರರು ಅವಸರವಾಗುವ ಪಥಕಗಳ ಮೂಲಕ – ಜೋಡಣೆ ರಸ್ತೆ (Link roads) ಕೆರೆಗಳು, ಕಟ್ಟೆಯಂತಹ ನಿರ್ಮಾಣಾತ್ಮಕ ಕೆಲಸದ ಮೂಲಕ ಕೆಲಸ ಸೃಷ್ಟಿಸಬಹುದು. ನೀವು ಗ್ರಾಮೀಣ ಪ್ರಾಂತಗಳಲ್ಲಿ ಇರುವವರಾಗಿದ್ದರೆ ಇಂತಹ ಕೆಲಸಗಳೇನಾದರೂ ನಡೆಯುತ್ತಿವೆಯೋನೋ ತಿಳಿದುಕೊಳ್ಳಿ. ಅಲ್ಲಿನ ಜನರ ಜೀವನೋಪಾಯಕ್ಕೆ ಸರಿಹೋಗುತ್ತವೆಯೋ ತಿಳಿದುಕೊಳ್ಳಿ.



*ಚಿತ್ರ 8.4: ಅಸೆಂಬ್ಲಿಯಲ್ಲಿನ ಸಾಲು ಇರುವ ಚಿತ್ರ*

SCERT TELANGANA

## ತಂತ್ರಜ್ಞಾನ, ಕೈಗಾರಿಕೆಗಳು
## (Technology and Industry)

ಏಳನೇ ತರಗತಿಯಲ್ಲಿ ಇಲ್ಕಲ್ ಸೀರೆಗಳು ನೇಯುವ ಜಗತಯ್ಯ ಕುಟುಂಬವನ್ನು ನೆನಪಿಗೆ ತಂದುಕೊಳ್ಳಿ. ಬಟ್ಟೆ ಕೈಗಾರಿಕೆಗಳಲ್ಲಿ ಬಟ್ಟೆ ತಯಾರಿಕೆಯಲ್ಲಿ ಅನೇಕ ಕೆಲಸಗಳಿವೆ. ಈ ದಿನ ಬಟ್ಟೆ ಕೈಗಾರಿಕೆಗಳಲ್ಲಿ ವಿವಿಧ ವಿಭಾಗಗಳಲ್ಲಿ 10 ಕೋಟಿ ಜನ ಕೆಲಸ ಮಾಡುತ್ತಿದ್ದಾರೆ. ಭಾರತ ದೇಶದಲ್ಲಿ ವ್ಯವಸಾಯದ ನಂತರ ಬಟ್ಟೆ ಕೈಗಾರಿಕೆ ಹೆಚ್ಚು ಜನರಿಗೆ ಉದ್ಯೋಗ ಕಲ್ಪಿಸುತ್ತದೆ.

### ಕೈಮಗ್ಗಗಳು, ವಿದ್ಯುತ್ ಶಕ್ತಿ ಮಗ್ಗಗಳ ಉತ್ಪತ್ತಿ ಉದ್ಯೋಗಗಳ ಮೇಲೆ ಪ್ರಭಾವ :

ಭಾರತ ದೇಶದಲ್ಲಿ ಮಿಲ್ಲುಗಳ ಮೂಲಕ ಉತ್ಪತ್ತಿಯನ್ನು ಬ್ರಿಟೀಷ್‌ರು ಪ್ರವೇಶಪಡಿಸಿದರು. ಮಿಲ್ಲುಗಳು ಬಟ್ಟೆ ತಯಾರು ಮಾಡುವುದು ಪ್ರಾರಂಭಿಸಿದರಿಂದ ಕೈಮಗ್ಗದ ಬಟ್ಟೆಗಳಿಗೆ ಗಿರಾಕಿ ಕಡಿಮೆಯಾಯಿತು. ನಂತರ ಸಮಯದಲ್ಲಿ ಸಣ್ಣ ಸಣ್ಣ ಷೆಡ್ಯುಲ್‌ಗಳಲ್ಲಿ ಕೆಲಸ ಮಾಡಿ ವಿದ್ಯುತ್ ಶಕ್ತಿ ಮಗ್ಗಗಳಿಂದ ನೂಲುಮಿಲ್ಲುಗಳು ಪೈಪೋಟಿಯನ್ನು ಎದುರಿಸಲಾರಂಭಿಸಿದವು.

ವಿದ್ಯುತ್ ಶಕ್ತಿ ಮಗ್ಗ ಕೇಂದ್ರಕ್ಕೆ, ನೂಲುಮಿಲ್ಲಿಗೆ ವ್ಯತ್ಯಾಸ ಉತ್ಪತ್ತಿ ಹಂತದಲ್ಲಿರುತ್ತದೆ. ನೂಲುಮಿಲ್ಲುಗಳಲ್ಲಿ ದೊಡ್ಡ ಪ್ರಾಂತಗಳಲ್ಲಿ ನೂರು ಮಗ್ಗಗಳಿರುತ್ತವೆ. ಇದು ಕಾರ್ಖಾನೆಯಂತೆ ಇದ್ದು ವಿವಿಧ ವಿಭಾಗಗಳಲ್ಲಿ ನೂರು ಜನರಿಗೆ ಉದ್ಯೋಗ ಕಲ್ಪಿಸುತ್ತದೆ.

ವಿದ್ಯುತ್ ಮಗ್ಗ ಕೇಂದ್ರದಲ್ಲಿ ಕೆಲವು ಮಗ್ಗಗಳು ಮಾತ್ರವೇ ಇರುತ್ತವೆ. ಇದರಲ್ಲಿ ಕೆಲವು ಜನರು ಮಾತ್ರ ಕೆಲಸ ಮಾಡುತ್ತಾರೆ. ಇವುಗಳನ್ನು ಮನೆ ಹತ್ತಿರ ಇಲ್ಲವೇ ಸಣ್ಣ ಸಣ್ಣ ಷೆಡ್ಯೂಲ್‌ಗಳಲ್ಲಿ ನಿರ್ವಹಿಸುತ್ತಾರೆ.

ಬಹಳಷ್ಟು ಮಟ್ಟಿಗೆ ಮಿಲ್ಲುಗಳು ಉತ್ತಮ ಗುಣಮಟ್ಟದ ಬಟ್ಟೆ ಉತ್ಪತ್ತಿ ಮಾಡುತ್ತವೆ. ವಿದ್ಯುತ್ ಶಕ್ತಿ ಮಗ್ಗಗಳ ಮೇಲೆ ನೇಯುವ ಬಟ್ಟೆ ಗುಣಮಟ್ಟ ಒಂದು ವಿಧವಾಗಿ ಇರುತ್ತದೆ. ಅಂಗಿಗಳು, ಪ್ಯಾಂಟುಗಳು, ಸೀರೆ, ಪಂಜೆಗಳು ದುಪ್ಪಟ್ಟು, ಟವಾಳು, ಇತರ ಅವಶ್ಯಕತೆಗಳಿಗೆ ಬಟ್ಟೆಯನ್ನು ವಿದ್ಯುತ್ ಶಕ್ತಿ ಮಗ್ಗಗಳನ್ನು ನೂಲು, ಸಿಂಥೆಟಿಕ್, ಬ್ಲೆಂಡೆಡ್, ಉಣ್ಣೆ, ರೇಷ್ಮೆಯಂತಹ ದಾರಗಳಿಂದ ತಯಾರು ಮಾಡುತ್ತಾರೆ.

## ವಿದ್ಯುತ್ ಶಕ್ತಿ ಮಗ್ಗಗಳ ಪ್ರಭಾವ
## (Impact of power looms)

1940ರಲ್ಲಿ 40,000 ವಿದ್ಯುತ್ ಶಕ್ತಿ ಮಗ್ಗಗಳು ಮಾತ್ರ ಇದ್ದವು. ಪ್ರಸ್ತುತ ನಮ್ಮ ದೇಶದಲ್ಲಿ 5 ಲಕ್ಷ ವಿದ್ಯುತ್ ಶಕ್ತಿ ಮಗ್ಗಗಳ ಕೇಂದ್ರ ಗಳಲ್ಲಿ 23 ಲಕ್ಷ ವಿದ್ಯುತ್ ಶಕ್ತಿ ಮಗ್ಗಗಳು ಕೆಲಸ ಮಾಡುತ್ತಿವೆ. ಬಹಳ ಕೇಂದ್ರಗಳು ಚಿಕ್ಕವು. ಇವುಗಳಲ್ಲಿ 1-8 ವಿದ್ಯುತ್ ಶಕ್ತಿ ಮಗ್ಗಗಳಿವೆ. ತಮಿಳುನಾಡು, ಮಹಾರಾಷ್ಟ್ರ, ಗುಜರಾತ್‌ಗಳಲ್ಲಿ ವಿದ್ಯುತ್ ಶಕ್ತಿ ಮಗ್ಗದ ಕೇಂದ್ರಗಳು ಹೆಚ್ಚಾಗಿವೆ. ಆಂಧ್ರಪ್ರದೇಶ್ ದಲ್ಲಿ 50,000 ವಿದ್ಯುತ್ ಶಕ್ತಿ ಮಗ್ಗಗಳಿವೆ.

*1988-89 ರಲ್ಲಿ ಬಟ್ಟೆ ಉತ್ಪತ್ತಿ*




*2010-11 ರಲ್ಲಿ ಬಟ್ಟೆ ಉತ್ಪತ್ತಿ*




SCERT TELANGANA

'ಫೆ' ಚಿತ್ರಗಳನ್ನು ನೋಡಿರಿ (Pie diagrams) 1980 ರಿಂದ ಭಾರತ ದೇಶದಲ್ಲಿ ಬಟ್ಟೆ ಉತ್ಪತ್ತಿಯಲ್ಲಿ ವಿದ್ಯುತ್ ಶಕ್ತಿ ಮಗ್ಗಗಳ ಭಾಗ ಹೆಚ್ಚಾಗಿದೆ. ಆಗಿನಿಂದ ಪ್ರತಿ ವರ್ಷ ಇದು ಹೆಚ್ಚುತ್ತಾ ಇದೆ.

ವಿದ್ಯುತ್ ಶಕ್ತಿ ಮಗ್ಗಗಳು ದೊಡ್ಡ ಮಿಲ್ಲುಗಳಿಂದ ಸಣ್ಣ ಷೆಡ್ಯುಗಳಿಗೆ, ಮನೆಗೆ ಬದಲಾಗಿವೆ. ಇದರಿಂದ ಬಟ್ಟೆ ಕೈಗಾರಿಕೆಯಲ್ಲಿ ಗಣನೀಯವಾದ ಬದಲಾವಣೆಗಳು ಬಂದಿವೆ. ವಿದ್ಯುತ್ ಶಕ್ತಿ ಮಗ್ಗಗಳಲ್ಲಿ 60 ಲಕ್ಷ ಮಂದಿಗೆ ಉದ್ಯೋಗ ಲಭಿಸುತ್ತಿದೆ.

### ಕೈಮಗ್ಗಗಳು ಕ್ಷೀಣಿಸುವಿಕೆ (Decline in Handlooms)

ಕೈಮಗ್ಗಗಳು ಕ್ಷೀಣಿಸುವಿಕೆ ಸ್ಪಷ್ಟವಾಗಿ ಕಾಣಿಸುವ ಒಂದು ಪ್ರಧಾನ ಬದಲಾವಣೆ ಉದಾಹರಣೆಗೆ 1988 ರಲ್ಲಿ ವಿವಿಧ ರಾಜ್ಯಗಳಲ್ಲಿ 33 ಲಕ್ಷ ಕೈಯಿಂದ ನೇಯುವ ಮಗ್ಗಗಳು ಕೆಲಸ ಮಾಡುತ್ತಿದ್ದವು. 2009-2010 ರಲ್ಲಿ ಇದು 24 ಲಕ್ಷಗಳಿಗೆ ಕಡಿಮೆಯಾಯಿತು. ಕಳೆದ ಎರಡು ಶತಮಾನಗಳ ಕಾಲಗಳಲ್ಲಿ ವಿವಿಧ ರಾಜ್ಯಗಳಲ್ಲಿ ಕೈಮಗ್ಗ ಹೇಗೆ ಕಡಿಮೆ ಯಾಯಿತೋ ತಿಳಿಸುವ ಕೆಳಗಿನ ಪಟ್ಟಿಯನ್ನು ನೋಡಿರಿ. ಆದರೆ ಸಂಪ್ರಾದಾಯಕ ಬಟ್ಟೆ, ಡಿಜೈನ್‌ಗಳಲ್ಲಿ ಕೈಮಗ್ಗಕ್ಕೆ ಹೊಸ ಮಾರುಕಟ್ಟೆ ದೊರೆಯಿತು. ಸರ್ಕಾರದ ಪ್ರೋತ್ಸಾಹ, ಸಬ್ಸಿಡಿಗಳ ಸಹಾಯದಿಂದ ವಿದ್ಯುತ್‌ಶಕ್ತಿ ಮಗ್ಗಗಳಿಂದ ಪೈಪೋಟಿಯನ್ನು ತಡೆದುಕೊಂಡು ಇನ್ನೂ ಬದಿಕಿದ್ದಾವೆ.

**ಕೈಮಗ್ಗ ಉತ್ಪತ್ತಿಯಲ್ಲಿ ಬದಲಾವಣೆ**

| ರಾಜ್ಯ | 1988 | 2009 |
|---|---|---|
| ತೆಲಂಗಾಣ | 5,29,000 | 1,24,700 |
| ಗುಜರಾತ್ | 24,000 | 3,900 |
| ಕರ್ನಾಟಕ | 1,03,000 | 40,500 |
| ಮಹಾರಾಷ್ಟ್ರ | 80,000 | 4,500 |
| ಮಧ್ಯಪ್ರದೇಶ್ | 43,000 | 3,600 |
| ಪಂಜಾಬ್ | 22,000 | 300 |
| ತಮಿಳು ನಾಡು | 5,56,000 | 1,55,000 |

ಗ್ರಾಫ್ 3ನ್ನು ನೋಡಿರಿ. ಯಂತ್ರಗಳ ವಿಜ್ಞಾನವನ್ನು ವಿನಿಯೋಗಿಸುವುದರಿಂದ ಪ್ರತಿ ಕಾರ್ಮಿಕನಿಗೆ ಕೈಮಗ್ಗಗಳಿಗಿಂತ ವಿದ್ಯುತ್ ಶಕ್ತಿ ಮಗ್ಗಗಳ ಮೇಲೆ ಆರರಷ್ಟು ಹೆಚ್ಚು ಬಟ್ಟೆ ಉತ್ಪತ್ತಿ



ಚಿತ್ರ : 8.5 ಪೋಚಂಪಲ್ಲಿ ಸೀರೆ ನೇಯುವುದು

ಯಾಗುತ್ತದೆ. ಭಾರತದೇಶದಲ್ಲಿ ಕಳೆದ ಐದು ಶತಮಾನಗಳ ಕಾಲದಲ್ಲಿ ವಿದ್ಯುತ್ ಶಕ್ತಿ ಮಗ್ಗಗಳು ನಾಯಿಕೊಡೆಯಂತೆ ಏಕೆ ಹುಟ್ಟಿಬಂದವೋ ಇದು ತಿಳಿಯಪಡಿಸುತ್ತದೆ.

ಆದರೆ ವಿದ್ಯುತ್ ಶಕ್ತಿ ಮಗ್ಗಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕೆಲವು ಸಮಸ್ಯೆಗಳಿವೆ. ಮಿಲ್ಲುಗಳಿಗೆ ಹೋಲಿಸಿದರೆ ವಿದ್ಯುತ್ ಶಕ್ತಿ ಮಗ್ಗಗಳು ಬಹಳ ಕಡಿಮೆ ಸಂಬಳ ದೊರೆಯುತ್ತದೆ. ವಿದ್ಯುತ್ ಶಕ್ತಿ ಮಗ್ಗಗಳಲ್ಲಿ ಉತ್ಪತ್ತಿ ಮಾಡಿದ ಬಟ್ಟೆಯನ್ನು ಹಿಡಿದು ಕೂಲಿ ಕೊಡುತ್ತಾರೆ. ವೈದ್ಯ ಸೌಕರ್ಯಗಳು, ವೃದ್ಧಾಪ್ಯವೇತನ, ಇತರ ಸಾಮಾಜಿಕ ಭದ್ರತೆಯನ್ನು






SCERT TELANGANA

ಕಲ್ಪಿಸಬೇಕೆಂಬ ಜವಾಬ್ದಾರಿ ವಿದ್ಯುತ್ ಶಕ್ತಿ ಮಗ್ಗ ಕೇಂದ್ರಗಳಿಗಿಲ್ಲ. ವಿದ್ಯುತ್ ಕಡಿತವಿದ್ದರೆ ವಿದ್ಯುತ್ ಶಕ್ತಿ ಮಗ್ಗ ಕಾರ್ಮಿಕರಿಗೆ ಯಾವುದೇ ರೀತಿಯ ವೇತನ ದೊರೆಯುವುದಿಲ್ಲ. ಮಿಲ್ಲುಗ್ಗಳಲ್ಲಿ ಕಾರ್ಮಿಕರು ಸಂಘಗಳಾಗಿ ಏರ್ಪಡುತ್ತಾರೆ.

ಕೂಲಿ ರೇಟು ನಿರ್ಧರಿಸುವ ಮಾಲಿಕನು ಈ ಸಂಘಗಳೊಂದಿಗೆ ಸಂಪರ್ಕಿಸಬೇಕಾಗಿರುತ್ತದೆ. ಅನೇಕ ವಿದ್ಯುತ್ ಶಕ್ತಿ ಮಗ್ಗ ಕೇಂದ್ರಗಳಲ್ಲಿ ಕಾರ್ಮಿಕ ಸಂಘಗಳಿಲ್ಲ. ವಿದ್ಯುತ್ ಶಕ್ತಿ ಮಗ್ಗ ಕೇಂದ್ರಗಳ ಮೇಲೆ ಅಧ್ಯಯನ 2008 ರಲ್ಲಿ ಈ ವಿಷಯಗಳು ಬೆಳಕಿಗೆ ತಂದಿದೆ. ವಿದ್ಯುತ್ ಶಕ್ತಿ ಕೇಂದ್ರಗಳ ಕಾರ್ಮಿಕರು ಆಹಾರ ಅಭದ್ರತೆ, ಪೋಷಕ ಆಹಾರ ಲೋಪ, ರಕ್ತಹೀನತೆ, ಕ್ಷಯ, ಅಸ್ತಮಾ ಮಹಿಳೆಯರ ಗರ್ಭಾಶಯಕ್ಕೆ ಸಂಬಂಧಿಸಿದ ಸಮಸ್ಯೆಗಳಂತಹ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಗೃಹ ವಸತಿ ಇಲ್ಲದಿರುವಿಕೆ. ಮಕ್ಕಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಶಾಲೆ ಮಧ್ಯದಲ್ಲಿ ಬೀಡುವುವಂತಹ ಪ್ರಧಾನ ಸಮಸ್ಯೆಗಳಿವೆ.

- ಬಟ್ಟೆ ಉತ್ಪತ್ತಿಯನ್ನು ನಾಲ್ಕು ಪ್ರದಾನ ವರ್ಗಗಳಾಗಿ ವಿಭಜಿಸಿದ್ದಾರೆ. ಮಿಲ್ಲು, ಕೈಮಗ್ಗ ______________ ಮತ್ತು ____________.
- 1988 ರಲ್ಲಿ------------ ರಾಜ್ಯದಲ್ಲಿ ಕೈಮಗ್ಗಗಳು ಅತ್ಯಧಿಕವಾಗಿವೆ. 2009 ರಲ್ಲಿ ----------- ರಾಜ್ಯದಲ್ಲಿ ಇವು ಹೆಚ್ಚಾಗಿವೆ.

2009 ರಲ್ಲಿ ಅತಿ ಕಡಿಮೆ ಕೈಮಗ್ಗಗಳಿರುವ ರಾಜ್ಯ ಯಾವುದು ?

- ಮಿಲ್ಲು ಕಾರ್ಮಿಕರಿಗೆ ತಿಂಗಳ ಸಂಬಳ ಕೊಟ್ಟರೆ _________ಕಾರ್ಮಿಕರಿಗೆ _________ ಆಧಾರವಾಗಿ ಕೂಲಿ ಪಾವತಿಸುತ್ತದೆ .



*ಚಿತ್ರ: 8.6 (ಮೇಲೆ) ಮಹಿಳೆಯರು ರೇಡಿಯೋವನ್ನು ದುರಸ್ಥಿ ಮಾಡುವುದು(ಬಲ) ಚೈನಾದಲ್ಲಿ ದೂರವಾಣಿಯನ್ನು ತಯಾರುಸುತ್ತಿರುವ ಸಾಲು*

## ಸೇವಾ ರಂಗದಲ್ಲಿ ತಾಂತ್ರಿಕತೆಯ ಬದಲಾವಣೆ (Technology change in Service Sector)

ತಾಂತ್ರಿಕತೆಯ ಬದಲಾವಣೆಗಳು ಸೇವಾರಂಗವನ್ನು ಕೂಡ ಪ್ರಭಾವಗೊಳಿಸುತ್ತವೆ. ವ್ಯವಸಾಯ, ಕೈಗಾರಿಕೆಗಳಿಗೆ ಬೆಂಬಲ ಕೊಡುವವು ಕೂಡ ಸೇವಾರಂಗದಲ್ಲಿ ಬರುತ್ತವೆ. ಉದಾಹರಣೆಗೆ ಹತ್ತಿ ಬೆಳೆಸಿದರೆ ಅದನ್ನು ಮಾರಲು ಹತ್ತಿರದ ಪಟ್ಟಣಕ್ಕೆ ರವಾನಿಸಬೇಕು. ಇಲ್ಲವೆ ವಿದ್ಯುತ್ ಶಕ್ತಿ ಕೇಂದ್ರಗಳಲ್ಲಿ ಬಟ್ಟೆ ಉತ್ಪತ್ತಿ ಮಾಡಬೇಕೆಂದರೆ ನೂಲು ಕೇಂದ್ರಗಳಿಂದ ನೂಲು ರವಾನೆ ಮಾಡಬೇಕು. ಎಲ್ಲಾ ವ್ಯಾಪಾರ ಕಾರ್ಯ ಕಲಾಪಗಳು ಕೂಡ ಸೇವಾರಂಗದ ಕೆಳಗೆ ಬರುತ್ತವೆ. ನೇರವಾಗಿ ಉತ್ಪತ್ತಿಗೆ ಸಹಾಯ ಮಾಡಲು ಅತ್ಯವಸರ ಕಾರ್ಯಕ್ರಮಗಳು ಕೂಡ ಸೇವಾರಂಗದ ಕೆಳಗೆ ಬರುತ್ತವೆ. ಉದಾಹರಣೆಗೆ ನಮಗೆ ಟೀಚರ್, ಡಾಕ್ಟರ್, ಲಾಯರ್‌ಗಳು ವೈಯಕ್ತಿಕ ಸೇವೆ ಸಲ್ಲಿಸುವ ಬಟ್ಟೆ ತೊಳೆಯುವವರು, ಕೂದಲು ಕತ್ತರಿಸುವವರು, ಚಪ್ಪಲಿ ತಯಾರು ಮಾಡುವವರು ಬೇಕು. ಅದೇ ವಿಧವಾಗಿ ಜಮ,



SCERT TELANGANA

ಖರ್ಚುಗಳ ಲೆಕ್ಕವನ್ನು ನೋಡಿಕೊಳ್ಳುವವರು, ಆಡಳಿತಕ್ಕೆ ಸಂಬಂಧಿಸಿದ ಕೆಲಸ ಮಾಡುವವರು. ಬ್ಯಾಂಕುಗಳಲ್ಲಿ ಕೆಲಸ ಮಾಡುವವರುಬೇಕು. ವ್ಯಾಪಾರವನ್ನು ವೇಗವಾಗಿ ಉತ್ತಮ ಪಡಿಸುವಲ್ಲಿ ಪ್ರಸಾರ ಮಾಧ್ಯಮಗಳು ಹೇಗೆ ಸಹಕರಿಸುತ್ತವೆಯೋ ನೋಡೋಣ. ತಾಂತ್ರಿಕ ಬದಲಾವಣೆಯಿಂದ ಸಮಾಚಾರ ಶೀರ್ಘವಾಗಿ ತಲುಪುತ್ತದೆ. ಎಲ್ಲರಿಗೂ ಸುಲಭವಾಗಿ ಕೈಗೆಟಕುತ್ತದೆ.

## ಬದಲಾಗುತ್ತಿರುವ ತಾಂತ್ರಿಕ ಪರಿಜ್ಞಾನ, ಪ್ರಚಾರ ರಂಗ ಎಲ್ಲರಿಗೂ ಸುಲಭವಾಗಿ ಶೀರ್ಘವಾಗಿ ದೊರೆಯುವ

ದಾರಂ ವಿನೋದ್ ಕರೀಮ್‌ನಗರ್‌ದಲ್ಲಿ ವಾಸಿಸುತ್ತಿರುವ , ನಡುಪ್ರಾಯದ ವ್ಯಾಪಾರಿ, ಆತನು ಕಳೆದ 35 ವರ್ಷಗಳಿಂದ ಒಂದು ಆಟೋ ಮೊಬೈಲ್ ಶಾಪನ್ನು ನಡೆಸುತ್ತಿದ್ದಾನೆ. ಎಲ್ಲಾ ವಿಧವಾದ ಬಿಡಿ ಭಾಗಗಳನ್ನು ಆತನು ಮಾರುತ್ತಾನೆ. ಆತನಿಗೆ ಒಂದು ಲ್ಯಾಂಡ್‌ಲೈನ್ ಫೋನ್ ಇತ್ತು. ಹೊರಗಿನ ಪಟ್ಟಣದ ಜನಗಳೊಂದಿಗೆ ಮಾತನಾಡಬೇಕೆಂದರೆ ಒಂದು ಕಾಲದಲ್ಲಿ ಟ್ರಂಕ್‌ಕಾಲ್ ಬುಕ್ ಮಾಡಬೇಕಾಗಿತ್ತು. ಆತನಿಗೆ ಲೈನ್ ಸಿಗುವವರೆಗೆ ಕಾದು ಇರಬೇಕಾಗುತ್ತಿತ್ತು. ಒಂದೊಂದು ಸಾರಿ ತನಗೆ ಬೇಕಾದ ವ್ಯಕ್ತಿ ಸಿಗುತ್ತಿರಲಿಲ್ಲ. ಯಂತ್ರದಲ್ಲಾಗಲಿ ಟೆಲಿಫೋನ್ ತಂತಿಗಳಲ್ಲಿ ಯಾವುದೇ ಸಮಸ್ಯೆ ಇದ್ದರೆ ಅವು ಸರಿಯಾಗಲು ಕೆಲವು ವಾರಗಳ ಸಮಯ ಕಾಯಬೇಕಾಗುತಿತ್ತು.

ಈಗ ಪರಿಸ್ಥಿತಿಗಳು ಬದಲಾಗಿವೆ. ಮೊಬೈಲ್ (ಸಂಚಾರವಾಣಿ) ಫೋನ್ ಬಳಕೆಗೆ ಬಂದಿವೆ. ತನಗೆ ಬೇಕಾದ ವ್ಯಕ್ತಿ ಜೊತೆ ತಕ್ಷಣ, ಸುಲಭವಾಗಿ ಮಾತನಾಡುತ್ತಿದ್ದಾನೆ. ವಸ್ತುಗಳ ಕೊಳ್ಳುವಿಕೆಗೆ ಸರಕು ಲಭ್ಯತೆ ಇದೆ. ಲಭ್ಯವಿಲ್ಲ ಅವುಗಳ ಬೆಲೆ ತಿಳಿದುಕೊಳ್ಳಲು, ಸರಕುಗಳು ಒದಗಿಸಲು ಆತನು ಮೊಬೈಲ್ ಫೋನ್ ಉಪಯೋಗಿ ಸುತ್ತಿದ್ದಾನೆ. ಈಗ ಆತನಿಗೆ ತನ್ನ ವ್ಯಾಪಾರ ವಿಷಯಗಳು ಸುಲಭವಾಗಿ ತಿಳಿಯುತ್ತಿವೆ. ಕುಟುಂಬ ಸಭ್ಯರು ಸಂಬಂಧಿಕರು, ಸ್ನೇಹಿತರಿಂದ ವೈಯಕ್ತಿಕ ವಿಷಯಗಳಿಗೆ ಮಾತ್ರವಲ್ಲದೆ ಇಂತಹ ಬಿಡಿ ಭಾಗ ಇದೆಯೋ ಇಲ್ಲವೋ ತಿಳಿದುಕೊಳ್ಳಲು ಮೆಕಾನಿಕ್ಕರು ಆತನಿಗೆ ಫೋನು ಮಾಡುತ್ತಾರೆ. ಗತಕಾಲದಲ್ಲಿ ಹೈದರಾಬಾದ್‌ನಿಂದ ಯಾವುದಾದರೂ ಸರಕನ್ನು ತರಿಸಬೇಕೆಂದರೆ ಅದು ಎಷ್ಟು ದಿನಗಳಿಗೆ ಬರುತ್ತದೋ ತಿಳಿಯುತ್ತಿರಲಿಲ್ಲ. ಈಗ ಆ ಸರಕು ಸಾಗಿಸುತ್ತಿರುವ ಲಾರಿ ಡ್ರೈವರಿಗೆ ಫೋನ್ ಮಾಡಿ ಎಲ್ಲಿಯವರೆಗೆ ತಲುಪಿದ್ದಿರೋ ತಿಳಿದುಕೊಳ್ಳುತ್ತಾ ಇರುತ್ತಾನೆ.

ಭಾರತ ದೇಶದಲ್ಲಿ ಸಮೂಹ ಸಂಪರ್ಕ ಮಾಧ್ಯಮಗಳ ಜಾಲಬಂಧ (Telecommunication network) ಪ್ರಪಂಚದಲ್ಲಿ ಮೂರನೇ ಅತಿದೊಡ್ಡದೆಂಬ ವಿಷಯ ನಿಮಗೆ ಗೊತ್ತಾ ? ಪ್ರಸ್ತುತ ಫೋನ್ ಮೂಲಕ ಯಾರೊಂದಿಗಾದರು ಸುಲಭವಾಗಿ ಮಾತನಾಡಬಹುದು. ಇದಕ್ಕೆ ಲ್ಯಾಂಡ್‌ಲೈನ್ ಫೋನ್ ಆದರೂ, ಮೊಬೈಲ್ ಫೋನಾದರೂ ಉಪಯೋಗಿಸಬಹುದು. ಆದರೂ 1990 ರವರೆಗೆ ಪರಿಸ್ಥಿತಿ ಈಗಿಲ್ಲ. ಆಗ ಕೇವಲ ಲ್ಯಾಂಡ್‌ಲೈನ್ ಫೋನುಗಳಿದ್ದವು. ಅವುಗಳನ್ನು ಕೂಡ ಸರ್ಕಾರವೇ ಕೊಡುತ್ತಿತ್ತು. ಭಾರತ ದೇಶವೆಲ್ಲಾ (ಸಂಚಾರವಾಣಿ) ಮೊಬೈಲ್ ಫೋನ್ 2001 ರಲ್ಲಿ 50 ಲಕ್ಷದಿಂದ 2012 ಮೇ ವರೆಗೆ 92.9 ಕೋಟಿಗೆ ಮುಟ್ಟಿತು. ಲ್ಯಾಂಡ್‌ಲೈನ್ ಫೋನ್‌ಗಿಂತ ಮೊಬೈಲ್ ಫೋನ್ 20 ರಷ್ಟು ಹೆಚ್ಚು ಟೆಲಿಫೋನ್ ತಂತ್ರಜ್ಞಾನ ಬದಲಾವಣೆಯಿಂದ

*ಗ್ರಾಫ್ -4 ದೂರವಾಣಿ/ಸಂಚಾರವಾಣಿಯ ಸಂಪರ್ಕ ಪ್ರತಿ 100 ಜನರಿಗೆ*




SCERT TELANGANA

ಸಮಾಚಾರ ಪಡೆಯುವ ಖರ್ಚು ಎಷ್ಟೋ ಕಡಿಮೆಯಾಗಿದೆ. 1995 ರಲ್ಲಿ ಮೊದಲ ಬಾರಿ ಮೊಬೈಲ್ ಫೋನ್ ಸೌಕರ್ಯ ಬಂದಾಗಿನಿಂದ 2002ರ ವರೆಗೆ ಫೋನು ಮಾಡಿದವರು. ಫೋನು ಸೌಕರ್ಯ ಪಡೆದವರು.ಕೂಡ ಹಣ ಸಲ್ಲಿಸಬೇಕಾಗಿ ಬರುತ್ತಿತ್ತು. ಆದರಿಂದ ಮೊಬೈಲ್ ಫೋನ್ ಕೊಳ್ಳಲು ಬಹಳ ಕಡಿಮೆ ಜನ ಆಸಕ್ತಿ ತೋರಿಸಿದರು. ಈ ವಿಧಾನ 2003 ರಲ್ಲಿ ಬದಲಾಗಿದೆ. ಈಗ ಫೋನು ಮಾಡುವವರಿಗೆ ಖರ್ಚಾಗುತ್ತದೆ. 1994 ರಲ್ಲಿ ಒಂದು ವ್ಯಕ್ತಿ ಲ್ಯಾಂಡ್‌ಲೈನ್ ಫೋನುಗಳಲ್ಲಿ 500 ಕಿಲೋ ಮೀಟರ್ ದೂರದಲ್ಲಿರುವ ಮತ್ತೊಬ್ಬ ವ್ಯಕ್ತಿಯೊಂದಿಗೆ ಮೂರು ನಿಮಿಷಗಳ ಕಾಲ ಮಾತನಾಡಲು ಆತನಿಗೆ 28 ರೂಪಾಯಿ ಖರ್ಚು ಆಗುತಿತ್ತು. 2003 ರಲ್ಲಿಗೆ ಇದಕ್ಕೆ 2.40 ರಿಂದ 4.80 ರೂಪಾಯಿಗಳು ಮಾತ್ರ ಖರ್ಚಾಗುತ್ತದೆ.



*ಚಿತ್ರ 8.7: ಸೌರ ತಾಂತ್ರಿಕತೆಯ ಯಂತ್ರ ಘಟಕದಲ್ಲಿ ಶಿಕ್ಷಣ ನೀಡುತ್ತಿರುವ ಮಹಿಳೆ. ಈಪಾಠ್ಯಾಂಶದಲ್ಲಿ,ತಾಂತ್ರಕತೆಯಲ್ಲಿ ತೊಡಗಿರುವ ಮಹಿಳೆಯರ ಛಾಯಾ ಚಿತ್ರಗಳಿವೆ. ಮೇಲಿನ ಚಿತ್ರದಂತೆ ಅನೇಕ ಮಂದಿ ಮಹಿಳೆಯರು ಇಂಜಿನಿಯರಿಂಗ್, ಡಿಗ್ರೀ ಇಲ್ಲದವರೆ ಮಹಿಳೆಯರು ಇಂಜಿನಿಯರಿಂಗ್ ವಿದ್ಯೆ ಓದುವುದರ ಬಗೆಗೆ ಇರುವ ಭಿನ್ನಾಭಿಪ್ರಾಯಗಳ ಮೇಲೆ ತರಗತಿ ಕೋಣೆಯಲ್ಲಿ ಚರ್ಚಿಸಿರಿ*

- ಪ್ರಸ್ತುತ ಬೆಲೆ ಹೇಗೆ ಇವೆಯೋ ತಿಳಿದುಕೊಳ್ಳಿ. ಒಂದು ಕಂಪನಿಗೆ ಮತ್ತೊಂದು ಕಂಪನಿಗೆ ಬೆಲೆಯಲ್ಲಿ ವ್ಯತ್ಯಾಸಗಳು ಏಕೆ ಇವೆಯೋ ? ಅವು ಏಕೆ ಕಡಿಮೆಯಾಗುತ್ತಿವೆಯೋ ತಿಳಿದುಕೊಳ್ಳಿ.

## ಹೊಸ ನೈಪುಣ್ಯಗಳು ಮತ್ತು ಉದ್ಯೋಗಗಳು
## New skills and new jobs

ಸರ್ಕಾರದ ಕಂಪನಿ ಮಾತ್ರವೇ ಅಲ್ಲವೆ ಅನೇಕ ಖಾಸಗೀ ಕಂಪನಿಗಳು ಲ್ಯಾಂಡ್‌ಲೈನ್, ಮೊಬೈಲ್ ಫೋನ್ ಸೇವೆಗಳನ್ನು ಒದಗಿಸುತ್ತಿವೆ. ಸಂಪರ್ಕ ಮಾಧ್ಯಮಗಳ ಸೇವೆಗಳಲ್ಲಿ ಖಾಸಗಿ ಕಂಪನಿಗಳ ಭಾಗ ಹೆಚ್ಚುತ್ತಾ ಇದೆ. ಮೊಬೈಲ್ ಫೋನ್ ತಯಾರು ಮಾಡುವ ಅನೇಕ ಕಂಪನಿಗಳು ಭಾರತ ದೇಶದಲ್ಲಿ ಸ್ಥಿರಪಡುತ್ತಿವೆ. ಈ ಕಂಪನಿಗಳು ಇವುಗಳನ್ನು ಪ್ರಪಂಚದ ಎಲ್ಲಾ ಕಡೆಗೂ 80 ದೇಶಗಳಿಗೆ ರಫ್ತು ಮಾಡುತ್ತಿವೆ. ಟೆಲಿಫೋನ್ ಮೊಬೈಲ್ ತಾಂತ್ರಿಕತೆಗೆ ಹೊಸ ನೈಪುಣ್ಯಗಳು ಕೂಡ ಅವಶ್ಯಕತೆ. ಬಹು ಜಾತಿ ಕಂಪನಿಗಳಲ್ಲಿ, ಮೊಬೈಲ್ ಫೋನು ತಯಾರಿ, ಟೆಲಿಫೋನ್ ಬೂತ್‌ಗಳಲ್ಲಿ, ಮೊಬೈಲ್ ಫೋನು ಮಾರಾಟದಲ್ಲಿ ದುರಸ್ತಿಗಳೊಂದಿಗೆ ರೀಚಾರ್ಜ್ / ಟಾಪ್ ಅಪ್ ಸೇವೆಗಳಲ್ಲಿ ಯುವಜನರಿಗೆ ಹೊಸ ಉದ್ಯೋಗಗಳು ಏರ್ಪಟ್ಟಿವೆ.

## ಮುಖ್ಯ ಪದಗಳು

| | | |
|---|---|---|
| 1. ತಂತ್ರಜ್ಞಾನ | 2. ಶೋಧನೆ | 3. ನೀರಾವರಿ ಸೌಕರ್ಯ |
| 4. ರಸಾಯನಿಕ ಗೊಬ್ಬರ, ಕ್ರಿಮಿನಾಶಕಗಳು | 5. ವ್ಯವಸಾಯ ಕೆಲಸಗಳು | |
| 6. ಸೇವಾ ಚಟುವಟಿಕೆಗಳು | | |

SCERT TELANGANA

## ನಿಮ್ಮ ಅಭ್ಯಾಸವನ್ನು ಅಭಿವೃದ್ದಿಪಡಿಸಿಕೊಳ್ಳಿ

1. ತಾಂತ್ರಿಕ ವಿಜ್ಞಾನ ಅವಶ್ಯಕತೆ ಇಲ್ಲದೇ ಕೆಲಸ ಎಂದು ನರಹರಿ ಕೆಳಗೆ ಕೊಟ್ಟ ಪಟ್ಟಿ ತಯಾರಿಸಿದನು. ನೀವು ಆತನೊಂದಿಗೆ ಸಮ್ಮತಿಕೊಡುತ್ತೀರಾ ? ಸಮ್ಮತಿಕೊಡದಿದ್ದರೆ ಆತನು ತಪ್ಪು ಎಂದು ನಿರೂಪಿಸಿರಿ.
   a) ಹಾಡು ಹಾಡುತ್ತಿರುವಾಗ
   b) ಇಡ್ಲಿ ಮಾಡುತ್ತಿರುವಾಗ
   c)ರಂಗಸ್ಥಳದ ಮೇಲೆ ನಾಟಕ ಅಭಿನಯಿಸುವಾಗ
   d) ಮಾರಾಟಕ್ಕೆ ಹೂವಿನ ಹಾರ ತಯಾರು ಮಾಡುವಾಗ
2. ನೂಲು ಮಿಲ್ಲುಗಳು, ವಿದ್ಯುತ್ ಶಕ್ತಿ ಮಗ್ಗಗಳಲ್ಲಿ ಕಾರ್ಮಿಕರ ಪರಿಸ್ಥಿತಿ ಹೇಗೆ ಬದಲಾಗಿದೆ ವಿವರಿಸಿರಿ. ಈ ಬದಲಾವಣೆಯಿಂದ ಕೂಲಿಗಾರರಿಗೆ ಲಾಭನಾ, ಯಜಮಾನ್ಯರಿಗಾ ? ನಿಮ್ಮ ಉತ್ತರಕ್ಕೆ ಕಾರಣಗಳು ಕೊಡಿರಿ.
3. ಭತ್ತ ಕತ್ತರಿಸುವ ಯಂತ್ರಗಳನ್ನು ಬಳಸುವಲ್ಲಿ ಪ್ರಯೋಜನಗಳೇನು ? ಯಾರಿಗೆ ಹೆಚ್ಚಾಗಿ ಪ್ರಯೋಜನ ? ಭತ್ತ ಕತ್ತರಿಸುವ ಯಂತ್ರಗಳನ್ನು ರೈತರು ಏಕೆ ಉಪಯೋಗಿಸುತ್ತಿದ್ದಾರೆ ?
4. ತಾಂತ್ರಿಕ ವಿಜ್ಞಾನದಲ್ಲಿ ಬದಲಾವಣೆಯಿಂದ ಉದ್ಯೋಗ ಅವಕಾಶದಲ್ಲಿ ಬದಲಾವಣೆಗಳು ಬರುತ್ತವೆಯಾ ? ಈ ವಾಕ್ಯವನ್ನು ನೀವು ಸಮ್ಮತಿಸುತ್ತೀರಾ ? ಏಕೆ ?
5. ಟೆಲಿಫೋನ್‌ಗಳಲ್ಲಿ ತಾಂತ್ರಿಕ ವಿಜ್ಞಾನ ಬದಲಾಗಿದೆ ಎಂದು ಪ್ರಭಾವತಿ ಭಾವಿಸುತ್ತಾಳೆ. ಹೊಸ ಉದ್ಯೋಗಗಳು ಓದಿದವರಿಗೆ ಮಾತ್ರ ಬರುತ್ತಿವೆ ಎಂದು ಆಕೆ ಅಭಿಪ್ರಾಯ. ಭಾರತ ದೇಶದಲ್ಲಿ ಅನಕ್ಷರಸ್ಥರು ಹೆಚ್ಚು ಜನ ಇದ್ದಾರೆಂದು, ಆಧುನಿಕ ತಂತ್ರಜ್ಞಾನ ಓದಿದ್ದವರಿಗೇ ಹೆಚ್ಚು ಉಪಯುಕ್ತವಾಗಿದೆ ಎಂದು ಆಕೆ ಎನ್ನುತ್ತಾಳೆ. ನೀವು ಆಕೆಯೊಂದಿಗೆ ಏಕೀಭವಿಸುತ್ತಿರಾ? ಸಮ್ಮತಿಸುತ್ತಿರಾ ? ನಿಮ್ಮ ಕಾರಣಗಳನ್ನು ಹೆಸರಿಸಿರಿ.
6. ಈ ಅಧ್ಯಾಯನದಲ್ಲಿ ಮೂರು ರಂಗಗಳಲ್ಲಿ ಬಂದ ಬದಲಾವಣೆಯನ್ನು ಚರ್ಚಿಸಿದೆವು. ಕೆಳಗಿನ ಪಟ್ಟಿಯಲ್ಲಿ ಪ್ರತಿ ಒಂದಕ್ಕೆ ಪುಸ್ತಕದಲ್ಲಿ ಕೊಟ್ಟಿದ್ದಲ್ಲದೇ ಒಂದು ಹೊಸ ಉದಾಹರಣೆಯನ್ನು ಗುರ್ತಿಸಿರಿ.

| ಕ್ರ. ಸಂ. | ರಂಗ | ಹಳೆ ತಂತ್ರಜ್ಞಾನ | ಹೊಸ ತಂತ್ರಜ್ಞಾನ | ಉದ್ಯೋಗ / ಉತ್ಪತ್ತಿ / ಮಾನವ ಶ್ರಮ ಕಡಿಮೆ ಯಾಗುವುದು ಅಥವಾ ಹೆಚ್ಚಾಗುವುದರ ಮೇಲಿನ ಪ್ರಭಾವ |
|---|---|---|---|---|
| 1 | ವ್ಯವಸಾಯ | | | |
| 2 | ಕೈಗಾರಿಕೆ | | | |
| 3 | ಸೇವಾ ರಂಗ | | | |

7. ಹೊಸ ನೈಪುಣ್ಯಗಳು, ಹೊಸ ಉದ್ಯೋಗಗಳು ಎನ್ನುವ ಪ್ಯಾರಾ ಓದಿ ಕೆಳಗಿನ ಪ್ರಶ್ನೆಗೆ ಉತ್ತರ ಕೊಡಿ. ನಿಮ್ಮ ಪ್ರಾಂತಗಳಲ್ಲಿ ಯುವಕರಿಗೆ ಸೃಷ್ಟಿಸಿಲಾದ ಉದ್ಯೋಗಗಳಾವುವು ?
8. ಪ್ರಪಂಚ ಭೂಪಟದಲ್ಲಿ ಕೆಳಗಿನವುಗಳನ್ನು ಗುರ್ತಿಸಿರಿ.
   A) ಇಂಗ್ಲಾಂಡ್ B) ಅಮೇರಿಕಾ C) ಭಾರತ
9. ಅಡವಿಗಳಲ್ಲಿ ಮತ್ತು ಅಡವಿಗಳ ಸುತ್ತಮುತ್ತ ವಾಸಿಸುವವರು ನೂತನ ತಾಂತ್ರಿಕ ಜ್ಞಾನವನ್ನು ಉಪಯೋಗಿಸಲು ಸಾಧ್ಯವಿಲ್ಲದ ಸ್ಥಿತಿಯಲ್ಲಿ ಇರುತ್ತಾರೆ. ಅಂತಹವರ ಉತ್ತಮ ಜೀವನಕ್ಕೆ ನೀನು ಕೊಡುವ ಸಲಹೆಗಳೇನು ?

**ಪ್ರಾಜೆಕ್ಟ್ ಕೆಲಸ** : ಶ್ರೀಪುರ ಎನ್ನುವ ಗ್ರಾಮದಲ್ಲಿ ಮಲ್ಲಯ್ಯ ಒಬ್ಬ ರೈತ. ಆ ಗ್ರಾಮದಲ್ಲಿ 100 ಮನೆಗಳಿವೆ. ಪ್ರಸ್ತುತ ನಾಟುವ, ಕಳೆಕೀಳುವುದು, ಬೆಳೆ ಕೊಯ್ಯುವ, ರಸಾಯನಿಕ ಗೊಬ್ಬರಗಳು, ಕ್ರಿಮಿನಾಶಕಗಳು ................ ವಂತಹ ಎಲ್ಲಾ ಕೆಲಸಗಳು ಯಂತ್ರಗಳಿಂದ ನಡೆಯುತ್ತಿವೆ. ಕಳೆದ ದಿನಗಳಲ್ಲಿ ಈ ಕೆಲಸಗಳೆಲ್ಲವನ್ನು ಮನುಷ್ಯರು ಮಾಡುತ್ತಿದ್ದರು. ಆ ಗ್ರಾಮದಲ್ಲಿ 33 ಟ್ರಾಕ್ಟರುಗಳು, 15 ಭತ್ತ ಕತ್ತರಿಸುವ ಯಂತ್ರಗಳಿವೆ. ಅವುಗಳಲ್ಲಿ ಕೆಲವನ್ನು ಬಾಡಿಗೆಗೆ ಕೊಡುತ್ತಾರೆ. ಹೊಲ ಊಳಲು ಟ್ರಾಕ್ಟರ್ ಯಜಮಾನರು ಗಂಟೆಗೆ 300 ರೂಪಾಯಿ ತೆಗೆದುಕೊಳ್ಳುತ್ತಿದ್ದಾರೆ. ತಮ್ಮ ಹೊಲಗಳಲ್ಲಿ ಈ ಯಂತ್ರಗಳನ್ನು ಉಪಯೋಗಿಸುವವರ ಸಂಖ್ಯೆ ದಿನದಿನಕ್ಕೆ ಹೆಚ್ಚಾಗುತ್ತಿದೆ. ಈ ವಿಷಯದ ಆಧಾರವಾಗಿ ಚಿತ್ರಗಳಿಂದ, ಗ್ರಾಮಗಳಲ್ಲಿನ ವಿವಿಧ ವರ್ಗಗಳ ಮಧ್ಯ ನಡೆಯುವ ಚರ್ಚೆಗಳಿಂದ ಒಂದು ಗೋಡೆ ಪತ್ರಿಕೆ ತಯಾರು ಮಾಡಿರಿ.



SCERT TELANGANA

ಘಟಕ 9

# ಸಾರ್ವಜನಿಕ ಆರೋಗ್ಯ - ಸರ್ಕಾರ

ಪ್ರಜೆಗಳ ಮೂಲಭೂತ ಅವಶ್ಯಕತೆಗಳನ್ನು ಸರ್ಕಾರ ತೀರಿಸುತ್ತದೆ ಎಂದು ದೇಶ ಪೌರರಾಗಿ ನೀವು ಭಾವಿಸುತ್ತೀರಿ. ಸ್ವಚ್ಛವಾದ ನೀರು, ಸರಿಯಾದ ಪರಿಶುಭ್ರತೆ, ಕನಿಷ್ಠ ಆಹಾರ, ವಿದ್ಯೆ ಮತ್ತು ಆರೋಗ್ಯ ಸೌಕರ್ಯಗಳು ಎಲ್ಲರಿಗೂ ಅವಶ್ಯಕ. ಯಾರನ್ನು ಕಡೆಗಾಣಿಸಬಾರದು, ಅವರು ಶ್ರೀಮಂತರ ಇಲ್ಲವೆ ಬಡವರು ಎಂಬುದರ ಮೇಲೆ ಆಧಾರಪಟ್ಟಿರಬಾರದು. ಪೌರೆಲ್ಲರೂ ಸಮಾರು ಎಂದು ಭಾವಿಸುತ್ತಿದ್ದೇವೆ. ಆದ್ದರಿಂದ ಈ ಪ್ರಾಥಮಿಕ ಅವಶ್ಯಕತೆಗಳು ಎಲ್ಲರಿಗೂ ದೊರೆಯುವಂತಿರಬೇಕು. ವೈದ್ಯಕೀಯ ರಂಗದ ಅಧ್ಯಯನದ ಮೂಲಕ ನಮ್ಮ ದೇಶದಲ್ಲಿ ಸಂವಿಧಾನ ಕಲ್ಪಿಸಿಕೊಟ್ಟ ಸೌಲಭ್ಯಗಳು ಎಷ್ಟರ ಮಟ್ಟಿಗೆ ತೃಪ್ತಿಕರವಾಗಿ ಇದ್ದಾವೆಯೋ ನಾವು ಪರಿಶೀಲಿಸೋಣ.

**ತಿಳಿದುಕೊಳ್ಳಿ.**

- ಮಲೇರಿಯಾ ನಿವಾರಣೆಗೆ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು ?
- ಗ್ರಾಮೀಣ ಪ್ರಾಂತಗಳಲ್ಲಿ ವೈದ್ಯರು ಕೆಲಸ ಮಾಡಲು ಇಷ್ಟಪಡದೆ ಇರಲು ಕಾರಣವೇನು ?
- ನೀವು ಪಾಠಶಾಲೆಗಳಲ್ಲಿ ಕುಡಿಯುವ ನೀರು ಶುಭ್ರವಾಗಿ ಇವೆಯಾ ?
- ಅಂಗನವಾಡಿಗಳಲ್ಲಿ ಮಕ್ಕಳಿಗೆ ಆಹಾರ ಏಕೆ ಕೊಡುತ್ತಿದ್ದಾರೆ? ನಿಮ್ಮ ಪ್ರಾಂತದಲ್ಲಿನ ಅಂಗನವಾಡಿಯವರಿಗೆ ತಕ್ಕಷ್ಟು ಆಹಾರ ಸಿಗುತ್ತದೆಯಾ ?

ರೋಗಗಳನ್ನು ನಿವಾರಿಸಲು, ವೈದ್ಯ ಸೇವೆ ನೀಡಲು ಆರೋಗ್ಯ ಕೇಂದ್ರಗಳು, ಆಸ್ಪತ್ರೆಗಳು,ರೋಗ ನಿರ್ಧರಣೆಗೆ ಪರೀಕ್ಷಾ ಕೇಂದ್ರಗಳು, ಅಂಬುಲೆನ್ಸ್ ಸೌಲಭ್ಯಗಳು, ರಕ್ತನಿಧಿ ಯಂತ್ರವು ಅವಶ್ಯಕವಾಗುತ್ತವೆ. ಅರ್ಹತೆಗಳಿದ್ದ ಆರೋಗ್ಯ ಕಾರ್ಯಕರ್ತರು, ನರ್ಸ್‌ಗಳು, ಡಾಕ್ಟರ್‌ಗಳು ಪರೀಕ್ಷಾ ಕೇಂದ್ರಗಳ ಟೆಕ್ನಿಷಿಯನರಂತಹವರು ಸಲಹೆಗಳನ್ನು ಕೊಡಲು, ರೋಗಗಳನ್ನು ನಿರ್ಧರಿಸಿಲು, ಚಿಕಿತ್ಸೆ ಮಾಡಲುಬೇಕು. ರೋಗಗಳಿಗೆ ಅವಸರವಾಗುವ ಔಷಧಿಗಳು, ವೈದ್ಯ ಪರಿಕರ ಗಳು ಕೂಡ ಬೇಕಾಗುತ್ತವೆ. ರೋಗ ನಿವಾರಣೆ ಮಾಡಲು ಚುಚ್ಚುಮದ್ದುಗಳೊಂದಿಗೆ ತಕ್ಕಷ್ಟ ಆಹಾರ, ಶುಭ್ರವಾದ ಕುಡಿಯುವ ನೀರು, ಪಾರಿಶುದ್ಧ್ಯ (ಮಲವನ್ನು ಸರಿಯಾಗಿ ತೊಲಗಿಸುವುದು) ಶುಭ್ರವಾದ ವಾತಾವರಣಬೇಕು.

ಭಾರತ ದೇಶದಲ್ಲಿ ದೊಡ್ಡ ಸಂಖ್ಯೆಯಲ್ಲಿ ಡಾಕ್ಟರ್‌ಗಳು ಇದ್ದಾರೆ, ಅಧಿಕ ಸಂಖ್ಯೆಯಲ್ಲಿ ಆಸ್ಪತ್ರೆಗಳು ಚಿಕಿತ್ಸಾ ಕೇಂದ್ರಗಳಿದ್ದಾವೆ. ಜನರ ಆರೋಗ್ಯ ವ್ಯವಸ್ಥೆಯನ್ನು ನಡೆಸುವ ವಿಜ್ಞಾನ, ಅನುಭವ ಭಾರತ ದೇಶಕ್ಕೆ ಇದೆ. ಲಕ್ಷ ಮೇಲ್ಪಟ್ಟಿರುವ ಗ್ರಾಮಗಳಲ್ಲಿ ಕೋಟ್ಯಾದಿ ಜನರಿಗೋಸ್ಕರ ಸರ್ಕಾರ ಚಿಕಿತ್ಸಾ ಕೇಂದ್ರಗಳು, ಆಸ್ಪತ್ರೆಗಳನ್ನು ನಿರ್ವಹಿಸುತ್ತಿದೆ. ತಾಂತ್ರಿಕ ವಿಜ್ಞಾನದಲ್ಲೂ, ಚಿಕಿತ್ಸಾ ವಿಧಾನಗಳಲ್ಲೂ ವೈದ್ಯಶಾಸ್ತ್ರ ಗಣನೀಯವಾದ ಪ್ರಗತಿ ಸಾಧಿಸಿದೆ.

ಭಾರತದೇಶ ಔಷಧಗಳು ತಯಾರು ಮಾಡುವಲ್ಲಿ ಪ್ರಪಂಚದಲ್ಲಿ ನಾಲ್ಕನೇ ದೊಡ್ಡ ದೇಶ. ಔಷಧ ರಫ್ತುನಲ್ಲಿ ಕೂಡ ಭಾರತ ದೇಶ ಮುಂದಿದೆ. ಪ್ರಪಂಚಕ್ಕೆಲ್ಲಾ ಭಾರತ ದೇಶದ ಅಧಿಕ ವೈದ್ಯ ಕಾಲೇಜುಗಳಿವೆ. ಪ್ರತಿ ವರ್ಷ 15,000 ಜನ ಡಾಕ್ಟರ್‌ಗಳು ಅರ್ಹತೆಯನ್ನು ಹೊಂದುತ್ತಿದ್ದಾರೆ. ಪ್ರತಿ ವರ್ಷ ಸಕ್ರಮವಾಗಿ ಆರೋಗ್ಯ ಸೌಕರ್ಯಗಳು ಬೆಳೆಯುತ್ತಿವೆ. ಭಾರತ ದೇಶದಲ್ಲಿ 1950ರಲ್ಲಿ 2715 ಆಸ್ಪತ್ರೆಗಳಿದ್ದವು. 1991 ವರೆಗೆ ಅವು 11,174 ಆಸ್ಪತ್ರೆಗಳಾಗಿ ಬೆಳೆದವು. 2000 ವರ್ಷಕ್ಕೆ ಅವುಗಳ ಸಂಖ್ಯೆ 18,218ಗೆ ಹೆಚ್ಚಾಯಿತು.

ಸ್ವಲ್ಪ ಜನರಿಗೆ ಉತ್ತಮ ಉಪಯೋಗಗಳು ಲಭ್ಯವಾಗುತ್ತಿದ್ದರೆ, ಇನ್ನೂ ಕೆಲವರು ಕನಿಷ್ಠ ಆರೋಗ್ಯ ಸೇವೆಗಳನ್ನು ಪಡೆಯದೇ ಹೋಗುತ್ತಿದ್ದಾರೆ. ದೇಶದ ಜನರೆಲ್ಲರ ಅವಶ್ಯತೆಗಳು ತೀರಬೇಕೆಂಬ ನಮ್ಮ ಸಂವಿಧಾನ ಆಕಾಂಕ್ಷೆಗೆ ಇದು ವಿರುದ್ಧ. ಈ ಪರಿಸ್ಥಿತಿಯನ್ನು ಬದಲಾಯಿಸಲು ಬೇಕಾದ ಹಣ, ಜ್ಞಾನ, ಅನುಭವ ನಮಗಿದೆ. ವೈದ್ಯ ಸೇವೆಗಳು ಹೇಗೆ ಒದಗಿಸಬೇಕೋ ಈ ಪಾಠದಲ್ಲಿ ಚರ್ಚಿಸೋಣ.

SCERT TELANGANA

## ಆರೋಗ್ಯ ಸೇವೆಗಳು (Healthcare Services)

ಕಾಕಿನಾಡದಲ್ಲಿ ಕಿರಣ್ ಸರಿತ ಒಂದೇ ತರಗತಿಯಲ್ಲಿ ಓದುತ್ತಿದ್ದಾರೆ. ಅವರು ಒಳ್ಳೆಯ ಸ್ನೇಹಿತರು. ಸರಿತ ಉತ್ತಮ ಕುಟುಂಬದಿಂದ ಬಂದವಳು. ಕಿರಣ್ ತಂದೆ ತಾಯಿಗಳು ಕುಟುಂಬವನ್ನು ನಡೆಸಲು ಬಹಳ ಕಷ್ಟ ಪಡುತ್ತಿದ್ದಾರೆ. ಮಳೆಗಾಲ ಆಗಲೇ ಮುಗಿದಿತ್ತು. ಊರಿನಲೆಲ್ಲಾ ವೈರಸ್ ಜ್ವರ ವ್ಯಾಪಿಸಿವೆ. ಇಬ್ಬರೂ ಒಂದೇ ಸಮಯದಲ್ಲಿ ಜ್ವರದಿಂದ ನರಳಿದರು. ಪಾಠಶಾಲೆಗೆ ತಿರುಗಿ ಬಂದ ನಂತರ ತಮ್ಮ ಅನುಭವಗಳನ್ನು ಹಂಚಿಕೊಂಡರು.

ಸರಿತಗೆ ಜ್ವರ ಬಂದ ತಕ್ಷಣ ಅವರ ಮನೆ ಹತ್ತಿರ ಇರುವ ಆಸ್ಪತ್ರೆಗೆ ಅವರ ತಂದೆ ಕರೆದುಕೊಂಡು ಹೋದನು. ಸರಿತ ಅವರ ತಂದೆ 100 ರೂಪಾಯಿಗಳನ್ನು ಕಟ್ಟಿ ಹೆಸರು ನಮೂದು ಮಾಡಿಸಿದನು. ಅವರಿಗೆ ಒಂದು ಕಾರ್ಡ್ ಕೊಟ್ಟು ಕಾದಿರಿ ಎಂದರು. ಸ್ವಲ್ಪ ಸಮಯಕ್ಕೆ ಒಬ್ಬ ಡಾಕ್ಟರ್ ಬಂದು ರಕ್ತ ಪರೀಕ್ಷೆಗಳು, ಎದೆ ಎಕ್ಸ್‌ರೇ (chest X-ray) ಮಾಡಿಸಿ ಎಂದು ಹೇಳಿದನು. ಆ ಪರೀಕ್ಷೆ ನಡೆಸುವ ಸ್ಥಳಕ್ಕೆ ಅವರು ಹೋದರು. ಎಲ್ಲರೂ ಅವರ ಹತ್ತಿರ ಬಹಳ ಮರ್ಯಾದೆ ಯಿಂದ ವರ್ತಿಸಿ ಯಾವುದೇ ತೊಂದರೆ ಇಲ್ಲದಂತೆ ನೋಡಿದರು. ಪರೀಕ್ಷೆ ಮಾಡಿಸಿಕೊಂಡು ಡಾಕ್ಟರ್ ಹತ್ತಿರಕ್ಕೆ ತಿರುಗಿ ಹೋದವರಿಗೆ ಕೆಲವು ಔಷಧಗಳನ್ನು ಬರೆದು ಕೊಟ್ಟು ಪರೀಕ್ಷಾ ಫಲಿತದೊಂದಿಗೆ ಮರುದಿನ ಪುನಃ ಬರುವಂತೆ ತಿಳಿಸಿದರು. ಮರುದಿನ ಡಾಕ್ಟರ್ ಪರೀಕ್ಷೆಯ ನಿವೇಧಿಕೆಯನ್ನು ಪರೀಶಿಲಿಸಿ, ಎಲ್ಲಾ ಉತ್ತಮವಾಗಿದೆ ಎಂದನು. ಸರಿತಗೆ ವೈರಸ್ ಇನ್‌ಫೆಕ್ಷನ್ ಸೋಂಕಿದೆ ಎಂದು ಗಾಬರಿಗೊಳ್ಳುವ ಅವಶ್ಯಕತೆ ಇಲ್ಲವೆಂದು ಅವನು ಹೇಳಿದನು. ನಂತರ ಬಹಳ ಔಷಧಗಳನ್ನು ಬರೆದು ಕೊಟ್ಟರು. ಮೂರು ದಿನಗಳ ನಂತರ ಆಕೆಗೆ ಕಡಿಮೆ ಯಾಗಿದೆ ಅನಿಸಿದ್ದರಿಂದ



ಶಾಲೆಗೆ ಬರಲು ಪ್ರಾರಂಭಿಸಿದಳು.



ಕಿರಣ್‌ಗೆ ಕೂಡ ಜ್ವರ, ಮೈ ಕೈ ನೋವು ಇದೆ. ಆತನ ತಂದೆ ಕೆಲಸ ಬಿಡಲಾರದೆ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಲಿಲ್ಲ. ಎರಡು ದಿನ ನಂತರ ಕಿರಣ್‌ನನ್ನು ಸರ್ಕಾರಿ ಆಸ್ಪತ್ರೆಗೆ ಕರೆದು ಕೊಂಡು ಹೋದನು. ಆದಿನ ಅವರು ಬಹಳ ಬೇಗ ಹೋದರು, ಆದರೆ ಆ ಸಮಕ್ಕೆ ಬಹಳ ಜನ ಸಾಲಿನಲ್ಲಿ ಕಾದು ನಿಂತಿದ್ದರು. ಕಿರಣ್‌ಗೆ ಬಹಳ ನಿಶಕ್ತನಾಗಿದ್ದು ನಿಲ್ಲುವ ತಾಳ್ಮೆ ಕೂಡ ಇರಲಿಲ್ಲ. ಆದರೆ ಏನು ಮಾಡುತ್ತಾನೆ? ಮೂರು ಗಂಟೆಗಳ ನಂತರ ಅವರ ಸರಧಿ ಬಂದು ಡಾಕ್ಟರ್ ಆತನನ್ನು ನೋಡಿದನು. ರಕ್ತ ಪರೀಕ್ಷೆ ಮಾಡಿಸಿಕೋಳ್ಳಿ ಎಂದು ಡಾಕ್ಟರ್ ಹೇಳಿದನು. ಆ ಪರೀಕ್ಷೆ ಮಾಡಿಸಿಕೊಳ್ಳಲು ಇನ್ನೂ ಎರಡು ಗಂಟೆ ಹಿಡಿಯಿತು. ಪರೀಕ್ಷಾ ವರದಿಗೋಸ್ಕರ ಮರುದಿನ ಬನ್ನಿ ಎಂದರು. ಆ ದಿನ ಕೂಡ ಡಾಕ್ಟರ್ ಪರೀಕ್ಷಿಸಲು ಬಹಳ ಸಮಯ ಹಿಡಿಯಿತು. ಈ ಪರೀಕ್ಷಾ ವರದಿ ನೋಡಿದ ಡಾಕ್ಟರ್ ಊರಿನಲ್ಲಿ ಬಹಳ ಜನರಂತೆ ಕಿರಣ್‌ಗೆ ಕೂಡ ವೈರಸ್ ಜ್ವರ ಬಂದಿದೆ ಎಂದು ಹೇಳಿದನು. ಜ್ವರಕ್ಕೆ ಕೆಲವು ಔಷಧಗಳನ್ನು ಬರೆದುಕೊಟ್ಟು ಕಿರಣ್‌ಗೆ ಬಹಳ ದ್ರವ ಪದಾರ್ಥ ಸೇವಿಸು ಎಂದು, ಬಹಳ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಹೇಳಿದನು. ಜ್ವರ ಕಡಿಮೆಯಾಗಿ ಕಿರಣ್ ಶಾಲೆಗೆ ಬಂದನು.

ವೈದ್ಯಕ್ಕಾಗಿ ಕಿರಣ್ ಬಹಳ ತೊಂದರೆ ಬೀಳುವಂತಾದದ್ದು ಸರಿತಗೆ ನೋವು ಉಂಟು ಮಾಡಿತು. ಕೆಲಸಗಳು ಬಹಳ ಸುಲಭವಾಗಿ, ತಕ್ಷಣ ವಾಗಿ ಮುಗಿದು ಹೋಗುವ ಆಧುನಿಕ, ಖಾಸಗಿ ಆಸ್ಪತ್ರೆಗೆ ಹೋಗುವುದು ತನ್ನ ಅದೃಷ್ಟವೆಂದು ಭಾವಿಸಿದಳು ಅವಳನ್ನು ನೀನು ಎಷ್ಟು ಹಣವನ್ನು ಖರ್ಚು ಮಾಡಿದ್ದೀಯಾ ಎಂದು ಕೇಳಿದಾಗ ಅವಳು ರೂ. 3,500/- ಯನ್ನು ಆಸ್ಪತ್ರೆ ಮತ್ತು ಔಷಧಗಳಿಗೆ ಖರ್ಚು ಮಾಡಿದ್ದೇನೆ

SCERT TELANGANA

ಎಂದು ಹೇಳಿದಳು. ಅಮನ್ ನಾನು ಕೇವಲ ರೂ. 100/– ಗಳನ್ನು ಮಾತ್ರ ಖರ್ಚಾಯಿತು ಎಂದನು ಕಿರಣ್.

- ಸರಿತ ಅಷ್ಟು ಹಣ ಏಕೆ ಖರ್ಚು ಮಾಡಬೇಕಾಗಿ ಬಂತು ? ಕಾರಣ ತಿಳಿಸಿ.
- ಸರ್ಕಾರದ ದವಾಖಾನೆಗಳಲ್ಲಿ ಕಿರಣ್ ಎಂತಹ ಸಮಸ್ಯೆಯನ್ನು ಎದುರಿಸಿದನು ? ಆ ದವಾಖಾನೆ ಇನ್ನೂ ಉತ್ತಮ ವಿಧಾನದಲ್ಲಿ ಹೇಗೆ ಕೆಲಸ ಮಾಡಬಹುದು ? ಚರ್ಚಿಸಿರಿ.
- ಖಾಸಗಿ ದವಾಖಾನೆ ಗಳಲ್ಲಿ ಎಂತಹ ಸಮಸ್ಯೆಗಳು ಎದುರಿಸುತ್ತೇವೆ ? ತರಗತಿಯಲ್ಲಿ ಚರ್ಚಿಸಿರಿ.
- ನಿಮಗೆ ಕಾಯಿಲೆ ಬಂದಾಗ ನೀವು ಎಲ್ಲಿಗೆ ಹೋಗುತ್ತೀರಿ ? ನೀವು ಎದುರಿಸುವ ಸಮಸ್ಯೆಗಳು ಯಾವಾದರೂ ಇವೆಯೇ ? ನಿಮ್ಮ ಅನುಭವ ಆಧಾರವಾಗಿ ಒಂದು ಟಿಪ್ಪಣಿ ಬರೆಯಿರಿ.

ಮೇಲೆ ಕೊಟ್ಟ ಕಥೆಗಳಿಗೆ ಆಧಾರವಾಗಿ ಆರೋಗ್ಯ ಸದುಪಾಯಗಳನ್ನು a) ಪ್ರಜಾ ಆರೋಗ್ಯ ಸೇವೆಗಳು b) ಖಾಸಗಿ ಆರೋಗ್ಯ ಸೇವೆಗಳು ಎಂದು ಪ್ರಧಾನವಾಗಿ ಎರಡು ಭಾಗಗಳಾಗಿ ವಿಭಜಿಸಬಹುದೆಂದು ನಿಮಗೆ ಅರ್ಥವಾಗಿರುತ್ತದೆ.

## ಪ್ರಜಾ ಆರೋಗ್ಯ ಸೇವೆಗಳು
## Public Health Services

ಆರೋಗ್ಯ ಕೇಂದ್ರಗಳು, ದವಾಖಾನೆಗಳಿಂದ ಕೂಡಿದ ಜನರ ಆರೋಗ್ಯ ಸೇವೆಗಳನ್ನು ಸರ್ಕಾರ ನಿರ್ವಹಿಸುತ್ತವೆ. ಗ್ರಾಮೀಣ, ಪಟ್ಟಣ ಪ್ರಾಂತಗಳಲ್ಲಿ ಸಾಧಾರಣ ಕಾಯಿಲೆಯಿಂದ ಎಲ್ಲಾ ವಿಧವಾದ ಸಮಸ್ಯೆಗಳಿಗೆ, ಎಲ್ಲರಿಗೂ ಪ್ರತ್ಯೇಕ ಸೇವೆಗಳನ್ನು ಸರ್ಕಾರ ಒದಗಿಸುತ್ತದೆ. ಗ್ರಾಮೀಣ ಮಟ್ಟದಲ್ಲಿ ಒಂದು ಆಶ ಕಾರ್ಯಕರ್ತ ಇರುತ್ತಾರೆ. (ASHA worker)' ಜನರಿಗೆ ವೈದ್ಯ ಸದುಪಾಯಗಳು ದೊರಕಿಸುವಲ್ಲಿ ಆತನು / ಅವಳು ಸಹಾಯ ಮಾಡುತ್ತಾರೆ. ಗ್ರಾಮಗಳಲ್ಲಿ ಅಂಗನವಾಡಿ ಕೇಂದ್ರದಲ್ಲಿ ಚಿಕ್ಕ ಮಕ್ಕಳಿಗೆ ಪೋಷಕಾಹಾರದ ಜೊತೆ ಚುಚ್ಚುಮದ್ದು ಕೂಡ ನೀಡುತ್ತಾರೆ. ಮಕ್ಕಳ ತೂಕ ಮಾಡುತ್ತಾ ವಯಸ್ಸಿಗೆ ತಕ್ಕ ತೂಕದಿಂದ ಅವರು ಬೆಳೆಯುತ್ತಾರೋ ಇಲ್ಲವೋ ಎಂದು ನೋಡುತ್ತಾರೆ. ಒಂದು ಉಪ ಕೇಂದ್ರದ ಕೆಳಗೆ 5000 ಜನರು ಇರುತ್ತಾರೆ. ಗ್ರಾಮೀಣ ಪ್ರಾಂತಗಳಲ್ಲಿ ಒಂದು ಅಥವಾ ಅದಕ್ಕಿಂತ ಹೆಚ್ಚು ನಿವಾಸಗಳು ಒಂದು ಉಪಕೇಂದ್ರದ ಕೆಳಗೆ ಇರುತ್ತವೆ. ಈ ಕೇಂದ್ರದಲ್ಲಿ ಬಹು ಉದ್ದೇಶ ಆರೋಗ್ಯ ಸಹಾಯಕರು (Multi Purpose Health Assistants, MPHAs) (ಸ್ತ್ರೀ, ಪುರುಷರು) ಇರುತ್ತಾರೆ. ಸಾಧಾರಣ ರೋಗಗಳಿಂದ ವ್ಯವಹರಿಸುವಲ್ಲಿ, ಚಿಕ್ಕ ಮಕ್ಕಳಿಗೆ ಚುಚ್ಚುಮದ್ದು ಹಾಕುವಲ್ಲಿ, ಗರ್ಭಿಣಿಯರು ಸಂರಕ್ಷಣೆಯಲ್ಲಿ ಅತಿಸಾರ, ಮಲೇರಿಯಾದಂತಹ ಕಾಯಿಲೆಗಳನ್ನು ನಿವಾರಿಸುವಲ್ಲಿ ಅವರು ತರಬೇತಿ ಪಡೆದಿರುತ್ತಾರೆ. ಈ ಉಪಕೇಂದ್ರಗಳು ಮಂಡಲ ಹಂತದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ (Primary Health Centres, PHC) ನಿರ್ವಹಣೆ ಯಲ್ಲಿ ಕೆಲಸ ಮಾಡುತ್ತವೆ. ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕೆಳಗೆ 30,000 ಜನಸಂಖ್ಯೆ (ಸುಮಾರು 5 ಉಪಕೇಂದ್ರ ಪ್ರಾಂತಗಳು) ಇರುತ್ತದೆ. ಪ್ರತಿ 4 - 5 ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಒಂದು ಪ್ರಜಾ ಆರೋಗ್ಯ ಕೇಂದ್ರ ಇರುತ್ತದೆ. ಇದು 30 ಮಂಚಗಳಿರುವ ಆಸ್ಪತ್ರೆ, ಇಲ್ಲಿ ಕೆಲವು ಜನರು ವಿಶೇಷ ವೈದ್ಯಕೀಯ ತಜ್ಞರು ಇರುತ್ತಾರೆ. ಇಲ್ಲಿ ಕೆಲವು ಆಪರೇಷನ್ ಕೂಡ ಮಾಡುತ್ತಾರೆ. ಜಿಲ್ಲಾ ಮಟ್ಟದಲ್ಲಿ 100 ಮಂಚಗಳಿಂದ ಕೂಡಿದ ಪ್ರಾಂತೀಯ ಆಸ್ಪತ್ರೆ ಇರುತ್ತದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಆಸ್ಪತ್ರೆಗಳಿರುತ್ತವೆ. ದೊಡ್ಡ ಪಟ್ಟಣಗಳಲ್ಲಿ ಸರ್ಕಾರದ ಆಸ್ಪತ್ರೆಗಳು ಬಹಳ ಇರುತ್ತವೆ. ಅಂತಹವುಗಳಲ್ಲಿ ಒಂದಕ್ಕೆ ಕಿರಣ್ ಹೋದನು.



*ಚಿತ್ರ 9.1:* ಪ್ರಾಥಮಿಕ ಆರೋಗ್ಯ ಕೇಂದ್ರ (PHC)

SCERT TELANGANA

ಇವುಗಳನ್ನು ಸಾರ್ವಜನಿಕ (Public) ಆರೋಗ್ಯ ಸೇವೆಗಳು ಎನ್ನಲು ಬಹಳ ಕಾರಣಗಳಿವೆ. ಪೌರರೆಲ್ಲರಿಗೂ ವೈದ್ಯ ಸೇವೆಗಳನ್ನು ಒದಗಿಸಬೇಕೆಂಬ ತನ್ನ ಉದ್ದೇಶಗಳಿಗೆ ಅನುಗುಣವಾಗಿ ಸರ್ಕಾರ ಈ ಆರೋಗ್ಯ ಕೇಂದ್ರಗಳನ್ನು, ಆಸ್ಪತ್ರೆಗಳನ್ನು ಸ್ಥಾಪಿಸಿದೆ. ಈ ಸೇವೆಗಳ ನಿರ್ವಹಣೆಗೆ ಅವಸರವಾದ ನಿಧಿಗಳು ನಾವು ಪ್ರಜೆಗಳೆಲ್ಲರೂ ಸರ್ಕಾರಕ್ಕೆ ಸಲ್ಲಿಸುವ ತೆರಿಗೆಯಿಂದ ಬರುತ್ತವೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಮುಖ್ಯ ಉದ್ದೇಶಗಳಲ್ಲಿ ಒಂದು ಬಡವರು ಕೂಡ ಆರೋಗ್ಯ ಪಡೆಯುವಂತೆ ಕಡಿಮೆ ಖರ್ಚಿಗೆ ಅಥವಾ ಉಚಿತ ವಾಗಿ ಗುಣಮಟ್ಟದ ವೈದ್ಯ ಸೇವೆಗಳನ್ನು ಒದಗಿಸುವುದು. ಕ್ಷಯ (TB), ಮಲೇರಿಯಾ (Malaria), ಕಾಮಲೆ (Jaundice), ಕಲರಾ (Cholera), ಅತಿಸಾರ(Diarrhoea), ಚಿಕನ್‌ಗುನ್ಯಾ (Chikungunya) ದಂತಹ ವ್ಯಾಧಿಗಳನ್ನು, ಅವುಗಳ ವ್ಯಾಪ್ತಿ ನಿರ್ಮೂಲಿಸಲು ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಮತ್ತೊಂದು ಮುಖ್ಯ ಉದ್ದೇಶ. ಜನರ ಭಾಗವಹಿಸುವಿಕೆಯಿಂದ ಸರ್ಕಾರ ಇದನ್ನು ನಿರ್ವಹಿಸಬೇಕು. ಇಲ್ಲದಿದ್ದರೆ ಅದು ಸಮರ್ಥವಾಗಿ ಕೆಲಸ ಮಡುವುದಿಲ್ಲ. ಉದಾಹರಣೆಗೆ ನೀರು ಶೀತಲೀಕರಣ ಯಂತ್ರ (ವಾಟರ್ ಕೂಲರ್‌ಗಳು) ಮನೆಯ ಮೇಲೆ ನೀರು ನಿಲ್ಲಿಸುವ ಪ್ರಾಂತ ಗಳಲ್ಲಿ ಸೊಳ್ಳೆ ಅಭಿವೃದ್ಧಿ ಹೊಂದದೆ ಜನರನ್ನು ಚೈತನ್ಯಗೊಳಿಸ ಬೇಕು. ಗ್ರಾಮಗಳಲ್ಲಿ ಎಲ್ಲರು ಭಾಗವಹಿಸುವಂತೆ ಮಾಡಿ ನೀರು ಕೊಳವೆ / ಕೈ ಪಂಪುಗಳ ಹತ್ತಿರ ನೀರು ನಿಂತು ಸೊಳ್ಳೆ ಅಭಿವೃದ್ದಿಯಾಗದಂತೆ ನೋಡಿಕೊಳ್ಳಬೇಕು.



*ಚಿತ್ರ 9.2: ಖಾಸಗಿ ಆಸ್ಪತ್ರೆ – ಒಳಭಾಗ*

- ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಕೆಳಗೆ ಪ್ರತಿ ಗ್ರಾಮಗಳಲ್ಲಿ ಏನೇನು ಕೈಗೆಟಕುವಂತಿರಬೇಕು ?

## ಖಾಸಗಿ ಆರೋಗ್ಯ ಸೇವೆಗಳು (Private Health Services)

ನಮ್ಮ ದೇಶದಲ್ಲಿ ಖಾಸಗಿ ರಂಗದಲ್ಲಿ ಅನೇಕ ವಿಧವಾದ ವೈದ್ಯ ಸೇವೆಗಳು ಲಭ್ಯವಾಗುತ್ತಿವೆ. ಗ್ರಾಮೀಣ ಪ್ರಾಂತಗಳಲ್ಲಿ ದಾಖಲಿಸಿಕೊಂಡ ವೈದ್ಯ ಸೇವಕರು (Registered Medical Practitioners, RMP) ಇದ್ದಾರೆ. ಗ್ರಾಮೀಣ ಪ್ರಾಂತಗಳಲ್ಲಿ ಕೂಡ ನಾಟಿ ವೈದ್ಯರು ಇದ್ದಾರೆ. ಪಟ್ಟಣ ಪ್ರಾಂತಗಳಲ್ಲಿ ದೊಡ್ಡ ಪ್ರಮಾಣ ದಲ್ಲಿ ಡಾಕ್ಟರ್‌ಗಳಿದ್ದಾರೆ. ಅವರಲ್ಲಿ ಬಹಳ ಜನ ತಮ್ಮ ಖಾಸಗಿ ಆಸ್ಪತ್ರೆಗಳಲ್ಲಿ ವಿಶೇಷ ಸೇವೆ ಸಲ್ಲಿಸುತ್ತಿದ್ದಾರೆ. ರಕ್ತ, ಮಲ, ಮೂತ್ರ ಪರೀಕ್ಷೆಗಳು, ಎಕ್ಸ್‌ರೇ (X-ray) ಅಲ್ಟ್ರಾಸೌಂಡ್ (ಶ್ರವಣಾತೀತ)ದಂತಹ ಪ್ರತ್ಯೇಕ ಪರೀಕ್ಷೆಗಳು ಮಾಡುವ ಅನೇಕ ಖಾಸಗಿ ಪರೀಕ್ಷಾ ಕೇಂದ್ರಗಳಿವೆ. ಪ್ರಸ್ತುತ ಅನೇಕ ದೊಡ್ಡ ದೊಡ್ಡ ಕಂಪನಿಗಳು ಆಸ್ಪತ್ರೆಯ ಜೊತೆ ಔಷಧಗಳ ತಯಾರಿ, ಮಾರಾಟ ಕೂಡ ಕೈಗೊಂಡಿವೆ. ದೇಶದ ಎಲ್ಲಾ ಕಡೆ ಔಷಧ ಅಂಗಡಿಗಳಿದ್ದಾವೆ.

ಹೆಸರು ಸೂಚಿಸುವಂತೆ ಖಾಸಗಿ ಆರೋಗ್ಯ ಸೇವೆಗಳು ಸರ್ಕಾರಕ್ಕೆ ಸೇರಿದವಲ್ಲ. ಸರ್ಕಾರದ ನಿಯಂತ್ರಣದಲ್ಲಿ ಇರುವುದಿಲ್ಲ. ಸಾರ್ವಜನಿಕ ವೈದ್ಯ ಸೇವೆಗಳಲ್ಲಿ ಮಾದರಿಯಲ್ಲಿದೆ. ಇಲ್ಲಿಗೆ ಹೋಗುವ ರೋಗಿಗಳು ಪ್ರತಿ ಸೇವೆಗೆ ದೊಡ್ಡ ಪ್ರಮಾಣದಲ್ಲಿ ಹಣ ಸಲ್ಲಿಸಬೇಕು. ಖಾಸಗಿ ಸರಕಾರ ಸಂಗ್ರಹಿಸಿದ ತೆರಿಗೆಯ ಮೂಲಕ ಸರಕಾರಿ ಸೇವೆ ಗಳಿಗೆ ಹಣ ಸಂಗ್ರಹವಾಗುತ್ತದೆ. ಆದ್ದರಿಂದ ಜನರ ಆರೋ ಗ್ಯ ಸೇವೆಗಳಿಗೆ ತುಂಬುವ ಫೀಜು ಕಡಿಮೆ ಇರುತ್ತದೆ. ಖಾಸ ಗೀ ಆರೋಗ್ಯ ಸೇವೆಗಳ ಖರ್ಚನ್ನು ಲೆಕ್ಕಿಸುವಾಗ ವಾಸ್ತವ ಖರ್ಚುಗಳು, ಲಾಭಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ತೆಗೆ ದುಕೊಳ್ಳುತ್ತಾರೆ. ಆದ್ದರಿಂದ ಫೀಜು ಅಧಿಕವಾಗಿರುವುದು.

- ಖಾಸಗಿ ಆರೋಗ್ಯ ಸೇವೆಗಳು ಎಂದರೆ ಅನೇಕ ಇರಬಹುದು. ನಿಮ್ಮ ಪ್ರಾಂತದಲ್ಲಿರುವ ಕೆಲವು ಉದಾಹರಣೆಗಳೊಂದಿಗೆ ವಿವರಿಸಿರಿ.
- ಗ್ರಾಮೀಣ ಪ್ರಾಂತಗಳಲ್ಲಿ ಜನರು ನಾಟಿ ವೈದ್ಯರ ಹತ್ತಿರಕ್ಕೆ , ಅವರಿಗೆ ಸರಿಯಾದ ವೈದ್ಯ ಚಿಕಿತ್ಸೆ ಬರುವುದಿಲ್ಲ ಎಂದು ತಿಳಿದು ಏಕೆ ಹೋಗುತ್ತಿರು ತ್ತಾರೆ ? ನಿಮ್ಮ ಚರ್ಚೆಯಲ್ಲಿ ಈ ವಿಷಯಗಳನ್ನು ದೃಷ್ಟಿಯಲ್ಲಿಟ್ಟುಕೊಳ್ಳಿ – ಶಿಕ್ಷಣ ಪಡೆದ ಡಾಕ್ಟರ್‌ಗಳು ಹಳ್ಳಿಗಳಲ್ಲಿ ಇಲ್ಲ. ಜನರಿಗೆ ಇಂಜೆಕ್ಷನ್ ಮೇಲೆ ನಂಬಿಕೆ ಇದೆ. ನಾಟಿ ವೈದ್ಯಕ್ಕೆ ಹಣ ತದನಂತರ ಕೂಡ ಕೊಡಬಹುದು. ಅವರಿಗೆ ಧಾನ್ಯ. ಕೋಳಿಯಂತಹವು ಗಳ ರೂಪದಲ್ಲಿ ಕೊಡುಗೆ ಸಲ್ಲಿಸಬಹುದು.

**ಆರೋಗ್ಯ ವಿಮೆ :–** ದೀರ್ಘಕಾಲಿಕ ರೋಗಗಳಿಂದ ನರಳುವ ಪ್ರಜೆಗಳಿಗೆ ವೈದ್ಯ ಅತ್ಯಂತ

SCERT TELANGANA

ಖರ್ಚಿನಿಂದ ಕೂಡಿಕೊಂಡಿದೆ. ನೀವು ಆರೋಗ್ಯ ಭೀಮಾ ಹೊಂದಿದ್ದರೆ ಅದರ ಮೂಲಕ ನಾಣ್ಯವಾದ ವೈದ್ಯಕೀಯ ಸೇವೆಗಳನ್ನು ಹೊಂದಬಹುದು. ಇತ್ತಿಚೆಗೆ ಸರಕಾರಿ, ಖಾಸಗಿ ಭೀಮಾ ಸಂಸ್ಥೆಗಳು ಜಾರಿಗೊಳಿಸಿದ ಅನೇಕ ಭೀಮಾ ಸೌಲಭ್ಯಗಳು ಮಾರುಕಟ್ಟೆಯಲ್ಲಿ ಚಾಲನೆಯಲ್ಲಿವೆ.

## ವೈದ್ಯ ಸೇವೆಗಳು ಮತ್ತು ಸಮಾನತೆ
## Healthcare and Equality

ಭಾರತ ದೇಶದಲ್ಲಿ ಖಾಸಗಿ ಸೇವೆಗಳು ವಿಸ್ತರಿಸುತ್ತಾ ಇರುವಾಗ, ಸಾರ್ವಜನಿಕ ವೈದ್ಯ ಸೇವೆಗಳು ವಿಸ್ತರಿಸುತ್ತಿಲ್ಲ. ಖಾಸಗಿ ಸೇವೆಗಳು ಪ್ರಧಾನವಾಗಿ ಪಟ್ಟಣ ಪ್ರಾಂತಗಳಲ್ಲಿ ಕೇಂದ್ರಿಕೃತವಾಗಿವೆ. ಇವು ಲಾಭಕ್ಕಾಗಿ ನಡೆಯುತ್ತಿವೆ. ಆದ್ದರಿಂದ ಇವುಗಳ ಖರ್ಚು ಹೆಚ್ಚು. ಆದರೆ ಇತ್ತೀಚಿನ ಪ್ರಜಾಸೇವೆಯಲ್ಲಿ 108, 104 ಸೇವೆಗಳಿಂದ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಚುರುಕಾಗಿದೆ. 108 ವಾಹನ ಸೇವೆಗಳ ಸೇವೆಗಳು ಅತ್ಯವಸರ ಸೇವೆಗಳಲ್ಲಿ ಫೋನ್ ಮಾಡಿದಾಕ್ಷಣ ಸ್ಥಳಕ್ಕೆ ಸೇರಿಕೊಂಡು ಪ್ರಥಮ ಚಿಕಿತ್ಸೆ ಮಾಡುವುದಲ್ಲದೇ ಬಾಧಿತ (ರೋಗಿಗಳ)ರನ್ನು ನಂತರದ ವೈದ್ಯ ಸೇವೆಗಳಿಗಾಗಿ 104 ವಾಹನಗಳಲ್ಲಿ ಆರೋಗ್ಯ ಸಿಬ್ಬಂದಿ ಔಷಧಗಳೊಂದಿಗೆ ಪ್ರತಿ ಗ್ರಾಮಕ್ಕೆ ಪ್ರತಿ ತಿಂಗಳು ಹೋಗಿ ಆರೋಗ್ಯ ಪರೀಕ್ಷೆಗಳನ್ನು ನಡೆಸಿ ಉಚಿತವಾಗಿ ಔಷಧಗಳನ್ನು ನೀಡುತ್ತಿದ್ದಾರೆ.

ವಾಸ್ತವ ಏನೆಂದರೆ ದೇಶದ ಜನಸಂಖ್ಯೆಯಲ್ಲಿ 20% ರಷ್ಟು ಜನರು ಮಾತ್ರವೇ ಅವರು ಕಾಯಿಲೆಗೆ ಬಿದ್ದಾಗ ಅವಸರವಾದ ಔಷಧಗಳು ಕೊಳ್ಳುವ ಸ್ಥಿತಿಯಲ್ಲಿದ್ದಾರೆ. ಬಡವರಲ್ಲದವರೆಲ್ಲರೂ ಕೂಡ ವೈದ್ಯ ಖರ್ಚಗಳಿಂದ ತೊಂದರೆ ಒಳಗಾಗುತ್ತಿದ್ದಾರೆ. ಯಾವುದಾದರೂ ಕಾಯಿಲೆ, ಇಲ್ಲ ಗಾಯದ ಕಾರಣವಾಗಿ ಆಸ್ಪತ್ರೆಯಲ್ಲಿ ಸೇರಿದವರಿಗೆ 40% ರಷ್ಟು ಜನ ವೈದ್ಯ ಖರ್ಚುಗಳನ್ನು ತುಂಬಲು ತಮಗೆ ಇದ್ದುದರಲ್ಲೆ ಅಲ್ಪಸ್ವಲ್ಪ ಮಾರಿಕೊಳ್ಳಬೇಕಾಗುತ್ತದೆ. ಇಲ್ಲವೆ ಸಾಲ ತೆಗೆದುಕೊಳ್ಳಬೇಕಾಗಿ ಬರುತ್ತದೆ ಎಂದು ಒಂದು ಅಧ್ಯಯನದಲ್ಲಿ ಬೆಳಕಿಗೆ ಬಂದಿದೆ.

ಕುಟುಂಬದಲ್ಲಿ ಯಾರೋಬ್ಬರು ಅನಾರೋಗ್ಯಕ್ಕೆ ಒಳಗಾದರೆ ಬಡವರು ಆಂದೋಲನಕ್ಕೆ ಗುರಿಯಾಗುತ್ತಾರೆ. ವಿಷಾದವೇನೆಂದರೆ ಇಂಥಹ ಪರಿಸ್ಥಿತಿ ಪುನಃ ಪುನಃ ಎದುರಾಗುತ್ತಾ ಇರುತ್ತದೆ. ಕುಡಿಯುವ ನೀರು, ಸರಿಯಾದ ಗೃಹ ವಸತಿ, ಶುಭ್ರವಾದ ಪರಿಸರಗಳಂತಹ ಮೂಲಭೂತ ಸೌಕರ್ಯಗಳು ಬಡವರಿಗೆ ತಲುಪುತ್ತಿಲ್ಲವಾದ ಕಾರಣ ರೋಗಸ್ಥರಾಗುವ ಅವಕಾಶಗಳು ಹೆಚ್ಚು.

ಈ ಕುಟುಂಬಗಳು ಸೇವಿಸಬೇಕಾದಷ್ಟು ಆಹಾರ ಸೇವಿಸದಿದ್ದರಿಂದ ಪೋಷಕ ಆಹಾರ ಕೊರತೆಗೆ ಗುರಿಯಾಗುತ್ತಿವೆ. ರೋಗಗಳಿಗೆ ಆಗುವ ಖರ್ಚುಗಳಿಂಥ ಅವರ ಪರಿಸ್ಥಿತಿ ಮತಷ್ಟು ಅದಗೆಡುತ್ತದೆ ಇಲ್ಲವೆ ಇರುವ ಆಸ್ತಿಗಳನ್ನು ಮಾರಿಕೊಳ್ಳಬೇಕಾಗಿ ಬರುತ್ತದೆ. ರೋಗಸ್ಥನಾದ ಮನುಷ್ಯನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕೆಂಧರೆ ಆ ದಿನಕ್ಕೆ ಮತ್ತೊಬ್ಬ ವ್ಯಕ್ತಿ ಕೂಲಿ ಕಳೆದುಕೊಳ್ಳಬೇಕಾಗುತ್ತದೆ. ಆಸ್ಪತ್ರೆಯಲ್ಲಿ ಸೇರಿಸಬೇಕಾಗಿ ಬಂದರೆ ಎಷ್ಟೋ ದಿನಗಳ ಕೂಲಿ ನಷ್ಟವಾಗುತ್ತದೆ.

## ಮೂಲಭೂತ ಸಾರ್ವಜನಿಕ ಸೌಲಭ್ಯಗಳು
## (Basic public facilities)

ಜೀವನಕ್ಕೆ ಉತ್ತಮ ಆರೋಗ್ಯಕ್ಕೆ ನೀರು ಅತ್ಯವಶ್ಯಕ. ನಮ್ಮ ಪ್ರತಿದಿನ ಅವಶ್ಯಕತೆಗಳಿಗೆ ನೀರು ಬೇಕು. ಕುಡಿಯುವ ನೀರಿನ ಮೂಲಕ ಅನೇಕ ರೋಗಗಳನ್ನು ನಿವಾರಿಸಬಹುದು. ನೀರಿನಿಂದ ವ್ಯಾಪಿಸುವ ಅತಿಸಾರ, ಕಲರಾದಂತಹ ರೋಗಗಳು ಭಾರತದೇಶದಲ್ಲಿ ಬಹಳ ಹೆಚ್ಚಾಗಿವೆ. ನಮ್ಮ ದೇಶದಲ್ಲಿ ಪ್ರತಿದಿನ ನೀರಿಗೆ ಸಂಬಂಧಿಸಿದ ತೊಂದರೆಯ ಕಾರಣದಿಂದ 1,600 ಜನ ಸತ್ತು ಹೋದರೆ, ಅದರಲ್ಲಿ ಬಹಳ ಜನ ಐದು ವರ್ಷ ದೊಳಗಿನ ಮಕ್ಕಳೇ. ಜನರಿಗೆ ಸುರಕ್ಷಿತ ಕುಡಿಯುವ ನೀರಿನ ಲಭ್ಯತೆ ಇದ್ದರೆ ಇಂತಹ ಸಾವು ಇಲ್ಲದಂತೆ ಮಾಡಬಹುದು.

ನೀರಿನಂತೆಯೇ ಪ್ರತಿಯೊಬ್ಬರಿಗೆ ದೊರಕಿಸುವ ಇತರ ಮೂಲಭೂತ ಸೌಲಭ್ಯಗಳಿವೆ. ಆರೋಗ್ಯ ಸೇವೆಗಳು ಶುಭ್ರತೆ, ವಿದ್ಯುತ್, ಸಾರ್ವಜನಿಕ ಸಾರಿಗೆ ಸೌಲಭ್ಯ, ಪಾಠಶಾಲೆಗಳು ಕೂಡ ಇದರಲ್ಲಿ ಸೇರುತ್ತವೆ. ಇವುಗಳನ್ನು ಮೂಲಭೂತ ಸಾರ್ವಜನಿಕ ಸೌಲಭ್ಯಗಳು ಎನ್ನುತ್ತಾರೆ.

ಮೂಲಭೂತ ಸಾರ್ವಜನಿಕ ಸೌಲಭ್ಯಗಳ ಮುಖ್ಯ ಲಕ್ಷಣವೇನೆಂದರೆ ಒಂದು ಸಾರಿ ಮೂಲಭೂತ ಸಾರ್ವಜನಿಕ ಸೌಲಭ್ಯಗಳನ್ನು ಕಲ್ಪಿಸಿದರೆ ಅದರ ಪ್ರಯೋಜನಗಳನ್ನು ಎಷ್ಟೋ ಜನರು ಪಡೆಯಬಹುದು. ಉದಾಹರಣೆಗೆ ಒಂದು ಶಾಲೆ ಸ್ಥಾಪಿಸಿದರೆ ಎಷ್ಟೋ ಮಕ್ಕಳು ಅದರಲ್ಲಿ ಅಭ್ಯಾಸಿಸಬಹುದು. ಇದೇ ರೀತಿ ಒಂದು ಪ್ರಾಂತಕ್ಕೆ ವಿದ್ಯುತ್ ಸೌಲಭ್ಯ ಒದಗಿಸಿದರೆ ಎಷ್ಟೋ ಜನರಿಗೆ ಉಪಯೋಗವಾಗುತ್ತದೆ. ರೈತರು ತಮ್ಮ ಹೊಲಗಳಿಗೆ ನೀರಿನ ಸೌಲಭ್ಯ ಒದಗಿಸಲು ಪಂಪುಸೆಟ್‌ಗಳನ್ನು ಬಳಸಿಕೊಳ್ಳಬಹುದು. ವಿದ್ಯುತ್‌ನಿಂದ ನಡೆಸುವ ಸಣ್ಣ ಸಣ್ಣ ವರ್ಕಷಾಪುಗಳು ನಡೆಸಬಹುದು. ಯಂತ್ರಗಳನ್ನು ನಡೆಸಲು ಕಾರ್ಖಾನೆಗಳಿಗೆ ವಿದ್ಯುತ್‌ಬೇಕು. ವಿದ್ಯಾರ್ಥಿಗಳು



SCERT TELANGANA

ಓದಿಕೊಳ್ಳುವುದು ಸುಲಭ, ಇನ್ನೂ ಬಹಳ ಜನ ಯಾವುದೋ ಒಂದು ರೀತಿಯಲ್ಲಿ ಪ್ರಯೋಜನ ಪಡೆಯುತ್ತಿರುತ್ತಾರೆ.

## ಸರ್ಕಾರದ ಪಾತ್ರ (The Government's Role)

ಸಾರ್ವಜನಿಕ ಸೌಲಭ್ಯಗಳು ಬಹಳ ಮುಖ್ಯವಾದ್ದರಿಂದ ಅವುಗಳನ್ನು ಜನರಿಗೆ ತಲುಪಿಸುವ ಜವಾಬ್ದಾರಿ ಯಾರೋ ಒಬ್ಬರು ಕೈಗೊಳ್ಳಬೇಕು. ಅದು ಸರ್ಕಾರವೇ ಆಗುತ್ತದೆ. ಈ ಸಾರ್ವಜನಿಕ ಸೌಕರ್ಯಗಳನ್ನು ಪ್ರಜೆಗಳಿಗೆಲ್ಲಾ ದೊರೆಯುವಂತೆ ನೋಡಿಕೊಳ್ಳುವುದು ಸರ್ಕಾರದ ಮುಖ್ಯವಾದ ಕರ್ತವ್ಯಗಳಲ್ಲಿ ಒಂದು. ಈ ಜವಾಬ್ದಾರಿಯನ್ನು ಸರ್ಕಾರವೇ ಏಕೆ ಕೈಗೊಳ್ಳಬೇಕೋ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸೋಣ.

ಖಾಸಗಿ ಕಂಪನಿಗಳು ಮಾರ್ಕೆಟ್‌ಗಳಲ್ಲಿ ಲಾಭಕ್ಕಾಗಿ ಕೆಲಸ ಮಾಡುತ್ತವೆ ಎಂದು ತಿಳಿದುಕೊಂಡಿದ್ದೇವೆ. ಅನೇಕ ಸಾರ್ವಜನಿಕ ಸೌಕರ್ಯಗಳು ಒದಗಿಸುವಲ್ಲಿ ಖಾಸಗಿ ಕಂಪನಿಗಳಿಗೆ ಯಾವುದೇ ರೀತಿಯ ಲಾಭಗಳಿರುವುದಿಲ್ಲ. ಉದಾಹರಣೆಗೆ ಚರಂಡಿಗಳನ್ನು ಶುಭ್ರಪಡಿಸುವಲ್ಲಿ, ಮಲೇರಿಯಾ ವಿರುದ್ಧ ಪ್ರಚಾರ ನಿರ್ವಹಣೆಯಲ್ಲಿ ಖಾಸಗಿ ಕಂಪನಿಗಳಿಗೆ ಯಾವ ಲಾಭಗಳಿರುತ್ತವೆ. ಇಂತಹ ಕೆಲಸಗಳು ಕೈಗೊಳ್ಳಲು ಖಾಸಗಿ ಕಂಪನಿಗಳು ಆಸಕ್ತಿ ತೋರಿಸದೇ ಇರಬಹುದು. ಪಾಠಶಾಲೆಗಳು, ಆಸ್ಪತ್ರೆಗಳಂತಹ ಇತರ ಸಾರ್ವಜನಿಕ ಸೌಕರ್ಯಗಳು ಕಲ್ಪಿಸುವಲ್ಲಿ ಖಾಸಗಿ ಕಂಪನಿಗಳಿಗೆ ಆಸಕ್ತಿ ಇರುಬಹುದು. ಇಂತಹವು, ಪ್ರತ್ಯೇಕವಾಗಿ ದೊಡ್ಡ ಪಟ್ಟಣಗಳಲ್ಲಿ ಹೆಚ್ಚಾಗಿ ಕಾಣಿಸುತ್ತವೆ. ಅದೇ ವಿಧವಾಗಿ ನೀವು ಪಟ್ಟಣಗಳಲ್ಲಿ ವಾಸಿಸುತ್ತಿದ್ದರೆ ಬಾಟಲ್‌ಗಳಲ್ಲಿ ಶುಭ್ರ ನೀರು ಸರಫರಾ ಮಾಡುತ್ತಿರುವ ಖಾಸಗಿ ಕಂಪನಿಗಳನ್ನು ನೋಡಿರಬಹುದು. ಇಂತಹ ಸಂದರ್ಭಗಳಲ್ಲಿ ಖಾಸಗಿ ಕಂಪನಿಗಳು ಒದಗಿಸುವ ಸೌಲಭ್ಯಗಳ ಬೆಲೆಗೆ ಕೆಲವು ಜನರು ಮಾತ್ರ ವ್ಯಯ ಮಾಡಲು ಶಕ್ತರಾಗಿರುತ್ತಾರೆ. ಈ ಸೌಕರ್ಯಗಳ ಬೆಲೆಗಳನ್ನು ಕೊಡಲಾಗದ ಬಹಳ ಜನ ಗೌರವಾನ್ವಿತ ಜೀವನದಿಂದ ವಂಚಿತರಾರುತ್ತಿರುತ್ತಾರೆ. ಎಲ್ಲರಿಗೂ ಸಮಾನ ಅವಕಾಶಗಳು ಗೌರವಾನ್ವಿತ ಜೀವನ ಹಕ್ಕನ್ನು ಒದಗಿಸುತ್ತೇವೆ ಎಂದು ಸಂವಿಧಾನದ ಭರವಸೆಗೆ ಇದು ವಿರುದ್ದವಾಗಿರುತ್ತದೆ.

ಸಾರ್ವಜನಿಕ ಸೌಕರ್ಯಗಳು ಪ್ರಜೆಗಳ ಮೂಲಭೂತ ಅವಶ್ಯಕತೆಗಳಿಗೆ ಸಂಬಂಧಿಸಿವೆ. ಜನರ ಅವಶ್ಯಕತೆಗಳು ಈಡೇರುವಂತೆ ಈ ಸೌಕರ್ಯಗಳು ಕಲ್ಪಿಸುವುದು ಪ್ರತಿ ಸಮಾಜಕ್ಕೆ ಅವಶ್ಯಕ. ಜೀವಿಸುವ ಹಕ್ಕು ಸಂವಿಧಾನ ಎಲ್ಲರಿಗೂ ಕಲ್ಪಿಸುತ್ತದೆ. ಆದ್ದರಿಂದ ಮೂಲಭೂತ ಸೌಕರ್ಯಗಳು ಎಲ್ಲರಿಗೂ ಕಲ್ಪಿಸುವ ಜವಾಬ್ದಾರಿಯನ್ನು ಸರ್ಕಾರ ಕೈಗೊಳ್ಳಬೇಕು. ಸೈನಿಕ ಅವಶ್ಯಕತೆಗಳ ಮೇಲೆ ಸರ್ಕಾರ ಮಾಡುತ್ತಿರುವ ಖರ್ಚುನೊಂದಿಗೆ ಹೋಲಿಸಿದರೆ ಆರೋಗ್ಯದ ಮೇಲೆ ಸರಕಾರ ಮಾಡುತ್ತಿರುವ ಖರ್ಚು ಬಹಳ ಕಡಿಮೆ. ವೈದ್ಯ ಸೌಕರ್ಯಗಳಿಗಾಗಿ ಪ್ರಜೆಗಳು ಸ್ವತಃ ದೊಡ್ಡ ಮೊತ್ತದಲ್ಲಿ ಖರ್ಚು ಮಾಡಬೇಕಾದ ದೇಶಗಳಲ್ಲಿ ಭಾರತ ದೇಶ ಒಂದು ತೀರಿಸಲಾರದ ಸಾಲದ ಸುಳಿಯಲ್ಲಿ ಜನರು ಸಿಕ್ಕುಕೊಳ್ಳಲು ವೈದ್ಯ ಖರ್ಚುಗಳು ಕೂಡ ಒಂದು ಕಾರಣ.

- ಈ ಪಾಠದಲ್ಲಿ ಅವರು ಸರ್ಕಾರದ ಮೇಲೆ ಇಟ್ಟುಕೊಂಡ ಆಸೆಗಳು. ಸಾರ್ವಜನಿಕ ಆರೋಗ್ಯಕ್ಕೆ ಮಧ್ಯ ಸಂಬಂಧಗಳನ್ನು ಸೂಚಿಸುವ ವಾಕ್ಯಗಳ ಕೆಳಗೆ ಗೆರೆ ಎಳೆಯಿರಿ.

ಕೇಂದ್ರ, ರಾಜ್ಯ ಸರ್ಕಾರಗಳು ಎರಡೂ ವೈದ್ಯ ಸೌಲಭ್ಯಗಳನ್ನು ಕಲ್ಪಿಸುವ ಜವಾಬ್ದಾರಿವಹಿಸುತ್ತಿವೆ. ಕೆಳಗೆ ಕೊಟ್ಟ ಚಾರ್ಟ್ ಮೂಲಕ ಕೇಂದ್ರ ಸರ್ಕಾರ ಸಂಸ್ಥೆಗಳ ಕೆಲಸದ ರೀತಿ ಅರ್ಥಮಾಡಿಕೊಳ್ಳಬಹುದು.

## ತೆಲಂಗಾಣ ಮತ್ತು ಆಂಧ್ರ ಪ್ರದೇಶದಲ್ಲಿ ಪೌಷ್ಠಿಕ ಆಹಾರ ಪರಿಸ್ಥಿತಿ (Status of Nutrition in Andhra Pradesh and Telangana)

ಆರೋಗ್ಯಕರವಾದ ಜೀವನಕ್ಕೆ ಸರಿಹೋಗುವಂತಹ ಆಹಾರ, ಸುರಕ್ಷಿತ ಕುಡಿಯುವ ನೀರು, ಪರಿಶುಭ್ರತೆ ರೋಗ ನಿವಾರಣಾ ಕಾರ್ಯಗಳು ಮುಖ್ಯವಾದವು. ಆರೋಗ್ಯ ಸೇವೆಗಳೆಂದರೆ ರೋಗಗಳು ಬಂದಾಗ ಚಿಕಿತ್ಸೆ ನೀಡುವುದು ಮಾತ್ರವೇ ಅಲ್ಲ. ಈ ಮೂಲಭೂತ ಅವಶ್ಯಕತೆಗಳು ಕೂಡ ಒದಗಿಸಬೇಕು. ನಾವು ಇದು ಮಾಡುತ್ತಿದ್ದೇವೆಯಾ ? ನಮ್ಮ ಪರಿಸ್ಥಿತಿ ಏನು ಎಂದು ತಿಳಿದುಕೊಳ್ಳೋಣ. ದೇಶದಲ್ಲಿ ಜನರ ಪೋಷಕ ಆಹಾರದ ಮಟ್ಟ ಬಹಳ ಕಡಿಮೆ ಆಂದೋಳನ ಮೂಡಿಸುವ ವಿಧದಲ್ಲಿ ಇದೆ ಎಂದು ಈಗಿನ ಕಾಲದ ಅಧ್ಯಯನಗಳು ತೋರಿಸುತ್ತಿವೆ. ಜನಸಂಖ್ಯೆಯಲ್ಲಿ ಅಧಿಕ

SCERT TELANGANA

ಭಾಗ ಎಲ್ಲಾ ಸಮಯದಲ್ಲೂ ಪೋಷಕ ಆಹಾರ ಕೊರತೆಗೆ ಗುರಿಯಾಗುತ್ತಿದ್ದಾರೆಂದು ಕೂಡ ಗಮನಿಸಲು ಸಾಧ್ಯವಾಗದ ರೀತಿಯಲ್ಲಿ ಜೀವಿಸುತ್ತಿದ್ದಾರೆ. ಎಲ್ಲರಿಗೂ ಸರಿ ಹೋಂದುವಂತ ಆಹಾರ ಸಂಗ್ರಹಿಸಿದ್ದರೂ ಎಲ್ಲರಿಗೆ ತಲುಪುತ್ತಿಲ್ಲ. ಈ ಜನರಿಗೆ ತಮ್ಮ ಕುಟುಂಬಗಳಿಗೆ ಸರಿಹೋಗುವಷ್ಟು ಆಹಾರ ಕೊಂಡುಕೊಳ್ಳುವ ಶಕ್ತಿ ಇಲ್ಲ. ದೇಶವೆಲ್ಲಾ ನಿರ್ವಹಿಸಿದ ಪೋಷಕ ಆಹಾರ ಅಧ್ಯಯನಗಳ ಮೂಲಕ ಈ ವಿಷಯ ಬೆಳಕಿಗೆ ಬಂದಿದೆ.

**ಆರೋಗ್ಯ ಮತ್ತು ಕುಟುಂಬ ಕ್ಷೇಮಾಭಿವೃದ್ಧಿ ಮಂತ್ರಿತ್ವ ಇಲಾಖೆ (Ministry of Health and Family Welfare)**

- ಆರೋಗ್ಯ ಮತ್ತು ಕುಟುಂಬ ಕ್ಷೇಮಾಭಿವೃದ್ಧಿ ಇಲಾಖೆ ಅಂತರಾಷ್ಟ್ರೀಯ ಮಟ್ಟದಲ್ಲಿ ಆಸ್ಪತ್ರೆಗಳಲ್ಲಿನ ಔಷಧ ಶಾಲೆ (ಡಿಸ್ಪೆನ್ಸರಿ)ಗಳಲ್ಲಿ, ವೈದ್ಯ, ವಿದ್ಯೆ, ರೋಗ ನೀರೋಧಕ ಕಾರ್ಯಕ್ರಮಗಳು ಕೈಗೊಳ್ಳುತ್ತಿದಾರೆ.
- ಆಯುಷ್ (AYUSH) ಇಲಾಖೆಯವರು ಸ್ಥಾನಿಕ ವೈದ್ಯವಾದ, ಆಯುರ್ವೇದ ಹೋಮಿಯೋಪತಿ, ಯುನಾನಿ, ಸಿದ್ದ ಮೊದಲಾದವುಗಳ ಮೇಲೆ ಪರಿಶೋಧನೆ ನಡೆಸುತ್ತಿದ್ದಾರೆ.
- ಆರೋಗ್ಯ ಪರಿಶೋಧನಾ ಇಲಾಖೆಯವರು ಆರೋಗ್ಯ ಸಂಬಂಧಿಸಿದ ಕಾರ್ಯಕ್ರಮಗಳು ಔಷಧಗಳ ಮೇಲೆ ಪರಿಶೋಧನೆ ಗಳನ್ನು ನಡೆಸುತ್ತಿದ್ದಾರೆ.
- ಎಯಿಡ್ಸ್ (AIDS) ನಿಯಂತ್ರಣ ಇಲಾಖೆಯವರು ಎಯಿಡ್ಸ್, ಹೆಚ್.ಐ.ವಿ. ನಿಯಂತ್ರಣದ ಮೇಲೆ ಕಾರ್ಯಕ್ರಮಗಳು ನಿರ್ವಹಿಸುತ್ತಿದ್ದಾರೆ.

ನಾವೆಲ್ಲರೂ ಆರೋಗ್ಯವಾಗಿ ಇರಲು, ಪ್ರತಿದಿನ ಕೆಲಸ ಮಾಡಲು, ರೋಗಗ್ರಸ್ಥರಾಗದಂತೆ ಇರುಲು ಪ್ರತಿ ಒಬ್ಬರಿಗೂ ಶರೀರದಲ್ಲಿ ಸ್ವಲ್ಪ ಕೊಬ್ಬಿನಾಂಶ ಅವಸರ. ಪೋಷಕ ಆಹಾರ ಕೊರೆತೆ ಇದ್ದವರು / ತಕ್ಕಷ್ಟು ಆಹಾರ ಸೇವಿಸದಿರುವವರಲ್ಲಿ ಪ್ರತಿದಿನ ಶಾರೀರಕ ಕ್ರಿಯೆಗಳಿಗೆ ಅವಸರವಾಗುವ ಕೊಬ್ಬಿನಾಂಶ ಅವರ ಆಹಾರದಿಂದ ಸಿಗುವುದಿಲ್ಲ. ಅವರು ರೋಗಗ್ರಸ್ಥರಾಗದಿರಬಹುದು. ಆದರೆ ಪದೇ ಪದೇ ಶಕ್ತಿ ಹೀನವಾಗಿ, ದಣಿವು ಅನಿಸುತ್ತಿರುತ್ತದೆ. ರೋಗಗ್ರಸ್ಥರಾಗಲು ಇವರಿಗೆ ಅವಕಾಶಗಳು ಹೆಚ್ಚು. ಈ ಪರಿಸ್ಥಿತಿಯನ್ನು ನಿಯಂತ್ರಿಸಲು ಸರಿಹೋಗುವ ಆಹಾರಬೇಕು ಹೊರತು ಔಷಧಗಳಲ್ಲ ಇದು ಕಾಣಿಸದ ಹಸಿವುನಂತದ್ದು, ಅವರಿಗೆ ಸೇವಿಸಲು ಆಹಾರ ದೊರೆಯುತ್ತದೆ. ಆದರೆ ಸರಿ ಹೋಗುವಷ್ಟು ದೊರೆಯುವು ದಿಲ್ಲ, ಆದ್ದರಿಂದ ಇದನ್ನು ಕಾಣಿಸದ ಹಸಿವು ಎನ್ನುತ್ತಾರೆ. **ಪುಟ 197 ರಲ್ಲಿರುವ ಚಟುವಟಿಕೆಯ ಬಾಕ್ಸ್‌ನಲ್ಲಿ ಕೊಟ್ಟಿರುವ ಶರೀರ ಪದಾರ್ಥ ಸೂಚಿಕೆ ( BMI ) ಯನ್ನು ಓದಿರಿ.**

ಆಂಧ್ರಪ್ರದೇಶ್ ಮಾನವ ಅಭಿವೃದ್ಧಿ ವೇದಿಕೆ 2007, ತೆಲಂಗಾಣ ಮತ್ತು ಆಂಧ್ರಪ್ರದೇಶಕ್ಕೆ ಅನ್ವಯವಾಗುತ್ತದೆ. ಆಧಾರವಾಗಿ ನಮ್ಮ ರಾಜ್ಯದಲ್ಲಿನ ಪರಿಸ್ಥಿತಿ ಏನು ತಿಳಿದುಕೊಳ್ಳೋಣ. ಹಸಿವು, ಪೋಷಕ ಆಹಾರ ಕೊರತೆಯಿಂದ ಸ್ವತಂತ್ರ್ಯ ಎನ್ನುವುದು ಪ್ರಾಥಮಿಕ ಹಕ್ಕುಗಳಲ್ಲಿ ಒಂದು. ಮಾನವ ಜಾತೀಯ ಪುರೋಭಿವೃದ್ಧಿಗೆ ಇದು ಬಹಳ ಅವಸರ. ಉತ್ತಮವಾದ ಪೋಷಕ ಆಹಾರವೆಂದರೆ ರೋಗ ನಿರೋಧಕ ಶಕ್ತಿ ಹೆಚ್ಚಾಗಿರುತ್ತದೆ. ರೋಗಗಳು ಕಡಿಮೆ ಯಾಗಿದ್ದು, ಆರೋಗ್ಯ ಉತ್ತಮವಾಗಿರುತ್ತದೆ. ಪ್ರಪಂಚ ಆರೋಗ್ಯ ಸಂಸ್ಥೆ (World Health Organisation, WHO) ಪ್ರಕಾರ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಐದು ವರ್ಷದೊಳಗಿನ ಮಕ್ಕಳೆಲ್ಲ ಅಂಟು ವ್ಯಾದಿಗಳ ಕಾರಣವಾಗಿ ಮರಣಗಳಲ್ಲಿ ಎರಡರಲ್ಲಿ ಪ್ರತಿ ಒಂದಕ್ಕೆ (53% ಶೇಕಡ) ಪೋಷಕ ಆಹಾರ ಕೊರತೆಯೇ ಕಾರಣ. ಆಂಧ್ರಪ್ರದೇಶ್‌ನಲ್ಲಿ ಐದು ವರ್ಷದೊಳಗಿನ ಮಕ್ಕಳಲ್ಲಿ ವಯಸ್ಸಿಗೆ ತಕ್ಕ ಬಾರ ಇಲ್ಲದವರು 33 ಶೇಕಡ ಇದ್ದಾರೆ. 31 ಶೇಕಡ ಮಹಿಳೆಯರು, 25 ಶೇಕಡ ಪುರುಷರು ಪೋಷಕ ಆಹಾರ ಕೊರತೆಗೆ ಗುರಿಯಾಗುತ್ತಿದ್ದಾರೆ. ಎಂದು ಈ ವರದಿ ಪ್ರಕಟಿಸಿದೆ.

SCERT TELANGANA

**ಏನು ಮಾಡಬಹುದು ?**

**(ನಾಲ್ಕು ಅಥವಾ ಐದು ಜನ ವಿದ್ಯಾರ್ಥಿಗಳಿಂದ ಕೂಡಿದ ಸಣ್ಣ ಗುಂಪುಗಳಾಗಿ ಕೆಲಸ ಮಾಡಬೇಕು. ಪ್ರತಿ ಗುಂಪು ತಾವು ತೆಗೆದುಕೊಂಡದರ ಆಧಾರವಾಗಿ ಎಲ್ಲರ ಫಲಿತಾಂಶವನ್ನು ಒಟ್ಟಾಗಿ ಕೊಡಬೇಕು)**

- ನಿಮ್ಮ ಊರು ಅಥವಾ ಪಟ್ಟಣದಲ್ಲಿ ಲಭ್ಯವಿರುವ ವೈದ್ಯ ಸೌಕರ್ಯಗಳ ಕುರಿತು ಸಂಕ್ಷಿಪ್ತವಾಗಿ ಬರೆಯಿರಿ. ನಿಮ್ಮ ಸುತ್ತಮುತ್ತ ಇರುವವರು ಸರ್ಕಾರ / ಖಾಸಗಿ ಆಸ್ಪತ್ರೆಗೆ ಹೋದಾಗ ಎಂತಹ ಸಮಸ್ಯೆಗಳು ಎದುರಿಸುತ್ತಿದ್ದಾರೆ ?
- ಸಾರ್ವಜನಿ, ಖಾಸಗಿ ವೈದ್ಯ ಸೇವೆಗಳಲ್ಲಿ ಅನೇಕ ಪಟ್ಟಣಗಳಲ್ಲಿವೆ. 2003 ರಲ್ಲಿ ಆಯ್ಕೆ ಮಾಡಿಕೊಂಡ ಪ್ರಾಂತಗಳಲ್ಲಿ ಕೈಗೊಂಡ ವರದಿ ಆಧಾರವಾಗಿ ಅರ್ಹರಾದ ಖಾಸಗಿ ವೈದ್ಯರುಗಳಲ್ಲಿ ಹೆಚ್ಚು ಜನ (79% ಶೇಕಡ) ಪಟ್ಟಣಗಳಲ್ಲಿ ಇದ್ದಾರೆಂದು ಬೆಳಕಿಗೆ ಬಂದಿದೆ. ಕೆಲವು ಜನ ವೈದ್ಯರುಗಳು ಗ್ರಾಮೀಣ ಪ್ರಾಂತಗಳಲ್ಲಿ ನಿಯಮಿಸಿದ್ದರೂ ಉದ್ಯೋಗಕ್ಕೆ ಸರಿಯಾಗಿ ಹೋಗದಿದ್ದರಿಂದ ಅವರು ಸಿಗುವುದು ನಾಮಮಾತ್ರವಾಗಿದೆ. ಈ ಪರಿಸ್ಥಿತಿಗೆ ಕಾರಣಗಳನ್ನು ಚರ್ಚಿಸಿರಿ. ಈ ಸಮಸ್ಯೆ ಕುರಿತು ನಿಮ್ಮ ಪ್ರಾಂತಗಳಲ್ಲಿನ ಹಿರಿಯರೊಂದಿಗೆ ಮಾತನಾಡಿರಿ. ಇದನ್ನು ಹೇಗೆ ಪರೀಷ್ಕರಿಸಬಹುದೋ ಚರ್ಚಿಸಿರಿ.
- ನಿಮ್ಮ ಪ್ರಾಂತಗಳಲ್ಲಿ ಸಣ್ಣ ಮಕ್ಕಳಿಗೆ ಚುಚ್ಚುಮದ್ದು ಮೇಲೆ (ಎರಡು ವರ್ಷದೊಳಗಿನ ಮಕ್ಕಳನ್ನು ಕನಿಷ್ಟ ಐದು ಕುಟುಂಬಗಳಲ್ಲಿ) ಕೆಳಗೆ ಕೊಟ್ಟ ಪ್ರಶ್ನಾವಳಿ ಆಧಾರವಾಗಿ ಒಂದು ಚಿಕ್ಕ ಸರ್ವೆ ಕೈಗೊಳ್ಳಿರಿ.

a. ನಿಮ್ಮ ಮಕ್ಕಳಿಗೆ ಚುಚ್ಚುಮದ್ದು ಕಾರ್ಡ್ ಇದೆಯಾ ?
b. ನಿಮ್ಮ ಮಕ್ಕಳಿಗೆ ಎಡಗೈ ಮೇಲೆ ಮಚ್ಚೆ ಉಳಿಯುವ ಚುಚ್ಚುಮದ್ದು ಹಾಕಿದ್ದಾರೆ ? (ಅವಕಾಶವಿದ್ದರೆ ನೀವು ಸ್ವತಃ ನೋಡಿರಿ)
c. ನಡುವಿನ ಕೆಳಗೆ ನಿಮ್ಮ ಮಕ್ಕಳಿಗೆ ಚುಚ್ಚುಮದ್ದು ಹಾಕಿದ್ದಾರಾ ?
d. ನಿಮ್ಮ ಮಕ್ಕಳಿಗೆ ಪೋಲಿಯೋ ಡ್ರಾಪ್ಸ್ ಹಾಕಿದ್ದಾರಾ ? ಎಷ್ಟು ಬಾರಿ ?
e. ಒಂಭತ್ತು ತಿಂಗಳಿನಲ್ಲಿ ನಿಮ್ಮ ಮಕ್ಕಳಿಗೆ ತೊಡೆಯ ಮೇಲೆ ಚುಚ್ಚುಮದ್ದು ಜೊತೆ ಒಂದು ಚಮಚ ಔಷಧ ಕೊಟ್ಟಿದ್ದಾರೆಯೇ?
f. ನಿಮ್ಮ ಮಕ್ಕಳಿಗೆ 18 ತಿಂಗಳಲ್ಲಿ (ಮಕ್ಕಳಿಗೆ ಆ ವಯಸ್ಸು ಇದ್ದರೆ) ಯಾವುದಾದರೂ ಚುಚ್ಚುಮದ್ದು ಹಾಕಿದ್ದಾರಾ? ಅವರಿಗೆ ಆ ಸಮಯದಲ್ಲಿ ಕುಡಿಯಲು ಕೂಡ ಯಾವುದಾದರೂ ಔಷಧ ಕೊಟ್ಟಿದ್ದಾರೆಯಾ ?

ಪ್ರತಿ ಪ್ರಶ್ನೆಗೆ ಹೌದು / ಅಲ್ಲ(ವರ್ತಿಸುವ ಸ್ಥಳ) ಎಂದು ತುಂಬಿ ಎಷ್ಟು ಡೋಸ್‌ಗಳಲ್ಲಿ ಬರೆಯಿರಿ. (where applicable); DK (for don't know) / NA (not applicable; ಗೊತ್ತಿಲ್ಲ / ವರ್ತಿಸುವುದಿಲ್ಲ. ನಂತಹ ಉತ್ತರದೊಂದಿಗೆ ತುಂಬಿರಿ (ಉದಾಹರಣೆಗೆ 'f') ಎನ್ನುವ ಪ್ರಶ್ನೆಗೆ ಮಕ್ಕಳ ವಯಸ್ಸು ಒಂದು ವರ್ಷವಾದರೆ ಉತ್ತರ ವರ್ತಿಸುವುದಿಲ್ಲ. ನಿಮ್ಮ ಫಲಿತಾಂಶವನ್ನು ಚರ್ಚಿಸಿರಿ.

**ಸೂಚನೆ :**

*ಕ್ಷಯ (TB) ನಿವಾರಣೆಗೆ ಬಿ.ಸಿ.ಜಿ. (BCG) ಚುಚ್ಚುಮದ್ದು ಎಡಗೈ ಮೇಲೆ ಹಾಕುತ್ತಾರೆ. ಇದರಿಂದ ಒಂದು ಮಚ್ಚೆ ಉಳಿಯುತ್ತದೆ. ಡಿ.ಪಿ.ಟಿ.(ಮೂರು ರೋಗಗಳ ನಿವಾರಣೆಗೆ) (DPT, against three diseases) ನಡುವಿನ ಕೆಳಗೆ, ತೊಡೆಯ ಮೇಲೆಯಾದರೂ ಹಾಕುತ್ತಾರೆ. ಅದರೊಂದಿಗೆ ಬಾಯಿಯಲ್ಲಿ ಎರಡು ಪೋಲಿಯೋ ಡ್ರಾಪ್ಸ್ ಹಾಕುತ್ತಾರೆ. ಸಾಧಾರಣವಾಗಿ ಇದನ್ನು 1.5, 2.5 ಮತ್ತು 3.5 ತಿಂಗಳುಗಳಲ್ಲಿ ಕೊಡುತ್ತಾರೆ. ಆ ನಂತರ ಕೂಡ ಕೊಡಬಹುದು. ಅಮ್ಮನವರಿಗೆ (ಮಿಜಿಲ್ಸ್‌ಗೆ) ಚುಚ್ಚುಮದ್ದು ಒಂಬತ್ತು ತಿಂಗಳಿರುವಾಗ ತೊಡೆಯ ಮೇಲೆ ಹಾಕುತ್ತಾರೆ. ಅದೇ ಸಮಯದಲ್ಲಿ ಒಂದು ಮಿ.ಲೀ. ವಿಟಮಿನ್ A ಬಾಯಿಯಲ್ಲಿ ಹಾಕುತ್ತಾರೆ.*

*18 ತಿಂಗಳಲ್ಲಿ ಡಿ.ಪಿ.ಟಿ.(DPT) ಬೂಸ್ಟರ್ ಡೋಸ್ ಒ.ಪಿ.ವಿ. (OPV) ಕೊಡುತ್ತಾರೆ. ಅದರೊಂದಿಗೆ ಮತ್ತೊಂದು ಡೋಸ್ ವಿಟಮಿನ್ A (ಈ ಬಾರಿ ಒಂದು ಮಿ.ಲೀ. ಅಲ್ಲದೇ ಎರಡು ಮಿ.ಲೀ. ಕೊಡುತ್ತಾರೆ).*

- ಬಿಳಿಕಾರ್ಡ್ ಇರುವ ಕುಟುಂಬಕ್ಕೆ ಆರೋಗ್ಯ ಭೀಮಾ ಯೋಜನೆಯಿಂದ ಆರೋಗ್ಯಶ್ರೀಯನ್ನು ಪ್ರಾರಂಭಿಸಿದರು. ಆಸ್ಪತ್ರೆಯಲ್ಲಿ ಸೇರಬೇಕಾಗ ವೈದ್ಯಕ್ಕೆ ಆಗುವ ಖರ್ಚನ್ನು ಇದರ ಕೆಳಗೆ ಸಲ್ಲಿಸುತ್ತಾರೆ. ಈ ಯೋಜನೆಯ ಕೆಳಗೆ ಅನೇಕ ವಿಧವಾದ ರೋಗಗಳಿಗೆ ವೈದ್ಯ ಚಿಕಿತ್ಸೆ ಪಡೆಯಬಹುದು. ಬಹಳ ಖಾಸಗಿ ಆಸ್ಪತ್ರೆಗಳಲ್ಲಿ ಸಹ ಈ ಸೌಕರ್ಯವನ್ನು ಪಡೆಯಬಹುದು. ನಿಮ್ಮ ಸುತ್ತಮುತ್ತಲ್ಲಿರುವವರೊಂದಿಗೆ ಮಾತನಾಡಿ ಈ ಯೋಜನೆ ಎಷ್ಟು ಉತ್ತಮವಾಗಿ ಕೆಲಸ ಮಾಡುತ್ತದೋ ಬರೆಯಿರಿ.
- ನಿಮ್ಮ ಶಾಲೆಯಲ್ಲಿರುವ ಮಧ್ಯಾಹ್ನ ಭೋಜನದಲ್ಲಿ ಮಾಡಬೇಕಾದ ಮುಖ್ಯವಾದ ಬದಲಾವಣೆ ಏನು ?
- ಗರ್ಭಧಾರಣೆಯಲ್ಲಿ ಸಮಸ್ಯೆಗಳಿಂದ ಪ್ರತಿ ವರ್ಷ ಭಾರತ ದೇಶದಲ್ಲಿ ಲಕ್ಷ ಜನ ಮಹಿಳೆಯರು ಮರಣ ಹೊಂದುತ್ತಿದ್ದಾರೆ. ತಾಯಿ ಆರೋಗ್ಯ, ಪೋಷಕ ಆಹಾರ ಮಟ್ಟ ಸರಿಯಾಗಿ ಇಲ್ಲದಿರುವುದು ಹೆರಿಗೆ ಸಮಯದಲ್ಲಿ ಸರಿಯಾದ ಸೇವೆಗಳು ಒದಗಿಸದೇ ಇರುವುದರಿಂದ ಶಿಶು ಮರಣಗಳು ಅಧಿಕವಾಗಿ ಸಂಭವಿಸುತ್ತಿವೆ. ಮೇಲೆ ಪರಿಸ್ಥಿತಿಯಲ್ಲಿ 104 ಮತ್ತು 108 ಸೇವೆಗಳು ಯಾವುದಾದರೂ ಬದಲಾವಣೆ ತಂದಿವೆಯಾ ? ಚರ್ಚಿಸಿರಿ.

SCERT TELANGANA

## ಮುಖ್ಯ ಪದಗಳು

1. ಸಾರ್ವಜನಿಕ ಆರೋಗ್ಯ ಸೇವೆಗಳು
2. ಸ್ಥಳೀಯ ಆಸ್ಪತ್ರೆಗಳು
3. ಸಾರ್ವಜನಿಕ ಸೌಕರ್ಯಗಳು
4. ಪೋಷಕ ಆಹಾರ
5. ಆರೋಗ್ಯಶ್ರೀ ಯೋಜನೆ

## ನಿಮ್ಮ ಅಭ್ಯಾಸವನ್ನು ಅಭಿವೃದ್ಧಿಪಡಿಸಿಕೊಳ್ಳಿ

1. ತಪ್ಪು ವಾಕ್ಯಗಳನ್ನು ಸರಿಪಡಿಸಿ :
   a. ಗ್ರಾಮೀಣ ಪ್ರಾಂತಗಳಲ್ಲಿ ಬಹಳ ಮಟ್ಟಿಗೆ ಅರ್ಹರಾದ ವೈದ್ಯರುಗಳು ಇದ್ದಾರೆ.
   b. ಸರ್ಕಾರದ ಆಸ್ಪತ್ರೆಗಳಿಗಿಂತ ಖಾಸಗಿ ಆಸ್ಪತ್ರೆಗಳಲ್ಲಿ ಹೆಚ್ಚು ಸೇವೆಗಳು ಲಭ್ಯತೆಯಲ್ಲಿದೆ.
   c. ಆರೋಗ್ಯ ಸ್ಥಿತಿಯನ್ನು ಸುಧಾರಿಸುವಲ್ಲಿ ಪೋಷಕ ಆಹಾರ ಸಹಕರಿಸುತ್ತದೆ.
   d. ಹಣವನ್ನು ಸಂಪಾದಿಸಲು ಕೆಲವು ಜನ ವೈದ್ಯರುಗಳು ಅನವಸರವಾದ ಚಿಕಿತ್ಸೆಗಳು ಮಾಡಬಹುದು.
2. ಜಯಮ್ಮ ಈ ಕೆಳಗಿನವುಗಳನ್ನು ಉಪಯೋಗಿಸುತ್ತಾಳೆ. ಇವುಗಳಲ್ಲಿ ಯಾವು ಮೂಲಭೂತ ಸಾರ್ವಜನಿಕ ಸೌಕರ್ಯಗಳ ಕೆಳಗೆ ಬರುತ್ತದೆ.
   a. ಶಾಲೆಗೆ ಸ್ಕೂಟರ್ ನಡೆಸಿಕೊಂಡು ಹೋಗುತ್ತಾಳೆ.
   b. ಅಂಗನವಾಡಿಗೆ ತನ್ನ ಮಗುವನ್ನು ಕಳಿಸುತ್ತಾಳೆ.
   c. ಮನೆಯಲ್ಲಿ ಟಿ.ವಿ. ಇದೆ.
   d. ಆಕೆಗೆ ಮೊಬೈಲ್ ಫೋನ್ ಇದೆ.
   e. ಅಂಚೆ ಕಛೇರಿ ಮೂಲಕ ಉತ್ತರ ಕಳಿಸುತ್ತಾಳೆ.
3. ಈ ಪಾಠದಲ್ಲಿ ಸಾರ್ವಜನಿಕ ಆರೋಗ್ಯದಲ್ಲಿ ಸರ್ಕಾರದ ಪಾತ್ರ ಕುರಿತು ಚರ್ಚಿಸುವ ವಾಕ್ಯಗಳನ್ನು ಗುರ್ತಿಸಿರಿ.
4. ಈ ಪಾಠದ ಕೆಳಗಿನವುಗಳಲ್ಲಿ ಯಾವುವು ಸಾರ್ವಜನಿಕ ಆರೋಗ್ಯವನ್ನು ಅಭಿವೃದ್ಧಿಪಡಿಸುವ ಕಾರ್ಯಗಳೆಂದು ಭಾವಿಸುತ್ತಿದ್ದಿರೋ, ಯಾವೂ ಅಂತಹ ಕಾರ್ಯಗಳಲ್ಲವೆಂದು ಭಾವಿಸುತ್ತಿದ್ದಿರೋ ಬರೆಯಿರಿ. ನಿಮ್ಮ ಉತ್ತರಕ್ಕೆ ಕಾರಣಗಳು ಬರೆಯಿರಿ.
   a. ಕ್ಷಯ (TB) ರೋಗಗಳಿಗೆ ಉಚಿತ ಚಿಕಿತ್ಸೆ ನೀಡುತ್ತಾರೆ.
   b. ಕೆಲವು ಗ್ರಾಮಗಳಲ್ಲಿ ಸುರಕ್ಷಿತ ಕುಡಿಯುವ ನೀರಿನ ಸೌಕರ್ಯವನ್ನು ಕಲ್ಪಿಸಿದರು.
   c. ನಗಡೆ, ಜ್ವರ, ಹೊಟ್ಟೆನೋವುಗಳಂತಹವುಗಳಿಗೆ ಔಷಧ ಅಂಗಡಿಯವರು ಔಷಧಗಳನ್ನು ಮಾರುತ್ತಿದ್ದಾರೆ.
   d. ನ್ಯಾಯ ಬೆಲೆ ಅಂಗಡಿಗಳ ಮೂಲಕ ಸರ್ಕಾರ ಆಹಾರ ಧಾನ್ಯಗಳನ್ನು ಒದಗಿಸುತ್ತದೆ.
5. ಪ್ರಿಯಂವದ ಒಂದು ಖಾಸಗಿ ಆಸ್ಪತ್ರೆ ನಡೆಸುತ್ತಿದ್ದಾಳೆ. ಸರ್ಕಾರದ ಆಸ್ಪತ್ರೆಗಳಿಗಿಂತ ಇಲ್ಲಿ ಹೆಚ್ಚಿನ ಸೌಕರ್ಯಗಳಿವೆ. ಮಂಡಲ ಸರ್ಕಾರದ ಆಸ್ಪತ್ರೆಯಲ್ಲಿ ಸತ್ಯನಾರಾಯಣ ವೈದ್ಯರಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಬ್ಬರ ಮಧ್ಯ ವೈದ್ಯ ಸೇವೆಗಳು ಜನರಿಗೆ ಲಭ್ಯತೆಯ ಮೇಲೆ ನಡೆಯುವ ಚರ್ಚೆಯನ್ನು ಊಹಿಸಿ ಬರೆಯಿರಿ.
6. ಔಷಧಗಳನ್ನು ಮಾತ್ರ ಕೊಡುವುದರಿಂದ ಆರೋಗ್ಯ ಸರಿಹೋಗದು ಈ ಅಧ್ಯಾಯನದಲ್ಲಿ ಆರೋಗ್ಯಕ್ಕೆ ಸಂಬಂಧಿಸಿ ಇತರ ಅಂಶಗಳು (ಉದಾ: ಶುಭ್ರವಾದ ಕುಡಿಯುವ ನೀರು) ಹೆಸರಿಸಿದ್ದಾರೆ. ಅವುಗಳನ್ನೆಲ್ಲಾ ಒಂದು ಹತ್ತಿರಕ್ಕೆ ಕೂಡಿಸಿ ಅವುಗಳನ್ನು ಕುರಿತು ವ್ಯಾಖ್ಯಾನಿಸಿರಿ.
7. ತೆಲಂಗಾಣ ಮತ್ತು ಆಂಧ್ರಪ್ರದೇಶ್‌ನಲ್ಲಿ ಜನರು ವೈದ್ಯಕೀಯಕ್ಕೆ ಮಾಡುವ ಖರ್ಚುಗಳನ್ನು ಕೆಳಗಿನ ಚಿತ್ರ ವಿವರಿಸುತ್ತದೆ. ಬಡತನದಲ್ಲಿ ಇರುವವರಿಗೆ 65% ಶೇಕಡದವರೆಗೆ ಜನರು ಸಾಲ ಪಡೆಯಬೇಕಾಗಿ ಬರುತ್ತದೆ. ಚಿತ್ರದಲ್ಲಿ ಇದಕ್ಕೆ ಬಣ್ಣಗಳಿಂದ ತುಂಬಿದ ಭಾಗವನ್ನು ಗುರ್ತಿಸಿ, ಶೇಕಡವನ್ನು ಕೂಡ ಗುರ್ತಿಸಿ, ಬಡತನ ರೇಖೆ ಮೇಲೆ ಇರುವವರಲ್ಲಿ ಆಸ್ಪತ್ರೆ ಖರ್ಚಿನಲ್ಲಿ 45 % ಶೇಕಡದವರೆಗೆ ತಮ್ಮ ಉಳಿತಾಯದಿಂದ ತುಂಬುತ್ತಿದ್ದಾರೆ. ಇದನ್ನು ಕೂಡ ಚಿತ್ರದಲ್ಲಿ ಗುರ್ತಿಸಿ, ಬಡತನ ರೇಖೆಗೆ



SCERT TELANGANA

ಮೇಲೆ ಇರುವವರಲ್ಲಿ 35% ಶೇಕಡ ಜನರು ಮಾತ್ರ ಸಾಲ ಮಾಡಬೇಕಾಗುತ್ತದೆ. ಇದನ್ನು ಆ ಶೇಕಡವನ್ನು ಚಿತ್ರದಲ್ಲಿ ಗುರ್ತಿಸಿ.

ಕೆಳಗೆ ತೋರಿಸಿದ ಪಟ್ಟಿಗಳ ಆಧಾರವಾಗಿ ಆಸ್ಪತ್ರೆ ಖರ್ಚುಗಳು ಯಾವ ವಿಧವಾಗಿ ಒದಗಿಸಿಕೊಳ್ಳವುರೋ ! ಅದರಲ್ಲಿ

## ತೆಲಂಗಾಣ ಮತ್ತು ಆಂಧ್ರಪ್ರದೇಶ್ ಆರ್ಥಿಕ ಮಟ್ಟವನ್ನಿಡಿದು ಆಸ್ಪತ್ರೆ ಖರ್ಚುಗಳನ್ನು ತುಂಬುವ ಮಾರ್ಗಗಳು




8. ನಿಮ್ಮ ಪ್ರಾಂತಗಳಲ್ಲಿ ಸರ್ಕಾರ ಆರೋಗ್ಯ ಪಥಕಗಳ ಮೇಲೆ ಸರ್ವೆ ನಡೆಸಿ ಲಬ್ಧಿ ಹೊಂದುತ್ತಿರುವವರ ಪಟ್ಟಿ ತಯಾರು ಮಾಡಿರಿ.
9. ಅಂಟು ರೋಗಗಳ ನಿವಾರಣೆಗೆ ತೆಗೆದುಕೊಳ್ಳುವ ಜಾಗ್ರತೆಗಳನ್ನು ತಿಳಿದುಕೊಳ್ಳಲು ನಿಮ್ಮ ಪ್ರಾಂತದ ಕಾರ್ಯಕರ್ತನನ್ನು ಯಾವ ಯಾವ ಪ್ರಶ್ನೆಗಳನ್ನು ಕೇಳುವಿರೋ ಬರೆಯಿರಿ.
10. 108 ಸೇವೆಗಳು ಅತ್ಯವಸರ ಸಮಯದಲ್ಲಿ ಸಾರ್ವಜನಿಕರಿಗೆ ಎಂತಹ ಸೇವೆಗಳನ್ನು ನೀಡುತ್ತದೆ ?

**ನಿಯೋಜಿತ ಕಾರ್ಯ :**

1. ನಿಮ್ಮ ಹತ್ತಿರದ ಸರ್ಕಾರಿ ಆರೋಗ್ಯ ಕೇಂದ್ರಗಳು, ಆಸ್ಪತ್ರೆಗಳ ಪಟ್ಟಿಯನ್ನು ತಯಾರಿಸಿರಿ. (ಯಾವುದಾದರೊಂದನ್ನು ಸಂದರ್ಶಿಸಿ) ನಿಮ್ಮ ಅನುಭವದಲ್ಲಿ ಅಲ್ಲಿ ಲಭಿಸುವ ಸೌಕರ್ಯಗಳು, ಅವುಗಳನ್ನು ನಿರ್ವಹಿಸುವವರ ಬಗ್ಗೆ ಬರೆಯಿರಿ.
2. ನಿಮ್ಮ ಐದು ಜನ ಮಿತ್ರರನ್ನು ಭೇಟಿ ಮಾಡಿ ಕೆಳಗಿನ ವಿವರಗಳೊಂದಿಗೆ ಪಟ್ಟಿಯನ್ನು ತುಂಬಿ ವಿಶ್ಲೇಷಿಸಿ ತರಗತಿ ಕೋಣೆಯಲ್ಲಿ ಚರ್ಚಿಸಿರಿ.

| ಕ್ರ. ಸಂ. | ಮಿತ್ರರ ಹೆಸರು | ಉಗುರುಗಳನ್ನು ಎಷ್ಟು ದಿನಗಳಿಗೊಮ್ಮೆ ಕತ್ತರಿಸಿಕೊಳ್ಳುತ್ತಾನೆ | ಯಾವ ಯಾವ ಸಂದರ್ಭದಲ್ಲಿ ಕೈ ತೊಳೆದುಕೊಳ್ಳುತ್ತಾನೆ | ಮಧ್ಯಾಹ್ನ ಊಟದ ನಂತರ ಉಳಿದ ಪದಾರ್ಥಗಳನ್ನು ಎಲ್ಲಿ ಎಸೆಯುತ್ತಾರೆ | ಶಾಲಾ ಸ್ವಚ್ಛತಾ ಕ್ರಮದಲ್ಲಿ ಎಷ್ಟು ದಿನಗಳಿಗೊಮ್ಮೆ ಪಾಲ್ಗೊಳ್ಳುತ್ತಾನೆ | ಮನೆಯನ್ನು ಸ್ವಚ್ಛವಾಗಿರಿಸಿಕೊಳ್ಳಲು ಯಾವ ಯಾವ ಕೆಲಸ ಮಾಡುತ್ತಾನೆ |
|---|---|---|---|---|---|---|
| | | | | | | |
| | | | | | | |

SCERT TELANGANA

# 10 ಬ್ರಿಟೀಷ್ ನಿಜಾಂರ ಆಡಳಿತದಲ್ಲಿ ಭೂಸ್ವಾಮಿಗಳು ಸಾಗುವಳಿದಾರರು



1 ಜಮೀಂದಾರರಿಂದ ತೆರಿಗೆ ವಸೂಲಿ ಮಾಡುವ ರಾಜ



2 ಪ್ರಜೆಗಳಿಂದ ವಸೂಲಿ ಮಾಡಿ ರಾಜನಿಗೆ ಸಲ್ಲಿಸುವ ಜಮೀಂದಾರರು




3 ಜಮೀಂದಾರರ ಸ್ವಂತ ಭೂಮಿಗಳಲ್ಲಿ ಕೆಲಸ ಮಾಡುತ್ತಿರುವ ಕೂಲಿಗಳು




4 ಸ್ವಂತ ಭೂಮಿಯನ್ನು ಹೊಂದಿ ತೆರಿಗೆ ಕಟ್ಟುವ ರೈತನು

## ಮೊಘಲರ ಕಾಲದಲ್ಲಿ ಜಮೀನುದಾರರು (ಭೂಸ್ವಾಮಿಗಳು) ರೈತರು :

ಮೊಘಲ್ ಚಕ್ರವರ್ತಿಗಳ ಆಡಳಿತದಲ್ಲಿ ರೈತರಿಂದ ಜಮೀನುದಾರರು ತೆರಿಗೆಗಳನ್ನು ವಸೂಲು ಮಾಡಿ ಮೊಘಲ್ ಅಧಿಕಾರಿಗಳಿಗೆ ಒಪ್ಪಿಸುತ್ತಿದ್ದರು. ತೆರಿಗೆ ವಸೂಲು ಮಾಡಿದಿದರಿಂದ ಜಮೀನುದಾರರಿಗೆ ಅದರಲ್ಲಿ ಸ್ವಲ್ಪ ಭಾಗ, ಒದೊಂದು ಸಲ ಸ್ಥಾನಿಕವಾಗಿ ಸಣ್ಣ ಸಣ್ಣ ತೆರಿಗೆಗಳನ್ನು ವಸೂಲು ಮಾಡುವ ಅಧಿಕಾರ ಕೂಡಾ ಕೊಡಲಾಗದೆ, ಕುದುರೆಗಳು ತುಪಾಕಿಗಳಿಂದ ಕೂಡಿದ ಸಣ್ಣ ಸೈನಿಕರ ಗುಂಪು ಸಹಾ ಇತ್ತು. ಇವರು ಮನೆಗಳು ಚಿಕ್ಕ ಕೋಟೆಗಳ ಮಾದರಿಯಾಗಿ ಇದ್ದವು. ತೆಲಂಗಾಣದಲ್ಲಿ ಇವುಗಳನ್ನು ಗಡಿಗಳೆಂದು ಕರೆಯುತ್ತಾರೆ, ಇಲ್ಲಿಂದ ಸುತ್ತಲೂ ಇರುವ ಗ್ರಾಮಗಳನ್ನು ನಿಯಂತ್ರಿಸುತ್ತಿದ್ದರು. ಜಮೀನುದಾರರು ತೆರಿಗೆ ವಸೂಲಿ ಮಾಡುವವರಾಗಿ ರೈತರಿಗೂ, ಸರ್ಕಾರಕ್ಕೂ ಮಧ್ಯವರ್ತಿಗಳಾಗಿ ಇರುತ್ತಿದ್ದರು. ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ಸರ್ಕಾರಕ್ಕೆ ತಿಳಿಸುತ್ತಿದ್ದರು. ಅದೇ ಸಮಯದಲ್ಲಿ ಸರ್ಕಾರದ ನಿಬಂಧನಗೆಳನ್ನು ರೈತರು ಪಾಲಿಸುವಂತೆ ನೋಡಿಕೊಳ್ಳುತ್ತಿದ್ದರು.

ಜಮೀನುದಾರರಿಗೆ ಸ್ವಂತ ಭೂಮಿ ಸಹಾ ಇದ್ದಿತು. ಇದರಲ್ಲಿ ಕೂಲಿಗಳಿಂದ ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಇವುಗಳನ್ನು ಖುದ್‌ಖಾಸ ಅಂದರೆ ಸ್ವತಃ ಸಾಗುವಳಿ ಮಾಡಲು ಭೂಮಿಗಳೆನ್ನುವರು. ತಮ್ಮ ಭೂಮಿಗಳನ್ನು ಅವರು ರೈತರಿಗೆ ಕೊಟ್ಟು ಬೆಳೆಯಲ್ಲಿ ಸ್ವಲ ಭಾಗವಾಗಲೀ, ಇಲ್ಲವೇ ಮೊದಲೇ ನಿರ್ಣಯಿಸಿದ ಸಾಗುವಳಿಗಾಗಲೀ ಕೊಡುತ್ತಿದ್ದರು. ಈ ವಿಧವಾಗಿ ಭೂಮಿ ಹೊಂದಿದದವರನ್ನು ಭೂಸ್ವಾಮಿಗಳು ಎನ್ನುತ್ತಾರೆ. ಇವರ ಭೂ ಮಿಗಳನ್ನು ಸಾಗುವಳಿ ಮಾಡುವವರನ್ನು ಸಾಗುವಳಿದಾರರು ಇಲ್ಲವೇ ಕೌಲುದಾರರು ಎಂದು ಕರೆಯುತ್ತಾರೆ. ಅಂದರೆ ಜಮೀಂದಾರರಿಗೆ ಎರಡು ದುಷ್ಟಿ ಇವೆ. ಒಂದು ತೆರಿಗೆಗಳನ್ನು ವಸೂಲು ಮಾಡುವುದು, ಎರಡು ಭೂಮಿಯನ್ನು ಹೊಂದಿರುವುದು. ರೈತರಲ್ಲಿ ಎರಡು ವಿಧಗಳಿವೆ. ಮೊದಲನೆಯದು ಸ್ವತಃ ಭೂಮಿಯನ್ನು ಹೋಂದಿದ್ದು, ಅದನ್ನು ಸಾಗುವಳಿ, ಮಾಡುತ್ತಾ , ಜಮೀನುದಾರರ ಮೂಲಕ ತೆರಿಗೆ ಸಲ್ಲಿಸುವುವರು. ಎರಡನೇಯದು ಭೂಸ್ವಾಮಿಗಳ ಕೆಳಗೆ ಸಾಗುವಳಿದಾರರಾಗಿ ಭೂಮಿ ಸಾಗುವಳಿ ಮಾಡುವವರು. ಭಾರತದೇಶ ನಗರಗಳಲ್ಲಿ, ಗ್ರಾಮಗಳಲ್ಲಿ ನೇಕಾರರು, ಮೆಸ್ತ್ರೀಗಳು, ಕಂಬಾರರು ಮತ್ತು ಬಡಿಗರು ಕೌಶಲ್ಯ ಯುಕ್ತ ಕರಕುಶಲಿಗರು ಅಧಿಕ ಸಂಖ್ಯೆಯಲ್ಲಿರುತ್ತಾರೆ. ಅವರು ಕೃಷಿ ಕೆಲಸಕ್ಕೆ ಬೆಂಬಲವಾಗಿ ಹಸ್ತಕಲೆ, ವಸ್ತುಗಳ ಉತ್ಪತ್ತಿ ಮತ್ತು ಸೇವೆಯಲ್ಲಿ ಮಗ್ನರಾಗಿರುತ್ತಿದ್ದರು. ಅಷ್ಟೇ ಅಲ್ಲದೆ ಬಟ್ಟೆ ತೊಳೆಯುವರು (ಅಗಸರು), ಬುಟ್ಟಿಗಳನ್ನು ಹೆಣೆಯುವರು (ಮೇದಾರರು) ನಾಯಿಂದರು, ಮಾಂಸದ ವ್ಯಾಪಾರಿಗಳು ಕುರಿಕಾಯುವರು, ಪಶುಸಾಕುವವರು ಮತ್ತು ವ್ಯವಸಾಯ ಕೂಲಿಗಳು ವ್ಯಕ್ತಿಗತ ಮತ್ತು ಸಾಮಾಜಿಕ ಸೇವೆಯಲ್ಲಿ ಭಾಗಿಗಗಳಾಗುತ್ತಿದ್ದರು. ಮತ್ತು ಸೇವೆಗಳನ್ನು ಸಲ್ಲಿಸುತ್ತಿದ್ದರು. ಆಗಾಗ 'ಹಿಂದುಳಿದ' ಮತ್ತು 'ಕಡಿಮೆ' ಕುಲಗಳಿಗೆ ಸಂಬಂಧಿಸಿದವರಾಗಿರುತ್ತಿದ್ದರು. ಕೆಲವರಿಗೆ ಕಡಿಮೆ ಭೂಮಿ ಇರುತ್ತಿತ್ತು. ಆದರೆ ಮುಖ್ಯವಾಗಿ ಜಮೀನುದಾರರಿಗೆ, ರೈತರಿಗೆ ಸೇವೆಗಳನ್ನು ಸಲ್ಲಿಸುತ್ತಾ ಜೀವನವನ್ನು ಸಾಗಿಸುತ್ತಿದ್ದರು.

- ಮೊಘಲರ ಕಾಲದಲ್ಲಿ ಗ್ರಾಮಗಳಲ್ಲಿಯ ಭೂಮಿಗಳೆಲ್ಲವೂ ಜಮಿನುದಾರರ ಆಧೀನದಲ್ಲಿರುತ್ತಿದ್ದವೇ?
- ಮೊಘಲರ ಸರ್ಕಾರಕ್ಕೆ ಜಮೀನುದಾರರು ಏನು ಮಾಡುತ್ತಿದ್ದರು? ಅದಕ್ಕೆ ಪ್ರತಿಫಲವಾಗಿ ಅವರಿಗೆ ಏನು ಲಭಿಸುತ್ತಿತ್ತು ?

SCERT TELANGANA

- ಜಮೀನುದಾರರು ಸಣ್ಣ ಕೋಟೆಯಂತಿರುವ ಮನೆಯಲ್ಲಿ ಇದ್ದೂ ಏಕೆ ಸೈನ್ಯವನ್ನು ಇಟ್ಟುಕೊಳ್ಳುತ್ತಿದ್ದರು?
- ಸ್ವಂತ ವ್ಯವಸಾಯವನ್ನು ಮಾಡಿಕೊಳ್ಳುತ್ತಿರುವವರಿಗೆ ಜಮೀನುದಾರರು ಯಾವ ವಿಧವಾಗಿಯಾದರೂ ಸಹಾಯ ಮಾಡುತ್ತಿದ್ದರೇ? ನಿಮ್ಮ ಉತ್ತರಕ್ಕೆ ಕಾರಣಗಳನ್ನು ಕೊಡಿರಿ.

*(2) ಮತ್ತು (3) ಸಹ ರಾಜನಿಗೆ ತೆರಿಗೆ ಕಟ್ಟಿದರು.*



ಜಮೀಂದಾರರಿಂದ ತೆರಿಗೆ ವಸೂಲಿ ಮಾಡುತ್ತಿರುವ ಅಧಿಕಾರಿ.



ಅಧಿಕ ಶಿಸ್ತು ವಸೂಲಿ ಮಾಡುವ ಅಧಿಕಾರವಿರುವ ಜಮೀನುದಾರರು




ರೈತರು ಏನನ್ನು ಬೆಳೆಸಬೇಕು, ತೆರಿಗೆ ಎಷ್ಟು ಸಲ್ಲಿಸಬೇಕೆಂದು ಜಮೀನುದಾರರು ನಿರ್ಣಯಿಸುತ್ತಿದ್ದರು

## ಶಾಶ್ವತ ಕಂದಾಯ ಪದ್ಧತಿ : ಬ್ರಿಟೀಷ್ ಆಡಳಿತಗಾರರು ಪ್ರವೇಶಪಡಿಸಿದ ಬದಲಾವಣೆಗಳು.

ಭಾರತ ದೇಶದ ಮೇಲೆ ಬ್ರಿಟೀಷರು ದಬ್ಬಾಳಿಕೆ ಹೊಂದಿದ ನಂತರ ಯುದ್ಧಗಳಿಗೆ, ವ್ಯಾಪಾರಕ್ಕೆ ಹಣ ಶೇಖರಿಸಲು ಭೂಮಿ ತೆರಿಗೆಯನ್ನು ಸಾಧ್ಯವಾದಷ್ಟು ಹೆಚ್ಚಿಸಬೇಕೆಂದುಕೊಂಡರು. ಇಂತಹ ಪರಿಸ್ಥಿತಿಯಲ್ಲಿ ರೈತರು ಭೂಮಿಯನ್ನು ಸಾಗುವಳಿ ಮಾಡಲಾಗದೆ ವ್ಯವಸಾಯಕ್ಕೆ ದಕ್ಕೆ ಉಂಟಾಯಿತು. ಅನೇಕ ಬರಗಾಲಗಳು ಸಂಭವಿಸಿದ್ದರಿಂದ ಲಕ್ಷಗಟ್ಟಲೆ ಜನರು ಸತ್ತು ಹೋದರು. ಭೂಮಿ ತೆರಿಗೆ ವಿಧಾನ, ವ್ಯವಸಾಯವನ್ನು ಪ್ರೋತ್ಸಾಹಿಸುವಂತೆ ಇರಬೇಕೆಂದು ಬ್ರಿಟೀಷ್ ಆಡಳಿತಗಾರರು ಗುರ್ತಿಸಿದರು. ರೈತರು ಸಾಧ್ಯವಾದಷ್ಟು ಹೆಚ್ಚು ಭೂಮಿಯನ್ನು ಸಾಗುವಳಿ ಮಾಡುವಂತೆ ಮಾಡಬೇಕೆಂದೂ, ಇಂಗ್ಲೆಂಡಿಗೆ ರಫ್ತು ಮಾಡುವ ಹತ್ತಿ, ಅಫೀಮು, ಕಬ್ಬು, ಗೋಧಿಯಂತಹ ಬೇಡಿಕೆ ಇರುವ ವಾಣಿಜ್ಯ ಬೆಳೆಗಳನ್ನು ಬೆಳೆಸಬೇಕೆಂದು ಅವರನ್ನು ಕೋರಿದರು. ವ್ಯವಸಾಯವನ್ನು ಅಭಿವೃದ್ಧಿಗೊಳಿಸಬೇಕೆಂದು ಅದರಲ್ಲಿ ಬಂಡಾವಾಳಗಳನ್ನು ಪ್ರೋತಾಹಿಸಬೇಕೆಂದು ಕಂಪನಿ ಅಧಿಕಾರಿಗಳು ಭಾವಿಸಿದರು. ಆದರೆ ಇದನ್ನು ಆಚರಣೆಯಲ್ಲಿ ತರುವುದು ಹೇಗೆ ?

ಈ ಅಂಶಗಳ ಮೇಲೆ ಎರಡು ದಶಾಬ್ದಗಳವರೆಗೆ ಚರ್ಚೆಗಳು ನಡೆದ ನಂತರ ಲಾರ್ಡ್‌ಕಾರ್ನ್‌ವಾಲೀಸ್ ಗವರ್ನರ್ ಜನರಲ್ ಆಗಿ ಇರುವ ಸಮಯದಲ್ಲಿ ಕಂಪೆನಿ ಶಾಶ್ವತ ತೆರಿಗೆ ನಿರ್ಣಯ ಒಪ್ಪಂದವನ್ನು 1973ರಲ್ಲಿ ಪ್ರವೇಶಗೊಳಿಸಲಾಯಿತು. ಈ ವಿಧಾನದಲ್ಲಿಯ ನಿಬಂಧನೆಯ ಪ್ರಕಾರ ಹರಾಜು ಮೂಲಕ ಒಪ್ಪಿಕೊಂಡು ತೆರಿಗೆಗಳನ್ನು ವಸೂಲಿ ಮಾಡುವ ಅಧಿಕಾರ ಜಮೀನುದಾರರಿಗೆ ಕೊಡಲಾಗಿದೆ. ಆದುದರಿಂದಲೇ ಇದನ್ನು **ಜಮಿಂದಾರಿ ಪದ್ಧತಿ** ಎಂದು ಕೂಡಾ ಕರೆಯುತ್ತಾರೆ. ವಸೂಲಿ ಮಾಡಿದ ತೆರಿಗೆಯಲ್ಲಿ ಶೇಕಡಾ 90ರಷ್ಟು ಸರ್ಕಾರಕ್ಕೆ ಸಲ್ಲಿಸಿ, ವಸೂಲಿ ಮಾಡಿದಕ್ಕಾಗಿ ಶೇಕಡಾ 10ರಷ್ಟು ಅವರು ಉಳಿಸಿಕೊಳ್ಳಬಹುದು. ತೆರಿಗೆ ಮೊತ್ತವನ್ನು ಶಾಶ್ವತವಾಗಿ ನಿರ್ಣಯಿಸಿದ್ದಾರೆ, ಅಂದರೆ ಭವಿಷ್ಯತ್ತಿನಲ್ಲಿ ಅದನ್ನು ಹೆಚ್ಚಿಸಲು ಸಾಧ್ಯವಿಲ್ಲ. ಇದರಿಂದ ಕಂಪೆನಿಗೆ ಕ್ರಮ ತಪ್ಪದಂತೆ ಆದಾಯ ಬರುತ್ತದೆಂದೂ, ಅದೇ ಸಮಯದಲ್ಲಿ ಭೂಮಿಗಳನ್ನು ಅಭಿವೃದ್ಧಿಗೊಳಿಸುವುದಕ್ಕೆ ಜಮೀನುದಾರರು ಬಂಡವಾಳವನ್ನು ಇಡಬಹುದೆಂದು ಭಾವಿಸಿದರು. ಸರ್ಕಾರಕ್ಕೆ ಕಟ್ಟುವ ತೆರಿಗೆ ಹೆಚ್ಚಾಗುವುದಿಲ್ಲ. ಆದುದರಿಂದ ಹೆಚ್ಚು ಬೆಳೆ ಬೆಳೆದರೆ ಭೂಸ್ವಾಮಿಗಳು ಲಾಭ ಪಡೆಯುತ್ತಾರೆ. ಆದರೆ ಹರಾಜಿನಲ್ಲಿ ಒಪ್ಪಿಕೊಂಡಿದ್ದಕ್ಕಿಂತ ಹೆಚ್ಚು ತೆರಿಗೆಯನ್ನು ಈ ಒಪ್ಪಂದದಿಂದ ರೈತರು ಕೌಲುದಾರರಾಗಿ ಬದಲಾದರು. ಜಮೀನುದಾರರು ವಸೂಲಿ ಮಾಡತೊಡಗಿದರು. ಅವರು ನಿರಂತರವಾಗಿ ತೆರಿಗೆಯನ್ನು ಹೆಚ್ಚಿಸುತ್ತಾ ಅದಕ್ಕೆ ಸಿದ್ಧವಾಗಿಲ್ಲದ ಸಾಗುವಳಿದಾರರನ್ನು ತೊಲಗಿಸುತ್ತಿದ್ದರು. ಜಮೀನುದಾರರು ಭೂಮಿ ತೆರಿಗೆ ಅಲ್ಲದೆ ಗುತ್ತಿಗೆ ವಸೂಲಿ ಮಾಡತೊಡಗಿದರು. ತೆರಿಗೆಗಿಂತ ಗುತ್ತಿಗೆ ಬಹಳ ಹೆಚ್ಚಾಗಿರುವುದರಿಂದ ರೈತರು ಆ ಮೊತ್ತವನ್ನು ಸಲ್ಲಿಸಲಾಗದೇ ಕೆಲವು ಸಂದರ್ಭಗಳಲ್ಲಿ ಭೂಮಿಗಳನ್ನು ಬಿಟ್ಟು

SCERT TELANGANA

ಓಡಿಹೋಗುತ್ತಿದ್ದರು. ಬಹಳ ಕಾಲದನಂತರ ಜಮೀನುದಾರರು ಕೂಡ ಸರ್ಕಾರಕ್ಕೆ ಕಟ್ಟ ಬೇಕಾದ ತೆರಿಗೆಯನ್ನು ಕಟ್ಟದಂತೆ ಋಣಿಗಳಾಗಿ ಕಷ್ಟಗಳನ್ನು ಅನುಭವಿಸಿದರು.




ಭೂಸಾರ ಸಂಬಂಧವಿಲ್ಲದೇ ಹೆಚ್ಚು ಶಿಸ್ತು ಸಲ್ಲಿಸುತ್ತಾ ಜಮೀನ್‌ದಾರರ ಕೋರಿಕೆಯ ಮೇರೆಗೆ ಉತ್ಪತ್ತಿ ಮಾಡದ ಪಕ್ಷದಲ್ಲಿ ಭೂಮಿಯಿಂದ ಬಿಟ್ಟು ಹೋಗಬೇಕು.

- ಅನೇಕ ತಲೆಮಾರಿನಿಂದ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದ ರೈತನ ಸ್ಥಿತಿಯನ್ನು ಈ ಬದಲಾವಣೆಗಳು ಹೇಗೆ ಪ್ರಭಾವಿತಗೊಳಿಸಿವೆ?
- ತೆರಿಗೆಗೆ, ಗುತ್ತಿಗೆ ಮಧ್ಯ ಇರುವ ವ್ಯತ್ಯಾಸವೇನು?
- ಶಾಶ್ವತ ಕಂದಾಯ ನಿರ್ಣಯ ಪದ್ಧತಿ ಮೂಲಕ ಬ್ರಿಟೀಷ್ ಸರ್ಕಾರ, ಜಮಿನುದಾರರು, ರೈತರಲ್ಲಿ ಯಾರು ಹೆಚ್ಚು ಲಾಭ ಪಡೆದರು ? ನಿಮ್ಮ ಕಾರಣಗಳನ್ನು ತಿಳಿಸಿರಿ.

**ಫಲಿತಾಂಶಗಳು** : ಭೂಮಿಯನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಜಮೀನುದಾರರು ಬಂಡವಾಳಗಳು ಹೂಡುತ್ತಿಲ್ಲವೆಂದು ಸ್ವಲ್ಪ ಕಾಲದಲ್ಲಿಯೇ ಕಂಪನಿ ಅಧಿಕಾರಿಗಳು ಗುರ್ತಿಸಿದರು. ತೆರಿಗೆ ಬಹಳ ಹೆಚ್ಚಾಗಿದ್ದು , ಜಮೀನುದಾರರಿಗೆ ರೈತರು ಆ ಮೊತ್ತ ಸಲ್ಲಿಸುವುದು ಕಷ್ಟವಾಗಿತ್ತು. ಬೆಳೆ ನಷ್ಟವಾದಾಗ, ಬರಗಾಲದ ಸಮಯದಲ್ಲಿ ತೆರಿಗೆಯಲ್ಲಿ ಎಂತಹ ವಿನಾಯಿತಿಗಳು ಇದ್ದಿಲ್ಲ. ತೆರಿಗೆ ಸಲ್ಲಿಸದಿದ್ದರೆ ಜಮೀನುದಾರತ್ವವನ್ನು ಕಳೆದುಕೊಳ್ಳ ಬೇಕಾಗುತ್ತಿತ್ತು. ಕಂಪನಿ ನಿರ್ವಹಿಸುವ ಹರಾಜಿನಲ್ಲಿ ಇವುಗಳನ್ನು ಮರಳಿ ಮಾರುತ್ತಿದ್ದರು. ಇದರಿಂದ ಗ್ರಾಮಗಳಲ್ಲಿ ಅಸ್ಥಿರತ್ವ ಏರ್ಪಟ್ಟು, ಹಳೆಯ ಜಮೀನುದಾರರು ಬೇಗನೆ ಬದಲಾಗುತ್ತಾ ಅವರ ಸ್ಥಾನದಲ್ಲಿ ಹೊಸ ಜಮೀನುದಾರರು ಬರುತ್ತಿದ್ದರು.




ಕೆಲವು ವರ್ಷಗಳ ನಂತರ ಭೂಮಿಯ ಮೇಲೆ ಸರ್ವಾಧಿಕಾರಗಳು ಹೊಂದಿದ ಜಮೀನುದಾರರು

1820ರ ಹೊತ್ತಿಗೆ ಈ ಪರಿಸ್ಥಿತಿ ಬದಲಾಯಿತು. ಮಾರುಕಟ್ಟೆಯಲ್ಲಿ ಆಹಾರ ಧ್ಯಾನಗಳ ಬೆಲೆಗಳು ಹೆಚ್ಚಾಗುತ್ತಿದ್ದರಿಂದ ಸಾಗುವಳಿ ಮೆಲ್ಲಗೆ ವಿಸ್ತರಿಸತೊಡಗಿತು. ಇದರಿಂದ ಜಮೀನುದಾರರಿಗೆ ಆದಾಯ ಹೆಚ್ಚಾಯಿತಾಗಲೀ, ಕಂಪನಿಗೆ ಯಾವ ವಿಧವಾದ ಲಾಭ ಇಲ್ಲದಂತಾಯಿತು. ಭೂಮಿ ತೆರಿಗೆಯನ್ನು ಶಾಶ್ವತವಾಗಿ ನಿರ್ಣಯಿಸಿದ್ದುದರಿಂದ ಅದನ್ನು ಹೆಚ್ಚಿಸಲು ಸಾಧ್ಯವಾಗಲಿಲ್ಲ.

ಆದಾಗ್ಯೂ ಭೂಮಿಯನ್ನು ಅಭಿವೃದ್ಧಿಗೊಳಿಸುವುದರಲ್ಲಿ ಜಮೀನುದಾರರಿಗೆ ಆಸಕ್ತಿ ಉಂಟಾಗಲಿಲ್ಲ. ಒಪ್ಪಂದ ಮೊದಲೇ ವರ್ಷದಲ್ಲಿ ಸ್ವಲ್ಪ ಮಂದಿ ಜಮೀಂದಾರರು ತಮ್ಮ ಭೂಮಿಗಳನ್ನು ಕಳೆದುಕೊಂಡರು. ಈಗ ಯಾವ ವಿಧವಾದ ಬಂಡವಾಳಗಳು, ಕಷ್ಟವಿಲ್ಲದಂತೆ ಸಂಪಾದಿಸಿಕೊಳ್ಳಲು ದೊರೆತ ಅವಕಾಶವನ್ನು ಇನ್ನೂ ಕೆಲವರು ಉಪಯೋಗಿಸಿಕೊಂಡರು. ಗುತ್ತಿಗೆದಾರರಿಗೆ ಸಾಗುವಳಿ ಮಾಡುವುದಕ್ಕೆ ಭೂಮಿಯನ್ನು ಕೊಟ್ಟು, ಗುತ್ತಿಗೆ ಪಡೆಯುತ್ತಾ ಇರುವ ಕಾಲದವರೆಗೆ ಭೂಮಿಯನ್ನು ಅಭಿವೃದ್ಧಿಗೊಳಿಸುವುದಕ್ಕೆ ಜಮೀನುದಾರರು ಆಸಕ್ತಿ ತೋರಿಸಲಿಲ್ಲ.

ಜನ ಸಂಖ್ಯೆ ವೇಗವಾಗಿ ಬೆಳೆಯುತ್ತಿರುವುದರಿಂದ ಜಮೀನುದಾರರು ಗುತ್ತಿಗೆದಾರರನ್ನು ತೊಲಗಿಸಿ ಹೆಚ್ಚು ಗುತ್ತಿಗೆ ಹೊಸಬರಿಗೆ ಕೊಡುತ್ತಿದ್ದರು. ಇನ್ನೊಂದು ಕಡೆ ಗ್ರಾಮಗಳಲ್ಲಿಯ ಪರಿಸ್ಥಿತಿಗಳು ಸಾಗುವಳಿದಾರರನ್ನು ಹಿಂಡಿ ಸಿಪ್ಪೆಯನ್ನಾಗಿ ಮಾಡುತ್ತಿದ್ದವು. ಜಮೀನ್‌ದಾರರಿಗೆ ದೊಡ್ಡ ಮೊತ್ತದಲ್ಲಿ ಗುತ್ತಿಗೆ ಸಲ್ಲಿಸಿದಾಗ್ಯೂ ಭೂಮಿ ಆತನ ಅಧೀನದಲ್ಲೇ ಇರತ್ತದೆಂಬ ನಂಬಿಕೆ ಏನೂ ಇಲ್ಲ. ಗುತ್ತಿಗೆ ಸಲ್ಲಿಸುವುದಕ್ಕೆ ರೈತನು ಬಡ್ಡಿ ವ್ಯಾಪಾರಸ್ಥನ ಹತ್ತಿರ ಸಾಲ ತೆಗೆದುಕೊಳ್ಳ ಬೇಕಾಗುತ್ತಿತ್ತು. ಒಂದು ವೇಳೆ ಗುತ್ತಿಗೆ ಸಲ್ಲಿಸಲಾಗದಿದ್ದರೆ ತಲಾತಲಾಂತರದಿಂದಲೂ ವ್ಯವಸಾಯ ಮಾಡುತ್ತಿರುವ ಭೂಮಿಯಿಂದ ತೊಲಗಿಸುತ್ತಿದ್ದರು.

SCERT TELANGANA

- ಬ್ರಿಟೀಷ್ ಸರ್ಕಾರ ಜಮೀನ್‌ದಾರಿ ವ್ಯವಸ್ಥೆಯನ್ನು ಪ್ರವೇಶಗೊಳಿಸಿದ ಉದ್ದೇಶಗಳು ಏಕೆ ನೆರವೇರಲಿಲ್ಲ?
- ಭೂಮಿ ಮೇಲೆ ಯಾವುದೇ ಬಂಡವಾಳಗಳು ಹಾಕದಂತೆ ತಮ್ಮ ಆದಾಯಗಳನ್ನು ಹೆಚ್ಚಿಸಿಕೊಳ್ಳುವುದು, ಜಮೀನುದಾರರಿಗೆ ಹೇಗೆ ಸಾಧ್ಯವಾಯಿತು ?
- ಬ್ರಿಟೀಷ್ ಆಡಳಿತವನ್ನು ಜಮೀನುದಾರರು ಸಮರ್ಥಿಸಿದ್ದಾರೆಯೇ ವಿರೋಧಿಸುತ್ತಿದ್ದಾರೆಯೇ ? ನಿಮ್ಮ ಕಾರಣಗಳನ್ನು ತಿಳಿಸಿರಿ.

## ರೈತ್ವಾರಿ ಪದ್ಧತಿ

19ನೇ ಶತಮಾನದ ಆರಂಭದಲ್ಲಿ ತೆರಿಗೆ ವಿಧಾನವನ್ನು ಮತ್ತೊಂದು ಸಲ ಬದಲಾಯಿಸುವುದು ಅನಿವಾರ್ಯ ಎನ್ನುವ ಅಭಿಪ್ರಾಯಕ್ಕೆ ಬಹಳ ಮಂದಿ ಕಂಪನಿ ಅಧಿಕಾರಿಗಳು ಬಂದರು. ಆಡಳಿತಕ್ಕೆ, ವ್ಯಾಪಾರಕ್ಕೆ ಆಗುವ ಖರ್ಚುಗಳಿಗೆ ಮತ್ತಷ್ಟು ಆದಾಯವನ್ನು ಶೇಕರಿಸುವ ಪರಿಸ್ಥಿತಿಯಲ್ಲಿ ತೆರಿಗೆಯನ್ನು ಶಾಶ್ವತವಾಗಿ ನಿರ್ಣಯಿಸಿದರೆ ಹೇಗೆ ಹೊಂದಿಕೊಳ್ಳುತ್ತದೆ?

ಬ್ರಿಟೀಷ್ ಸೈನಿಕರ ನಿರ್ವಹಣೆಗೆ ಸಲ್ಲಿಸಬೇಕಾದ ಮೊತ್ತಗಳನ್ನು ಬಾಕಿಯಾದುದರಿಂದ ಹೈದ್ರಾಬಾದಿನ ನಿಜಾಮನು , ಬಳ್ಳಾರಿ, ಅನಂತಪುರಂ, ಕಡಪ, ಕರ್ನೂಲು ಜಿಲ್ಲೆಗಳನ್ನು ಬ್ರಿಟೀಷ್ ಕಡೆಗೆ ಮಾಡಿದನು. ಇವುಗಳನ್ನೇ ಸೀಡೆಡ್ ಜಿಲ್ಲೆಗಳೆನ್ನುವರು. ಈ ಪ್ರಾಂತಗಳನ್ನೇ ರಾಯಲಸೀಮ ಎಂದು ಕರೆಯುವರು. 1800 ನವಂಬರ್‌ನಲ್ಲಿ ಈ ಜಿಲ್ಲೆಗಳಿಗೆ ಥಾಮಸ್ ಮನ್ರೋ ಪ್ರಾಧಾನ ಕಲೆಕ್ಟರಾಗಿ ನಿಯಮಿತನಾದನು. ಆ ಸಮಯದಲ್ಲಿ ಸೀಡೆಡ್ ಜಿಲ್ಲೆಗಳಲ್ಲಿ ಪೂರ್ತಿ ಅರಾಚಕತೆ ಏರ್ಪಟ್ಟಿತು. ಈ ಪ್ರಾಂತದ 8 ಮಂದಿ ಪಾಳೆಗಾರರ ಆಡಳಿತದಲ್ಲಿ ಇದ್ದಿತು. ಇವರು ಬ್ರಿಟೀಷ್ ಪಾಲನೆಯನ್ನು ವಿರೋಧಿಸುತ್ತಾ ನಿರಂತರ ದಾಳಿಗಳು, ಲೂಟಿಗಳನ್ನು ಮುಂದುವರೆಸುತ್ತಿದ್ದರು. ಮೊದಲು ಮನ್ರೋ ಈ ಪಾಳೆಗಾರರನ್ನು ವಶಪಡಿಸಿಕೊಂಡು ,ಅವರ ಸಾಯುಧ ಅನುಚರರನ್ನು ದಿಕ್ಕುಪಾಲು ಮಾಡಿದರು. ಶಾಂತಿ, ಭದ್ರತೆಗಳನ್ನು ಏರ್ಪಡಿಸಿದ ನಂತರ ಮನ್ರೋ ತನ್ನ ದೃಷ್ಟಿಯನ್ನು ಭೂಮಿ ಸರ್ವೇ, ತೆರಿಗೆಯ ಮೇಲೆ ದೃಷ್ಟಿಯನ್ನು ಕೇಂದ್ರೀಕರಿಸಿದನು.ಉತ್ತರ ಭಾರತ ದೇಶದ ಮಾದರಿಯಂತೆ ದಕ್ಷಿಣದ ಜಮೀನುದಾರರು ಇಲ್ಲವೆಂದು ಮನ್ರೋ ಗುರ್ತಿಸಿದನು. ಅದಕ್ಕೆ ಭಿನ್ನವಾಗಿ ಆಂಧ್ರ, ತಮಿಳ ದೇಶಗಳಲ್ಲಿ ಸಣ್ಣ ಸಣ್ಣ ರೈತರ ಸಮೂಹಗಳು (ಗುಂಪುಗಳು) ಭೂಮಿಯನ್ನು ಹೊಂದಿದ್ದು, ಅದನ್ನು ಸಾಗುವಳಿ ಮಾಡುತ್ತಾ, ತೆರಿಗೆ ಸಲ್ಲಿಸುತ್ತಿದ್ದರು. ರೈತರ ಪ್ರಾಮುಖ್ಯತೆಯನ್ನು ಗುರ್ತಿಸಿ ಆತನು ರೈತ್ವಾರಿ ಸ್ಥಿರೀಕರಣವನ್ನು ದಕ್ಷಿಣ, ಪಶ್ಚಿಮ ಭಾರತ ದೇಶದಲ್ಲಿ ಪ್ರವೇಶಗೊಳಿಸಿದನು.

ರೈತ ಎಂದರೆ ಭೂಮಿಯನ್ನು ಊಳುವವನು. ರೈತ್ವಾರಿ ಎಂದರೆ ರೈತರಿಗೆ ಊಳುವ ಹಕ್ಕನ್ನು ಕಲ್ಪಿಸುವುದು. ಭೂಮಿಯನ್ನು ಸ್ವಂತ ಊಳುವ ಅಥವಾ ಇತರರೊಂದಿಗೆ ಊಳುವಂತೆ ಭೂಮಿಯ ನಿಜವಾದ ಯಜಮಾನರು/ಊಳುವವರಿಂದ ನೇರವಾಗಿ ತೆರಿಗೆ ವಸೂಲಿ ಮಾಡಬೇಕೆಂದು ನಿರ್ಣಯಿಸಿದರು. ಈ ಸ್ಥಿರೀಕರಣದ ಕೆಳಗೆ ಭೂಮಿಯನ್ನು ಊಳುವ ರೈತರನ್ನು ಗುರ್ತಿಸಿದರು. ಅವರು ಊಳುತ್ತಿರುವ ಭೂಮಿಗಳನ್ನು ಗುರ್ತಿಸಿದರು. ಪ್ರತಿ ಭೂಮಿಗೆ ಸರ್ವೆ ನಂಬರು ಕೊಟ್ಟು ಅದಕ್ಕೆ ಕಾನೂನಿನ ಪ್ರಕಾರ ಯಜಮಾನರು ಯಾರೋ



ರೈತ್ವಾರಿ ಪದ್ಧತಿಯಲ್ಲಿ ನಾನು ಹೆಚ್ಚು ಬೆಳೆ ಬೆಳೆಸಿದ್ದೇನೆ.


ಸ್ಥಿರೀಕರಿಸಲ್ಪಟ್ಟ ತೆರಿಗೆಯನ್ನು ರೈತರಿಂದ ವಸೂಲಿಮಾಡುವ ಕಂಪನಿ ಅಧಿಕಾರಿ



ಉಳುವವರೊಂದಿಗೆ ಜಮೀನುದಾರರು

SCERT TELANGANA

ಎಂಬುದನ್ನು ನಿರ್ಣಯಿಸಿದರು. ಇಳುವರಿ, ಬೆಲೆಗಳು, ಮಾರುಕಟ್ಟೆ ಪರಿಸ್ಥಿತಿಗಳು, ಸಾಗುವಳಿ ಬೆಳೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಎಕರೆಗೆ ಸಲ್ಲಿಸ ಬೇಕಾದ ತೆರಿಗೆಯನ್ನು ನಿರ್ಣಯಿಸಿದರು. 1801–02 ರಲ್ಲಿ ಬೆಳೆಗಳ ಸಾಗುವಳಿ ಪ್ರಾರಂಭಿಸುವುದಕ್ಕೆ ಮೊದಲು ಬೀಜಗಳು, ಉಪಕರಣಗಳು, ಎತ್ತುಗಳನ್ನು ಕೊಳ್ಳಲು ಹಣ, ಹಳೇ ಬಾವಿಗಳ ದುರಸ್ತಿ ಮಾಡವುದಕ್ಕೆ ಹೊಸ ಬಾವಿಗಳನ್ನು ತೊಡಿಸಲು ರೈತರಿಗೆ ಮನ್ರೋ ಸಾಲಗಳನ್ನು ಕೊಡಿಸಿದನು. ರೈತರಿಗೆ ರಕ್ಷಣವಾಗಿರುವ ತಂದೆ ಸ್ಥಾನದಲ್ಲಿ ಬ್ರಿಟೀಷ್ ಸರ್ಕಾರ ಇರಬೇಕೆಂದು ಆತನು ವಾದಿಸಿದನು. ಈ ಕ್ರಮಗಳಿಂದ ಆ ವರ್ಷದ ಬೆಳೆಗಳು ಚೆನ್ನಾಗಿ ಬೆಳೆದು ತೆರಿಗೆ ವಸೂಲಿ ಹೆಚ್ಚಾಯಿತು. ಮನ್ರೋ ಅನುಸರಿಸಿದ ವಿಧಾನವು ಸರಿಯಾದುದೆಂದು ಇದು ನಿರೂಪಿಸಿತು.

*ಚಿತ್ರ **10.1 :** ಪ್ರಕಾಶಂ ಬ್ಯಾರೇಜ್*



## ಅಭಿವೃದ್ಧಿ ಕಾರ್ಯಕ್ರಮಗಳು :

ಬಾರಿ ನೀರಾವರಿ ಯೋಜನೆ ಗಳಲ್ಲಿ ಬಂಡವಾಳಗಳು ಹಾಕುವುದು ಸರ್ಕಾರದ ಕರ್ತವ್ಯ ಎಂದು ಕೆಲವು ಮಂದಿ ಬ್ರಿಟೀಷ್ ಆಡಳಿತ ಕಾರರು ಭಾವಿಸಿದರು. ಇವುಗಳಿಂದ ರೈತರು ಹೊಲಗಳನ್ನು ಸಾಗುವಳಿ ಮಾಡಿ ಹೆಚ್ಚು ಬೆಲೆ ಬಾಳುವ ವಾಣಿಜ್ಯ ಬೆಳೆಗಳನ್ನು ಬೆಳೆಸಲು ಅನುಕೂಲ ವಾಗುವುದೆಂದು ಬಾವಿಸಿದರು. ಸರ್ ಆರ್ಥರ್ ಕಾಟನ್ ರ ಅವಿಶ್ರಾಂತ ಕೃಷಿಯಿಂದ 1849ರಲ್ಲಿ ಧವಳೇಶ್ವರದ ಹತ್ತಿರ ಗೋದಾವರಿ ನದಿಯ ಮೇಲೆ ಅಣೆಕಟ್ಟು ನಿರ್ಮಾಣ ಪೂರ್ತಿಯಾಯಿತು. 1833 ರಲ್ಲಿ ತೀವ್ರ ಬರಗಾಲಕ್ಕೆ ಗುರಿಯಾದ ಈ ಜಿಲ್ಲೆಗಳಲ್ಲಿ ಈ ಅಣೆಕಟ್ಟಿನಿಂದ ಸಂಪತ್ತು ಹೆಚ್ಚಾಯಿತು. ಅದೇ ವಿಧವಾಗಿ ವಿಜಯವಾಡದ ಹತ್ತಿರ ಕೃಷ್ಣಾ ನದಿಯ ಮೇಲೆ 1854ರಲ್ಲಿ ಅಣೆಕಟ್ಟು ಕಟ್ಟಿದ್ದಾರೆ. ಇದರಿಂದ ಡೆಲ್ಟಾ ಪ್ರಾಂತಗಳು ಸಂಪತ್ತಿನಿಂದ ಕೂಡಿವೆ. ರಾಯಲಸೀಮೆ ಯಲ್ಲಿಯ ಬಯಲು ಭೂಮಿಗಳಿಗೆ ನೀರು ಒದಗಿಸುವುದಕ್ಕೆ 1857 ರ ನಂತರ ಕರ್ನೂಲು –ಕಡಪ (ಕೆಸಿ) ಕಾಲಿವೆಯನ್ನು ನಿರ್ಮಿಸಿ ದರು. ಈ ಕ್ರಮಗಳು ಹೇಳಿಕೊಳ್ಳಿವಂತಹವು. ಆದಾಗ್ಯೂ ಅವುಗಳಿಂದ ಕೆಲವು ಪ್ರಾಂತಗಳು ಮಾತ್ರವೇ ಲಾಭ ಪಡೆದವು. ದೇಶದಲ್ಲಿಯ ಹೆಚ್ಚು ಶೇಕಡ ಭೂಮಿ ಇನ್ನೂ ಮಳೆಯ ಮೇಲೆ ಆಧಾರಪಟ್ಟಿವೆ.ಸಣ್ಣ ಕೆರೆಗಳು ಬಾವಿಗಳಂತಹ ನೀರಾವರಿ ಯೋಜನೆಗಳಲ್ಲಿ ಜಮೀನುದಾರರು, ಧನಿಕ ರೈತರು ಬಂಡವಾಳ ಹಾಕುತ್ತಾರೆಂಬ ಆಸೆಗಳು ನೆರವೇರಲಿಲ್ಲ.

- ಶಾಶ್ವತ ಸ್ಥಿರೀಕರಣವನ್ನು ಪ್ರವೇಶ ಗೊಳಿಸಿದಾಗ ಹೆಚ್ಚಾಗಿ ಭೂ ಸರ್ವೇ ಮಾಡಲಿಲ್ಲ, ರೈತ್ವಾರಿ ಸ್ಥಿರೀಕರಣ ಸಮಯದಲ್ಲಿ ಇದು ಏತಕ್ಕಾಗಿ ಅವಸರವಾಯಿತೆಂದು ನೀನು ಭಾವಿಸುತ್ತಿ ರುವೆಯಾ?
- ರೈತ್ವಾರಿ ಸ್ಥಿರೀಕರಣವನ್ನು ಪ್ರವೇಶಗೊಳಿಸುವುದಕ್ಕೆ ಮೊದಲು ಪಾಳೇಗಾರರನ್ನು ಏಕೆ ಓಡಿಸಬೇಕಾಗಿ ಬಂದಿತು?
- ನೀವು ಸೀಡೆಡ್ ಜಿಲ್ಲೆಗಳಲ್ಲಿ ವಾಸಿಸುವಂತಿದ್ದರೆ ಬ್ರಿಟೀಷರಿಗೆ ವ್ಯತಿರೇಕವಾಗಿ ಹೋರಾಡಿದ ಪಾಳ್ಯೆಗಾರರ ಬಗ್ಗೆ ತಿಳಿದುಕೊಳ್ಳಿರಿ.
- ಬ್ರಿಟೀಷ್ ಆಡಳಿತ ಆರಂಬದಲ್ಲಿ ವ್ಯವಸಾಯದಲ್ಲಿ ಸರ್ಕಾರ ಯಾವ ವಿಧವಾದ ಬಂಡವಾಳಗಳು ಹಾಕಲಾಯಿತು ? ಈ ಕೆಲಸವನ್ನು ರೈತರು ಸ್ವತಃ ಮಾಡುತ್ತಿದ್ದರೇ?

- ರೈತ್ವಾರಿ ಸ್ಥಿರೀಕರಣದಿಂದ ರೈತರು, ಭೂಸ್ವಾಮಿಗಳು, ಬ್ರಿಟೀಷ್ ಆಡಳಿತಗಾರರಲ್ಲಿ ಯಾರು ಲಾಭ ಪಡೆದರು? ನಿಮ್ಮ ಉತ್ತರಕ್ಕೆ ಕಾರಣಗಳನ್ನು ಕೊಡಿರಿ.

**ಫಲಿತಾಂಶ :** ರೈತ್ವಾರಿ ಪ್ರಾಂತಗಳಲಿ ಕೂಡಾ ಭೂಮಿ ತೆರಿಗೆಯನ್ನು ಬಹಳ ಹೆಚ್ಚಾಗಿ ನಿರ್ಣಯಿಸಿದ್ದರು. ಜಮೀನು ದಾರಿ ಪ್ರಾಂತಗಳಂತೆ ಅಲ್ಲದೇ ಇದನ್ನು 20,30 ವರ್ಷಗಳಿಗೆ ಒಂದು ಸಾರಿ ನಿರ್ಣಯಿಸುತ್ತಾರೆ. ಈ ಕಾಲ ಮುಗಿದ ಮೇಲೆ ಬದಲಾದ ಪರಿಸ್ಥಿತಿಗಳನ್ನು ದೃಷ್ಟಿಯಲಿಟ್ಟುಕೊಂಡು, ತೆರಿಗೆಯನ್ನು ಮರಳಿ ನಿರ್ಣಯಿಸುತ್ತಿದ್ದರು. ಭೂಮಿ ತೆರಿಗೆ ಬಹಳ ಹೆಚ್ಚಾಗಿದ್ದು, ಮೊದಲಿಗೆ ಅದನ್ನು ಬಲವಂತವಾಗಿ ವಸೂಲಿ ಮಾಡಬೇಕಾಗುತ್ತಿತ್ತು. ಆದರೆ ಸ್ವಲ್ಪ ಕಾಲದ ನಂತರ ಭೂಮಿ ತೆರಿಗೆಗಿಂತ ಬೆಲೆಗಳು ಹೆಚ್ಚಾಗಿರುವುದರಿಂದ ರೈತರು ತಮ್ಮ ಭೂಮಿಗಳನ್ನು ಸಾಗುವಳಿ ಮಾಡುವುದಕ್ಕೆ ಗುತ್ತಿಗೆದಾರರಿಗೆ ಕೊಟ್ಟ ಅವರಿಂದ ಬೇಳೆ ವಸೂಲಿ ಮಾಡುವುದು ಸಹ ಲಾಭದಿಂದ ಕೂಡಿರುತ್ತಿತ್ತು. ಸ್ವಲ್ಪ ಕಾಲದ್ಲಲಿಯೇ ರೈತ್ವಾರಿ ಪ್ರಾಂತಗಳಲ್ಲಿ ಕೂಡಾ ಭೂಸ್ವಾಮಿಗಳು ಏರ್ಪಟ್ಟು ತಮ್ಮ ಭೂಮಿಗಳನ್ನು ನಿಸ್ಸಹಾಯಕರಾದ ಗುತ್ತಿಗೆದಾರರಿಗೆ ಹೆಚ್ಚಿನ ಮೊತ್ತದಲ್ಲಿ ಗುತ್ತಿಗೆ ಕೊಡುತ್ತಿದ್ದರು. ರೈತರು ಸರ್ಕಾರಕ್ಕೆ ಸಲ್ಲಿಸುವ ಭೂಮಿ ತೆರಿಗೆಗಿಂತ ಗುತ್ತಗೆದಾರರೂ ಮೂರರಿಂದ ಏಳು ಪಟ್ಟುಗಳು ಹೆಚ್ಚು ಕೌಲು ಸಲ್ಲಿಸುತ್ತಿದ್ದರು. (ಅಂದರೆ ರೈತ ಸ್ವಲ್ಪ ಭೂಮಿಗೆ ನೂರು ರೂಪಾಯಿಗಳು ಭೂಮಿ ತೆರಿಗೆಯಾಗಿ ಸರ್ಕಾರಕ್ಕೆ ಸಲ್ಲಿಸುತ್ತಿದ್ದರೆ ಅದೇ ಭೂಮಿಯಿಂದ ಗುತ್ತಿಗೆಯಾಗಿ 300 ದಿಂದ 700 ರೂಪಾಯಿಗಳು ಕೌಲಾಗಿ ಲಭಿಸುತ್ತಿತ್ತು.) ಫಲಿತವಾಗಿ ಅವರಿಗೆ ಕೂಡಾ ವ್ಯವಸಾಯ ವನ್ನು ಅಭಿವೃದ್ಧಿಗೊಳಿಸುವುದಕ್ಕೆ ಬಂಡವಾಳ ಹಾಕುವುದರಲ್ಲಿ ಆ ಸಕ್ತಿ ಇಲ್ಲದಂತಾಯಿತು. ಹೆಚ್ಚು ಮೊತ್ತವನ್ನು ಭೂಮಿಯನ್ನು ಗುತ್ತಿಗೆಗೆ ಕೊಡುವುದರ ಮೇಲೆಯೇ ದೃಷ್ಟಿ ಸಾರಿಸಿದರು.

- ನೀವು ಊಹಿಸಿದುದನ್ನು ವಾಸ್ತವವಾಗಿ ಜರುಗಿದುದಕ್ಕೆ ಹೋಲಿಸಿರಿ. ನಿಮ್ಮ ಊಹೆಗಳು ಎಷ್ಟರಮಟ್ಟಿಗೆ ನಿಜವಾಗಿವೆ?
- ವ್ಯವಸಾಯವನ್ನು ವಿಸ್ತರಿಸುವುದರಲ್ಲಾಗಲೀ, ಅಭಿವೃದ್ಧಿಗೊಳಿಸುವುದರಲ್ಲಾಲೀ ರೈತರು ಬಂಡವಾಳ ಏಕೆ ಹಾಕಲಿಲ್ಲ?
- ಭೂಮಿಯಿಲ್ಲದ ಗುತ್ತಿಗೆ ರೈತರುಗಳ ಸ್ಥಿತಿಗತಿಗಳನ್ನು ಹೋಲಿಸಿ ಒಂದು ಟಿಪ್ಪಣಿ ಬರೆಯಿರಿ.

## ವಾಣಿಜ್ಯೀಕರಣ, ಬಡ್ಡಿ ವ್ಯಾಪರಸ್ಥರು

ಭೂಮಿಯಿಂದ ಆದಾಯವನ್ನು ಹೆಚ್ಚಿಸ ಬೇಕೆಂಬ ಕೋರಿಕೆಯಿಂದ ಭೂಮಿ ತೆರಿಗೆ ಯನ್ನು ರೆವನ್ಯೂ ಅಧಿ ಕಾರಿಗಳು ಗಣನೀಯವಾಗಿ ಹೆಚ್ಚಿಸಿದರು. ಆ ತೆರಿಗೆಗಳನ್ನು ರೈತರು ಸಲ್ಲಿಸಲಾಗದೇ ಊರು ಬಿಟ್ಟು ಓಡಿಹೋಗ ತೊಡಗಿದರು. ಆ ವಿಧವಾಗಿ ಅನೇಕ ಪ್ರಾಂತಗಳಲ್ಲಿ ಊರು ನಿರ್ಮಾನುಷ್ಯವಾಗಿ ಬದಲಾದವು. ಹೊಸ ವಿಧಾನದಿಂದ ರೈತರು ಧನಿಕ ಭೂಸ್ವಾಮಿಗಳಾಗಿ ಬದಲಾಗುತ್ತಾರೆಂದು ಅಧಿ ಕಾರಿಗಳು ಬಾವಿಸಿದ್ದರು. ಆದರೆ ಹೆಚ್ಚಿನ ಭೂಮಿ ತೆರಿಗೆಯಿಂದ ಇದು ನಡೆಯಲಿಲ್ಲ.

ತೆರಿಗೆ, ಕಟ್ಟುವುದಕ್ಕೆ ರೈತರು ಬಡ್ಡಿ ವ್ಯಾಪಾರಸ್ಥರಿಂದ ಹಲವು ಸಾರಿ ಸಾಲ ಮಾಡಬೇಕಾಗಿ ಬಂದಿತು. ಆದರೆ, ಅವರು ಸಕಾಲದಲ್ಲಿ ಸಾಲಗಳು ಸಲ್ಲಿಸದಿದ್ದರೆ ಬಡ್ಡಿ ವ್ಯಾಪಾರಸ್ಥರು ನ್ಯಾಯಾಲಯಕ್ಕೆ ಹೋಗಿ ಭೂಮಿಯನ್ನು ಹರಾಜು ಹಾಕಿಸಿ ತಮ್ಮ ಸಾಲವನ್ನು ವಸೂಲಿ ಮಾಡಿಕೊಳ್ಳುತ್ತಿದ್ದರು. ತೆರಿಗೆ ವಸೂಲಿಗೆ ಬ್ರಿಟೀಷ್ ಸರ್ಕಾರ ಪ್ರವೇಶಗೊಳಿಸಿದ ಹೋಸ ವಿಧಾನದಿಂದ ಅನೇಕ ಮಂದಿ ರೈತರು ಸಾಲದ ಮಡುವಿನಲ್ಲಿ ಮುಳುಗಿ ಹೋದರು.

ರೈತರ ಸಾಲಗಳು ಹೆಚ್ಚಾಗುವುದಕ್ಕೆ ಮತ್ತೊಂದು ಕಾರಣ ಕೂಡಾ ಇದೆ. ವ್ಯವಸಾಯ ಉತ್ಪತ್ತಿಗಳು ರಪ್ಪು ಮಾಡುವು ದರಿಂದ ಅವುಗಳ ಬೆಲೆಗಳು ಅಂತರ್ಜಾತೀಯ ಮಾರುಕಟ್ಟೆ ಯಲ್ಲಿ ನಿರ್ಣಯಿಸಲ್ಪಡುತ್ತಿದ್ದವು. ಉದಾಹರಣೆಗೆ 1861ರಲ್ಲಿ ಅಮೇರಿಕಾದಲ್ಲಿ ಅಂತರ್ ಯುದ್ಧದಿಂದ ಹತ್ತಿ ಸರ ಸರಬರಾಜಿಗಾಗಿ ಬ್ರಿಟೀಷ್ ಕಾರ್ಖಾನೆಗಳು ಭಾರತ ದೇಶದ ಮೇಲೆ ಆಧಾರಪಟ್ಟಿವೆ, ಅದರಿಂದ ಬೆಲೆಗಳು ಗಣ ನೀಯವಾಗಿ ಹೆಚ್ಚಾದವು. 1865ರಲ್ಲಿ ಅಮೇರಿಕಾದಲ್ಲಿ ಅಂತರ್ ಯುದ್ಧ ಮುಕ್ತಾಯಗೊಂಡದ್ದರಿಂದ ಭಾರತದ ಹತ್ತಿಗೆ ಗಿರಾಕಿ ಕಡಿಮೆಯಾಗಿ ಅದರ ಬೆಲೆಗಳು ಕಡಿಮೆಯಾದವು. 1864 ರಲ್ಲಿ ಕಿಲೋಗೆ 12 ಅಣೆಗಳ ಬೆಲೆ ಇರಲಾಗಿ ಈಗ ಅದು 6 ಅಣೆಗಳಿಗೆ ಕಡಿಮೆಯಾಗಿದೆ. ತೆಗೆದುಕೊಂಡ ಸಾಲಗಳು ತಿರಿಗಿ ಕಟ್ಟಲಾಗದೇ ರೈತರು ಬಹಳ ಕಷ್ಟಕ್ಕೆ ಗುರಿಯಾದರು. ತಮ್ಮ ಅಧೀನಕ್ಕೆ ಬರುವ ರೈತರ ಸಂಖ್ಯೆ



SCERT TELANGANA

ಹೆಚ್ಚಾಗುವುದರಿಂದ ಬಡ್ಡಿ ವ್ಯಾಪಾರಸ್ತರ ಸಂಪತ್ತು ಕೂಡಾ ಹೆಚಾಗುತ್ತಾ ಬಂದೀತು. ಹತ್ತಿ ಬೆಳೆಯಿಂದ ಹೆಚ್ಚು ಲಾಭ ಪಡೆದು ಸಂಪಾದಿಸಬೇಕೆಂದು ಕೊಂಡಿದ್ದ ಗಂಜಾಂ ರೈತರು ಇದ್ದಕ್ಕಿದ್ದ ಹಾಗೆ ಬಿಕಾರಿಗಳಾದರು. ಅಷ್ಟೆ ಅಲ್ಲದೇ ಅದಕ್ಕೆ ಮೊದಲು ಭತ್ತ ಬೆಳೆಸುವ ಹೊಲಗಳಲ್ಲಿ ಹತ್ತಿ ಸಾಗುವಳಿ ಮಾಡಿದುದರಿಂದ ಅಕ್ಕಿಗೆ ಕೊರತೆ ಏರ್ಪಟ್ಟಿತು. ಇದರಿಂದ ಎಲ್ಲ ವರ್ಗಗಳ ಪ್ರಜೆಗಳು ಪ್ರಭಾವಿತರಾದರು. ಗಂಜಾಂ ಬರವಾಗಿ ಹೇಳಿಕೊಳ್ಳುವ ಆ ಬರದಿಂದ ಅನೇಕ ಮಂದಿ ಹಸಿವೆಯಿಂದ ಸತ್ತುಹೊದರು. ಅನೇಕ ಮಂದಿ ಮಾರಿಷಸ್, ಫಿಜಿ, ಇತರ ದೂರ ಪ್ರಾಂತಗಳಿಗೆ ಕೂಲಿಗಾಳಾಗಿ ವಲಸೆ ಹೋದರು.

ತೋಟಗಳನ್ನು ಬೆಳೆಸಲು ವಿದೇಶಗಳಿಗೆ ಬಲವಂತವಾಗಿ ಹೋದ ಕಾರ್ಮಿಕರನ್ನು ಒಪ್ಪಂದ ಕಾರ್ಮಿಕರೆನ್ನುತ್ತಾರೆ.

- ಅಧಿಕ ತೆರಿಗೆ ಧರದಿಂದ ಭೂಸ್ವಾಮಿಗಳು ರೈತರು ವ್ಯವಾಯವನ್ನು ಅಭಿವೃದ್ಧಿಗೊಳಿಸುವ ಕೆಲಸಗಳನ್ನು ಏಕೆ ಕೈಗೊಳ್ಳಲಿಲ್ಲ?
- ಭೂಮಿ ತೆರಿಗೆಯಿಂದ ರೈತರ ಭೂಮಿಗಳು ಯಾವ ವಿಧವಾಗಿ ಬಡ್ಡೀ ವ್ಯಾಪಾರಸ್ತರ ವಶವಾದವು? ಬಡ್ಡೀ ವ್ಯಾಪಾರಸ್ತರು ಭೂಮಿಯಿಂದ ಏನು ಮಾಡಿದರು?
- ರಪ್ತಿಗಾಗಿ ಉತ್ಪತ್ತಿ ಮಾಡಿದುದರಿಂದ ಅಂತಿಮವಾಗಿ ಯಾರು ಲಾಭಗಳಿಸಿದರು? ಅವರು ಯಾವ ವಿಧವಾಗಿ ಲಾಭಗಳಿಸಿದರು?
- ಅಮೇರಿಕಾದ ಯುದ್ದದಿಂದ ಭಾರತದೇಶದಲ್ಲಿ ಹತ್ತಿ ಬೆಲೆಗಳು ಏಕೆ ಹೆಚ್ಚಾಯಿತು?
- ಈಗಿನ ಕಾಲದಲ್ಲಿ ವ್ಯವಸಾಯ ಉತ್ಪತ್ತಿಗಳ ಬೆಲೆಗಳು ವೇಗವಾಗಿ ಹೆಚ್ಚಾಗಿ, ಕಡಿಮೆಯಾದ ಸಂಧರ್ಭವನ್ನು ಕುರೀತು ಕೇಳಿದ್ದೀರಾ? ಅದರ ಪ್ರಭಾವ ರೈತರ ಮೇಲೆ ಹೇಗೆ ಇರುತ್ತದೆ?

## ರೈತರನ್ನು ದೋಚಿಕೊಂಡ ಜಮೀನುದಾರರು

ವಸಾಹತು ಆಡಳಿತದಲ್ಲಿ ಭೂಸ್ವಾಮಿಗಳು ಸ್ವಂತ ಭೂಮಿಗಳಲ್ಲಿ ರೈತರಿಂದ ಬಲವಂತವಾಗಿ, ಹಣ ಕೊಡದಂತೆ ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಇದನ್ನೇ ಪುಕ್ಕಟೆ ಸೇವೆ ಎಂದು ಕರೆಯುವರು. ಒಂದು ವೇಳೆ ಯಾರಾದರೂ ಅದಕ್ಕೆ ನಿರಾಕರಿಸಿದರೆ ಸೈನಿಕರಿಂದ ಬಲ ಪ್ರಯೋಗ ಮಾಡುತ್ತಿದ್ದರು. ರಸ್ತೆಯ ಮೇಲೆ ಹೋಗುತ್ತಿರುವವರನ್ನು ಕೂಡಾ ಸೈನಿಕರು ಹಿಡಿದುಕೊಂಡು ಬಂದು ಜಮೀನುದಾರರ ಭೂಮಿಗಳಲ್ಲಿ ಪುಕ್ಕಟೆ ಕೆಲಸ ಮಾಡಿಸಿಕೊಳ್ಳುತ್ತಿದ್ದರು.

ಈ ವಿಧವಾಗಿ ಜಮೀನುದಾರರು ಭೂಮಿಗಳಲ್ಲಿ ಕೆಲಸ ಮಾಡಬೇಕಾಗಿದುದರಿಂದ ರೈತರು ತಮ್ಮ ಸ್ವಂತ ಭೂಮಿಗಳಲ್ಲಿ ಸರಿಯಾಗಿ ಕೆಲಸ ಮಾಡದೇ ಹೋದರು. ತಮ್ಮ ಭೂಮಿಗಳನ್ನು ಅಭಿವೃದ್ಧಿ ಮಾಡಿಕೊಳ್ಳಲಿಲ್ಲ. 1878ರಲ್ಲಿ ಪ್ರಕಟಿಸಿದ ಒಂದು ಸರ್ಕಾರ ನಿವೇದನೆ ಆಧಾರವಾಗಿ ಅವರ ದೀನ ಪರಿಸ್ಥಿತಿ ತಿಳಿಯುತ್ತದೆ. ರೈತರು ತಮ್ಮ ಭೂಮಿಗಳಲಿ ಬಾವಿಗಳನ್ನು ತೋಡಿಸುವುದಿಲ್ಲ, ಅವುಗಳಿಗೆ ನೀರು ಒದಗಿಸಲಾರರು, ಚರಂಡಿಗಳನ್ನು ತೆಗೆಯುವುದಿಲ್ಲ, ಗೊಬ್ಬರಗಳನ್ನು ಹಾಕುವುದಿಲ್ಲ ಎಂದು ನಿವೇದನೆಯಲ್ಲಿ ತಿಳಿಸಲಾಗಿದೆ. ಯಾವ ಕ್ಷಣದಲ್ಲಿ ತಮ್ಮ ಭೂಮಿಯಿಂದ ಹೊಡೆದೋಡಿಸುತ್ತಾರೋ ಎಂಬ ಭಯದಿಂದ ತಮ್ಮ ಭೂಮಿಗಳನ್ನು ಅಭಿವೃದ್ಧಿಗೊಳಿಸುವ ಕೆಲಸ ಅವರು ಮಾಡಲಿಲ್ಲ. ಅವರು ತಮ್ಮ ಭೂಮಿಯನ್ನು ಅಭಿವೃದ್ಧಿಗೊಳಿಸಿದ ಮರುಕ್ಷಣವೆ ಅವರಿಂದ ತೆಗೆದುಕೊಳ್ಳುವ ಗುತ್ತಿಗೆಯನ್ನು ಜಮೀನುದಾರನು ಬೇಗನೇ ಹೆಚ್ಚಿಸುತ್ತಿದ್ದನು. ಅಷ್ಟೇ ಅಲ್ಲದೇ ರೈತರು ತಮ್ಮ ಭೂಮಿಗಳನ್ನು ಚೆನ್ನಾಗಿ ಮಾಡಿಕೊಂಡರೆ ತಮ್ಮ ಹಕ್ಕಗಳಿಗಾಗಿ ಹೋರಾಡುತ್ತಾರೆಂಬ ಭಯದಿಂದ ಕೂಡಾ ಆ ಕೆಲಸಗಳನ್ನು ಮಾಡದಂತೆ ಜಮೀನುದಾರರು ತಡೆಯುತ್ತಿದ್ದರು.

## ಮಿತಿ ಇಲ್ಲದ ವಸೂಲಿ, ತೆರಿಗೆಗಳು, ಕಟ್ಟುವುದು

ಅನೇಕ ವಿಧವಾದ ಕಾರಣಗಳಿಂದ ಸಾಧ್ಯವಾದಷ್ಟು ಹಣ ವಸೂಲಿ ಮಾಡಿಕೊಳ್ಳುವುದಕ್ಕೆ ಜಮೀಂದಾರರು ಪ್ರಯತ್ನಿಸಿದರು. ಜಮೀನುದಾರರ ಮನೆಗೆ ತುಪ್ಪ, ಹಾಲು, ತರಕಾರಿಗಳು, ಬೆಲ್ಲ, ಹುಲ್ಲು, ಕುಳ್ಳಂತಹವುಗಳನ್ನು ರೈತರು ಉಚಿತವಾಗಿ ಪ್ರತಿದಿನವೂ ಕಳುಹಿಸಬೇಕು. ಭಾರತ ದೇಶದಲ್ಲಿಯ ಅನೇಕ ರಾಜ್ಯಗಳಲ್ಲಿ, ಇದೇ ಪರಿಸ್ಥಿತಿ ಇದ್ದಿತು. ಬೆಂಗಾಲ್, ಬಿಹಾರ್, ಉತ್ತರ ಪ್ರದೇಶಗಳಲ್ಲಿ ದೊಡ್ಡ ದೊಡ್ಡ ಭೂಸ್ವಾಮಿಗಳು ಬಹಳ ಮಂದಿ ಇದ್ದರು. ಒಬ್ಬೊಬ್ಬರ ಕೈ ಕೆಳಗೆ ಡಜನ್ ಅಥವಾ ನೂರಾರು ಗ್ರಾಮಗಳು ಇದ್ದವು. ಜಮೀನುದಾರರು ದಬ್ಬಾಳಿಕೆಯನ್ನು ಪ್ರತಿಭಟಿಸಲು ರೈತರು ಪ್ರಯತ್ನಿಸುತ್ತಿದ್ದರು.

## ಹೈದರಾಬಾದ್ ರಾಜ್ಯದಲ್ಲಿ ದೊರೆಗಳು, ರೈತರು

ನಿಜಾಂ ಆಡಳಿತದಲ್ಲಿ ಹೈದರಾಬಾದು ರಾಜ್ಯದಲ್ಲಿ ಜಾಗೀರ್‌ದಾರರು, ಸಂಸ್ಥಾನಗಳು, ಇನಾಂದಾರರಂತಹ

SCERT TELANGANA

ಮಧ್ಯಮವರ್ಗ ಆಡಳಿತಗಾರರು ಬಹಳ ಮಂದಿ ಇದರು. ಇವರ ಕೆಳಗೆ ಇರುವ ಪ್ರಾಂತಳಿಗೆ ಇವರೇ ಸ್ವತಂತ್ರ ಅಧಿಕಾರಿಗಳು, ಇವರು ಭೂಮಿ ತೆರಿಗೆ ವಸೂಲಿ ಮಾಡಿ ಅದರಲ್ಲಿಂದ ಸ್ವಲ್ಪ ಮೊತ್ತವನ್ನು "ಪೇಷ್‌ಕಷ್" ಆಗಿ ನಿಜಾಮರಿಗೆ ಸಲ್ಲಿಸಿ ಉಳಿದ ಮೊತ್ತವನ್ನು ತಾವು ಇಟ್ಟುಕೊಳ್ಳುತ್ತಿದ್ದರು. ತಮ್ಮ ಪ್ರಾಂತಗಳ ಆಡಳಿತಕ್ಕೆ ಅವರೇ ಭಾದ್ಯತೆ ವಹಿಸುತ್ತಿದ್ದರು. ಹೈದರಾಬಾದು ರಾಜ್ಯದಲ್ಲಿ 6535 ಗ್ರಾಮಗಳಿಂದಲೂ 1500 ಜಾಗೀರುದಾರರು, 497 ಗ್ರಾಮಗಳಿಂದ 14 ಸಂಸ್ಥಾನಗಳು ಇದ್ದವು. ನಿಜಾಂ ಸ್ವಂತ ಜಾಗೀರು ಕೆಳಗೆ (ಇದನ್ನು ಸರ್ಫ್-ಎ-ಖಾಸ್ ಎನ್ನವರು) 1400 ಗ್ರಾಮಗಳು ಇದ್ದವು. ಉಳಿದ ಪ್ರಾಂತಗಳಲ್ಲಿ ಆಡಳಿತ ಈ ಕೆಳಗಿನ ವಿಧವಾಗಿ ಸಾಗುತ್ತಿತ್ತು.

ಹೈದರಾಬಾದನ್ನು ಆಳಿದ ನಿಜಾಮರು ಬ್ರಿಟೀಷ್‌ರವರ ನಿಯಂತ್ರಣದಲ್ಲಿ ಇರುವುದರಿಂದ ಅವರ ವಿಧಾನಗಳನ್ನು ಅನುಸಬೇಕಾಯಿತು. 19ನೇ ಶತಮಾನದ ಮೊದಲನೇ ಅರ್ಧದಲ್ಲಿ ದೇಶಮುಖ್‌ಗಳ ಮೂಲಕ ಸಾಧ್ಯವಾದಷ್ಟು ಹೆಚ್ಚು ಭೂಮಿ ತೆರಿಗೆಯನ್ನು ವಸೂಲಿ ಮಾಡುವುದಕ್ಕೆ ಪ್ರಯತ್ನಿಸಿದರು. ಇದರಿಂದ ವ್ಯವಸಾಯ ಕುಂಟ್ ಬಿದ್ದಿತು. ರೈತರು ಭೂಮಿ ಬಿಟ್ಟು ಓಡಿ ಹೋದರು. ಈ ಪರಿಸ್ಥಿತಿಯನ್ನು ದೃಷ್ಠಿಯಲ್ಲಿಟ್ಟುಕೊಂಡು ನಿಜಾಂ ಸರ್ಕಾರ ಭೂಮಿ ತೆರಿಗೆ ವಸೂಲಿಗೆ ಹೊಸ ವಿಧಾನವನ್ನು ಪ್ರವೇಶಗೊಳಿಸಿತು. ಇದರ ಕೆಳಗೆ ಜಿಲ್ಲೆಗಳಲ್ಲಿ ನಿಯಮಿತರಾದ ಅಧಿಕಾರಿಗಳ ಮೂಲಕ ನೇರವಾಗಿ ತೆರಿಗೆ ವಸೂಲಿ ಮಾಡತೊಡಗಿದರು. "ರೂಸಂ" ಎಂಬ ವಾರ್ಷಿಕ ಮೊತ್ತವನ್ನು ಕೊಡುತ್ತಿದ್ದರು. ಅವರ ಭೂಮಿಗಳಿಗೆ ಸುತ್ತಲೂ ಇರುವ ಬಂಜರು, ಅಡವಿ ಭೂಮಿಗಳಿಗೆ ಪೂರ್ತಿ ಹಕ್ಕು ಗಳಿಂದ ಪಟ್ಟಗಳನ್ನು ಕೊಟ್ಟರು. ಔಡಲ, ಶೇಂಗಾ ದಂತಹ ಬೆಳೆಗಳಿಗೆ ಹೆಚ್ಚಾಗಿ ರಫ್ತು ಮಾಡಲೂ ಮಾರುಕಟ್ಟೆ ಇದೆ ಎಂದು ಭೂಸ್ವಾಮಿಗಳು ಈ ಬೆಳೆಗಳನ್ನು ಬೆಳೆಸಲು ಮತ್ತಷ್ಟು ಬಂಜರು ಭೂಮಿಗಳನ್ನು ಸಾಗುವಳಿಯಲ್ಲಿ ತಂದರು. ಆದರೆ ಈ ಭೂಮಿಗಳ ಮೇಲೆ ಕೆಲಸ ಯಾರು ಮಾಡಬೇಕು? ಭೂಸ್ವಾಮಿಗಳು ಪುಕ್ಕಟೆ ಸೇವೆಯನ್ನು ಹೆಚ್ಚಿಸಿ ತಮ್ಮ ಭೂಮಿಗಳ ಮೇಲೆ ಮಾಮೂಲು ರೈತರು, ಕೈಕೆಲಸದವರು, ಸೇವೆಗಳನ್ನು ಮಾಡುವ ಕುಲದವರು ಸಂಬಳವಿಲ್ಲದಂತೆ ಕೆಲಸ ಮಾಡುವಂತೆ ಬಲವಂತ ಮಾಡಿದರು. ಈ ದೊಡ್ಡ ದೊಡ್ಡ ಭೂಸ್ವಾಮಿಗಳನ್ನು ದೊರೆಗಳೆಂದು ಕರೆಯುತ್ತಿದ್ದರು. ಇವರು 'ಗಡೀ 'ಗಳನ್ನು ಕೋಟೆಯಂತಹ ದೊಡ್ಡ ದೊಡ್ಡ ಮನೆಗಳಲ್ಲಿ, ಹೆಚ್ಚಿನ ಸಂಖ್ಯೆಯಲ್ಲಿ ಸೇವಕರು, ಸೈನಿಕರುಗಳೊಂದಿಗೆ ಇರುತ್ತಿದ್ದರು. ಅವರ ಕೆಳಗೆ ಗುತ್ತಿಗೆದಾರರು ಸಾಗುವಳಿ ಮಾಡುವ ಭೂಮಿಗಳು, ಒತ್ತಾಯ ಪೂರ್ವಕ ಸೇವೆಯಿಂದ ನೇರವಾಗಿ ಸಾಗುವಳಿ ಮಾಡುವ ಭೂಮಿಗಳು ಹೆಚ್ಚಾಗಿದ್ದವು. ಗ್ರಾಮಗಳಲ್ಲಿ ಬಡ್ಡೀ ವ್ಯಾಪಾರಸ್ಥರು ಕೂಡಾ ಇವರೇ, ಇಡೀ ಗ್ರಾಮದ ಮೇಲೆ ತೀರ್ಪು ಕೊಡುವ ಹಕ್ಕು ಇವರಿಗಿತ್ತು. ಗ್ರಾಮದಲ್ಲಿಯ ಜಗಳಗಳನ್ನು ಇವರೇ ಪರಿಷ್ಕರಿಸುತ್ತಿದ್ದರು. ಇಂತಹ ಸಂದರ್ಭಗಳಲ್ಲಿ ಮೇಲಿನ ಕುಲದವರ ಕಡೆಗೆ ಪಕ್ಷಪಾತವನ್ನು ತೋರಿಸುತ್ತಿದ್ದರು. ಪಟ್ವಾರೀಗಳಂತಹ ಇತರ ಗ್ರಾಮ ಸ್ಥಾಯಿ ಅಧಿಕಾರಿಗಳು, ಇತರ ಸಣ್ಣ ಭೂಸ್ವಾಮಿಗಳು ಸಹಾ ಅವರ ಆಜ್ಞೆಗಳನ್ನು ಪಾಲಿಸ ಬೇಕಾದದ್ದೇ ಕಡಿಮೆ ಕುಲದ ಶ್ರಾಮಿಕರಿಗೆ ದೊಡ್ಡ ಕುಲದವರಿಗೆ, ಪ್ರತ್ಯೇಕವಾಗಿ ಭೂಸ್ವಾಮಿಗಳಿಗೆ ಉಚಿತವಾಗಿ ಕೆಲಸ ಮಾಡುವಂತೆ ನೋಡಿಕೊಳ್ಳುತ್ತಿದ್ದರು. ಸಣ್ಣ ಜಾತಿಯವರು ಬಟ್ಟೆ ತೊಡಬಾರದು.ತಲೆಗೆ ರುಮಾಲು ಸುತ್ತಿಕೊಳ್ಳಬಾರದು, ಚಪ್ಪಲಿ ಹಾಕಬಾರದು ಎನ್ನುವ ನಿಯಮಗಳನ್ನು ಜಾರಿಗೆ ತಂದಿದ್ದರು. ದೊರೆಗಳ ಮುಂದೆ ಇವರು ಬಗ್ಗಿ ನಿಲ್ಲಬೇಕು, ದೊರೆ ಎಂದು ಸಂಭೋಧಿಸಬೇಕು.

ತೆಲಂಗಾಣ ಪ್ರಾಂತದಲ್ಲಿ ಮೆಹಬೂಬ್ ನಗರ್, ನಲ್ಗೊಂಡಾ ಜಿಲ್ಲೆಗಳಲ್ಲಿ ಸಾವಿರ ಎಕರೆ ಭೂಮಿ ಗಳಿರುವ ದೊರೆಗಳು 550 ಮಂದಿ ಇದ್ದಾರೆ. ವಿಸ್ನೂರು ರಾಮಚಂದ್ರಾರೆಡ್ಡಿ, ಜನ್ನಾರೆಡ್ಡಿ, ಪ್ರತಾಪರೆಡ್ಡಿಯಂತಹ ಲಕ್ಷ ಎಕರೆಗಳಿರುವ ಭೂಸ್ವಾಮಿಗಳು ಇದ್ದರು.

- ರೈತರು ತಮ್ಮ ಭೂಮಿಗಳ ಮೇಲೆ ಬಂಡವಾಳ ಹೂಡಲಿ ಏಕೆ ಆಸಕ್ತಿ ತೋರಿಸಲಿಲ್ಲ?
- ಗುತ್ತಿಗೆದಾರರು ಉತ್ಪತ್ತಿಗಳನ್ನು ಜಮಿನ್‌ದಾರರಿಗೆ ಯಾವ ಯಾವ ರೂಪಗಳಲ್ಲಿ ತೆಗೆದುಕೊಳ್ಳುತ್ತಿದ್ದರು?
- ಗ್ರಾಮದ ಕಲಾಕಾರರು, ಸಾಂಪ್ರದಾಯ ಕೈಕೆಲಸದವರ ಜೀವನದಲ್ಲಿ ಬರುತ್ತಿರುವ ಬದಲಾವಣೆಗಳನ್ನು ಚರ್ಚಿಸಿರಿ.



SCERT TELANGANA

- ನಿಜಾಂ ರಾಜ್ಯದಲ್ಲಿ ತೆರಿಗೆ ವಸೂಲಿ ಮಾಡುವವರ ಪರಿಸ್ಥಿತಿ ಹೇಗೆ ಬದಲಾಗುತ್ತಾ ಬಂದಿತು?
- ಎಲ್ಲಾ ವಿಧವಾದ ಶೋಷಣೆಗಳಲ್ಲಿ ರೈತರ ಬಿಟ್ಟಿ ಚಾಕಿರಿಯನ್ನು ತೀವ್ರವಾಗಿ ದ್ವೇಷಿಸುತ್ತಿದ್ದರು. ಕಾರಣಗಳು ತಿಳಿಸಿರಿ.
- ದೊರೆಗೂ, ಮಾಮೂಲಿ ಭೂಸ್ವಾಮಿಗೆ ಇರುವ ವ್ಯತ್ಯಾಸವೇನು?

## ಬರಗಾಲ :

ಬ್ರಿಟೀಷ್ ಪರಿಪಾಲನೆಯಲ್ಲಿ ಬರಗಾಲಗಳು, ತೀವ್ರ ಆಹಾರ ಕೊರತೆಗಳಿಂದ ಯಾವಾಗಲೂ ಸಂಕ್ಷೋಭಗಳು ಬರುತ್ತಿದ್ದವು. ಹೆಚ್ಚಿನ ತೆರಿಗೆಗಳು, ಗುತ್ತಿಗೆದಾರರಿಂದಾಗಲೀ ಬೆಳೆಗಳು ಬೆಳೆಯದಿದ್ದಾಗ್ಗಲೀ ಏರ್ಪಡುವ ಕಷ್ಟಪರಿಸ್ಥಿತಿಗಳನ್ನು ಎದುರಿಸುವುದಕ್ಕೆ ರೈತರ ಹತ್ತಿರ ಬೇಕಾಗುವಷ್ಟು ಯಾವ ವಿಧವಾದ ಸಂಗ್ರಹಣೆಗಳು ಇರಲಿಲ್ಲ. ಮತ್ತೊಂದು ಕಡೆ ಆಹಾರಧಾನ್ಯಗಳು ಇತರ ದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಆಹಾರ ಧಾನ್ಯಗಳನ್ನು ಅಕ್ರಮವಾಗಿ ಸಂಗ್ರಹಿಸಿ ವ್ಯಾಪಾರಸ್ತರು ಕೃತ್ರಿಮ ಕೊರತೆಯನ್ನು ಸೃಷ್ಟಿಸಿದಾಗ ಕೂಡಾ ಸರ್ಕಾರ ಯಾವುದೇ ವಿಧವಾದ ಸಹಾಯ ಮಾಡಲು ನಿರಾಕರಿಸಿತು.

ಉಳಿದ ಪ್ರಾಂತಗಳಂತೆ 19,20ನೇ ಶತಮಾನದಲ್ಲಿ ಆಂಧ್ರಪ್ರಾಂತ ತೀವ್ರ ಬರಗಾಲದಿಂದ ತೀವ್ರ ಕಷ್ಟಕ್ಕೆ ಗುರಿಯಾಯಿತು. ಎಲ್ಲವು ಗಳಿಗಿಂತ ತ್ರಿವ್ರ ಬರಗಾಲ 1865-66ರಲ್ಲಿ ಗಂಜಾಂದಲ್ಲಿ ಸಂಭವಿಸಿತು. ಇದರ ಬಗ್ಗೆ ಇದಕ್ಕೆ ಮೊದಲೇ ನೀವು ಓದಿದ್ದೀರಿ. ಸಾಗುವಳಿಗೆ ನೀರಿನ ಸೌಕರ್ಯಗಳಿಲ್ಲದ ರಾಯಲಸೀಮ ಪ್ರಾಂತದಲ್ಲಿ ಬರಗಾಲಗಳು ಆಗಾಗ ಸಂಭವಿಸುತ್ತಿದ್ದವು. 19ನೇ ಶತಮಾನದ ದ್ವಿತಿಯಾರ್ಧದಲ್ಲಿ 11 ಬರಗಾಲಗಳು ಬಂದವು. ಇವುಗಳಿಂದ ಸಾವಿರಾರು ಮಂದಿ ಜನರು ಸತ್ತು ಹೋದರು. ಆಂಧ್ರ ಜಿಲ್ಲೆಗ್ಳ ಅನೇಕ ಸ್ಥಳಗಳಲಿ ಪ್ರಜೆಗಳು ಆಹಾರ ಲೂಟಿ ಮಾಡಿದರು. ಈ ದೌರ್ಜನ್ಯಗಳನ್ನು ತಡೆಗಟ್ಟಲು ಸೈನಿಕರನ್ನು ಕರೆಸಲಾಯಿತು.

## ರೈತರ ಚಳುವಳಿಗಳು ( ಉದ್ಯಮಗಳು)

ಹೆಚ್ಚಿನ ಭೂಮಿ ತೆರಿಗೆಗಳು, ಭೂಸ್ವಾಮಿಗಳು, ಬಡ್ಡಿ ವ್ಯಾಪಾರಸ್ಥರ ದರೋಡೆಗಳ ಕಾರಣಗಳಿಂದಾಗಿ ರೈತಾಂಗವು ತೀವ್ರ ಕಷ್ಟಕ್ಕೆ ಗುರಿಯಾಯಿತೆಂದು ಮೇಲೆ ನೋಡಿದ್ದೇವೆ. ವಸಾಹತು, ಪಾಲನೆಯಲ್ಲಿ ದೇಶದಲ್ಲಿನ ವಿವಿಧ ಪ್ರಾಂತಗಳ ರೈತರು ಭೂಸ್ವಾಮಿಗಳು ವ್ಯಾಪಾರಸ್ತರು, ಅಧಿಕಾರಿಗಳಿಗೆ ವಿರುದ್ದವಾಗಿ ಹೋರಾಟ ನಡೆಸಿದರು. ಇವುಗಳಲ್ಲಿ ಮುಖ್ಯವಾದುವು 1860ರ ಡೆಕ್ಕನ್ ದಂಗೆ, ರಂಪಾ ಪಿತೂರಿಗಳು ಮೋಪ್ಲಿಲಾ ಹೋರಾಟ, ಇವು ಸಂಘಟಿತ ರೂಪವನ್ನು ಅವತರಿಸಿಕೊಂಡವು. 19ನೇ ಶತಮಾನದಲ್ಲಿ ರೈತಾಂಗದ ಚಳುವಳಿಗಳೂ ದಂಗೆ ರೂಪದಲ್ಲಿಯಾದರೆ 20ನೇ ಶತಮಾನದಲ್ಲಿ ರೈತರು ಭಾರಿ ಪ್ರಮಾಣದಲ್ಲೂ ರಾಷ್ಟ್ರೀಯ ಚಳುವಳಿ ಶ್ರೇಣಿಗಳಲ್ಲಿ ಸೇರಿದರು. 1920-22ರಲ್ಲಿಉತ್ತರ ಪ್ರದೇಶದಲ್ಲಿಯ ಅವದ್ ಪ್ರಾಂತದಲ್ಲಿ ಅಕ್ರಮವಾಗಿ ಹಣ ವಸೂಲಿ ಮಾಡುತ್ತಿದ್ದ ಜಮೀನುದಾರರಿಗೆ ವಿರುದ್ದವಾಗಿ ರೈತರು ಬಾರಿ ಪ್ರಮಾಣದಲ್ಲಿ ಪ್ರದರ್ಶನಗಳು ನಿರ್ವಹಿಸಿದರು. ಅನೇಕ ಮಂದಿ ಜಮೀನ್‌ದಾರರನ್ನು ಸಾಮಾಜಿಕ ವಾಗಿ ಬಹಿಷ್ಕರಿಸಿ ಗ್ರಾಮಗಳಿಂದ ತಳ್ಳಿದರು. ಹೆಚ್ಚು ಗುತ್ತಿಗೆ ವಸೂಲು ಮಾಡುವುದಕ್ಕೆ ಅಥವಾ ಗುತ್ತಿಗೆ ದಾರರನ್ನು ತೊಲಗಿಸುವದಕ್ಕೆ ಪ್ರಯತ್ನಿಸಿದ ಜಮೀನುದಾರರ ಭೂಮಿಗಳನ್ನು ಸಾಗುವಳಿ ಮಾಡುವುದಕ್ಕೆ ರೈತಾಂಗವು ತಿರಸ್ಕರಿಸಿತು. ತಮ್ಮ ಆಂದೋಳನವನ್ನು ಮುಂದುರರಿಸವುದಕ್ಕೆ ರೈತರು 'ಕಿಸಾನ್‌ಸಭೆ 'ಗಳಾಗಿ ಸಂಘಟಿತರಾದರು. ಭೂಸ್ವಾಮ್ಯ ವ್ಯವಸ್ಥೆ ರದ್ದು ಮಾಡಬೇಕೆಂದೂ, ಭೂಮಿ ತೆರಿಗೆ ಕಡಿಮೆ ಮಾಡಬೇಕೆಂದೂ , ಬಡ್ಡಿ ವ್ಯಾಪಾರಸ್ತರನ್ನು ನಿಯಂತ್ರಿಸಬೇಕೆಂದು ಇವರು ಸರ್ಕಾರವನ್ನು ಕೋರಿದರು. ಈ ದಂಗೆಗಳನ್ನು ಅಡಗಿಸಿ ಹಾಕುವಲ್ಲಿ ಜಮೀನುದಾರರಿಗೆ ಬ್ರಿಟೀಷ್ ಸರ್ಕಾರವು ಸಹಾಯ ಮಾಡಿತು. ನಂತರ ಅಧ್ಯಾಯದಲ್ಲಿ ನೀವು ತೆಲಂಗಾಣ ರೈತರ ಹೋರಾಟ ಕುರಿತು ಓದುತ್ತೀರಿ.

| ಮುಖ್ಯ ಪದಗಳು | | |
|---|---|---|
| 1. ಭೂಸ್ವಾಮಿಗಳು | 2. ಬಡ್ಡಿ ವ್ಯಾಪರಸ್ತರು | 3. ಜಾಗೀರುದಾರರು |
| 4. ಸಂಸ್ಥಾನಗಳು | 5. ಇನಾಂದಾರರು | 6. ಪಟ್ವಾ |
| 7. ರೈತ್ವಾರಿ | 8. ದೇಶ್‌ಮುಖ್ | |

## ನಿಮ್ಮ ಅಭ್ಯಸವನ್ನು ಅಭಿವೃದ್ಧಿಗೊಳಿಸಿಕೊಳ್ಳಿ

1. ಅಧ್ಯಾಯದಲ್ಲಿಯ ಒಂದೊಂದು ಭಾಗ ಆಧಾರವಾಗಿ ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ತಯಾರು ಮಾಡಿ ಒಬ್ಬರಿಗೊಬ್ಬರು ಕೇಳಿಕೊಳ್ಳಿ. ಉತ್ತರಗಳು ಸರಿಯಾಗಿವೆಯೇ ನೋಡಿರಿ.
2. ಸ್ವಾತಂತ್ರ್ಯಕ್ಕೆ ಮೊದಲು ಗುತ್ತಿಗೆರೈತರ ಪರಿಸ್ಥಿತಿಯನ್ನು ಇಂದಿನ ರೈತರೊಂದಿಗೆ ಹೋಲಿಸಿರಿ. ಯಾವ ಯಾವ ವ್ಯತ್ಯಾಸಗಳು ಹೋಲಿಕೆಗಳು ಇವೆ?
3. ಸ್ವಾತಂತ್ರ್ಯ ಚಳುವಳಿ ಸಮಯದಲ್ಲಿ ಜಮೀನುದಾರರು ಸಾಧಾರಣವಾಗಿ ಬ್ರಿಟೀಷ್ ಸರ್ಕಾರಕ್ಕೆ ಬೆಂಬಲ ಕೊಟ್ಟರು. ಕಾರಣಗಳು ಏನಾಗಿವೆ ತಿಳಿಸಿರಿ.
4. ರೈತರ ಜೀವನದಲ್ಲಿ ಬಡ್ಡಿ ವ್ಯಾಪಾರಸ್ತರ ಪಾತ್ರ ಏನು? ಅವರಿಗೆ ಬ್ರಿಟೀಷ್ ಸರ್ಕಾರದ ಮೂಲಕ ಯಾವ ವಿಧವಾದ ಬೆಂಬಲ ಲಭಿಸಿತು ?
5. ತೆಲಂಗಾಣ ದೊರೆಗಳು ಅವದ್ ಜಮೀನುದಾರರ ಮದ್ಯ ವ್ಯತ್ಯಾಸಗಳು ಹೋಲಿಕೆ ಗಳು ಏನು?
6. ವ್ಯವಸಾಯವನ್ನು ಅಭಿವೃದ್ಧಿಗೊಳಿಸುವುದಕ್ಕೆ ಬ್ರಿಟೀಷರು ಎಂತಹ ಕ್ರಮಗಳನ್ನು ತೆಗೆದುಕೊಂಡರು। ಅವರು ಆಶಿಸುವ ಫಲಿತಾಂಶಗಳು ಬಂದಿವೆಯೇ? ನಿಮ್ಮ ಕಾರಣಗಳನ್ನು ತಿಳಿಸಿರಿ.
7. ರೈತ್ವಾರಿ ವ್ಯವಸ್ಥೆ ಕೂಡಾ ಭೂಸ್ವಾಮ್ಯಕ್ಕೆ ಹೇಗೆ ಸಹಕರಿಸಿದೆ?
8. ಬ್ರಿಟೀಷ್ ಆಡಳಿತದಲ್ಲಿ ಬರಗಾಲಗಳು ಏಕೆ ಸಂಬವಿಸಿದವು? ಅವು ನೆರೆಹಾವಳಿ (ಪ್ರವಾಹಗಳು) ಅಥವಾ ಮಳೆ ಬೀಳದೇ ಇರುವುದರಿಂದ ಬಂದಿವೆ ಎಂದು ನೀನು ಭಾವಿಸುತ್ತಿರುವೆಯಾ?
9. ಬೆಳೆಗಳು ಬೆಳೆಯದಿದ್ದಾಗ ಕೂಡಾ ಬರಗಾಲ ಬರದಂತೆ ಸರ್ಕಾರ ಹೇಗೆ ಸಹಾಯ ಮಾಡಬಹುದು?
10. ಬ್ರಿಟೀಷ್ ಸರ್ಕಾರ ವಿಚಾರಣೆ ಸಂಘಕ್ಕೆ ಒಂದು ವಿನತಿ ಪತ್ರವನ್ನು ಕೊಡುತ್ತಿದ್ದಾರೆಂದು ಊಹಿಸಿಕೊಳ್ಳಿ. ಗುತ್ತಿಗೆ ರೈತರ ಸಮಸ್ಯೆಗಳನ್ನು ತಿಳಿಸಿ ಒಂದು ವಿನತಿ ಪತ್ರವನ್ನು ತಯಾರು ಮಾಡಿರಿ.
11. ಭಾರತ ದೇಶ ನಕ್ಷೆಯಲ್ಲಿ ಈ ಕೆಳಗಿನವುಗಳನು ಗುರ್ತಿಸಿರಿ.

    1. ಗಂಜಾಂ  2. ಅವಧ್  3. ಹೈದರಾಬಾದು  4. ಗೋದಾವರಿ ನದಿ

12. ಕೊನೆಯಿಲ್ಲದ ವಸೂಲೀ ತೆರಿಗೆಗಳು, ಪಾವತಿಗಳು, ಶೀರ್ಷಿಕೆಯಲ್ಲಿರುವ ಪ್ಯಾರಾವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

    ಪ್ರಸ್ತುತ ದಿನಗಳಲ್ಲಿ ತೆರಿಗೆಯನ್ನು ಯಾವ ವಿಧವಾಗಿ ಸಲ್ಲಿಸುತ್ತಿದ್ದಾರೆ?

### ಪಾಜೆಕ್ಟುಗಳು :

1. ಐದು ಜನ ವಿದ್ಯಾರ್ಥಿಗಳಿಂದ ಒಂದು ಗುಂಪಾಗಿ ಏರ್ಪಟ್ಟು ಗ್ರಾಮದಲ್ಲಿ ಐದು ಮಂದಿ ದೊಡ್ಡವರನ್ನು ಸಂದರ್ಶನ ಮಾಡಿ ಬ್ರಿಟೀಷ್ ಕಾಲದಲ್ಲಿಯ ಪರಿಸ್ಥಿತಿಗಳು ಹೇಗೆ ಇರುವವೋ ತಿಳಿದುಕೊಳ್ಳಿರಿ. ಇದರಲ್ಲಿ ಕನಿಷ್ಟ ಇಬ್ಬರು ಮಹಿಳೆಯರು ಇರಬೇಕು. ಕನಿಷ್ಟ ಒಬ್ಬರಾದರೂ ಕೈ ಕೆಲಸ ವೃತ್ತಿಗಳ ವರಾಗಿರಬೇಕು. ಅವರೊಂದಿಗೆ ಸುಧೀರ್ಘವಾಗಿ ಮಾತನಾಡಿ, ಅವರು ಹೇಳಿದು ದನ್ನು ಆಧಾರವಾಗಿ ಒಂದು ನೀವೇದನೆ ತಯಾರಿಸಿರಿ.
2. ನಿಮ್ಮ ಪ್ರಾಂತದಲ್ಲಿ ಸಂಭವಿಸಿದ ಬರಗಾಲದ ಕುರಿತು ತಿಳಿದುಕೊಳ್ಳಿರಿ. ಆ ಸಮಯದಲ್ಲಿ ಜನರು ಏನು ಮಾಡುತ್ತಾರೆ?
3. ನಿಮ್ಮ ಪ್ರಾಂತದಿಂದ ಕುವೈಟ್, ಸೌದಿ ಅರೇಬಿಯಾ ದಂತಹ ದೂರ ಪ್ರಾಂತಗಳಿಗೆ ವಲಸೆ ಹೋದ ಕುಟುಂಬಗಳ ಬಗ್ಗೆ ತಿಳಿದುಕೊಳ್ಳಿರಿ.

ಪ್ರಕರಣ 11 A

# ರಾಷ್ಟ್ರೀಯ ಚಳುವಳಿ. ಮೊದಲನೆ ಹಂತ 1885-1918

ಭಾರತ ದೇಶದಲ್ಲಿ ರಾಷ್ಟ್ರೀಯ ಚಳುವಳಿ ಒಂದು ಐತಿಹಾಸಿಕ ಘಟನೆ . ಇದು ಸಮಾಜದಲ್ಲಿಯ ವಿಭಿನ್ನ ಪ್ರಜೆಗಳು, ವರ್ಗದವರು ಒಂದೇ ಆಡಳಿತದಡಿಯಲ್ಲಿ ತಂದು ಬ್ರಿಟೀಷ್ ಆಡಳಿತಕ್ಕೆ ವಿರುದ್ಧವಾಗಿ ಹೋರಾಡುವುದಲ್ಲದೇ ಒಂದು ಹೊಸ ದೇಶ ನಿರ್ಮಾಣಕ್ಕೆ ಕೃಷಿ ಮಾಡಿದಂತಾಯಿತು.

## ಪ್ರಾರಂಭ ಹಂತದ ಸಂಘಗಗಳು

7ನೇ ತರಗತಿಯಲ್ಲಿ ನೀವು 1857 ದಂಗೆ ಕುರಿತು ಓದಿದ್ದೀರಿ. ಇದರಲ್ಲಿ ಬ್ರಿಟೀಷರ ಆಡಳಿತಕ್ಕೆ ವಿರುದ್ಧವಾಗಿ ಸೈನಿಕರು, ಸಾಧಾರಣ ರೈತರು, ಕರಕುಶಲಗಾರರು, ರಾಜರು ಕೂಡಾ ಕೈಕೂಡಿಸಿದರು. ಈ ದಂಗೆ ಬ್ರಿಟೀಷ್ ಆಡಳಿತವನ್ನು ವಿರೋದಿಸಿತಾದರೂ ದೇಶಕ್ಕೆ ಒಂದು ಹೊಸ ಪಾರದರ್ಶಕತೆಯನ್ನು ಅದು ಕೊಡಲಾಗಲಿಲ್ಲ. ವಾಸ್ತವವಾಗಿ ಅದು ಹಳೇ ಕಾಲದ ರಾಜರು, ರಾಣಿಗಳ ಆಡಳಿತವನ್ನು ಹಳೆಯ ಸಾಮಾಜಿಕ ಸಮಾಜವನ್ನು ಬಯಸಿತು.

19ನೇ ಶತಮಾನದ ಕೊನೆಯ ದೆಸೆಯಲ್ಲಿ ಕಲಕತ್ತಾ, ಮದ್ರಾಸು, ಬೊಂಬಾಯಿ ಯಂತಹ ದೊಡ್ಡ ನಗರಗಳಲಿ ಆಂಗ್ಲ ವಿದ್ಯ ವ್ಯಾಪ್ತಿಯೊಂದಿಗೆ ಒಂದು ಹೊಸ ಚೈತನ್ಯ ರೂಪ ಪಡೆದುಕೊಂಡಿತು. ಹೊಸದಾಗಿ ಬಂದ ಮೇಧಾವಿಗಳು ಹಳೆಯ ಸಾಮಾಜಿಕ ವ್ಯವಸ್ಥೆಯಲ್ಲಿಯ ಅನ್ಯಾಯಗಳನ್ನು ಅಸಮಾನತೆಗಳನ್ನು ವಿರೋಧಿಸ ತೊಡಗಿದರು. ಅವರು ಪ್ರಜಾಪ್ರಭುತ್ವದ ರಾಜಕೀಯ ವ್ಯವಸ್ಥೆಯನ್ನು ಬಯಸಲಾರಂಭಿಸಿದರು. ಅದೇ ಸಮಯದಲ್ಲಿ ಬ್ರಟೀಷ್ ಆಡಳಿತದಿಂದ ಜರುಗುತ್ತಿರುವ ಅನ್ಯಾಯಗಳು, ದರೋಡೆಗಳನ್ನು ಎತ್ತಿ ತೋರಿಸುತ್ತಾ ಅದನ್ನು ಅಂತ್ಯಗೊಳಿಸಲು ಹೋರಾಡತೊಡಗಿದರು. ಇದು ಭಾರತ ದೇಶದಲ್ಲಿ ಹೊಸ ರಾಷ್ಟ್ರೀಯ ಚಳುವಳಿಗೆ ದಾರಿ ಮಾಡಿಕೊಟ್ಟಿತು.

19ನೇ ಶತಮಾನದ ಎರಡನೆಯ ಅರ್ಧಭಾಗದಲ್ಲಿ ಹೊಸ ಚೈತನ್ಯಕ್ಕೆ ಬುನಾದಿಯಾದವು. ಓದಿಕೊಂಡಿದ್ದ ಭಾರತೀಯರು ಬ್ರಿಟೀಷ್ ಆಡಳಿತ ಸ್ವಬಾವವನ್ನು, ಭಾರತ ದೇಶದ ಮೇಲೆ ಅದರ ಪ್ರಭಾವವನ್ನು ಅರ್ಥ ಮಾಡಿಕೊಂಡನಂತರ ಬಾರತ ದೇಶದಲ್ಲಿ ಬ್ರಿಟೀಷ್ ವಿಧಾನಗಳನ್ನು ತೀವ್ರವಾಗಿ ವಿಮರ್ಶಿಸತೊಡಗಿದರು. ಅವರೆಲ್ಲರೂ ಒಂದು ಸ್ಥಳದಲ್ಲಿ ಸೇರಿ ಈ ಅಂಶಗಳನ್ನು ಕುರಿತು ಚರ್ಚಿಸ ತೊಡಗಿದರು. ಇದಕ್ಕಾಗಿ ಅವರು ಸಂಘಗಳನ್ನು ಕೂಡಾ ಏರ್ಪಡಿಸಿಕೊಂಡರು, ಭಾರತ ದೇಶದ ಸಮಸ್ಯೆಗಳನ್ನು ಚರ್ಚಿಸುವುದಕ್ಕೆ ದಾದಾಬಾಯಿ ನವರೋಜಿ 1866ರಲಿ ಲಂಡನ್‌ನಲ್ಲಿ 'ಈಸ್ಟ್ ಇಂಡಿಯಾ ಅಸೋಷಿಯೇಷನ್' ನನ್ನು ಏರ್ಪಡಿಸಿದರು. 1866ರಿಂದ 1885ರ ನಡುವೆ ಸುರೇಂದ್ರ ನಾಥ್ ಬೆನರ್ಜಿ, ಜಸ್ಟೀಸ್ ಎಂ. ಜಿ. ರಾನಡೇ, ಬದ್ರುದ್ದೀನ್ ತ್ಯಾಬ್‌ಜೀ, ಕೆ.ಸಿ. ತೆಲಂಗ್, ಜಿ. ಸುಬ್ರಾಮಣ್ಯಂರಂತಹವರು ಕಲಕತ್ತಾ, ಪೋನಾ, ಬೊಂಬಾಯಿ, ಮದ್ರಾಸ್ ದಂತಹ ನಗರಗಳಲ್ಲಿ ವಿವಿಧ ಸಂಘಗಳನ್ನು ಏರ್ಪಡಿಸಿಕೊಂಡು, ಆಯಾ ರಾಜ್ಯಗಳಲ್ಲಿ ಭಾರತೀಯರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಲಾರಂಭಿಸಿದರು. ಈ ಸಂಘಗಳು ರಾಷ್ಟ್ರೀಯ ಸ್ಪೂರ್ತಿಯಿಂದ ಕೆಲಸ ಮಾಡಿದವು. ಮೇಧಾವಿಗಳೆಲ್ಲರನ್ನು ಒಗ್ಗೂಡಿಸಲು ಇವು ಪ್ರಯತ್ನಿಸಿದವು. ಈ ಸಂಘಗಳಲ್ಲಿ ಅನೇಕ ದೇಶಗಳಲ್ಲಿ ಒಂದು ಪ್ರತ್ಯೇಕ ಪ್ರಾಂತದಲ್ಲಿ ಕೆಲಸ ಮಾಡಿದರೂ, ಅವರ ಲಕ್ಷ್ಯಗಳು ಯಾವ ಒಂದು ಪ್ರಾಂತಕ್ಕೋ, ಸಮಾಜಕ್ಕೋ, ವರ್ಗಕ್ಕೋ, ಸಿಮಿಂತವಲ್ಲದೇ, ಒಟ್ಟು ಭಾರತದ ಪ್ರಜೆಗಳಿಗೆ ಸೇರಿದ್ದೆಂದು ತಿಳಿಸಲಾಗಿದೆ. ಪ್ರಜೆಗಳು ಸಾರ್ವಭೌಮಾಧಿಕಾರ ಹೊಂದಿರ ಬೇಕೆಂಬ ಭಾವನೆಯಿಂದ ಅವರು ಕೆಲಸ ಮಾಡಿದರು. ಆಧುನಿಕ ಚೈತನ್ಯ ರಾಷ್ಟ್ರೀಯ



ಸುರೇಂದ್ರನಾಥ್ ಬೆನರ್ಜಿ



ಗೋಪಾಲಕೃಷ್ಣ ಗೋಖಲೆ



ದಾದಾಬಾಯಿ ನವರೋಜಿ

SCERT TELANGANA



*ಚಿತ್ರ 11A.1 : ಸೂರತ್ ಸಮಾವೇಶವು ದೇಶ ಭಕ್ತಿ ನಿಧಿಗಾಗಿ ನಡೆಸಲಾಯಿತು 1855 ಲಂಡನ್ ವಾರ್ತಾಪತ್ರಿಕೆಯಲ್ಲಿ ಮುದ್ರಿಸಲಾಯಿತು.*

ವಾದದಲ್ಲಿ ಇದು ಮುಖ್ಯವಾದ ಅಂಶ, ಇನ್ನೊಂದು ಮಾತಿನಲ್ಲಿ ಹೇಳಬೇಕೆಂದರೆ ತಮ್ಮ ವ್ಯವಹಾರಗಳಿಗೆ ಸಂಬಂಧಿಸಿದ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಪ್ರಜೆಗಳು ಸಾಧಿಕಾರತೆ ಸಾಧಿಸಬೇಕೆಂದು ಅವರು ನಂಬಿದ್ದರು. ನೂಲು ಬಟ್ಟೆಯ ಮೇಲೆ ತೆರಿಗೆಗಳು, ಭಾರತೀಯರ ಬಗ್ಗೆ ಬೇಧಭಾವ ಭಾರತೀಯ ದಿನ ಪತ್ರಿಕೆಗಳಿಗೆ ವಿರುದ್ಧವಾಗಿ ನಿರ್ಭಂಧಕರ ಕಾನೂನಿನಂತಹ ಬ್ರಿಟೀಷ್ ವಿಧಾನಗಳಿಗೆ ವಿರುದ್ಧವಾಗಿ ಅನೇಕ ಮಂದಿ ಮೇಧಾವಿಗಳು ಹೋರಾಡಿದರು, ಸರ್ಕಾರಿ ವಿಧಾನಗಳ ಬಗ್ಗೆ ಚರ್ಚಿಸುವುದು, ಅವುಗಳನ್ನು ಬದಲಾಯಿಸುವುದಕ್ಕೆ ಚಳುವಳಿ ನಡೆಸುವುದರ ಪ್ರಾಮುಖ್ಯತೆಯನ್ನು ಅವರು ಗುರ್ತಿಸಿದರು.

- ನಿಮ್ಮ ಊರಲ್ಲಿ ಅಥವಾ ಪಟ್ಟಣದಲ್ಲಿ ಒಟ್ಟು ಎಲ್ಲರ ಸಮಸ್ಯೆಗಳ ಬಗ್ಗೆ ಮಾತನಾಡುವ ಯಾವುದಾದರು ಸಂಘದ ಬಗ್ಗೆ ತಿಳಿದಿದೆಯೇ ? ಅವರು ಏನು ಚರ್ಚಿಸುತ್ತಾರೆ! ಈ ಸಮಸ್ಯೆಗಳ ಪರಿಹಾರಕ್ಕೆ ಅವರ ಸಲಹೆಗಳು ಏನು ? ಕೆಲವು ಉದಾಹರಣೆಗಳನ್ನು ನಿಮ್ಮ ತರಗತಿಯಲಿ ಚರ್ಚಿಸಿರಿ.

## ಭಾರತ ರಾಷ್ಟ್ರೀಯ ಕಾಂಗ್ರೇಸ್ ಮಿತವಾದ ಹಂತ 1885-1905

ವಿವಿಧ ರಾಜ್ಯಗಳಲ್ಲಿರುವ ರಾಷ್ಟ್ರೀಯವಾದ ಮೇಧಾವಿಗಳು 1885 ಡಿಸೆಂಬರ್‌ನಲ್ಲಿ ಬೊಂಬಾಯಿಯಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೇಸ್ ಸಮಾವೇಶದ ಮೊದಲನೇ ದಿನ ಕಾರ್ಯ ಕ್ರಮದಲ್ಲಿ ಭೇಟಿಯಾದರು. ಇದಕ್ಕೆ ಡಬ್ಲ್ಯು ಸಿ. ಬೆನರ್ಜಿ ಅಧ್ಯಕ್ಷತೆ ವಹಿಸಿದರು. ಭಾರತ ದೇಶದ ವಿವಿಧ ಪ್ರಾಂತಗಳಿಂದ 72 ಮಂದಿ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಮೊದಲನೇ ಕಾಲದ ನಾಯಕರಲ್ಲಿ ಕೆಲವರಾದ ದಾದಾಬಾಯಿ ನೌರೋಜಿ, ಫಿರೋಜ್‌ಷಾ ಮೆಹತಾ, ಬದ್ರುದ್ದೀನ್ ತ್ಯಾಬ್‌ಜೀ, ಡಬ್ಲ್ಯೂ ಸಿ ಬೆನರ್ಜಿ, ಸುರೇಂದ್ರನಾಥ್ ಬೆನರ್ಜಿ, ರಮೇಷ್ ಚಂದ್ರದತ್, ಜಿ.ಸುಬ್ರಮಣ್ಯಂ ಅಯ್ಯರ್ ರಂತವರು ಪ್ರಾಧಾನವಾಗಿ ಬಾಂಬೆ (ಮುಂಬಯಿ), ಮದ್ರಾಸು,(ಚೆನ್ನೈ) ಕಲಕತ್ತಾ (ಕೋಲ್ಕತ್ತಾ) ದಂತಹ ನಗರಗಳಿಂದ ಬಂದರು, ಕಾಂಗ್ರೆಸನ್ನು ಸ್ಥಾಪಿಸುವುದರಲ್ಲಿ ಪದವಿ ನಿವೃತ್ತಿ ಹೊಂದಿದ ಬ್ರಿಟೀಷ್ ಅಧಿಕಾರಿಯಾದ ಎ.ಓ.ಹ್ಯೂಂ ಕೂಡಾ ಪ್ರಧಾನ ಪಾತ್ರವಹಿಸಿದರು. ಕಾಂಗ್ರೇಸ್ ನಾಯಕರು ತಮ್ಮ ಮುಂದಿರುವ ಪ್ರಧಾನ ಕರ್ತವ್ಯ ಭಾರತ ದೇಶದ ಪ್ರಜೆಗಳೆಲ್ಲರಲ್ಲಿ ರಾಷ್ಟ್ರೀಯ ಭಾವನೆಯನ್ನು ಮೂಡಿಸುವುದು, ಅವರನ್ನು ಸಮೈಕ್ಯತೆಗೊಳಿಸುವುದೆಂದು ಗುರ್ತಿಸಿದರು. ಭಾರತ ದೇಶದಲ್ಲಿಯ ವಿವಿಧ ಪ್ರಾಂತಗಳ, ವಿವಿಧ ಮತಗಳ ಪ್ರಜೆಗಳ ಪ್ರತ್ಯೇಕ ಅವಸರಗಳಿಗೆ ದಾರಿ ಮಾಡಿಕೊಡುವದರ ಮೂಲಕ ಮಾತ್ರವೇ ಈ ಐಕ್ಯತೆಯನ್ನು ಸಾಧಿಸುತ್ತೇವೆಂದು ಅವರು ಗುರ್ತಿಸಿದರು. ಇದಕ್ಕಾಗಿ ಪ್ರತಿ ವರ್ಷ ನಡೆಯುವ ಕಾಂಗ್ರೇಸ್ ಸಮಾವೇಶಗಳನ್ನು ದೇಶದಲ್ಲಿಯ ವಿವಿಧ ಪ್ರಾಂತಗಳಲ್ಲಿ ನಡೆಸಬೇಕೆಂದುಕೊಂಡರು. ಯಾವ ಒಂದು ಮತವಾಗಲೀ, ಗುಂಪಾಗಲೀ ವಿರೋಧಿಸಿದರೂ ಸಹಾ ಆ ತಿರ್ಮಾನವನ್ನು ಅನುಮೋದಿಸಬಾರದೆಂದು ನಿರ್ಣಯಿಸಿದರು.

ಕಾಂಗ್ರೇಸ್‌ನ ಎರಡನೆಯ ಗುರಿ ದೇಶದಲ್ಲಿಯ ವಿವಿಧ

SCERT TELANGANA



*ಚಿತ್ರ 11A.2 : ಮೊದಲನೆ ಭಾರತ ರಾಷ್ಟ್ರೀಯ ಕಾಂಗ್ರೆಸ್1885.*

ಪ್ರಾಂತಗಳ ರಾಜಕೀಯ ಕಾರ್ಯಕರ್ತರು ಎಲ್ಲರೂ ಪಾಲ್ಗೊಳ್ಳಬೇಕಾದ ಎಲ್ಲಾ ರಾಜಕೀಯ ವೇದಿಕೆ ಅಥವಾ ಕಾರ್ಯಕ್ರಮ ತಯಾರಿಸುವುದು. ತದನಂತರ ಅವರು ಅಖಿಲ ಭಾರತ ಮಟ್ಟದಲ್ಲಿ ಪ್ರಜೆಗಳನ್ನು ಒಗ್ಗೂಡಿಸಿ ಅವರಿಗೆ ತಿಳುವಳಿಕೆ ಮೂಡಿಸಿ, ರಾಜಕೀಯ ಕಾರ್ಯಕ್ರಮಗಳನ್ನು ಕೈಗೊಂಡರು. ಪಾಲಕರ ಬಗ್ಗೆ ಭಾರತೀಯರಿಗೆ ಇದ್ದಂತಹ ಸಮಸ್ಯೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅವುಗಳ ಪರಿಷ್ಕಾರಕ್ಕೆ, ಹಕ್ಕುಗಳ ಸಾಧನೆಗಾಗಿ ಹೋರಾಟ ಮಾಡುವುದರ ಮೂಲಕ ಇದನ್ನು ಸಾಧಿಸ ಬೇಕೆಂದುಕೊಂಡಿದ್ದರು. ಅವರು ಜನರ ಸಮಸ್ಯೆಗಳ್ನು ಅಧ್ಯಯನ ಮಾಡಿ ಅವುಗಳ ಪರಿಷ್ಕಾರಿಕ್ಕೆ ಸರ್ಕಾರಕ್ಕೆ ಅರ್ಜಿಗಳನ್ನು ಸಲ್ಲಿಸುತ್ತಿದ್ದರು. ಜನರಿಗೆ ಅವರ ರಾಜಕೀಯ ಹಕ್ಕುಗಳ ಬಗ್ಗೆ ತಿಳುವಳಿಕೆ ನೀಡಲು ಈ ಅರ್ಜಿಗಳನ್ನು ಉಪಯೋಗಿಸಿಕೊಳ್ಳುತ್ತಿದ್ದರು.

ಭಾರತ ದೇಶದಲ್ಲಿ ಪ್ರಜಾಪ್ರಭುತ್ವದ ಭಾವನೆಗಳು, ಕೆಲಸ ವಿಧಾನವನ್ನು ಪ್ರೋತಾಹಿಸುವುದೇ ಕಾಂಗ್ರೆಸ್‌ನ ಮೂರನೇ ಪ್ರಧಾನ ಗುರಿಯಾಗಿದೆ. ಭಾರತ ರಾಷ್ಟೀಯ ಕಾಂಗ್ರೆಸ್ ಪ್ರಜಾಪ್ರಭುತ್ವದ ಪದ್ಧತಿಯಲ್ಲಿ ಕೆಲಸ ಮಾಡವುದು, ಎಲ್ಲಾ ವಿಷಯಗಳನ್ನು ಚರ್ಚಿಸಿ ಏಕಾಭಿಪ್ರಾಯ ಸಾಧಿಸಲು ಪ್ರಯತ್ನಿಸುತ್ತಿದ್ದರು. ಅವಶ್ಯವಾದರೆ ಓಟಿಂಗ್ ಸಹಾ ಕೈಗೊಳ್ಳುತ್ತಿದ್ದರು.

ಭಾರತ ದೇಶ ಪ್ರಜೆಗಳ ಮಧ್ಯ ವಿಭಜನೆ ಏರ್ಪಡುತ್ತದೆ ಎಂಬ ಉದ್ದೇಶದಿಂದ ಸಾಮಾಜಿಕ ಸಂಸ್ಕರಣೆ ಜೋಲಿಗೆ ಹೋಗಬಾರದೆಂದು ಈ ಸಂಧರ್ಭದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ನಿರ್ಣಯಿಸಿತು. ಇತರ ವೇದಿಕೆಗಳ ಮೂಲಕ ಸಂಸ್ಕರಣೆಗಾಗಿ ಪ್ರಯತ್ನಗಳು ನಡೆದವು.

1886 ರಲ್ಲಿ ಕಾಂಗ್ರೆಸ್‌ಗೆ ವಿವಿಧ ಸ್ಥಳೀಯ ಸಂಸ್ಥೆಗಳು 436 ಪ್ರತಿನಿಧಿಗಳನ್ನು ಆರಿಸಲ್ಪಟ್ಟಿವೆ. ಒಂದು ವರ್ಷದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಎಷ್ಟು ಪ್ರಜಾಧರಣೆ ಪಡೆದಿದೆಯೋ ಇದು ತಿಳಿಸುತ್ತದೆ. ಆಗಿನಿಂದ ಪ್ರತಿ ವರ್ಷ ಡಿಸೆಂಬರ್‌ನಲ್ಲಿ ದೇಶದಲ್ಲಿ ಯಾವುದೋ ಒಂದು ಪ್ರಾಂತದಲ್ಲಿ ಸಮಾವೇಶಗಳು ಕಾಂಗ್ರೆಸ್ ನಡೆಸತೊಡಗಿತು. ಸ್ವಲ್ಪ ಕಾಲದಲ್ಲಿಯೇ ಪ್ರತಿನಿಧಿಗಳ ಸಂಖ್ಯೆ ಸಾವಿರಕ್ಕೆ ಏರಿತು. ಕಾಂಗ್ರೆಸ್ ಪ್ರತಿನಿಧಿಗಳಲ್ಲಿ ಮೂಖ್ಯವಾಗಿ ನ್ಯಾಯವಾದಿಗಳು, ಪತ್ರಕರ್ತರು, ವ್ಯಾಪಾರಸ್ತರು, ಕೈಗಾರಿಕೋದ್ಯಮಿಗಳು ಉಪಾದ್ಯಾಯರು,ಭೂಒಡೆಯರು ಇರುತ್ತಿದ್ದರು. ಪ್ರತಿನಿಧಿಗಳಲ್ಲಿ ಬಹಳ ಕಡಿಮೆ ಮಂದಿ ಮಹಿಳೆಯರು ಇದ್ದರು, ಕಲಕತ್ತದ ಕಾದಂಬರಿ ಗಂಗೂಲಿ ಮೊದಲನೇ ಮಹಿಳೆಗೆ ಗ್ರಾಡ್ಯುಯೇಟ್ ಪ್ರತಿನಿಧಿ. ಈ ಸಮಾವೇಶಗಳಿಗೆ ಉನ್ನತ

ಸಮಾಜಕ್ಕಾಗಿ ಪುರುಷರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾಗುತ್ತಿದ್ದರು.

ಮೊದಲು 20 ವರ್ಷಗಳಲ್ಲಿ ಮಿತಿವಾದ , ರಾಷ್ಟ್ರೀಯ ವಾದಿಗಳು ಎನ್ನುವ ನಾಯಕರು ಕಾಂಗ್ರೆಸ್‌ನ್ನು ನಡೆಸಿದರು. ಸಂಸ್ಕರಣಗಳನ್ನು ಕೈಗೊಳ್ಳ ಬೇಕೆಂದು ಮಿತವಾದಿಗಳು ಸರ್ಕಾರಕ್ಕೆ ಅನೇಕ ಅರ್ಜಿಗಳನ್ನು ಕೊಡುತ್ತಿದ್ದರು. ಸರ್ಕಾರ, ಆಡಳಿತದಲ್ಲಿ ಭಾರತೀಯರಿಗೆ ಮತ್ತಷ್ಟು ಸ್ಥಾನವನ್ನು ಕಲ್ಪಿಸಿಕೊಡಬೇಕೆಂದು ಅವರು ಕೋರಿದರು.

ಇಂಪೀರಿಯಲ್ ವಿಧಾನ ಸಭೆಗಳಲ್ಲಿ ಇನ್ನೂ ಕೆಲವು ಮಂದಿಗೆ ಅವಕಾಶವನ್ನು ಕಲ್ಪಿಸಿ ಕೊಡಬೇಕೆಂದು, ಅವುಗಳಾಗಿ ಮತ್ತಷ್ಟು ಅಧಿಕಾರಗಳನ್ನು ಕಲ್ಪಿಸಿಕೊಡ ಬೇಕೆಂದು ಅವು ಇಲ್ಲದ ರಾಜ್ಯಗಳಲ್ಲಿ ಅವುಗಳನ್ನು ಸ್ಥಾಪಿಸಬೇಕೆಂದು ಅವರು ಕೋರಿದರು. ಸರ್ಕಾರದಲ್ಲಿ ಉನ್ನತಾಧಿಕಾರಿಗಳ ಸ್ಥಾನದಲ್ಲಿ ಮತ್ತಷ್ಟು ಮಂದಿ ಭಾರತೀಯರಿಗೆ ಸ್ಥಾನ ಕಲ್ಪಿಸ ಬೇಕೆಂದು ಕೋರಿದರು. ಇದಕ್ಕಾಗಿ ಸಿವಿಲ್ ಸರ್ವಿಸೆಸ್ ಪರೀಕ್ಷೆಗಳು ಲಂಡನ್‌ನಲ್ಲೆ ಅಲ್ಲದೇ ಭಾರತ ದೇಶದಲ್ಲಿ ಸಹಾ ನಿರ್ವಹಿಸಿ ಬೇಕೆಂದು ಕೋರಿದರು. ಮುಖ್ಯವಾದ ಉದ್ಯೋಗಗಳಲ್ಲಿ ಮುಖ್ಯವಾಗಿ ಯೂರೋಪಿಯನ್ನರೇ ಇರುತ್ತಿದ್ದುದರಿಂದ ಈ ವಿಧವಾದ ಜಾತಿ ಬೇಧಭಾವಕ್ಕೆ ವಿರುದ್ದವಾಗಿ ಆಡಳಿತದಲ್ಲಿ ಭಾರತೀಯರನ್ನು ತೆಗೆದುಕೊಳ್ಳಬೇಕೆಂದು ಕೋರಿದರು.

ನೌರೋಜಿ, ಆರ್. ಸಿ. ದತ್, ರಾನಡೇ ಇಂತಹ ನಾಯಕರು ಬ್ರಿಟೀಷ್ ಆಡಳಿತದಲ್ಲಿ ಆರ್ಥಿಕ ಪ್ರಭಾವವನ್ನು ಅಧ್ಯಯನ ಮಾಡಿ ತೆರಿಗೆಗಳು, ಇತರ ಮಾರ್ಗಗಳ ಮೂಲಕ ಬ್ರಿಟೀಷರು ಭಾರತದೇಶದ ಸಂಪತ್ತನ್ನು ದರೋಡೆ ಮಾಡುತ್ತಾರೆಂದು, ಭಾರತ ದೇಶ ದಿನದಿನಕ್ಕೆ ಬಡ ದೇಶವಾಗುತ್ತದೆಂದೂ ರಪ್ತು, ನಿರ್ಧಾರಕ್ಕೆ ಬಂದರು. ಅಧಿಕ ಭೂಮಿ, ತೆರಿಗೆ ಆಹಾರ ಧಾನ್ಯಗಳ, ಬ್ರಿಟೀಷ್ ವಿಧಾನಗಳಿಂದ ಬರಗಾಲ, ಬಡತನ ದಂತಹ ಸಮಸ್ಯೆಗಳು ಎದುರಿಸುತ್ತಿದ್ದೇವೆ ಎಂದು ಆರೋಪಿಸಿ ತೊಡಗಿದರು. ಉಪ್ಪಿನ ಮೇಲೆ ತೆರಿಗೆ ವಿದೇಶಗಳಲ್ಲಿ ಭಾರತೀಯ ಕೂಲಿಗಳೊಂದಿಗೆ ವ್ಯವಹರಿಸುವತ್ತಿರುವ ರೀತಿ, ಅರಣ್ಯ ಇಲಾಖೆ ಮಧ್ಯಸ್ತಿಕೆ ಕಾರಣದಿಂದಾಗಿ ಆದಿವಾಸಿಗಳು ಎದುರಿಸುತ್ತಿರುವ ಸಮಸ್ಯೆಗಳ ಮೇಲೆ ಕಾಂಗ್ರೆಸ್ ಎಷ್ಟೋ ತಿರ್ಮಾನಗಳನ್ನು ಮಾಡಿತು. ಭಾರತ ದೇಶದಲ್ಲಿ ಬಡತನವನ್ನು ನಿರ್ಮೂಲಿಸಲು ರಾಷ್ಟ್ರೀಯ ಕೈಗಾರಿಕಾಭಿವೃದ್ಧಿ ಅತಿ ಮುಖ್ಯವೆಂಬ ನಿರ್ಣಯಕ್ಕೆ ಮೊದಲನೆ ಹಂತದ ನಾಯಕರು ಭಾವಿಸಿದರು. ಆದರೆ ಭಾರತದೇಶ ಸಂಪತನ್ನು ಇಂಗ್ಲೆಂಡಿಗೆ ದೋಚಿಕೊಡು ವುದಲ್ಲದೇ ಹೋದುದಲ್ಲದೇ, ಬ್ರಿಟೀಷ್ ಸರಕುಗಳನ್ನು ಭಾರತ ದೇಶದಲ್ಲಿ ಕಡಿಮೆ ಬೆಲೆಗೆ ಮಾರುವುದರಿಂದ ಭಾರತೀಯ ಕೈಕೆಲಸಗಳು, ಕೈಗಾರಿಕೆಗಳು ಕ್ಷೀಣಿಸಿದವು. ಇದರಿಂದ ಭಾರತದೇಶ ಅಭಿವೃದ್ಧಿಗೆ ಬ್ರಿಟೀಷ್ ಆಡಳಿತಕ್ಕೆ ಅಡ್ಡಿಯಾಯಿತು.

ಉಪನ್ಯಾಸಗಳು, ಸಮಾವೇಶಗಳು, ಯಾತ್ರೆಗಳ ಮೂಲಕ ದೇಶದಲ್ಲಿಯ ವಿವಿಧ ಪ್ರಾಂತಗಳ ಪ್ರಜೆಗಳೊಂದಿಗೆ ಮಿತವಾದಿ ನಾಯಕರು ಸಂಬಂಧಗಳನ್ನು ಬೆಳೆಸಿಕೊಂಡರು. ಬ್ರಿಟೀಷರು ಸ್ವತಂತ್ರ್ಯ ನ್ಯಾಯಕ್ಕೆ ಬದ್ಧರಾಗಿದ್ದಾರೆಂದು, ಸರಿಯಾಗಿ ನಡೆದಕೊಂಡರೆ ತಮ್ಮ ಕೋರಿಕೆಗಳನ್ನು ತೀರಿಸುವರೆಂದು ಅವರು ನಂಬಿದ್ದರು. ದಿನ ಪತ್ರಿಕೆಗಳು, ಉಪನ್ಯಾಸಗಳು, ತೀರ್ಮಾನಗಳು ಸರ್ಕಾರಕ್ಕೆ ವಿನತಿ ಪತ್ರಗಳನ್ನು ಕೊಡುವುದಕ್ಕೆ ಪ್ರತಿನಿಧಿ ಬೃಂದಗಳ ಮೂಲಕ ಅವರು ತಮ್ಮ ಚಳುವಳಿಯನ್ನು ಮುಂದುವರೆಸಿದರು. ಸಂಕ್ಷಿಪ್ತವಾಗಿ ಹೇಳುವುದಾದರೆ ಅವರು ಕೋರಿಕೆಗಳು, ಅರ್ಜಿಗಳು, ಆಂದೋಳಗಳು, ಎನ್ನುವ ವಿಧಾನಗಳನ್ನು ಅವಲಂಬಿಸಿದರು. ಸರ್ಕಾರ ತನ್ನ ವಿಧಾನಗಳನ್ನು ಬದಲಾಯಿಸಿಕೊಳ್ಳುವಂತೆ ಮಾಡುವಲ್ಲಿ ಯಾವಾಗಲೂ ವಿಫಲವಾದಾಗ್ಯೂ ಮುಖ್ಯವಾದ ಅಂಶಗಳ ಮೇಲೆ ಭಾರತದೇಶದ ಅಭಿಪ್ರಾಯವನ್ನು ತಿಳಿಸಲ್ಪಟ್ಟರು. ಭವಿಷತ್‌ನಲ್ಲಿ ಭಾರತ ರಾಷ್ಟ್ರೀಯ ಚಳುವಳಿ ಇನ್ನಷ್ಟು ಭಲಿಷ್ಟವಾಗಲು ಇದು ಬಹಳ ಮುಖ್ಯ ಪಾತ್ರವಹಿಸಿತು.

18ನೇ ಶತಮಾನದ ಕೊನೆಯಿಂದ 1943ರ ಮಹಾ ಬೆಂಗಾಲ್ ಕ್ಷಾಮದವರೆಗೆ ಬ್ರಿಟಿಷ್ ಇಂಡಿಯಾದಲ್ಲಿ ಪ್ರಮುಖ ಕ್ಷಾಮಗಳು ಸಂಭವಿಸಿದವು. ಅವು ಬೆಳೆ ಹೊಡೆತದಿಂದ ಸಂಭವಿಸಿದಾಗ್ಯೂ, ಅವುಗಳಿಗೆ ಪರಿಣಾಮದಿಂದ ಸರಕಾರದ ವಿಧಾನಗಳಿಂದ ಅವು ತೀಕ್ಷ್ಣಗೊಂಡವು ಸರಕಾರವು ಅಧಿಕ ಭಾಗವನ್ನು ತೆರಿಗೆ ರೂಪದಲ್ಲಿ ವಸೂಲಿಮಾಡಿತು. ಬೆಳೆನಾಶವಾದ ಸಮಯದಲ್ಲಿಯೂ ಸಹ ರೈತರಿಗೆ ಬಫರ್ ದಾಸ್ತಾನಿಗೆ ಅಕಾಶಕೊಡಲಿಲ್ಲ. ವ್ಯಾಪಾರಿಗಳು ಆಹಾರ ಪದಾರ್ಥಗಳ ಹಂಚಿಕೆಯನ್ನು ನಿಯಂತ್ರಿಸಿದಾಗಲೂ ಸಹ ಸರಕಾರ ಮಧ್ಯ ತಲೆಹಾಕಲಿಲ್ಲ. ಇವೆಲ್ಲಾ ಕಾರಣಗಳಿಂದ ಬರಗಾಲದ ಸಮಯದಲ್ಲಿ ಲಕ್ಷಾಂತರ ಜನರು ಸತ್ತು ಹೋದರು.

- ಭಾರತ ದೇಶದಲ್ಲಿ ಬಡತನ, ಬರಗಾಲಕ್ಕೆ ಬ್ರಿಟೀಷ್ ಪಾಲಕರು ಕಾರಣವೆಂದು ಮೊದಲ ರಾಷ್ಟ್ರೀಯ ವಾದಿಗಳು ಏಕೆ ನಂಬಿದ್ದರು?
- ಭಾರತ ದೇಶದ ಪುರಾತನ ರಾಜರ ಪ್ರಭುತ್ವವನ್ನು ಪುನಃ ಸ್ಥಾಪಿಸ ಬೇಕೆಂದು ಮೊದಲ ರಾಷ್ಟ್ರೀಯ ವಾದಿಗಳು ಏಕೆ ಅಂದುಕೊಳ್ಳಲಿಲ್ಲ. ಬ್ರಿಟೀಷರ ಆಳ್ವಿಕೆಗಿಂತ ಅದು ಚುರುಕಾಗಿರುವುದಲ್ಲವೇನು ?

## ಅತಿವಾದ ಹಂತ (ಸ್ವದೇಶಿ ಚಳುವಳಿ)

1903 ರಲ್ಲಿ ಸ್ವದೇಶೀ ಚಳುವಳಿ ಪ್ರಾರಂಭಿಸಿದ್ದರಿಂದ ಭಾರತ ರಾಷ್ಟ್ರೀಯ ಚಳುವಳಿ ಒಂದು ದೊಡ್ಡ ಮುನ್ನೆಜ್ಜೆಯನ್ನು ಹಾಕಿತು. ದೇಶದಲ್ಲಿ ಮೊಟ್ಟ ಮೊದಲ ಸಲ ಬೆಂಗಾಲ್ ಇತರ ಪ್ರಾಂತಳಿಂದ ಪಟ್ಟಣ, ಗ್ರಾಮೀಣ ಪ್ರಜೆಗಳಲ್ಲಿ ಹೆಚ್ಚಿನ ಭಾಗ

ಮಹಿಳೆಯರು, ವಿದ್ಯಾರ್ಥಿಗಳು ರಾಜಕೀಯದಲ್ಲಿ ಆಸಕ್ತಿಯಿಂದ ಪಾಲ್ಗೊಂಡರು. 1903 ರಲ್ಲಿ ಲಾರ್ಡ್ ಕರ್ಜನ್ ಬೆಂಗಾಲನ್ನು ಪೂರ್ವ, ಪಶ್ಚಿಮ ಬೆಂಗಾಲ್‌ಗಳಾಗಿ ವಿಭಜಿಸ ಬೇಕೆಂದು ಮಾಡಿದ ಪ್ರತಿಪಾದನೆ ರಾಷ್ಟ್ರೀಯ ಬಾವನೆಗಳನ್ನು ರೊಚ್ಚಿಗೆಬ್ಬಿಸಿತು. ಬೆಂಗಾಲೀ ಪ್ರಜೆಗಳನ್ನು ಎರಡು ಭಾಗ ಮಾಡಿ ರಾಷ್ಟ್ರೀಯ ಚಳುವಳಿಯನ್ನು ಬಲಹೀನವಾಗುವಂತೆ ಸರ್ಕಾರ ರಾಜಕೀಯ ಮೋಸವಾಗಿ ರಾಷ್ಟ್ರೀಯವಾದಿಗಳು ಬೆಂಗಾಲ್ ವಿಭಜನೆಯನ್ನು ತಿರಸ್ಕರಿಸಿದರು. ಬೆಂಗಾಲಿನಲ್ಲಿ ಸಾಧಾರಣ ಪ್ರಜೆಗಳು ಸಹಾ ಈ ಪ್ರತಿಪಾದನೆಯಿಂದ ಕೋಪಗೊಂಡು ಅದಕ್ಕೆ ವಿರುದ್ಧವಾಗಿ ಚಳುವಳಿ ಹೊಡಿದರು. ದೊಡ್ಡ ಪ್ರಮಾಣದಲ್ಲಿ ಸಾಮೂಹಿಕ ಬೇಡಿಕೆಗಳು ಪ್ರಚಾರ ಸಾಗಿತು. ಆದರೆ ಸರ್ಕಾರ ಇದಾವುದನ್ನು ಲೆಕ್ಕಿಸದೇ 1905 ರಲ್ಲಿ ಬೆಂಗಾಲನ್ನು ವಿಭಜಿಸಿತು. ಅದಕ್ಕೆ ವಿರುದ್ಧವಾಗಿ ಅನೇಕ ಸಮಾವೇಶಗಳು ನಡೆದವು. ಉಪ್ಪು, ವಿದೇಶಿ ವಸ್ತ್ರ ಬಹಿಷ್ಕರಣಕ್ಕೆ ಕರೆಕೊಟ್ಟರು. ಈ ಕರೆಗೆ ಪ್ರಜೆಗಳು ದೊಡ್ಡ ಪ್ರಮಾಣದಲ್ಲಿ ಸ್ಪಂದಿಸಿದರು. ದೇಶದಲ್ಲೆಲ್ಲಾ ಪ್ರಧಾನ ಪಟ್ಟಣಗಳಲ್ಲಿ ನಗರಗಳಲ್ಲಿ, ಬೆಂಗಾಲ್ ಮೂರು ಮೂಲೆ ಪ್ರಾಂತಗಳಲ್ಲಿ ವಿದೇಶಿ ವಸ್ತ್ರ ಬಹಿಸ್ಕರಣ, ದಹನ, ವಿದೇಶೀ ವಸ್ತುಗಳನ್ನು ಮಾರುವ ಅಂಗಡಿಗಳ ಮುಂದೆ ಪಿಕೆಟಿಂಗ್ ನಂತಹವು ಸರ್ವ ಸಾಧಾರವಾಗಿ ಬಿಟ್ಟವು. ವಿದೇಶಿ ಬಳೆಗಳನ್ನು ಹಾಕಿಕೊಳ್ಳಲು, ವಿದೇಶೀ ಅಡಿಗೆ ಪಾತ್ರೆಗಳನ್ನು ಉಪಯೋಗಿಸುವುದನ್ನು ಮಹಿಳೆಯರು ನಿರಾಕರಿಸಿದರು. ವಿದೇಶಿಯರ ಬಟ್ಟೆಗಳನ್ನು ಒಗೆಯಿವವರು ಬಟೆಗಳನ್ನು ಒಗೆಯಿವುದನ್ನು ನಿರಾಕರಿಸಿದರು. ವಿದೇಶಿ ಸಕ್ಕರೆ ಬಳಸದ ನೈವೇದ್ಯವನ್ನು ತೆಗೆದುಕೊಳ್ಳಲು ಪೂಜಾರಿಗಳು ಸಹಾ ನಿರಾಕರಿಸಿದರು. ಹೀಗೆ ವಿವಿಧ ಸಾಮಾಜಿಕ ಬೃಂದಗಳು ಐಕ್ಯತೆ ಯೊಂದಿಗೆ ಹೋಂದಿಕೊಳ್ಳುವುದು ರಾಷ್ಟ್ರೀಯ ವಾದಕ್ಕೆ ಬುನಾದಿಯಾಗಿ ನಿಂತಿತು. ಈ ಭಾವನೆಯನ್ನು ಕಲ್ಪಿಸುವಲ್ಲಿ ಮೊದಲನೆ ಹಂತಹ ರಾಷ್ಟ್ರೀಯ ನಾಯಕರು ಸಫಲರಾದರು.

ಸರ್ಕಾರ ಸಂಸ್ಥೆಗಳಾದ ಪಾಠಶಾಲೆಗಳು, ಕಾಲೇಜುಗಳು, ನ್ಯಾಯ ಸ್ಥಾನಗಳಂತಹವುಗಳನ್ನು ಬಹಿಷ್ಕರಿಸಬೇಕೆಂದು ಸಹಾ ಕರೆ ನೀಡಿದರು. ಪ್ರಜೆಗಳು ಸ್ವದೇಶಿ ಪಾಠ ಶಾಲೆಗಳು, ಕಾಲೇಜುಗಳನ್ನು ಸ್ಥಾಪಿಸಿದರು. ತಮ್ಮ ಜಗಳಗಳನ್ನು ಪರಿಷ್ಕರಿಸಿಕೊಳ್ಳುವುದಕ್ಕೆ ಸಮಾಂತರ ನ್ಯಾಯಸ್ಥಾನಗಳನ್ನು ಏರ್ಪಡಿಸಿದರು. ಸರ್ಕಾರದ ಕೆಲಸದಲ್ಲಿ ಸಹ ಕರಿಸದಂತೆ ಅದನ್ನು ಬಲಹೀನಗೊಳಸಬೇಕೆಂಬುದೇ ಅವರ ಮುಖ್ಯ ಉದ್ದೇಶ. ಸ್ವದೇಶಿ ಚಳುವಳಿಯಿಂದ ಭಾರತದ ಕೈಗಾರಿಕೆ ಗಳಿಗೆ ಒಳ್ಳೆಯ ಪ್ರೋತ್ಸಾಹ ದೊರೆಯಿತು. ಸ್ವದೇಶಿ ಉಪ್ಪು, ಸಕ್ಕರೆ, ಕಡ್ಡಿ ಪೆಟ್ಟಿಗೆಗಳು, ಇತರ ವಸ್ತುಗಳನ್ನು ದೊಡ್ಡ ಪ್ರಮಾಣದಲ್ಲಿ ತಯಾರು ಮಾಡತೊಡಗಿದರು. ಈ ಚಳುವಳಿಯ ಫಲಿತವಾಗಿ ಪ್ರಪುಲ್ಲಾ ಚಂದ್ರರೇ (ಪಿ.ಸಿ.ರೇ)ಗೆ ಸೇರಿದ ಬೆಂಗಾಲ್ ಕೆಮಿಕಲ್ ವರ್ಕ್ಸ್‌ಗೆ ಒಳ್ಳೆಯ ಆದರಣೆ ಲಭಿಸಿತು. ಈ ಸ್ಫೂರ್ತಿಯಿಂದಲೇ ಬೊಂಬಾಯಿಗೆ ಸೇರಿದ ಜಂಷೆಡ್ಜ್ ಟಾಟಾ, ಬಿಹಾರ್‌ನಲ್ಲಿ ಉಕ್ಕು ಕಾರ್ಖಾನೆ ಸ್ಥಾಪಿಸಿದನು. ದೇಶೀಯ ವಸ್ತುಗಳಿಗೆ ಈ ಚಳುವಳಿ ಕಾರಣದಿಂದ ಬಹಳ ಬೇಡಿಕೆ ಉಂಟಾಯಿತು. ಸ್ವದೇಶಿ ಚಳುವಳಿಯಿಂದ ಪ್ರತ್ಯೇಕವಾಗಿ ಭಾರತ ದೇಶದಲ್ಲಿ ವಸ್ತ್ರ ಕೈಗಾರಿಕೆಗಳು ಅಭಿವೃದ್ಧಿಗೊಂಡವು.

## ಮಿತವಾದಿಗಳು, ಅತಿವಾದಿಗಳು

ನಂತರದ ವರ್ಷ ಕಾಂಗ್ರೇಸ್ ಸಮಾವೇಶದಲ್ಲಿ ಅತಿವಾದ ರಾಷ್ಟ್ರೀಯ ನಾಯಕರದ ತಿಲಕ್, ಬಿಪಿನ್ ಚಂದ್ರಪಾಲ್, ಲಾಲಾ ಲಜಪತ್‌ರಾಯ್‌ರಂತವರು ಬೆಂಗಾಲ್ ವಿಭಜನೆ ರದ್ದು ಮಾಡಬೇಕೆಂದು ಹೇಳಿದುದಲ್ಲದೇ ಸಂಪೂರ್ಣ ಸ್ವಾತಂತ್ರ್ಯ ಅಂದರೆ 'ಸ್ವರಾಜ್ಯ' ಬಯಸುತ್ತಾ ಚಳುವಳಿಯನ್ನು ಉಳಿದ ಪ್ರಾಂತಗಳಿಗೆ ವಿಸ್ತರಿಸಬೇಕೆಂದು ಭಾವಿಸಿದರು. ''ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು '' ಅದನ್ನು ಸಾಧಿಸುತ್ತೇನೆ ಎನ್ನುವ ಪ್ರಖ್ಯಾತ ನಿನಾದವನ್ನು ಬಾಲಗಂಗಾಧರ್ ತಿಲಕ್ ನೀಡಿದನು. ಇಂದಿನಂತೆ ಸರ್ಕಾರಕ್ಕೆ ವಿನತಿ ಪತ್ರಗಳು ಕೊಡದಲ್ಲದೆ ಬ್ರಿಟೀಷ್ ಆಡಳತಕ್ಕೆ ವಿರುದ್ಧವಾಗಿ ಪ್ರಜೆಗಳನ್ನು ಒಗ್ಗೂಡಿಸಿ, ದೇಶ ಬಿಟ್ಟು ಹೋಗುವಂತೆ ಮಾಡಬೆಕೆಂದು ಕೊಂಡರು. ಇದಕ್ಕೂ ಮೊದಲು ಕೈಗೊಂಡ ವಿಧಾನವನ್ನು 'ಭಿಕ್ಷೆ ಬೇಡುವುದು' ಎಂದು ತಿಳಿಸಿದರು. ಈ ಕಾರಣಗಳಿಂದ ಅವರನ್ನು ಅತಿವಾದ ರಾಷ್ಟ್ರೀಯವಾದಿಗಳು ಎಂದು ಕರೆಯಲ್ಪಟ್ಟರು. ಇದಕ್ಕೆ ವಿರುದ್ಧವಾಗಿ ಮಿತವಾದ ರಾಷ್ಟ್ರೀಯ ವಾದಿಗಳಾಗಿ ಹೆಸರು ಪಡೆದ ಮೊದಲನೆ ಹಂತದ ನಾಯಕರು ಸ್ವಾತಂತ್ರ್ಯ ಸ್ವಪರಿಪಾಲನೆಗೆ ಪೂರ್ತಿಹಂತದಲ್ಲಿ ಚಳುವಳಿಗೆ ಪ್ರಜೆಗಳು ಇನ್ನು ಸಿದ್ದರಾಗಿಲ್ಲವೆಂದು, ಅದನ್ನು ಮಂದ ಸ್ಥಾಯಿಯಲ್ಲೆ ಮುಂದುವರೆಸ ಬೇಕೆಂದು ಭಾವಿಸಿದರು, ಈ ಎರಡು ವರ್ಗಗಳ ನಾಯಕರ ಮಧ್ಯ ಭಿನ್ನಾಭಿಪ್ರಾಯಗಳು

SCERT TELANGANA



*ಬಾಲ ಲಜ್ಪತ್ ರಾಯ್*



*ತಿಲಕ್*



*ಬಿಪಿನ್ ಚಂದ್ರಪಾಲ್*



*ಅನಿಬೆಸೆಂಟ್*

ಹೆಚ್ಚಾಗಿ ಕೊನೆಯದಾಗಿ 1907 ಸೂರತ್ ಸಮಾವೇಶದಲ್ಲಿ ಕಾಂಗ್ರೇಸ್ ಎರಡು ಭಾಗಗಳಾಗಿ ಒಡೆಯಿತು. ತಿಲಕ್ ರಂತಹ ಅತಿವಾದಿ ನಾಯಕರು ಕಾಂಗ್ರೇಸನ್ನು ಬಿಟ್ಟು ಬಿಡಬೇಕಾಯಿತು.

ಅತಿವಾದ ನಾಯಕರ ಮೇಲೆ, ಸ್ವರಾಜ್ಯ ಚಳುವಳಿಕಾರರ ಕಾರ್ಯಕರ್ತರ ಮೇಲೆ ಸರ್ಕಾರ ಉಕ್ಕುಪಾದದಿಂದ ಮೇಲೇರಿತು. ತಿಲಕ್ ರಂತಹ ಬಹಳ ಮಂದಿ ನಾಯಕರನ್ನು ಖೈದಿಗಳನ್ನಾಗಿ ಮಾಡಿದರು. ದೇಶದಿಂದ ಬಿಟ್ಟು ತೊಲಗಿಸಿದರು. ಕ್ರಮೇಣ ಈ ಚಳುವಳಿ ನಿಂತು ಹೋಯಿತು. ಈ ಪರಿಣಾಮಗಳಿಂದ ನಿರುತ್ಸಾಗೊಂಡ ಸ್ವರಾಜ್ಯ ಯುವ ಚಳುವಳಿಕಾರರು ಪ್ರಜೆಗಳು ದ್ವೇಷಿಸುವ ಬ್ರಿಟೀಷ್ ಅಧಿ ಕಾರಗಳ ಮೇಲೆ ತೀವ್ರವಾದ ದಾಳಿ ಮಾಡಬೇಕೆಂದು ಕೊಂಡರು. ಈ ವಿಧವಾಗಿ ಬ್ರಿಟೀಷ್‌ರು ಕೈಗೊಂಡ ತುಳಿದು ಹಾಕುವುದನ್ನು ತಗ್ಗಿಸಬಹುದೆಂದು ಕೊಂಡರು. ಇದರಲ್ಲಿ ಅವರು ವಿಜಯವನ್ನು ಸಾಧಿಸಲಿಲ್ಲ. ಬಹಳ ಸಿಕ್ಕಿದ್ದು, ಜೈಲಿಗೆ ಹೋದರು, ಕೆಲವರನ್ನು ಗಲ್ಲಿಗೇರಿಸಲಾಯಿತು. ಆದರೆ ರಾಷ್ಟ್ರೀಯ ಭಾವನೆಯನ್ನು ಸಜೀವವಾಗಿ ಉಳಿಸುವಲ್ಲಿ ಅದಕ್ಕಾಗಿ ಎಂತಹ ತ್ಯಾಗಕ್ಕಾದರೂ ಸಿದ್ದವಾಗುವಂತೆ ಮಾಡುವಲ್ಲಿ ಇವರು ಸಫಲರಾದರು.

1915ರಲಿ ತಿಲಕ್ ತಿರುಗಿ ಬಂದ ನಂತರ ರಾಷ್ಟ್ರೀಯ ಚಳುವಳಿ ಪುನಃ ಉತ್ತೇಜನಗೊಂಡಿತು. ಅತನು ಅನಿಬೆಸೆಂಟ್‌ನೊಂದಿಗೆ ಕಲೆತು ಹೋಂ ರೂಲ್‌ಗಾಗಿ ಚಳುವಳಿ ಪ್ರಾರಂಭಿಸಿದನು. 1916 ರಲ್ಲಿ ಲಕ್ನೋ ಒಪ್ಪಂದದ ಮೂಲಕ ಕಾಂಗ್ರೇಸ್‌ನಲ್ಲಿ ಎರಡು ಬಾಗಗಳು ಪುನಃ ಒಗ್ಗೂಡಿದವು.

- ವಿದೇಶಿ ಬಟ್ಟೆಗಳನ್ನು ಬೆಂಕಿ ಹಚ್ಚುವಲ್ಲಿ ಪಾಲ್ಗೊಳ್ಳುತ್ತಿರುವ ವಿದ್ಯಾರ್ಥಿ ಎಂದು ನಿಮ್ಮನ್ನು ನೀವು ಊಹಿಸಿಕೊಳ್ಳಿರಿ. ಆ ದಿನ ಏನು ನಡೆದಿರುತ್ತದೆ. ಆಗ ನಿಮ್ಮ ಉದ್ವೇಗಗಳು ಹೇಗೆ ಇರುತ್ತವೆಯೋ ವಿವರಿಸಿರಿ.
- ಪ್ರಜೆಗಳ ನ್ಯಾಯವಾದ ಬೇಡಿಕೆಗಳಿಗೆ ಅಧಿಕಾರಿಗಳು ಒಪ್ಪಿಕೊಳ್ಳದಿದ್ದರೆ ಏನು ಮಾಡಬೇಕು?

**ಬಂಗಾಳ ವಿಭಜನೆಯ ದಿನ**

ಬಂಗಾಳ ವಿಭಜಿಸಿದ 1905 ಅಕ್ಟೋಬರ್ 16ನ್ನು ಶೋಚನೀಯ ದಿನವಾಗಿ ಪ್ರಕಟಿಸಿದರು. ಆ ದಿನ ಬಂಗಾಳದಲ್ಲಿ ಯಾರೂ ಅಡಿಗೆ ಮಾಡಲಿಲ್ಲ, ಅಂಗಡಿಗಳೆಲವನ್ನೂ ಮುಚ್ಚಿದ್ದರು. ಕಲ್ಕತ್ತಾದಲ್ಲಿ ಹರ್ತಾಳ ಪ್ರಕಟಿಸಿದರು. ಪ್ರಜೆಗಳು ಗಂಗಾನದಿಯಲ್ಲಿ ಸ್ನಾನ ಮಾಡಿ "ವಂದೇಮಾತರಂ" ಹಾಡುತ್ತಾ ಬೀದಿಯಲ್ಲಿ ತಿರುಗಿದರು. ಬಂಗಾಳದ ಎರಡು ಭಾಗಗಳ ಐಕ್ಯತೆಯ ಗುರ್ತಿಗಾಗಿ ಪ್ರಜೆಗಳು ಒಬ್ಬರಿಗೊಬ್ಬರು ರಾಖಿ ಕಟ್ಟಿಕೊಂಡರು. ಆ ದಿನ ಸಾಯಂಕಾಲ 75,000 ಮಂದಿ ಪ್ರಜೆಗಳು ಹಾಜರಾಗಿ ಎರಡು ಬಹಿರಂಗ ಸಭೆಗಳಲ್ಲಿ ಆನಂದ ಮೋಹನ್ ಬೋಸ್, ಸುರೇಂದ್ರನಾದ್ ಬೆನರ್ಜಿ ಉಪನ್ಯಾಸವನ್ನು ಕೊಟ್ಟರು.



*ಬಕ್ಕಿಮ್ ಚಂದ್ರ ಚಟರ್ಜಿ*

SCERT TELANGANA

## ಮಚಲೀ ಪಟ್ನದಿಂದ ಕೃಷ್ಣಾ ಪತ್ರಿಕೆ



ಮುಟ್ನೂರಿ ಕೃಷ್ಣರಾವ್

ಕೃಷ್ಣ ಪತ್ರಿಕೆಯನ್ನು 1902ರಲ್ಲಿ ಮಚಲೀ ಪಟ್ನದಲ್ಲಿ ಸ್ಥಾಪಿಸಿದರು. ಅದನ್ನು ಸ್ಥಾಪಿಸಿದವರಲ್ಲಿ ಮುಟ್ನೂರಿ ಕೃಷ್ಣಾರಾವು ಒಬ್ಬರು. ಆತನು 1902 ರಲ್ಲಿ ಆ ಪತ್ರಿಕೆಯಲ್ಲಿ ಉಪ ಸಂಪದಕನಾಗಿ ಸೇರಿದನು. 1907 ರಲ್ಲಿ ಅದರ ಸಂಪಾದಕನಾಗಿ 1945 ರಲ್ಲಿ ಆತನು ಮರಣ ಹೊಂದುವವರೆಗೆ ಆ ಪತ್ರಿಕೆಗಾಗಿ ಕೆಲಸ ಮಾಡಿದನು. ಭಾರತ ದೇಶದ ಸ್ವಾತಂತ್ರ್ಯ ಚಳುವಳಿ ಎಲ್ಲ ವಿಧವಾಗಿಯೂ ಅಂದರೆ ವಂದೇ ಮಾತರಂ ಚಳುವಳಿ, ಹೋಂ ರೂಲ್ ಚಳುವಳಿ, ಅಸಹಕಾರ ಚಳುವಳಿ, ಶಾಸನೋಲ್ಲೊಂಘನೆ ಚಳುವಳಿ, ಕ್ವಿಟ್ ಇಂಡಿಯಾ ಚಳುವಳಿ, ಯಂತಹವುಗಳನ್ನು ಪತ್ರಿಕೆ ಪ್ರಚಾರ ಮಾಡಿತು. ಕೃಷ್ಣಾ ಪತ್ರಿಕೆ ಪಟ್ಟಣದಲ್ಲಿ ವಿದ್ಯವಂತರನ್ನಲ್ಲದೇ ಹಳ್ಳಿಗಳಲ್ಲಿ ಸಾಮಾನ್ಯ ಜನರನ್ನು ಸಹಾ ಪ್ರಬಾವಿತಗೊಳೆಸಿತು ಪತ್ರಿಕೆ ಅದರ ಸಂಪಾದಕನು ಬ್ರಿಟೀಷ್ ಆಳ್ವಿಕೆದಾರರ ಆಗ್ರಹಕ್ಕೆ ಬಹಳ ಸಾರಿ ಗುರಿಯಾದರು.

## ಮೊದಲನೇ ಪ್ರಪಂಚ ಯುದ್ಧ - 1914 to 1919

1914 ರಲ್ಲಿ ಮೊದಲನೇ ಪ್ರಪಂಚ ಯುದ್ಧ ಪ್ರಾರಂಭವಾಯಿತು. ಇದರಲ್ಲಿ ಬಿಟನ್, ಪ್ರಾನ್ಸ್, ರಷ್ಯಾ ಒಂದು ಕಡೆಯಾದರೆ, ಜರ್ಮನೀ ಅದರ ಮಿತ್ರ ದೇಶಗಳು ಮತ್ತೊಂದು ಕಡೆ ಸೇರಿದವು. ಈ ಯುದ್ಧ ಐದು ವರ್ಷಗಳ ವರೆಗೆ ನಡೆಯಿತು. ಇದರಲ್ಲಿ ಅಂತಿಮವಾಗಿ ಜರ್ಮನಿ ಓಡಿ ಹೋಯಿತು. ಈ ಯುದ್ಧ ಕಾರಣವಾಗಿ ಅದಕ್ಕೆ ಮೊದಲು ಎಂದೂ ಕಂಡಯರಿದ ವಿಧ್ವಂಸ ನಡೆಯಿತು. ಪ್ರಜೆಗಳು ಎಷ್ಟೋ ಕಷ್ಟಗಳಿಗೆ ಗುರಿಯಾದರು, ಯುದ್ಧಮುಗಿದ ನಂತರ ಯೂರೋಪಿನಲ್ಲಿ ಕ್ರಾಂತಿ ಯುಗ ಪ್ರಾರಂಭವಾಯಿತು. ರಷ್ಯಾದಲ್ಲಿ ಮಿತವಾದಿಗಳ ಕ್ರಾಂತಿ ವಿಜಯ ಸಾಧಿಸಿತು. ಕಮ್ಯೂನಿಸ್ಟ್‌ಗಳ ನೇತೃತ್ವದಲ್ಲಿ ರೈತವರ್ಗ ಕಾರ್ಮಿಕ ವರ್ಗ, ಸೈನಿಕರು, ಚಕ್ರವರ್ತಿಯನ್ನು ತೊಲಗಿಸಿದರು. ಜಮೀನು ದಾರರನ್ನು ಭೂಮಿಗಳು, ಕಾರ್ಖಾನೆಗಳು ವ್ಯಕ್ತಿಗತ ಆಸ್ತಿಯಾಗಿರುವುದನ್ನು ರದ್ದು ಮಾಡಿದರು. ಅವರು ಎಲ್ಲಾ ದೇಶಗಳ ಮಧ್ಯ ಸಮಾನತೆ ಇರಬೇಕೆಂದು ಬಯಸಿದರು. ವಲಸೆ ಆಳ್ವಿಕೆಯಲ್ಲಿ ನಲುಗುತ್ತಿರುವ ದೇಶಗಳ ಸ್ವಾತಂತ್ರ್ಯಕ್ಕೆ ಬೆಂಬಲಕೊಟ್ಟರು. ಭಾರತದೇಶದಲ್ಲಿ ತೆರಿಗೆಗಳು ಹೆಚ್ಚಿಸುವುದರಿಂದ ಮೂಲಕ ಯುದ್ಧಕ್ಕೆ ಬೇಕಾದ ಸಂಪನ್ಮೂಲ ಗಳನ್ನು ಸಂಗ್ರಹಿಸುವುದಕ್ಕೆ ಸೈನ್ಯಕ್ಕೆ ಬೇಕಾಗುವ ಆಹಾರ, ಇತರ ವಸ್ತುಗಳ ರಫ್ತುಗೆ ಬ್ರಿಟನ್ ಸಹಾಯ ಮಾಡುವುದರಿಂದ ಇಲ್ಲಿಯ ಪ್ರಜೆಗಳು ಎಷ್ಟೋ ಕಷ್ಟಗಳಿಗೆ ಗುರಿಯಾದರು.

ಇದರಿಂದ ಬ್ರಿಟೀಷ್ ಆಡಳಿತ ಬಗ್ಗೆ ಪ್ರಜೆಗಳ ಅಸಂತೃಪ್ತಿ ಮತ್ತಷ್ಟು ಹೆಚ್ಚಾಯಿತು. ರಷ್ಯ ಕ್ರಾಂತಿಯ ಬಗ್ಗೆ ಪ್ರಜೆಗಳಿಗೆ ತಿಳಿದುದರಿಂದ, ಪೀಡಿಸುವ ಆಡಳಿತಕಾರರನ್ನು ತೊಲಗಿಸ ಬಹುದೆಂದು ಎಲ್ಲರಿಗೂ ಸಮಾನತ್ವ, ನ್ಯಾಯ ಒದಗಿಸುವ ಸ್ವರಾಜವನ್ನು ನಿರ್ಮಿಸಬಹುದೆಂಬ ಭಾವಿಸಿದರು. ಭಾರತ ದೇಶದಲ್ಲಿ ಪ್ರಜಾಪ್ರಭುತ್ವ ಆಡಳಿತಕ್ಕಾಗಿ ಮಾಡುತ್ತಿರುವ ನ್ಯಾಯವಾದ ಕೋರಿಕೆಗಳನ್ನು ಬಿಟೀಷ್ ಸರ್ಕಾರ ಒಪ್ಪಿಕೊಂಡು ಸಂಸ್ಕರಣಗಳನ್ನು ಮಾಡುತ್ತದೆ ಎಂದು ಎಲ್ಲರೂ ಭಾವಿಸಿದರು. ಆದರೆ ಹಾಗೆ ನಡೆಯಲಿಲ್ಲ. ಇದಕ್ಕೆ ವಿರುದ್ಧವಾಗಿ ಬ್ರಿಟನ್ ತೀವ್ರವಾದ ಕಾನೂನುಗಳನ್ನು ಮಾಡಿತು. ಬ್ರಿಟೀಷ್ ತುಳಿದು ಹಾಕುವ ನೀತಿ ಹೆಚ್ಚಾಗುತ್ತಿದ್ದರೂ, ಪ್ರಜೆಗಳಲ್ಲಿ ಅಸಂತೃಪ್ತಿ ಹೆಚ್ಚಾಗುತ್ತಿರುವ ಸಮಯದಲ್ಲಿ ಮಹಾತ್ಮಗಾಂಧೀ ದಕ್ಷಿಣಾಫ್ರಿಕಾದಿಂದ ತಿರುಗಿ ಬಂದು ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದನು.

- ಮೊದಲನೇ ಪ್ರಪಂಚ ಯುದ್ಧ ಕುರಿತು ಸಾಮಾನ್ಯ ಪ್ರಜೆಗಳ ಮೇಲಾದ ಪ್ರಭಾವದ ಬಗ್ಗೆ ಮತ್ತಷ್ಟು ತಿಳಿದುಕೊಳ್ಳಿರಿ.
- ಆ ಸಮಯದಲ್ಲಿ ಯುದ್ಧವನ್ನು ವಿರೋಧಿಸುತ್ತಾ, ಇತರ ದೇಶಗಳೊಂದಿಗೆ ಶಾಂತಿಯನ್ನು ಪುನರುದ್ದರಿಸ ಬೇಕೆಂದು ತಮ್ಮ ಸರ್ಕಾರವನ್ನು ಕೊರುತ್ತಾ ಪ್ರಜೆಗಳು ದೊಡ್ಡ ಪ್ರಮಾಣ ದಲ್ಲಿ ಚಳುವಳಿಯನ್ನು ಮಾಡಿದರು. ಹಾಗೆ ಮಾಡುವುದು ಸರಿಯೇ?

SCERT TELANGANA

## ಮುಖ್ಯ ಪದಗಳು

| | | | |
|---|---|---|---|
| 1.ಸಾರ್ವಭೌಮಾಧಿಕಾರ | 2.ಜಾತಿ ಭೇದಭಾವ | 3. ತೀರ್ಮಾನ | 4. ಮಿತವಾದಿಗಳು |
| 5. ವಿನತಿ ಪತ್ರಗಳು / ಅರ್ಜಿಗಳು | | 6. ಸ್ವದೇಶಿ | 7. ಬಹಿಷ್ಕರಣ |
| 8. ಪಿಕೆಟಿಂಗ್ | 9. ಸ್ವರಾಜ್ಯ | 10. ನಿರಸನ | 11. ಅತಿವಾದ |

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ

1.ತಪ್ಪು ವಾಕ್ಯಗಳನ್ನು ಸರಿಪಡಿಸಿರಿ.

a. ಭಾರತ ರಾಷ್ಟ್ರೀಯ ಕಾಂಗ್ರೇಸ್ ಮೊದಲ ದಿನಗಳಲ್ಲಿ ಬೊಂಬಾಯಿ ಪ್ರಜೆಗಳು ಮಾತ್ರವೇ ಪಾಲ್ಗೊಳುತ್ತಿದ್ದರು.

b. ದೇಶದಲ್ಲಿ ವಿವಿಧ ಪ್ರಾಂತಗಳಲ್ಲಿ ಭಾರತ ಕೈಗಾರಿಕೋದ್ಯಮಿಗಳು ಕೈಗಾರಿಕೆಗಳನ್ನು ಸ್ಥಾಪಿಸಿದರು.

c. ಮೊದಲನೇ ಪ್ರಪಂಚ ಯುದ್ಧದ ನಂತರ ಭಾರತ ದೇಶ ಪ್ರಜಾಪ್ರಭುತ್ವದೇಶವಾಗಿ ಬದಲಾಗುತ್ತದೆ ಎಂದು ಎಲ್ಲಾ ಪ್ರಜೆಗಳು ಆಶಿಸುತ್ತಾರೆ.

2. ಭಾರತ ರಾಷ್ಟ್ರೀಯ ಕಾಂಗ್ರೇಶ ಮಿತವಾದ, ಅತಿವಾದ ನಾಯಕರ ಮಧ್ಯ
ಅ) ಪ್ರಧಾನ ಕೋರಿಕೆಗಳು ಆ) ಪ್ರಜೆಗಳ ಸಮೀಕರಣಗಳ ದೃಷ್ಯಾ ಅವರ ಮಧ್ಯ ನಡೆಯುವ ಸಂಭಾಷಣೆಯನ್ನು ಊಹಿಸಿ ಬರೆಯಿರಿ.

3. ಈ ಅಧ್ಯಾಯ ಓದಿದ ನಂತರ ರಾಷ್ಟ್ರೀಯ ಚಳುವಳಿ ಮೊದಲನೆ ಹಂತದಲ್ಲಿ ಹೆಚ್ಚಾಗಿ ಓದಿಕೊಂಡ ಭಾರತೀಯರ ಪಾಲ್ಗೊಂಡಿದ್ದಾರೆಂದು ಮರಿಯಮ್ಮ ಅಭಿಪ್ರಾಯಪಟ್ಟಳು, ಅವರ ಭಾವನೆಗಳು ಬಹಳಷ್ಟು ಮಟ್ಟಿಗೆ ಪಾಶ್ಚಾತ್ಯ ಪ್ರಭಾವದಿಂದ ಏರ್ಪಟ್ಟಿವೆ ಎಂದು ಸಹಾ ಅಂದುಕೊಳ್ಳುತ್ತಿದ್ದಾಳೆ. ಅವಳ ಅಭಿಪ್ರಾಯಕ್ಕೆ ನೀವು ಏಕೀಭಮಿಸುತ್ತೀರಾ? ನಿಮ್ಮ ಕಾರಣಗಳನ್ನು ತಿಳಿಸಿರಿ.

4. ಭಾರತ ದೇಶದ ಮೇಲೆ ಬ್ರಿಟೀಷರ ಆಡಳಿತ ಅರ್ಥಿಕ ಪ್ರಭಾವವನ್ನು ಏಕೆ ಅರ್ಥಮಾಡಿಕೊಳ್ಳಬೇಕು ?

5. ಸ್ವದೇಶಿ ಅಂದರೆ ನೀವು ಏನು ಅರ್ಥ ಮಾಡಿಕೊಂಡಿದ್ದೀರಿ ? ಅದರಿಂದ ಪ್ರಭಾವಿತಗೊಂಡ ಮುಖ್ಯವಾದ ರಂಗಗಳು ಯಾವುವು?

6. ಬೆಂಗಾಲ್ ವಿಭಜನೆಗೆ ದೇಶದಲ್ಲಿಯ ವಿವಿಧ ಪ್ರಾಂತಗಳ ಪ್ರಜೆಗಳು ಹೇಗೆ ಸ್ಪಂದಿಸುತ್ತಿದ್ದಾರೆ ?

7. ಭಾರತದೇಶ ಪಟದಲ್ಲಿ ಈ ಕೆಳಗಿವುಗಳನ್ನು ಗುರ್ತಿಸಿರಿ.
1. ಕಲಕತ್ತಾ(ಕೊಲ್‌ಕತಾ) 2. ಮದ್ರಾಸ್(ಚೆನ್ನೈ) 3. ಬೊಂಬಾಯಿ(ಮುಂಬಯಿ) 4. ಲಕ್ನೋ

8. ಪ್ರಪಂಚ ಪಟದಲ್ಲಿ ಈ ಕೆಳಗಿವುಗಳನ್ನು ಗುರ್ತಿಸಿರಿ.
1. ಬ್ರಿಟನ್ 2. ಫ್ರಾನ್ಸ್ 3. ರಷ್ಯಾ 4. ಜರ್ಮನಿ

9. ನಮ್ಮ ದೇಶಕ್ಕಾಗಿ ತಿಲಕ್, ಭಗತ್‌ಸಿಂಗ್, ಗಾಂಧೀಜಿ, ಸುಭಾಷ್ ಚಂದ್ರಬೋಸ್, ರಂತಹ ನಾಯಕರು ಜೀವನಗಳನ್ನು ತ್ಯಾಗ ಮಾಡಿದ್ದಾರೆ.
ಅವರು ತಮ್ಮ ಜೀವನಗಳನ್ನು ದೇಶಕ್ಕಾಗಿ ತ್ಯಾಗ ಮಾಡದಂತೆ ಇದ್ದಿದ್ದರೆ ಏನಾಗುತ್ತಿತ್ತು?

10. ಈ ನಡುವೆ ನಿಮ್ಮ ಭಾಗದಲ್ಲಿ ಏನಾದರೂ ಚಳುವಳಿಗಳು ನಡೆದಿವೆಯಾ ? ಏಕೆ ?

### ಪ್ರಾಜೆಕ್ಟು ಕೆಲಸ :

1. ಭಾರತ ರಾಷ್ಟ್ರೀಯ ಚಳುವಳಿಯಲ್ಲಿ ಪಾಲ್ಗೊಂಡ ರಾಷ್ಟ್ರೀಯ ನಾಯಕರ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಮ್‌ನ್ನು ತಯಾರಿಸಿರಿ. ಅದರ ಮೇಲೆ ಒಂದು ನಿವೇದಿಕೆಯನ್ನು ಪ್ರದರ್ಶಿಸಿರಿ.

SCERT TELANGANA

# 11 B ರಾಷ್ಟ್ರೀಯ ಚಳುವಳಿ : ಕೊನೆಯ ಹಂತ 1919-1947

## ಮಹಾತ್ಮಗಾಂಧಿ ಆಗಮನ

1915ರಲ್ಲಿ ಗಾಂಧೀಜಿ ದಕ್ಷಿಣಾಫ್ರಿಕಾದಿಂದ ಭಾರತ ದೇಶಕ್ಕೆ ಮರಳಿಬಂದರು. ಅಲ್ಲಿ ಜಾತಿ ಭೇಧಭಾವಕ್ಕೆ ವಿರುದ್ಧವಾಗಿ ಅಹಿಂಸಾ ಮಾರ್ಗದಿಂದ ಕೂಡಿದ ಸತ್ಯಾಗ್ರಹಗಳಲ್ಲಿ ಭಾರತೀಯ ಪ್ರಜೆಗಳನ್ನು ನಡೆಸಿ ಗೌರವ ಪ್ರದವಾದ ನಾಯಕನಾಗಿ ಹೆಸರು ಪಡೆದನು. ಅಂತರ್ಜಾತೀಯ ಹೆಸರುವಾಸಿಯಾದನು. ದಕ್ಷಿಣ ಆಫ್ರಿಕಾದಲ್ಲಿ ಆತನು ನಡೆಸಿದ ಚಳುವಳಿಯ ಕಾರಣದಿಂದ ಎಲ್ಲ ವಿಧವಾದ ಭಾರತೀಯರೊಂದಿಗೆ ಹಿಂದುಗಳು, ಮುಸ್ಲೀಮರು, ಪಾರ್ಷಿಗಳು, ಕ್ರಿಷ್ಟಯನ್ನರು, ಗುಜರಾತಿಗಳು, ತಮಿಳರು, ಉತ್ತರ ಭಾರತೀಯರು, ಶ್ರೀಮಂತ ವ್ಯಾಪಾರಸ್ಥರು, ನ್ಯಾಯವಾದಿಗಳು, ಕಾರ್ಮಿಕರು ಎಲ್ಲರೊಂದಿಗೆ ಅವರಿಗೆ ಪರಿಚಯವಾಯಿತು.

ಭಾರತ ದೇಶದಲ್ಲಿ ಮಹಾತ್ಮಗಾಂಧೀ ದೇಶವೆಲ್ಲಾ ಸುತ್ತಿ, ಪ್ರಜೆಗಳನ್ನು, ಅವರ ಪರಿಸ್ಥಿತಿಗಳನ್ನು ಅವಸರಗಳನ್ನು ಅರ್ಥ ಮಾಡಿಕೊಳ್ಳುತ್ತಾ ಮೊದಲನೇ ವರ್ಷವನ್ನು ಕಳೆದರು. ಮೊದಲು ಆತನ ಚಂಪಾರಣ್ಯ, ಖೇಡಾಗಳಲ್ಲಿ ಅಧಿಕ ತೆರಿಗೆ ದರೋಡೆ ಮಾಡುವ ವಿಧಾನಕ್ಕೆ ವಿರುದ್ಧವಾಗಿ ಹೋರಾಡುತ್ತಿರುವ ರೈತರ ಹೋರಾಟಕ್ಕೆ ನಾಯಕತ್ವ ವಹಿಸಿದನು. ಅಹ್ಮದಾಬಾದ್‌ನಲ್ಲಿ 1918 ರಲ್ಲಿ ನಡೆದ ಮಿಲ್ಲು ಕಾರ್ಮಿಕರ ಚಳುವಳಿಗೆ ವಿಜಯವಂತವಾಗಿ ನಾಯಕ ತ್ವವವನ್ನು ವಹಿಸಿದನು.


ಗಾಂಧೀಜಿ

ಜೀವನವೆಲ್ಲ ಅವರೊಂದಿಗೆ ಸೇರಿ ಕೆಲಸ ಮಾಡಿದ ರಾಜೇಂದ್ರ ಪ್ರಸಾದ್, ವಲ್ಲಭಾಯ್ ಪಟೇಲ್ ರಂತಹ ಅನೇಕ ನಾಯಕರೊಂದಿಗೆ ಗಾಂಧೀಜಿಗೆ ಈ ಚಳುವಳಿಯಿಂದ ಪರಿಚಯ ಏರ್ಪಟ್ಟಿತು. 1919-1922 ರ ಮಧ್ಯ ಗಾಂಧೀಜಿ ನಿರ್ವಹಿಸಿದ ಚಳುವಳಿಯ ಮೇಲೆ ಪ್ರಸ್ತುತದೃಷ್ಟಿಕೇಂದ್ರೀಕರಿಸೋಣ.

## ರೌಲತ್ ಕಾನೂನು ಜಲಿಯನ್‌ವಾಲಾಬಾಗ್ ಹತ್ಯಾಕಾಂಡ

ಮಹಾತ್ಮಗಾಂಧೀಜಿ ಕಾಂಗ್ರೆಸ್‌ನಲ್ಲಿ ಯಾವ ವರ್ಗಕ್ಕೆ ಸೇರದೆ ತಾನೇ ಸ್ವತಃ ರಾಜಕೀಯ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತಿದ್ದನು, ರಾಷ್ಟ್ರೀಯ ರಾಜಕೀಯದಲ್ಲಿ ಅವರು ಒಂದು ಸ್ಥಾನವನ್ನು ಏರ್ಪಡಿಸಿಕೊಂಡನು. ಈ ಕ್ರಮದಲ್ಲಿ ಆತನು 1917 ರಲ್ಲಿ ಚಂಪಾರಣ್ಯ ಆಂದೋಳನ,(ಚಳುವಳಿ) 1918 ರಲ್ಲಿ ಖೈರಾ ಉಪವಾಸ ಸತ್ಯಾಗ್ರಹಗಳು, 1919ರಲ್ಲಿ ಅಹ್ಮದಾಬಾದ್ ನೂಲು ಮಿಲ್ಲು ಕಾರ್ಮಿಕರ ಮುಷ್ಕರದಂತಹ ಕಾರ್ಯಕ್ರಮಗಳನ್ನು ಕೈಗೊಂಡನು. ಅತಿ ಸ್ವಲ್ಪ ಕಾಲದಲ್ಲೇ ಆತನು ಅತ್ಯಂತ ಜನಮನ್ನಣೆ ಪಡೆದ ವ್ಯಕ್ತಿಯಾಗಿ ರಾಜಕೀಯ ಕಾರ್ಯಕಲಾಪಗಳಿಗೆ ಕೇಂದ್ರ ಬಿಂದುವಾದನು. 1919ರಲ್ಲಿ ಬ್ರಿಟೀಷ್ ಸರ್ಕಾರ ಮಾಡಿದ ರೌಲತ್ ಕಾನೂನಿಗೆ ವಿರುದ್ಧವಾಗಿ ಸತ್ಯಾಗ್ರಹಕ್ಕೆ ಕರೆ ನೀಡಿದನು. ಭಾವ ಪ್ರಕಟಣೆ, ಸ್ವತಂತ್ರದಂತಹ ಮೂಲಭೂತ ಹಕ್ಕುಗಳಿಗೆ ತಂದಿರುವ ಪೋಲಿಸರಿಗೆ ಅಧಿಕಾರಗಳನ್ನು ಈ ಕಾನೂನು ನೀಡಿತು. ಯಾರಾದರೂ ಉಗ್ರವಾದಿ ಎಂದು ಪೋಲೀಸರಿಗೆ ಅನುಮಾನ ಬಂದರೆ, ಅವರನ್ನು ಬಂಧಿಸಿ ಯಾವ ವಿಧವಾದ ವಿಚಾರಣೆ ಇಲ್ಲದಂತೆ ಜೈಲಿನಲ್ಲಿ ಇಡಬಹುದು. ಒಂದು ವೇಳೆ ವಿಚಾರಣ ನಡೆಸಿದರೂ ಅದು ರಹಸ್ಯವಾಗಿ ನಡೆದು, ತನಗೆ ವಿರುದ್ಧವಾಗಿ ಸಾಕ್ಷಿಗಳು (ರುಜುವುಗಳು) ಏನಾದರೂ ಇವೆಯೇ ಎಂಬ ಆರೋಪಣಕ್ಕೆ ಗುರಿಯಾದ ವ್ಯಕ್ತಿಗೆ ಸಹ ಗೊತ್ತಾಗದಂತೆ ಮಾಡುತ್ತಾರೆ. ಪ್ರಜೆಗಳ ಮೂಲಭೂತ ಸ್ವತಂತ್ರ್ಯವನ್ನು ತೆಗೆದು ಹಾಕುವ ಹಕ್ಕು ಸರ್ಕಾರಕ್ಕೆ ಇಲ್ಲವೆಂದು ಮಹಾತ್ಮಗಾಂಧೀಜಿ, ಮಹಮ್ಮದ್ ಅಲೀಜಿನ್ನಾ ಇತರ ನಾಯಕರು ಭಾವಿಸಿದರು. ಇದು ಬಹಳ 'ನಿರಂಕುಶತ್ವ' 'ರಾಕ್ಷಸ' ಕಾನೂನು ಎಂದು ಅವರು ವಿಮರ್ಶಿಸಿದರು. 1919 ಏಪ್ರೀಲ್ 6 ರಂದು ಈ ಕಾನೂನಿಗೆ ವಿರುದ್ಧವಾಗಿ ಭಾರತ ಪ್ರಜೆಗಳನ್ನು ಅಹಿಂಸಾತ್ಮಕರೆಂದು ಆ ದಿನ ಹರ್ತಾಳ್ ನಡೆಸಿ ಪ್ರಾರ್ಥನೆ, ಗೌರವ ಭಂಗ ದಿನವಾಗಿ ನಿರ್ವಹಿಸಿರೆಂದು ಭಾರತ ದೇಶದ ಪ್ರಜೆಗಳನ್ನು ಗಾಂಧೀಜಿ ಕೋರಿದನು. ಚಳುವಳಿಯನ್ನು ಪ್ರಾರಂಭಿಸುವುದಕ್ಕೆ ಸತ್ಯಾಗ್ರಹ ಸಭೆಗಳು ಏರ್ಪಾಟು ಮಾಡಿದರು. ಮುಖ್ಯವಾಗಿ ಪಟ್ಟಣಗಳಿಗೆ ಪರಿಮಿತವಾಗಿದ್ದರೂ ಬ್ರಿಟೀಷ್ ಸರ್ಕಾರಕ್ಕೆ ವಿರುದ್ಧವಾಗಿ ಕೈಗೊಂಡ ಅಖಿಲ ಭಾರತ ಹೋರಾಟವಾಗಿ ರೌಲತ್

SCERT TELANGANA

### ಧಾರ್ಮಿಕತೆ, ಧಾರ್ಮಿಕ ಸಂಸ್ಥೆಗಳು

ಎಲ್ಲರ ಪ್ರಯೋಜನಗಳ ಬಗ್ಗೆ ಅಲ್ಲದೆ ಒಂದು ಪ್ರತ್ಯೇಕ ಮತಸ್ಥರ ಪ್ರಯೋಜನೆಗಳನನು ಧಾರ್ಮಿಕ ಪ್ರೋತ್ಸಾಹಿಸುತ್ತದೆ. ಆ ಮತಸ್ಥರ ಪ್ರಯೋಜನೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಾಜ್ಯವನ್ನು , ಸರ್ಕಾರವನ್ನು ನಡೆಸಬೇಕೆಂದು ಅದು ನಂಬುತ್ತದೆ. ಇದಕ್ಕೆ ವಿರುದ್ಧವಾಗಿ ಸಣ್ಣ ಸಮೂಹಗಳಿಗಿಂತ ಜಾತಿ ದೊಡ್ಡ ದೆಂದು ಯಾವ ಮತಸ್ತರಲ್ಲದವರಿಗೂ ಸಹಾ ಎಲ್ಲರ ಪ್ರಯೋಜನೆಗಳನ್ನು ರಾಷ್ಟ್ರೀಯತಾವಾದ ಕೋರಿಕೊಳ್ಳುತ್ತದೆ. ಈ ವಾದವನ್ನು ಜಾತ್ಯಾತೀತತೆ ಎನ್ನುವರು. ಮತ ಸಂಬಂಧ ವ್ಯವಹಾರಗಳಲ್ಲಿ ಸರ್ಕಾರ ತಲೆ ಹಾಕಬಾರದು. ಅದೇ ರೀತಿ ಸರ್ಕಾರದಲ್ಲಿ ಮತಗಳು ತಲೆ ಹಾಕಬಾರದೆಂದು ಇದು ಭಾವಿಸುತ್ತದೆ. ಯಾವ ಧರ್ಮಕ್ಕೂ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡದೇ ಎಲ್ಲ ಧರ್ಮವನ್ನು ಸಮಾನವಾಗಿ ನೋಡಬೇಕು. ಈ ವಿಧವಾಗಿ ಜಾತ್ಯಾತೀತತೆ, ಧಾರ್ಮಿಕತೆಗಳು ವಿರುದ್ಧ ಅಭಿಪ್ರಾಯಗಳು ಹೊಂದಿವೆ. ಇದಕ್ಕೆ ಮೊದಲು ಹೇಳಿದಂತೆ ಧಾರ್ಮಿಕತೆ ಒಂದು ಪ್ರತ್ಯೇಕ ಧರ್ಮ ಪ್ರಯೋಜನಕ್ಕಾಗಿ ಶ್ರಮಿಸುತ್ತದೆ. ಆ ಧರ್ಮ ಅವಸರಗಳ ಪ್ರಕಾರ ಸರ್ಕಾರವೂ ಸಹಾ ನಡೆದುಕೊಳ್ಳಬೇಕೆಂದು ಕೋರುತ್ತದೆ.

ಒಂದು ಕಡೆ ರಾಷ್ಟ್ರೀಯ ಭಾವನೆಗಳು ಹೆಚ್ಚಾಗುತ್ತಿದ್ದರೆ, 20ನೇ ಶತಮಾನದ ಆರಂಭದಲ್ಲಿ ಭಾರತದೇಶದಲ್ಲಿ ಧಾರ್ಮಿಕ ಸಂಸ್ಥೆಗಳು ಹುಟ್ಟಿಬರುತ್ತಿವೆ. 1906 ರಲ್ಲಿ ಢಾಕಾದಲ್ಲಿ ಮುಸ್ಲೀಂ ಭೂಸ್ವಾಮಿಗಳು, ನವಾಬರು ಸೇರಿ ಅಖಿಲ ಭಾರತ ಮುಸ್ಲೀಂಲೀಗ್‌ನ್ನು ಏರ್ಪಾಟು ಮಾಡಿದರು. ಇದು ಬಂಗಾಳ ವಿಭಜನೆಯನ್ನು ಸಮರ್ಥಿಸಿತ್ತು. ಮುಸ್ಲೀಂಮರಿಗೆ ಪ್ರತ್ಯೇಕ ನಿಯೋಜಕ ವರ್ಗಗಳು ಬೇಕೆಂದು ಅದು ಕೋರಿತು. 1909 ರಲ್ಲಿ ಸರ್ಕಾರ ಇದಕ್ಕೆ ಒಪ್ಪಿ ಕೊಂಡಿತು. ವಿಧಾನ ಸಭೆಯಲ್ಲಿ ಕೆಲವು ಸ್ಥಾನಗಳನ್ನು ಮುಸ್ಲೀಮರಿಗೆ ಮೀಸಲಿಟ್ಟರು. ಮುಸ್ಲೀಮರ ಮತಗಳ ಮೂಲಕ ಇವರು ಆಯ್ಕೆಯಾಗುತ್ತಾರೆ. ತಮ್ಮ ಧರ್ಮ ಗುಂಪುಗಳಿಗೆ ಕೆಲವು ಪ್ರಯೋಜನೆಗಳನ್ನು ಪಡೆದುದರಿಂದ ರಾಜಕೀಯ ನಾಯಕರು ಅನುಚರ ವರ್ಗವನ್ನು ಏರ್ಪಡಿಸಿಕೊಳ್ಳುವಂತೆ ಇದು ಪ್ರೋತ್ಸಾಹಿಸಿತು.

ಹಿಂದೂಗಳನ್ನು ಐಕ್ಯತೆಗೊಳಿಸುವ ಉದ್ದೇಶದಿಂದ, ಇತರ ಧರ್ಮಕ್ಕೆ ಬದಲಾದವರನ್ನು ಪುನಃ ಹಿಂದೂಗಳಾಗಿ ಬದಲಾಯಿಸುವ ಉದ್ದೇಶದಿಂದ 1915ರಲ್ಲಿ ಹಿಂದೂ ಮಹಾ ಸಭೆ ಏರ್ಪಟ್ಟಿತು. ಪಂಡಿತ್ ಮದನ್‌ಮೋಹನ್ ಮಾಳವೀಯರಂತಹ ನಾಯಕರು ಇದಕ್ಕೆ ನೇತೃತ್ವವಹಿಸಿದರು. ಮುಸ್ಲೀಂ ಲೀಗ್, ಭಾರತ ದೇಶದಲ್ಲಿ ಇತರ ಧರ್ಮ ಬೃಂದಗಳಿಗೆ (ಗುಂಪುಗಳಿಗೆ ) ಉತ್ತರವಾಗಿ ಇವರು ಇದನ್ನು ಏರ್ಪಾಟು ಮಾಡಿದರು.

ಸತ್ಯಾಗ್ರಹವೆಂದು ಹೇಳಬಹುದು. 1919 ಏಪ್ರೀಲ್ 6 ರಂದು ದೇಶದಲ್ಲೆಲ್ಲಾ ಅನೇಕ ಪ್ರದರ್ಶನಗಳು, ಹರ್ತಾಳ್‌ಗಳು ನಡೆದವು. ಅವುಗಳನ್ನು ಬಗ್ಗುಬಡಿಯಲು ಸರ್ಕಾರ ಹಿಂಸಿಸುವುದಕ್ಕೂ ಸಹಾ ಹಿಂಜರಿಯಲಿಲ್ಲ. ಸರ್ಕಾರದ ದುಷ್ಕೃತ್ಯಗಳು ಮಿತಿಮಿರಿದಾಗ ಏಪ್ರಿಲ್ 13 ರಂದು ಪಂಜಾಬಿನಲ್ಲಿಯ ಅಮೃತ್‌ಸರ್ ದಲ್ಲಿ ನಡೆದ ಜಲಿಯನ್‌ವಾಲಾಬಾಗ್ ಮಾರಣಹೋಮ ಪ್ರಜೆಗಳು ನಿರ್ವಹಿಸುತ್ತಿರುವ ಶಾಂತಿಯುತ ಸಮಾವೇಶದ ಮೇಲೆ ಜನರಲ್ ಡಯ್ಯರ್ ಗುಂಡು ಹಾರಿಸಲು ಆದೇಶಿಸಿದನು. ಈ ತುಪಾಕಿನ ಗುಂಡಿಗೆ ಸುಮಾರು 400 ಜನ ಮರಣ ಮರಣ ಹೊಂದಿದರು. ಸಾವಿರಾರು ಮಂದಿ ಗಾಯಗೊಂಡರು. ಈ ಮಾರಣಹೋಮದ ಬಗ್ಗೆ ತಿಳಿದುಕೊಂಡ ರವೀಂದ್ರನಾಥ್ ಟಾಗೂರ್ ದೇಶ ಪ್ರಜೆಗಳ ನೋವವನ್ನು, ಕೋಪವನ್ನು ತಿಳಿಸುವುದಕ್ಕಾಗಿ ತನಗೆ ಕೊಟ್ಟಿದ್ದ 'ನೈಟ್‌ಹುಡ್'ನ್ನು ತ್ಯಜಿಸಿದನು.

ರೌಲತ್ ಸತ್ಯಾಗ್ರಹದಲ್ಲಿ ಬಿಟೀಷ್ ಆಡಳಿತಕ್ಕೆ ವಿರುದ್ಧವಾಗಿ ಹಿಂದುಗಳು, ಮುಸ್ಲಿಮರು ಕಲೆತು ಹೋರಾಡುವಂತೆ ಕೃಷಿ ಮಾಡಿದರು. ಮಹಾತ್ಮಗಾಂಧೀ ಸಹಾ ಇದನ್ನೇ ಕರೆ ನೀಡಿದನು - ಭಾರತ ದೇಶ ಅಂದರೆ ಅಲ್ಲಿಯೇ ವಾಸಿಸುತ್ತಿದ್ದ - ಹಿಂದುಗಳು, ಮುಸ್ಲಿಮರು, ಇತರ ಮತಗಳೆಲ್ಲರಿಗೂ ಸಂಬಂಧಪಟ್ಟಿದ್ದು ಎಂದು ಯಾವಾಗಲೂ ಹೇಳುತ್ತಿದ್ದರು. ನ್ಯಾಯವಾದ ಕೋರಿಕೆಗಳಿಗೆ ಹಿಂದುಗಳು, ಮುಸ್ಲೀಮರು ಒಬ್ಬರಿಗೊಬ್ಬರು ಬೆಂಬಲ ಕೊಡಬೇಕೆಂದು ಅವರು ಹೇಳಿದರು.

- ತೀವ್ರವಾದವನ್ನು ಬಗ್ಗು ಬಡೆಯಲು ಪೋಲಿಸರಿಗೆ ಇಂತಹ ಅಧಿಕಾರಗಳು ಕೊಡುವು ಸರಿಯಾದುದೇ?
- ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಇಂತಹ ಕಾನೂನುಗಳನ್ನು ಪ್ರಜೆಗಳು ಹೆಚ್ಚಾಗಿ ಏಕೆ ವಿರೋಧಿಸಿದರು.

SCERT TELANGANA

## ಖೀಲಾಫತ್ ಆಂದೋಳನ, ಅಸಹಕಾರ ಚಳುವಳಿ

ಇಂತಹ ನ್ಯಾಯವಾದ ಕೋರಿಕೆಗಳಲ್ಲಿ ಖಾಲಾಫತ್ ಒಂದು ಬ್ರಿಟನ್ 1920 ರಲ್ಲಿ ಕಠಿಣವಾದ ಒಪ್ಪಂದವನ್ನು ಟರ್ಕಿಯ ಸುಲ್ತಾನರ ಮೇಲೆ ಇಟ್ಟಿತು. ಜಲಿಯನ್ ವಾಲಾಬಾಗ್ ಹತ್ಯಾ ಕಾಂಡದ ರೀತಿಯಲ್ಲೆ ಪ್ರಜೆಗಳು ಇದರ ಬಗ್ಗೆ ತೀವ್ರ ವಿರೋಧವನ್ನು ವ್ಯಕ್ತ ಪಡಿಸದರು. ಮೊದಲಿನ ಒಟ್ಟೋಮಾನ್ ಸಾಮ್ರಾಜ್ಯದಲ್ಲಿ ಮುಸ್ಲಿಮರ ಪವಿತ್ರ ಸ್ಥಳಗಳ ಮೇಲೆ ನಿಯಂತ್ರಣ (ಅಧಿಕಾರ) ಖಲಿಫಾಗೆ ಇರಬೇಕೆಂದು ಭಾರತೀಯ ಮುಸ್ಲಿಮರು ಕೋರಿಕೊಂಡರು. ಖೀಲಾಫತ್ ಚಳುವಳಿಗೆ ನಾಯಕತ್ವ ವಹಿಸುತ್ತಿರುವ ಮಹಮ್ಮದ್ ಅಲಿ, ಷೌಕತ್ ಅಲಿಯರು ಪೂರ್ತಿ ಸ್ಥಾಯಿ ಅಸಹಕಾರ ಚಳುವಳಿ ಕೈಗೊಳ್ಳಬೇಕೆಂದು ಅಂದುಕೊಂಡರು.

ಗಾಂಧೀಜಿ ಅವರ ಕರೆಗೆ ಪೂರ್ತಿ ಬೆಂಬಲ ನೀಡಿದನು. ಪಂಜಾಬ್ ತಪ್ಪುಗಳು (ಜಲಿಯನ್‌ವಾಲಾ ಮಾರಣಹೋಮ) ಖಿಲಾಫತ್ ತಪ್ಪುಗಳಿಗೆ ವಿರುದ್ಧವಾಗಿ ಚಳುವಳಿ ಕೈಗೊಂಡು ಸ್ವರಾಜ್ಯವನ್ನು ಕೋರಬೇಕೆಂದು ಕಾಂಗ್ರೇಸ್‌ನ ಮೇಲೆ ಆತನು ಒತ್ತಾಯಿಸಿದನು. 1920 ರಲ್ಲಿ ನಾಗ್‌ಪೂರ್‌ದಲ್ಲಿ ಜರುಗಿದ ಕಾಂಗ್ರೇಸ್ ಸಮಾವೇಶದಲ್ಲಿ ಗಾಂಧೀಜಿ ಕಾಂಗ್ರೆಸ್ ನಾಯಕನಾಗಿ ಬೆಳಕಿಗೆ ಬಂದನು. ಈ ಸಮಾವೇಶದಲ್ಲಿ ಕಾಂಗ್ರೇಸ್ ಉದ್ದೇಶ ಶಾಂತಿಯಿಂದ ಕಾನೂನಿನ ಮಾರ್ಗದ ಮೂಲಕ ಸ್ವರಾಜ್ಯವನ್ನು ಸಾಧಿಸಬೇಕೆಂದು ಹೇಳಿದನು. ಸ್ವರಾಜ್ಯ ಸ್ಥಾಪನೆಗೆ ಅಸಹಕಾರವೇ ಮಾರ್ಗವೆಂದು ಅನುಮೋದಿಸಿದರು..

1921-22ರ ಹೊತ್ತಿಗೆ ಅಸಹಕಾರ ಚಳುವಳಿ ಉಲ್ಬಣಗೊಂಡಿತು. ಸರ್ಕಾರ ನಡೆಸುತ್ತಿರುವ ಪಾಠಶಾಲೆಗಳು, ಕಾಲೇಜುಗಳನ್ನು ಸಾವಿರಾರು ವಿದ್ಯಾರ್ಥಿಗಳು ಬಿಟ್ಟು ಬಿಟ್ಟರು. ಮೋತಿಲಾಲ್ ನೆಹ್ರೂ, ಸಿ.ಆರ್.ದಾಸ್, ಸಿ. ಗೋಪಾಲಾಚಾರಿ, ಅಸಫ್ ಅಲಿ ಇಂತಹ ಎಷ್ಟೋ ಮಂದಿ ನ್ಯಾಯವಾದಿಗಳು ತಮ್ಮ ವೃತ್ತಿಯನ್ನು ಬಿಟ್ಟುಬಿಟ್ಟರು. ಬ್ರಿಟೀಷನವರು ಕೊಟ್ಟಿರುವ ಬಿರುದುಗಳನ್ನು ತಿರುಗಿ ಕೊಟ್ಟುಬಿಟ್ಟರು. ಶಾಸನ ಸಭೆಗಳನ್ನು ಬಹಿಷ್ಕರಿಸಿದರು. ವಿದೇಶಿ ಬಟ್ಟೆಗಳನ್ನು ಊರಿನ ಬೀದಿಗಳಲ್ಲಿ ಕುಪ್ಪೆಯಾಗಿ ಹಾಕಿ ಬೆಂಕಿ ಹಚ್ಚಿ ಸುಟ್ಟುಬಿಟ್ಟರು. 1920-22 ಮಧ್ಯ ವಿಧೇಶಿ ವಸ್ತುಗಳ ಆಮದು ಗಣನೀಯವಾಗಿ ಕಡಿಮೆಯಾಯಿತು. ಪ್ರಜೆಗಳು ಚರಕಗಳ ಮೇಲೆ ನೂಲು ತೆಗೆಯಬೇಕೆಂದು ಗಾಂಧೀಜಿ ಚಳುವಳಿ ಯನ್ನು ಕೈಗೊಂಡರು. ಈ ವಸ್ತ್ರವನ್ನು ಖಾದಿ ಎನ್ನುವರು. ದೇಶವನ್ನು ಸ್ವಾವಲಂಬನೆಯ ಕಡೆಗೆ ನಡೆಸಬೇಕೆಂಬ ಕೋರಿಕೆ ಪ್ರತಿ ಮನೆಗೂ ಹರಡಿತು.



**ಚಿತ್ರ 11.(ಬಿ.) : ಭಾರತ ಜ್ಯಾತಿಯೋದ್ಯಮ ಕೊನೆಯ ಹಂತದಲ್ಲಿ ಚರಕವನ್ನು ಸ್ವದೇಶಕ್ಕೆ ಚಿಹ್ನೆಯಾಗಿ ಗಾಂಧೀಜಿ ಆರಿಸಿಕೊಂಡರು.**

ಆದರೆ ಇದೆಲ್ಲವೂ ಬೆಟ್ಟದ ಶಿಖರ ಭಾಗ ಮಾತ್ರವೇ ಆಗಿತು. ದೇಶದಲ್ಲಿ ಅನೇಕ ಪ್ರಾಂತಗಳು ವಿರೋಧ ವ್ಯಕ್ತಪಡಿಸಲು ಸಿದ್ದವಾಗಿದ್ದವು. ಉದಾಹರಣೆಗೆ ಆಂಧ್ರಪ್ರದೇಶ ದಲ್ಲಿ ಏನು ಜರುಗುತ್ತದೆಯೋ ನೋಡೋಣ.

ರಾಷ್ಟ್ರೀಯ ಕಾರ್ಯಕ್ರಮಗಳಿಗೆ ಗುಂಟೂರು ಜಿಲ್ಲೆ ಕೇಂದ್ರವಾಯಿತು. ಇದರಲ್ಲಿ ವಿದ್ಯಾರ್ಥಿಗಳೇ ಅಲ್ಲದೇ ವ್ಯಾಪಾರಸ್ಥರು ಗ್ರಾಮಗಳಲ್ಲಿ ರೈತರು ದೊಡ್ಡ ಪ್ರಮಾಣದಲ್ಲಿ ಪಾಲ್ಗೊಂಡರು. ಅಸಹಕಾರ ಚಳುವಳಿಯಲ್ಲಿ ಹೇಳಿಕೊಳ್ಳು ವಂತಹದ್ದು ಚೀರಾಲ-ಪೇರಾಲ ಚಳುವಳಿ. ಈ ಪಟ್ಟಣವನ್ನು ನಗರಆಡಳಿತವನ್ನಾಗಿ ಬದಲಾಯಿಸಿ ಪ್ರಜೆಗಳ ಮೇಲೆ ಹೆಚ್ಚು ತೆರಿಗೆಗಳನ್ನು ಹಾಕಿತು. ದುಗ್ಗಿರಾಲ ಗೋಪಾಲ ಕೃಷ್ಣಯ್ಯ ನಾಯಕತ್ವದಲ್ಲಿ 15,000 ಮಂದಿ ಪ್ರಜೆಗಳು ಈ ತೆರಿಗೆ ಕಟ್ಟುವುದಕ್ಕೆ ನಿರಾಕರಿಸಿ ಊರು ಬಿಟ್ಟುಹೋದರು. ಊರಿನ ಹೊರಗೆ ರಾಂನಗರ್ ಹೆಸರಿನಿಂದ ಹೊಸ ನಿವಾಸವನ್ನು ಏರ್ಪಡಿಸಿಕೊಂಡು, ಹನ್ನೊಂದು ತಿಂಗಳು ಅಲ್ಲಿಯೇ ಇದ್ದರು. ರೈತರು ಭೂಮಿ ತೆರಿಗೆಗಳನ್ನು ಕಟ್ಟದಂತೆ ಅಸಹಕಾರ ಚಳುವಳಿ ಯನ್ನು ದೊಡ್ಡ ಪ್ರಮಾಣದಲ್ಲಿ ಕೈಗೊಂಡರು. ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮಾಧಿಕಾರಿಗಳು ರಾಜಿನಾಮೆ ನೀಡಿದರು. 'ಗಾಂಧೀಜಿ ಸ್ವರಾಜ್ಯ ಬರುತ್ತದೆ, ಈ ಸರ್ಕಾರಕ್ಕೆ ತೆರಿಗೆಗಳನ್ನು ಕಟ್ಟುವುದಿಲ್ಲ 'ಎಂದು ಪ್ರಜೆಗಳು ಪ್ರಕಟಿಸಿದರು.

ಮತ್ತೊಂದು ಮುಖ್ಯವಾದ ಪರಿಣಾಮವೆಂದರೆ ಗುಂಟೂರು ಜಿಲ್ಲೆಯಲ್ಲಿಯ ಪಲ್ನಾಟಿ ತಾಲೂಕಿನಲ್ಲಿಯೂ, ಕಡಪ ಜಿಲ್ಲೆಯಲ್ಲಿಯ ರಾಯಚೋಟಿ ತಾಲೂಕಿನಲ್ಲಿಯೂ ನಡೆದ ಅರಣ್ಯ ಸತ್ಯಾಗ್ರಹ. ಅರಣ್ಯ ಶಾಖೆಗೆ ಹುಲ್ಲು ಮೇಯಿಸುವ ಹಣ ಕಟ್ಟದಂತೆ (Grazing fees) ದನಗಳನ್ನು ಮೇಯಿಸಲು ಕಳುಹಿಸತೊಡಗಿದರು. ಪಲ್ನಾಟಿನಲ್ಲಿ ಅನೇಕ ಗ್ರಾಮಗಳಲ್ಲಿ ಪ್ರಜೆಗಳು ಗಾಂಧೀ ರಾಜ್ಯವನ್ನು ಪ್ರಕಟಿಸಿ, ಪೋಲೀಸ್ ಗುಂಪಿನ ಮೇಲೆ ದಾಳಿ ಮಾಡಿದರು. ಪರತಂತ್ರ್ಯ

SCERT TELANGANA

ಆಳ್ವಿಕೆ ಕೋನೆಗೊಳ್ಳುತ್ತದೆಂದು, ಅಡವಿಗಳು ಪುನಃ ಗ್ರಾಮ ಪ್ರಜೆಗಳ ಅಧೀನದೊಳಗೆ ಬರುತ್ತವೆ ಎಂದು ಪ್ರಜೆಗಳು ನಂಬಿದರು. ಈ ಎರಡು ತಾಲೂಕುಗಳಲ್ಲಿ ಹೋರಾಟಗಳು ನಡೆಯುತ್ತಿರುವ ಸಮಯದಲ್ಲಿ ಅರಣ್ಯ ಶಾಖೆ ಕೆಲಸ ಮಾಡಲು ಸಾಧ್ಯವಾಗಲಿಲ್ಲ.

ಮೇಲೆ ತಿಳಿಸಿದ ಸಂಘಟನೆಗಳನ್ನು ನೋಡಿದರೆ ಗಾಂಧೀಜಿಯವರು ತಮ್ಮ ಬಡತನ, ಕಷ್ಟಗಳಿಂದ ವಿಮುಕ್ತಿಗೊಳಿ ಸುತ್ತಾನೆಂದು ಪ್ರಜೆಗಳು ನಂಬಿದ್ದಾರೆಂದು ತಿಳಿದು ಬರುತ್ತದೆ. ಗಾಂಧೀಜಿ ವರ್ಗ ವಿಭಜನೆಯಾಗದಂತೆ ವರ್ಗದ ಐಕ್ಯತೆಯನ್ನು ಕೋರಿದನು. ಆದಾಗ್ಯೂ ಭೂಮಿ ಇಲ್ಲದ ವ್ಯವಸಾಯ ಕೂಲಿಗಳು ಗಾಂಧೀಜಿ ತಮಗೆ ಭೂಮಿ ಕೊಡಿಸುತ್ತಾರೆಂದು, ಜಮೀನುದಾರರಿಗೆ ವಿರುದ್ಧ ಹೋರಾಟ ದಲ್ಲಿ ಸಹಕರಿಸುತ್ತಾನೆಂದೂ ರೈತರು ಭಾವಿಸಿದರು. ಕೆಲವು ಸಂದರ್ಭಗಳಲ್ಲಿ ತಾವು ಸಾಧಿಸಿದ ವಿಜಯಗಳನ್ನು ಸಾಧಾರಣ ಪ್ರಜೆಗಳು ಗಾಂಧೀಜಿಗೆ ಶ್ಲ್ಯಾಘಿಸಿದರು. ಉದಾಹರಣೆಗೆ ಉತ್ತರ ಪ್ರದೇಶದಲ್ಲಿ ಪ್ರತಾಪಗಡಗೆ ಸೇರಿದ ಪ್ರಜೆಗಳು ಒಂದು ದೊಡ್ಡ ಚಳುವಳಿ ನಡೆಸಿ, ಸಾಗುವಳಿದಾರರನ್ನು ಅನ್ಯಾಯ ವಾಗಿ ತೊಲಗಿಸುವುದನ್ನು ನಿಲ್ಲಿಸತೊಡಗಿದರು. ಆದರೆ ಗಾಂಧೀಜಿ ನಾಯಕತ್ವದಲ್ಲಿ ತಮ್ಮ ಕೋರಿಕೆಗಳ ಸಾಧಿಸಲ್ಪಟ್ಟಿವೆ ಎಂದು ಭಾವಿಸಿದರು. ಇನ್ನು ಕೆಲವು ಸಂಧರ್ಭಗಳಲ್ಲಿ ಗಾಂಧೀಜಿ ಹೆಸರು ಹೇಳಿ, ಆದಿವಾಸಿಗಳು ರೈತರು ಗಾಂಧೀಜಿ ಆದರ್ಶಗಳಿಗೆ ವಿರುದ್ಧವಾಗಿ ಕ್ರಮಗಳನ್ನು ಕೈಗೊಂಡರು.

- ಚೀರಾಲ-ಪೇರಾಲ ಚಳುವಳಿ ಕುರಿತು ಅರಣ್ಯ ಸತ್ಯಾಗ್ರಾಹ ಕುರಿತು ಮತಷ್ಟು ವಿವರಗಳು ತಿಳಿದುಕೊಳ್ಳಿರಿ. ಅವುಗಳ ಮೇಲೆ ಒಂದು ನಾಟಕ ತಯಾರು ಮಾಡಿ ತರಗತಿಯಲ್ಲಿ ಪ್ರದರ್ಶಿಸಿರಿ.

## 1922-1929 ರ ಮಧ್ಯ ಘಟನೆಗಳು

ಮಹಾತ್ಮಗಾಂಧಿ ಹಿಂಸಾತ್ಮಕ ಚಳುವಳಿಗಳಿಗೆ ವಿರದ್ಧವೆಂದು ನಿಮಗೆ ಗೊತ್ತು. 1922ರಲ್ಲಿ ಚೌರಿ ಚೌರಾದಲ್ಲಿ ರೈತರ ಗುಂಪು ಪೋಲೀಸ್ ಸ್ಟೇಷನ್‌ಗೆ ಬೆಂಕಿ ಇಟ್ಟಾಗ, ಅಸಹಕಾರ ಚಳುವಳಿಯನ್ನು ಅವರು ಅರ್ಧಾಂತರವಾಗಿ ನಿಲ್ಲಿಸಿ ಬಿಟ್ಟರು. ಆ ದಿನದ ಘಟನೆಯಲ್ಲಿ 22 ಮಂದಿ ಪೋಲಿಸರು ಮರಣ ಹೊಂದಿದರು. ಶಾಂತಿಯುತವಾಗಿ ನಡೆಯುತ್ತಿರುವ ಪ್ರದರ್ಶನಗಳ ಮೇಲೆ ಪೋಲಿಸರ ದಹನ ಕ್ರಿಯೆ ನಡೆಸುವುದರಿಂದ ಪ್ರಜೆಗಳು ಕೋಪಾವೇಶಗಳಿಗೆ ಗುರಿಯಾದರು.

ಅಸಹಕಾರ ಚಳುವಳಿ ಮುಗಿದ ನಂತರ ಗ್ರಾಮೀಣ ಪ್ರಾಂತಗಳಲ್ಲಿ ಕಾಂಗ್ರೇಸ್ ನಿರ್ಮಾಣಾತ್ಮಕ ಕಾರ್ಯಕ್ರಮ ಗಳನ್ನು ಕೈಗೊಳ್ಳ ಬೇಕೆಂದು ಗಾಂಧೀಜಿ ಅನುಚರರು (ಅನುಯಾಯಿಗಳು) ಭಾವಿಸಿದರು. ಸಿ.ಆರ್.ದಾಸ್, ಮೋತಿ ಲಾಲ್ ನೆಹರು ರಂತಹ ಇತರ ನಾಯಕರು ಕಾಂಗ್ರೇಸ್ ಚುನಾವಣೆಯಲ್ಲಿ ಪೋಟಿ ಮಾಡಿ, ವಿಧಾನ ಸಭೆಗೆ ಪ್ರವೇಶಿಸಿ. ಸರ್ಕಾರ ವಿಧಾನಗಳನ್ನು ಪ್ರಭಾವಿತಗೊಳಿಸ ಬೇಕೆಂದು ವಾದಿಸಿದರು. 1920 ರ ಮಧ್ಯ ಕಾಲದಲ್ಲಿ ಗಾಂಧೇಯ ವಾದಿಗಳು ಗ್ರಾಮಗಳಲ್ಲಿ ಕೈಗೊಂಡ ಸಾಮಾಜಿಕ ಕಾರ್ಯಕ್ರಮಗಳ ಮೂಲಕ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು. 1930ರಲ್ಲಿ ಶಾಸನೋಲ್ಲಂಘನ ಚಳುವಳಿ ಯನ್ನು ಪ್ರಾರಂಭಿಸುವುದಕ್ಕೆ ಇದು ಎಷ್ಟೋ ಉಪಯೋಗವಾಯಿತು.

1920ರ ಮಧ್ಯಕಾಲದಲ್ಲಿ ಎರಡು ಮುಖ್ಯವಾದ ಪರಿಣಾಮಗಳು ದಾರಿಮಾಡಿಕೊಂಡವು. ಒಂದು ಹಿಂದೂ ಸಾಂಸ್ಕೃತಿಕ ಸಂಸ್ಥೆಯಾದ ರಾಜ್ಯ ಸ್ವಯಂ ಸೇವಕ ಸಂಘ (ಆರ್.ಎಸ್.ಎಸ್.) ಏರ್ಪಡಿಸುವುದು, ಎರಡನೆಯದು ಭಾರತ ಕಮ್ಯೂನಿಷ್ಟ್ ಪಾರ್ಟಿ ಏರ್ಪಡಿಸುವುದು. ಭಾರತ ದೇಶ ಹೇಗೆ ಇರಬೇಕು ಎನ್ನುವುದರ ಮೇಲೆ ಈ ಎರಡು ಪಾರ್ಟಿಗಳಿಗೆ ಪೂರ್ತಿ ಬಿನ್ನವಾದ ಅಭಿಪ್ರಾಯಗಳು ಇವೆ. ನಿಮ್ಮ ಉಪಾಧ್ಯಾಯರ ಸಹಾಯದಿಂದ ಅವುಗಳ ಭಾವನೆ ಗಳನ್ನು ತಿಳಿದುಕೊಳ್ಳಿರಿ. ಈ ಕಾಲದಲ್ಲೆ ದಂಗೆಕಾರ ರಾಷ್ಟ್ರೀಯವಾದಿ ಭಗತ್‌ಸಿಂಗ್ ಚಳುವಳಿಗೈದನು.

## ಶಾಸನೋಲ್ಲಂಘನ ಚಳುವಳಿ : ಉಪ್ಪಿನ ಸತ್ಯಾಗ್ರಹ (1930-32)

ಜವಹರ್‌ಲಾಲ್ ನೆಹರು ರವರ ಅಧ್ಯಕ್ಷತೆಯಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೇಸ್ 1929 ರಲ್ಲಿ ಲಾಹೋರ್‌ನಲ್ಲಿ ಸಮಾವೇಶಗೊಂಡಿತು. ಈ ಸಮಾವೇಶದಲ್ಲಿ "ಸಂಪೂರ್ಣ ಸ್ವರಾಜ್ಯ" ಸಾಧಿಸುವುದೇ ತಮ್ಮ ಗುರಿ ಎಂದು ಕಾಂಗ್ರೇಸ್ ಪ್ರಕಟಿಸಿತು. ಅದನ್ನು ಸಾಧಿಸುವುದಕ್ಕೆ ಶಾಸನೊಲ್ಲಂಘನ ಚಳವಳಿ ಪ್ರಾರಂಭಿಸಿಬೇಕೆಂದು ತೀರ್ಮಾನಿಸಿತು. ಕಾಂಗ್ರೇಸ್ ನಲ್ಲಿಯ ವಾಮಪಕ್ಷ ಭಾವನೆಗಳನ್ನು ಹೊಂದಿದವರು ಪ್ರಮುಖ ಪಾತ್ರ ವಹಿಸಿ ರಾಷ್ಟ್ರಿಯ ಲಕ್ಷ್ಯವನ್ನು (ಗುರಿಗಳನ್ನು) ಕಾರ್ಯಕ್ರಮಗಳನ್ನು ರೂಪಿಸಿಕೊಂಡರು. ಈ ಉತ್ಸಾಹದಿಂದ

SCERT TELANGANA

ಕಾಂಗ್ರೇಸ್ ಕಾರ್ಯವರ್ಗವು ಜನವರಿ 26ರನ್ನು ಸಂಪೂರ್ಣ ಸ್ವರಾಜ್ಯ ದಿನವನ್ನಾಗಿ ಆಚರಿಸಬೇಕೆಂದು ನಿರ್ಣಯಿಸಿತು.

ಉಪ್ಪು ತಯಾರಿಸುವುದರ ಮೇಲೆ ಸರ್ಕಾರ ತೆರಿಗೆ ವಿಧಿಸುವುದ (ಹಾಕುವುದು) ರಿಂದ ಸಾಮಾನ್ಯ ಪ್ರಜೆಗಳು ಅದನ್ನು ಕೊಂಡುಕೊಳ್ಳದಷ್ಟು ಬೆಲೆಗಳು ಹೆಚ್ಚಾದವು. ಗುಜರಾತ್ ಸಮುದ್ರ ತೀರದಲ್ಲಿರುವ ದಂಡಿ ಎನ್ನುವ ಚಿಕ್ಕ ಊರಿನಲ್ಲಿ ಉಪ್ಪು ತಯಾರಿಸುವುದರ ಮೂಲಕ ಈ ಕಾನೂನನ್ನು ಉಲ್ಲಂಘಿಸಬೇಕೆಂದು 1930, ಮಾರ್ಚ್ 12 ರಂದು ಅಹ್ಮದಬಾದ್‌ನಲ್ಲಿಯ ಸಬರ್ಮತಿ ಆಶ್ರಮದಲ್ಲಿ ಗಾಂಧೀಜಿ ನಿರ್ಣಯವನ್ನು ತೆಗೆದುಕೊಂಡನು. ಮರುದಿನವೇ 78 ಮಂದಿ ಅನುಯಾಯಿಗಳೊಂದಿಗೆ ಗಾಂಧೀಜಿ ದಂಡಿಯಾತ್ರೆ ಪ್ರಾರಂಬಿಸಿದನು. ಸಬರ್ಮತಿ ಆಶ್ರಮದಿಂದ ದಂಡಿವರೆಗೆ ಇರುವ 375 ಕಿಲೋ ಮೀಟರುಗಳ ದೂರವನ್ನು 24 ದಿನಗಳಲ್ಲಿ ನಡೆದರು. ದಂಡಿಯಾತ್ರೆಯಲ್ಲಿ ಗಾಂಧೀಜಿಯವರ ಉಪನ್ಯಾಸಗಳ ಕುರಿತು, ಪ್ರಜೆಗಳ ಸ್ಪಂದನೆ ಕುರಿತು ದಿನ ಪತ್ರಿಕೆಗಳು ಪ್ರತಿದಿನ ವಾರ್ತೆಗಳನ್ನು ಪ್ರಕಟಿಸುತ್ತಿದ್ದವು. ಯಾತ್ರೆ ಮಾರ್ಗದಲ್ಲಿ ನೂರಾರು ಮಂದಿ ಗ್ರಾಮ ಅಧಿಕಾರಿಗಳು ತಮ್ಮ ಉದ್ಯೋಗಗಳಾಗಿ ರಾಜೀನಾಮೆ ಮಾಡಿದರು. 1930 ಏಪ್ರೀಲ್ 6 ರಂದು ದಂಡಿಗೆ ಸೇರಿಕೊಂಡ ಗಾಂಧೀಜಿ ಒಂದು ಹಿಡಿ ಉಪ್ಪು ತೆಗೆದು ಬ್ರಿಟೀಷ್ ಆಡಳಿತದಲ್ಲಿ, ಬ್ರಿಟೀಷ್ ಕಾನೂನುಗಳನ್ನು ಉಲ್ಲಂಘಿಸಿ ಭಾರತ ಪ್ರಜೆಗಳ ತಿರಸ್ಕರಣವನ್ನು ತಿಳಿಯಪಡಿಸಿದರು.




*ಚಿತ್ರ 11 B.1 : ಸ್ವಾತಂತ್ರ್ಯ ಚಳುವಳಿಗೆ ಸಂಬಂಧಿಸದ ಎರಡು ಚಿತ್ರಗಳು 1. ದಂಡಿ ಹತ್ತಿರ ಉಪ್ಪು ತೆಗೆಯುತ್ತಿರುವ ಗಾಂಧೀಜಿ. 2. ದರ್ಶನ್ ಉಪ್ಪು ಕಾರ್ಖಾನೆಯ ಮುಂದೆ ಕವಾತು ಮಾಡುತ್ತಿರುವ ಸರೋಜಿನ ನಾಯುಡು.*

ದೇಶದಲ್ಲೆಲ್ಲಾ ಪ್ರಜೆಗಳಲ್ಲಿ ಹೊಸ ಉತ್ಸಾಹ ತುಂಬಿಕೊಂಡಿತು. ದೇಶದಲ್ಲಿ ಅನೇಕ ಪ್ರಾಂತಗಳಲ್ಲಿ ಉಪ್ಪು ಕಾನೂನನ್ನು ಉಲ್ಲಂಘಿಸಿದರು. ಶಾಸನೋಲ್ಲಂಘನ ಚಳುವಳಿಯಲ್ಲಿ ಮಹಿಳೆಯರು ಸಹಾ ಪಾಲ್ಗೊಂಡಿದ್ದರು. ಒಂದು ಡಿಲ್ಲಿಯಲ್ಲೇ 1600 ಮಂದಿ ಮಹಿಳೆಯರು (ಸ್ತ್ರೀಯರು) ಜೈಲುಪಾಲಾದರು. ಈ ಚಳುವಳಿಯಲ್ಲಿ ಕೇವಲ ಉಪ್ಪು ಸತ್ಯಾಗ್ರಹಕ್ಕೆ ಸೀಮಿತ ವಾಗಲಲ್ಲ. ವಿದೇಶಿ ಬಟ್ಟೆ

ಸರಾಯಿ ಅಂಗಡಿಗಳ ಹತ್ತಿರ ಪಿಕೆಟಿಂಗ್ ನಡೆಸಿದರು. ಆ ವಸ್ತುಗಳನ್ನು ಸುಟ್ಟು ಹಾಕಿದರು. ಬ್ರಿಟೀಷ್ ಪಾಠಶಾಲೆಗಳು, ಕಾಲೇಜುಗಳು, ಉದ್ಯೋಗಗಳನ್ನು ಸಹಾ ಬಹಿಷ್ಕರಿಸಿದರು. ಈ ಚಳುವಳಿಯಲ್ಲಿ ಪ್ರಜೆಗಳು ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿದರು.

ಸರ್ಕಾರ ತೀವ್ರವಾಗಿ ಅಣಗಿಸಲು (ಬಗ್ಗು ಬಡಿಯಲು) ನಿರಾಯುಧರಾದ ಸ್ತ್ರೀ ಪುರುಷರು ಮೇಲೆ ಲಾಠಿಯನ್ನು ಪ್ರಯೋಗಿಸುವುದು, ಗುಂಡುಗಳನ್ನು ಹಾರಿಸುವುದನ್ನು ಪ್ರಾರಂಭಿಸಿದರು. ಗಾಂಧೀಜಿ, ಇತರ ಕಾಂಗ್ರೇಸ್ ನಾಯಕರೊಂದಿಗೆ ಸುಮಾರು 90,000ಕ್ಕೂ ಮೇಲ್ಪಟ್ಟು ಸತ್ಯಾಗ್ರಹಿಗಳು ಜೈಲು ಸೇರಿದರು. ಪೋಲೀಸರ ಗುಂಡಿನ ದಾಳಿಗೆ 110 ಮಂದಿ ಪ್ರಾಣಬಿಟ್ಟರು. 300ಕ್ಕೂ ಹೆಚ್ಚು ಮಂದಿ ಗಾಯಗೊಂಡರು. ಪತ್ರಿಕೆಗಳ ಮೇಲೆ ಅನೇಕ ನಿಬಂಧನೆಗಳನ್ನು ಹೇರಿತು. ಮುಸ್ಲೀಮರು, ಜಮೀನುದಾರರು ಇತರ ಮೈನಾರಿಟಿಗಳನ್ನು ತಮ್ಮ ಕಡೆಗೆ ತಿರುಗಿಸಿಕೊಳ್ಳುವುದರ ಮೂಲಕ, ಭಾರತೀಯರನ್ನು ಬೇರ್ಪಡಿಸಲು ಬ್ರಿಟೀಷ್ ಅಧಿಕಾರಿಗಳು ಪ್ರಯತ್ನಿಸಿದರು. ಖಾದಿ ಬಟ್ಟೆಗಳನ್ನು ಹಾಕಿಕೊಳ್ಳುವುದು.

ಅಸ್ಪೃಶ್ಯತೆಯನ್ನು ನಿರ್ಮೂಲಿಸುವಂತಹ ನಿರ್ಮಾಣಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದರ ಮೂಲಕ ದೇಶದಲ್ಲೇಲ್ಲಾ ಸಾಮಾಜಿಕ ಐಕ್ಯತೆಯನ್ನು ಸಾಧಿಸುವುದಕ್ಕೆ ನಾಯಕರು ಕೃಷಿ ಮಾಡಿದರು. ಗಾಂಧೀಜಿಯವರ ಕರೆಗೆ ಸ್ಪಂದಿಸಿ ಅಸಂಖ್ಯಾತ ಮಹಿಳೆಯರು ಬುರ್ಕಾ ಬಿಟ್ಟು ಈ ಚಳುವಳಿಯಲ್ಲಿ ಪಾಲ್ಗೊಂಡರು.

ಭಾರತ ಪ್ರಜೆಗಳೆಲ್ಲರೂ ಐಕ್ಯತೆಯಿಂದ ಹೋರಾಡಿದ ಪ್ರತಿಫಲವಾಗಿ 1935 ರಲ್ಲಿ ಭಾರತ ಸರ್ಕಾರ ಕಾನೂನು ಏರ್ಪಟ್ಟಿತು. ಇದರ ಪ್ರಕಾರ ರಾಜ್ಯಗಳಿಗೆ ಸ್ವಯಂ ಆಡಳಿತ ಲಭಿಸಿತು. ರಾಜ್ಯಗಳ ಶಾಸನ ಸಭೆಗಳಿಗೆ 1937ರಲ್ಲಿ ಚುನಾವಣೆಗಳು ನಿರ್ವಹಿಸಿದರು. 11 ರಾಜ್ಯಗಳಲ್ಲಿ ಏಳರಲ್ಲಿ ಕಾಂಗ್ರೆಸ್ ಸರ್ಕಾರ ಏರ್ಪಟ್ಟಿತು. ಕಾಂಗ್ರೇಸ್ ಸರ್ಕಾರಗಳು ಎರಡು ವರ್ಷ ಪೂರ್ತಿಯಾದ ನಂತರ ಅಂದರೆ 1939 ರಲ್ಲಿ ಎರಡನೇ ಪ್ರಪಂಚ ಯುದ್ಧ ಪ್ರಾರಂಭವಾಯಿತು. ಹಿಟ್ಲರನನ್ನು ವಿರೋಧಿಸುತ್ತಿದ್ದ ಕಾಂಗ್ರೇಸ್ ನಾಯಕರು ಯುದ್ಧದಲ್ಲಿ ಬ್ರಿಟನ್‌ಗೆ ಸಹಾಯ ಮಾಡಲು ಸಿದ್ಧಾರಾದರು. ಆದರೆ ಯುದ್ಧದ ನಂತರ ಭಾರತ ದೇಶಕ್ಕೆ ಸ್ವಾತಂತ್ರ್ಯವನ್ನು ಕೊಡಬೇಕೆಂದು ಕೋರಿದರು. ಈ ಕೋರಿಕೆಯನ್ನು ಬ್ರಿಟನ್ ತಿರಸ್ಕರಿಸಿತು. ಇದಕ್ಕೆ ಪ್ರತಿಫಲವಾಗಿ ಕಾಂಗ್ರೇಸ್ ಸರ್ಕಾರಗಳು ರಾಜಿನಾಮೆ ಮಾಡಿತು.

## ಕ್ವಿಟ್ ಇಂಡಿಯಾ ಚಳುವಳಿ -1942 ಮಾಡು ಇಲ್ಲವೇ ಮಡಿ (Do or Die)

ಭಾರತದೇಶದ ಪ್ರಜೆಗಳನ್ನು ಸಂಪತ್ತನ್ನು ಎರಡನೇ ಪ್ರಪಂಚ ಯುದ್ಧಕ್ಕೆ ಉಪಯೋಗಿಸಿಕೊಳ್ಳ ಬೇಕೆಂದು ಬ್ರಿಟನ್ ಭಾವಿಸಿತು. ಯುದ್ಧದಲ್ಲಿ ಬೆಂಬಲಕ್ಕೆ ಬದಲಾಗಿ ಭಾರತ ದೇಶಕ್ಕೆ ಸ್ವಯಂ ಆಡಳಿತ ಅಧಿಕಾರವನ್ನು ಕೊಡಬೇಕೆಂದು ಕಾಂಗ್ರೇಸ್ ಕೋರಿತು. ಈ ಕೋರಿಕೆಯನ್ನು ಒಪ್ಪಿಕೊಳ್ಳಲು ಯಾವುದೇ ಕಾರಣಕ್ಕೂ ಬ್ರಿಟನ್ ಸಿದ್ಧವಾಗಿರಲಿಲ್ಲ. 1942 ಆಗಸ್ಟ್ 8 ರಂದು ಬಾಂಬೆಯಲ್ಲಿ ಕಾಂಗ್ರೇಸ್ ಕಾರ್ಯವರ್ಗ ಸಮಾವೇಶ ಗೊಂಡು, ''ಭಾರತ ದೇಶದಲ್ಲಿ ಬ್ರಿಟೀಷ್ ಆಡಳಿತ ತಕ್ಷಣ ಕೊನೆಗಳ್ಳಬೇಕೆಂದು'' ಸ್ಪಷ್ಟವಾಗಿ ತೀರ್ಮಾನ ಮಾಡಿತು. ''ಕ್ವಿಟ್ ಇಂಡಿಯಾ'' ತೀರ್ಮಾನಿಸಿದ ನಂತರ ದೇಶ ಪ್ರಜೆಗಳನ್ನು ಉದ್ದೇಶಿಸಿ ಗಾಂಧೀಜಿ ಎಷ್ಟೋ

### ಎರಡನೇ ಪ್ರಪಂಚ ಯುದ್ಧ :

ನಾಜಿ ಪಾರ್ಟಿ ಹಿಟ್ಲರ್‌ನ ನೇತೃತ್ವದಲ್ಲಿ ಪ್ರಪಂಚವನ್ನೆಲ್ಲ ತನ್ನ ಆಧೀನದಲಲಿ ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ಬ್ರಿಟನ್, ಪ್ರಾನ್ಸ್‌ಸೋವಿಯಟ್ ರಷ್ಯಾ, ಇತರ ದೇಶಗಳ ಮೇಲೆ ಜರ್ಮನಿ ಯುದ್ಧ ಪ್ರಕಟಿಸಿತು. ಇಂಗ್ಲೆಂಡ್, ಪ್ರಾನ್ಸ್, ರಷ್ಯಾಗಳೊಂದಿಗೆ ಅಮೇರಿಕಾ ಕೈಗೊಂಡಿತು. (ಇವುಗಳನ್ನು ಮಿತ್ರ ಗುಂಪು ಎಂದು ಕರೆಯುತ್ತಾರೆ) ಜರ್ಮನಿ, ಜಪಾನ್, ಇಟಲಿ ದೇಶಗಳು ಬೆಂಬಲ ನೀಡಿದವು. ಮಾನವ ಚರಿತ್ರೆಯಲ್ಲೇ ಅತಿ ದಾರುಣವಾದ ಈ ಯುದ್ಧವು 1939 ರಲ್ಲಿ ಪ್ರಾರಂಭವಾಗಿ 1945 ರಲ್ಲಿ ರಷ್ಯಾ ಸೈನ್ಯಗಳು ಬೆರ್ಲಿನ್‌ನನ್ನು ತಮ್ಮ ಸ್ವಾಧೀನ ಪಡಿಸಿಕೊಂಡರಿಂದ, ಜಪಾನದಲ್ಲಿಯ ಹೀರೋಷಿಮಾ, ನಾಗಸಾಕಿಗಳ ಮೇಲೆ ಅಮೇರಿಕಾ, ಅಣುಬಾಂಬು ದಾಳಿ ನಡೆಸುವುದರಯೊಂದಿಗೆ ಮುಕ್ತಾಯ ವಾಯಿತು. ಪ್ರಜಾಪ್ರಭುತ್ವ ಸ್ವತಂತ್ರ ಪಕ್ಷದ ಕಡೆಗೆ ಇರುವ ಪ್ರಜೆಗಳೆಲ್ಲರೂ ಹಿಟ್ಲರನನ್ನು ವಿರೋಧಿಸಿ, ಮಿತ್ರ ಕೂಟಕ್ಕೆ ಬೆಂಬಲ ಕೊಟ್ಟರು. ಆದರೆ ಭಾರತ ದೇಶದಲ್ಲಿ ಅದೇ ಸಮಯದಲ್ಲಿ ಬ್ರಿಟೀಷ್ ಆಡಳಿತಗಾರರಿಗೆ ವಿರುದ್ಧವಾಗಿ ಹೋರಾಟ ನಡೆಯುತ್ತಿದ್ದರಿಂದ ಭಾರತೀಯರಲ್ಲಿ ಸಂದಿಗ್ದತೆಯನ್ನು ಸೃಷ್ಟಿಸಿತು.

SCERT TELANGANA

ಬೆಲೆ ಬಾಳುವ ಸಂದೇಶವನ್ನು ಕೊಟ್ಟನು. ಈ ಕ್ಷಣದಿಂದ ಪ್ರತಿಯೊಬ ಸ್ತ್ರೀ ಪುರುಷರು ತಮ್ಮನ್ನು ತಾವು ಸ್ವತಂತ್ರರೆಂದು ಪರಿಗಣಿಸಬೇಕು. ಸ್ವತಂತ್ರರಾಗಿರುವಂತೆ ವ್ಯವಹರಿಸಬೇಕು. ಸಂಪೂರ್ಣ ಸ್ವಾತಂತ್ರ್ಯಕ್ಕಲ್ಲದೇ, ಬೇರೆ ಯಾವುದಕ್ಕೂ ನಾನು ಸಿದ್ದವಾಗಿಲ್ಲ. ಎಲ್ಲರೂ ಚಳುವಳಿಯಲ್ಲಿ ಪಾಲ್ಗೊಂಡು ಭಾರತ ದೇಶವನ್ನು ವಿಮುಕ್ತಿ ಗೊಳಿಸೋಣ ಅಥವಾ ಆ ಪ್ರಯತ್ನದಲ್ಲೇ ಪ್ರಾಣಾರ್ಪಣೆ ಮಾಡೋಣ.

1942 ಆಗಸ್ಟ್ 9 ಉದಯದಲ್ಲೇ ಗಾಂಧೀಜಿ, ಪಟೇಲ್, ನೆಹರು, ಮೌಲಾನಾ ಅಜಾದ್, ಆಚಾರ್ಯ ಕೃಪಲಾನೀ, ರಾಜೇಂದ್ರ ಪ್ರಸಾದ್, ಮೊದಲಾದ ಅನೇಕ ಕಾಂಗ್ರೇಸ್ ನಾಯಕರನ್ನು ಸರ್ಕಾರ ಜೈಲುಪಾಲು ಮಾಡಿತು. ಇದರಿಂದ ದೇಶದಲ್ಲೆಲ್ಲಾ ಹರ್ತಾಳಗಳು ಮುಷ್ಕರಗಳು ಪ್ರದರ್ಶನಗಳ ರೂಪದಲ್ಲಿ ಪ್ರಜೆಗಳು ತಮ್ಮ ಅಸಂತೃಪ್ತಿಯನ್ನು ವ್ಯಕ್ತಪಡಿಸಿದರು. ದುರದೃಷ್ಟವಶಾತ್ ಚಳುವಳಿ ಹಿಂಸಾತ್ಮಕದ ಕಡೆಗೆ ತಿರಿಗಿತು. ಕಾರ್ಮಿಕ ವರ್ಗ ಕಾರ್ಖಾನೆಗಳನ್ನು ಬಹಿಷ್ಕರಿಸಿದರು. ಪೋಲೀಸ್ ಸ್ಟೇಷನ್‌ಗಳು, ಪೋಸ್ಟ್ ಆಫೀಸುಗಳು, ರೈಲ್ವೇ ಸ್ಟೇಷನ್‌ಗಳಂತಹ ಸರ್ಕಾರದ ಆಸ್ತಿಗಳ ಮೇಲೆ ವಿದ್ಯಾರ್ಥಿಗಳು ದಾಳಿ ನಡೆಸಿದರು. ಟೆಲಿಗ್ರಾಫ್, ಟೆಲಿಫೋನ್ ತಂತಿಗಳನ್ನು ಕತ್ತರಿಸಿ ಹಾಕಿದರು. ರೈಲ್ವೇ ಹಳಿಗಳನ್ನು ತೆಗೆದು ಹಾಕಿದರು. ಸರ್ಕಾರ ಕಾರ್ಯಾಲಯಗಳು, ವಾಹನಗಳು, ಸೈನಿಕ ವಾಹನಗಳು, ರೈಲ್ವೆ ಬೋಗಿಗಳನ್ನು ಸುಟ್ಟು ಹಾಕಿದರು. ಈ ಸಮಯದಲ್ಲಿ ಮದ್ರಾಸು,ಬೊಂಬಾಯಿ ತೀವ್ರವಾಗಿ ಪ್ರಭಾವಿತ ಗೊಂಡವು. ಉತ್ತರ ಪ್ರದೇಶ್, ಬಿಹಾರ್, ಒರಿಸ್ಸಾ, ಪಶ್ಚಿಮ ಬೆಂಗಾಲ್, ಮಹಾರಾಷ್ಟ್ರ, ಆಂಧ್ರಪ್ರದೇಶದಲ್ಲಿಯ ಕೆಲವು ಪ್ರಾಂತಗಳಲ್ಲಿ ಬ್ರಿಟೀಷ ಅಧಿಕಾರ ಕಾಣದಂತಾಯಿತು. 1942-44 ರ ಮದ್ಯ ಕಾಲದಲ್ಲಿ ಮಿಡ್ನಾಪೂರ್ ಪ್ರಜೆಗಳು ಸಮಾಂತರ ಸರ್ಕಾರವನ್ನು ಸ್ಥಾಪಿಸಿದರು. ಈ ಚಳಿವಳಿಯ ಫಲಿತವಾಗಿ 10 ಲಕ್ಷಗಳ ಪೌಂಡ್ ಬೆಲೆಬಾಳುವ ಆಸ್ತಿಗಳು ಧ್ವಂಸವಾದವು. 30 ಮಂದಿ ಪೋಲೀಸರು, 10 ಮಂದಿ ಸೈನಿಕರು ಮರಣ ಹೊಂದಿದರು. ಸರ್ಕಾರದ ದಬ್ಬಾಳಿಕೆಯಿಂದ ಅನೇಕ ಮಂದಿ ಪ್ರಜೆಗಳು ಮರಣ ಹೊಂದಿದರು. ಸಾವಿರಾರು ಜನರನ್ನು ಬಂಧಿಸಿದರು. 1943ರ ಕೊನೆಗೆ 90,000 ಕ್ಕೂ ಹೆಚ್ಚು ಪ್ರಜೆಗಳು ಜೈಲು ಪಾಲಾದರು. ಪೋಲೀಸರ ಗುಂಡಿನ ದಾಳಿಗೆ ಸಾವಿರಕ್ಕೂ ಹೆಚ್ಚು ಮಂದಿ ಬಲಿಯಾದರು. ಅನೇಕ ಪ್ರಾಂತಗಳಲ್ಲಿ ವಿಮಾನಗಳಿಂದ ಪ್ರಜೆಗಳ ಮೇಲೆ ಮಿಷನ್‌ಗನ್ ಗಳಿಂದ

## ಸುಭಾಷ್ ಚಂದ್ರಬೋಸ್ : ಐ.ಎನ್.ಎ.

ಸುಭಾಷ್ ಚಂದ್ರಬೋಸ್ ಸ್ವರಾಜ್ಯ ಚಳುವಳಿಕಾರರು. ಇವರು ರಾಷ್ಟ್ರೀಯ ಕ್ರಾಂತಿಕಾರರು. ಆತನು ರಾನೆ ಬಿಹಾರಿ ಬೋಸ್ ರವರ ಸಹಕಾರದೊಂದಿಗೆ ಬರ್ಮಾ, ಅಂಡಮಾನ್‌ಗಳಲ್ಲಿ ಭಾರತ ಜಾತೀಯ ಸೈನ್ಯವನ್ನು (ಐ.ಎನ್.ಎ) ಏರ್ಪಡಿಸಿದನು. ಐ.ಎನ್.ಎ. ನಲ್ಲಿ 60,000ಕ್ಕೂ ಹೆಚ್ಚಾಗಿ ಸೈನಿಕರಿದ್ದರು. ಈ ಹೋರಾಟದಲ್ಲಿ ಜಪಾನ್ ಆತನಿಗೆ ಸಹಾಯ ಮಾಡಿತು. 1943 ಅಕ್ಟೋಬರ್ 21 ರಂದು ಸಿಂಗಪೂರ್‌ನಲ್ಲಿ ಸ್ವತಂತ್ರ ಭಾರತ (ಅಜಾದ್ ಹಿಂದ್) ತಾತ್ಕಾಲಿಕ ಸರ್ಕಾರವನ್ನು ಏರ್ಪಡಿಸಿದರು. 1944 ಮಾರ್ಚ್ 18 ರಂದು "ಡಿಲ್ಲಿಗೆ ಹೊರಡಿ" ಎನ್ನುವ ಘೋಷಣೆಯಿಂದ ಐ.ಎನ್.ಎ ಬರ್ಮಾ ಸರಿಹದ್ದುಗಳನ್ನು ದಾಟಿ ಭಾರತ ದೇಶದಲ್ಲಿ ಪ್ರವೇಶಿಸಿತು.

1944 ಮಾರ್ಚಿನಲ್ಲೇ ಕೋಹಿಮಾದಲ್ಲಿ ಭಾರತ ಧ್ವಜವನ್ನು ಹಾರಿಸಿದರು. ಆದರೆ ಯುದ್ಧ ಪರಿಸ್ಥಿತಿಗಳು ಬದಲಾಗಿ 1944 -45 ಶೀತಾಕಾಲದಲ್ಲಿ ಬ್ರಿಟನ್ ಪ್ರತಿಘಟನೆಗೆ ಇಳಿದುದರಿಂದ ಎರಡನೇ ಪ್ರಪಂಚ ಯುದ್ಧದ ಕೊನೆಯಲ್ಲಿ ಜಪಾನು ಸೋತ್ತಿದ್ದರಿಂದ ಐ.ಎನ್.ಎ ಚಳುವಳಿ ನುಚ್ಚುನೂರಾಯಿತು. ಬ್ಯಾಂಕಾಕ್ ದಿಂದ ಟೋಕ್ಯೋ 1945 ಆಗಸ್ಟ್ 23ರ ರಂದು ವಿಮಾನ ಪ್ರಯಾಣ ಮಾಡುತ್ತಿದ್ದಾಗ ನಡೆದ ಪ್ರಮಾದದಲ್ಲಿ ಸುಬಾಷ ಚಂದ್ರ ಬೋಸ್ ಮರಣ ಹೊಂದಿದರೆಂದು ಹೇಳುತ್ತಾರೆ.




*ಚಿತ್ರ 11 B.3: (ಎಡಗಡೆ) ಶರಣಗಜರಾದ ಐ.ಎನ್.ಎ ಸೈನಿಕರು (ಬಲಗಡೆ) ಅಂಚೆ ಮುದ್ರೆ, ಬಲಗಡೆ ಕೆಳಗೆ ಹೋರಾಡುತ್ತಿರು ಝಾನ್ಸಿ ದಳ*

SCERT TELANGANA



ಸುಭಾಷ್‌ಚಂದ್ರಬೋಸ್



ಭಾಗತ್‌ಸಿಂಗ್



ಜೆ.ಬಿ.ಕೃಪಲಾನಿ



ಅಬ್ದುಲ್ ಕಲಾಮ್ ಅಜಾದ್

ಗುಂಡಿನ ದಾಳಿ ನಡೆಸಬೇಕೆಂದು ಬ್ರಿಟನ್ ಸರ್ಕಾರ ಆದೇಶಿಸಿತು. ಆದರೆ ಕೊನೆಯಲ್ಲಿ ಚಳುವಳಿಯ ಮುಂದೆ ಬ್ರಿಟೀಷರ ರಾಜ್ಯ ತಲೆ ಬಾಗುವುದು ತಪ್ಪಲಿಲ್ಲ.

## ಸ್ವಾತಂತ್ರ್ಯ ವಿಭಜನೆಯ ಹಂತದಲ್ಲಿ

ಈ ಸಮಯದಲ್ಲಿ ದೇಶದ ವಾಯುವ್ಯ ಪೂರ್ವ ಪ್ರಾಂತಗಳಲ್ಲಿ ಮುಸ್ಲೀಮರು ಸ್ವತಂತ್ರ್ಯ ರಾಜ್ಯಗಳನ್ನು ಬಯಸುತ್ತಾ 1940 ರಲ್ಲಿ ಮುಸ್ಲಿಂ ಲೀಗ್ ತಿರ್ಮಾನ ಮಾಡಿತು. ಭಾರತ ಉಪಖಂಡದಲ್ಲಿ ಮುಸ್ಲೀಮರು ಸ್ವಂತ ಆಡಳಿತ ಏರ್ಪಾಟನ್ನು ಮುಸ್ಲಿಂ ಲೀಗ್ ಏಕೆ ಕೋರಿತು?

1930 ರಿಂದ ಹಿಂದುಗಳಿಗೆ ಭಿನ್ನವಾಗಿ ಮುಸ್ಲೀಮರು ಪ್ರತ್ಯೇಕ 'ಜಾತಿ'ಯಾಗಿ ಮುಸ್ಲಿಂ ಲೀಗ್ ಪರಿಗಣಿಸಲಾಯಿತು. 1920-1930ರಲ್ಲಿ ಹಿಂದೂ ಮುಸ್ಲಿಂ ರ ಮಧ್ಯ ನಡೆದ ಘರ್ಷಣೆಗಳಿಂದ ಮುಸ್ಲಿಂ ಲೀಗ್ ಈ ಅಭಿಪ್ರಾಯಕ್ಕೆ ಬಂದಿರಬಹುದು. ಇದಕ್ಕಿಂತಲೂ ಮುಖ್ಯವಾಗಿ 1937ರಲ್ಲಿ ರಾಜ್ಯಗಳಿಗೆ ನಡೆದ ಚುನಾವಣೆಗಳಲ್ಲಿ ತಾವು ಅಲ್ಪ ಸಂಖ್ಯೆಯಲ್ಲಿ ಇದ್ದೇವೆಂದು ಪ್ರಜಾಪ್ರಭುತ್ವ ದೇಶದಲ್ಲಿ ತಮ್ಮದು ಯಾವಾಗಲೂ ಎರಡನೆಯ ಸ್ಥಾನವೇ ಆಗುತ್ತದೆ ಎಂದು ಮುಸ್ಲಿಂಗೆ ಅರ್ಥವಾಯಿತು. ಮುಸ್ಲೀಮರಿಗೆ ಯಾವ ಪ್ರಮುಖ್ಯತೆ ಇಲ್ಲದಂತಾಗುತ್ತದೆ ಎಂದು ಅದು ಭಯಪಟ್ಟಿತು. 1937ರಲ್ಲಿ ಉತ್ತರ

### ಚಳುವಳಿ ಸಂಸ್ಥೆಗಳ ಯುಗ

1940ರ ನಂತರ ಕಮ್ಯೂನಿಸ್ಟ್ ಪಾರ್ಟಿ ಕಾರ್ಮಿಕ ಸಂಘಗಳು, ಮಹಿಳಾ ಸಂಘಗಳು, ಕಿಸಾನ್ ಸಭೆ, ದಲಿತ ಸಂಘಗಗಳಂತಹ ಕ್ರಾಂತಿಕಾರಿ ಸಂಘಗಳು ಕಾರ್ಯಕಲಾಪಗಳು ಉತ್ತೇಜನಗೊಂಡವು ಬಡವರು ಕಾರ್ಮಿಕರು, ಗಿರಿಜನರು, ಇತರರನ್ನು ಒಗ್ಗೂಡಿಸಿ ಬ್ರಿಟೀಷ್ ಆಡಳಿತಕ್ಕೆ ಅಲ್ಲದೇ ಬಡ್ಡಿ ವ್ಯಾಪಾರಸ್ಥರು, ಕಾರ್ಖಾನೆ ಯಜಮಾನರು, ಉನ್ನತ ಕುಲ ಜಮೀನುದಾರರಂತಹ ಸ್ಥಾನಿಕ ದರೋಡೆಕಾರರಿಗೆ ವಿರುದ್ದವಾಗಿ ಒಗ್ಗೂಡಿಸತೋಡಗಿದರು. ನೂತನ ಸ್ವತಂತ್ರ ಭಾರತ ದೇಶದಲ್ಲಿ ಈ ಹಿಂದುಳಿದ ವರ್ಗಗಳ ಪ್ರಯೋಜನಕ್ಕಾಗಿ ಸರಿಯಾದ ಸ್ಥಾನ ಕಲ್ಪಿಸಬೇಕೆಂದು, ಬಹಳ ವರ್ಷಗಳಿಂದ ಇದ್ದ ಅವರ ಕಷ್ಟಗಳು ಕೋನೆಗೊಳ್ಳ ಬೇಕೆಂದು, ಸಮಾನ ಹಕ್ಕುಗಳು, ಅವಕಾಸಗಳು ಕಲ್ಪಿಸ ಬೇಕೆಂದು ಈ ಸಂಸ್ಥೆಗಳು ಕೋರಿಕೊಂಡವು. ಅಲ್ಲಿಯವರೆಗೆ ಶ್ರೀಮಂತ ವರ್ಗಗಳ ಹೆಚ್ಚಾಗಿರುವ ಸ್ವಾತಂತ್ರ್ಯ ಚಳುವಳಿ ಇವರ ಸೇರಿದುದರಿಂದ ಹೊಸ ಕೋಣವನ್ನು ಶಕ್ತಿಯನ್ನು ಪಡೆಯಿತು. ಬ್ರಿಟೀಷ್ ಆಡಳಿತಗಾರರು ಕೊನೆಯದಾಗ ದೇಶ ಬಿಟ್ಟು ಹೋಗಲು ಇದು ಸಹಕರಿಸಿತು. ಬಡವರು, ಮುಖ್ಯವಾಗಿ ಪೂರ್ವ ಭಾರತದಲ್ಲಿಯ ಸಂಘ ಬಹಿಷ್ಕೃತರು, ಕಾರ್ಮಿಕರು, ಚಳುವಳಿಯಲ್ಲಿ ಆಸಕ್ತಿಯಿಂದ ಪಾಲ್ಗೊಂಡರು. 1940ರಲ್ಲಿ ನಡೆದ ಚಳುವಳಿಗಳಲ್ಲಿ ಮಲಬಾರು ಸಾಗುವಳಿ ರೈತರು, ತೆಬಾಗ ಸಾಗುವಳಿ ರೈತರು, ತೆಲಂಗಾಣದಲ್ಲಿಯ ವೆಟ್ಟಿ ಕುಲಗಳವರು, ಪರಾಧೀನ ಸಾಗುವಳಿದಾರರು ಕ್ರಿಯಾಶೀಲರಾಗಿ ವ್ಯವಹರಿಸದರು. ಎರಡನೇ ಪ್ರಪಂಚ ಯುದ್ದದ ನಂತರ ಆಹಾರ ಕೊರತೆಯಿಂದ ಭೂಮಿಯನ್ನು ಕೋರುತ್ತಾ, ಚಾರಿತ್ರಾತ್ಮಕ ಹೋರಾಟವನ್ನು ಕೈಗೊಂಡರು. ಸ್ವಾತಂತ್ರ್ಯಕ್ಕಾಗಿ ಸಂದರ್ಶಗಳಲ್ಲಿ ಕಾಂಗ್ರೆಸ್ ತಲೆ ಮುಳುಗಿರುವುದರಿಂದ ಈ ಚಳುವಳಿಗಳನ್ನು ಮುಂದಕ್ಕೆ ತೆಗೆದುಕೊಂಡು ಹೋಗುವ ಸ್ಥಿತಿಯಲ್ಲಿರಲಿಲ್ಲ. ಅಖಿಲ ಭಾರತ ಕಿಸಾನ್ ಸಭೆ ಯಂತಹ ರೈತಾಂಗ ಸಂಸ್ಥೆಗಳಲ್ಲಿ ಅಖಿಲ ಭಾರತ ಪ್ರಜಾನಾಟ್ಯ ಮಂಡಳಿ ಅಖಿಲಭಾರತ ವಿದ್ಯಾ ಸಂಘ ದಂತಹ ಮೇದಾವಿ ವಿದ್ಯಾರ್ಥಿ ಸಂಸ್ಥೆಗಳಲ್ಲಿ ಆಸಕ್ತಿಯಿಂದಿರುವ ಕಮ್ಯೂನಿಸ್ಟರು ಈ ಚಳುವಳಿಯನ್ನು ರಹಸ್ಯವಾಗಿ ನಡೆಸಿದರು. ಈ ಚಳುವಳಿ ಶಕ್ತಿಗಳ ಪ್ರಭಾವದಿಂದ ಬ್ರಿಟೀಷ್ ಪಾಲಕರು ಭೇಟಿ ನಡೆಸಿ, ಭಾರತ ದೇಶವನ್ನು ಬಿಟ್ಟು ಹೋಗುವಂತೆ ಮಾಡಿತು.

SCERT TELANGANA



*ಚಿತ್ರ 11B.3 : ಸ್ವಾತಂತ್ರ್ಯ ನಂತರ ಕೆಂಪು ಕೋಟೆಯಲ್ಲಿ ಮಾತನಾಡುತ್ತಿರುವ ಜವಹಾರ್ ಲಾಲ್ ನೆಹ್ರೂ*

ಪ್ರದೇಶದಲ್ಲಿ ಕಾಂಗ್ರಸ್ –ಲೀಗ್ ಸೇರಿ ಉಭಯ ಸರ್ಕಾರ ಏರ್ಪಡಿಸ ಬೇಕೆಂಬ ತಮ್ಮ ಬೇಡಿಕೆಯನ್ನು ಕಾಂಗ್ರೆಸ್ ತಿರಸ್ಕರಿಸಿದುದರಿಂದ ಸಹಾ ಮುಸ್ಲಿಂ ಲೀಗ್ ಕೋಪಕೊಂಡಿತು.

1930ರಲ್ಲಿ ಮುಸ್ಲಿಂ ಪ್ರಜೆಗಳನ್ನು ಒಗ್ಗೂಡಿಸುವಲ್ಲಿ ಕಾಂಗ್ರೆಸ್ ವಿಫಲವಾದುದರಿಂದಲೂ ಸಹಾ ಮುಸ್ಲಿಂ ಲೀಗ್ ಬಲಗೊಂಡಿತು. 1940ರಲ್ಲಿ ಕಾಂಗ್ರೆಸ್ ನಾಯಕರು ಜೈಲಿನಲ್ಲಿದ್ದಾಗ ಮತ್ತಷ್ಟು ಪ್ರಜೆಗಳ ಬೆಂಬಲ (ಮದ್ದತು) ಗಳಿಸುವುದಕ್ಕೆ ಅದು ಕೃಷಿ ಮಾಡಿತು. 1945 ರಲ್ಲಿ ಯುದ್ಧ ಮುಗಿದ ನಂತರ ಭಾರತದೇಶಕ್ಕೆ ಸ್ವಾತಂತ್ರ್ಯ ನೀಡುವ ವಿಷಯದ ಮೇಲೆ ಬ್ರಿಟೀಷ್ ಸರ್ಕಾರ ಕಾಂಗ್ರೆಸ್, ಮುಸ್ಲಿಂ ಲೀಗ್‌ಗಳೊಂದಿಗೆ ಚರ್ಚೆಗಳು ಪ್ರಾರಂಭವಾದವು. ಭಾರತ ದೇಶದಲ್ಲಿ ಮುಸ್ಲಿಮರಿಗೆ ತಾನೇ ಏಕೈಕ ಪ್ರತಿನಿಧಿ ಎಂದು ಮುಸ್ಲಿಂ ಲೀಗ್ ಹೇಳಿಕೊಂಡದ್ದರಿಂದ ಈ ಚರ್ಚೆ ವಿಫಲವಾಯಿತು. ಬಹಳ ಮಂದಿ ಮುಸ್ಲಿಮರು ತಮಗೆ ಈಗಲೂ ಬೆಂಬಲ ಕೊಡುತ್ತಿದ್ದರೆಂದು ಕಾಂಗ್ರೆಸ್ ಮುಸ್ಲಿಂ ಲೀಗ್ ನೊಂದಿಗೆ ಭಿನ್ನಾಭಿಪ್ರಾಯಕ್ಕಿಳಿಯಿತು.

1946ರಲ್ಲಿ ರಾಜ್ಯಗಳಿಗೆ ಮತ್ತೊಂದು ಸಲ ಚುನಾವಣೆಗಳು ನಡೆದವು. 'ಸಾಧಾರಣ' ಮತಕ್ಷೇತ್ರ ಗಳಲ್ಲಿ ಕಾಂಗ್ರೆಸ್ ಹೆಚ್ಚಾಗಿ ವಿಜಯ ಸಾಧಿಸಿತು. ಆದರೆ ಮುಸ್ಲಿಮರಿಗೆ ಮೀಸಲ್ಪಟ್ಟ ನಿಯೋಜಕ ವರ್ಗಗಳಲ್ಲಿ ಮುಸ್ಲಿಂ ಲೀಗ್ ಸರಿಸಾಟಿಯಿಲ್ಲದ ಗೆಲುವನ್ನು ಪಡೆಯಿತು. ಪ್ರತ್ಯೇಕ 'ಪಾಕಿಸ್ತಾನ್' ಬೇಕೆಂದು ಮುಸ್ಲಿಂ ಲೀಗ್ ಹಠ ಹಿಡಿಯಿತು. ಈ ಬೇಡಿಕೆಯನ್ನು ಪರಿಶೀಲಿಸುವುದಕ್ಕಾಗಿ 1946 ಬ್ರಿಟೀಷ್ ಮಂತ್ರಿವರ್ಗ ಡಿಲ್ಲಿಗೆ ಮೂವರು ಸದಸ್ಯರ (ಸ್ಟ್ರಾಫರ್ಡ್ ಕ್ರಿಪ್ಸ್, ಪೆತಿಕ್ ಲಾರೆನ್ಸ್, ಅಲೆಗ್ಸಾಂಡರ್) ಸಂಘವನ್ನು ಕಳುಹಿಸಿ ಭಾರತ ದೇಶಕ್ಕೆ ಸ್ವಾತಂತ್ರ್ಯವನ್ನು ಕೊಡುವುದಕ್ಕೆ ಬೇಕಾಗುವ ರಾಜಕೀಯ ಕಾನೂನನ್ನು ನಿರ್ಮಿಸಬೇಕೆಂದು ಕೋರಿತು. ಭಾರತದೇಶ ಐಕ್ಯದಿಂದ ಇರಬೇಕೆಂದು, ಫೆಡರಲ್ ವಿಧಾನಗಳಲ್ಲಿ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿರುವ ಪ್ರಾಂತಗಳಿಗೆ ಸ್ವಲ್ಪ ಸ್ವಂತ ಆಡಳಿತ ಇರಬೇಕೆಂದು ಈ ಸಂಘ ಸಿಫಾರಸು ಮಾಡಿತು. ಆದರೆ ಈ ಪ್ರತಿಪಾದನೆಯಲ್ಲಿ ಕೆಲವು ನಿರ್ದಿಷ್ಟ ಅಂಶಗಳ ಮೇಲೆ ಕಾಂಗ್ರೆಸ್ ಮುಸ್ಲಿಂ ಲಿಗ್‌ಗಗಳ ಒಪ್ಪಿಗೆಯನ್ನು ಈ ಸಂಘ ಪಡೆಯಲಿಲ್ಲ. ಈ ಹಂತದಲ್ಲಿ ದೇಶ ವಿಭಜನೆ ಇಂಚುಮಿಂಚು ಅನಿವಾರ್ಯವಾಯಿತು.

SCERT TELANGANA

ಬ್ರಿಟೀಷ್ ಕ್ಯಾಬಿನೆಟ್ ಸಂಘ ಈ ಪ್ರತಿಪಾದನೆಗಳು ವಿಫಲವಾದುದರಿಂದ, ಪಾಕಿಸ್ತಾನ ಬೆಂಬಲವಾಗಿ ಮುಸ್ಲಿಂ ಲೀಗ್ ಪ್ರಜಾ ಚಳುವಳಿಯನ್ನು ಕೈಗೊಂಡಿತು. 1946 ಆಗಸ್ಟ್ 16ನ್ನು "ಪ್ರತ್ಯಕ್ಷ ಕಾರ್ಯಾಚರಣ ದಿನವಾಗಿ ಮುಸ್ಲಿಂ ಲೀಗ್" ಪ್ರಕಟಿಸಿತು. ಆ ದಿನ ಕಲಕತ್ತಾದಲ್ಲಿ ಗಲಭೆಗಳು ಪ್ರಾರಂಭವಾಗಿ ಬಹಳ ದಿನಗಳವರೆಗೆ ಮುಂದುವರೆದು ಸಾವಿರಾರು ಜನರು ಮರಣ ಹೊಂದಿದರು. 1947 ಮಾರ್ಚ್ ತಿಂಗಳು ಕೊನೆಗೆಲ್ಲಾ ಉತ್ತರ ಭಾರತ ದೇಶದಲ್ಲಿ ಇತರ ಪ್ರಾಂತಗಳಿಗೆ ಹಿಂಸೆ ವ್ಯಾಪಿಸಿತ್ತು.

1947 ಆರಂಭದಲ್ಲಿ ವೈಸ್‌ರಾಯ್‌ಯಾಗಿ ನೇಮಿಸಲ್ಪಟ್ಟ ಲಾರ್ಡ್‌ಲೂಯಿ ಮೌಂಟ್ ಬಾಟನ್ ಮುಸ್ಲಿಂ ಲೀಗ್, ಕಾಂಗ್ರೇಸ್ ಪಾರ್ಟಿಗಳ ಮಧ್ಯ ಇರುವ ವಿಭೇದಗಳನ್ನು ಪರಿಷ್ಕರಿಸಲು ಸಾಧ್ಯವಾಗಲಿಲ್ಲ. ಫಲಿತವಾಗಿ ದೇಶವನ್ನು ಮುಸ್ಲಿಂ ನಿಯಂತ್ರಿತ ಪಾಕಿಸ್ತಾನ, ಹಿಂದುಗಳು ಅಧಿಕ ಸಂಖ್ಯೆಯಲ್ಲಿರುವ ಭಾರತ ದೇಶಕ್ಕಾಗಿಯೂ ವಿಭಜಿಸ ಬೇಕು ಎಂಬ ನಿರ್ಣಯಕ್ಕೆ ಬಂದರು. 1947 ಆಗಸ್ಟ್ 15 ರಂದು ಭಾರತದೇಶ ಸ್ವಾತಂತ್ರ್ಯ ಪಡೆಯಿತು. ಆಗಸ್ಟ್ 14ನ್ನು ಪಾಕಿಸ್ತಾನ ತನ್ನ ಸ್ವಾತಂತ್ರ್ಯ ದಿನವಾಗಿ ಘೋಷಿಸಿಕೊಂಡಿತು. ದೇಶ ವಿಭಜನೆಯ ನಂತರ ಸಹಾ ನಡೆದ ಗಲಭೆಗಳಲ್ಲಿ ಪ್ರಜೆಗಳು ಮರಣ ಹೊಂದಿದರು. ಅಸಂಖ್ಯಾತ ಮಹಿಳೆಯರು ಅತ್ಯಾಚಾರಕ್ಕೆ, ದಾಳಿಗಳಿಗೆ ಗುರಿಯಾದರು. ಲಕ್ಷಾಂತರ ಜನ ಪ್ರಜೆಗಳು ತಮ್ಮ ಮನೆಗಳನ್ನು ಬಿಟ್ಟು ಹೋಗಬೇಕಾಗಿ ಬಂತು. ಇವರು ತಮ್ಮ ಜನ್ಮ ಪ್ರದೇಶಗಳಿಂದ ದೂರ ಹೋಗಿ ತಮಗೆ ಗೊತ್ತಿಲ್ಲದ ದೇಶದಲ್ಲಿ ವಾಸಿಸತೊಡಗಿದರು. ಬ್ರಿಟೀಷ್ ಆಡಳಿತದಿಂದ ಸ್ವಾತಂತ್ರ್ಯ ಪಡೆದಿದ್ದೇವೆ ಎಂಬ ಸಂತೋಷ ದೇಶವು ವಿಭಜನೆಯಿಂದ ನಡೆದ ಹಿಂಸೆ ನೋವುಗಳಲ್ಲಿ ಮುಳುಗಿತು.

### ಮುಖ್ಯ ಪದಗಳು

1. ರಾಷ್ಟ್ರೀಯವಾದ
2. ಲೌಕೀಕ
3. ಉಗ್ರವಾದ
4. ಅತಿವಾದಿ
5. ಸತ್ಯಾಗ್ರಹ
6. ಅಸಹಕಾರ
7. ಶಾಸನೋಲ್ಲಂಘನ
8. ಉಪಖಂಡ

## ನಿಮ್ಮ ಅಭ್ಯಸನವನ್ನು ಅಭಿವೃದ್ಧಿಪಡಿಸಿಕೊಳ್ಳಿ

1. ರಾಷ್ಟ್ರೀಯ ಚಳುವಳಿಯಲ್ಲಿ ವಿವಿಧ ಹಂತಗಳಲ್ಲಿ ಗಾಂಧೀಜಿ ಕೃಷಿಯನ್ನು ತಿಳಿಸುವ ಪಟ್ಟಿಯನ್ನು ತಯಾರಿಸಿರಿ.

| ಹಂತ | ಗಾಂಧೀಜಿ ಪಾತ್ರ |
|---|---|
| | |
| | |

2. ಪ್ರಜೆಗಳಿಗೆ ಪ್ರಜಾಪ್ರಭುತ್ವ ಹಕ್ಕುಗಳು, ಸ್ವತಂತ್ರ್ಯ ನೀಡುವುದಕ್ಕೆ ನಿರಾಕರಿಸಿದ ಬ್ರಿಟೀಷ್ ಸರ್ಕಾರ ಎಲ್ಲಾ ಪ್ರಯತ್ನಗಳನ್ನು ರಾಷ್ಟ್ರೀಯ ಚಳುವಳಿ ವಿರೋಧಿಸಿತು. ಸರ್ಕಾರ ಯಾವ ಹಕ್ಕುಗಳನ್ನು ಭಂಗಗೊಳಿಸಲು ಪ್ರಯತ್ನಿಸಿತೋ, ಅದಕ್ಕೆ ವಿರುದ್ಧವಾಗಿ ನಡೆದ ಚಳುವಳಿ ಯಾವುದು ಉದಾಹರಣೆ ಕೊಡಿರಿ.

3. ಉಪ್ಪು ಸತ್ಯಾಗ್ರಹ ತನ್ನ ಉದ್ದೇಶಗಳನ್ನು ಸಾಧಿಸುವಲ್ಲಿ ಎಷ್ಟರ ಮಟ್ಟಿಗೆ ವಿಜಯವಂತವಾಯಿತು ? ನಿಮ್ಮ ಊಹೆ ಏನು ?

4. ಈ ಕೆಳಗೆ ಕೊಟ್ಟ ವಿಷಯದಲ್ಲಿ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಾದುವು ಯಾವುವು?

   a. ವಿದೇಶಿ ವಸ್ತ್ರಗಳನ್ನು ಮಾರುವ ಅಂಗಡಿಗಳ ಹತ್ತಿರ ಪಿಕೇಟಿಂಗ್

SCERT TELANGANA

b. ಬಟ್ಟೆಗಳು ನೇಯಲು ಕೈಯಿಂದ ನೂಲು ತೆಗೆಯುವುದು.

c. ಆಮದು ಮಾಡಿಕೊಂಡ ಬಟ್ಟೆಗಳನ್ನು ಸುಡುವುದು.

d. ಖಾದಿ ಧರಿಸುವುದು.

e. ಮೇಲೆ ತಿಳಿಸಿದವುಗಳೆಲ್ಲವು.

5. ದೇಶ ವಿಭಜನೆಗೆ ದಾರಿ ಮಾಡಿಕೊಟ್ಟ ವಿವಿಧ ಘಟನೆಗಳು ಯಾವುವು?

6. 1922-1929 ರ ಮಧ್ಯ ಘಟನೆಗಳು, ಮೊದಲನೇ ಪ್ಯಾರಾವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

   ಹಿಂಸೆಯ ನಂತರ ಗಾಂಧೀಜಿ ಚಳುವಳಿಯನ್ನು ಅರ್ಧಕ್ಕೆ ನಿಲ್ಲಿಸಿದರು. ಇದನ್ನು ನೀವು ಹೇಗೆ ಸಮರ್ಥಿಸುತ್ತೀರಿ.

7. ಕ್ವಿಟ್ ಇಂಡಿಯಾ ಚಳುವಳಿ ಕುರಿತು ಸಂಕ್ಷಿಪ್ತವಾಗಿ ಟಿಪ್ಪಣಿ ಬರೆಯಿರಿ.

8. 1885 - 1947 ರ ಮಧ್ಯ ಸ್ವಾತಂತ್ರ್ಯ ಚಳುವಳಿ ಘಟ್ಟಗಳನ್ನು ತಿಳಿಸುವ ಕಾಲಮಾನದ ಪಟ್ಟಿಯನ್ನು ತಯಾರಿಸಿರಿ.

9. ಎಷ್ಟೋ ಮಹಾನುಭಾವರ ತ್ಯಾಗಗಳ ಫಲಿತವಾಗಿ ಸಾಧಿಸಿಕೊಂಡ ಸ್ವಾತಂತ್ರ್ಯ ಫಲಗಳು ಇಂದು ಎಲ್ಲರಿಗೂ ಎಟಕಿವೆಯೇ? ಇದರ ಮೇಲೆ ನಿನ್ನ ಅಭಿಪ್ರಾಯವನ್ನು ತಿಳಿಸಿರಿ.

SCERT TELANGANA

ಘಟಕ 12

# ಹೈದರಾಬಾದು ರಾಜ್ಯದಲ್ಲಿ ಸ್ವಾತಂತ್ರ್ಯೋದ್ಯಮ

ದಕ್ಷಿಣ ಭಾರತ ದೇಶದಲ್ಲಿ ಬ್ರಿಟೀಷ್ ಆಧೀನದಲ್ಲಿಯ ರಾಜ್ಯಗಳಲ್ಲಿ ಅತಿ ಮುಖ್ಯವಾದ ರಾಜ್ಯಗಳಲ್ಲಿ ಹೈದರಾಬಾದು ಒಂದು. ಅದನ್ನು ನಿಜಾಮರು ಪಾಲಿಸುತ್ತಿದ್ದರು. ಇವರು ಬ್ರಿಟೀಷ್ ವೈಸ್ರಾಯ್ ಅಧೀನದಲಿದ್ದು ಬ್ರಿಟೀಷ್ ವಿಧಾನ ಗಳನ್ನು ಅನುಸರಿಸುತ್ತಿದ್ದರು. ಇಂತಹ ರಾಜ್ಯಗಳಲ್ಲಿ ವೈಸ್ರಾಯ್ ರೆಸಿಡೆಂಟ್‌ಗಳನ್ನು ನೇಮಿಸುತ್ತಿದ್ದನು. ಈ ರಾಜ್ಯಗಳು ಅವಲಂಬಿಸುತ್ತಿರುವ ವಿಧಾನಗಳ ಮೇಲೆ ಮೇಲ್ವಿಚಾರಣೆ ಮಾಡುತ್ತಾ ಆಡಳಿತದಲ್ಲಿ ಆಗಾಗ ಈ ರೆಸಿಡೆಂಟ್‌ಗಳ ಬಗ್ಗೆ ವಿಚಾರಿಸಿಕೊಳ್ಳುತ್ತಿದ್ದನು. ಬ್ರಿಟೀಷ್ ನಿಜಾಂ ಆಡಳಿತದಲಲ್ಲಿ ಪ್ರಜೆಗಳ ಪರಿಸ್ಥಿತಿ ಹೇಗಿತ್ತೊ, ಸ್ವಾತಂತ್ರ್ಯಕ್ಕಾಗಿ ಪ್ರಜೆಗಳು ಹೇಗೆ ಹೋರಾಡಿದರೋ ಎಂಬುದರ ಕುರಿತು ಈ ಅಧ್ಯಯದಲ್ಲಿ ತಿಳಿದುಕೊಳ್ಳೋಣ. ಹೈದರಾಬಾದ್ ರಾಜ್ಯದಲ್ಲಿ ವಿವಿಧ ಪ್ರಾಂತ್ಯಗಳ ಪ್ರಜೆಗಳು ಮರಾಠಿ, ಕನ್ನಡ, ತೆಲುಗು, ಡೆಕ್ಕನ್, ಉರ್ದು, ಭಾಷೆಗಳನ್ನು ಮಾತನಾಡುವ ಜನರಿದ್ದರು. ಈ ಅಧ್ಯಾಯದಲ್ಲಿ ಮುಖ್ಯವಾಗಿ ತೆಲುಗು, ಉರ್ದು ಮಾತನಾಡುತ್ತಿರುವ ತೆಲಂಗಾಣ ಜಿಲ್ಲೆಗಳನ್ನು ಕುರಿತು ತಿಳಿದುಕೊಳ್ಳೋಣ.




*ಪಟ : 12.1 : 1901 ಗೆಜಟೀರನಲ್ಲಿ ಪ್ರಕಟಿಸಿದ ಹೈದರಾಬಾದು ರಾಜ್ಯ ಪಟ*

SCERT TELANGANA

## ರಾಷ್ಟ್ರೀಯವಾದ ಮೊದಲ ವರ್ಷಗಳು

1888 ಅಕ್ಟೋಬರ್‌ನಲ್ಲಿ ಹೈದರಾಬಾದ್‌ನಲ್ಲಿ ಪ್ರಮುಖ ವ್ಯಕ್ತಿಗಳಿಂದ ಕೂಡಿಕೊಂಡ ಒಂದು ಚಿಕ್ಕ ಗುಂಪು ಭಾರತ ರಾಷ್ಟ್ರೀಯ ಕಾಂಗೇಸ್ ಕುರಿತು ತಿಳಿಯಪಡಿಸುವುದಕ್ಕೆ ಒಂದು ಸಮಾವೇಶ ನಿರ್ವಹಿಸುತ್ತಾ ಅದಕ್ಕೆ ಸಂಬಂಧಿಸಿದ ಕರ ಪತ್ರಗಳು ಹಂಚಿತು, ಪ್ಲೆಕಾರ್ಡುಗಳು ಪ್ರದರ್ಶಿಸಿತು. ವಿದ್ಯಾವಂತರಲ್ಲಿ ಬಹಳ ಮಂದಿ ಕಾಂಗ್ರೇಸ್ ಬಗ್ಗೆ ಆಕರ್ಷಣೆಗೊಂಡರು. ಹೈದರಾಬಾದ್‌ಗೆ ಸೇರಿದ ಮುಲ್ಲಾ ಅಬ್ದುಲ್ ಖಯ್ಯೂಂ ಕಾಂಗ್ರೇಸ್‌ಗೆ ಪ್ರಧಾನ ಬೆಂಬಲಿಗರಾನಾದನು. ಅವರು ಕಾಂಗ್ರೆಸ್ ಸಮಾವೇಶಗಳಿಗೆ ಹಾಜರಾಗುತ್ತಾ ಆಸಕ್ತಿಯಿಂದ ಭಾಗವಹಿಸಿರಿ ಎಂದು ಮುಸ್ಲಿಂರನ್ನು ಪ್ರೋತ್ಸಾಹಿಸುತ್ತಿದ್ದನು. ರಾಜ ಕುಟುಂಬಗಳನ್ನು ವಿಮರ್ಶಿಸುತ್ತಾ ನಿಜಾಂ ಸರಕಾರದಲ್ಲಿ ಅವರಿಗೆ ಕೊಟ್ಟ ಪ್ರತ್ಯೇಕ ಸದುಪಾಯಗಳನ್ನು ವಿರೋದಿಸುತ್ತಿದ್ದನು. ಪ್ರಜೆಗಳ ಸಾಮಾಜಿಕ, ಆರ್ಥಿಕ ಜೀವನಗಳನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಆತನು ಅಂಜುಮನ್-ಎ-ಮಾರೆಫ್ ಎನ್ನುವ ಸಂಸ್ಥೆಯನ್ನು ಸ್ಥಾಪಿಸಿದನು. ರಾಷ್ಟ್ರೀಯವಾದ ಪ್ರಭಾವವನ್ನು ಸೂಚಿಸುತ್ತಾ ರಾಜ್ಯದಿಂದ ಅನೇಕ ದಿನಪತ್ರಿಕೆಗಳು ಬಿಡುಗಡೆಯಾಗುತ್ತಿದ್ದವು. ಹೈದರಾಬಾದ್ ಟೆಲಿಗ್ರಾಪು, ಡೆಕ್ಕನ್ ಸ್ಟಾಂಡರ್ಡ್, ಮುಸ್ಲಿಂ -ಇ-ಸಫೀಕ್ ಅಂತಹ ದಿನಪತ್ರಿಕೆಗಳು ರಾಷ್ಟ್ರೀಯವಾದವನ್ನು ಪ್ರಚಾರ ಮಾಡಿದವು. ಅವುಗಳಲ್ಲಿ ಅನೇಕ ರಾಷ್ಟ್ರೀಯತವಾದಕ್ಕೆ ಬೆಂಬಲವನ್ನು ನೀಡಿದರು.

ಚಾದರ್‌ಘಾಟ್ ಮೆಥಡಿಸ್ಟ್ ಎಪಿಸ್ಕೊಪಲ್ ಚರ್ಚಿಗೆ ಸೇರಿದ ರೆವರೆಂಡ್ ಗಿಲ್ಡರ್ ಅಂತಹ ಕ್ರೈಸ್ತರ ಮತ ಪ್ರಬೋಧಕರು ಕಾಂಗ್ರೇಸ್ಸಿಗೆ ಮದ್ದತು ನೀಡಿದರು. ಆ ವಿಧವಾಗಿ ಹೈದರಾಬಾದ್‌ನಲ್ಲಿ ಕಾಂಗ್ರೇಸ್ ಮನ್ನಣೆ ಪಡೆಯಿತು. ಸ್ವಾತಂತ್ರ್ಯ, ಅಭಿವೃದ್ಧಿ, ಪ್ರತಿನಿಧಿ ಸಂಸ್ಥೆಗಳಿಂದ ಸರ್ಕಾರದ ವಿಧಾನಗಳು ಅಂತಹ ವಿಷಯಗಳಲ್ಲಿ ಪ್ರಜೆಗಳಿಗೆ ಚೈತನ್ಯ ಮೂಡಿಸುವುದರಲ್ಲಿ ಕಾಂಗ್ರೇಸ್ ಸಹ ಪಾತ್ರ ವಹಿಸಿತು.


ಮುಲ್ಲಾ ಅಬ್ದುಲ್ ಖಯ್ಯೂಂ

1892 ನೇ ವರ್ಷದಲ್ಲಿ ಹೈದರಾಬಾದ್‌ನಲ್ಲಿ ಆರ್ಯ ಸಮಾಜ ಸ್ಥಾಪಿತವಾಯಿತು. ನಿರ್ಮಾಣಾತ್ಮಕ ಕೆಲಸಗಳಲ್ಲಿ ಕಾರ್ಯಕರ್ತರಿಗೆ ಶಿಕ್ಷಣ ಕೊಡುವುದಕ್ಕೆ ಪ್ರಜೆಗಳ ಅಭಿಪ್ರಾಯ ಸಮೀಕರಣಕ್ಕೆ, ಸಾಮಾಜಿಕ - ಧಾರ್ಮಿಕ ಸಂಬಂಧ ಚೈತನ್ಯಕ್ಕೆ ಆರ್ಯ ಸಮಾಜ ಸಹಾಯ ಮಾಡಿದೆ. ಹೈದರಾಬಾದ್‌ನಲ್ಲಿ ರಾಷ್ಟ್ರೀಯ ಚಳುವಳಿಗೆ ಅನೇಕ ಮಂದಿ ನಾಯಕರನ್ನು ನೀಡಿದೆ.

## ರಾಜ್ಯದಲ್ಲಿ ಫ್ಯುಡಲ್ ವ್ಯವಸ್ಥೆ

ನಿಜಾಂನವರು ಮೊದಲಿನಲ್ಲಿ ಮೊಘಲ್ ಚಕ್ರವರ್ತಿಗಳ ಹತ್ತಿರ ಪ್ರಾಂತೀಯ ಗವರ್ನರ್‌ಗಳಾಗಿದ್ದರು. ವಂಶಪಾರಂಪರ್ಯವಾಗಿ ಸಾಗುತ್ತಾ ಜಾಗೀರ್‌ದಾರರು, ಚಿಕ್ಕ ಚಿಕ್ಕ ರಾಜರುಗಳ ಸಹಾಯದಿಂದ ಆಡಳಿತವನ್ನು ನಡೆಸಿದರು. ತೆಲಂಗಾಣದಲ್ಲಿ ವನಪರ್ತಿ, ಗದ್ವಾಲ, ಕೊಲ್ಲಾಪೂರ್, ಆತ್ಮಾಕೂರ್, ದೋಮಕೊಂಡ, ನೆರ್ಲಪಲ್ಲಿ, ಪಾಲ್ವಂಚ, ಅಲ್ಲಾದುರ್ಗಮ್ ಮುಖ್ಯವಾದ ಸಂಸ್ಥೆಗಳಾಗಿದ್ದವು. ಡಜನುಗಳು, ಒಂದೊಂದುಬಾರಿ ನೂರಾರು ಗ್ರಾಮಗಳು ಜಾಗೀರ್‌ದಾರರ ನಿಯಂತ್ರಣದಲ್ಲಿ ಇದ್ದವು. ಅವುಗಳನ್ನು ಅವರು ತಮ್ಮ ಇಷ್ಟ ಬಂದಹಾಗೆ ನಡೆಸುತ್ತಿದ್ದರು. ಪ್ರಜೆಗಳ ಮೇಲೆ ತೆರಿಗೆಗಳ ಭಾರ ಹಾಕುತ್ತಿದ್ದರು. ರಾಜ್ಯದಲ್ಲಿ ಉಳಿದ ಪ್ರಾಂತ್ಯವನ್ನು ರಾಜರ ಸಹಾಯದಿಂದ ನಿಜಾಮರು ನೇರವಾಗಿ ಆಳ್ವಿಕೆ ನಡೆಸುತ್ತಿದ್ದರು. ಈ ದೊರೆಗಳ ಕುರಿತು ಹಿಂದಿನ ಅದ್ಯಾಯದಲ್ಲಿ ನೀವು ಓದಿದ್ದೀರಿ.

ರಾಜರು ಅವರ ವಂಶಸ್ಥರು ಎಲ್ಲಾ ಸಂಪನ್ಮೂಲಗಳನ್ನು ನಿಯಂತ್ರಿಸುತ್ತಾ ಅವರ ಮನಸ್ಸಿಗೆ ತೋಚಿದಂತೆ ಆಳುವ ಹಳೆ ವ್ಯವಸ್ಥೆಯನ್ನು ಮುಂದುವರಿಸಬೇಕೆಂಬ ಅಭಿಪ್ರಾಯ ನಿಜಾಮರಿಗಿತ್ತು. ಸ್ಥಾನಿಕ ಸಂಸ್ಥೆಗಳು, ಶಾಸನ ಸಭೆಗಳಂತಹ ಪ್ರಜಾಪ್ರಭುತ್ವ ವ್ಯವಸ್ಥೆಗಳನ್ನು ಅವರು ಅನುಮತಿಸಲಿಲ್ಲ. ಕಾಂಗ್ರೇಸ್ ನೇತೃತ್ವದಲ್ಲಿಯ ರಾಷ್ಟ್ರೀಯ ಚಳವಳಿಯನ್ನು ನಿಜಾಮರು ವಿರೋಧಿಸಿದರು. ರಾಜ್ಯದಲ್ಲಿ ರಾಜಕೀಯ ಕಾರ್ಯಕ್ರಮಗಳನ್ನು ನಿಷೇದಿಸುತ್ತಾ ಅನೇಕ ಫರ್ಮಾನುಗಳನ್ನು ಜಾರಿಗೆ ತಂದರು. ಪೋಲೀಸ್ ನಿಘಾ ವ್ಯವಸ್ಥೆಗಳನ್ನು ಏರ್ಪಡಿಸಿ ಪ್ರಜೆಗಳನ್ನು ನಿರಂತರ ಜಾಗ್ರತೆಯಿಂದ ಪರಿಶೀಲಿಸಿದರು.

## ಭಾಷೆ, ಧರ್ಮ

ಹೈದರಾಬಾದ್ ರಾಜ್ಯವನ್ನು ನಿಜಾಂ ವಂಶಸ್ಥರು ಆಳ್ವಿಕೆ ನಡೆಸಿದರು. ಅವರು ಮುಸ್ಲಿಮರು, ಡೆಕ್ಕನ್ ಉರ್ದು ಭಾಷೆಗಳನ್ನು ಮಾತನಾಡುತ್ತಿದ್ದರು. ಆದರೆ ರಾಜ್ಯದಲ್ಲಿಯ ಅಧಿಕ ಶೇಕಡ ಪ್ರಜೆಗಳು ಹಿಂದೂಗಳು. ಇವರು ತೆಲುಗು,

SCERT TELANGANA

ಕನ್ನಡ, ಮರಾಠಿ ಮಾತನಾಡುತ್ತಿದ್ದರು. ಉರ್ದು ಅಧಿಕಾರ ಭಾಷೆಯಾಗಿತ್ತು. ಉನ್ನತಾಧಿಕಾರಿಗಳಲ್ಲಿ 90 ಶೇಕಡಕ್ಕೆ ಹೆಚ್ಚಾಗಿ ಮುಸ್ಲಿಂಮರು ಇರುತ್ತಿದ್ದರು. ಪ್ರಾಥಮಿಕ ಹಂತದಿಂದ ವಿಶ್ವವಿದ್ಯಾಲಯವರೆಗೂ ಬೋಧನೆ ಮಾಧ್ಯಮವಾಗಿ ಉರ್ದು ಇತ್ತು. ತಾಂತ್ರಿಕ ಪಾಠ್ಯಪುಸ್ತಕಗಳು ಸಹ ಉರ್ದುನಲ್ಲಿ ಅನುವಾದವಾಗಿ ಚಲಾವಣೆಯಲ್ಲಿದ್ದವು.

ತಮ್ಮ ರಾಜ್ಯದಲ್ಲಿ ಪಾಠಶಾಲೆಗಳು ಏರ್ಪಾಟು ಮಾಡುವುದರಲ್ಲಿ ನಿಜಾಂ ಆಡಳಿತಗಾರರು ಬಹಳ ಹಿಂದುಳಿದಿದ್ದರು. ಬಹಳ ಮಂದಿ ಜಾಗೀರುದಾರರು ತಮ್ಮ ಪ್ರಾಂತ್ಯಗಳಲ್ಲಿ ಪಾಠಶಾಲೆಗಳ ಏರ್ಪಾಟು ಮಾಡುವುದನ್ನು ವಿರೋಧಿಸಿದರು. ನಿಜಾಂ ವಿರೋದ ಭಾವನೆಗಳಿಗೆ ಖಾಸಗಿ ಪಾಠಶಾಲೆಗಳು ಕೇಂದ್ರಗಳಾಗುತ್ತವೆ ಎನ್ನುವ ಅನುಮಾನ ನಿಜಾಮರಿಗೆ ಇತ್ತು . ತೆಲುಗು ಮಾಧ್ಯಮವಾಗಿ ಖಾಸಗಿ ಪಾಠಶಾಲೆಗಳನ್ನು ಸ್ಥಾಪಿಸುವುದನ್ನು ಅವರು ವಿರೋಧಿಸಿದರು. ಆ ವಿದ್ಯಾರ್ಥಿಗಳಿಗೆ ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಪ್ರವೇಶ ನಿರಾಕರಿಸಿದರು. ಫಲವಾಗಿ 1941 ರ ಸಮಯಕ್ಕೆ ಕೂಡಾ ರಾಜ್ಯದಲ್ಲಿ ವಿದ್ಯಾವಂತರು 9.3 ಶೇಕಡ ಮಾತ್ರ ಇದ್ದರು. (ಮಹಿಳೆಯರಲ್ಲಿ 4.3 ಶೇಕಡ ಮಾತ್ರವೇ ವಿದ್ಯಾವಂತರು) ಇದಕ್ಕೆ ವಿರುದ್ಧವಾಗಿ ಟ್ರಾವನ್‌ಕೋರ್ ರಾಜ್ಯದಲ್ಲಿ 47.7 ಶೇಕಡ ಅಕ್ಷರಾಸ್ಯತೆ. ಬರೋಡಾದಲ್ಲಿ 23 ಶೇಕಡ, ಮೈಸೂರು ರಾಜ್ಯದಲ್ಲಿ 12.2 ಶೇಕಡ ಅಕ್ಷರಾಸ್ಯತೆ ಇತ್ತು. ಬಾಲಗಂಗಾಧರ್ ತಿಲಕ್‌ರ ನೇತೃತ್ವದಲ್ಲಿನ ಅತಿವಾದ ರಾಷ್ಟ್ರೀಯ ಚಳುವಳಿ ಕಾಲದಲ್ಲಿ ರಾಷ್ಟ್ರೀಯ ಚಳುವಳಿಯು ಮತಪರವಾದ ತಿರುವು ಕಂಡು ಹೈದರಾಬಾದನ್ನು ಪ್ರಭಾವಿತಗೊಳಿಸಿತು. ಈ ಕಾಲದಲ್ಲಿ ಭಾಷೆ ಮತ್ತು ಧರ್ಮ ಪ್ರಧಾನ ಅಂಶಗಳಾದವು. ಉರ್ದು ಭಾಷೆಯು ಅಧಿಕಾರ ಭಾಷೆಯಾಗಿದ್ದಿತು. ಅಂದು ತೆಲುಗು ಭಾಷಾ ಚಳುವಳಿಯು ತೆಲಂಗಾಣ ಪ್ರಜೆಗಳ ಆಕಾಂಕ್ಷೆ ಆಗಿತ್ತು.

- ಹೈದರಾಬಾದ್ ರಾಜ್ಯದಲ್ಲಿ ಪ್ರಜೆಗಳು ಎದುರಿಸುತ್ತಿರುವ ಸಮಸ್ಯೆಗಳಿಗೂ, ಬ್ರಿಟೀಷ್ ಆಡಳಿತದಲ್ಲಿರುವ ಪ್ರಾಂತ್ಯಗಳ ಪ್ರಜೆಗಳು ಎದುರಿಸುತ್ತಿರುವ ಸಮಸ್ಯೆಗಳಿಗೂ ಮಧ್ಯ ಯಾವುದಾದರೂ ವ್ಯಾತ್ಯಾಸಗಳು ಇವೆಯೇ?
- ಪ್ರಜಾಪ್ರಭುತ್ವದ ಬಗ್ಗೆ ಬ್ರಿಟಿಷ್ ಆಡಳಿತಗಾರರು, ನಿಜಾಮರಿಗೆ ಮಧ್ಯ ಯಾವದಾದರೂ ಭಿನ್ನ ಅಭಿಪ್ರಾಯಗಳು ಇವೆಯೇ?

## ಕೊನೆಯ ನಿಜಾಂ (1911-1948)

ಹೈದರಾಬಾದ್ ರಾಜ್ಯದ ಕೊನೆಯ ಪಾಲಕನಾದ ಮೀರ್ ಉಸ್ಮಾನ್ ಅಲೀ ಖಾನ್ ಬ್ರಿಟಿಷರ ಪ್ರಭಾವದಿಂದ ಆಡಳಿತ ವ್ಯವಸ್ಥೆಯನ್ನು ಆಧುನೀಕರಿಸಲು ಪ್ರಯತ್ನಿಸಿದನು. ವಸಾಹತುಶಾಹಿಗಳು ತಮ್ಮ ಅವಸರಗಳಿಗನುಗುಣವಾಗಿ ವ್ಯವಸಾಯವನ್ನು, ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಿ ನಿಯಂತ್ರಣ ಹೊಂದಿದ್ದರು. ಖ್ಯಾತ ತಂತ್ರಜ್ಞರಾದ ಸರ್.ಯಂ.ವಿಶ್ವೇಶ್ವರಯ್ಯ ಅವರು ನಿಜಾಂ ಸಾಗರ್, ಅಲೀ ಸಾಗರ್ ನಂತಹ ಭಾರೀ ನೀರಾವರಿ ಯೋಜನೆಗಳಿಗೆ ಆಣೆಕಟ್ಟುಗಳಿಗೆ ರೂಪಕಲ್ಪನ ಮಾಡಿದರು. ರೈಲು, ರಸ್ತೆ, ವಿಮಾನಯಾನ, ವಿದ್ಯುತ್ ವಿಭಾಗಗಳಿಗೆ ನಿಜಾಂ ಪ್ರತ್ಯೇಕ



*ಚಿತ್ರ 12.1: ಆರ್ಟ್ಸ್ ಕಾಲೇಜ್ ಉಸ್ಮಾನಿಯಾ ವಿಶ್ವವಿದ್ಯಾಲಯ*

SCERT TELANGANA

ಶ್ರದ್ಧೆ ವಹಿಸಿದನು. ರಾಜ್ಯವನ್ನು ಕೈಗಾರಿಕರಣಗೊಳಿಸಲು ಕೋಟಿ ರೂಪಾಯಿ ಮೂಲಧನದೊಂದಿಗೆ ಕೈಗಾರಿಕಾ ಟ್ರಸ್ಟ್ ನಿಧಿಯನ್ನು ಸ್ಥಾಪಿಸಿದನು. ನಿಜಾಂ ಕಾಲದಲ್ಲಿಯ ಮುಖ್ಯವಾದ ಕೈಗಾರಿಕೆಗಳು : ಸಿಂಗರೇಣಿ ಗಣಿಗಳು, ನಿಜಾಂ ಸಕ್ಕರೆ ಕಾರ್ಖಾನೆ, ಅಜಾಂ ಜಾಹಿ ಕಾರ್ಖಾನೆಗಳು, ಸಿರ್ಪೂರ್ ಕಾಗದದ ಕಾರ್ಖಾನೆ ಮುಖ್ಯವಾದವುಗಳು. ಈ ಕೈಗಾರಿಕೆಗಳು ರಾಜ್ಯ ಆರ್ಥಿಕ ವ್ಯವಸ್ಥೆಯಲ್ಲಿ ಮುಖ್ಯಪಾತ್ರ ವಹಿಸಿದವು. ಹೈದರಾಬಾದ್ ರಾಜ್ಯ ಪ್ರಜೆಗಳಿಗೆ ಉದ್ಯೋಗಾವಕಾಶಗಳು ಕಲ್ಪಿಸಿದವು.

1941ರಲ್ಲಿ ನಿಜಾಂ ಹೈದರಾಬಾದ್ ಸ್ಟೇಟ್ ಬ್ಯಾಂಕನ್ನು ಸ್ಥಾಪಿಸಿದನು. ನಂತರ ಅದು ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ ಆಗಿ ಪರಿವರ್ತನೆ ಹೊಂದಿದೆ. (ಈಗ ಅದು SBI ಆಗಿ ಬದಲಾಗಿದೆ) ಇದು ರಾಜ್ಯದ ಕೇಂದ್ರೀಯ ಬ್ಯಾಂಕ್ ಆಗಿ ಹೈದರಾಬಾದ್ ರಾಜ್ಯದ ರೂಪಾಯಿ ಆದ 'ಉಸ್ಮಾನಿಯಾ ಸಿಕ್ಕ'ವನ್ನು ನಿರ್ವಹಿಸುತಿತ್ತು. ಶೇಷ ಭಾರತದ ಮಾದರಿಯಾಗಿ ಅಲ್ಲದೇ ತನ್ನ ಸ್ವಂತ ನಾಣ್ಯ ಹೈದರಾಬಾದ್ ರೂಪಾಯಿ ಹೊಂದಿದ ಏಕೈಕ ರಾಜ್ಯ ಇದಾಗಿತ್ತು.

ಉಸ್ಮಾನಿಯಾ ಆಸ್ಪತ್ರೆ, ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈಕೋರ್ಟ, ರಾಜ್ಯದ ಕೇಂದ್ರ ಗ್ರಂಥಾಲಯ, ಯುನಾನಿ ಆಸ್ಪತ್ರೆ, ಜುಬ್ಲೀಹಾಲ್, ಈಗ ಅಸೆಂಬ್ಲಿ ಹಾಲಾಗಿ ಕರೆಯಲ್ಪಡುವ ಟೌನ್ ಹಾಲ್, ಹೈದರಾಬಾದ್ ಮ್ಯೂಜಿಯಂ, ಡಿಲ್ಲಿಯಲ್ಲಿ ಹೈದರಾಬಾದ್ ಭವನ ಮುಂತಾದವು ನಿಜಾಮರ ಕಾಲದಲ್ಲಿ ನಿರ್ಮಿಸಿದ ಪ್ರಮುಖ ಪ್ರಜಾ ಸಂಸ್ಥೆಗಳಾಗಿವೆ. ಐತಿಹಾಸಿಕ ಕಟ್ಟಡಗಳನ್ನು ಕಾಪಾಡಲು 1914ರಲ್ಲಿ ಪುರಾವಸ್ತು ಶಾಖೆಯನ್ನು ಪ್ರಾರಂಭಿಸಿದರು. ಈ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳು ವಸಾಹತು ರಾಜಕೀಯ ಪ್ರಭಾವದಿಂದ ತೆಗೆದುಕೊಳ್ಳಲಾಗಿದೆ. ಆದರೆ ಇದು ಹೈದರಾಬಾದಿನಲ್ಲಿ ಹೊಸ ರಾಜಕೀಯ ಭಾವನೆಗಳು ಹೊಂದಿದ ಮಧ್ಯ ತರಗತಿ ವರ್ಗ ಆವಿರ್ಭವಿಸಲು ನಾಂದಿಯಾಯಿತು.

1947ರಲ್ಲಿ ಬ್ರಿಟಿಷರು ಹೋದ ನಂತರ ಹೈದಾರಾಬಾದನ್ನು ಸ್ವತಂತ್ರ ರಾಜನಾಗಿ ಪಾಲಿಸಬೇಕೆಂಬ ಭಯಕ್ಕೆ ಆತನಿಗಿತ್ತು. ಇದಕ್ಕೆ ಪ್ರತಿಯಾಗಿ ರಾಜ್ಯದ ಜನತೆ ಸ್ವತಂತ್ರ ಭಾರತ ದೇಶದಲ್ಲಿ ವಿಲೀನವಾಗಬೇಕೆಂದು ಕೋರಿದರು. ಜನರ ಆಕಾಂಕ್ಷೆ ಹೇಗೆ ಫಲಪ್ರದವಾಯಿತೋ ನೋಡೋಣ.

## ಆಂಧ್ರ ಜನ ಸಂಘ

20 ರ ಶತಮಾನದಲ್ಲಿ ಆಂಧ್ರ ಪ್ರಾಂತದಲ್ಲಿ ತೆಲುಗಿನಲ್ಲಿ ಹೆಚ್ಚು ಸಂಖ್ಯೆಯಲ್ಲಿ ಪುಸ್ತಕಗಳು ಮುದ್ರಣವಾದವು, ಪಟ್ಟಣಗಳು, ಗ್ರಾಮಗಳಲ್ಲಿ ಗ್ರಂಥಾಲಯಗಳು ಏರ್ಪಾಟು ಮಾಡಲಾಯಿತು. 1901ರಲ್ಲಿ ಹೈದರಾಬಾದ್‌ನಲ್ಲಿ ಕೊಮರಾಜು ಲಕ್ಷ್ಮಣರಾವು, ನಾಯನಿ ವೆಂಕಟ ರಂಗಾರಾವು ರಾವಿಚಟ್ಟು ರಂಗಾರಾವುರಿಂದ ಶ್ರೀ ಕೃಷ್ಣದೇವರಾಯ ಆಂಧ್ರ ಭಾಷೆ ನಿಲಯ ಸ್ಥಾಪಿಸಿದರು, ಇದು ಇಂದಿಗೂ ಕೆಲಸ ಮಾಡುತ್ತಿದೆ. ಆದರೆ, ಹೈದರಾಬಾದ್ ರಾಜ್ಯದಲ್ಲಿ ತೆಲುಗು ಭೇದಭಾವಕ್ಕೆ ಗುರಿಯಾಗುತ್ತಿತ್ತು. 1921 ರಲ್ಲಿ ಹೈದರಾಬಾದಿನಲ್ಲಿಯ ವಿವೇಕವರ್ಧಿನಿ ಕಾಲೇಜುನಲ್ಲಿ ಇಂಗ್ಲೀಷ್, ಇಲ್ಲವೆ ಉರ್ದುನಲ್ಲಿ ಮಾತ್ರವಲ್ಲದೆ ತೆಲುಗಿನಲ್ಲಿ ತಿರ್ಮಾನವನ್ನು ಪ್ರವೇಶಪಡಿಸಿದ್ದಕ್ಕಾಗಿ ಅವಮಾನಕ್ಕಿಡಾದನು. ಈ ಘಟನೆಯಿಂದ ತೆಲುಗು ಮಾತನಾಡುವ ಪ್ರಜೆಗಳು ಬಹಳ ನೋವನ್ನು ಅನುಭವಿಸಿದರು. ತೆಲುಗಿಗೆ ಸರಿಯಾದ ಸ್ಥಾನ, ಗೌರವ ಸಿಗುವ ಹಾಗೆ ಹೋರಾಟಕ್ಕೆ ಸಿದ್ಧರಾದರು.

1924 ರಲ್ಲಿ ಮಾಡಪಾಟಿ ಹನುಮಂತರಾವು ಮತ್ತಿತರ ಜನರೊಂದಿಗೆ ಸೇರಿ ಆಂಧ್ರ ಜನ ಸಂಘವನ್ನು ಏರ್ಪಾಟ ಮಾಡಿದರು. ಗ್ರಂಥಾಲಯಗಳು ಪಠನ ಕೋಣೆಗಳು ಏರ್ಪಾಟು ಮಾಡುವುದು, ವಿದ್ಯಾರ್ಥಿಗಳನ್ನು, ಪಂಡಿತರನ್ನು ಪ್ರೋತ್ಸಾಹಿಸುವುದು, ತೆಲುಗಿನಿಂದ ಬರೆದ ಪತ್ರಗಳನ್ನು ಸಂಗ್ರಹಿಸುವುದು, ತೆಲುಗು ಸಾಹಿತ್ಯವನ್ನು ಪ್ರೋತ್ಸಾಹಿಸುವುದು ಇದರ ಉದ್ದೇಶಗಳು. ಇವರು ಚಿಕ್ಕ ಚಿಕ್ಕ ಪುಸ್ತಕಗಳುನ್ನು ಮುದ್ರಿಸಿ. ಗ್ರಂಥಾಲಯಗಳನ್ನು ಏರ್ಪಾಟುಮಾಡುವುದಕ್ಕೆ



*ಚಿತ್ರ 12.2 : ಆದಿಲಾಬಾದ್ ಜಿಲ್ಲೆ ಕೇಸಿಲಾಪುರನಲ್ಲಿ ನಡೆದ ನಿಜಾಂ ಕೋರ್ಟು ಸಮಾವೇಶದಲ್ಲಿ ಹಾಜರಾದ ಪ್ರಜೆಗಳ ಹತ್ತಿರ ಬ್ರಿಟಿಷ್ ಅಧಿಕಾರಿಗಳು 1947 ರಂದು ಹೇಮನ್ ಡಾರ್ಫ್ ತೆಗೆದ ಚಿತ್ರ*

SCERT TELANGANA

ಗ್ರಾಮಗಳಲ್ಲಿ ಸಮಾವೇಶಗಳನ್ನು ನಿರ್ವಹಿಸುತ್ತಿದ್ದರು. ಚಿಕ್ಕ ವ್ಯಾಪಾರಸ್ತರು, ರೈತರು, ಕೂಲಿಗಳು, ಇತರ ಪ್ರಜೆಗಳು ಎದುರಿಸುವ ಸಮಸ್ಯೆಗಳ ಕುರಿತು ಈ ಪುಸ್ತಕಗಳು ರಚನೆ ಗೊಂಡಿದ್ದವು. ಜನ ಸಂಘದಿಂದ 4000 ಪಾಠಶಾಲೆಗಳನ್ನು ಪ್ರಾರಂಭಿಸಿದರು. ಆದರೆ ಸರಕಾರ ವಿರೋಧಿಸುವ ಕಾರಣಕ್ಕಾಗಿ ಇವುಗಳಲ್ಲಿ ಬಹಳಷ್ಟು ಮುಚ್ಚಿಹಾಕಲಾಯಿತು. ಆದರೂ ಕೂಡಾ ಮಹಿಳೆಯರು, ವಿದ್ಯಾರ್ಥಿಗಳು, ಗಾಯಕ ರಂತಹ ಅನೇಕ ಮಂದಿ ಹೆಚ್ಚು ಸಂಖ್ಯೆಯಲ್ಲಿ ಚಳುವಳಿಯಲ್ಲಿ ಭಾಗವಹಿಸಿದ್ದರಿಂದ ಇದು ವಿಸ್ತಾರಗೊಂಡಿತು.

- ನಿಮ್ಮ ಪ್ರಾಂತ್ಯದಲ್ಲಿ ಯಾವ ಯಾವ ಭಾಷೆಗಳನ್ನು ಮಾತನಾಡುತ್ತಾರೆ ?
- ನಮ್ಮ ರಾಜ್ಯದಲ್ಲಿ ಯಾವ ಯಾವ ಭಾಷೆಗಳಿಂದ ವಿದ್ಯಾಬೋಧನೆ ನಡೆಯುತ್ತದೆ ?
- ಬೋಧನೆ ಸಂಪೂರ್ಣ ಒಬ್ಬರ ಮಾತೃಭಾಷೆಯಲ್ಲಿ ಇರಬೇಕೆನ್ನುವುದು ನಿಮ್ಮ ಅಭಿಪ್ರಾಯವೆ ?
- ಮಾತೃಭಾಷೆಗಳಲ್ಲಿ ಪುಸ್ತಕಗಳು ಮುದ್ರಿಸುವುದು ಏತಕ್ಕಾಗಿ ಮುಖ್ಯ ?

## ಆಂಧ್ರ ಮಹಾಸಭೆ, ಗ್ರಂಥಾಲಯ ಚಳುವಳಿ

ವಿವಿಧ ವರ್ಗಗಳ ನಾಯಕರು ಒಂದು ದೊಡ್ಡ ಸಂಘವಾಗಿ ಏರ್ಪಡಬೇಕೆಂದು ಕೊಂಡಿದ್ದರಿಂದ 1930ರಲ್ಲಿ ಆಂಧ್ರ ಮಹಾಸಭೆ (ಎ.ಎಂ.ಎಸ್) ಸ್ಥಾಪನೆಯಾಯಿತು. ಇದರ ವ್ಯವಸ್ಥಾಪಕರಲ್ಲಿ ಮಾಡಪಾಟಿ ಹನುಮಂತರಾವು, ರಾವಿ ನಾರಾಯಣ ರೆಡ್ಡಿರಂತಹವರು ಇದ್ದಾರೆ. ಅದರ ಮೊದಲ ಉದ್ದೇಶ ವಿದ್ಯಾ ಸೌಕರ್ಯಗಳನ್ನು ಇನ್ನು ಹೆಚ್ಚಾಗಿ ಬೆಳೆಸುವುದು. ಪಾಠಶಾಲೆ ಗಳು ಏರ್ಪಾಟು ಮಾಡಿ ಎಂದು ಪ್ರಜೆಗಳ ಸಮಸ್ಯೆಗಳು ಪರಿಷ್ಕರಿಸಿರಿ ಎಂದು ಕೋರಿಕೊಳ್ಳುತ್ತಾ ಅವರು ಸರಕಾರಕ್ಕೆ ಮನವಿ ಪತ್ರಗಳನ್ನು ವಿಜ್ಞಾಪನೆಗಳು ಸಲ್ಲಿಸಿದರು. 1935 ರಲ್ಲಿ ನಡೆದ ವಾರ್ಷಿಕ ಸಮಾವೇಶದಲ್ಲಿ ಸರಕಾರಕ್ಕೆ ಈ ಕೆಳಗಿನ ಬೇಡಿಕೆಗಳನ್ನು ಮುಂದಿಟ್ಟರು.

1. ಕಡ್ಡಾಯ ಪ್ರಾಥಮಿಕ ವಿದ್ಯೆಯನ್ನು ಜಾರಿಗೆ ತರಬೇಕು.
2. ಮಾತೃ ಭಾಷೆ (ತೆಲುಗು)ಯಲ್ಲಿ ವಿದ್ಯಾ ಬೋಧನೆ ನಡೆಯಬೇಕು.
3. ಜಾಗೀರ್ ಪ್ರಾಂತ್ಯಗಳಲ್ಲಿ ಪ್ರಜೆಗಳ ಕಾನೂನುಬದ್ಧ ಹಕ್ಕುಗಳಿಗೆ ರಕ್ಷಣೆ ಕಲ್ಪಿಸಬೇಕು.
4. ಬಾಲ್ಯ ವಿವಾಹಗಳನ್ನು ನಿಷೇಧಿಸಬೇಕು.
5. ಸ್ಥಳೀಯ ಪ್ರಜಾ ಪ್ರಭುತ್ವಗಳನ್ನು ಏರ್ಪಾಟು ಮಾಡಬೇಕು.
6. ಅಸ್ಪೃಶ್ಯತೆಯನ್ನು ನಿಷೇಧಿಸಬೇಕು, ಅಸ್ಪೃಶ್ಯರಿಗೆ ಸಮಾಜದಲ್ಲಿ ಗೌರವಪ್ರದವಾದ ಸ್ಥಾನವನ್ನು ಕಲ್ಪಿಸಬೇಕು.

ಆಂಧ್ರ ಮಹಾಸಭೆ ಉದ್ದೇಶದಲ್ಲಿ ವಿದ್ಯಾಪರ, ಸಾಮಾಜಿಕ, ಸುಧಾರಣೆಗಳು ಎರಡೂ ಸೇರಿ ಇರುವುದು ನೀವು ಗಮನಿಸುತ್ತೀರಿ. ಎಎಂಎಸ್ ಕಾರ್ಯಕ್ರಮಗಳು ಅತೀ ಶೀಘ್ರವಾಗಿ ತೆಲಂಗಾಣವೆಲ್ಲಾ ವಿಸ್ತರಿಸಿವೆ (ಹರಡಿವೆ). ದೂರಪ್ರಾಂತ್ಯ ಗ್ರಾಮಗಳಲ್ಲಿ ಸಹ ಗ್ರಂಥಾಲಯಗಳು, ಸಾಂಸ್ಕೃತಿಕ ಕೇಂದ್ರಗಳು ಏರ್ಪಟ್ಟವು. ರೈತರು ಕಾರ್ಮಿಕರು ಈ ಕೇಂದ್ರಗಳಿಗೆ ವಿದ್ಯೆ ಕಲಿಯುವುದಕ್ಕೆ, ವಾರ್ತಾಪತ್ರಿಕೆ ಓದುತ್ತಿದ್ದರೆ ಕೇಳುವುದಕ್ಕೆ, ದೇಶ ಪರಿಸ್ಥಿತಿಗಳ ಬಗ್ಗೆ ನಿಜಾಂ ಸರಕಾರದಿಂದ, ರಾಜರಿಂದ ತಮ್ಮ ಸಮಸ್ಯೆಗಳ ಬಗ್ಗೆ ಚರ್ಚಿಸುವುದಕ್ಕಾಗಿ ಬರುತ್ತಿದ್ದರು. ಈ ಕೇಂದ್ರಗಳಲ್ಲಿ ರಾತ್ರಿ ಪಾಠಶಾಲೆಗಳು, ಚರ್ಚಾ ಕಾರ್ಯಕ್ರಮಗಳು ನಿರ್ವಹಿಸುತ್ತಿದ್ದರು. ವೀರೇಶಲಿಂಗಂರಂತಹ ಸಾಮಾಜಿಕ ಸುಧಾರಕರು, ಗಾಂಧೀಜೀ, ನೆಹ್ರೂ ಅಂತಹ ರಾಷ್ಟ್ರೀಯ ನಾಯಕರು ಬರೆದ ಪುಸ್ತಕಗಳನ್ನು ಪ್ರಜೆಗಳು ಓದುತ್ತಿದ್ದರು. ಅಷ್ಟೇಅಲ್ಲದೆ ಸ್ಥಾನಿಕ ಸಮಸ್ಯೆಗಳ ಮೇಲೆ ಹೊಸ ಪುಸ್ತಕಗಳು ಕೂಡಾ ಬರೆಯುತ್ತಿದ್ದರು. ಗೋಲ್ಕೊಂಡ ಪತ್ರಿಕೆ ಸಂಪಾದಕರಾದ ಸುರವರಂ ಪ್ರತಾಪರೆಡ್ಡಿ ಪ್ರಜೆಗಳಲ್ಲಿ ರಾಷ್ಟ್ರೀಯತೆ ಭಾವನೆಗಳನ್ನು ಬೆಳೆಸಿದನು. ಹೈದರಾಬಾದ್ ರಾಜ್ಯ ಸ್ವಾತಂತ್ರ್ಯಕ್ಕೆ ಹೋರಾಡಿದವರಲ್ಲಿ ಕಾಳೋಜಿ ನಾರಾಯಣರಾವು, ದಾಶರಧಿ ಕೃಷ್ಣಮಾಚಾರ್ಯ ದಾಶರಧಿ ರಂಗಾಚಾರ್ಯರಂತಹ ಸಾಹಿತ್ಯ ದಿಗ್ಗಜರು ಇದ್ದರು.

ಹೋರಾಟದಲ್ಲಿ ಪ್ರಜೆಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸುತ್ತಾ ವಿದ್ಯೆಯ ಜೊತಗೆ ಎಎಂಎಸ್ ತಮ್ಮ ಸಮಸ್ಯೆಗಳನ್ನು ಪರಿಷ್ಕರಿಸುತ್ತಿದೆ ಎಂದು ಭಾವಿಸಿದರು. ಈ ಕೇಂದ್ರಗಳು ಹೊಸ ಚಳುವಳಿ ಆಲೋಚನೆಗಳಿಗೆ ಬುನಾದಿ ಯಾಗಿ ಈ ಕೇಂದ್ರಗಳು ಬದಲಾಗಿದ್ದರಿಂದ ನಿಜಾಂ ಸರ್ಕಾರ ಇವುಗಳನ್ನು ವೇದನೆಗಳಿಗೆ ಗುರಿ ಮಾಡತೊಡಗಿತು. 1940ರ ಕಾಲಕ್ಕೆ ಬಹಳ ಮಂದಿ ಕಮ್ಯೂನಿಷ್ಟ್‌ಗಳು ಎಎಂಎಸ್‌ನಲ್ಲಿ ಸೇರಿದರು. ಗುಲಾಮಗಿರಿಯನ್ನು ಕೊನೆಗೊಳಿಸುವುದು. ಭೂ ಸುಧಾರಣೆಗಳು, ರಾಜರಿಂದ ದಬ್ಬಾಳಿಕೆ ನಡೆಸುವುದನ್ನು ಮುಂತಾದ ಸಮಸ್ಯೆಗಳನ್ನು ಬಗೆಹರಿಸಬೇಕಾಗಿ ಅವರು ಪಟ್ಟು ಹಿಡಿದರು. ಎಎಂಎಸ್ ನಲ್ಲಿಯ ಹಳೆ ತರದ ನಾಯಕರು

SCERT TELANGANA

ಇದನ್ನು ವಿರೋಧಿಸಿದರು, ಅದು ವಿದ್ಯಾ ಸಾಹಿತ್ಯ ವೇದಿಕೆಯಾಗಿ ಮುಂದುವರಿಸ ಬೇಕಾಗಿ ಭಾವಿಸಿದರು. ಆದರೆ ಸ್ವಲ್ಪ ಕಾಲದಲ್ಲಿಯೇ ಕ್ರಾಂತಿಕಾರಕ ವರ್ಗಗಳು ನಾಯಕತ್ವಕ್ಕೆ ಬಂದು ರೈತರ ಚಳುವಳಿಯನ್ನು ಪ್ರಾರಂಭಿಸಿದವು.

- ನಿಮ್ಮ ಊರಿನಲ್ಲಿ ಇಲ್ಲವೆ ನಿಮ್ಮ ಪ್ರಾಂತ್ಯದಲ್ಲಿ ಸರಕಾರಿ ಗ್ರಂಥಾಲಯ ಇದೆಯಾ?
- ನೀವು ಸರಕಾರಿ ಗ್ರಂಥಾಲಯಕ್ಕೆ ಹೋಗಿದ್ದರೆ ಅಲ್ಲಿ ಏನು ನಡೆಯುತ್ತದೆಯೋ ನಿಮ್ಮ ಸ್ನೇಹಿತರಿಗೆ ವಿವರಿಸಿರಿ.
- ಗ್ರಾಂಥಲಯಗಳು ನಿಜಾಂ ವಿರೋಧ ಭೂಒಡೆಯರ ವಿರೋಧ ಕೇಂದ್ರಗಳಾಗಿ ಏಕೆ ಬದಲಾದವು ?
- ತೆಲುಗು ಮಾಧ್ಯಮದಲ್ಲಿ ಪಾಠಶಾಲೆಗಳನ್ನು ನಿಜಾಮರು, ಜಾಗೀರ್‌ದಾರರು ಏತಕ್ಕಾಗಿ ಅನುಮತಿಸಲಿಲ್ಲ ?

## ಹೈದರಾಬಾದ್ ರಾಜ್ಯ ಕಾಂಗ್ರೇಸ್

ಬ್ರಿಟಿಷ್ ಆಡಳಿತದಲ್ಲಿ ಇರುವ ಪ್ರಾಂತ್ಯಗಳಲ್ಲಿಯೇ ಭಾರತ ರಾಷ್ಟ್ರೀಯ ಕಾಂಗ್ರೇಸ್ ಕೆಲಸ ಮಾಡುತ್ತಿತ್ತು. ವಿವಿಧ ರಾಜ್ಯಗಳಲ್ಲಿ ಅದು ನೇರವಾಗಿ ಕೆಲಸ ಮಾಡುತ್ತಿರಲಿಲ್ಲ. ಆದರೆ ಈ ರಾಜ್ಯದಲ್ಲಿಯ ಪ್ರಜೆಗಳು ಇನ್ನು ಹೆಚ್ಚಾಗಿ ತುಳಿತಕ್ಕೆ ಅನ್ಯಾಯಗಳಿಗೆ ಗುರಿಯಾಗುತ್ತಿದ್ದರು. ಭಾರತ ದೇಶ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಾಗಬೇಕೆಂದು ಅವರು ಆತೊರೆಯುತ್ತಿದ್ದರು. ಇಂತಹ ರಾಜ್ಯಗಳಲ್ಲಿ ರಾಷ್ಟ್ರೀಯ ವಾದಿಗಳು 'ರಾಜ್ಯ ಕಾಂಗ್ರೇಸ್ 'ರು ಏರ್ಪಡಿಸಿ ಅವುಗಳಿಂದ ಪ್ರಜಾಪ್ರಭುತ್ವ ಹಕ್ಕುಗಳು, ಸುಧಾರಣೆಗಳು, ಪ್ರಾತಿನಿಧ್ಯ ಸರಕಾರದಂತಹವುಗಳಿಗಾಗಿ ಹೋರಾಡುತ್ತಿದ್ದರು. ಹೈದರಾಬಾದ್‌ನಲ್ಲಿ ಕೂಡ ಇದೆ ನಡೆಯಿತು.

ಹೈದರಾಬಾದ್‌ನಲ್ಲಿ ರಾಷ್ಟ್ರೀಯವಾದಕ್ಕೆ ಹೆಚ್ಚಾಗುತ್ತಿರುವ ಅದ್ಯತೆಯನ್ನು ನೋಡಿದ ನಿಜಾಂ 1938 ರಲ್ಲಿ ಪ್ರತಿಯೊಬ್ಬರ ಬಾಯಿಯಲ್ಲಿ ಮೆದಲುತ್ತಿರುವ ರಾಷ್ಟ್ರೀಯ ಗೀತೆಯಾದ ''ವಂದೇಮಾತರಂ''ನ್ನು ನಿಷೇದಿಸಿದನು. ಇದರಿಂದ ದೊಡ್ಡ ಚಳುವಳಿ ಪ್ರಾರಂಭವಾಯಿತು. ಪಾಠಶಾಲೆಗಳು, ಕಾಲೇಜು ವಿದ್ಯಾರ್ಥಿಗಳು ಈ ಗೀತೆಯನ್ನು ಹಾಡುತ್ತಾ ಬೃಹತ್ ಪ್ರಮಾಣದಲ್ಲಿ ಚಳುವಳಿಯಲ್ಲಿ ಪಾಲ್ಗೊಂಡರು. ನಿಜಾಂ ಸರಕಾರ ಕಾಲೇಜುಗಳನ್ನು ಮುಚ್ಚಿಸಿದಾಗ ವಿದ್ಯಾರ್ಥಿಗಳು ಇತರ ರಾಜ್ಯಗಳಿಗೆ ಹೋಗಿ ವಿದ್ಯಾಭ್ಯಾಸವನ್ನು ಮುಂದುವರಿಸಿದರು.

ರಾಜ್ಯದಲ್ಲಿ ಯುವಕರ ಸ್ಪಂದನೆಯನ್ನು ಗಮನಿಸಿ ಕಾಂಗ್ರೇಸ್ ಉದ್ಯಮ (ಚಳುವಳಿ) ಬಗ್ಗೆ ಸಾನೂಭೂತಿ ಇದ್ದ ಹೈದರಾಬಾದ್ ರಾಷ್ಟ್ರೀಯವಾದಿಗಳು ಸ್ಫೂರ್ತಿಹೊಂದಿ 1938 ರಲ್ಲಿ ಹೈದರಾಬಾದ್ ರಾಜ್ಯ ಕಾಂಗ್ರೆಸ್‌ನ್ನು ಏರ್ಪಡಿಸಿದರು. ಅದರ ಮುಖ್ಯ ನಾಯಕರಲ್ಲಿ ಸ್ವಾಮಿರಮಾನಂದ ತೀರ್ಥ ಒಬ್ಬರು. ಆತನ ಜೊತೆಗೆ ಕಾ.ಬಿ.ರಾಮಕಿಷನ್‌ರಾವು. ಜಮಲಾಪುರಂ ಕೇಶವರಾವು, ಕೆ.ವಿ.ರಂಗಾರೆಡ್ಡಿ, ಜೆ.ವಿ. ನರಸಿಂಗರಾವು ರಂತಹ ಯುವ ನಾಯಕರು ಚಳುವಳಿಯಲ್ಲಿ ಆದರ್ಶ ಮುಖಂಡರಾಗಿ ನಿಂತರು. ಯುವ ಕಾಂಗ್ರೇಸ್ ನಾಯಕರಾದ ಡಾ॥ ಮರ್ರಿ ಚೆನ್ನಾರೆಡ್ಡಿ ಆನಂತರ ರಾಜ್ಯಕ್ಕೆ ಮುಖ್ಯಮಂತ್ರಿಯಾದರು, ಶ್ರೀ ಪಿ.ವಿ.ನರಸಿಂಹರಾವು ದೇಶಕ್ಕೆ ಪ್ರಧಾನ ಮಂತ್ರಿಯಾದರು. ಪ್ರಜೆಗಳಿಗೆ ಪ್ರಾಥಮಿಕ ಹಕ್ಕುಗಳು ಕಲ್ಪಿಸಬೇಕೆಂದು ರಾಜ್ಯ ಕಾಂಗ್ರೇಸ್ ಕೊರಿತು. ವಾಕ್ ಸಂಘ, ಪತ್ರಿಕೆ, ಮತಪರ ಉತ್ಸಾಹಗಳ ಸ್ವಾತಂತ್ರ್ಯವನ್ನು ಘೋಷಿಸುತ್ತಾ ಜಾರಿ ಮಾಡಿದ ಆದೇಶಗಳನ್ನು ತಕ್ಷಣ ಹಿಂತೆಗೆದು ಕೊಳ್ಳಬೇಕೆಂದು ಕೋರಿತು. ನಿಜಾಂ ಮಾತ್ರವೇ ಅಲ್ಲದೆ ಪ್ರಜೆಗಳಿಂದ ಆಯ್ಕೆಯಾದ ನಾಯಕರು ರಾಜ್ಯಕ್ಕೆ ಸಂಬಂಧಿಸಿದ ಕಾನೂನುಗಳನ್ನು ಜಾರಿಮಾಡಬೇಕೆಂದು ಸಹ ಕಾಂಗ್ರೇಸ್ ಕೋರಿತು.

ದೇಶದಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಕೈಗೊಂಡಾಗ 1942ರಲ್ಲಿ ರಾಜ್ಯ ಕಾಂಗ್ರೇಸ್ ಅದಕ್ಕೆ ಅನುಗುಣವಾಗಿ ಸತ್ಯಾಗ್ರಹ ಮಾಡಲಾಯಿತು. ರಾಜ್ಯ ಕಾಂಗ್ರೇಸ್‌ನ್ನು ನಿಜಾಂ ಸರಕಾರ ನಿಷೇದಿಸಿ, ನಾಯಕರನ್ನು ಜೈಲಿಗಾಕಲಾಯಿತು. 1946 ರಲ್ಲಿ ಭಾರತದೇಶ ಸ್ವಾತಂತ್ರ್ಯ ಪಡೆದುಕೊಳ್ಳುತ್ತದೆ ಎಂದು ನಿರ್ಧಾರವಾದ್ದರಿಂದ ನಿಜಾಂ ಆಡಳಿತಕ್ಕೆ ಮುಕ್ತಾಯ ಹೇಳಿ ಹೈದರಾಬಾದ್ ರಾಜ್ಯವನ್ನು ಭಾರತ ಗಣತಂತ್ರದಲ್ಲಿ ಸೇರಿಸ ಬೇಕೆಂದು ಹೈದರಾಬಾದ್ ರಾಜ್ಯ ಕಾಂಗ್ರಸ್ ಚಳುವಳಿ ಕೈಗೊಂಡಿತು.

- ವಂದೇ ಮಾತರಂ ಗೀತೆ ಕುರಿತು ಮತ್ತುಷ್ಟು ತಿಳಿದುಕೊಳ್ಳಿರಿ.
- ಸ್ವಾಮಿ ರಾಮಾನಂದ ತೀರ್ಥ ಜೀವನದ ಬಗ್ಗೆ ಇನ್ನೂ ಹೆಚ್ಚಾಗಿ ವಿವರಗಳನ್ನು ತಿಳಿದುಕೊಳ್ಳಿರಿ.


ಸ್ವಾಮಿ ರಮಾನಂದ ತೀರ್ಥ


ಮಾಡಪಾಟಿ ಹನ್ಮಂತರಾವ್

SCERT TELANGANA

**ಕೊಂಡಾ ಲಕ್ಷ್ಮಣ ಬಾಪೂಜಿ:** ಕುಲ ತಾರತಮ್ಯತೆಯಿಂದ ಕೂಡಿದ ಗ್ರಾಮೀಣ ಹಿನ್ನೆಲೆಯಲ್ಲಿ ಕೊಂಡಾ ಲಕ್ಷ್ಮಣ ಬಾಪೂಜಿ ನಾಯಕರಾಗಿ ಹೊರಹೊಮ್ಮಿದರು. ನಿಜಾಮಾಬಾದ್ ಜಿಲ್ಲೆ ಆರ್ಮೂರ್ ತಾಲೂಕ್ ನಲ್ಲಿ ಶ್ರಮ ದೋಚುವಿಕೆಯನ್ನು ಕಂಡ ಆತನು ಶ್ರಮ/ಸಂಪತ್ತು ದೋಚುವಿಕೆಗೆ ಕುಲ/ವೃತ್ತಿ ಹೇಗೆ ಉಪಯೋಗಪಡುವುದೋ ಆತನು ನೋಡಿದನು. ನಿಜಾಂ ಆಡಳಿತವನ್ನು ಕೊನೆಗಾಣಿಸಲು ಸೈನಿಕ ಕ್ರಮವನ್ನು ಕೂಡಾ ಬಾಪೂಜಿ ಆಶಿಸಿದನು. ನಿಜಾಂನನ್ನು ಭೌತಿಕವಾಗಿ ನಿರ್ಮೂಲಿಸಲು ಬಾಂಬ್ ಎಸೆಯುವಲ್ಲಿ ಜನರಿಗೆ ಶಿಕ್ಷಣ ನೀಡಿದನು. ಆತನು ನ್ಯಾಯವಾದಿ, ವಿಸುನೂರು ರಾಮಚಂದ್ರರೆಡ್ಡಿಯ ಅನೇಕ ವ್ಯಾಜ್ಯಗಳಲ್ಲಿ ಜನರ ಪಕ್ಷವಾದಿಸಿದನು. ಜನರ ಹಕ್ಕುಗಳಿಗಾಗಿ ಪ್ರಜಾಸ್ವಾಮ್ಯ ತರಹದಲ್ಲಿ ಕಾರ್ಯನಿರ್ವಹಿಸುವವರೆಗೆ ಆತನು ಕಮ್ಯೂನಿಷ್ಟರೊಂದಿಗೆ ಸಾನಿಹಿತ್ಯವನ್ನು ಹೊಂದಿದ್ದನು. ಪ್ರಜಾಸ್ವಾಮಿಕ ಸಹವಾಸದಲ್ಲಿ ವಿಭಿನ್ನ ರಾಜಕೀಯ ಆಲೋಚನೆಗಳನ್ನು ಬೆರೆಸುವುದರಿಂದ ಆತನ ಜೀವನ ಒಂದು ಸಂದೇಶವಾಗಿದೆ.


ಕೊಂಡಾ ಲಕ್ಷ್ಮಣ ಬಾಪೂಜಿ

## ತೆಲಂಗಾಣ ಶಸ್ತ್ರಸಜ್ಜಿತ ಹೋರಾಟ (1946-51)

ಹೈದರಾಬಾದ್ ರಾಜ್ಯದಲ್ಲಿಯ ಜಾಗೀರ್‌ದಾರರು. ದೊರೆಗಳ ಕುರಿತು ಹತ್ತನೆ ಅಧ್ಯಾಯದಲ್ಲಿ ಓದಿದ್ದೀರಿ. ತೆಲಂಗಾಣ ಪ್ರಾಂತದಲ್ಲಿ ರೈತರು ವೃತ್ತಿಕುಲದವರು ಎದುರಿಸುತ್ತಿರುವ ಸಮಸ್ಯೆಗಳನ್ನು ಗುರ್ತಿಸಿಕೊಳ್ಳಿರಿ.

1929 ರಿಂದ ಪಟೇಲ್, ಪಟ್ವಾರೀಗಳು, ದೇಶ ಮುಖ್ಯರು, ರೆವೆನ್ಯೂ, ಪೋಲಿಸ್ ಅಧಿಕಾರಿಗಳು ಲೂಟಿಗೆ ವಿರುದ್ದವಾಗಿ ಹೋರಾಟಕ್ಕೆ ನಲ್ಗೊಂಡ, ಪಿಲ್ಲಲಮರ್ರಿ, ಕರೀಮ್‌ನಗರಂತಹ ಪ್ರಾಂತಗಳಲ್ಲಿ ರೈತ ಸಂಘಗಳು ಏರ್ಪಾಟಾದವು. ಈ ಪ್ರಾಂತಗಳಲ್ಲಿ ಎಎಂಎಸ್ ಕ್ರಿಯಾಶೀತೆಯಿಂದ ಇದ್ದು ಗಂಥಾಲಯಗಳು, ರಾತ್ರಿ ಪಾಠಶಾಲೆಗಳು ಸ್ಥಾಪಿಸಿತು. ಎಎಂಎಸ್, ಕಿಸಾನ್ ಸಭೆಯಲ್ಲಿ ಕೆಲಸ ಮಾಡುತ್ತಿದ್ದ ಕಮ್ಯುನಿಷ್ಟರು 1946 ರಲ್ಲಿ ಅಂತಿಮವಾಗಿ ಅವುಗಳನ್ನು ಪಡೆದುಕೊಂಡರು. ಗುಲಾಮರಿಗೆ ವಿರುದ್ಧವಾಗಿ ''ಸಾಗುವಳಿದಾರನಿಗೆ ಭೂಮಿ'' ಎಂದು ಕ್ರಾಂತಿಕಾರಿ ಕಾರ್ಯಕ್ರಮಗಳನ್ನು ಏರ್ಪಡಿಸಿದರು. ಅನಂತರ ನಲ್ಗೊಂಡ, ಕರೀಂನಗರ್, ವರಂಗಲ್ ಜಿಲ್ಲೆಯಲ್ಲಿ ಎಎಂಎಸ್ ಎಲ್ಲಾ ಹರಿಡಿತು. ಎಎಂಎಸ್ ಗ್ರಾಮಹಂತ ಶಾಖೆಗಳನ್ನು ಏರ್ಪಾಟು ಮಾಡಿತು. ಇವು 'ಸಂಘ'ವಾಗಿ ಹೆಸರು ಪಡೆದವು. ಈ ಸಂಘಗಳಿಗೆ ಕಮ್ಯೂನಿಸ್ಟ್ ಪಾರ್ಟಿ ಕೂಡಾ ನಾಯಕತ್ವ ನೀಡಿತು. ಮೊದಲಿಗೆ ಕಾನೂನು ವಿರುದ್ಧ ಫ್ಯೂಡಲ್ ಲೂಟಿ, ಲೇವಿ ವಿಧಾನಗಳನ್ನು, ಅಧಿಕ ಭೂಮಿ ತೆರಿಗೆಗಳನ್ನು, ಸಾಗುವಳಿದಾರರನ್ನು ಬಿಡಿಸುವುದನ್ನು ವಿರೋದಿಸುತ್ತಾ , ಜೀತಪದ್ದತಿಯನ್ನು ನಿರ್ಮೂಲಿಸಬೇಕೆಂದು ಕೋರುತ್ತಾ ರೈತರು ಕ್ರಾಂತಿ ಎದ್ದರು. ಗ್ರಾಮೀಣ ಸಮಾಜದಲ್ಲಿಯ ಎಲ್ಲಾ ವರ್ಗಗಳನ್ನು (ಸಣ್ಣ ಕಮತುಗಳು ಇರುವ ರೈತರು, ಭೂ ಒಡೆಯರು, ವೃತ್ತಿಕುಲದವರು) ನಿಜಾಂ ರಾಜರಿಗೆ ವಿರುದ್ದವಾಗಿ ನಡೆಸಿದ ಹೋರಾಟದಲ್ಲಿ ಭಾಗಸ್ವಾಮ್ಯಗಳಾಗಿ ಮಾಡುವುದಕ್ಕೆ ಪ್ರಯತ್ನಿಸಿದರು.

ಲೆವಿ ವಸೂಲಿಯನ್ನು ವಿರೋಧಿಸುತ್ತಾ ವಿಸುನೂರು ರಾಮಚಂದ್ರಾರೆಡ್ಡಿ ದೃಶ್ಯತ್ಯಗಳ ಮೇಲೆ ಎ.ಎಮ್.ಎಸ್. ಸರಕಾರಕ್ಕೆ ದೂರುಸಲ್ಲಿಸಿತು. ಅಧಿಕಾರಿಗಳು ವಿಚಾರಣೆಗೆ ಬಂದಾಗ ಸ್ವಲ್ಪ ಗಲಬೆ ಉಂಟಾಯಿತು. ಲೆವಿ ವಸೂಲಿಯಲ್ಲಿ ತನ್ನ ತಪ್ಪುಗಳು ಅಧಿಕಾರಿಗಳ ದೃಷ್ಟಿಗೆ ಬರದಂತೆ ಮಾಡಲು ಹಿಂಸೆಯನ್ನು ಸೃಷ್ಟಿಸಿ ತನಿಖೆ ಮುಂದುವರೆಯದಂತೆ ಮಾಡಲು ರಾಮಚಂದ್ರಾರೆಡ್ಡಿ ಪ್ರಯತ್ನಿಸಿದನು. ದೊಡ್ಡಿ ಮಲ್ಲಯ್ಯ ನಾಯಕತ್ವದಲ್ಲಿನ ಆಂಧ್ರ ಮಹಾಸಭೆ ಕಾರ್ಯಕರ್ತರು ಕೋಟೆಯ ಮುಂದಿನಿಂದ ಹೋಗುತ್ತಿದ್ದರು. ರಾಮಚಂದ್ರಾರೆಡ್ಡಿ ಅನುಚರನಾದ ಮಿಸ್ಕಿನ್ ಅಲಿ ಗೋಡೆಯ ರಂಧ್ರದಿಂದ ಗುಂಡು ಹಾರಿಸಿದನು. ತುಪಾಕಿ ಗುಂಡು ಒಡೆದು ದೊಡ್ಡಿ ಕೊಮರಯ್ಯ ಸ್ಥಳದಲ್ಲೇ ಹತನಾದನು. ಈ ಘಟನೆ 1946 ಜುಲೈ 4 ರಂದು ಸಂಭವಿಸಿತು. ಅಲ್ಲಿಂದ ಸಾಯುಧ ಹೋರಾಟ ಆರಂಭವಾಯಿತು. ಈ ಘಟನೆಯಿಂದ ಮಹತ್ವದ ತೆಲಂಗಾಣ ಸಾಯುಧ ಹೋರಾಟ ಪ್ರಜ್ವಲಿಸತೊಡಗಿತು. ಹಳ್ಳಿ ಹಳ್ಳಿಯಲ್ಲಿ ಸಂಘಗಳು ರಚನೆಯಾದವು. ದೊಡ್ಡಿ ಕೊಮರಯ್ಯನನ್ನು ಸ್ಮರಿಸುತ್ತಾ ಹಾಡುಗಳನ್ನು ಹೇಳುತ್ತಾ ಜನರು ಮೆರವಣಿಗೆಯಲ್ಲಿ ಪಾಲ್ಗೊಂಡರು. ಈ ಚಳುವಳಿಯನ್ನು ಹಿಂಸಾತ್ಮಕ ವಾಗಿ ತುಳಿದುಹಾಕಲು ನಿಜಾಂ, ದೇಶಮುಖ್ (ದೊರೆಗಳು) ಪ್ರಯತ್ನಿಸಿ ದರು. ಇದರಿಂದ ಸಾಯುಧ ಸೈನ್ಯಗಳ ಸಂಘವನ್ನು ರಚಿಸಬೇಕಾ


ದೊಡ್ಡಿ ಕೊಮರಯ್ಯ

SCERT TELANGANA



ನಲ್ಲ ನರಸಿಂಹುಲು

ಯಿತು. ಅವರು ಗ್ರಾಮಗಳಿಂದ ದೊರೆಗಳನ್ನು ಹೋಡೆದೊಡಿಸಿ ಗ್ರಾಮ ಪಂಚಾಯಿತಿ ಮೂಲಕ ಆಡಳಿತ ನಡೆಸಿದರು.

ಗ್ರಾಮ ರಕ್ಷಣೆಗೆ ಗೆರಿಲ್ಲಾ ದಳಗಳು, ಜನರ ಸಮಸ್ಯೆಗಳ ಪರಿಹಾರಕ್ಕೆ ಗ್ರಾಮ ಸಂಘಗಳನ್ನು ರಚಿಸಿದರು. ಹೋರಾಟದ ಸಂದೇಶವನ್ನು ಜನರಲ್ಲಿಗೆ ತೆಗೆದುಕೊಂಡು ಹೋಗಲು ಬುರ್ರಕಥೆ ಸಂಘಗಳನ್ನು ಏರ್ಪಡಿಸಿದರು. ಈ ಸಂಘಗಳು ಊರು ಊರು ತಿರುಗಿ ಜನರಲ್ಲಿ ಚೈತನ್ಯ ತುಂಬಿದರು.

ನಲ್ಲ ನರಸಿಂಹುಲು ದೋಚುವಿಕೆಯಿಂದ ವಿಮುಕ್ತರಾದವರಿಂದ ಸೈನ್ಯವನ್ನು ರಚಿಸಿ ಪ್ರಜಾ ಹೋರಾಟವನ್ನು ಬಲವರ್ಧಿತಗೊಳಿಸಲು ಪ್ರಯತ್ನಿಸಿದರು. ಸೈನ್ಯದ ನೇತೃತ್ವದಲ್ಲಿ ಸಂಘಗಳು ಸಮಾಂತರ ಸರಕಾರವನ್ನು ''ಪ್ರಜಾ ನ್ಯಾಯಾಲಯ''ಗಳನ್ನು ನಿರ್ವಹಿಸಿದವು. ಈ ವಿಧವಾಗಿ ನಲ್ಗೊಂಡ, ವರಂಗಲ್ ಜಿಲ್ಲೆಯಲ್ಲಿ ನಿಜಾಂ ಆಡಳಿತ ಕೊನೆಗೊಂಡು ಆಸ್ಥಾನದಲ್ಲಿ ಸಂಘದ ಆಡಳಿತ ಹುಟ್ಟಿಕೊಂಡಿತು.

ಸಂಘದ ಆಧೀನದಲ್ಲಿ ಬಂದ ಹಳ್ಳಿಗಳಲ್ಲಿ ಶ್ರಮ ದೋಚುವಿಕೆಯನ್ನು ನಿರ್ಮೂಲಿಸಿದರು. ಕೌಲುದಾರರನ್ನು ತೊಲಗಿಸುವುದನ್ನು ನಿಲ್ಲಿಸಿದರು. ಕೌಲನ್ನು ಕಡಿಮೆ ಮಾಡಿದರು. ಕೂಲಿಯ ದರವನ್ನು ಹೆಚ್ಚಿಸಿದರು. ಭೂಮಾಲಿಕರ ಹೆಚ್ಚಿನ ಭೂಮಿಯನ್ನು ಸ್ವಾಧೀನ ಪಡೆಸಿಕೊಂಡು ಭೂಮಿ ಇಲ್ಲದವರಿಗೆ ಹಂಚಿದರು. ಗ್ರಾಮ ಅಧಿಕಾರಿಗಳ, ಬಡ್ಡಿ ವ್ಯಾಪಾರಿಗಳ ದಸ್ತಾವೇಜುಗಳನ್ನು (ಕಾಗದ ಪತ್ರ) ಸುಟ್ಟು ಹಾಕಿದರು. ಅವರು ಸಂಗ್ರಹಿಸಿಟ್ಟುಕೊಂಡ ದವಸ, ಧಾನ್ಯಗಳನ್ನು ಸ್ವಾಧೀನ ಪಡೆಸಿಕೊಂಡರು.

ಈ ಚಳುವಳಿಯು ನಿಜಾಂ ವಿರೋಧಿ, ಪಾಳೆಗಾರಿಕೆಯ ವಿರೋಧಿ ವಿಸ್ತೃತಗೊಂಡು ಹೈದರಾಬಾದನ್ನು ಸ್ವತಂತ್ರ ಭಾರತದಲ್ಲಿ ಅಂತರ್ ಭಾಗಗೊಳಿಸಬೇಕೆಂದು ಕೋರಿದರು. ಚಳುವಳಿಯ ವ್ಯಾಪ್ತಿಯನ್ನು ವಿಸ್ತರಿಸಿ ಎಲ್ಲಾ ವರ್ಗಗಳನ್ನು ಅದರಲ್ಲಿ ಸೇರಿಸಿಕೊಳ್ಳಲು ತೆಲಂಗಾಣ ಪ್ರಾಂತವನ್ನು ತೆಲುಗು ಮಾತನಾಡುವ ಇತರ ಪ್ರಾಂತಗಳೊಂದಿಗೆ ಕೂಡಿಸಿ ವಿಶಾಲಾಂಧ್ರ ರಚನೆ ಮಾಡಬೇಕೆಂದು ಹೋರಾಟ ಮಾಡತೊಡಗಿದರು. ನೈಜಾಂ ಪಾಲನೆಯನ್ನು, ಹೈದರಾಬಾದ್ ರಾಜ್ಯದಲ್ಲಿ ಮುಸ್ಲಿಂರ ಆಧಿಪತ್ಯವನ್ನು ಕಾಪಾಡಿಕೊಳ್ಳಲು ಮತ ತತ್ವ ಮುಸ್ಲಿಂರು ಇತ್ಯ ಹದುಲ್ ಮುಸ್ಲಿಮೀನ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ರಜಾಕಾರರ ಹೆಸರಿನಿಂದ ಸ್ವಯಂ ಕಾರ್ಯಕರ್ತರ ಸೈನ್ಯಗಳನ್ನು ರಚಿಸಿಕೊಂಡರು. ರಾಜ್ಯದಲ್ಲಿ ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆ ರಚನೆ ಮಾಡಲು ಯತ್ನಿಸುತ್ತಿರುವ ಮುಸ್ಲಿಂ ಮೇಧಾವಿಗಳ ಮೇಲೆ ರಜಾಕಾರರು ದಾಳಿ ಮಾಡಲಾರಂಭಿಸಿದರು. ಇವರು ಆಯುಧಗಳನ್ನು ಸಂಗ್ರಹಿಸಿಕೊಂಡು ಪ್ರಜಾಪ್ರಭುತ್ವ ರಾಜಕೀಯ ಪಕ್ಷಗಳ ಮೇಲೆ ದಾಳಿಮಾಡತೊಡಗಿದರು. ಮತ ಕಲ್ಲೋಲಗಳನ್ನು ಸೃಷ್ಟಿಸತೊಡಗಿದರು. ರೈತು ಸಂಘಗಳ ಮೇಲೆ ಕಮ್ಯೂನಿಷ್ಟ್ ದಳಗಳ ಮೇಲೆ ದಾಳಿ ಮಾಡಿದರು. ಇದರಿಂದ ರಜಾಕಾರರಿಗೆ ದೊರೆಗಳ, ಭೂಮಾಲಿಕರ ಬೆಂಬಲ ಲಭಿಸಿತು. ಕಮ್ಯೂನಿಷ್ಟ್ರ ನೇತೃತ್ವದಲ್ಲಿನ ರೈತರಿಗೂ ದೊರೆಗಳ ಬೆಂಬಲ ಹೊಂದಿದ ರಜಾಕಾರರ ಮಧ್ಯ ತೀವ್ರ ಹೋರಾಟಗಳು ನಡೆದವು. ಭಾರತ ದೇಶ ಸ್ವಾತಂತ್ರ್ಯಾನಂತರ ಹೈದರಾಬಾದನ್ನು ಭಾರತದ ಒಕ್ಕೂಟದಲ್ಲಿ ವಿಲೀನಗೊಳಿಸುವಂತೆ ಹೋರಾಟ ನಡೆಸಿದ ರಾಜಕೀಯ ಸಂಸ್ಥೆಗಳ ಮೇಲೆ ರಜಾಕಾರರು ದಾಳಿಮಾಡಲು ಪ್ರಾರಂಭಿಸಿದರು. ಅವರು ಹಳ್ಳಿಗಳ ಮೇಲೆ ಭಯಂಕರವಾಗಿ ದಾಳಿ ಮಾಡುತ್ತಾ ಜನರನ್ನು ಭಯಭ್ರಾಂತಿಗೊಳಿಸಿದರು. ಇದರಿಂದ ಹೈದರಾಬಾದ್ ಸ್ವತಂತ್ರವಾಗಿರುವುದೆಂದು ಭಾವಿಸಿದರು. ಅನೇಕ ಗ್ರಾಮಗಳನ್ನು ಸುಟ್ಟು ಸ್ತ್ರೀಯರನ್ನು ಬಂಧಿಸಿದರು. ಸಾಮಾನ್ಯ ಜನರಲ್ಲಿ ಮಾನಸಿಕ ಆಂದೋಳನೆ ಭಯವನ್ನು ಹುಟ್ಟಿಸಿದರು. ವರಂಗಲ್ ಕೋಟೆಯಲ್ಲಿ ನಡೆದ ಒಂದು ಘಟನೆಯಲ್ಲಿ ರಾಷ್ಟ್ರ ಧ್ವಜವನ್ನು ಹಾರಿಸುತ್ತಿರುವ ಬತ್ತಿನಿ ಮುಗಿಲಯ್ಯನನ್ನು ರಜಾಕಾರರ ಗುಂಪು ಅಮಾನುಷ್ಯವಾಗಿ ಕೊಂದು ಹಾಕಿತು. ಜನಗಾಮ ತಾಲೂಕುನಲ್ಲಿಯ ಬೈರಾನ್‌ಪಲ್ಲಿ ಗ್ರಾಮದಲ್ಲಿ ಮತಾಂದರಾದ ರಜಾಕಾರರು ಅನೇಕ ಜನರನ್ನು ಗುಂಡಿಕ್ಕಿ ಸಾಯಿಸಿದರು. ಇಂತಹ ಘಟನೆಗಳು ಸಂಭವಿಸಿದರೂ ನಿಜಾಂ ಪ್ರೇಕ್ಷಕ ಪಾತ್ರ ವಹಿಸಿದರು. 1948ರಲ್ಲಿ ಭಾರತ ದೇಶವು ಸೈನಿಕ ಕ್ರಮ ತೆಗೆದುಕೊಂಡು ಹೈದರಾಬಾದನ್ನು ಭಾರತ ಒಕ್ಕೂಟದಲ್ಲಿ ಸೇರಿಸಿಕೊಂಡಿತು. ನಂತರವು ಕೂಡ ಭೂ ಸಂಸ್ಕರಣೆಗಳನ್ನು ಜಾರಿಗೊಳಿಸಲು ದೊರೆಗಳಿಂದ ರೈತರ ರಕ್ಷಣೆಗೆ ತೆಲಂಗಾಣ ಸಾಯುಧ ಹೋರಾಟ ಮುಂದುವರೆಯಿತು. ರೈತ ಸಂಘಗಳ ನಾಯಕತ್ವದಲ್ಲಿ ಹತ್ತು ಲಕ್ಷ ಎಕರೆ ಭೂಮಿಯನ್ನು ನಿಜವಾದ ಹಕ್ಕುದಾರರಿಗೆ ಹಂಚಿದರು. ಈ ಹೋರಾಟದಲ್ಲಿ

SCERT TELANGANA

4000 ಜನ ಪ್ರಜೆಗಳು ಅಮರರಾದರು. ಬಹಳ ಜನ ಬಂಧಿಗಳಾಗಿ ಜೈಲಿಗೆ ಹೋದರು. ಆದರೆ ಭಾರತ ಸೈನ್ಯವು ಈ ಚಳುವಳಿಯನ್ನು ಹತ್ತಿಕ್ಕಿವುದರೊಂದಿಗೆ 1950ರಲ್ಲಿ ಇದು ನಿಂತುಹೋಯಿತು.

- ತೆಲಂಗಾಣ ಸಾಯುಧ ಹೋರಾಟದಲ್ಲಿ ಎ.ಎಮ್.ಎಸ್.ನ ಪಾತ್ರ ಏನು ?



ರಾವಿ ನಾರಾಯಣರೆಡ್ಡಿ

**ರಾವಿ ನಾರಾಯಣರೆಡ್ಡಿ :** ನಿಜಾಂ ವಿರುದ್ಧದ ಚಳುವಳಿಯಲ್ಲಿ ಪಾಲ್ಗೊಂಡ ಪ್ರಮುಖರಲ್ಲಿ ರಾವಿ ನಾರಾಯಣರೆಡ್ಡಿ ಒಬ್ಬರು. ಇವರು 1936ರಲ್ಲಿಸಂವಿಧಾನ ತಿದ್ದುಪಡಿಯನ್ನು ಪ್ರತಿಪಾದಿಸಿದರು. ಆಂಧ್ರ ಮಹಾಸಭೆ ಎಡಪಕ್ಷ ರಾಜಕೀಯ ಪಕ್ಷಗಳ ಕಡೆ ಸೇರುವಲ್ಲಿ ಈತನು ಪ್ರಮುಖ ಪಾತ್ರ ವಹಿಸಿದನು. ತೆಲಂಗಾಣ ರೈತ ಚಳುವಳಿಯಲ್ಲಿ ಕೂಡ ಕ್ರಿಯಾಶೀಲ ಪಾತ್ರ ಪೋಷಿಸಿದನು. ಹೈದರಾಬಾದ್ ವಲಯದ ಭಾರತ ಕಮ್ಯೂನಿಷ್ಟ್ ಪಾರ್ಟಿಗೆ ತೆಲಂಗಾಣ ಸ್ವತಂತ್ರ ಹೋರಾಟದಲ್ಲಿ ವ್ಯವಸ್ಥಾಪಕ ಸದಸ್ಯನಾದನು. ರೈತ ಚಳುವಳಿಯನ್ನು ನಿಜಾಂ ಸರಕಾರದ ಭಗ್ನತೆಗೆ ನಡೆಯುತ್ತಿರುವ ಪ್ರಜಾತಂತ್ರ ಹೋರಾಟದಲ್ಲಿ ಸೇರಿಸಿದನು.



ಮುಗ್ದು ಮೊಯುನಿದ್ದೀನ್

**ಮುಗ್ದು ಮೊಯುನಿದ್ದೀನ್ :** ಹೈದರಾಬಾದ್ ನಗರ ಮೇದಾವಿ ಗುಂಪುನಲ್ಲಿನ ಪ್ರಥಮ ಕ್ರಾಂತಿಕಾರಿ ನಾಯಕರಲ್ಲಿ ಮುಗ್ದು ಮೊಯುನಿದ್ದೀನ್ ಒಬ್ಬರು. ಉಸ್ಮಾನಿಯಾ ವಿಶ್ವವಿದ್ಯಾಲಯದ ಉಪನ್ಯಾಸಕರು, ವಿದ್ಯಾರ್ಥಿಗಳಿಂದ ರಚಿತಗೊಂಡ ಕಾಮ್ರೇಟ್ ಅಸೋಸಿಯೇಷನ್‌ನಲ್ಲಿ ಸದಸ್ಯನಾಗಿದ್ದನು. ಸಿ.ಪಿ.ಐ. ಹೈದರಾಬಾದ್ ಘಟಕಕ್ಕೆ ಕಾರ್ಯದರ್ಶಿಯಾದನು. ಬೀದಿ ಹೋರಾಟಗಳನ್ನು ಹೈದರಾಬಾದ್ ನಗರ ಪಾಲಿಕ, ಪ್ರಾಗಟೂಲ್ಸ್‌ನಲ್ಲಿ ನಡೆಯುತ್ತಿರುವ ಕಾರ್ಮಿಕ ಸಂಘಗಳೊಂದಿಗೆ ಸಮನ್ವಯಗೊಳಿಸಿದನು.



ದೇವುಲಪಲ್ಲಿ ವೆಂಕಟೇಶ್ವರರಾವು

**ದೇವುಲಪಲ್ಲಿ ವೆಂಕಟೇಶ್ವರರಾವು :** ಈತನು ಪ್ರಮುಖ ಕಮ್ಯೂನಿಷ್ಟ್ ನಾಯಕನು. ನಲ್ಗೊಂಡ ಜಿಲ್ಲೆ ಸೂರ್ಯಪೇಟೆ ತಾಲೂಕ ಚಂದುಪಟ್ಲ ಗ್ರಾಮದಲ್ಲಿ 1917ರಲ್ಲಿಜನಿಸಿದ ಇವರು ಭಾರತ ರಾಷ್ಟ್ರೀಯತೆಯೊಂದಿಗೆ ಪರಿಚಯವಾಗುವುದರೊಂದಿಗೆ ಆತನು ಸುಧಾರಣಾ ಚಳುವಳಿಯಲ್ಲಿ ಸೇರಿದನು. ತೆಲಂಗಾಣ ಪ್ರಜಾ ಹೋರಾಟ ನಿರ್ಮಾಣಕ್ಕಾಗಿ ಅಗ್ನಾತವಾಸಕ್ಕೆ ಹೋದ ಮೊದಲಿಗರಲ್ಲಿ ಇವರು ಒಬ್ಬರು. ಆಂಧ್ರ ಮಹಾಸಭ ಸದಸ್ಯರನ್ನು ಸೇರಿಸಿಕೊಳ್ಳುವುದರ ಮೂಲಕ ಹಳ್ಳಿಗಳಲ್ಲಿ ಕಮ್ಯುನಿಷ್ಟ್ ಪಾರ್ಟಿಯನ್ನು ಸ್ಥಾಪಿಸಿದನು. ಬಿಟ್ಟಿ ಚಾಕಿರಿ ದೊರೆಗಳ ದೌರ್ಜನ್ಯಗಳ ಮೇಲೆ ಅನೇಕ ಪುಸ್ತಕಗಳನ್ನು ಬರೆದನು. ಜಮೀಂದಾರಿ ವ್ಯವಸ್ಥೆಗೆ ಪ್ರತಿಯಾಗಿ ತೆಲಂಗಾಣ ಪ್ರಜಾ ಚಳುವಳಿಯು 1946ಕ್ಕಿಂತ ಮೊದಲೇ ಪ್ರಾರಂಭವಾಗಿದೆ ಎಂದು ಗಟ್ಟಿಯಾಗಿ ವಾದಿಸಿದನು.

ಶೇಕ್ ಬಂದಗಿ ಹೋರಾಟವು ಪ್ರಜಾ ಹೋರಾಟವನ್ನು ಸೂಚಿಸುತ್ತದೆ. ಬಂದಗಿಗೆ ಬರಬೇಕಾದ ಭೂಮಿಯನ್ನು ರಾಮಚಂದ್ರಾರೆಡ್ಡಿ (ವಿಸುನೂರು ದೇಶಮುಖ್) ಅನುಯಾಯಿಯಾದ ಆತನ ಅಣ್ಣ ಸವಾಲು ಮಾಡಿದನು. ಈ ವಿಷಯ ನ್ಯಾಯಾಲಯಕ್ಕೆ ಹೋಗಿ ಬಂದಗಿ ಜಯ ಸಾಧಿಸಿದನು. ಅಬ್ಬಾಸ್ ಅಲಿಗೆ ವಿಸುನೂರು ರಾಮಚಂದ್ರಾರೆಡ್ಡಿ ಬೆಂಬಲ ನೀಡಿದನು. ಆದ್ದರಿಂದ ಇದು ಆತನ ಸೋಲೆಂದು ಭಾವಿಸಿದನು. ಆತನು ಏನಾದರೂ ಮಾಡಬೇಕೆಂದುಕೊಂಡನು. ವಿಸುನೂರು ದೇಶಮುಖ್ ಗುಂಡಾಗಳು ಬಂದಗಿಯನ್ನು ಕೊಲೆಗೈದರು. ಇದರಿಂದ ಸುತ್ತಮುತ್ತಲಿನ ಹಳ್ಳಿಯವರು ಕೋಪೊದ್ರಿಕ್ತರಾದರು. ಆತನಿಗೆ ಸ್ಮಾರಕ ಕಟ್ಟುವಲ್ಲಿ ಜನರು ಮುಂದಾದರು. ಈ ವಿಧವಾಗಿ ಪ್ರಜಾಹೋರಾಟಕ್ಕೆ ಬಂದಗಿ ಪ್ರೇರಣೆಯಾಗಿ ನಿಂತರು. ಹಳ್ಳಿಗಳಲ್ಲಿ ಪ್ರಜಾ ಹೋರಾಟ ಬಲವರ್ಧನೆಗೊಳ್ಳತೊಡಗಿತು.

SCERT TELANGANA


ಐಲಮ್ಮ

**ಚಾಕಲಿ ಐಲಮ್ಮ :** ಆ ದಿನಗಳಲ್ಲಿ ಭೂಮಾಲಿಕರು ಸಣ್ಣ ರೈತರನ್ನು ತೆಗೆದುಹಾಕಿ ಭೂಮಿಯನ್ನು ಅಧಿಕ ಹಣಕ್ಕೆ ಹೊಸ ಕಾಲುದಾರರಿಗೆ ಕೊಡತೊಡಗಿದರು. ಇದನ್ನು ಸಂಘಗಳು ಪ್ರತಿಘಟಿಸಿದವು. ಚಾಕಲಿ ಐಲಮ್ಮನಿಗೆ ಸೇರಿದ ಭೂಮಿಯನ್ನು ಬಲವಂತವಾಗಿ ಗುಂಜಿಕೊಳ್ಳಲು ವಿಸುನೂರು ದೇಶಮುಖ್ ಪ್ರಯತ್ನಿಸಿದನು. ಇದನ್ನು ಸಹ ಸಂಘಗಳು ಪ್ರತಿಘಟಿಸಿದವು.


ಆರುಟ್ಲ ರಾಮಚಂದ್ರಾರೆಡ್ಡಿ

**ಆರುಟ್ಲ ರಾಮಚಂದ್ರಾರೆಡ್ಡಿ :** ವಿದ್ಯಾರ್ಥಿದಶದಲ್ಲಿಯೇ ಆರುಟ್ಲ ರಾಮಚಂದ್ರಾರೆಡ್ಡಿ ಕ್ರಾಂತಿಪಥವನ್ನು ತೋರಿದನು. ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಓದುತ್ತಿರುವಾಗ ಆಂಧ್ರ ಮಹಾಸಭೆ, ರಾಷ್ಟ್ರ ಕಾಂಗ್ರೆಸ್, ಆರ್ಯ ಸಮಾಜ ನಿರ್ವಹಿಸುತ್ತಿರುವ ರಾಜಕೀಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ನಿಜಾಂ ಸರಕಾರವು ಬಲವಂತವಾಗಿ ಕಂದಾಯ ವಸೂಲಿ ಮಾಡುವಾಗ ದೊರೆಗಳು ಬೆಳೆಯನ್ನು ಜಪ್ತುಮಾಡುವಾಗ ಆರುಟ್ಲ ಪ್ರತಿಭಟಿಸಿದನು. ಈತನು ರೈಸ್ ಮಿಲ್‌ಗಳ ಮೇಲೆ ದಾಳಿಮಾಡಿ ಬುವನಗಿರಿ, ಮುಂದ್ರಾಯ್, ಜನಗಾಮಗಳಲ್ಲಿ ಆಹಾರ ಧಾನ್ಯಗಳನ್ನು ದೋಚಿಕೊಂಡು ಬಡವರಿಗೆ ಹಂಚಿದನು. ಕಡಿವೆಂಡಿ, ಪಾಲಕುರ್ತಿಯಲ್ಲಿ ಸಂಘಗಳ ರಚನೆಯಲ್ಲಿ ಮುಖ್ಯಪಾತ್ರ ವಹಿಸಿದನು.

1930ರಲ್ಲಿ ನಡೆದ ಉಪ್ಪುಸತ್ಯಾಗ್ರಹದಲ್ಲಿ ಪಾಲ್ಗೊಂಡ ಮೊದಲಹಂತದ ರಾಷ್ಟ್ರೀಯ ನಾಯಕರಲ್ಲಿ **ಬದ್ದಂ ಎಲ್ಲಾರೆಡ್ಡಿ** ಒಬ್ಬರು. ಈತನು ಹೈದರಾಬಾದ್‌ನಲ್ಲಿ ಹರಿಜನೋದ್ಧರಣ ಕಾರ್ಯಕ್ರಮ ಕೈಗೊಂಡನು. ನಂತರ ಪ್ರಮುಖ ಕಮ್ಯೂನಿಷ್ಟ್ ನಾಯಕನಾಗಿ ತೆಲಂಗಾಣ ಸಾಯುಧ ಹೋರಾಟದಲ್ಲಿ ಕೆಲಸಮಾಡಿದನು. ಭೀಂರೆಡ್ಡಿ, ನರಸಿಂಹರೆಡ್ಡಿರವರ ಎಡರಂಗ ಭಾವನೆಗಳಿಂದ ಪ್ರಭಾವಿತನಾಗಿ ಕಮ್ಯುನಿಷ್ಟ ಆದನು. ಭೂಮಾಲಿಕರಿಗೂ, ಸರ್ಕಾರಿ ಅಧಿಕಾರಿಗಳಿಗೂ ವಿರುದ್ಧವಾಗಿ, ಬಿಟ್ಟಿ ಚಾಕರಿ ವಿರುದ್ಧ ಹೋರಾಟ ನಡೆಸಿದನು. ಈತನು ಅಜ್ಞಾತ ಕಾರ್ಯಕರ್ತನಾಗಿ ಕೆಲಸಮಾಡುತ್ತಾ ನಂತರ ದಳನಾಯಕನಾದನು. ಬೊಮ್ಮಗಾನಿ ಧಮ್ಮಭಿಕ್ಷಂ ವಿದ್ಯಾರ್ಥಿ ದೆಶೆಯಲ್ಲಿಯೇ ರಾಜಕೀಯ ಕಾರ್ಯಕಲಾಪಗಳಲ್ಲಿ ಸೇರಿದನು. ಈತನು ಬಡಮಕ್ಕಳಿಗಾಗಿ ಸೂರ್ಯಪೇಟೆಯಲ್ಲಿ ವಸತಿಗೃಹ ಪ್ರಾರಂಭಿಸಿದನು. ನಂತರದಲ್ಲಿ ನಲ್ಗೊಂಡ ಜಿಲ್ಲೆಯಲ್ಲಿ ಕಮ್ಯೂನಿಷ್ಟ್ ನಾಯಕನಾಗಿ ಬೆಳೆದನು.

- ತೆಲಂಗಾಣ ನಿರಾಯುಧ ಹೋರಾಟ ರೂಪುಗೊಳ್ಳುವುದರಲ್ಲಿ AMS ಎಂತಹ ಪಾತ್ರ ಪೋಷಿಸಿತು?
- ರೈತರ ಸಮಸ್ಯೆಗಳು ಪರಿಷ್ಕರಿಸುವುದೊಂದೇ ತೆಲಂಗಾಣ ನಿರಾಯುಧ ಹೋರಾಟದ ಉದ್ದೇಶವೇ? ಇನ್ನೇನಾದರೂ ಇದೆಯೇ?
- ಹಿಂದುಗಳಾದ ದೊರೆಗಳು ರಜಾಕಾರರಿಗೆ ಏಕೆ ಸಹಾಯ ಮಾಡಿದರು ಯೋಚಿಸಿ.

## ಭಾರತದೇಶದಲ್ಲಿ ವಿಲೀನ :

1947ರಲ್ಲಿ ಭಾರತದೇಶ ಸ್ವಾತಂತ್ರ್ಯ ಪಡೆದಾಗ ಆಗಿನ ನಿಜಾಮರಾದ ಉಸ್ಮಾನ್ ಆಲೀಖಾನ್ ಹೈದರಾಬಾದನ್ನು ಸ್ವತಂತ್ರ ರಾಜ್ಯವನ್ನಾಗಿ ಮಾಡಬೇಕೆಂದು ಕೊಂಡಿದ್ದನು. ರಾಜ್ಯವನ್ನು ಭಾರತದೇಶದಲ್ಲಿ ವಿಲೀನಗೊಳಿಸಬೇಕೆಂದು ಸಾಮಾನ್ಯ ಪ್ರಜೆಗಳು ಕೋರಿಕೊಂಡರು. ಇದಕ್ಕಾಗಿ ರಾಮಾನಂದ ತೀರ್ಥ ನಾಯಕತ್ವದಲ್ಲಿ ಹೈದರಾಬಾದ್ ರಾಜ್ಯ ಕಾಂಗ್ರೆಸ್ ದೊಡ್ಡ ಪ್ರಮಾಣದಲ್ಲಿ ಚಳುವಳಿ ನಡೆಸಿತು. ರಜಾಕಾರರ ಮೇಲೆ ಸಹ ದಾಳಿ ನಡೆಸಿದರುಈ ದೃಷ್ಕುತ್ಯವನ್ನು

SCERT TELANGANA



*ಚಿತ್ರ 12.4: ಉಸ್ಮಾನ್ ಆಲೀಖಾನ್ ಮತ್ತು ಸರ್ದಾರ್ ವಲ್ಲಬಾಯ್ ಪಟೇಲ್*

ಕೊನೆಗೊಳಿಸಬೇಕೆಂದು ನಿರ್ಣಯಿಸಿದ ಭಾರತ ಸರ್ಕಾರ ಸೈನಿಕ ದಳಗಳನ್ನು ಹೈದರಾಬಾದ್ ಮೇಲೆ ಕಳುಹಿಸಿತು. 1948 ಸೆಪ್ಟಂಬರ್‌ನಲ್ಲಿ ಕೊನೆಯದಾಗಿ ಹೈದರಾಬಾದ್ ಭಾರತದೇಶದಲ್ಲಿ ವಿಲೀನ ಗೊಂಡಿತು. ಪ್ರಜಾಪ್ರಭುತ್ವ ಪ್ರಕ್ರಿಯೆ ಪೂರ್ತಿಯಾಗುವವರೆಗೆ ನಿಜಾಂನನ್ನು ಆಡಳಿತಗಾರರನ್ನಾಗಿ ಮುಂದುವರೆಯಬೇಕೆಂದು ಭಾರತ ಸರ್ಕಾರ ಆದೇಶಿಸಿತು. ಫ್ಯೂಡಲ್ ವ್ಯವಸ್ಥೆಯನ್ನು ರದ್ದು ಮಾಡಿ ನಿಜಾಂರಾಜ್ಯದಲ್ಲಿ



ಬೂರ್ಗುಲ ರಾಮಕೃಷ್ಣರಾವು

ಪ್ರಜಾಪ್ರಭುತ್ವ ಪ್ರಕ್ರಿಯೆಗಳಾದ ಚನಾವಣೆಗಳನ್ನು ಪ್ರಾರಂಭಿಸಲು ತಪ್ಪಲಿಲ್ಲ. 26 ಜನವರಿ 1950ರಂದು ಭಾರತ ಸಂವಿಧಾನ ಜಾರಿಗೆ ಬಂದುದರಿಂದ ನೈಜಾಂ ಆಡಳಿತ ಕೊನೆಗೊಂಡಿತು.ಆದರೆ ಕೊನೆಯ ನಿಜಾಂರಾದ ಉಸ್ಮಾನ್ ಆಲೀಖಾನ್ ಹೈದರಾಬಾದು 'ರಾಜ್ ಪ್ರಮುಖ್'(ರಾಜ್ಯ ಅಧಿಪತಿ)ಯಾಗಿ ಮುಂದು ವರೆದನು. ಆದರೆ ಆತನು ಭಾರತ ಸರ್ಕಾರ ಅಧಿಕಾರಿಗಳ ಸಲಹೆಯ ಮೇರೆಗೆ ನಡೆದು ಕೊಳ್ಳಬೇಕು. 1952 ರಲ್ಲಿ ಚುನಾವಣೆಗಳು ನಡೆದು ಪ್ರಜೆಗಳಿಂದ ಆರಿಸಲ್ಪಟ್ಟ ಸರ್ಕಾರ ಏರ್ಪಟ್ಟಿತು. ಹೈದರಾಬಾದ್‌ಗೆ ಬೂರ್ಗುಲ ರಾಮಕೃಷ್ಣರಾವು ಮೊದಲನೇ ಮುಖ್ಯಮಂತ್ರಿಯಾದರು.1956ರ ವರೆಗೆ ರಾಜ್ ಪ್ರಮುಖ್‌ನಾಗಿ ನಿಜಾಂ ಮುಂದುವರೆದನು. ಆಂಧ್ರ ತೆಲಂಗಾಣ ಪ್ರಾಂತಗಳು ಸೇರಿ ಆಂಧ್ರಪ್ರದೇಶ್ ಆಗಿ ಏರ್ಪಟ್ಟದುದರಿಂದ ರಾಜ್‌ಪ್ರಮುಖ್ ಸ್ಥಾನದಲ್ಲಿ ಭಾರತದೇಶ ಅಧ್ಯಕ್ಷನು ನಿಯಮಿಸಿದ ಗವರ್ನರ್ ಬಾಧ್ಯತೆಗಳನ್ನು ಕೈಗೊಂಡನು.ಆ ವಿಧವಾಗಿ ಹೈದರಾಬಾದು ರಾಜ್ಯದ ಮೇಲೆ ನಿಜಾಮರ ಪಾಲನೆ ಅಂತ್ಯಗೊಂಡಿತು.

- ಭಾರತ ದೇಶದಲ್ಲಿ ಹೈದ್ರಾಬಾದ್ ವಿಲೀನವಾದ ನಂತರ ಸಹ ನಿಜಾಮುನನ್ನು ಅಧಿಕಾರದಲ್ಲಿ ಮುಂದುವರೆಯಲು ಬಿಟ್ಟಿತು.
- ಫ್ಯೂಡಲ್ ವ್ಯವಸ್ಥೆಯನ್ನು ರದ್ದು ಮಾಡುತ್ತಾ ತೀರ್ಮಾನಗಳು ಜಾರಿ ಮಾಡುವುದಕ್ಕೆ ನಿಜಾಂ ಏಕೆ ಅಂಗೀಕರಿಸಿದನು?
- 26 ಜನವರಿ 1950 ರಂದು ನೈಜಾಂ ಆಡಳಿತ ಕೊನೆಗೊಂಡಿತೆಂದು ಏಕೆ ಹೇಳಬಹುದು ?

SCERT TELANGANA

## ತೆಲಂಗಾಣ ಹೋರಾಟದಲ್ಲಿ ಮಹಿಳೆಯರು

ನಿಜಾಮರು, ದೊರೆಗಳ ಆಡಳಿತದಲ್ಲಿ ಮಹಿಳೆಯರು ಹೆಚ್ಚಾಗಿ ನೋವುಗಳಿಗೆ ಗುರಿಯಾಗುತ್ತಿದ್ದರು.ಅವರು ಪ್ರತಿ ದಿನ ವೇದನೆಗೊಳಗಾದರು.ಭೂ ಒಡೆಯರು ಕೆಲಸ ಮಾಡುವುದಲ್ಲದೇ ಸಂದರ್ಶಿಸಿದ ಅಧಿಕಾರಿಗಳಿಗೆ ಸೇವೆ ಮಾಡಬೇಕಾಗುತಿತ್ತು.ಬಹಳ ಮಂದಿ ಸ್ತ್ರೀಯರು ಒಡೆಯರಿಗೆ ದಾಸಿಗಳಾಗಿ ನಿಯಮಿಸುತ್ತಿದ್ದರು.ಇಂತಹ ಮಹಿಳೆಯರು ಆಂಧ್ರ ಮಹಾಸಭೆ ನಿರ್ವಸಿದ ರಾತ್ರಿ ಪಾಠಶಾಲೆಗಳಿಗೆ ಹಾಜರಾಗಿ,ಸಂಘಗಳಲ್ಲಿ ಕಮ್ಯುನಿಸ್ಟ್ ಪಾರ್ಟಿಗಳಲ್ಲಿ ಸೇರಬೇಕೆಂದು ನಿರ್ಣಯಿಸಿಕೊಂಡರು.ಕೆಲವು ಮಂದಿ ಮಹಿಳೆಯರು ಆಯುಧಗಳನ್ನು ಹಿಡಿದು ರಜಾಕಾರರಿಂದ ಹೋರಾಡಿದರು. ಕೆಲವು ಮಂದಿ ಹಾಡುಗಳು ಹಾಡಿ ಪ್ರಜೆಗಳನ್ನು ಉತ್ತೇಜನಪಡಿಸಿದರು. ಮತ್ತೆ ಕೆಲವರು ಡಾಕ್ಟರ್‌ಗಳಾಗಿ, ನರ್ಸುಗಳಾಗಿ (ದಾದಿ) ಕೆಲಸ ಮಾಡಿದರು. ಚಳುವಳಿಗಾಗಿ ಅವರು ಎಷ್ಟೋ ತ್ಯಾಗಗಳನ್ನು ಮಾಡಿದರು.ನಿರಾಯುಧ ಹೋರಾಟದಲ್ಲಿ ಪಾಲ್ಗೊಂಡ ಒಬ್ಬ ಮಹಿಳೆಯ ಅನುಭವವನ್ನು ಆಕೆಯ ಮಾತಿನಲ್ಲೇ ತಿಳಿದುಕೊಳ್ಳೋಣ.



*ಚಿತ್ರ 12.5: ಮಹಿಳೆಯರ ಗೆರಿಲ್ಲಾ ದಳ*

ನನ್ನ ಹೆಸರು ಕಮಲಮ್ಮ. ನಮ್ಮದು ಮಾನುಕೋಟೆ ತಾಲೂಕಿನಲ್ಲಿ ಒಂದು ಗ್ರಾಮ.ನಮ್ಮದು ಗುಲಾಮ ಗಿರಿಯ ಪದ್ದತಿಯ ಕುಟುಂಬ. ನಮ್ಮ ಒಡೆಯನ ಮನೆಗಳಲ್ಲಿ ದಾಸಿ. ನನಗೆ ಹದಿನೈದು ವರ್ಷಗಳಿದ್ದಾಗ ನಮ್ಮ ತಂದೆ ತೀರಿಕೊಂಡರು.ಆ ಸಮಯದಲ್ಲೇ ತೆಲಂಗಾಣ ಹೋರಾಟ ಮಾಡಲಾಯಿತು.ನನ್ನ ತಂಗಿಯನ್ನು ಮನೆಯ ಒಡತಿ ತನ್ನ ಮಗಳೊಂದಿಗೆ ದಾಸಿಯಾಗಿ ಕಳುಹಿಸಬೇಕೆಂದುಕೊಂಡಳು.ನನ್ನ ಗಂಡನನ್ನು ಮನೆಯ ಒಡತಿ ಹೊಡೆಯುತ್ತಿದ್ದಳು.ಗುಲಾಮಗಿರಿ ಬದುಕು ಬಹಳ ಕಷ್ಟವಾಗಿದ್ದಿತು.ದನಗಳನ್ನು ಮೇಯಿಸಬೇಕು,ಸಗಣಿಯನ್ನು ಎತ್ತಬೇಕು,ಎಲ್ಲಾ ಕೆಲಸಗಳನ್ನು ಮಾಡಬೇಕು.ನನ್ನ ಪತಿಯನ್ನು ರೌಡಿಯನ್ನಾಗಿ ಸಹ ಉಪಯೋಗಿಸಿಕೊಂಡರು.ಒಡೆಯರ ಮನೆಗಳಲ್ಲಿ ದೌರ್ಜನ್ಯ, ಕ್ರೌರ್ಯಗಳನ್ನು ಅನುಭವಿಸಲಾಗದೆ ಹೋರಾಟದಲ್ಲಿ ಭಾಗವಹಿಸಿದೆ.

ಮೊದಲು ನನ್ನ ಅಣ್ಣ ದಳ ನಾಯಕನಾದನು... ನನ್ನ ಪತಿ,ನಾನು ಕಮ್ಯುನಿಸ್ಟ್ ಪಾರ್ಟಿಯಲ್ಲಿ ಸೇರಿದೆವು.ನನ್ನ ಕೆಲಸ ಸಾಂಸ್ಕೃತಿಕ ದಳದಲ್ಲಿ ನಾನು ಹಾಡುಗಳನ್ನು ಹಾಡುತ್ತಾ ಒಂದು ಊರಿನಿಂದ ಮತ್ತೊಂದು ಊರಿಗೆ ಪ್ರಯಾಣ ಮಾಡುತ್ತಿದ್ದೆನು... ಕಾಡಿನಲ್ಲಿ ಕೆಲಸ ಮಾಡುತ್ತಾ ಕೋಯ ಮಹಿಳೆಯರಿಗೆ ಸಹಾಯ ಮಾಡುತ್ತದ್ದೆವು.ವೈದ್ಯ ಕೇಂದ್ರದಲ್ಲಿದ್ದು ಪ್ರಥಮ ಚಿಕಿತ್ಸೆ,ಇಂಜಕ್ಷನ್ ಮಾಡುವುದನ್ನು ಕಲಿತೆನು.ಆ ಸಮಯದಲ್ಲಿ ಕಾಡಿನಲ್ಲಿ ಇರುವಾಗ ನನ್ನ ಮೊದಲನೇ ಮಗನಿಗೆ ಜನ್ಮ ನೀಡಿದೆ.ಆಗ ಕಾಮ್ರೆಡ್ಲು ಹುಡುಗನು ಅತ್ತಾಗ ನಾವೆಲ್ಲರೂ ಸಿಕ್ಕಿಬಿದ್ದೆವು.ಆದುದರಿಂದ ಹುಡುಗನನ್ನು ಯಾರಿಗಾದರೂ ಕೊಟ್ಟು ಬಿಡು,ಇಲ್ಲವೇ ಎಲ್ಲಿಯಾದರೂ ಬಿಟ್ಟು ಬಿಡು ಎಂದು ಹೇಳಿದರು.ಆದರೆ ಮಗುವನ್ನು ತೆಗೆದುಕೊಳ್ಳಲು ಯಾರೂ ಮುಂದೆ ಬರಲಿಲ್ಲ.ಎರಡು ದಿನಗಳವರೆಗೆ ನಡೆದು ಒಬ್ಬ ಗನಿ ಕಾರ್ಮಿಕನ ಹತ್ತಿರ ಬಿಟ್ಟು ಬಂದೆನು. ನಂತರ ನನ್ನ ಶರೀರ,ನನ್ನ ಮನಸ್ಸು ನನ್ನ ಆಧೀನದಲ್ಲಿ ಇಲ್ಲದಂತಾದವು.ಕಣ್ಣಿನಿಂದ ಮಣ್ಣಿಗೆ ಕಣ್ಣೀರು ಪ್ರವಾಹವಾಗಿ ಹರಿದವು.

SCERT TELANGANA

## ಪ್ರಮುಖ ಪದಗಳು/ಕೀಲಕ ಪದಗಳು

| | | |
|---|---|---|
| 1.ಫರ್ಮಾನಗಳು | 2.ಬಿಟ್ಟಿ | 3.ಫ್ಯೂಡಲ್ ವ್ಯವಸ್ಥೆ |
| 4. ಸಾಮಂತರಾಜರು | 5. ಕಾನೂನು ಹಕ್ಕುಗಳು | 6. ಗೆರಿಲ್ಲಾ ದಳ |
| 7. ಜಾಗಿರ್‌ದಾರರು | 8. ಪ್ರಾತಿನಿಧ್ಯ ಸರ್ಕಾರ | |

## ನಿಮ್ಮ ಕಲಿಕೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಿ

1. ಇತರ ರಾಜ್ಯಗಳೊಂದಿಗೆ ಹೋಲಿಸಿದರೆ ಹೈದರಾಬಾದು ರಾಜ್ಯದಲ್ಲಿ ಅಕ್ಷರಾಸ್ಯತೆ ಕಡಿಮೆ ಇರಲು ಕಾರಣವೇನು?
2. ವಿದ್ಯಾವ್ಯಾಪ್ತಿಗೆ ಆಂಧ್ರ ಮಹಾಸಭೆ ಕೈಗೊಂಡ ಕಾರ್ಯಕ್ರಮಗಳನ್ನು ವಿವರಿಸಿರಿ.
3. ಹೈದರಾಬಾದ್ ರಾಜ್ಯ ಕಾಂಗ್ರೆಸ್‌ನ ಬೇಡಿಕೆಗಳು ಯಾವುವು? 1948ರ ನಂತರ ಅವುಗಳಲ್ಲಿ ಎಷ್ಟು ನೆರವೇರಿದವು ?
4. ನಿಜಾಂ ಆಡಳಿತ ಕೊನೆಗೊಳ್ಳುವುದಕ್ಕೆ ತೆಲಂಗಾಣ ನಿರಾಯುದ ಹೋರಾಟ ಸಹಾಯವಾಯಿತೆ ? ನಿಮ್ಮ ಕಾರಣಗಳನ್ನು ತಿಳಿಸಿ .
5. ರಾಜ್ಯದಲ್ಲಿ ಫ್ಯೂಡಲ್ ವ್ಯವಸ್ಥೆ ಪೇರಾ ಓದಿ ಕೆಳಗಿನ ಪ್ರಶ್ನೆಗೆ ಉತ್ತರ ಬರೆಯಿರಿ.

   ನಿಜಾಂ ರಾಜ್ಯದಲ್ಲಿರುವ ಫ್ಯೂಡಲ್ ವ್ಯವಸ್ಥೆಯನ್ನು ನೀವು ಸಮರ್ಥಿಸುತ್ತೀರಾ ಇಲ್ಲವೆ ಸಮರ್ಥಿಸುವುದಿಲ್ಲವೆ ?ಏಕೆ?
6. ಹಿಂದೆ ಆಡಳಿತಗಾರ ವಿರುದ್ದವಾಗಿ ಅನೇಕ ಚಳುವಳಿಗಳು ನಡೆದಿವೆಯೇ ? ಈ ಮಧ್ಯಕಾಲದಲ್ಲಿ ಅಂತಹ ಚಳುವಳಿಗಳು ತಲೆ ಎತ್ತುತ್ತವೆಯೇ ? ನಡೆದಿದ್ದರೆ ಅವು ಯಾವುವು?
7. ನಿಮ್ಮ ಪ್ರಾಂತ್ಯ ಗ್ರಂಥಾಲಯ ಕುರಿತು ತಿಳಿದುಕೊಳ್ಳಲು ಗ್ರಂಥಾಲಯ ಅಧಿಕಾರಿಯನ್ನು ಯಾವ ಯಾವ ಪ್ರಶ್ನೆಗಳನ್ನು ಕೇಳುತ್ತೀರೋ ಬರೆಯಿರಿ.
8. ಭಾರತ ದೇಶ ಪಟದಲ್ಲಿ ಪೂರ್ವ ನಿಜಾಂ ಪಾಲನೆಯ ಪರಧಿಯಲ್ಲಿರುವ ಈ ಕೆಳಗಿನ ಪ್ರದೇಶಗಳನ್ನು ಗುರ್ತಿಸಿರಿ.

   ಅ) ಔರಂಗಾಬಾದ್ ಆ) ವರಂಗಲ್ ಇ) ರಾಯಚೂರು

   ಈ) ಗುಲ್ಬರ್ಗ ಉ) ಹೈದಾರಾಬಾದ್ ಊ) ಖಮ್ಮಂ
9. ತೆಲಂಗಾಣ ಸಾಯುಧ ಹೋರಾಟದಲ್ಲಿ ಪಾಲ್ಗೊಂಡ ನಾಯಕರ ಚಿತ್ರಗಳನ್ನು ಶೇಖರಿಸಿರಿ.

SCERT TELANGANA

ಪಾಠ 13

# ಭಾರತ ಸಂವಿಧಾನ

ನಮ್ಮ ದೇಶದಲ್ಲಿ ವಿವಿಧ ಪ್ರಾಂತ್ಯಗಳು ನೂರಾರು ವರ್ಷಗಳ ಕಾಲ ರಾಜರ, ರಾಣಿಯರ ಪಾಲನೆಯಲ್ಲಿತ್ತು. ಆದರೆ ನಮ್ಮ ನಾಯಕರು ಬ್ರಿಟೀಷರ ವಲಸೆ ಆಳ್ವಿಕೆಗೆ ವಿರುದ್ಧವಾಗಿ ಹೋರಾಡು ವಾಗ ದೇಶದ ಭವಿಷ್ಯತ್ತ್, ರಾಜರಿಕ ಪಾಲನೆಯಲ್ಲದೇ ಸರ್ಕಾರವು ಪ್ರಜಾ ಪ್ರಭುತ್ವಕ್ಕೆ ಬದ್ದವಾಗಿರಬೇಕೆಂದು ಕೋರಿಕೊಂಡರು. ಆಯ್ಕೆಗೊಂಡ ಪ್ರಜಾಪ್ರತಿನಿಧಿಗಳ ಮೂಲಕ ಪ್ರಜೆಗಳು ತಮ್ಮ ನ್ನು ತಾವು ಪರಿಪಾಲಿಸಿಕೊಳ್ಳಬೇಕೆಂದು ಕೋರಿಕೊಂಡರು.

- ಸ್ವಾತಂತ್ರ್ಯಕ್ಕಾಗಿ ಹೋರಾಡಿದ ನಾಯಕರು ಭಾರತ ದೇಶವನ್ನು ರಾಜ-ರಾಣಿಯರಿಂದ ಆಳ್ವಿಕೆ ನಡೆಯಬೇಕೆಂದು ಏಕೆ ಬಯಸಲಿಲ್ಲ ಚರ್ಚಿಸಿರಿ ?

ವಲಸೆ ಆಳ್ವಿಕೆಯಿಂದ ಭಾರತ ದೇಶವು ಮುಕ್ತಿ ಹೊಂದಿದಾಗ ನಾವು ನಂಬಿದ ಮೂಲಭೂತ ಸೂತ್ರಗಳು, ದೇಶವನ್ನು ಪರಿಪಾಲಿಸುವ ವಿಧಾನಗಳನ್ನು ಒಂದೇ ಕಡೆಗೆ ಅಳವಡಿಸ ಬೇಕೆಂದುಕೊಂಡರು. ಇವುಗಳನ್ನು 'ಭಾರತ - ಸಂವಿಧಾನ 'ಎನ್ನುವ ಪುಸ್ತಕದಲ್ಲಿ ಅಳವಡಿಸಿದ್ದಾರೆ.



सत्यमेव जयते

ಸಂವಿಧಾನ ಎನ್ನುವುದು ದೇಶವನ್ನು ಹೇಗೆ ಪರಿಪಾಲಿಸಬೇಕು ? ಕಾನೂನು ಹೇಗೆ ನಿಯಮಿ ಸಬೇಕು ? ಅವುಗಳನ್ನು ಹೇಗೆ ಬದಲಾಯಿಸ ಬೇಕು ಎನ್ನುವಲ್ಲಿ ಪೌರರ ಪಾತ್ರವೇನು? ಅವರ ಹಕ್ಕುಗಳು ಏನು ? ಎನ್ನುವ ನಿಯಮಗಳನ್ನು ಒಳಗೊಂಡಿರುತ್ತದೆ. ಮುಖ್ಯವಾಗಿ ಸಂವಿಧಾನ ನಿರ್ದೇಶಿಸಿದ ಗುರಿಗಳನ್ನು ತಲುಪಲು ದೇಶವು ಕೃಷಿಮಾಡಬೇಕು.

- ದೇಶಕ್ಕಾಗಿ ಐದು ಗುರಿಗಳನ್ನುರೂಪಿಸಿರಿ ಎಂದು ನಿನ್ನನ್ನು, ನಿನ್ನ ಸಹಚರ ವಿದ್ಯಾರ್ಥಿಯನ್ನು ಕೇಳಿದ್ದಾರೆ ಅಂದುಕೊಳ್ಳಿ, - ಅವು ಏನಾಗಿರುತ್ತವೆ ? ಇವುಗಳನ್ನು ನಿರ್ಣಯಿಸುವ ಪ್ರಕ್ರಿಯೆ ಏನು ? ಅವುಗಳನ್ನು ಮುಟ್ಟಲು ನೀನೇನು ಮಾಡುವೆ? ತರಗತಿಯಲ್ಲಿ ನಿಮ್ಮ ಉಪಾಧ್ಯಾಯರ ಸಹಾಯದಿಂದ ಚರ್ಚಿಸಿರಿ.

### ಭಾರತ ಸಂವಿಧಾನ ರೂಪರಚನೆ :

ಬಹಳ ಕ್ಲಿಷ್ಟಪರಿಸ್ಥಿತಿಗಳಲ್ಲಿ ಭಾರತದ ಸಂವಿಧಾನಕ್ಕೆ ರೂಪ ಕಲ್ಪನೆ ಜರುಗಿತು. ನಮ್ಮನ್ನು 200 ವರ್ಷಗಳ ಕಾಲ ಬ್ರಿಟಿಷರು ಆಳ್ವಿಕೆ ನಡೆಸಿದರು. ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಸಂಸ್ಥೆಗಳನ್ನು ಅವರು ಸ್ಥಾಪಿಸಿಕೊಂಡರು. ಧಾರ್ಮಿಕ ಗಲಭೆಗಳೊಂದಿಗೆ ದೇಶ ವಿಭಜನೆ ನಡೆಯಿತು. ದೇಶದಲ್ಲಿ ಅಧಿ ಕ ಭಾಗ (ಹೈದರಾಬಾದು ನಿಜಾಂ ಮಾದರಿ) ರಾಜರ ಆಳ್ವಿಕೆಯಲ್ಲಿದೆ. ಸಾಮಾಜಿಕ, ಸಾಂಸ್ಕೃತಿಕ, ಭಿನ್ನತೆಗಳೇ ಅಲ್ಲದೇ, ಬಡವ ಶ್ರೀಮಂತರ ಮಧ್ಯ - ಮೇಲ್ವರ್ಗ, ಕೆಳವರ್ಗಗಳ ಮಧ್ಯೆ ಸ್ತ್ರೀ, ಪುರುಷರ ನಡುವೆ ವ್ಯತ್ಯಾಸಗಳಿವೆ. ದೇಶವು ಇನ್ನೂ ಕೆಲವು ಭಾಗಗಳಾಗದಂತೆ ಒಂದಾಗಿ ಇರಲು ನಾಯಕರು ಕೃಷಿ ಮಾಡಿದರು. ದೇಶವನ್ನು ಮುನ್ನಡೆಸುವಲ್ಲಿ ತಮ್ಮ ಪಾತ್ರ ಇದೆಯೆಂದು ಎಲ್ಲಾ ವರ್ಗದ ಪ್ರಜೆಗಳೆಲ್ಲರೂ ಭಾವಿಸಬೇಕು. ನಮ್ಮ ರಾಷ್ಟ್ರೀಯ ಚಳುವಳಿ ಕೇವಲ ವಿದೇಶಿ ಆಳ್ವಿಕೆಗೆ ವಿರುದ್ಧವಾಗಿ ನಡೆದ ಹೋರಾಟವಲ್ಲ. ಅಸಮಾನತೆಗಳು, ದೋಚುವಿಕೆ, ಬೇಧಭಾವ ವನ್ನು ಸಹ ನಮ್ಮ ಸಮಾಜದಿಂದ ನಿರ್ಮೂಲಿಸ ಬೇಕೆಂದು ಅದು ಭಾವಿಸಿತು. ವಿದ್ಯೆ ಅಕ್ಷರಾಸ್ಯತೆಯ ಮಟ್ಟ ಬಹಳ ಕಡಿಮೆ ಇದೆ. ತೀವ್ರ ಬಡತನ, ರೋಗಗಳು, ಬರಗಾಲಗಳಿಂದ ಲಕ್ಷಾಂತರ ಜನ ಮರಣ ಹೊಂದಿದರು. ಮೂಲಭೂತ ಅವಶ್ಯಕತೆಗಳಾದ ಆಹಾರ ಧಾನ್ಯಗಳಿಗೆ ಸಹ ಇತರ ದೇಶಗಳ ಮೇಲೆ ನಮ್ಮ ದೇಶ ಆಧಾರಪಟ್ಟಿದೆ. ಅದಕ್ಕಾಗಿ ಭವಿಷ್ಯದ ಸಮಾಜಕ್ಕೆ ಒಂದು ಲಕ್ಷ್ಯವನ್ನು ಕೊಟ್ಟು, ಸಂವಿಧಾನ

SCERT TELANGANA

ಚೌಕಟ್ಟಿನಲ್ಲಿಯೇ ಅದು ನೆರವೇರುವಂತೆ ಮಾಡುವ ಅವಸರವಿದೆ.

- ಸ್ವಾತಂತ್ರ್ಯಬರುವ ಹೊತ್ತಿಗೆ ಇರುವ ನಿಮ್ಮ ಅಜ್ಜ ಅಜ್ಜಿ ನಿಮ್ಮ ಅಕ್ಕಪಕ್ಕದಲ್ಲಿರುವ ವೃದ್ದರಿಂದ ಕೇಳಿ ಆಗಿನ ಪರಿಸ್ಥಿತಿಗಳು ಹೇಗಿದ್ದವು. ಸಮಾಜದ ಭವಿಷ್ಯದ ಕುರಿತು ಅವರು ಏನು ಭಾವಿಸಿದ್ದರೋ ತಿಳಿದುಕೊಳ್ಳಿರಿ.

ಸ್ವಾತಂತ್ರ್ಯದ ನಂತರ ಉತ್ತಮವಾದ ಸಮಾಜವನ್ನು ರೂಪಿಸುವ ವಿಧಾನದ ಮೇಲೆ ರಾಷ್ಟ್ರೀಯ ನಾಯಕರಲ್ಲಿಯೇ ತೀವ್ರವಾದ ಭಿನ್ನಾಭಿಪ್ರಾಯಗಳಿದ್ದವು. ಆದರೂ ಸಹ ಸ್ವತಂತ್ರ್ಯ ಭಾರತ ದೇಶ ಪ್ರಜಾ ಪ್ರಭುತ್ವ ಆದರ್ಶಗಳ ಪ್ರಕಾರ ನಡೆಯಬೇಕೆಂದು ಬಹಳ ಜನರು ಅಂಗೀಕರಿಸಿದರು ಇದರಲ್ಲಿ

i. ಕಾನೂನಿನ ಮುಂದೆ ಪ್ರಜೆಗಳೆಲ್ಲರೂ ಸಮಾನರು. ಎಲ್ಲರಿಗೂ ಕೆಲವು ಮೂಲಭೂತ (ಪ್ರಾಥಮಿಕ) ಹಕ್ಕುಗಳಿವೆ.

ii. ಸಾರ್ವತ್ರಿಕ ಮತದಾನದ ಹಕ್ಕು ಎಂದರೆ, ಲಿಂಗ, ಕುಲ,ಮತ, ಜಾತಿ, ಸಂಪತ್ತು ಬೇದವಿಲ್ಲದಂತೆ ವಯಸ್ಕರಲ್ಲರಿಗೂ ಚುನಾವಣೆಗಳಲ್ಲಿ ಮತ ನೀಡುವ ಹಕ್ಕು (ಮತ ನೀಡುವ ಪದ್ದತಿ) ಕೊಟ್ಟು ಸಾಧಾರಣ ಚುನಾವಣೆಗಳನ್ನು ನಡೆಸಿ ತನ್ಮೂಲಕ ಸರ್ಕಾರ ಏರ್ಪಾಟಾಗುತ್ತದೆ.

### ಸಂವಿಧಾನದ ಮೊದಲ ಪ್ರತಿಗಳು :

ಸ್ವಾತಂತ್ರ್ಯ ಬರುವ ಮೊದಲೇ 1928ರಲ್ಲಿ ಮೋತಿಲಾಲ್ ನೆಹರೂ, ಭಾರತ ರಾಷ್ಟ್ರೀಯ ಕಾಂಗ್ರೆಸ್‌ಗೆ ಸೇರಿದ ಇತರ ಎಂಟು ಜನ ಸೇರಿ ಭಾರತ ದೇಶದ ಸಂವಿಧಾನವನ್ನು ಬರೆದರು. 1931ರ ಕರಾಚಿ ಸಮಾವೇಶದಲ್ಲಿ ಭಾರತ ಸಂವಿಧಾನ ಹೇಗಿರಬೇಕೆಂದು ಭಾರತ ರಾಷ್ಟ್ರೀಯ ಕಾಂಗ್ರೆಸ್ ಒಂದು ತೀರ್ಮಾನ ಮಾಡಿತು. ಇದರಲ್ಲಿ ಎರಡು ವಿಷಯಗಳು ಸ್ಪಷ್ಟಪಡಿಸಿತು. ಒಂದು ವಯಸ್ಕ ಮತ ನೀಡುವ ಪದ್ದತಿ ಎಂದರೆ ಸಾರ್ವತ್ರಿಕ ಮತದಾನ, ಸ್ವತಂತ್ರ್ಯ ಮತ್ತು ಸಮಾನತೆ ಹಕ್ಕುಗಳಿಗೆ ಸಂವಿಧಾನ ಬದ್ದವಾಗಿತ್ತು.

- ಸ್ವಾತಂತ್ರ್ಯ ಬರುವಷ್ಟಕ್ಕೆ ನಮ್ಮ ದೇಶದಲ್ಲಿರುವ ಅಸಮಾನತೆಗಳು, ಬೇಧಭಾವಗಳಲ್ಲಿ ಕೆಲವನ್ನು ಹೆಸರಿಸಿರಿ.
- ಇಲ್ಲಿ ಜೊತೆಯಾಗಿ ಕೆಲವು ವಾಕ್ಯಗಳು ಇವೆ. ಕೆಲವುಗಳಲ್ಲಿ ತಪ್ಪಿನಿಂದ ಕೂಡಿದ ವಿಷಯವಿದೆ ಅವುಗಳನ್ನು ಸರಿಪಡಿಸಿರಿ.

a) ಮಾದರಿಯ ಸಂವಿಧಾನ ಪ್ರತಿಯನ್ನು ಬರೆದರು ಮೋತಿಲಾಲ್ ನೆಹರೂ.

b) ನಿರಕ್ಷರಾಸ್ಯರು ಮತ ಚಲಾಸಬಾರದೆಂದು ನಾಯಕರು ಅಂಗೀಕರಿಸದರು ಸಾರ್ವಜನಿಕ ಮತದಾನದ ಹಕ್ಕು.

c) ರಾಜ್ಯ ಶಾಸನ ಸಭೆಗಳು ವಲಸೆ ಪಾಲನೆಯ ಕಾನೂನುಗಳನ್ನು ಕೆಲವನ್ನು ಸಂವಿಧಾನ ತೆಗೆದುಕೊಂಡಿದೆ.

d) ದೇಶ ವಿಭಜನೆ ಬಹಳ ಜನರನ್ನು ಕೊಲ್ಲಲಾಯಿತು ಮತ್ತು ಸ್ಥಳಾಂತರಿಸಲಾಯಿತು.



*ಚಿತ್ರ 13.1 ಭಾರತ ದೇಶ ಪ್ರತಿ ವರ್ಷ ಜನವರಿ 26ರಂದು ಗಣರಾಜ್ಯ ದಿನೋತ್ಸವ ಸಮಾರಂಭಗಳು ನಡೆಯುತ್ತವೆ. ಈ ಸಮಾರಂಭದಲ್ಲಿ ಪಾಲ್ಗೊಂಡ ಎನ್.ಸಿ.ಸಿ. ವಿದ್ಯಾರ್ಥಿಗಳ ಕವಾತು. .*

SCERT TELANGANA



ಚಿತ್ರ . 13.2 ಒಬ್ಬರಿ ಗೊಬ್ಬರು ನಮಸ್ಕರಿಸಿ ಕೊಳ್ಳುತ್ತಿರುವ ಸಂವಿಧಾನ ಸಭೆಯ ಅಧ್ಯಕ್ಷರು ಡಾ॥ ರಾಜೇಂದ್ರ ಪ್ರಸಾದ್, ಡ್ರಾಫ್ಟಿಂಗ್ ಕಮಿಟಿ ಚೆರ್ಮೇನ್ ಡಾ॥ ಬಿ.ಆರ್.ಅಂಬೇಡ್ಕರ್.

e) ಮಹಿಳೆಯರಿಗೆ ಮತದಾನದ ಹಕ್ಕು ಇಲ್ಲದಂತೆ ಮಾಡುವುದು ಭಾರತ ದೇಶದಲ್ಲಿ ಸಾಮಾಜಿಕ ಸಂಸ್ಕರಣೆಗೆ ಕಟ್ಟು ಬದ್ದವಾಗಿರುವುದು.

ಮೊದಲನೆಯದಾಗಿ ಭಾರತ ದೇಶದಲ್ಲಿ ವಿವಿಧ ರೀತಿಯ ಪ್ರಜೆಗಳು ಆದರ್ಶ ಪ್ರಪಂಚ ನಿರ್ಮಾಣಕ್ಕಾಗಿ ಮಾಡಿದ ಹೋರಾಟ ಸಂವಿಧಾನಕ್ಕೆ ಸ್ಪೂರ್ತಿಯನ್ನು ನೀಡಿತು. ಈ ಜನರ ಕನಸುಗಳನ್ನೆ ನನಸನ್ನಾಗಿ ಮಾಡಿ ಭಾರತ ದೇಶ ನಿರ್ಮಿಸುವುದು ತಮ್ಮ ಪವಿತ್ರ ಕರ್ತವ್ಯವಾಗಿ ಅವರು ಭಾವಿಸಿದರು. ಮಹಾತ್ಮಾಗಾಂಧಿ, ಇತರ ರಾಷ್ಟ್ರೀಯ ನಾಯಕರ ಆಲೋಚನೆಗಳಿಂದ ಅವರು ಪ್ರಭಾವಿತರಾದರು.

ಎರಡನೆಯದಾಗಿ ಫ್ರೆಂಚ್ ಕ್ರಾಂತಿ ಆದರ್ಶಗಳು, ಬ್ರಿಟನ್ನಿನ ಪ್ಲಾರಮೆಂಟರೀ ಪ್ರಜಾ ಪ್ರಭುತ್ವ ತತ್ವಗಳು, ಅಮೇರಿಕಾದ ಹಕ್ಕುಗಳ ಕಾನೂನುಗಳು – ಇವುಗಳಿಂದ ನಮ್ಮ ನಾಯಕರು ಅನೇಕ ಮಂದಿ ಪ್ರೇರಣೆ ಪಡೆದರು. ಅದೇ ರೀತಿ ರಷ್ಯಾ – ಚೈನಾದಲ್ಲಿ ಸೋಷಲಿಸ್ಟು ಕ್ರಾಂತಿ ಭಾರತ ದೇಶವನ್ನು ಸಾಮಾಜಿಕ ಆರ್ಥಿಕ ಸಮಾನತಗಳೊಂದಿಗೆ ರೂಪುಗೊಳ್ಳಲು ಸ್ಪೂರ್ತಿಯನ್ನು ಕೊಟ್ಟಿತು. ನಮ್ಮ ಸಂವಿಧಾನವ ನ್ನು ರೂಪಿಸುವಲ್ಲಿ ಈ ಎಲ್ಲಾ ಅಂಶತಗಳು ಪ್ರಭಾವ ಬೀರಿದವು.

ಮೂರನೆಯದು ಬ್ರಿಟಿಷ್‌ರು ಸಹ ಭಾರತ ದೇಶದಲ್ಲಿ ಪ್ರಜಾ ಪ್ರಭುತ್ವ ಆಳ್ವಿಕೆಗೆ ಕೆಲವು ಸಂಸ್ಥೆಗಳನ್ನು ಪ್ರವೇಶ ಪಡಿಸಿದರು. ಆದರೆ ಚುನಾವಣೆಗಳಲ್ಲಿ ಕೆಲವು ವರ್ಗದ ಪ್ರಜೆಗಳು ಮಾತ್ರ ಓಟು ಹಾಕುತ್ತಿದ್ದರು. ಬ್ರಿಟಿಷ್ ಬಹಳ ಬಲಹೀನ ಶಾಸನ ಸಭೆಗಳನ್ನು ಪ್ರವೇಶ ಪಡಿಸಿದರು. ರಾಜ್ಯದ ಶಾಸನ ಸಭೆಗಳಿಗೆ ಮಂತ್ರಿ ವರ್ಗಗಳಿಗೆ ಬ್ರಿಟಿಷ್ ಭಾರತದಾದ್ಯಂತ 1937 ರಲ್ಲಿ ಚುನಾವಣೆಗಳು ಜರುಗಿದವು. ಇವು ಪೂರ್ತಿಯಾಗಿ ಪ್ರಜಾ ಪ್ರಭುತ್ವದ ಸರ್ಕಾರಗಳಲ್ಲ. ಆದರೆ ಈ ಶಾಸನ ಸಭೆಗಳಿಂದ ಲಭಿಸಿದ ಅನುಭವ ದೇಶವು ತನ್ನ ಸ್ವಂತ ಶಾಸನ ಸಭೆಗಳನ್ನು ರೂಪಿಸಿಕೊಳ್ಳಲು ಸಹಾಯಕವಾಯಿತು. ಈ ಕಾರಣ ಗಳಿಂದಲೇ ಬ್ರಿಟಿಷರ ವಲಸೆ ಕಾನೂನುಗಳು ಅನೇಕ ವಿಧಾನಗಳನ್ನು ಸಂಸ್ಥಾಗತ ವಿವರಗಳನ್ನು ಭಾರತ ಸಂವಿಧಾನ ತನಗೆ ಅನುಕೂಲವಾಗಿ ರೂಪಿಸಿಕೊಂಡಿದೆ.

## ಸಂವಿಧಾನ ಸಭೆ :

ಆಯ್ಕೆಯಾದ ಪ್ರಜಾ ಪ್ರತಿನಿಧಿಗಳಿಂದ ಏರ್ಪಟ್ಟ ಸಂವಿಧಾನ ಸಭೆ ಸಂವಿಧಾನವನ್ನು ಬರೆದಿದೆ. ಸಂವಿಧಾನ ಸಭೆಗೆ 1946ರ ಜೂಲೈನಲ್ಲಿ ಚುನಾವಣೆಗಳು ನಡೆದವು. 1947ರ ಆಗಸ್ಟಿನಲ್ಲಿ ದೇಶ ವಿಭಜನೆಯೊಂದಿಗೆ ಸಂವಿಧಾನ ಸಭೆಯನ್ನು ಸಹ ಭಾರತ ದೇಶ, ಪಾಕಿಸ್ಥಾನ್ ಸಂವಿಧಾನ ಸಭೆಗಳಾಗಿ ವಿಭಜಿಸಿದರು. ಭಾರತ ಸಂವಿಧಾನ ಸಭೆಯಲ್ಲಿ 299 ಸದಸ್ಯರಿದ್ದರು. ಈ ಸಭೆ 1949ರ ನವೆಂಬರ್ 26ನೇ ದಿನ ಸಂವಿಧಾನವನ್ನು ಆಮೋದಿಸಿತು. ಆದರೆ ಇದು 1950ರ



SCERT TELANGANA






ಸರೋಜಿನಿ ನಾಯುಡು | ದುರ್ಗಾಬಾಯಿ ದೇಶ್ ಮುಖ್ | ಎನ್.ಜಿ.ರಂಗಾ | ಟಿ.ಪ್ರಕಾಶಂ

ಜನವರಿ 26ರಿಂದ ಜಾರಿಗೆ ಬಂದಿತು. ಇದರ ನೆನಪಿಗಾಗಿ ನಾವು ಪ್ರತಿ ವರ್ಷ ಜನವರಿ 26ರಂದು ಗಣರಾಜ್ಯ ದಿನೋತ್ಸವವನ್ನಾಗಿ ಆಚರಿಸಿಕೊಳ್ಳುತ್ತೇವೆ.

ಸಂವಿಧಾನ ಸಭೆಯ ಸದಸ್ಯರನ್ನು ಪ್ರಧಾನವಾಗಿ ಬ್ರಿಟಿಷ್ ಪಾಲನೆಯಲ್ಲಿ ಏರ್ಪಟ್ಟ ರಾಷ್ಟ್ರ ಶಾಸನ ಸಭೆಯಿಂದ ಆಯ್ಕೆಯಾದರು. ದೇಶದಲ್ಲಿರುವ ಕೆಲವು ಪ್ರಾಂತಗಳನ್ನು ಆಳ್ವಿಕೆ ನಡೆಸುವ ರಾಜರು ಸಹ ಕೆಲವು ಜನ ಸದಸ್ಯರನ್ನು ನಾಮಿನೇಟ್ ಮಾಡಿದರು. ಸಂವಿಧಾನ ಸಭೆ ಸದಸ್ಯರು ದೇಶದ ಎಲ್ಲಾ ಭಾಗದಿಂದ ಬಂದು ಹಾಜರಾಗಿದ್ದರು. ಇದರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸದಸ್ಯರೆ ಅಧಿಕವಾಗಿ ಇದ್ದರು. ಇತರ ಪಾರ್ಟಿಗಳಿಗೆ ಸೇರಿದ ಡಾ|| ಬಿ.ಆರ್.ಅಂಬೇಡ್ಕರ್ ಅಂತಹವರು ಬಹಳ ಕಡಿಮೆ ಮಂದಿ ಇದ್ದರು. ಅಧಿಕ ಸಂಖ್ಯಾತರು ಒಂದೇ ಪಾರ್ಟಿಗೆ ಸೇರಿದವರಾಗಿದ್ದರೂ ಬಹಳ ಅಂಶಗಳ ಮೇಲೆ ಅವರ ಭಾವನೆ, ದೃಕ್ಪಥಗಳು ಬೇರೆ ಬೇರೆ ಆಗಿದ್ದವು. ಅವರ ಆಲೋಚನೆ ಬೇರೆಯಾಗಿದ್ದವು. ಮಹಿಳೆಯರು ಬಹಳ ಕಡಿಮೆ. ಕೇವಲ 15 ಮಂದಿ ಇದ್ದರು. ಅದರಲ್ಲಿ ದುರ್ಗಾಬಾಯಿ ದೇಶ್‌ಮುಖ್ ಒಬ್ಬರು.

- ಸಂವಿಧಾನ ಸಭೆಗೆ ಸದಸ್ಯರನ್ನು ನಾಮಿನೇಟ್ ಮಾಡಲು ರಾಜರಿಗೆ ಏಕೆ ಅನುಮತಿ ನೀಡಿದರು?
- ಮಹಿಳಾ ಸದಸ್ಯರು ಬಹಳ ಕಡಿಮೆ ಏಕೆ? ಮಹಿಳಾ ಸದಸ್ಯರು ಇನ್ನೂ ಹೆಚ್ಚು ಇದ್ದರೆ ಚೆನ್ನಾಗಿರುತ್ತಿತ್ತಾ ?

ಮೊದಲಿಗೆ ಕೆಲವು ಮೂಲ ಸೂತ್ರಗಳನ್ನು ರೂಪಿಸಿಕೊಂಡು ಅವುಗಳನ್ನು ಅಂಗೀಕರಿಸಿದರು. ಭಾರತ ದೇಶ ಸಾರ್ವಭೌಮ ಗಣರಾಜ್ಯವಾಗಿ ಇರುತ್ತದೆ. ಸ್ವತಂತ್ರ್ಯ ಅಧಿಕಾರಗಳನ್ನು ಹೊಂದಿದ ಅನೇಕ ರಾಜ್ಯಗಳು ಇರುತ್ತವೆ. ಇದು ಒಂದು ಪ್ರಜಾಪ್ರಭುತ್ವ ದೇಶವಾಗಿದೆ. ನ್ಯಾಯ, ಸಮಾನತ್ವ, ಸ್ವಾತಂತ್ರ್ಯ ಪೌರರೆಲ್ಲರಿಗೂ ನೀಡುತ್ತದೆ. ಅಲ್ಪ ಸಂಖ್ಯೆಯ ವರ್ಗದವರು, ಗಿರಿಜನರು , ದಲಿತ ವರ್ಗದವರ ಪ್ರಯೋಜನಗಳನ್ನು ಕಾಪಾಡುತ್ತವೆ. ಪ್ರಪಂಚದ ಶಾಂತಿಗಾಗಿ, ಮಾನವ ಜನಾಂಗದ ಸಂಕ್ಷೇಮಕ್ಕಾಗಿ ಭಾರತ ದೇಶ ನಿರಂತರ ಶ್ರಮಿಸುತ್ತದೆ. ಇದನ್ನೇ ''ಉದ್ದೇಶಗಳ ತೀರ್ಮಾನ'' ಎನ್ನುತ್ತಾರೆ. ಭಾರತ ದೇಶದ ಮೊದಲ ಪ್ರಧಾನಿಯಾದ ಜವಹರ್‌ಲಾಲ್ ನೆಹರೂ ಇದನ್ನು ಪ್ರತಿಪಾದಿಸಿದರು. ಸಂವಿಧಾನವನ್ನು ರೂಪಿಸುವಲ್ಲಿ ಇವು ಮಾರ್ಗದರ್ಶಕ ಸೂತ್ರಗಳಾಗಿ ಕೆಲಸ ಮಾಡಿವೆ.

ನಂತರ ಡಾ|| ಬಿ.ಆರ್.ಅಂಬೇಡ್ಕರ್ ಚೇರ್‌ಮನ್ ಆಗಿ ಏರ್ಪಾಟಾದ ಡ್ರಾಫ್ಟಿಂಗ್ ಕಮಿಟಿ ಚರ್ಚಿಸುವ ಸಲುವಾಗಿ ಸಂವಿಧಾನ ಕರಡು ಪ್ರತಿಯನ್ನು ತಯಾರು ಮಾಡಿತು. ಸಂವಿಧಾನದ ಆ ಕರಡು ಪ್ರತಿಯ ಮೇಲೆ ಪ್ರತಿ ಅಂಶದ ಮೇಲೂ ಅನೇಕ ಸಾರಿ ತೀವ್ರಸ್ಥಾಯಿಯಲ್ಲಿ ಚರ್ಚೆಗಳು ನಡೆಯುತ್ತಿದ್ದವು. ಮುಖ್ಯವಾದ ಎಲ್ಲಾ ಅಂಶಗಳನ್ನು ಎಲ್ಲಾ ಕೋನಗಳಿಂದ ಪರಿಶೀಲಿಸಿದರು. ಬಹುಮತದ ಆಧಾರದ ಮೇಲೆ ಅಂತಿಮ ನಿರ್ಣಯಗಳನ್ನು ತೆಗೆದುಕೊಂಡರು. ಕರಡು ಪ್ರತಿಗೆ ಎರಡು ಸಾವಿರಕ್ಕೂ ಹೆಚ್ಚಾಗಿ ಸವರಣೆಗಳನ್ನು ಪರಿಗಣನೆಗೆ ತೆಗೆದುಕೊಂಡರು. ಮೂರು ವರ್ಷದ ಕಾಲದಲ್ಲಿ 114 ದಿನಗಳ ಚರ್ಚೆಗಳಲ್ಲಿ ಪಾಲ್ಗೊಂಡರು. ಸಂವಿಧಾನದ ಸಭೆಯಲ್ಲಿ ಮಾತನಾಡಿದ ಪ್ರತಿ ಮಾತನ್ನು ರಿಕಾರ್ಡ್ ಮಾಡಿ, ಭದ್ರವಾಗಿಟ್ಟಿದ್ದಾರೆ. ಇದನ್ನೇ '**ಸಂವಿಧಾನ ಸಭೆ - ಚರ್ಚೆಗಳು**' ಎನ್ನುತ್ತಾರೆ.

SCERT TELANGANA



*ಚಿತ್ರ . 13.3 ಸಂವಿಧಾನ ಕರಡು ಪ್ರತಿಯ ಮೇಲೆ ಸಂವಿಧಾನ ಸಭೆಯ ಸದಸ್ಯರೆಲ್ಲರೂ ಸಹಿ ಮಾಡಿದರು. ನೆಹರೂರವರು ಸಹ ಸಂವಿಧಾನದ ಮೇಲೆ ಸಹಿ ಮಾಡುತ್ತಿದ್ದಾರೆ. .*

- ಉದ್ದೇಶಗಳ ತೀರ್ಮಾನದಲ್ಲಿ ಯಾವ ಮಾರ್ಗ ದರ್ಶಕ ಸೂತ್ರ ಎಲ್ಲಕ್ಕಿಂತಲೂ ಮುಖ್ಯವಾದುವು ? ಅದಕ್ಕೆ ನಿಮ್ಮ ಕಾರಣಗಳನ್ನು ತಿಳಿಸಿರಿ? ಇದರ ಮೇಲೆ ಇತರ ವಿದ್ಯಾರ್ಥಿಗಳಿಗೆ ಇತರೆ ಅಭಿಪ್ರಾಯಗಳು ಇವೆಯೇ?

## ಸಂವಿಧಾನದ ಆಶಯಗಳು – ವಾಗ್ದಾನ

ನಮ್ಮ ಸಂವಿಧಾನದ ತಾತ್ವಿಕಥೆಯನ್ನು ಅರ್ಥಮಾಡಿ ಕೊಳ್ಳಲು ಮೊದಲು ಪ್ರಯತ್ನಿಸೋಣ. ಸಂವಿಧಾನದ ಮೇಲೆ ನಮ್ಮ ಪ್ರಮುಖ ನಾಯಕರ ದೃಷ್ಟಿಕೋನವನ್ನು ತಿಳಿದುಕೊಳ್ಳುವ ಮೂಲಕ ಅದರ ತಾತ್ವಿಕಥೆಯನ್ನು ಅರ್ಥಮಾಡಿ ಕೊಳ್ಳಬಹುದು. ತನ್ನ ತಾತ್ವಿಕಥೆ ಕುರಿತು ಸಂವಿಧಾನ ಏನು ಹೇಳುತ್ತದೋ ಸಹ ಓದಬೇಕು. ಸಂವಿಧಾನ ಪೀಠಿಕೆ ಇದೇ ಕೆಲಸ ಮಾಡುತ್ತದೆ.

ಸಂವಿಧಾನ ನಿರ್ಮಾಪಕರ ಚಿತ್ರಗಳಲ್ಲಿ ಒಬ್ಬರ ಚಿತ್ರವು ಇಲ್ಲದೇ ಇರುವುದನ್ನು ನೀವು ಗಮನಿಸಿರಬಹುದು. ಅವರೇ ಮಹಾತ್ಮಾ ಗಾಂಧೀಯವರು ಅವರು ಸಂವಿಧಾನ ಸಭೆಯ ಸದಸ್ಯರು ಅಲ್ಲ. ಆದರೆ ಅವ ರ ದೃಷ್ಟಿ ಕೋನವನ್ನು ಅನುಸರಿಸುವ ಸದಸ್ಯರು ಅನೇಕ ಮಂದಿ ಇದ್ದಾರೆ. 1931ರಲ್ಲಿ 'ಯಂಗ್ ಇಂಡಿಯಾ' ಎನ್ನುವ ಪತ್ರಿಕೆಯಲ್ಲಿ ಬರೆಯುತ್ತಾ ಸಂವಿಧಾನದಿಂದ ತಾನು ಏನನ್ನು ಆಶಿಸುತ್ತಿದ್ದಾರೋ ಗಾಂಧೀಜಿ ಹೇಳಿದ್ದಾರೆ.

ಭಾರತ ದೇಶವನ್ನು ಎಲ್ಲ ವಿಧವಾದ ಗುಲಾಮಗಿರಿ ಯಿಂದ ಪೋಷಣೆಯಿಂದ ವಿಮುಕ್ತಿಗೊಳಿಸಿ ಸಂವಿಧಾನಕ್ಕಾಗಿ ನಾನು ಕೃಷಿ ಮಾಡುವೆ. ಕಡುಬಡವರು ಇದು ತಮ್ಮ ದೇಶವೆಂದು, ಇದರ ನಿರ್ಮಾಣದಲ್ಲಿ ತಮಗೂ ಪಾತ್ರ ಇದೆಯೆಂದು ಭಾವಿಸುವ ಭಾರತ ದೇಶಕ್ಕಾಗಿ, ಉನ್ನತ, ಬಡವರ್ಗದ ಪ್ರಜೆಗಳು ಇಲ್ಲದ ಭಾರತ ದೇಶ ಎಲ್ಲಾ ಮತದವರೂ, ಎಲ್ಲಾ ಜಾತಿಯವರು ಸಾಮರಸ್ಯ ಜೀವನ ಸಾಗಿಸಲು ಭಾರತ ದೇಶಕ್ಕಾಗಿ ಕೃಷಿ ಮಾಡುವೆನು. ಇಂತಹಾ ಭಾರತ ದೇಶದಲ್ಲಿ ಅಸ್ಪೃಶ್ಯತೆ ಎನ್ನುವ ಮತ್ತು ಪಾನೀಯಗಳು ಮತ್ತು ಔಷಧಗಳೆಂಬ ಪಾಪಗಳಿರುವುದಿಲ್ಲ. ಮಹಿಳೆಯರಿಗೆ, ಪುರುಷರಿಗೆ ಸಮಾನ ಹಕ್ಕುಗಳಿರುತ್ತವೆ. ಇದಕ್ಕಿಂತ ಕಡಿಮೆ ಇರುವುದರಿಂದ ನಾನು ಸಂತೃಪ್ತಿಪಡುವುದಿಲ್ಲ

**- ಮಹಾತ್ಮಾ ಗಾಂಧೀ**

SCERT TELANGANA

ಅಸಮಾನತೆಗಳು ಇಲ್ಲದ ಭಾರತ ದೇಶ ಎಂಬ ಕನಸು ಸಂವಿಧಾನ ನಿರ್ಮಾತ ಡಾ|| ಅಂಬೇಡ್ಕರ್‌ನಲ್ಲಿಯೂ ಇತ್ತು. ಆದರೆ ಈ ಅಸಮಾನತೆಗಳನ್ನು ಹೇಗೆ ನಿರ್ಮೂಲಿಸಬೇಕು ಎಂಬುದರ ಮೇಲೆ ಆತನಿಗೆ ಭಿನ್ನವಾದ ಅಭಿಪ್ರಾಯಗಳಿದ್ದವು. ಸಂವಿಧಾನ ಸಭೆಯ ಮುಕ್ತಾಯ ಉಪನ್ಯಾಸದಲ್ಲಿ ಆತನು ತನ್ನ ವ್ಯಾಕುಲತೆ (ಆಂದೋಲನ) ಯನ್ನು ಸ್ಪಷ್ಟಪಡಿಸಿದ್ದಾನೆ.

> 1950 ಜನವರಿ 26ರಂದು ನಾವು ವೈರುಧ್ಯಗಳಿಂದ ಕೂಡಿದ ಜೀವನದಲ್ಲಿ ಪ್ರವೇಶಿಸುತ್ತಿದ್ದೇವೆ. ರಾಜಕೀಯದಲ್ಲಿ ನಮಗೆ ಸಮಾನತೆ ಇದೆ. ಆದರೆ ಸಾಮಾಜಿಕ, ಆರ್ಥಿಕ ಜೀವನದಲ್ಲಿ ಅಸಮಾನತೆ ಇದೆ. ರಾಜಕೀಯದಲ್ಲಿ ಒಬ್ಬ ಮನುಷ್ಯ ಒಂದು ಮತ, ಒಂದು ಮತ ಒಂದೇ ಬೆಲೆ ಎನ್ನುವ ಸಿದ್ಧಾಂತವನ್ನು ಅನುಸರಿಸುತ್ತಿದ್ದೇವೆ. ನಮ್ಮ ಸಾಮಾಜಿಕ ಆರ್ಥಿಕ ಜೀವಿನಗಳಲ್ಲಿ ನಮಗಿರುವ ಸಾಮಾಜಿಕ ಆರ್ಥಿಕ ಚೌಕಟ್ಟಿನ ಕಾರಣವಾಗಿ ಒಬ್ಬ ಮನುಷ್ಯ ಒಂದು ಬೆಲೆ ಎನ್ನುವ ಸೂತ್ರವನ್ನು ಜಾರಿಗೊಳಿಸಲಾರೆವು. ಈ ವೈರುದ್ಯ ಜೀವನವನ್ನು ಎಷ್ಟು ಕಾಲ ಸಹಿಸಬೇಕು? ಸಾಮಾಜಿಕ, ಆರ್ಥಿಕ ಜೀವಿನಗಳಲ್ಲಿ ಸಮಾನತ್ವವನ್ನು ಎಷ್ಟು ಕಾಲ ತಿರಸ್ಕರಿಸಬೇಕು? ಈ ವಿರಕ್ತಿಗಳು ಬಹಳ ಕಾಲ ಮುಂದುವರಿದರೆ ನಮ್ಮ ರಾಜಕೀಯ ಪ್ರಜಾ ಪ್ರಭುತ್ವವೇ ನಾಶಕ್ಕೊಳಪಡುತ್ತದೆ.
>
> **- ಡಾ|| ಬಿ.ಆರ್. ಅಂಬೇಡ್ಕರ್**

ಕೊನೆಯದಾಗಿ 1947 ಆಗಸ್ಟ್ 15, ಅರ್ಧರಾತ್ರಿ ಸಮಯದಲ್ಲಿ ಸಂವಿಧಾನ ಸಭೆಯನ್ನು ಉದ್ದೇಶಿಸಿ ಜವಹರಲಾಲ್ ನೆಹರೂರವರ ಉಪನ್ಯಾಸವನ್ನು ನೋಡೋಣ.

> ನಮ್ಮ ಭವಿಷ್ಯತ್ ವಿಶ್ರಾಂತಿ, ಸುಖಗಳಿಂದ ಕೂಡಿರುವುದಿಲ್ಲ. ಹಿಂದೆ ಸಾಕಷ್ಟು ಸಲ ಮಾಡಿದ ಪ್ರತಿಜ್ಞೆಗಳು, ಈ ದಿನ ಮಾಡುವ ಪ್ರತಿಜ್ಞೆಯನ್ನು ಉಳಿಸಿಕೊಳ್ಳಲು ನಾವು ನಿರಂತರವಾಗಿ ಶ್ರಮಿಸಬೇಕಾಗುವುದು. ಭಾರತ ದೇಶಕ್ಕೆ ಸೇವೆ ಮಾಡಬೇಕೆಂದರೆ ಅದರಲ್ಲಿ ವಾಸಿಸುವ ಸಹಸ್ರಾರು ನೋವಿನಿಂದ ಕೂಡಿದ ಜನರಿಗೆ ಸೇವೆ ಮಾಡುವುದೆ. ಇದರ ಅರ್ಥ ಬಡತನ, ಅಜ್ಞಾನ, ರೋಗಗಳು ಅವಕಾಶಗಳಲ್ಲಿ ಅಸಮಾನತೆಯನ್ನು ಕೊನೆಗೊಳಿಸುವುದು. ಪ್ರತಿ ವ್ಯಕ್ತಿಯ ಕಣ್ಣೀರನ್ನು ಒರೆಸಬೇಕೆಂದು ನಮ್ಮ ಮಹಾನಾಯಕನ ಕನಸು. ಅದು ನಮಗೆ ಸಾಧ್ಯವಾಗಲಾರದೆ ಇರಬಹುದು. ಆದರೆ ಕಣ್ಣೀರು, ಕಷ್ಟಗಳು ಇರುವವಷ್ಟು ಕಾಲ ನಮ್ಮ ಕೆಲಸ ಇನ್ನೂ ಉಳಿದೇ ಇರುತ್ತದೆ.
>
> **- ಜವಹಾರ್ ಲಾಲ್ ನೆಹರೂ.**

ಮೇಲೆ ಕೊಟ್ಟ ಮೂರು ವಿವರಗಳನ್ನು ಜಾಗ್ರತೆಯಾಗಿ ಓದಿರಿ.

- ಈ ಮೂರರಲ್ಲಿ ಇರುವ ಒಂದು ಭಾವನೆಯನ್ನು ಗುರ್ತಿಸಿರಿ.
- ಈ ಒಂದೇ ಭಾವನೆಯನ್ನು ಮೂವರು ಬೇರೆ ಬೇರೆಯಾಗಿ ಯಾವ ವಿಧವಾಗಿ ವ್ಯಕ್ತಪಡಿಸಿದ್ದಾರೆ.

## ಸಂವಿಧಾನ ಪ್ರಸ್ತಾವನೆ (ಪೀಠಿಕೆ)

ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿಯನ್ನು ಕೊಟ್ಟು, ಮಾರ್ಗದರ್ಶಕವಾಗಿ ನಿಂತ ಮೌಲ್ಯಗಳು ಭಾರತ ದೇಶ ಪ್ರಜಾಪ್ರಭುತ್ವಕ್ಕೆ ಬುನಾದಿಗಳಾಗಿ ನಿಂತಿವೆ. ಈ ಮೌಲ್ಯಗಳೆಲ್ಲವನ್ನು ಭಾರತ ಸಂವಿಧಾನ ಪ್ರಸ್ತಾವನೆಯಲ್ಲಿ ಅಳವಡಿಸಿದ್ದಾರೆ. ಸಂವಿಧಾನದ ಉದ್ದೇಶಗಳನ್ನು, ಮೂಲಭೂತ ಸೂತ್ರಗಳನ್ನು ಈ ಪ್ರಸ್ತಾವನೆ ತಿಳಿಸುತ್ತದೆ. ಭಾರತ ಸಂವಿಧಾನದಲ್ಲಿನ ಎಲ್ಲ ಅಂಶಗಳಿಗೆ ಇದು ಮಾರ್ಗದರ್ಶನ ನೀಡುತ್ತದೆ.

ಸಂವಿಧಾನದ ಪೀಠಿಕೆಯನ್ನು ಜಾಗ್ರತೆ ಯಾಗಿ ಓದಿ ಅದರಲ್ಲಿನ ಪ್ರತಿ ಮುಖ್ಯ ಪದದ ಅರ್ಥವನ್ನು ತಿಳಿದುಕೊಳ್ಳೋಣ. ಇಲ್ಲಿ ಹೇಳಿದ ಪ್ರತಿ ಪದಗಳಿಗೆ ಒಂದು ಅರ್ಥ ಮತ್ತು ಉದಾಹರಣೆಯನ್ನು ಆಲೋಚಿಸಿರಿ.

ನೀವು ಅದನ್ನು ಜಾಗ್ರತೆಯಾಗಿ ಓದುತ್ತಾ ಹೋದರೆ, ಇಲ್ಲೊಂದು ಅತಿ ಮುಖ್ಯವಾದ ವಾಕ್ಯ ಇದೆ.

"ಭಾರತ ದೇಶದ ಪ್ರಜೆಗಳಾದ ನಾವು ಭಾರತ ದೇಶವನ್ನು ಗಣತಂತ್ರ ರಾಜ್ಯವಾಗಿ ರೂಪಿಸು ವುದಕ್ಕೆ ತೀರ್ಮಾನಿಸಿ ದೇಶ ಪ್ರಜೆಗಳೆಲ್ಲರಿಗೂ ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಸಹ ಭಾತೃತ್ವ ಬೆಳೆಸುತ್ತಾ ನಮಗೆ ನಾವೇ ಈ ಸಂವಿಧಾನ ವನ್ನು ಕೊಟ್ಟುಕೊಂಡಿದ್ದೇವೆ."

- ಭಾರತ ಪ್ರಜೆಗಳು ಎರಡು ಉದ್ದೇಶಗಳನ್ನು ಸಾಧಿಸಲು ತೀರ್ಮಾನಿಸಿದ್ದಾರೆ? ಆ ಎರಡು ಯಾವುವು?
- ಈ ಉದ್ದೇಶಗಳು ನೆರವೇರಲು ಅವರು ಏನು ಮಾಡುವರು



SCERT TELANGANA

**ಭಾರತ ದೇಶದ ಪ್ರಜೆಗಳಾದ ನಾವು ಭಾರತ ದೇಶವನ್ನು ಸಾರ್ವಭೌಮ, ಸಮಾಜವಾದೀ, ಜಾತ್ಯಾತೀತ, ಪ್ರಜಾಪ್ರಭುತ್ವ, ಗಣರಾಜ್ಯವಾಗಿ ರೂಪಿಸುವುದಕ್ಕೆ ಮತ್ತು ಅದರ ಪ್ರಜೆಗಳೆಲ್ಲರಿಗೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು, ಆಲೋಚನೆ, ಅಭಿವೃದ್ಧಿ, ನಂಬಿಕೆ ಶ್ರದ್ಧೆ ಮತ್ತು ಆರಾಧನೆಯ ಸ್ವಾತಂತ್ರ್ಯವನ್ನು, ಅಂತಸ್ತು, ಅವಕಾಶಗಳಲ್ಲಿ ಸಮಾನತೆಯನ್ನು ಒದಗಿಸುವುದಕ್ಕೆ ಮತ್ತು ವ್ಯಕ್ತಿಯ ಘನತೆ ಹಾಗೂ ದೇಶದ ಐಕ್ಯತೆಗಾಗಿ ಸಹಭ್ರಾತೃತ್ವವನ್ನು ಬೆಳೆಸುವುದಕ್ಕೆ 1949ರ ನವೆಂಬರ್ 26 ರಂದು ನಮ್ಮ ಸಂವಿಧಾನ ಪರಿಷತ್ತಿನಲ್ಲಿ ಈ ಮೂಲಕವಾಗಿ ನಮ್ಮ ಸಂವಿಧಾನ ವನ್ನು ನಮಗೆ ನಾವೇ ಜಾರಿಗೊಳಿಸಿ ಕೊಂಡಿದ್ದೇವೆ.ಕೊಟ್ಟು ಕೊಂಡಿದ್ದೇವೆ.**

Subs. by the constitution [Forty-second Amendment] Act, 1976, Sec.2, for "Sovereign Democratic Republic" (w.e.f. 3.1.1977)
Subs. by the constitution [Forty-second Amendment] Act, 1976, Sec.2, for "Unity of the Nation" (w.e.f. 3.1.1977)

**ಭಾರತ ದೇಶದ ಪ್ರಜೆಗಳಾದ ನಾವು :** ಈ ಸಂವಿಧಾನವನ್ನು ಪ್ರಜೆಗಳು ತಮ್ಮ ಪ್ರತಿನಿಧಿಗಳ ಮೂಲಕ ಬರೆಸಿ, ಕಾನೂನುಗಳಾಗಿ ಮಾಡಿದ್ದಾರೆ. ಅಷ್ಟೇ ಅಲ್ಲದೇ ಅದನ್ನು ರಾಜರೋ, ಹೊರಗಿನ ಶಕ್ತಿಗಳೋ ಅವರಿಗೆ ಕೊಟ್ಟಿಲ್ಲ. ಇದು ನಮ್ಮ ಪ್ರಜಾ ಪ್ರಭುತ್ವ ಗಣರಾಜ್ಯದ ಸ್ವಭಾವವನ್ನು ತಿಳಿಸುತ್ತದೆ.

**ಗಣರಾಜ್ಯ :**

ಚುನಾವಣೆಗಳ ಮೂಲಕ ಆಯ್ಕೆಯಾದ ವ್ಯಕ್ತಿ ದೇಶಾಧಿನೇತ (ರಾಷ್ಟ್ರಪತಿ) ನಾಗುತ್ತಾನೆ. ರಾಜರ ಆಳ್ವಿಕೆಯಂತೆ ವಂಶ ಪಾರಂಪರ್ಯ ಅಧಿಕಾರ ದೊರೆಯುವುದಿಲ್ಲ.

**ಸಾರ್ವಭೌಮ :** ಅಂತರ್ಗತ, ವಿದೇಶಿ ವ್ಯವಹಾರಗಳಲ್ಲಿ ಸ್ವಂತ ನಿರ್ಣಯಗಳನ್ನು ತೆಗೆದು ಕೊಳ್ಳುವುದು, ಕಾನೂನು ನಿರ್ಮಿಸುವಲ್ಲಿ ಭಾರತ ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯ ಇದೆ. ಹೊರಗಿನ ಶಕ್ತಿಗಳು ಯಾವು ಭಾರತ ದೇಶಕ್ಕೆ ಕಾನೂನು ರೂಪಿಸಲಾರವು.

**ಸಮಾಜವಾದಿ :** ತಮ್ಮ ಕೆಲಸದ ಮೂಲಕ ಪ್ರಜೆಗಳೆಲ್ಲ ರೂ ಸಂಪತ್ತನ್ನು ಸೃಷ್ಟಿಸುತ್ತಾರೆ. ಅದನ್ನೆಲ್ಲರೂ ಸಮಾನವಾಗಿ ಹಂಚಿಕೊಳ್ಳಬೇಕು. ಎಲ್ಲ ವಿಧವಾದ ಅಸಮಾನತೆಗಳನ್ನು ತಗ್ಗಿಸಲು, ಕೊನೆಗೊಳಿಸಲು ದೇಶವು ಕೃಷಿಮಾಡುತ್ತದೆ.

**ಜಾತ್ಯಾತೀತ ರಾಷ್ಟ್ರ :** ಯಾವ ಧರ್ಮದ ಆಧಾರದ ಮೇಲೆ ಸರ್ಕಾರ ನಡೆಯುವುದಿಲ್ಲ. ಯಾವ ಧರ್ಮವನ್ನು ಅನುಸರಿಸಿ ಇರುವುದಕ್ಕೂ ಪ್ರತಿ ಒಬ್ಬ ಪೌರನಿಗೂ ಹಕ್ಕಿದೆ. ಸರ್ಕಾರ ಯಾವುದೇ ಒಂದು ಧರ್ಮಕ್ಕೆ ಪ್ರಾಮುಖ್ಯತೆ ನೀಡುವುದಿಲ್ಲ.

**ಪ್ರಜಾಪ್ರಭುತ್ವ :** ಇದು ಪ್ರಜೆಗಳೆಲ್ಲರಿಗೂ ಸಮಾನ ರಾಜಕೀಯ ಹಕ್ಕುಗಳು ಇರುವ ಸರ್ಕಾರದ ವಿಧಾನ. ಕಾನೂನು ನಿರ್ಮಿಸಲು, ಸರ್ಕಾರವನ್ನು ನಡೆಸಲು ಪ್ರಜೆಗಳು ತಮ್ಮ ಪ್ರತಿನಿಧಿ ಗಳನ್ನು ಆಯ್ಕೆಮಾಡಿಕೊಳ್ಳುವರು. ಪ್ರಜಾ ಪ್ರತಿನಿಧಿ ಗಳು ಪ್ರಜೆಗಳಿಗೆ ಜವಾಬ್ದಾರಾಗಿರುತ್ತಾರೆ.

**ನ್ಯಾಯ :** ಪ್ರತಿ ಪೌರನಿಗೆ ಸಲ್ಲಬೇಕಾದದ್ದು ಸಲ್ಲಬೇಕು. ಅವರಿಗೆ ಯಾವುದು ದೊರಕಬೇಕು ಎಂದು ನಿರ್ಣಯಿಸುವುದು ಅವರ ಹುಟ್ಟು(ಕುಲ,

SCERT TELANGANA

ಜಾತಿ, ಮತ, ಲಿಂಗ) ನಂಬಿಕೆಗಳು (ಮತ, ರಾಜಕೀಯ) ಸಂಪತ್ತು (ಧನಿಕ, ಬಡವ) ಹುದ್ದೆ ಹಿಡಿದು ಬೇಧಭಾವ ತೋರಿಸುವುದಿಲ್ಲ. ಆದರೆ ಚಾರಿತ್ರಿಕವಾಗಿ ಅನ್ಯಾಯಕ್ಕೆ ಗುರಿಯಾದ ಪ್ರಜೆಗಳ ರಕ್ಷಣೆಗೆ ಸರ್ಕಾರ ಪ್ರತ್ಯೇಕ ಕ್ರಮಗಳನ್ನು ಕೈಗೊಳ್ಳಬಹುದು.

**ಸಮಾನತ್ವ :** ನಮ್ಮ ಸಂವಿಧಾನ ಎಲ್ಲಾ ಅಂಶಗಳಲ್ಲಿ (ಉದಾ : ಆದಾಯ, ಆಸ್ತಿ, ವಿಷಯಗಳಲ್ಲಿ) ಸಮಾನತೆಯನ್ನು ಕೊಟ್ಟಿಲ್ಲ, ಆದರೆ ಎಲ್ಲರಿಗೂ ಒಂದೇ ಹುದ್ದೆ ಇರುವಂತೆ ನೋಡಿಕೊಳ್ಳುತ್ತಿದೆ. ಇದರ ಅರ್ಥ ಪ್ರತಿ ಒಬ್ಬರಿಗೂ ಒಂದೇ ಕಾನೂನು ಅನ್ವಯಿಸುತ್ತವೆ. ಎರಡನೆಯದು ಅದು ಅವಕಾಶಗಳಲ್ಲಿ ಸಮಾನತೆಗೆ ಭರವಸೆ ನೀಡುತ್ತದೆ. ಇದರ ಅರ್ಥ ಸರ್ಕಾರದ ಅವಕಾಶಗಳಲ್ಲಿ ಕುಲ, ಮತಕ್ಕೆ ಸಂಬಂಧವಿಲ್ಲದಂತೆ ಎಲ್ಲರಿಗೂ ಲಭ್ಯವಾಗುವಂತೆ ಇರುತ್ತವೆ. ಒಂದು ಪದವಿಗೆ ಪ್ರತ್ಯೇಕ ಅರ್ಹತೆಗಳು ಇರಬೇಕಾಗಿ ಬಂದರೆ ಆ ಅರ್ಹತೆಗಳು ಸಹ ಎಲ್ಲರಿಗೂ ಸಮಾನವಾಗಿ ದೊರೆಯುವಂತೆ ನೋಡಿಕೊಳ್ಳುತ್ತಾರೆ.

**ಸ್ವಾತಂತ್ರ್ಯ :** ಪೌರರು ಅವರು ಆಲೋಚಿಸುವುದರ ಮೇಲೆ ಅವರು ಅನುಸರಿಸುವ ಧರ್ಮ ಇಲ್ಲದೇ ಧರ್ಮವನ್ನು ಅನುಸರಿಸದೇ ಇರುವುದು, ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವ ವಿಧಾನ ಇಲ್ಲದೇ ಭಾವಗಳನ್ನು ಕ್ರಿಯೆಯಲ್ಲಿ ಮಾಡುವುದು ಎಲ್ಲರೂ ಕಲಿತು ಸಂಘಗಳು, ಪಾರ್ಟಿಗಳಾಗಿ ಏರ್ಪಡುವಂತಹ ಸ್ವಾತಂತ್ರ ಎಲ್ಲರಿಗೂ ಇರುತ್ತದೆ. ಯಾವುದರ ಮೇಲೆ ಕಾರಣಗಳು ಇಲ್ಲದಂತೆ ನಿಯಂತ್ರಣ ಇರುವುದಿಲ್ಲ.

**ಸೌಭ್ರಾತೃತ್ವ :** ಪ್ರಜೆಗಳೆಲ್ಲರ ಮಧ್ಯ ಐಕ್ಯತೆ, ಸೋದರ ಭಾವವನ್ನು ಬೆಳೆಸಬೇಕು. ತನ್ನ ಸಹ ಪೌರರನ್ನು ಬೇರೆಯವರೆಂದು ಭಾವಿಸದಂತೆ, ಅವರನ್ನು ಕಡಿಮೆ ಮಾಡದಂತೆ ಇರಬೇಕು.

ಪೀಠಿಕೆ ಅಲ್ಲದೇ ನಮ್ಮ ಸಂವಿಧಾನದಲ್ಲಿ ಸರ್ಕಾರಿ ವಿಧಾನಕ್ಕೆ ಆದೇಶ ಸೂತ್ರಗಳೆಂಬ ವಿಭಾಗವಿದೆ. ಇದು ಭಾರತ ಸರ್ಕಾರಕ್ಕೆ ಕೆಲವು ನಿರ್ದಿಷ್ಠ ಕರ್ತವ್ಯಗಳನ್ನು ನೀಡಿದೆ. ಉದಾಹರಣೆಗೆ ಸಾರ್ವಜನಿಕ ಅಕ್ಷರಾಸ್ಯತೆ, ವಿದ್ಯೆ, ಪರ್ಯಾವರಣ ಪರಿರಕ್ಷಣೆ, ಆದಾಯ ಅಸಮಾನತೆಗಳನ್ನು ಕಡಿಮೆ ಮಾಡುವುದು, ಮೊದಲಾದವುಗಳು ಈ ಸೂತ್ರಗಳು ಸರ್ಕಾರಕ್ಕೆ ಮಾರ್ಗದರ್ಶಕಗಳಾಗಿರುತ್ತವೆ. ಆದರೆ ಸರ್ಕಾರಗಳು ಇವುಗಳನ್ನು ಅನುಸರಿಸುತ್ತಿಲ್ಲವೆನಿಸಿದಾಗ ನಾವು ನ್ಯಾಯಸ್ಥಾನದಲ್ಲಿ ಮೊಕದ್ದಮೆ ಹಾಕಬಹುದು.

ಈ ಆದರ್ಶಗಳೆಲ್ಲವನ್ನೂ ಪ್ರಜೆಗಳಿಗೆಲ್ಲರಿಗೂ ವರ್ತಿಸುವಂತೆ ಮಾಡಲು ಸಂವಿಧಾನದಲ್ಲಿ ಪ್ರಜೆಗಳೆಲ್ಲರಿಗೂ ವರ್ತಿಸುವ ಪ್ರಾಥಮಿಕ ಹಕ್ಕುಗಳು ಎನ್ನುವ ಅಧ್ಯಾಯವಿದೆ. ಇವುಗಳನ್ನು ಕುರಿತು 9 ನೇ ತರಗತಿಯಲ್ಲಿ ಓದುವಿರಿ. ಆದೇಶ ಸೂತ್ರಗಳ ಮಾದರಿ ಅಲ್ಲದಂತೆ ಈ ಮೂಲಭೂತ ಹಕ್ಕುಗಳು (ಪ್ರಾಥಮಿಕ ಹಕ್ಕುಗಳು) ಲಭಿಸದೇ ಇದ್ದಾಗ ಇಲ್ಲವೇ ಅವುಗಳಿಗೆ ಭಂಗ ಉಂಟಾದಾಗ ನ್ಯಾಯ ಸ್ಥಾನಗಳ ಸಹಾಯ ತೆಗೆದುಕೊಳ್ಳಬಹುದು.

## ಸರ್ಕಾರದ ವ್ಯವಸ್ಥೆಗಳು :

ಮೇಲಿನ ಮೌಲ್ಯಗಳು, ಆದರ್ಶಗಳಿಗೆ ಅನುಗುಣವಾಗಿ ದೇಶವನ್ನು ಆಳ್ವಿಕೆ ನಡೆಸುವುದಕ್ಕೆ ನಮ್ಮ ಸಂವಿಧಾನ ವ್ಯವಸ್ಥಿತವಾದ ಏರ್ಪಾಟುಗಳನ್ನು ಸಹ ಪ್ರಸ್ತಾವಿಸಿದೆ.

ಇದು ಪಾರ್ಲಿಮೆಂಟರೀ ಪ್ರಭುತ್ವ ವಿಧಾನವನ್ನು ನಮಗೆ ಕೊಟ್ಟಿದೆ. ಪ್ರಜಾ ಪ್ರತಿನಿಧಿಗಳಿಂದ ಕೂಡಿದ ಪಾರ್ಲಿಮೆಂಟ್ ಕಾನೂನುಗಳನ್ನು ಜಾರಿಗೊಳಿಸುತ್ತದೆ. ಈ ಕಾನೂನುಗಳನ್ನು ಪಾರ್ಲಿಮೆಂಟು ಸದಸ್ಯರಿಂದ ಏರ್ಪಟ್ಟ ಸರ್ಕಾರ ಜಾರಿಗೊಳಿಸುತ್ತದೆ, ಇದು ಪಾರ್ಲಿಮೆಂಟಿಗೆ ಜವಾಬ್ದಾರಿಯಾಗಿರುತ್ತದೆ. ದೇಶ ಪರಿಪಾಲನೆಯನ್ನು ಪ್ರಧಾನಮಂತ್ರಿ ನೇತೃತ್ವದಲ್ಲಿನ ಮಂತ್ರಿವರ್ಗ (ಕ್ಯಾಬಿನೆಟ್) ನೋಡಿಕೊಳ್ಳುತ್ತದೆ. ಸರ್ಕಾರಕ್ಕೆಲ್ಲಾ ರಾಷ್ಟ್ರಪತಿಯೇ ಅಧಿಪತಿಯಾಗಿ ಇರುತ್ತಾನೆ. (ಇದನ್ನು ಕುರಿತು ಮುಂದಿನ ಅಧ್ಯಾಯದಲ್ಲಿ ವಿವರವಾಗಿ ಓದುವಿರಿ).

- ಆಯ್ಕೆಯಾದ ಪಾರ್ಲಿಮೆಂಟ್ ಕಾನೂನುಗಳನ್ನು ಏಕೆ ಮಾಡಬೇಕು? ವಿದ್ಯಾವಂಥರಾದ ನ್ಯಾಯವಾದಿಗಳು, ನ್ಯಾಯ ಮೂರ್ತಿಗಳು ಏಕೆ ಮಾಡಬಾರದು?
- ಪ್ರಧಾನಮಂತ್ರಿ, ಮಂತ್ರಿ ವರ್ಗವು ತಮ್ಮ ನಿರ್ಣಯಗಳಿಗೆ ಪಾರ್ಲಿಮೆಂಟ್ ಒಪ್ಪಿಗೆಯನ್ನು ಏಕೆ ಪಡೆಯಬೇಕು? ಪಾರ್ಲಿಮೆಂಟ್ ಸದಸ್ಯರು ಕೇಳುವ ಪ್ರಶ್ನೆಗಳಿಗೆ ಅವರು ಉತ್ತರಗಳನ್ನು ಏಕೆ ಕೊಡಬೇಕು? ಕೇವಲ ರಾಷ್ಟ್ರಪತಿಗೆ ಜವಾಬ್ದಾಯಾಗಿದ್ದರೆ ಇನ್ನೂ ಚೆನ್ನಾಗಿ ಇರುತ್ತದೆಯಾ ?

ಎರಡನೆಯದು, ನಮ್ಮ ದೇಶ ಉಭಯ ವ್ಯವಸ್ಥೆಯಿಂದ ಕೂಡಿದೆ. ಚಿಕ್ಕ ರಾಜ್ಯಗಳು ಕಲಿಯುವಿಕೆಯಿಂದ ದೇಶ ನಿರ್ಮಾಣಗೊಂಡಿದೆ. ಸರಕಾರ ಅಧಿಕಾರಗಳನ್ನು ಕೇಂದ್ರ, ರಾಜ್ಯ ಸರ್ಕಾರಗಳ ಮಧ್ಯೆ ವಿಭಜಿಸಿದ್ದಾರೆ. ಕೇಂದ್ರ ಸರ್ಕಾರ ಪಾರ್ಲಿಮೆಂಟ್‌ಗೆ, ರಾಜ್ಯ ಸರ್ಕಾರಗಳು ರಾಜ್ಯ ಶಾಸನ

SCERT TELANGANA

ಸಭೆಗಳಿಗೆ ಜವಾಬ್ದಾರಿಯಾಗಿರುತ್ತವೆ. ಉದಾಹರಣೆಗೆ ಕೇಂದ್ರ ಸರ್ಕಾರವು ಸೈನ್ಯ - ರೈಲ್ವೆಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಮಾಡಿ, ಅವುಗಳನ್ನು ನಿಯಂತ್ರಿಸುತ್ತದೆ. ರಾಜ್ಯ ಸರ್ಕಾರಗಳು ಪೋಲೀಸ್, ರಸ್ತೆ ಸಾರಿಗೆ, ಪಾಠಶಾಲೆಗಳಂತಹ ವಿಷಯಗಳ ಮೇಲೆ ಕಾನೂನು ಮಾಡುತ್ತವೆ.

ಕೇಂದ್ರ ಪಾರ್ಲಿಮೆಂಟ್‌ನಲ್ಲಿ ಲೋಕಸಭೆ, ರಾಜ್ಯಸಭೆ ಎಂದು ಎರಡು ಸಭೆಗಳಿವೆ. ಲೋಕ ಸಭೆಯನ್ನು ಭಾರತ ದೇಶದ ಪ್ರಜೆಗಳೆಲ್ಲರೂ ಆಯ್ಕೆಮಾಡುವರು. ರಾಜ್ಯ ಸಭೆಯ ಸದಸ್ಯರನ್ನು ರಾಜ್ಯ ಶಾಸನ ಸಭೆಗಳು ಆಯ್ಕೆ ಮಾಡುತ್ತವೆ. ಈ ವಿಧವಾಗಿ ಕೇಂದ್ರ ಸರ್ಕಾರ ಕಾನೂನುಗಳು ಮಾಡುವಲ್ಲಿ ರಾಜ್ಯಗಳ ಪಾತ್ರ ಸಹ ಇರುತ್ತದೆ.

- ಕೆಲವು ದೇಶಗಳಲ್ಲಿ ಭಿನ್ನವಾದ ವ್ಯವಸ್ಥೆ ಇದೆ. ಒಟ್ಟು ದೇಶಕ್ಕೆ, ರಾಜ್ಯಗಳಿಗೆ ಕೇಂದ್ರ ಸರ್ಕಾರವೇ ಕಾನೂನುಗಳನ್ನು ಮಾಡುತ್ತವೆ. ಇಂತಹಾ ವಿಧಾನ ಭಾರತ ದೇಶಕ್ಕೆ ಅನುಕೂಲವಾದದ್ದು ಎಂದು ಭಾವಿಸುವಿರಾ? ತರಗತಿಯಲ್ಲಿ ಚರ್ಚಿಸಿರಿ.

ಮೂರನೆಯದು ನಮ್ಮ ದೇಶದಲ್ಲಿ ಪ್ರಜಾ ಪ್ರಭುತ್ವವು ಮೂರು ವಿಧಗಳಲ್ಲಿ ಇದೆ. ದೇಶ ಮಟ್ಟದಲ್ಲಿ ಪಾರ್ಲಿಮೆಂಟ್, ರಾಜ್ಯ ಹಂತದಲ್ಲಿ ರಾಜ್ಯ ಶಾಸನ ಸಭೆಗಳು, ಜಿಲ್ಲಾ ಮಟ್ಟದಲ್ಲಿ ಪಂಚಾಯತಿ ರಾಜ್ ವ್ಯವಸ್ಥೆ ಎನ್ನುವ ಸ್ಥಾನಿಕ ಸರ್ಕಾರಗಳಿವೆ. ದೇಶದ ವ್ಯವಹಾರಗಳಲ್ಲಿ ಪ್ರಜೆಗಳು ಪಾಲ್ಗೊಳ್ಳುವುದಕ್ಕೆ ಅತ್ಯಧಿಕ ಅವಕಾಶಗಳನ್ನು ಕಲ್ಪಿಸುವುದಕ್ಕೆ ಈ ವಿಧಾನವನ್ನು ರೂಪಿಸಿದ್ದಾರೆ.

ನಾಲ್ಕನೆಯದು, ಸಂವಿಧಾನವನ್ನು ಸಂರಕ್ಷಿಸಲು ಕೆಲವು ಸ್ವತಂತ್ರ್ಯ ಸಂಸ್ಥೆಗಳನ್ನು ಸಹ ಸಂವಿಧಾನವು ಅಳವಡಿಸಿದೆ. ನ್ಯಾಯ ವ್ಯವಸ್ಥೆ, ನ್ಯಾಯ ಸ್ಥಾನಗಳು ಸರ್ಕಾರದ ಖರ್ಚನ್ನು ಪರಿಶೀಲಿಸುವ ಕಂಟ್ರೋಲರ್ ಅಂಡ್ ಆಡಿಟರ್ ಜನರಲ್, ಸ್ವತಂತ್ರವಾಗಿ ಚುನಾವಣೆಗಳನ್ನು ನಿರ್ವಹಿಸುವ ಚುನಾವಣೆಗಳ ಸಂಘವನ್ನು ಏರ್ಪಡಿಸಿವೆ. ಇವು ಸರ್ಕಾರದೊಂದಿಗೆ ಸಂಬಂಧವಿಲ್ಲದಂತೆ ಸ್ವತಂತ್ರವಾಗಿ ಕೆಲಸ ಮಾಡುತ್ತಾ ರಾಷ್ಟ್ರಪತಿಗೆ ನೇರವಾಗಿ ಮನವಿಗಳನ್ನು ಕಳುಹಿಸುತ್ತವೆ.

- ರಾಜ್ಯ - ಕೇಂದ್ರ ಸರ್ಕಾರಗಳಿಗೆ ಸ್ವತಂತ್ರವಾಗಿ ನ್ಯಾಯಸ್ಥಾನಗಳು, ನ್ಯಾಯ ಮೂರ್ತಿಗಳು ಏಕೆ ಇರಬೇಕು ? ಚರ್ಚಿಸಿರಿ.
- ಚುನಾವಣೆಗಳ ಸಂಘ ಸ್ವಯಂ ಪ್ರತಿಪತ್ತಿಯೊಂದಿಗೆ ಏಕೆ ಇರಬೇಕು ? ವಿವರಿಸಿರಿ.

ಅಂತಿಮವಾಗಿ ಸಂವಿಧಾನವೆನ್ನುವುದು ಬದಲಾಗುತ್ತಾ, ಸಜೀವವಾಗಿ ಇರುವ ಪತ್ರ. ಅದನ್ನು ರೂಪಿಸಿದವರು ಅದು ಸಮಾಜದಲ್ಲಿನ ಬದಲಾವಣೆಗಳಿಗೆ, ಪ್ರಜೆಗಳ ಕೋರಿಕೆಗಳಿಗೆ ಅನುಗುಣವಾಗಿರಬೇಕೆಂದು ಭಾವಿಸಿದ್ದರು. ಅದನ್ನು ಪವಿತ್ರವಾದುದೆಂದೂ, ಸ್ಥಿರವಾದದು, ಬದಲಾವಣೆಗೆ ಅದು ಬರುವುದಿಲ್ಲವೆಂದು ಅದನ್ನು ನೋಡಿಲ್ಲ. ಅದಕ್ಕಾಗಿ ಕಾಲಾನುಗುಣವಾಗಿ ಸಂವಿಧಾನದಲ್ಲಿ ಬದಲಾವಣೆಗಳನ್ನು ತರಲು ಅವಕಾಶಗಳನ್ನು ಕಲ್ಪಿಸಿದ್ದಾರೆ. ಈ ಬದಲಾವಣೆಗಳನ್ನೇ ಸಂವಿಧಾನ ತಿದ್ದುಪಡಿ ಎನ್ನುವರು. ಸಂವಿಧಾನವನ್ನು ಬದಲಿಸುವ ವಿಧಿವಿಧಾನಗಳನ್ನು ಸಂವಿಧಾನದಲ್ಲಿಯೇ ತಿಳಿಸಿದ್ದಾರೆ. 2011ರ ವರೆಗೆ ನಮ್ಮ ಸಂವಿಧಾನಕ್ಕೆ 97 ತಿದ್ದುಪಡಿಗಳನ್ನು ಮಾಡಿದ್ದಾರೆ.



*ಚಿತ್ರ 13.4: ಫೋಟೋದಲ್ಲಿ (ಬಲದಿಂದ ಎಡಕ್ಕೆ) ಜೈರಾಂ ದಾಸ್ ದೌಲತ್‌ರಾಂ, ಆಹಾರ, ವ್ಯಸಾಯ ಮಂತ್ರಿ ; ರಾಜ್ ಕುಮಾರಿ ಅಮೃತ್ ಕೌರ್, ಆರೋಗ್ಯ ಮಂತ್ರಿ ; ಡಾ॥ ಜಾನ್ ಮಥಾಯ್, ಆರ್ಥಿಕ ಮಂತ್ರಿ ; ಸರ್ದಾರ್ ವಲ್ಲಭಾಯ್ ಪಟೇಲ್, ಉಪ ಪ್ರಧಾನ ಮಂತ್ರಿ ; ಅವರ ಹಿಂದೆ ಜಗ್ಜೀವನ್ ರಾಂ, ಕಾರ್ಮಿಕ ಶಾಖೆ ಮಂತ್ರಿ ಇದ್ದಾರೆ.*

SCERT TELANGANA

## ಮುಖ್ಯ ಪದಗಳು

| | | | |
|---|---|---|---|
| 1. ರಾಜಪ್ರಭುತ್ವ | 2. ಪ್ರತಿನಿಧಿ | 3. ಬೇಧಭಾವ | 4. ಸ್ವಯಂ ಆಡಳಿತ |
| 5. ಸಂವಿಧಾನ | 6. ಸಾರ್ವಭೌಮ | 7. ಸಮಾಜವಾದಿ | 8. ರಾಜ್ಯ |
| 9. ಕರಡು ಪ್ರತಿ | 10. ಗಣರಾಜ್ಯ | 11. ಜಾತ್ಯಾತೀತ | 12. ಸಾಭ್ರೌತೃತ್ವಂ |
| 13.ಸವರಣೆ | | | |

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿರಿ

1. "ಧರ್ಮಪುರಾ"ವನ್ನು ಪೂಜಾರಿಗಳು, ಮಂತ್ರಿಗಳು ರೂಪಿಸಿದ ನಿಯಮಗಳ ಆಧಾರವಾಗಿ ಒಬ್ಬ ರಾಜ ಪರಿಪಾಲಿಸುತ್ತಿದ್ದನು. ಆತನು ತನ್ನ ರಾಜ್ಯವನ್ನು 16 ಪ್ರಾಂತಗಳಾಗಿ ಮಾಡಿ ಒಂದೊಂದು ಪ್ರಾಂತಕ್ಕೆ ತನ್ನ ಅಧಿಕಾರಿಗಳನ್ನು ಆಳ್ವಿಕೆದಾರನಾಗಿ ನಿಯಮಿಸಿದನು. ಇದು ಪ್ರಜಾ ಪ್ರಭುತ್ವ ದೇಶವೆಂದು ಹೇಳಬಹುದಾ ? ಇದು ಸಂವಿಧಾನ ಬದ್ದ ದೇಶವೇ ? ನಿಮ್ಮ ಸಮಾಧಾನಗಳಿಗೆ ಕಾರಣಗಳನ್ನು ಕೊಡಿರಿ ?
2. ಕೆಳಗೆ ಕೊಟ್ಟ ವಾಕ್ಯಗಳಲಿ ಸರಿಯಾದುದು ಯಾವುದು ?
   ಅ) ಸರ್ಕಾರ, ಪ್ರಜೆಗಳ ಮಧ್ಯ ಸಂಬಂಧವನ್ನು ಸಂವಿಧಾನ ನಿರ್ಣಯಿಸುತ್ತದೆ.
   ಆ) ಪ್ರಜಾ ಪ್ರಭುತ್ವ ದೇಶಗಳಿಗೆ ಸಾಧಾರಣವಾಗಿ ಒಂದು ಸಂವಿಧಾನವಿರುತ್ತದೆ ?
   ಇ) ಭಾರತ ದೇಶದಂತಹಾ ವೈವಿಧ್ಯತೆಯಿಂದ ಕೂಡಿರುವ ದೇಶಕ್ಕೆ ಸಂವಿಧಾನ ತಯಾರು ಮಾಡುವುದು ಸುಲಭವಲ್ಲ.
   ಈ) ಮೇಲಿನವೆಲ್ಲಾ.
3. ನೆಹರೂ ಉಪನ್ಯಾಸದಿಂದ ರೂಪಿಸಿದ ಭಾಗವನ್ನು ಮತ್ತೊಂದು ಸರಿ ಓದಿ ಈ ಕೆಳಗಿನವುಗಳಿಗೆ ಉತ್ತರಿಸಿರಿ.
   ಅ) ಸಂವಿಧಾನ ನಿರ್ಮಾಪಕರು ಯಾವ ಪ್ರತಿಜ್ಞೆ ಮಾಡಬೇಕೆಂದು ಆತನು ಕೋರಿದನು?
   ಆ) "ಪ್ರತಿ ವ್ಯಕ್ತಿಯ ಕಣ್ಣೀರು ಬಿಂದುವನ್ನು ಒರೆಸಲು ನಮ್ಮ ಮಹಾನಾಯಕನು ಕನಸು ಕಂಡನು "? ಆತನು ಯಾರ ಕುರಿತು ಹೇಳಿದ್ದಾನೆ?
4. ಭಾರತ ಸಂವಿಧಾನ ಪೀಠಿಕೆಯಲ್ಲಿ ಅಳವಡಿಸಲಾದ ಮುಖ್ಯವಾದ ಭಾವನೆಗಳು ಯಾವುವು ?
5. 'ಕಾನೂನಿನ ಮುಂದೆ ಪ್ರಜೆಗಳೆಲ್ಲರೂ ಸಮಾನರು' ಇದನ್ನು ಉದಾಹರಣೆಗಳೊಂದಿಗೆ ವಿವರಿಸಿರಿ.
6. ಕೆಳಗಿನವುಗಳಲ್ಲಿ ಸರಿಯಾದ ವಾಕ್ಯಗಳನ್ನು ಗುರ್ತಿಸಿರಿ.
   ಅ) ಶಾಸನ ಸಭೆಗಳ ಅಧಿಕಾರಗಳನ್ನು ಸಂವಿಧಾನ ಸ್ಪಷ್ಟಪಡಿಸುತ್ತದೆ.
   ಆ) ಎಂತಹಾ ಪರಿಸ್ಥಿತಿಯಲ್ಲಿ ಸಂವಿಧಾನವನ್ನು ಬದಲಿಸಲು ಇಲ್ಲ.
   ಇ) ಪೀಠಿಕೆಯಲ್ಲಿರುವ ಆದರ್ಶಗಳು ವ್ಯವಸ್ಥೆಯ ನಿರ್ಮಾದಲ್ಲಿ ವ್ಯಕ್ತವಾಗುತ್ತವೆ.
   ಈ) ದೇಶ ವ್ಯಾಪ್ತವಾಗಿ ಸಂಬಂಧಿಸಿದ ಕಾನೂನುಗಳನ್ನು ಕೇಂದ್ರ ಸರ್ಕಾರದ ಹಂತದಲ್ಲಿ ನಡೆಸುತ್ತಾರೆ.
7. ಸಮನ್ಯಾಯ ಯಾವ ಯಾವ ಸಂದರ್ಭಗಳಲ್ಲಿ ಕಾಣಿಸುತ್ತದೆ. ಉದಾಹರಣಗಳೊಂದಿಗೆ ತಿಳಿಸಿರಿ.

SCERT TELANGANA

## ಪ್ರಾಜೆಕ್ಟು ಕೆಲಸ :

ಅಮೇರಿಕಾ, ಭಾರತ ದೇಶ, ದಕ್ಷಿಣಾಪ್ರಿಕಾ ದೇಶಗಳ ಸಂವಿಧಾನ ಪೀಠಿಕೆಯನ್ನು ಹೋಲಿಸಿರಿ.

ಅ) ಈ ಮೂರು ದೇಶಗಳ ಪೀಠಿಕೆಯಲ್ಲಿರುವ ಆದರ್ಶಗಳ ಪಟ್ಟಿ ತಯಾರು ಮಾಡಿರಿ.

ಆ) ಇವುಗಳ ಮಧ್ಯ ಇರುವ ಪ್ರಧಾನವಾದ ವ್ಯತ್ಯಸ ಕನಿಷ್ಟ ಒಂದನ್ನು ಗುರ್ತಿಸಿರಿ.

ಇ) ಈ ಮೂರರಲ್ಲಿ ಹಿಂದಿನದನ್ನು ಯಾವುದು ವಿವರಿಸುತ್ತದೆ ?

ಈ) ಇದರಲ್ಲಿ ಯಾವುದು ದೇವರನ್ನು ವಿವರಿಸುವುದಿಲ್ಲ ?

**ಅಮೇರಿಕಾ ಸಂವಿಧಾನ ಪೀಠಿಕೆ :**

ಅಮೇರಿಕಾ ದೇಶ ಪ್ರಜೆಗಳಾದ ನಾವು ಇನ್ನೂ ಉತ್ತಮ ಸಂಯುಕ್ತ ದೇಶವಾಗಿ ಏರ್ಪಾಟು ಮಾಡುವುದು, ನ್ಯಾಯ ಸ್ಥಾಪನೆಗೆ, ದೇಶದಲ್ಲಿ ಶಾಂತಿಯನ್ನು ಹರಡುವಲ್ಲಿ, ಉಭಯ ರಕ್ಷಣೆಗೆ, ಪ್ರಜೆಗಳ ಸಂಕ್ಷೇಮವನ್ನು ಮಾಡುವ, ನಾವು ಮುಂದಿನ ಪೀಳಿಗೆಗೆ ಸ್ವತಂತ್ರವನ್ನು ಅನುಭವಿಸಲು ಈ ಅಮೇರಿಕಾ ಸಂವಿಧಾನವನ್ನು ಏರ್ಪಾಟು ಮಾಡಿಕೊಂಡಿದ್ದೇವೆ.

**ದಕ್ಷಿಣ ಆಫ್ರಿಕಾ ಸಂವಿಧಾನ ಪೀಠಿಕೆ :**

ದಕ್ಷಿಣ ಆಫ್ರಿಕಾ ಪ್ರಜೆಗಳಾದ ನಾವು ಹಿಂದಿನ ಅನ್ಯಾಯಗಳನ್ನು ಗುರ್ತಿಸುತ್ತಿದ್ದೇವೆ. ದೇಶದಲ್ಲಿ ಸ್ವಾತಂತ್ರ್ಯಕ್ಕಾಗಿ ನ್ಯಾಯಕ್ಕಾಗಿ ಹೋರಾಡಿದವರನ್ನು ಸನ್ಮಾನಿಸುತ್ತಿದ್ದೇವೆ. ದೇಶ ನಿರ್ಮಾಣಕ್ಕೆ, ಅಭಿವೃದ್ಧಿಗೊಳಿಸುವವರನ್ನು ಗೌರವಿಸುತ್ತೇವೆ. ಭಿನ್ನತ್ವದಲ್ಲಿ ಏಕತೆಯಿಂದ ಇಲ್ಲಿ ವಾಸಿಸುವರೆಲ್ಲರಿಗೂ ಈ ದೇಶ ಸಲ್ಲುತ್ತದೆ . ಇದಕ್ಕೆ ಅನುಗುಣವಾಗಿ ಸ್ವತಂತ್ರವಾಗಿ ಆಯ್ಕೆ ಮಾಡಿ ಪ್ರಜಾ ಪ್ರತಿನಿಧಿಗಳ ಮೂಲಕ ಈ ಸಂವಿಧಾನವನ್ನು ಅತ್ಯುನ್ನತ ಕಾನೂನಾಗಿ ಆಮೋದಿಸುತ್ತೇವೆ. ಇದರ ಮೂಲಕ ಗತಕಾಲದ ವಿಭಜನೆಗಳನ್ನು ಮರೆತು, ಪ್ರಜಾ ಪ್ರಭುತ್ವದ ಮೌಲ್ಯಗಳು, ಸಾಮಾಜಿಕ ನ್ಯಾಯ, ಪ್ರಾಥಮಿಕ ಮಾನವ ಹಕ್ಕುಗಳು ಆಧಾರವಾಗಿ ಸಮಾಜವನ್ನು ಏರ್ಪಡಿಸುತ್ತೇವೆ. ಇದರ ಮೂಲಕ ಪ್ರಜಾ ಪ್ರಭುತ್ವ, ಬಹಿರಂಗ ಸಮಾಜಕ್ಕೆ ಬುನಾದಿಗಳನ್ನು ಹಾಕುತ್ತೇವೆ, ಇದರಲ್ಲಿ ಪ್ರಜೆಗಳ ಅಭಿರುಚಿ ಮೇರೆಗೆ ಸರ್ಕಾರ ಏರ್ಪಡುತ್ತದೆ. ಕಾನೂನು ರಕ್ಷಣೆ ಪ್ರತಿ ವ್ಯಕ್ತಿಗೆ ಸಮಾನವಾಗಿ ಲಭಿಸುತ್ತದೆ. ಪೌರರೆಲ್ಲರ ಜೀವನ ಪ್ರಮಾಣಗಳನ್ನು ಅಭಿವೃದ್ಧಿಗೊಳಿಸುತ್ತದೆ. ಪ್ರತಿ ವ್ಯಕ್ತಿ ಶಕ್ತಿ , ಸಾಮರ್ಥ್ಯಗಳು ಪೂರ್ತಿಯಾಗಿ ಅರಳುವಂತೆ ಮಾಡುತ್ತದೆ. ದೇಶಗಳ ಕುಟುಂಬಗಳಲ್ಲಿ ಸಾರ್ವಭೌಮ ದೇಶವಾಗಿ ತನ್ನದೇ ಆಗಿರುವ ಒಂದು ಸ್ಥಾನ ಹೊಂದಿದ ದಕ್ಷಣಾಫ್ರಿಕಾವನ್ನು ಸಂಘಟಿತ, ಪ್ರಜಾ ಪ್ರಭುತ್ವ ದೇಶವಾಗಿ ನಿಲ್ಲುತ್ತದೆ.

ದೇವರು ಪ್ರಜೆಗಳನ್ನು ರಕ್ಷಿಸಲಿ

ದೇವರು ದಕ್ಷಿಣಾಫ್ರಿಕಾವನ್ನು ಆಶೀರ್ವದಿಸಲಿ

SCERT TELANGANA

ಘಟಕ 14

# ಪಾರ್ಲಿಮೆಂಟು - ಕೇಂದ್ರ ಸರ್ಕಾರ

ಸಂವಿಧಾನ ದೇಶ ಪರಿಪಾಲನೆಗೆ ಪಾರ್ಲಿಮೆಂಟ್ ರೀತಿಯ ವಿಧಾನವನ್ನು ರೂಪಿಸಿದೆ. ಇದರಲ್ಲಿ ಕಾನೂನುಗಳ ರೂಪಿಸುವ ಅತ್ಯುನ್ನತ ಸಂಸ್ಥೆ ಪಾರ್ಲಿಮೆಂಟ್. ಕಳೆದ ವರ್ಷ ನಾವು ರಾಜ್ಯ ಮಟ್ಟದಲ್ಲಿ ಕಾನೂನು ರೂಪಿಸುವ ಸಂಸ್ಥೆಗಳ ಬಗ್ಗೆ ತಿಳಿದುಕೊಂಡಿದ್ದೇವೆ. ಪ್ರತಿ ರಾಜ್ಯದಲ್ಲಿ ಶಾಸನ ಸಭೆ ಸದಸ್ಯರು ಆ ರಾಜ್ಯಗಳಲ್ಲಿ ಕಾನೂನುಗಳು ಮಾಡುತ್ತಾರೆ. ಕೆಲವು ಅಂಶಗಳ ಮೇಲೆ ಮಾತ್ರವೇ ರಾಜ್ಯಗಳು ತಮ್ಮ ಸ್ವಂತ ಕಾನೂನುಗಳು ಮಾಡುತ್ತವೆ. ಶಾಸನ ಸಭೆಗಳು ಮಾಡುವ ಕಾನೂನುಗಳು, ವಿಧಿವಿಧಾನಗಳು ಜಾರಿಗೆ ತರುವಲ್ಲಿ ರಾಜ್ಯ ಸ್ಥಾಯಿ ಅಧಿಕಾರಿಗಳೂ ಇರುತ್ತಾರೆ. ಈ ವರ್ಷ ನಾವು ಪಾರ್ಲಿಮೆಂಟ್, ದೇಶ ಮಟ್ಟದಲ್ಲಿ ಅದುಕೆಲಸ ಮಾಡುವ ವಿಧಾನವನ್ನು ಕುರಿತು ತಿಳಿದುಕೊಳ್ಳೋಣ.

## ಪಾರ್ಲಿಮೆಂಟಿನ ಪಾತ್ರ :

ಅನೇಕ ಟೀವಿ ಚಾನಲ್‌ಗಳಲ್ಲಿ ಲೋಕಸಭೆ ಟೀವಿ ಚಾನಲ್‌ನ್ನು ನೀವು ನೋಡಬಹುದು. ನ್ಯೂದೆಹಲಿ ಪಾರ್ಲಿಮೆಂಟ್ ಭವನದಲ್ಲಿ ಸಮಾವೇಶ ಸಮಯದಲ್ಲಿ ನಡೆಯುವ ಚರ್ಚೆಗಳನ್ನು ಅದು ಪ್ರಸಾರ ಮಾಡುತ್ತದೆ. ಪಾರ್ಲಿಮೆಂಟ್‌ನಲ್ಲಿನ ಕಾರ್ಯವಿಧಾನವ ನ್ನು ಅರ್ಥಮಾಡಿ ಕೊಳ್ಳಲು ಈ ಚಾನಲನ್ನು ನೋಡಿರಿ.

ನಮ್ಮ ಪಾರ್ಲಿಮೆಂಟ್‌ಗೆ ಅನೇಕ ಮುಖ್ಯವಾದ ಕರ್ತವ್ಯಗಳು ಇವೆ. ಅವುಗಳಲ್ಲಿ ದೇಶಕ್ಕೆಲ್ಲಾ ಅನ್ವಯಿಸುವ ಕಾನೂನುಗಳನ್ನು ಮಾಡುವುದು ಅತಿಮುಖ್ಯ ಕರ್ತವ್ಯ. ನಮ್ಮ ದೇಶಕ್ಕೆ ಸಂಬಂಧಿಸಿದ ಸಹಜ ಸಂಪನ್ಮೂಲಗಳು, ವಿನಿಯೋಗ ಕುರಿತು, ವಿದ್ಯೆ, ಇತರ ದೇಶಗಳೊಂದಿಗೆ ಸಂಬಂಧಗಳು ಕೈಗಾರಿಕೆಗಳು, ವ್ಯವಸಾಯಕ್ಕೆ ಸಂಬಂಧಿಸಿದ ವಿಧಿವಿಧಾನಗಳ ರೂಪಕಲ್ಪನೆ ಮಾಡಿ, ಈ ವಿಧಾನಗಳಿಗೆ ಅನುಗುಣವಾಗಿ ಸರ್ಕಾರ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕು. ಉದಾಹರಣೆಗೆ 1986 ರಲ್ಲಿ ಪಾರ್ಲಿಮೆಂಟ್ ರಾಷ್ಟ್ರೀಯ ವಿದ್ಯಾ ವಿಧಾನವನ್ನು ರೂಪಿಸಿತು. ವಿದ್ಯೆಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಅದು ಇಂದಿಗೂ ಮಾರ್ಗದರ್ಶನ ಮಾಡುತ್ತದೆ. ಮಕ್ಕಳಿಗೆಲ್ಲಾ ಗುಣಾತ್ಮಕ ವಿದ್ಯೆ ಸಿಗುವಂತೆ 2009 ರಲ್ಲಿ ಪಾರ್ಲಿಮೆಂಟ್ ಉಚಿತ ನಿರ್ಭಂಧ ಪ್ರಾಥಮಿಕ ವಿದ್ಯೆ – ಮಕ್ಕಳ ಹಕ್ಕು ಎನ್ನುವ ಕಾನೂನು ಜಾರಿಗೆ ತಂದಿದೆ.

- ಪಾರ್ಲಿಮೆಂಟ್ ಮಾಡಿದ ಕೆಲವು ಮುಖ್ಯ ಕಾನೂನುಗಳು ವಿಧಾನಗಳ ಕುರಿತು ತಿಳಿದುಕೊಳ್ಳಿರಿ. ಅವುಗಳ ಬಗ್ಗೆ ತರಗತಿಯಲ್ಲಿ ವಿವರಿಸಿರಿ



*ಚಿತ್ರ 14.1: ನ್ಯೂ ದೆಹಲಿಯಲ್ಲಿನ ಪಾರ್ಲಿಮೆಂಟ್ ಭವನ*

SCERT TELANGANA

ಪ್ರಜೆಗಳ ಅಭಿವೃದ್ಧಿಗೆ, ಸಂಕ್ಷೇಮಕ್ಕೆ ಪಾರ್ಲಿಮೆಂಟ್ ಮಾಡಿದ ಕಾನೂನುಗಳನ್ನು ದೇಶವನ್ನು ಪರಿಪಾಲಿಸುವ ಸರ್ಕಾರ ಜಾರಿಗೊಳಿಸುತ್ತದೆ. ತನ್ನ ಕಾರ್ಯಕ್ರಮ ಗಳಿಗೆ ಪಾರ್ಲಿಮೆಂಟ್ ಆಮೋದವನ್ನು ಸರ್ಕಾರ ಪಡೆಯಬೇಕು. ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆಯುವಾಗ ಯಾವ ಅಂಶದ ಮೇಲಾದರೂ ಸ್ಪಷ್ಟತೆಗಾಗಿ ಸದಸ್ಯರು ಪ್ರಶ್ನೆಗಳು ಕೇಳಬಹುದು. ಅದಕ್ಕೆ ಸರ್ಕಾರಕ್ಕೆ ಸಂಬಂಧಿಸಿದ ಸದಸ್ಯರು ಉತ್ತರ ಕೊಡಬೇಕು. ಈ ವಿಧವಾಗಿ ಪಾರ್ಲಿಮೆಂಟಿಗೆ ಸರ್ಕಾರವು ಜವಾಬು ದಾರಿಯಾಗಿ ಇರುತ್ತದೆ.ಸರ್ಕಾರ ಆದಾಯ, ಖರ್ಚುಗಳನ್ನು ಸಹ ಪಾರ್ಲಿಮೆಂಟ್ ಆಮೋದಿಸುತ್ತದೆ. ಪ್ರತಿ ವರ್ಷ ಪಾರ್ಲಿಮೆಂಟ್ ಆಮೋದ ಕ್ಕಾಗಿ ಸರ್ಕಾರ ವಾರ್ಷಿಕ ಬಡ್ಜೆಟ್‌ನ್ನು ಸಮರ್ಪಿಸುತ್ತದೆ.

- ಪಾರ್ಲಿಮೆಂಟ್‌ಗೆ ಜವಾಬು ದಾರಿಯಾಗಿರುವ ಸರ್ಕಾರದೊಂದಿಗೆ ಕೂಡಿರುವ ಪಾರ್ಲಿಮೆಂಟ್‌ರೀ ತರಹ ಸರ್ಕಾರ ವಿಧಾನದಿಂದ ಪ್ರಯೋಜನಗಳು ಯಾವುವು?
- ಪಾರ್ಲಿಮೆಂಟ್ ಕಾನೂನುಗಳನ್ನು ಜಾರಿಗೊಳಿಸಿ ಸರ್ಕಾರದ ಮೇಲೆ ನಿಯಂತ್ರಣೆ ಇಲ್ಲದೇ ಇದ್ದರೆ ಸರಿಹೋಗುವುದಾ – ತರಗತಿಯಲ್ಲಿ ಚರ್ಚಿಸಿರಿ.
- ಪಾರ್ಲಿಮೆಂಟ್‌ಗೆ ಆಗಲೀ ಶಾಸನ ಸಭೆಗೆ ಆಗಲೀ ಜವಾಬ್ದಾರಿ ಇಲ್ಲದೇ ಸರ್ಕಾರದ ವಿಧಾನಗಳು ಇವೆಯೇ ತಿಳಿದುಕೊಳ್ಳಿರಿ.

## ಪಾರ್ಲಿಮೆಂಟ್ – ಸಭೆಗಳು :

ಪಾರ್ಲಿಮೆಂಟ್‌ನಲ್ಲಿ ಎರಡುಸಭೆಗಳುಇವೆ. ಅವು ಲೋಕಸಭೆ, ರಾಜ್ಯ ಸಭೆ ಲೋಕಸಭೆಯ ಸದಸ್ಯರು ನೇರವಾಗಿ ಪ್ರಜೆಗಳಿಂದ ಆಯ್ಕೆ ಆಗುವರು. ರಾಜ್ಯ ಸಭೆ ಸದಸ್ಯರು ರಾಜ್ಯ ಶಾಸನ ಸಭೆ ಸದಸ್ಯರಿಂದ ಆಯ್ಕೆ ಆಗುತ್ತಾರೆ. ರಾಜ್ಯ ಸಭೆಯಲ್ಲಿ 250 ಸದಸ್ಯರಿರುತ್ತಾರೆ. ರಾಷ್ಟ್ರ ಶಾಸನ ಸಭೆಗಳು, ಕೇಂದ್ರ ಪಾಲಿತ ಪ್ರಾಂತಗಳು ರಾಜ್ಯ ಸಭೆಗೆ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಾರೆ. ಕೇಂದ್ರ ದ ಶಾಸನ ಪ್ರಕ್ರಿಯೆಯಲ್ಲಿ ರಾಜ್ಯ ಸರ್ಕಾರಗಳ ಸಂಬಂಧ ಕಲ್ಪಿಸುವ ಮಾರ್ಗಗಳಲ್ಲಿ ಇದು ಒಂದು. ರಾಜ್ಯ ಸಭೆ ಸದಸ್ಯರು ಅಧಿಕಾರಾವಧಿ 6 ವರ್ಷಗಳು. ಪ್ರತಿ ಎರಡು ವರ್ಷಗಳಿಗೊಮ್ಮೆ ಮೂರನೇ ಒಂದು ಭಾಗ ಸದಸ್ಯರ ಪದವಿ ಕಾಲ ಮುಗಿಯುತ್ತದೆ. ಅವರ ಸ್ಥಾನದಲ್ಲಿ ಹೊಸ ಸದಸ್ಯರನ್ನು ಆಯ್ಕೆ ಮಾಡುತ್ತಾರೆ.

## ಸಭೆಯ ಅಧಿಕಾರಗಳು :

ಸಂವಿಧಾನ ಪ್ರಕಾರ ಅನೇಕ ವಿಷಯಗಳಲ್ಲಿ ಲೋಕಸಭೆಗೆ ಅತ್ಯುನ್ನತ ಅಧಿಕಾರಗಳೂ ಇದ್ದಾವೆ. ಅವು ಹೇಗೆಂದರೆ :

1. ಯಾವ ಸಾಧಾರಣ ಕಾನೂನನ್ನಾಗಲೀ ಉಭಯ ಸಭೆಗಳು ಆಮೋದಿಸಬೇಕು. ಆದರೆ ಎರಡು ಸಭೆಗಳ ಮಧ್ಯೆ ವಿವಾದ ಏರ್ಪಟ್ಟಾಗ ಅಂತಿಮ ನಿರ್ಣಯ ಉಭಯ ಸಭೆಗಳು ಸಮಾವೇಶದಲ್ಲಿ ತೆಗೆದುಕೊಳ್ಳುತ್ತಾರೆ. ಲೋಕಸಭೆ ಯಲ್ಲಿ ಅಧಿಕ ಸದಸ್ಯರು ಇರುವುದರಿಂದ ಇಂಥಾ ಸಮಾವೇಶ ಗಳಲ್ಲಿ ಲೋಕಸಭೆಯದೇ ಮೇಲುಗೈ ಆಗಬಹುದು.

2. ಆರ್ಥಿಕ ವಿಷಯದಲ್ಲಿ ಲೋಕಸಭೆಗೆ ಹೆಚ್ಚಿಗೆ ಅಧಿ ಕಾರಗಳಿದ್ದಾವೆ. ಸರ್ಕಾರದ ಬಡ್ಜೆಟ್ ವಿಷಯದಲ್ಲಾಗಲೀ ಹಣಕ್ಕೆ ಸಂಬಂಧಿಸಿದ ಇತರ ಯಾವ ಬಿಲ್ಲುಗಳಾಗಲೀ ಲೋಕಸಭೆ ಆಮೋದಿಸಿದ ನಂತರ ರಾಜ್ಯ ಸಭೆ ಅದನ್ನು ತಿರಸ್ಕರಿಸು ವಂತಿಲ್ಲ.

3. ಎಲ್ಲದಕ್ಕಿಂತ ಮುಖ್ಯವಾದುದು ಮಂತ್ರಿಮಂಡಲ ವನ್ನು ಲೋಕಸಭೆಯು ನಿಯಂತ್ರಿಸುತ್ತದೆ. ಲೋಕಸಭೆಯ ನಾಯಕನಾಗಿ ಎಲ್ಲ ಸದಸ್ಯರ ಮುಖ್ಯಸ್ಥನಾಗಿ ಪ್ರಧಾನಮಂತ್ರಿ ಇರುತ್ತಾನೆ. ಮಂತ್ರಿ ವರ್ಗದ ಮೇಲೆ ಲೋಕಸಭೆಯಲ್ಲಿ ಮೆಜಾರ್ಟಿ ಸದಸ್ಯರು ಅವಿಶ್ವಾಸವನ್ನು ಪ್ರಕಟಿಸಿದರೆ, ಪ್ರಧಾನ ಮಂತ್ರಿ ಸಹ ಮಂತ್ರಿಗಳೆಲ್ಲರೂ ರಾಜೀನಾಮೆ ಮಾಡಬೇಕು – ರಾಜ್ಯ ಸಭೆಗೆ ಈ ಅಧಿಕಾರ ಇಲ್ಲ.

SCERT TELANGANA




ಭಾರತ ದೇಶ – ರಾಜ್ಯಗಳು ಲೋಕಸಭೆಯ ನಿಯೋಜಕ ವರ್ಗಗಳು.

| ರಾಜ್ಯ | ಸಂಖ್ಯೆ | ರಾಜ್ಯ | ಸಂಖ್ಯೆ | ರಾಜ್ಯ | ಸಂಖ್ಯೆ |
|---|---|---|---|---|---|
| ಆಂಧ್ರಪ್ರದೇಶ | 25 | ಜಮ್ಮುಕಾಶ್ಮೀರ | 6 | ನಾಗಾಲ್ಯಾಂಡ್ | 1 |
| ಅರುಣಾಚಲಪ್ರದೇಶ | 2 | ಜಾರ್ಖಂಡ್ | 14 | ಒಡಿಷಾ | 21 |
| ಅಸ್ಸಾಂ | 14 | ಕರ್ನಾಟಕ | 28 | ಪಂಜಾಬ್ | 13 |
| ಬಿಹಾರ್ | 40 | ಕೇರಳ | 20 | ರಾಜಸ್ಥಾನ್ | 25 |
| ಚತ್ತೀಸ್‌ಘಡ್ | 11 | ಮಧ್ಯಪ್ರದೇಶ | 29 | ಸಿಕ್ಕಿಂ | 1 |
| ಗೋವಾ | 2 | ಮಹಾರಾಷ್ಟ್ರ | 48 | ತಮಿಳುನಾಡು | 39 |
| ಗುಜರಾತ್ | 26 | ಮಣಿಪುರ್ | 2 | ತೆಲಂಗಾಣ | 17 |
| ಹರ್ಯಾಣ | 10 | ಮೇಘಾಲಯ | 2 | ತ್ರಿಪುರ | 2 |
| ಹಿಮಾಚಲ ಪ್ರದೇಶ | 4 | ಮಿಜೋರಾಂ | 1 | ಉತ್ತರಾಖಂಡ್ | 5 |
| | | | | ಉತ್ತರ್ ಪ್ರದೇಶ್ | 80 |
| | | | | ಪಶ್ಚಿಮ ಬಂಗಾಳ | 42 |
| **ಕೇಂದ್ರಪಾಲಿತ ಪ್ರಾಂತಗಳು** | | | | | |
| ಅಂಡಮಾನ್ ನಿಯೋಬಾರ್ ದ್ವೀಪಗಳು | 1 | ಡಾಮನ್, ಡಯ್ಯೂ | 1 | ದೆಹಲಿ( NCT of Delhi) | 7 |
| ಚಂಡೀಘಡ್ | 1 | ಲಕ್ಷದ್ವೀಪಗಳು | 1 | ರಾಷ್ಟ್ರಪತಿಯಿಂದ ನಾಮಿನೇಟ್ ಮಾಡಲ್ಪಟ್ಟ ಆಂಗ್ಲೋ ಇಂಡಿಯನ್ನರು | 2 |
| ದಾದ್ರಾ ಮತ್ತು ನಗರ್ ಹವೇಲಿ | 1 | ಪಾಂಡಿಚೇರಿ | 1 | | |

ಪಟ್ಟಿಕೆ : ರಾಜ್ಯಗಳು – ಲೋಕಸಭೆ – ನಿಯೋಜಕ ವರ್ಗಗಳು. ಪಾರ್ಲಿಮೆಂಟ್ – ಕೇಂದ್ರ ಸರ್ಕಾರ.

SCERT TELANGANA

- ರಾಜ್ಯ ಸಭೆ, ಲೋಕಸಭೆಗಳ ಮಧ್ಯ ಮೂಲಭೂತ ಭೇದಗಳನ್ನು ಗುರ್ತಿಸಿರಿ.
- ವಿವಿಧ ರಾಜಕೀಯ ಪಾರ್ಟಿಗಳಿಗೆ ಸೇರಿದ ಮೇಧಾವಿಗಳು ರಾಜ್ಯ ಸಭೆಯಲ್ಲಿ ಇರುತ್ತಾರೆ. ಆದ್ದರಿಂದ ಅದಕ್ಕೆ ಹೆಚ್ಚಿನ ಅಧಿಕಾರಗಳು ಇರಬೇಕೆಂದು ಅಜಹರ್ ಭಾವಿಸುತ್ತಾನೆ. ರಾಜ್ಯ ಸಭೆಯ ಸದಸ್ಯರನ್ನು ಪ್ರಜೆಗಳು ನೇರವಾಗಿ ಆಯ್ಕೆ ಮಾಡುವುದಿಲ್ಲ. ಆದ್ದರಿಂದ ಅವರಿಗೆ ಹೆಚ್ಚಿನ ಅಧಿಕಾರಗಳನ್ನು ಕೊಡಬಾರದು ಎಂದು ಮುಂತಾಜ್ ಹೇಳುತ್ತಾನೆ. ನೀವು ಯಾರ ಕಡೆ ವಾದಿಸುತ್ತೀರಿ ? ಇವರ ಭಾವನೆಗಳ ಮೇಲೆ ನಿಮ್ಮ ಅಭಿಪ್ರಾಯವೇನು?

## ಲೋಕಸಭೆಗೆ ಚುನಾವಣೆಗಳು :

ಪ್ರಜೆಗಳಿಂದ ನೇರವಾಗಿ ಆಯ್ಕೆಯಾಗುವುದರಿಂದ ಲೋಕಸಭೆಗೆ ಪ್ರತ್ಯೇಕ ಅಧಿಕಾರಗಳು ಇದ್ದಾವೆ. ಲೋಕಸಭೆಗೆ ಚುನಾವಣೆಗಳು ಹೇಗೆ ನಡೆಯುತ್ತವೋ ನೋಡೋಣ.

ಸಾಧಾರಣವಾಗಿ ಲೋಕಸಭೆಗೆ ಪ್ರತಿ ಐದು ವರ್ಷಗಳಿಗೊಮ್ಮೆ ಚುನಾವಣೆಗಳು ನಡೆಯುತ್ತವೆ. ಹದಿನೆಂಟು ವರ್ಷ ತುಂಬಿದ ಅದಕ್ಕೂ ಮೇಲ್ಪಟ್ಟ ಪೌರರೆಲ್ಲರಿಗೂ ಓಟು ಹಕ್ಕು ಇರುತ್ತದೆ. ಆದರೆ ಅವರು ವಾಸಿಸುವ ಮತಕ್ಷೇತ್ರದಲ್ಲಿ ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಬೇಕು. ಇಪ್ಪತ್ತೈದು ವರ್ಷ ವಯಸ್ಸು ಇರುವ ವ್ಯಕ್ತಿ ಚುನಾವಣೆಯಲ್ಲಿ ಸ್ಪರ್ಧಿಸಿ ಲೋಕಸಭೆಯ ಸದಸ್ಯನಾಗಬಹುದು. ಲೋಕಸಭೆಯಲ್ಲಿ 545 ಸ್ಥಾನಗಳು ಇದ್ದಾವೆ. ರಾಜ್ಯಗಳನ್ನು ಕೇಂದ್ರ ಪಾಲಿತ ಪ್ರಾಂತಗಳನ್ನು ಮತಕ್ಷೇತ್ರಗಳಾಗಿ ವಿಭಜಿಸುತ್ತಾರೆ. ಇವುಗಳಿಂದ ಲೋಕಸಭೆಯ ಸದಸ್ಯರು ಚುನಾಯಿತರಾಗುತ್ತಾರೆ. ಅಧಿಕಜನಾಭ ಇರುವ ರಾಜ್ಯಗಳು ಅಧಿಕ ನಿಯೋಜಕ ವರ್ಗಗಳನ್ನು ಇರುತ್ತವೆ. ಅದಕ್ಕಾಗಿಯೇ ಉತ್ತರ ಪ್ರದೇಶದಲ್ಲಿ 80 ನಿಯೋಜಕ ವರ್ಗಗಳು ಇದ್ದರೆ, ಮೇಘಾಲಯದಲ್ಲಿ ಕೇವಲ ಎರಡು ಮತಕ್ಷೇತ್ರಗಳಿವೆ. ನಮ್ಮ ಆಂಧ್ರಪ್ರದೇಶದಲ್ಲಿ 42 ಮತಕ್ಷೇತ್ರಗಳಿವೆ. ಚಂಡೀಘಡದಲ್ಲಿ ಕೇವಲ ಒಂದೇ ಒಂದು ಇದೆ.

ಪಕ್ಕದ ಪೇಜಿ ಚಿತ್ರ, ಪಟ್ಟಿಕೆ ನೋಡಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

- ನಿಮ್ಮ ರಾಜ್ಯದಲ್ಲಿ, ಪಕ್ಕದ ಎರಡು ರಾಜ್ಯಗಳಲ್ಲಿ ಎಷ್ಟು ನಿಯೋಜಕವರ್ಗಗಳಿವೆ?
- 30 ಕ್ಕಿಂತ ಅಧಿಕ ಲೋಕಸಭೆ ನಿಯೋಜಕ ವರ್ಗಗಳಿರುವ ರಾಜ್ಯಗಳೆಷ್ಟು?
- ಬಹಳ ರಾಜ್ಯಗಳಲ್ಲಿ ಅಧಿಕ ನಿಯೋಜಕ ವರ್ಗಗಳು ಇವೆ – ಏಕೆ?
- ಕೆಲವು ನಿಯೋಜಕ ವರ್ಗಪ್ರಾಂತಗಳು ಚಿಕ್ಕವಾಗಿ, ಕೆಲವು ದೊಡ್ಡ ನಿಯೋಜಕ ವರ್ಗ ಪ್ರಾಂತವಾಗಿ ಏಕಿವೆ ?
- ಪರಿಶಿಷ್ಟಜಾತಿ (SCs ) ಪರಿಶಿಷ್ಟವರ್ಗ (STs) ಗಳಿಗೆ ರಿಜರ್ವು ಮಾಡಿದ ನಿಯೋಜಕ ವರ್ಗಗಳು ದೇಶವೆಲ್ಲಾ ಸಮವಾಗಿ ವಿಸ್ತರಿಸಿವೆಯೋ ಇಲ್ಲವೋ ಕೆಲವು ಪ್ರಾಂತಗಳಲ್ಲಿ ಹೆಚ್ಚಾಗಿಇವೆಯೇ?



*ಚಿತ್ರ 14.2:* ಮೇಲಿನ ಚಿತ್ರದಲ್ಲಿ ಒಂದು ಕಡೆ ಪಾರ್ಲಿಮೆಂಟು ಮತ್ತೊಂದು ಜನರು ಏತಕ್ಕಾಗಿ ತೋರಿಸಿದ್ದಾರೆಂದು ನೀವು ಆಲೋಚಿಸಬಲ್ಲಿರಾ?

## ಲೋಕಸಭೆಯ ಮೊದಲನೆಯ ಚುನಾವಣೆಗಳು :

ನಮ್ಮ ಪ್ರಸ್ತುತ ರಾಜಕೀಯ ಜೀವನದಲ್ಲಿ ಚುನಾವಣೆಗಳು ಬಹು ಮುಖ್ಯವಾದವು. ನಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಸಮಯ. ಅಧಿಕ ಜನಸಂಖ್ಯೆಯನ್ನು ಹೊಂದಿರುವ ನಮ್ಮಂಥ ದೇಶದಲ್ಲಿ ಚುನಾವಣೆಗಳನ್ನು ನಡೆಸುವುದು ತುಂಬಾ ಕಷ್ಟದ ಕೆಲಸ. ಇದನ್ನು ಅರ್ಥಮಾಡಿಕೊಳ್ಳಲು 1951 - 52ರಲ್ಲಿನಡೆದ ಮೊದಲನೇ ಚುನಾವಣೆಗಳನ್ನು ಪರಿಶೀಲಿಸೋಣ. ಈ ಚುನಾವಣೆಗಳ ನಿರ್ವಹಣೆಗೆ ನಾಲ್ಕು ತಿಂಗಳು ಹಿಡಿಯಿತು.

ಸಾರ್ವತ್ರಿಕ ವಯಸ್ಕರ ಮತದಾನ ಪದ್ಧತಿಮೂಲಕ ಈ ಚುನಾವಣೆಗಳು ಜರುಗಿದವು. ಅಂದರೆ 21 ವರ್ಷ, ಅದಕ್ಕಿಂತ ಮೇಲ್ಪಟ್ಟು ವಯಸ್ಸು ಇರುವವರೆಲ್ಲರೂ ಈ ಚುನಾವಣೆಯಲ್ಲಿ ಓಟು ಹಕ್ಕು ವಿನಿಯೋಗಿಸಿಕೊಂಡಿದ್ದಾರೆ. ಆ ಸಮಯದಲ್ಲಿ 17,30,00,000 ಮಂದಿಗೆ ಓಟು ಹಕ್ಕು ಇದೆ. ಇದರಲ್ಲಿ ಬಹಳ ಜನ ಮೊದಲ ಬಾರಿಗೆ ಓಟು ಹಾಕಿದ್ದಾರೆ. ಅದರಲ್ಲಿ ಬಹಳ ಮಂದಿ ನಿರಕ್ಷರಸ್ಥರು, ಹಳ್ಳಿಗಳಲ್ಲಿ ವಾಸಿಸುವವರೇ ಈ ಅವಕಾಶಕ್ಕೆ ಪ್ರಜೆಗಳು ಹೇಗೆ ಸ್ಪಂದಿಸವರೋ ಎಂಬ ಪ್ರಶ್ನೆ ಎಲ್ಲರ ಮುಂದಿದೆ.

- ನೀವು ಆ ಸಮಯದಲ್ಲಿ ಇದ್ದಿದ್ದರೆ ಮೇಲಿನ ಅಭಿಪ್ರಾಯದೊಂದಿಗೆ ಏಕೀಭವಿಸುವಿರಾ? ಎಲ್ಲರಿಗೆ ಓಟು ಹಕ್ಕ ಇರುವ ಚುನಾವಣೆಗಳು ನಿರ್ವಹಣೆಗೆ ಭಾರತ ದೇಶ ಪ್ರಯತ್ನಿಸುವುದು ಸರಿಯಾದ ಆಲೋಚನೆ ಎಂದು ಭಾವಿಸುವಿರಾ? ಕಾರಣಗಳನ್ನು ತಿಳಿಸಿರಿ.

ಸ್ವೇಚ್ಛೆಯಾಗಿ ಚುನಾವಣೆಗಳನ್ನು ನಿರ್ವಹಿಸಲು ಚುನಾವಣ ಸಂಘವನ್ನು ಏರ್ಪಡಿಸಿದ್ದಾರೆ. ಮೊದಲನೆಯ ಚುನಾವಣೆ ನಿರ್ವಹಣೆಯು ಬಹಳ ದೊಡ್ಡ, ಸಂಕ್ಲಿಷ್ಟವಾದ ಕೆಲಸ ಅರ್ಹ ಮತದಾರರನ್ನು ಸೇರಿಸಲು ಮನೆಮನೆಗೂ ಸರ್ವೆ ಮಾಡಿದರು.

ವಿವಿಧ ರಾಜಕೀಯ ಪಕ್ಷಕ್ಕೆ ಸೇರಿದವರು, ಸ್ವತಂತ್ರರು ಚುನಾವಣೆಗಳಲ್ಲಿ ಸ್ಪರ್ಧಿಸುತ್ತಾರೆ. ಸ್ಪರ್ಧಿಸಿದ ವ್ಯಕ್ತಿಗೆ ಚುನಾವಣೆಯ ಗುರುತುಗಳನ್ನು ಚುನಾವಣೆ ಸಂಘ ನೀಡುತ್ತದೆ. ಈ ಗುರುತುಗಳನ್ನು ಮತ ಹಾಕುವ ಬ್ಯಾಲೆಟ್ ಪೆಟ್ಟಿಗೆ ಮೇಲೆ ಅಂಟಿಸುತ್ತಾರೆ. ಮತ ಹಾಕುವವರು ತಮಗೆ ಇಷ್ಟವಾದ ಗುರುತು ಇರುವ ಬ್ಯಾಲೆಟ್ ಪೇಪರ್‌ನ್ನು ಪೆಟ್ಟಿಗೆಯ ಒಳಗೆ ತಮ್ಮ ಮತ ಹಾಕಿಬರಬೇಕು. ಈ ಓಟಿಂಗ್ ಪ್ರಕ್ರಿಯೆ ರಹಸ್ಯ ವಾಗಿಡಲು ಪರದೆ ಏರ್ಪಾಟು ಮಾಡುತ್ತಾರೆ.

ದೇಶ ವ್ಯಾಪ್ತವಾಗಿ 2,24,000 ಪೋಲಿಂಗ್ ಕೇಂದ್ರಗಳನ್ನು ಏರ್ಪಾಟು ಮಾಡಿದ್ದರು. 25,00,000ಕ್ಕೆ ಮಿಗಿಲಾಗಿ ಉಕ್ಕಿನ ಬ್ಯಾಲೆಟ್ ಪೆಟ್ಟಿಗೆಗಳು, ಸುಮಾರು 62,00,00,000 ಬ್ಯಾಲೆಟ್ ಪತ್ರಗಳನ್ನು ಮುದ್ರಿಸಿದ್ದರು. ಸುಮಾರು 10 ಲಕ್ಷ ಅಧಿಕಾರಿಗಳು ಚುನಾವಣೆಗಳನ್ನು ಪರಿವೀಕ್ಷಿಸಿದರು. ದೇಶದಲ್ಲಿ ಸುಮಾರು 17,500 ಮಂದಿ ಅಭ್ಯರ್ಥಿಗಳು ಈ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದರು. ಅಂತಿಮವಾಗಿ ಮೊದಲನೇ ಲೋಕಸಭೆಗೆ 489 ಸದಸ್ಯರು ಆಯ್ಕೆಯಾದರು. ಈ ಚುನಾವಣೆಗಳು ಸ್ವೇಚ್ಛೆಯಾಗಿ, ಸ್ವತಂತ್ರವಾಗಿ, ನಿಷ್ಪಕ್ಷವಾಗಿ, ಕ್ರಮ ಶಿಕ್ಷಣದೊಂದಿಗೆ ನಿರ್ವಹಿಸಿದರು. ಹಿಂಸಾತ್ಮಕ ಘಟನೆಗಳು ನಾಮ ಮಾತ್ರ ಜರುಗಿದವು.

ಈ ಹೊಸ ಅವಕಾಶಕ್ಕೆ ಪ್ರಜೆಗಳೆಲ್ಲ ಬೃಹತ್ ಪ್ರಮಾಣದಲ್ಲಿ ಸ್ಪಂಧಿಸಿದರು. ತಮ್ಮ ಓಟು ಬಹಳ ಬೆಲೆಯಿಂದ ಕೂಡಿದೆ ಎಂದು ತಿಳಿದು ಚುನಾವಣೆಗಳಲ್ಲಿ ಪಾಲ್ಗೊಂಡರು. ಬಹಳ ಪ್ರಾಂತಗಳಲ್ಲಿ ಪ್ರಜೆಗಳು ಇದನ್ನು ಹಬ್ಬವನ್ನಾಗಿ ಸಂಭ್ರಮದಿಂದ, ಹೊಸ ಬಟ್ಟೆಗಳನ್ನು ಹಾಕಿಕೊಂಡು ಇದಕ್ಕೆ ಸಿದ್ಧರಾದರು. ಮಹಿಳೆಯರು ಆಭರಣಗಳನ್ನು ಧರಿಸಿ ಓಟಿಂಗ್‌ನಲ್ಲಿ ಪಾಲ್ಗೊಂಡರು. ಓಟಿಂಗ್ ವಿಧಾನವು ನಿರಕ್ಷರಸ್ಥರಿಗೆ – ಬಡವರಿಗೆ ಸ್ವಲ್ಪ ಕಷ್ಟವಾದರೂ ಓಟು ಹಕ್ಕನ್ನು ಜಾಗ್ರತೆಯಾಗಿ ವಿನಿಯೋಗಿಸಿಕೊಳ್ಳಬಲ್ಲರೆಂದು ತೋರಿಸಿದರು.

ಪಟ್ಟಣ ಪ್ರಾಂತಗಳಲ್ಲಿ ಮಾತ್ರವಲ್ಲದೇ ಗ್ರಾಮದಲ್ಲಿನ ಓಟರುಗಳು (ಮತದಾರರು) ಸಹ ಅಧಿಕ ಸಂಖ್ಯೆಯಲ್ಲಿ ದಲಿತರು, ಆದಿವಾಸಿಗಳು, ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡರು. ಓಟು ಹಕ್ಕು ಇರುವ ಮಹಿಳೆಯರಲ್ಲಿ 40% ಜನ ತಮ್ಮ ಹಕ್ಕನ್ನು ಉಪಯೋಗಿಸಿ ಕೊಂಡರು. ಅನೇಕ ವರ್ಗ ಮಹಿಳೆಯರು ಪರದಾ ಘೋಷಾಪದ್ಧತಿ ಇದ್ದರೂ, ಬಹಳ ಜನ ಮಹಿಳೆಯರು ಮತ ಹಾಕುವುದು ಹೆಚ್ಚೆಂದು ಭಾವಿಸಿದರು.

SCERT TELANGANA

ಈ ಚುನಾವಣೆಗಳಿಗೆ ಸಂಬಂಧಿಸಿದ ಮುಖ್ಯವಾದ ವಿಷಯವೇನೆಂದರೆ ಅಲ್ಲಿಯವರೆಗೆ ಯಾವ ದೇಶ ಸಹ ಮಹಿಳೆಯರು, ನಿರಕ್ಷರಸ್ಥರು, ಬಡವರಿಗೆ ಓಟು ಹಕ್ಕು ನೀಡಿ, ಇಷ್ಟು ದೊಡ್ಡ ಮೊತ್ತದಲ್ಲಿಚುನಾವಣೆಗಳು ನಡೆಸಿಲ್ಲ. ಓಟು ಇರುವವರಲ್ಲಿ 46% ಮಂದಿ ತಮ್ಮ ಹಕ್ಕನ್ನು ಉಪಯೋಗಿಸಿ ಕೊಂಡಿದ್ದಾರೆ.

- ನಿಮ್ಮ ಪ್ರಾಂತದಿಂದ ಆಯ್ಕೆಯಾದ ಲೋಕಸಭೆಯ ಸದಸ್ಯರು ಯಾರು? ನಿಮ್ಮ ರಾಜ್ಯದಿಂದ ನಿಮ್ಮ ಅಕ್ಕಪಕ್ಕ ರಾಜ್ಯದಿಂದ ಆಯ್ಕೆಯಾದ ಲೋಕಸಭೆ ಸದಸ್ಯರ ಹೆಸರು ಹೇಳಿರಿ.
- ಅವರು ಯಾವ ರಾಜಕೀಯ ಪಕ್ಷಕ್ಕೆ ಸೇರಿದವರೋ – ತಿಳಿದುಕೊಳ್ಳಿ ?
- ಈ ಕೆಳಗಿನ ಪದಗಳಿಗೆ ಅರ್ಥಗಳನ್ನು ನಿಮ್ಮ ಉಪಾಧ್ಯಾಯರೊಂದಿಗೆ ಚರ್ಚಿಸಿರಿ.

1) ಅಭ್ಯರ್ಥಿ　　2) ಮತಕ್ಷೇತ್ರ
3) ಬ್ಯಾಲೆಟ್　　4) ಇವಿಎಂ
5) ಚುನಾವಣೆ ಪ್ರಚಾರ　　6) ಚುನಾವಣೆ ಸಂಘ
7) ಮತದಾರ ಪಟ್ಟಿ　　8) ಓಟಿಂಗ್ ವಿಧಾನ
9) ಸ್ವೇಚ್ಛೆ ಸ್ವತಂತ್ರ ಚುನಾವಣೆಗಳು

ಪ್ರಸ್ತುತ ರಾಜಕೀಯ ಪಕ್ಷಗಳ ಚುನಾವಣೆ ಗುರುತು ಗಳನ್ನು ತಿಳಿದುಕೊಳ್ಳಿರಿ.

- ಮೊದಲನೇ ಚುನಾವಣೆಗಳು ಬಹಳ ಕಷ್ಟ ಸಂಕ್ಲಿಷ್ಟವಾದ ಕೆಲಸ ? ಏಕಾಗಿತು ?
- ಪ್ರಸ್ತುತ ಚುನಾವಣೆಗಳನ್ನು ಹೇಗೆ ನಿರ್ವಹಿಸುವರು? ನಿಮ್ಮ ತಂದೆ ತಾಯಿ ಉಪಾಧ್ಯಾಯರೊಂದಿಗೆ ಚರ್ಚಿಸಿರಿ.
- ಮೊದಲ ಚುನಾವಣೆ – ಪ್ರಸ್ತುತ ಚುನಾವಣೆ ಮಧ್ಯೆ ವ್ಯತ್ಯಾಸ – ಬ್ಯಾಲೆಟ್ ಪೆಟ್ಟಿಗೆ ಬ್ಯಾಲೆಟ್ ಪತ್ರಗಳು ಮತ ಹಕ್ಕಿನ ವಯಸ್ಸು
- ಓಟಿಂಗ್ ರಹಸ್ಯವಾಗಿ ಏಕೆ ಇರಬೇಕು ?




## ಸ್ವೇಚ್ಛೆಯಾಗಿ, ಸ್ವತಂತ್ರವಾಗಿ ಚುನಾವಣೆ ನಿರ್ವಹಿಸಲು – ಸವಾಲುಗಳು :

ಒಂದು ಆದರ್ಶ ಸ್ಥಿತಿಯಲ್ಲಿ ವಿವಿಧ ಅಭ್ಯರ್ಥಿಗಳ ಕುರಿತು, ಅವರು ಅನುಸರಿಸುವ ವಿಧಾನಗಳು ಕುರಿತು ಮತದಾರ ತಿಳಿದುಕೊಂಡು ಯಾವ ವಿಧಾನವನ್ನು ತಾವು ಇಷ್ಟ ಪಡುತ್ತಾರೋ, ಪಾರ್ಲಿಮೆಂಟ್‌ನಲ್ಲಿ ತಮ್ಮ ಪ್ರಯೋಜನ ಗಳಿಗೆ ಯಾರು ಪ್ರಾತಿನಿಧ್ಯ ವಹಿಸುವರೋ ತಿಳಿದು ಅವರಿಗ ಓಟು ಹಾಕಬೇಕು. ಆ ಅಭ್ಯರ್ಥಿಗಾಗಲಿ, ಈ ಅಭ್ಯರ್ಥಿಗಾಗಲಿ ಗಂಡ ಹೇಳಿರುವನೆಂದು, ಯಜಮಾನ, ಕುಲ ನಾಯಕ, ಮತ ಗುರುವು ಹೇಳಿದ್ದಾನೆಂದೂ, ಅಥವಾ ಹಣ ನೀಡುವುದ ರಿಂದಲೂ, ಒತ್ತಡಕ್ಕೆ ಒಳಗಾಗದೇ ಮತ ಹಾಕಬೇಕು. ಪ್ರತಿ ಒಬ್ಬರೂ ಸ್ವಂತ ನಿರ್ಣಯ ತೆಗೆದುಕೊಳ್ಳಬೇಕು.

ಆದರೆ ವಾಸ್ತವವಾಗಿ ಆಚರಣೆಯಲ್ಲಿ ಪ್ರಜೆಗಳು, ಕುಲ, ಮತ, ಹಣ ಇತರ ಬಹುಮಾನಗಳ ಅಂತಹಾ ಇತರ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಓಟು ಹಾಕುತ್ತಾರೆ. ನಿರಂತರ ಸ್ಥಾನಿಕವಾಗಿರುವ ಬಲವಾದ ವ್ಯಕ್ತಿಗಳು ಫಲಾನಾ ವ್ಯಕ್ತಿಗೆ ಓಟು ಹಾಕಬೇಕೆಂದು ಇತರರನ್ನು ಭಯಪಡಿಸುತ್ತಾರೆ ಮತದಾರರನ್ನು ಪ್ರಭಾವಿತ ಮಾಡಲು ಸರಕಾರದ

SCERT TELANGANA

ಯಂತ್ರಾಂಗವನ್ನು ಕೆಲವು ಸಾರಿ ಅಧಿಕಾರದಲ್ಲಿರುವ ಪಕ್ಷ ಉಪಯೋಗಿಸಿಕೊಳ್ಳುತ್ತಾರೆ. ಇತ್ತೀಚಿನ ಕಾಲದಲ್ಲಿ ಚುನಾವಣ ಸಂಘ ಇಂತಹ ಕಾನೂನುಬಾಹಿರ ಕಾರ್ಯಕ್ರಮಗಳು ಜರುಗದಂತೆ ಕಠಿಣ ಚರ್ಯೆಗಳನ್ನು ತೆಗೆದುಕೊಳ್ಳುತ್ತಿದೆ. ಈ ಚರ್ಯೆಗಳ ಕುರಿತು ತಿಳಿದು ಕೊಳ್ಳೋಣ.

ಲೋಕಸಭೆಗೆ ಇಲ್ಲಿಯವರೆಗೆ ಸಾಕಷ್ಟು ಸಲ ಚುನಾವಣೆಗಳು ಜರುಗಿವೆ. ಓಟಿಂಗ್ ಶಾತ(%)ವನ್ನು ಪಕ್ಕ ಇರುವ ಪಟ್ಟಿಕೆ ತಿಳಿಸುತ್ತದೆ. ಈ ಸಮಾಚಾರ ಆಧಾರವಾಗಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

- ಲೋಕಸಭೆಗೆ ಎಷ್ಟುಸಾರಿ ಚುನಾವಣೆಗಳು ನಡೆದಿವೆ?
- ಎಷ್ಟು ಶಾತ ಮತದಾರರು ಮತ ಚಲಾಯಿಸಿದ್ದಾರೋ ತಿಳಿದುಕೊಳ್ಳುವುದು ಏಕೆ ಮುಖ್ಯ? ಇದು ನಮಗೆ ಏನು ಹೇಳುತ್ತದೆ ?
- ಮತ ಇರುವವರು ಬಹಳ ಜನ ತಮ್ಮ ಹಕ್ಕನ್ನು ಉಪಯೋಗಿಸಿಕೊಳ್ಳುತ್ತಿಲ್ಲ, ಏತಕ್ಕೆ ಕಾರಣಗಳು ಏನಿರಬಹುದು ಚರ್ಚಿಸಿರಿ.
- ಮೊದಲನೆಯ ಚುನಾವಣೆ ಸಮಯದಲ್ಲಿ ವಿವಿಧ ವ್ಯಕ್ತಿಗಳು ತಿಳಿಸಿದ ಅಭಿಪ್ರಾಯಗಳು ಯಾವುವು?
- 1996ರ ಚುನಾವಣೆಗಳಲ್ಲಿ, ನಿರಕ್ಷರಾಸ್ಥರು, ಬಡವರಾದ ಸುಮಾರು 61% ಜನ ತಮ್ಮ ಓಟು ಹಕ್ಕು ವಿನಿಯೋಗಿಸಿ ಕೊಂಡಿದ್ದಾರೆಂದು ಒಂದು ಸರ್ವೆ ಮೂಲಕ ತಿಳಿಯುತ್ತದೆ. ಆದರೆ ಪಟ್ಟಭದ್ರರು 53% ಮಾತ್ರವೇ. ಈ ವ್ಯತ್ಯಾಸಕ್ಕೆ ಕಾರಣಗಳು ಏನಿರಬಹುದು - ಚರ್ಚಿಸಿರಿ.

ಪಟ್ಟಿಕೆ . 1952 ರಿಂದ 2014ರವರೆಗೆ ಓಟು ಹಕ್ಕು ವಿನಿಯೋಗಿಸಿದ ಮತದಾನ ಶಾತ.

| ಲೋಕಸಭೆಗೆ ಚುನಾವಣೆಗಳು ಜರುಗಿದ ವರ್ಷಗಳು | ಓಟು ಹಕ್ಕು ವಿನಿಯೋಗಿಸಿ ಕೊಂಡ ಮತದಾರರ ಶಾತ. |
|---|---|
| 1952 | 46 % |
| 1957 | 48 % |
| 1962 | 55 % |
| 1967 | 61 % |
| 1971 | 55 % |
| 1977 | 60 % |
| 1980 | 57 % |
| 1985 | 64 % |
| 1989 | 62 % |
| 1991 | 56 % |
| 1996 | 58 % |
| 1998 | 62 % |
| 1999 | 59 % |
| 2004 | 58 % |
| 2009 | 58 % |
| 2014 | 66.4% |

**2014 ರ ಲೋಕಸಭೆ ಚುನಾವಣೆಗಳಿಗೆ ಸಂಬಂಧಿಸಿದ ಕೆಲವು ಆಸಕ್ತಿಕರ ವಿವರಗಳು**

| | |
|---|---|
| ಪಾರ್ಲಿಮೆಂಟ್ ನಿಯೋಜಕ ವರ್ಗಗಳ ಸಂಖ್ಯೆ | 543 |
| ಒಟ್ಟು ಮತದಾರರು | 83,41,01,479 |
| ಸ್ಪರ್ಧೆ ಮಾಡಿದ ಅಭ್ಯರ್ಥಿಗಳ ಸಂಖ್ಯೆ | 8,251 |
| ಸ್ಪರ್ಧೆ ಮಾಡಿದ ಪುರುಷ ಅಭ್ಯರ್ಥಿಗಳು | 89% |
| ಸ್ಪರ್ಧೆ ಮಾಡಿದ ಮಹಿಳಾ ಅಭ್ಯರ್ಥಿಗಳು | 11% |
| ಏರ್ಪಡಿಸಿದ ಪೋಲಿಂಗ್ ಕೇಂದ್ರಗಳ ಸಂಖ್ಯೆ | 9,30,000(ಸುಮಾರು) |
| ಠೇವಣಿ ಕಳೆದುಕೊಂಡ ಅಭ್ಯರ್ಥಿ ಸಂಖ್ಯೆ | 7,000 |
| ಪೋಲಿಂಗ್ ಸಿಬ್ಬಂದಿ | 1,00,00,000 |
| ಸ್ಪರ್ಧಿಸಿದ ಒಟ್ಟು ಪಕ್ಷಗಳ ಸಂಖ್ಯೆ | 464 |

SCERT TELANGANA

## ಕಾನೂನುಗಳನ್ನೆಲ್ಲಾ ಪಾರ್ಲಿಮೆಂಟಿನಲ್ಲಿ ಮಾಡುವುದಿಲ್ಲ. ಈ ಪಟ್ಟಿಕೆ ನೋಡಿದರೆ ಈ ಕೆಳಗಿನ ವಿಷಯ ಅರ್ಥವಾಗುತ್ತಿದೆ

**ಕೇಂದ್ರ ಪಟ್ಟಿ :** ಈ ವಿಷಯಗಳ ಮೇಲೆ ಕೇಂದ್ರ ಮಾತ್ರವೇ ಕಾನೂನುಗಳನ್ನು ಮಾಡಬಲ್ಲದು, ಅನೇಕ ವಿಷಯಗಳ ಮೇಲೆ ಪಾರ್ಲಿಮೆಂಟ್ ಮಾತ್ರವೇ ಕಾನೂನುಗಳನ್ನು ಮಾಡಬಲ್ಲದು. ಇಡೀ ದೇಶಕ್ಕೆ ಈಕಾನೂನುಗಳು ಅನ್ವಯವಾಗುತ್ತವೆ. ಉದಾ: ನಮ್ಮ ದೇಶಕ್ಕೆಲ್ಲಾ ಹಣ ಒಂದೇ ನೋಟು (ರೂಪಾಯಿ) ಇದೆ –ಹಣ, ಬ್ಯಾಂಕಿಂಗ್‌ಗೆ ಸಂಬಂಧಿಸಿದ ಯಾವ ಕಾನೂನನ್ನಾಗಲೀ ಪಾರ್ಲಿಮೆಂಟು ಮಾತ್ರ ಮಾಡುತ್ತದೆ. ಅದೇ ವಿಧವಾಗಿ ನಮಗೆ ಟೆಲಿಫೋನು, ತಪಾಲ ವ್ಯವಸ್ಥೆಗೆ ಉಭಯ ನಿಯಮ ನಿಯಂತ್ರಣೆ ಇರಬೇಕು. ಪಾರ್ಲಿಮೆಂಟ್ ಪರಧಿಯಲ್ಲಿ ಇರುವ ಮತ್ತೊಂದು ವಿಷಯ ದೇಶ ರಕ್ಷಣೆ, ಸೈನ್ಯ, ರಕ್ಷಣೆಗೆ ಸಂಬಂಧಿಸಿದ ಎಲ್ಲಾ ಶಾಸನಗಳನ್ನು ಪಾರ್ಲಿಮೆಂಟ್ ಮಾತ್ರವೇ ಮಾಡುತ್ತದೆ.

**ರಾಜ್ಯ ಪಟ್ಟಿ :** ಇದೇ ರೀತಿ ರಾಜ್ಯ ಪಟ್ಟಿಯಲ್ಲಿಯಅಂಶಗಳ ಮೇಲೆ ಶಾಸನಗಳನ್ನುಮಾಡುವ ಅಧಿಕಾರ ವಿವಿಧ ರಾಜ್ಯ ಸರ್ಕಾರಗಳಿಗೆ ಇರುತ್ತವೆ .ಎಂದರೆ ವಿವಿಧ ರಾಜ್ಯಗಳಿಗೆ ಬೇರೆ ಬೇರೆ ಶಾಸನಗಳಿರುತ್ತವೆ. ಉದಾ: ರಾಜ್ಯದಲ್ಲಿ ವಸ್ತುಗಳ, ಜನರ ಸಾರಿಗೆಗೆ ಅವರು ಎಷ್ಟನ್ನು ಖರ್ಚು ಮಾಡಬಲ್ಲರು. ಖಾಸಗೀ ಮತ್ತು ಸರಕಾರಿ ಬಸ್ಸುಗಳಿಗೆ ಆಯಾ ರಾಜ್ಯ ಸರಕಾರವೇ ಪ್ರಯಾಣ ದರವನ್ನು ನಿರ್ಣಯಿಸುತ್ತದೆ. ಪ್ರಯಾಣ ದರವನ್ನು ನಿರ್ಣಯಿಸಲು, ಪರಿಷ್ಕರಿಸಲು ಪ್ರತಿ ರಾಜ್ಯ ಸರಕಾರಕ್ಕೆ ತನ್ನದೇ ಆದ ಸ್ವಂತ ಕಾಯ್ದೆಗಳಿವೆ.

ತಮ್ಮ ರಾಜ್ಯಗಳ ಸರಿಹದ್ದುಗ್ಗಳಲ್ಲಿ ಸರಿಯಾದ ರಸ್ತೆ – ರವಾಣಾ ಮಾರ್ಗಗಳು ಇರುವಂತೆ ನೋಡುವ ಜವಾಬ್ದಾರಿ ರಾಜ್ಯಗಳದೇ ರಾಷ್ಟ್ರೀಯ ಹೆದ್ದಾರಿಗಳನ್ನು ಹೊರತುಪಡಿಸಿ ಎಲ್ಲಾ ರಸ್ತೆಗಳ ನಿರ್ಮಾಣ, ನಿರ್ವಹಣೆ ರಾಜ್ಯ ಸರ್ಕಾರಗಳೇ ನೋಡಿಕೊಳ್ಳಬೇಕು. ರಾಜ್ಯ ಸರ್ಕಾರ ಜವಾಬ್ದಾರಿವಹಿಸುವ ಮುಖ್ಯವಾದ ವಿಷಯಗಳು ವ್ಯವಸಾಯ, ನೀರು ಸರಬರಾಜು, ಪೋಲೀಸ್, ವೈದ್ಯ ಸೇವೆಗಳು – ಇವೆಲ್ಲಾ ರಾಜ್ಯ ಪಟ್ಟಿಯಲ್ಲಿಯೇ ಬರುತ್ತವೆ. ಈ ಅಂಶಗಳಲ್ಲಿ ರಾಜ್ಯ ಶಾಸನ ಸಭೆಗಳೇ ಶಾಸನಗಳನ್ನು ರೂಪಿಸುತ್ತವೆ.

**ಸಮಾನ ಪಟ್ಟಿ :** ಪಾರ್ಲಿಮೆಂಟ್, ರಾಜ್ಯ ಶಾಸನ ಸಭೆಗಳು ಎರಡೂ ಕಾನೂನು ಮಾಡಬಲ್ಲ ವಿಷಯಗಳು. ಕೆಲವು ವಿಷಯಗಳ ಮೇಲೆ ಪಾರ್ಲಿಮೆಂಟ್, ರಾಜ್ಯ ಶಾಸನ ಸಭೆಗಳು ಎರಡು ಕಾನೂನುಗಳನ್ನು ಮಾಡಬಹುದು. ಉದಾ: ವಿದ್ಯಾ ವಿಧಾನ ಎನ್ನುವುದು. ಕೇಂದ್ರ – ರಾಜ್ಯ ಸರ್ಕಾರ ಎರಡರ ಜವಾಬ್ದಾರಿ. ಪ್ರತಿ ರಾಜ್ಯದಲ್ಲಿ ಕೇಂದ್ರೀಯ ವಿದ್ಯಾಲಯಗಳು , ಕೇಂದ್ರೀಯ ಪಾಠಶಾಲೆಗಳನ್ನು ಕೇಂದ್ರ ಸರ್ಕಾರವೇ ನಡೆಸುತ್ತದೆ. ಅದೇ ರೀತಿ ರಾಜ್ಯ ಸರ್ಕಾರ ವಿದ್ಯಾ ಶಾಖಾ ಆಧೀನದಲ್ಲಿ ಪಾಠಶಾಲೆಗಳನ್ನು ನಡೆಸುತ್ತದ. ಕೇಂದ್ರ ರಾಜ್ಯ ಸರ್ಕಾರ ಎರಡು ಒಂದೇ ವಿಷಯದ ಮೇಲೆ ಕಾನೂನುಗಳನ್ನು ಮಾಡುತ್ತವೆ. ಅವು – ಕೈಗಾರಿಕೆಗಳು, ವಿದ್ಯುತ್,ಕಾರ್ಮಿಕರ ಮೊದಲಾದವುಗಳು ಒಂದೇ ವಿಷಯದ ಮೇಲೆ ಪಾರ್ಲಿಮೆಂಟ್, ರಾಜ್ಯ ಶಾಸನ ಸಭೆಗಳು ಎರಡು ಪರಸ್ಪರ ವಿರುದ್ಧ ಕಾನೂನುಗಳನ್ನು ಮಾಡಿದರೆ ರಾಜ್ಯ ಶಾಸನ ಸಭೆ ಮಾಡಿದ ಕಾನೂನುಗಳಲ್ಲದೇ ಪಾರ್ಲಿಮೆಂಟ್ ಮಾಡಿದ ಕಾನೂನುಗಳು ವರ್ತಿಸುತ್ತವೆ.

- ಕಳೆದ ವರ್ಷ ಓದಿಕೊಂಡ ಕಾನೂನುಗಳನ್ನು ನೆನಪುಮಾಡಿಕೊಳ್ಳಿರಿ. ರಾಜ್ಯ ಶಾಸನ ಸಭೆಗಳಲ್ಲಿ ಅಥವಾ ಪಾರ್ಲಿಮೆಂಟ್ ಕಳೆದ ಸಮಾವೇಶದಲ್ಲಿ ಚರ್ಚಿಸಿದ ಹೊಸ ಕಾನೂನುಗಳ ಕುರಿತು ತಿಳಿದುಕೊಳ್ಳಿರಿ.

SCERT TELANGANA



*ಚಿತ್ರ : 14.3: ಗಣರಾಜ್ಯೋತ್ಸವ ದಿನದಂದು ರಾತ್ರಿ ರಾಷ್ಟ್ರಪತಿ ಭವನ.*

## ರಾಷ್ಟ್ರಪತಿ, ಉಪರಾಷ್ಟ್ರಪತಿ :

ಎಲ್ಲಾ ರಾಜ್ಯಗಳ ಶಾಸನ ಸದಸ್ಯರು (MLA's), ಪಾರ್ಲಿಮೆಂಟ್ ಉಭಯ ಸಭೆಗಳ ಸದಸ್ಯರು ರಾಷ್ಟ್ರಪತಿಯನ್ನು ಆಯ್ಕೆಮಾಡಿಕೊಳ್ಳುವರು. ಪಾರ್ಲಿ ಮೆಂಟ್ ಉಭಯ ಸಭೆಗಳ ಸದಸ್ಯರು ಉಪರಾಷ್ಟ್ರಪತಿಯನ್ನು ಆಯ್ಕೆ ಮಾಡುತ್ತಾರೆ .ರಾಜ್ಯ ಸಭೆಗೆ ಉಪರಾಷ್ಟ್ರಪತಿ ಅಧ್ಯಕ್ಷರಾಗಿರುತ್ತಾರೆ. ರಾಷ್ಟ್ರಪತಿ ಇಲ್ಲದ ಪಕ್ಷದಲ್ಲಿ ಆ ಭಾಧ್ಯತೆಗಳನ್ನು ಉಪರಾಷ್ಟ್ರಪತಿ ನಿರ್ವಹಿಸವರು. ಪಾರ್ಲಿಮೆಂಟ್ ಆಮೋದಿಸಿದ ಬಿಲ್ಲುಗಳು ರಾಷ್ಟ್ರಪತಿಯವರ ಸಹಿ, ಅನುಮೋನದನೆ ತಿಳಿಸಿದ ನಂತರ ಅದು ಜಾರಿಗೆ ಬರುತ್ತದೆ.

- **ತಪ್ಪು ವಾಕ್ಯಗಳನ್ನು ಸರಿಪಡಿಸಿರಿ :**

1 ರಾಷ್ಟ್ರಪತಿ, ಉಪರಾಷ್ಟ್ರಪತಿಯನ್ನು ಒಂದೇ ವಿಧಧ ವ್ಯಕ್ತಿಗಳು ಆಯ್ಕೆ ಮಾಡುವರು.

2 ದೇಶದಲ್ಲಿರುವ ಪ್ರತಿ ಮತದಾರ ರಾಷ್ಟ್ರಪತಿಯನ್ನು ಆಯ್ಕೆಮಾಡುತ್ತಾನೆ.

3 ರಾಷ್ಟ್ರಪತಿ ಚುನಾವಣೆಗಳಲ್ಲಿ ಆಂಧ್ರಪ್ರದೇಶ ಶಾಸನಸಭೆಯ ಸದಸ್ಯರು (ವಿಧಾನಸಭೆಯ ಎಂ.ಎಲ್.ಎ. ಗಳೆಲ್ಲಾ) ಪಾಲ್ಗೊಳ್ಳುವರು.

4 ಎಲ್ಲಾ ಶಾಸನ ಸಭೆಗಳ ಸದಸ್ಯರು, (ದೆಹಲಿ, ಪಾಂಡಿಚೇರಿಗಳೊಂದಿಗೆ) ರಾಜ್ಯಸಭೆ, ಲೋಕಸಭೆ ಸದಸ್ಯರು ರಾಷ್ಟ್ರಪತಿಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

## ಮಂತ್ರಿ ಮಂಡಲ, ಪ್ರಧಾನ ಮಂತ್ರಿ :

ಪಾರ್ಲಿಮೆಂಟ್ (ಲೋಕಸಭೆ, ರಾಜ್ಯ ಸಭೆ) ನಿಂದ ಮಂತ್ರಿ ವರ್ಗ ಸದಸ್ಯರು ಪ್ರಧಾನ ಮಂತ್ರಿಯನ್ನು ಆಯ್ಕೆ ಮಾಡು ತ್ತಾರೆ. ಪಾರ್ಲಿಮೆಂಟ್ ಕಾನೂನುಗಳನ್ನು ಮಾಡುವದಲ್ಲದೇ ಕಾನೂನು ಪ್ರಕಾರ ಸರ್ಕಾರವನ್ನು ನಡೆಸುವ ಸದಸ್ಯರನ್ನು ಸಹ ಕೋಡುತ್ತದೆ. ಅದಕ್ಕಾಗಿ ಭಾರತ ದೇಶಕ್ಕೆ ಪಾರ್ಲಿಮೆಂಟರೀ ರೀತಿಯ ಸರ್ಕಾರ ಇದೆಯೆಂದು ಹೇಳುತ್ತಾರೆ. ಸರಕಾರದಲ್ಲಿ 3 ಪ್ರಧಾನ ಅಂಗಗಳಿವೆ. ಮೊದಲನೆಯದು ಶಾಸನ ಅಧಿಕಾರ. ಅಂದರೆ ಕಾನೂನುಗಳನ್ನು ಮಾಡುವುದು. ಎಡರನೆಯದು ಶಾಸನ ನಿರ್ವಹಣೆ ಅಧಿಕಾರ. ಇದರಲ್ಲಿ ಪಾರ್ಲಿಮೆಂಟ್ ಮಾಡಿದ ಶಾಸನಗಳು ನಿರ್ಣಯಗಳನ್ನು ಜಾರಿಗೊಳಿಸುತ್ತಾರೆ. ಕಾರ್ಯನಿರ್ವಾಹಕ ವರ್ಗಕ್ಕೆ ಅಧಿಪತಿಯಾಗಿ ರಾಷ್ಟ್ರಪತಿ ಇರುತ್ತಾನೆ.

ಪ್ರಧಾನ ಮಂತ್ರಿಕ, ಮಂತ್ರಿವರ್ಗಗಳೆಲ್ಲಾ ಮಂತ್ರಿತ್ವ ಶಾಖಗಳಿಗೆ ಬಾಧ್ಯತೆ ವಹಿಸುತ್ತಾರೆ. ಅವರ ಕೆಳಗೆ ಅಪಾರ ಸಂಖ್ಯೆಯಲ್ಲಿ ಸರ್ಕಾರಿ ಉದ್ಯೋಗಿಗಳು ಇರುತ್ತಾರೆ. ಈ ವಿಧವಾಗಿ ಬೃಹತ್ ಸಂಖ್ಯೆಯಲ್ಲಿರುವ ಪಾರ್ಲಿಮೆಂಟ್ ಸದಸ್ಯರಿಂದ ಕಡಿಮೆ ಸಂಖ್ಯೆ ಇರುವ ಮಂತ್ರಿ ವರ್ಗ ಮೂಲಕ ಸರ್ಕಾರ ನಡೆಸುವ ಭಾದ್ಯತೆಯನ್ನು ಹೊಂದುತ್ತಾರೆ. ಇದನ್ನು ಅವರು ಹೇಗೆ ಮಾಡುತ್ತಾರೋ ನೋಡೋಣ.

ಭಾರತ ಸರ್ಕಾರದ ನಿರ್ಣಯಗಳೆಲ್ಲವೂ ದೇಶಾಧಿಪತಿಯಾದ ರಾಷ್ಟ್ರಪತಿ ಹೆಸರಿನ ಮೇಲೆ ನಡೆಯುತ್ತದೆ. ಆದರೆ ಪ್ರಧಾನ ಮಂತ್ರಿ, ಮಂತ್ರಿ ವರ್ಗ ಸದಸ್ಯರ ಸಲಹೆ ಮೇರೆಗೆ ರಾಷ್ಟ್ರಪತಿ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ.

SCERT TELANGANA

ಕೆಳಗೆ ಹೆಸರಿದವರಿಗೆ ಸಂಬಂಧಿಸಿದ ಇತ್ತೀಚಿನ ಫೋಟೋಗಳು ಶೇಖರಿಸಿ ಪೆಟ್ಟಿಗೆಗಳಲ್ಲಿ ಅಂಟಿಸಿರಿ.

| ಭಾರತ ರಾಷ್ಟ್ರಪತಿ | ಉಪರಾಷ್ಟ್ರಪತಿ | ಪ್ರಧಾನ ಮಂತ್ರಿ |
| --- | --- | --- |
| | | |

ಶಾಸನ ಸಭೆಯ ಸದಸ್ಯರು ಮುಖ್ಯ ಮಂತ್ರಿಯನ್ನು ಆಯ್ಕೆ ಮಾಡುವ ವಿಧಾನ ನಿಮಗೆ ನೆನಪಿರಬಹುದು. ಅದೇ ವಿಧವಾಗಿ ಪ್ರಧಾನ ಮಂತ್ರಿಯನ್ನು ಲೋಕ ಸಭೆಯ ಸದಸ್ಯರು ಆಯ್ಕೆ ಮಾಡುವರು. ಲೋಕಸಭೆಯಲ್ಲಿ ಮೆಜಾರಿಟೀ ಸ್ಥಾನಗಳನ್ನು ಗೆದ್ದುಕೊಂಡ ಒಂದು ಪಕ್ಷ ಅಥವಾ ಬಹು ಪಕ್ಷಗಳ (ಸಂಕೀರ್ಣ) ನಾಯಕನನ್ನು ರಾಷ್ಟ್ರಪತಿ ಆಹ್ವಾನಿಸಿ ಪ್ರಧಾನನಮಂತ್ರಿಯಾಗಿ ನಿಯಮಿಸುತ್ತಾನೆ.ಅಂದರೆ ಪ್ರಧಾನಮಂತ್ರಿಗೆ ಅಧಿಕಶಾತ ಸದಸ್ಯರ ಬಲ ಇದೆಯೆಂದು ಆತನು / ಆಕೆ ಮಂತ್ರಿ ವರ್ಗದಲ್ಲಿಯ ಇತರ ಮಂತ್ರಿಗಳನ್ನು ಆಯ್ಕೆ ಮಾಡುತ್ತಾನೆ.

- ಪ್ರಸ್ತುತ ಪ್ರಧಾನ ಮಂತ್ರಿ ಯಾರು? ಅದಕ್ಕೂ ಮೊದಲ ಪ್ರಧಾನ ಮಂತ್ರಿಗಳಲ್ಲಿನ ಕೆಲವರ ಹೆಸರುಗಳನ್ನು ಹೇಳಿರಿ.
- ನಮ್ಮ ರಾಜ್ಯದಿಂದ ಪ್ರಸ್ತುತ ಕೇಂದ್ರ ಸರ್ಕಾರದಲ್ಲಿ ಮಂತ್ರಿಗಳಾಗಿ ಇರುವವರ ಹೆಸರುಗಳನ್ನು ಹೇಳಿರಿ.
- ಕೆಲವು ಮುಖ್ಯವಾದ ಮಂತ್ರಿತ್ವ ಶಾಖೆಗಳನ್ನು ಕೇಂದ್ರ ಸರ್ಕಾರದಲ್ಲಿ ಅವುಗಳ ಮಂತ್ರಿಗಳನ್ನು ಹೆಸರಿಸಿರಿ.

ಸರ್ಕಾರದಲ್ಲಿ ಕಾರ್ಯನಿರ್ವಾಹಕ ವರ್ಗವಾಗಿ ಮಂತ್ರಿ ವರ್ಗ (ಕ್ಯಾಬಿನೆಟ್) ಕೆಲಸ ಮಾಡುತ್ತದೆ. ಅದು ಕಾನೂನುಗಳನ್ನು ಜಾರಿಗೆ ತರುತ್ತದೆ. ಶಾಸನಗಳಿಗೆ ಅನುಗುಣವಾಗಿ ದೇಶವನ್ನು ಪರಿಪಾಲಿಸುತ್ತದೆ. ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿ ಅವುಗಳನ್ನು ಜಾರಿಗೊಳಿಸುತ್ತದೆ. ಹೊಸ ಶಾಸನಗಳನ್ನು, ವಿಧಾನಗಳನ್ನು ತಯಾರಿಸಿ, ಹಳೇ ಶಾಸನಗಳು ವಿಧಾನಗಳನ್ನುಸವರಿಸಿ ಅವುಗಳಿಗೆ ಪಾರ್ಲಿಮೆಂಟ್ ಆಮೋದ ಪಡೆಯುತ್ತದೆ. ಸರ್ಕಾರದ ಕೆಲಸ ಆರ್ಥಿಕ ವಿದೇಶಾಂಗ ವ್ಯವಹಾರ, ಹೋಂ,(ದೇಶದ ಅಂತರ್ಗತ ಭದ್ರತೆ) ರಕ್ಷಣೆ, ರೈಲ್ವೇಗಳು, ಕೈಗಾರಿಕೆಗಳು, ವ್ಯವಸಾಯ, ವಿದ್ಯೆ ಆರೋಗ್ಯದಂತಹ ಅನೇಕ ರಂಗಗಳಾಗಿ ವಿಭಜಿಸಿದ್ದಾರೆ. ಒಂದೊಂದು ರಂಗಕ್ಕೆ ಒಬ್ಬ ಮಂತ್ರಿಯ ನೇತೃತ್ವದಲ್ಲಿ ಮಂತ್ರಿತ್ವ ಶಾಖ ಇರುತ್ತದೆ. ಮಂತ್ರಿಗಳೊಂದಿಗೆ ಪ್ರತಿ ಮಂತ್ರಿತ್ವ ಶಾಖೆಯಲ್ಲಿ ಕಾರ್ಯದರ್ಶಿ ಕೆಳಗೆ ಕೆಲಸ ಮಾಡುವಅಧಿಕಾರಿಗಳು ದೊಡ್ಡ ಸಂಖ್ಯೆಯಲ್ಲಿರುತ್ತಾರೆ. ಇವರು ಮಂತ್ರಿತ್ವ ಶಾಖೆಗೆ ಸಂಬಂಧಿಸಿದ ಪ್ರತಿ ದಿನ ಕೆಲಸ ಮಾಡುತ್ತಾರೆ. ವಿವಿಧ ಅಂಶಗಳ ಮೇಲೆ ಮಂತ್ರಿಯ ಪೂರ್ತಿ ಸಮಾಚಾರದೊಂದಿಗೆ ನಿರ್ಣಯತೆಗೆದುಕೊಳ್ಳಲು ಸಹಕರಿಸಲು ವಿವಿಧ ಅಂಶಗಳು ಅಧ್ಯಯನ ಮಾಡಿ, ನೋಟ್ಸ್, ಪ್ರತಿಪಾದನೆಗಳನ್ನು ತಯಾರಿಸುವರು. ಈ ನಿರ್ಣಯಗಳನ್ನು ಜಾರಿಗೆ ತರುವ ಜವಾಬ್ದಾರಿ ಸಹ ಈ ಮಂತ್ರಿತ್ವ ಶಾಖ ಅಧಿಕಾರಿಗಳದೇ.

ಸರ್ಕಾರ ಏರ್ಪಾಟು ಮಾಡಲು ಸಂಬಂಧಿಸಿದ ಈ ಕೆಳಗಿನವುಗಳಲ್ಲಿ ಯಾವುದು ಸರಿ.

- ರಾಷ್ಟ್ರಪತಿ ಬೆಂಬಲ ಇರುವ ಪಕ್ಷ ಇಲ್ಲವೇ ಸಂಕೀರ್ಣ ಸರ್ಕಾರ ಏರ್ಪಾಡು ಮಾಡುತ್ತದೆ.
- ಪಾರ್ಲಿಮೆಂಟ್‌ನಲ್ಲಿ ಅಧಿಕ ಸೀಟುಗಳು ಇರುವ ಪಕ್ಷ ಇಲ್ಲವೇ ಸಂಕೀರ್ಣ ಸರ್ಕಾರ ಏರ್ಪಾಟು ಮಾಡುತ್ತದೆ.
- ಪಾರ್ಲಿಮೆಂಟ್‌ನಲ್ಲಿ ಅರ್ಧಕ್ಕಿಂತಲೂ ಹೆಚ್ಚಿನ ಸೀಟುಗಳು ಹೊಂದಿರುವ ಪಕ್ಷ ಇಲ್ಲವೇ ಸಂಕೀರ್ಣ ಸರ್ಕಾರ ಏರ್ಪಾಟು ಮಾಡುತ್ತದೆ.
- ಸರ್ಕಾರ ಏರ್ಪಾಟು ಮಾಡುವ ಪಕ್ಷವನ್ನು ಚುನಾವಣೆ ಸಂಘ ಏರ್ಪಾಟು ಮಾಡುತ್ತದೆ.
- ಲೋಕಸಭೆಯ ಚುನಾವಣೆಗಳಲ್ಲಿ ಅತ್ಯಧಿಕ ಮೆಜಾರ್ಟಿಯಿಂದ ಗೆದ್ದ ವ್ಯಕ್ತಿ ಪ್ರಧಾನ ಮಂತ್ರಿ ಆಗುತ್ತಾನೆ.

SCERT TELANGANA

ಕೆಳಗಿನ ಪಟ್ಟಿಯನ್ನು ನೋಡಿಮೊದಲ ಲೋಕಸಭೆಗೆ ನಡೆದ ಚುನಾವಣೆಯ ನಂತರ ಯಾವ ಸರ್ಕಾರವನ್ನು ರಚಿಸಿರುತ್ತಯೋ ಹೇಳಿರಿ.

| ಮೊದಲನೆಯ ಲೋಕಸಭೆ ಚುನಾವಣೆಗಳು - 1952 | |
|---|---|
| ಪಾರ್ಟಿ (ಪಕ್ಷ) | ಗೆದ್ದ ಸೀಟುಗಳು |
| ಕಾಂಗ್ರೆಸ್ | 364 |
| ಕಮ್ಯುನಿಸ್ಟ್, ಮಿತ್ರ ಪಕ್ಷಗಳು | 23 |
| ಸೋಷಲಿಸ್ಟ್ ಪಕ್ಷ | 12 |
| ಕಿಸಾನ್ ಮಜುದಾರ್ ಪಾರ್ಟಿ | 9 |
| ಜನಸಂಘ | 3 |
| ಹಿಂದೂ ಮಹಾಸಭೆ | 4 |
| ರಾಮ ರಾಜ್ಯ ಪರಿಷತ್ | 3 |
| ಇತರ ಪಾರ್ಟಿಗಳು | 30 |
| ಸ್ವತಂತ್ರರು | 41 |
| **ಒಟ್ಟು** | **489** |

## ಮುಖ್ಯ ಪದಗಳು :

1. ಶಾಸನ ಸಭೆ
2. ಲೋಕಸಭೆ
3. ರಾಜ್ಯ ಸಭೆ
4. ಚುನಾವಣಾ ಸಂಘ
5. ಮಂತ್ರಿಮಂಡಲ
6. ಕೇಂದ್ರಪಟ್ಟಿ
7. ರಾಜ್ಯ ಪಟ್ಟಿ
8. ಸಮಾನ ಪಟ್ಟಿ

## ನಿಮ್ಮ ಕಲಿಕೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಿ :

1. ಮೊದಲನೆಯ ಸಾರ್ವತ್ರಿಕ ಚುನಾವಣೆಗಳು ನಡೆಸುವುದು ಕಷ್ಟವಾಯಿತು? ಸಾಧ್ಯವಾದಷ್ಟುಕಾರಣಗಳನ್ನು ತಿಳಿಸಿರಿ.
2. ಚುನಾವಣೆಗಳು ಸ್ವೇಚ್ಛೆಯಾಗಿ, ಸ್ವತಂತ್ರವಾಗಿ ಏಕೆ ಇರಬೇಕು?
3. ಕೆಳಗಿನ ಅಂಶಗಳಲ್ಲಿ ಯಾವುದಕ್ಕೆ ಪಾರ್ಲಿಮೆಂಟ್ ಶಾಸನಗಳನ್ನು ಮಾಡುತ್ತದೆ? ಯಾವ ಅಂಶಗಳಿಗೆ ರಾಜ್ಯ ಸರ್ಕಾರ, ಯಾವುದಕ್ಕೆ ಎರಡು ಸರ್ಕಾರ ಮಾಡಬಹುದು. ವ್ಯವಸಾಯ, ರೈಲ್ವೇಗಳು, ಗ್ರಾಮ, ಆಸ್ಪತ್ರೆಗಳು, ಪೋಲೀಸ್, ತಂತಿಟಪಾಲು, ವಿದ್ಯುತ್ ಕಾರ್ಯಗಾರಗಳು.
4. ಪಾರ್ಲಿಮೆಂಟಿನ ಎರಡು ಸಭೆಗಳನ್ನು ಹೆಸರಿಸಿರಿ. ಕೆಳಗಿನ ವಿಷಯಗಳಲ್ಲಿ ಎರಡಕ್ಕೆ ಮಧ್ಯೆ ಬೇಧಗಳು / ಹೋಲಿಕೆಗಳು ನೋಡಿಸುತ್ತಾರೆ ಪಟ್ಟಿಕೆ ತಯಾರಿಸಿ. ಸಭ್ಯತ್ವಕಾಲ, ಸದಸ್ಯರ ಸಂಖ್ಯೆ, ಅಧಿಕಾರದಲ್ಲಿ ಹೆಚ್ಚು, ಕಡಿಮೆ, ಆಯ್ಕೆ ಯಾಗುವ ವಿಧಾನ ರಾಷ್ಟ್ರಪತಿಗೆ ಚುನಾವಣೆಗಳಲ್ಲಿ ಓಟಿಂಗ್.
5. 2009 ರ ಪಾರ್ಲಿಮೆಂಟ್ ಚುನಾವಣೆಗಳಲ್ಲಿ ಯಾವ ಒಂದು ಪಕ್ಷಕ್ಕೆ ಬಹುಮತ ಬಂದಿಲ್ಲ. ಸರ್ಕಾರವನ್ನು ಹೇಗ ಏರ್ಪಾಟು ಮಾಡಿದರು. ನಿಮ್ಮ ಟೀಚರ ಸಹಾಯದಿಂದ ಚರ್ಚಿಸಿ ಅದನ್ನು ಕುರಿತು ಕೆಲವು ವಾಕ್ಯಗಳನ್ನು ಬರೆಯಿರಿ.
6. ದೇಶಕ್ಕೆಲ್ಲ ವರ್ತಿಸುವ ಹಾಗೆ ಕಾನೂನು (ಶಾಸನ) ಮಾಡುವ ಜವಾಬ್ದಾರಿ ಯಾರದು?

SCERT TELANGANA

7. ಕೆಳಗೆ ಕೊಟ್ಟ ಪಟ್ಟಿಕೆಯಲ್ಲಿ ಖಾಲಿಗಳು ಇದ್ದಾವೆ. ನಿಮ್ಮ ಟೀಚರ್‌ನೊಂದಿಗೆ ಚರ್ಚಿಸಿ ಖಾಲೀಗಳನ್ನು ತುಂಬಿರಿ,

| **ಪದವಿ** | **ಯಾರು ಆಯ್ಕೆ ಮಾಡುವರು** | **ಪದವಿ ಕಾಲ** | **ಅರ್ಹತೆ (ಕನಿಷ್ಟ ವಯಸ್ಸು, ನಿವಾಸ ಮೊದಲಾದ)** |
|---|---|---|---|
| ಶಾಸನ ಸದಸ್ಯರು | | 5 ವರ್ಷ | |
| ಲೋಕಸಭೆ ಸದಸ್ಯರು | | | ಕನಿಷ್ಟ ವಯಸ್ಸು : 25 ವರ್ಷ |
| ರಾಜ್ಯಸಭೆ ಸದಸ್ಯರು | | | |
| ಮುಖ್ಯಮಂತ್ರಿ | ರಾಜ್ಯ ಶಾಸನ ಸಭೆಯಲ್ಲಿ ಬಹುಮತ ಇರುವ ಪಕ್ಷ | | ರಾಜ್ಯದಲ್ಲಿ ನಿವಾಸ ಇರಬೇಕು |
| ಪ್ರಧಾನ ಮಂತ್ರಿ | | | ಪಾರ್ಲಿಮೆಂಟ್ ಸದಸ್ಯರನಾಗಿರಬೇಕು |
| ರಾಷ್ಟ್ರಪತಿಗಳು | | | ಕನಿಷ್ಟ ವಯಸ್ಸು : 35 ವರ್ಷ. |

8. ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳು ಇನ್ನೂ ಹೆಚ್ಚು ಮಹಿಳೆಯರನ್ನು ಸ್ಪರ್ಧಿಸುವಂತೆ ಏಕೆ ಮಾಡಬೇಕು ?

9. ಭಾರತ ದೇಶದೊಂದಿಗೆ ಇತರ ದೇಶಗಳ ಪಾರ್ಲಿಮೆಂಟ್ ಸಭೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯದ ಮೇಲೆ ಜರುಗಿದ ಅಧ್ಯಯನ




**ಮೇಲಿನ ವಿಷಯ ಆಧಾರವಾಗಿ ಕೆಳಗಿನ ಅಂಶಗಳನ್ನು ಚರ್ಚಿಸಿ ಒಂದು ವ್ಯಾಸ ಬರೆಯಿರಿ.**

- ನಮ್ಮ ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಸಾಕಷ್ಟು ಪ್ರಾತಿನಿಧ್ಯ ಇದೆಯಾ?
- ಪ್ರಜಾ ಸ್ವಾಮ್ಯ ಭಾವನೆಗೆ ಪ್ರಾತಿನಿಧ್ಯ ಭಾವನೆಯು ಏಕೆ ಮುಖ್ಯವಾಗಿದೆ?
- ನೀವು ಪಾರ್ಲಿಮೆಂಟ್ ಸದಸ್ಯರಾದರೆ ಈ ಸಮಸ್ಯೆಯನ್ನು ಹೇಗೆ ಪರಿಷ್ಕರಿಸುವಿರಿ? ಕೆಲವು ದೇಶಗಳು ಪಾರ್ಲಿಮೆಂಟ್‌ನಲ್ಲಿ ಮಹಿಳೆಯರಿಗೆ ಅಧಿಕ ಪ್ರಾತಿನಿಧ್ಯವನ್ನು ಹೇಗೆ ಸಾಧಿಸಲ್ಪಟ್ಟಿವೆ ?

**ಪ್ರಾಜೆಕ್ಟ್ :**

ಪಾರ್ಲಿಮೆಂಟ್ ಸಮಾವೇಶಗಳು ಜರುಗುವಾಗ ರೇಡಿಯೋ ಇಲ್ಲವೇ ಟೆಲಿವಿಷನ್ ವಾರ್ತೆಗಳನ್ನು ಕೇಳಿ ಇಲ್ಲವೆ ದಿನಪತ್ರಿಕೆಗಳು ಓದಿ ಜರುಗಿದ ಘಟನೆಗಳ ಪಟ್ಟಿಯನ್ನು ತಯಾರು ಮಾಡಿರಿ. ಪಾರ್ಲಿಮೆಂಟಿನಲ್ಲಿ ಜರುಗಿದ ಚರ್ಚೆಯ ಮೇಲೆ ಒಂದು ಪ್ರಬಂಧವನ್ನು ಬರೆಯಿರಿ. ಇಲ್ಲವೇ ಮಾದರಿ ಸಂಸತ್ತನ್ನು ನಿರ್ವಹಿಸಿರಿ.

SCERT TELANGANA

ಪಾಠ 15

# ಕಾನೂನು, ನ್ಯಾಯ - ಒಂದು ಸನ್ನಿವೇಶದ ಅಧ್ಯಯನ

ಕಾನೂನುಗಳನ್ನು ಸರ್ಕಾರ ಜಾರಿಗೆ ತರುವದೆಂದು ಕಳೆದ ವರ್ಷ ನಾವು ಓದಿದ್ದೇವೆ. ಕಾನೂನು ಜಾರಿಗೆ ತರುವಲ್ಲಿ ಕಾರ್ಯನಿರ್ವಾಹಕ ವರ್ಗದ ಪಾತ್ರವನ್ನು ಸಹ ಸಂಕ್ಷಿಪ್ತವಾಗಿ ತಿಳಿದುಕೊಂಡಿದೇವೆ. ಆದರೆ ಕಾನೂನು ಉಲ್ಲಂಘಿಸಿದರೆ ಏನಾಗುತ್ತದೆ? ಈ ಪಾಠದಲ್ಲಿ ಇದನ್ನು ಕುರಿತು ತಿಳಿದುಕೊಳ್ಳೋಣ.



## ಆಸ್ತಿ ವಿಷಯದಲ್ಲಿ ವಿವಾದ

ರವಿಯು ಮನೆಗಳಿಗೆ ಸ್ಥಳ ವ್ಯಾಪಾರ ಮಾಡುತ್ತಾನೆ. ಭೂಮಿ ಕೊಂಡು ಸಣ್ಣ ಸಣ್ಣ ಪ್ಲಾಟುಗಳಾಗಿ ಮಾಡಿ ಮಾರಾಟ ಮಾಡುತ್ತಾನೆ. ದಿನ ಪತ್ರಿಕೆಗಳಲ್ಲಿ ಪ್ಲಾಟು ಕುರಿತು ರವಿ ಪ್ರಕಟಣೆಗಳನ್ನು ಕೊಡುತ್ತಾನೆ. ಪ್ಲಾಟುಕೊಳ್ಳುವವರು ಐದು ವರ್ಷಗಳ ವರೆಗೆ ತಿಂಗಳಿಗೆ 5,000 ರೂಪಾಯಿಗಳು ಕಟ್ಟಬೇಕು.

ಸಾಂಬ ಸಹಾಕಾರ ಸಂಘದಲ್ಲಿ ನೌಕರನಾಗಿ ಕೆಲಸ ಮಾಡುತ್ತಾನೆ. ಆತನು ಈ ಪ್ರಕಟಣೆಯನ್ನು ನೋಡಿ ಒಂದು ಪ್ಲಾಟು ಕೊಳ್ಳಬೇಕೆಂದು ಕೊಂಡನು. ತನಗೆ ಬರುವ ಆದಾಯದಲ್ಲಿ ಸ್ವಲ್ಪ ಹಣ ಉಳಿತಾಯ ಮಾಡಿ 5 ವರ್ಷ ಕಂತುಗಳನ್ನು ಕಟ್ಟುತ್ತಾನೆ. 5 ವರ್ಷಗಳ ನಂತರ ತಾನು ಕಟ್ಟಿದ ಕುಂತುಗಳು ಮುಗಿದ ಮೇಲೆ ತನ್ನ ಪ್ಲಾಟಿನಲ್ಲಿ ಮನೆ ಕಟ್ಟಿಕೊಳ್ಳಬೇಕೆಂದು ಕೊಂಡಿದ್ದಾನೆ. ಆದರೆ ಅದೇ ಪ್ಲಾಟನ್ನು ಕೆಲವು ದಿನಗಳ ಹಿಂದೆ ಮತ್ತೊಬ್ಬ ವ್ಯಕ್ತಿಗೆ ರವಿಯು ಮಾರಾಟ ಮಾಡಿದ್ದಾನೆ ಎಂದು ಆತನಿಗೆ ಗೊತ್ತಾಗುತ್ತದೆ.

ತನ್ನ ಮಗನಾದ ಕ್ರಾಂತಿಯೊಂದಿಗೆ ಕಲೆತು ರವಿ ಅವರ ಮನೆಗೆ ಸಾಂಬ ಹೋಗುತ್ತಾನೆ. ಪ್ಲಾಟಿಗೆ ತಾನು ಕಟ್ಟಿದ ಹಣವನ್ನು ತಿರುಗಿ ಕೊಡಬೇಕೆಂದು ರವಿಯನ್ನು ಕೇಳಿದನು. ಈ ವಿಷಯದಲ್ಲಿ ಇಬ್ಬರಿಗೂ ಮಾತಿನ ಜಗಳ ನಡೆಯಿತು. ಈ ಜಗಳದಲ್ಲಿ ರವಿಯು ಸಾಂಬನನ್ನು ಬಡಿಯುವನು. ಸಾಂಬನ ಕೈ ಮುರಿಯಿತು.

ಈ ಸಂಗತಿ ತಿಳಿದು ಅಲ್ಲಿಗೆ ಜನರ ಗುಂಪು ಸೇರಿತು. ಗ್ರಾಮ ಸರ್ಪಂಚ್ ಸಹ ಬಂದು ಸಾಂಬ, ರವಿ ಅವರನ್ನು ಶಾಂತಪಡಿಸಲು ಪ್ರಯತ್ನಿಸಿದರು. ತನ್ನ ತಂದೆ ಸಾಂಬನನ್ನು ಕ್ರಾಂತಿ ಸಮೀಪದಲ್ಲಿರುವ ಪಟ್ಟಣಕ್ಕೆ ಕರೆದುಕೊಂಡು ಹೋದನು. ಅದು ಮಂಡಲ ಪ್ರಧಾನ ಕಾರ್ಯಸ್ಥಳ ಸಹ. ಸಾಂಬನ ಡಾಕ್ಟರ್‌ಗೆ ನೋಡಿಸಿ ಆತನ ಕೈಗೆ ಕಟ್ಟು ಹಾಕಿಸಿದನು. ನಂತರ ಡಾಕ್ಟರ್ ಕೊಟ್ಟ ಧೃಢೀಕರಣ ಪತ್ರದೊಂದಿಗೆ ದೂರು (Complaint) ಕೊಡಲು ಪೋಲೀಸ್ ಸ್ಟೇಷನ್‌ಗೆ ಹೋದರು.

## ಫಿರ್ಯಾಧಿ (ದೂರು) ಮಾಡುವುದು:

ಪೋಲೀಸ್ ಸ್ಟೇಷನ್‌ನಲ್ಲಿ ರವಿಯ ಮೇಲೆ ಕ್ರಾಂತಿ ದೂರು ಮಾಡಿದ್ದಾನೆ. ಫಿರ್ಯಾದಿನಲ್ಲಿ ಈ ಕೆಳಗಿನ ವಿಷಯಗಳು ವಿವರವಾಗಿ ಇರಬೇಕು.:

1. ಪೋಲೀಸ್ ಸ್ಟೇಷನ್ ಅಧಿಕಾರಿ (SHO) ಯನ್ನು ಸಂಭೋಧಿಸಿ ದೂರು ಬರೆಯಬೇಕು.
2. ದೂರಿನ ವಿವರಗಳು
3. ಅಪರಾಧ ನಡೆದ ದಿನಾಂಕ, ಸಮಯ, ಸ್ಥಳ.
4. ಏನು ನಡೆದಿದೆ.
5. ಆರೋಪಿ, ಹೆಸರು, ಲಿಂಗ, ವಿಳಾಸ

SCERT TELANGANA



ಬರೆಯುವಿರಿ?

- ಮೇಲೆ ಕೊಟ್ಟ ಸಮಾಚಾರ ವನ್ನಿಡಿದು ರವಿ, ಸಾಂಬರವರ ವಿವರಗಳು ತಿಳಿಸಿ.
- FIR ಕೊಟ್ಟ ವ್ಯಕ್ತಿ ಅದರ ಪ್ರತಿ ತೆಗೆದು ಕೊಳ್ಳುವುದು ಮುಖ್ಯ ಏಕೆ ?
- ಪ್ರತಿ ಪೋಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಕೆಲವು ಪ್ರದೇಶ ವಿರುತ್ತದೆ. ನಿಮ್ಮ ಮನೆ ಯಾವ ಪೋಲೀಸ್ ಸ್ಟೇಷನ್ ಪರಧಿಯಲ್ಲಿ ಬರುತ್ತದೋ ತಿಳಿದುಕೊಳ್ಳಿರಿ.

ಮೊದಲಾದವು.

6. ಸಾಕ್ಷಿಗಳ ಹೆಸರು (ಅಪರಾಧ ಯಾರ ಸಮ್ಮುಖ ದಲ್ಲಿ ನಡೆದಿದೆ)
7. ಮನವಿ (ಅಪರಾಧಿಯನ್ನು ಕಾನೂನು ಪ್ರಕಾರ ಶಿಕ್ಷಿಸೆಂದು ಕೋರುವುದು ತಿಳಿದಿದ್ದರೆ ವರ್ತಿಸುವ ಸೆಕ್ಷನ್ ಸಂಖ್ಯೆ ಬರೆಯುವುದು)
8. ದೂರು ಕೊಡುವ ವ್ಯಕ್ತಿಯ ಸಹಿ, ಅಡ್ರಸ್, ಇತರ ವಿವರಗಳು.

ದೂರಿನಲ್ಲಿ ಕೊಟ್ಟ ಸಮಾಚಾರ ಪ್ರಕಾರ ಪೋಲೀಸ್ ಸ್ಟೇಷನ್‌ನಲ್ಲಿ ಪೋಲೀಸ್ ಅಧಿಕಾರಿ (ರೈಟರ್) ನಿವೇದಿಕೆ ಯನ್ನು ತಯಾರಿಸುತ್ತಾನೆ. ಇದನ್ನೇ ಮೊದಲ ಸಮಾಚಾರ ನಿವೇದಿಕೆ (F.I.R) ಎನ್ನುವರು. 'ನಿವೇದಿಕೆಯ ಮೇಲೆ ಕ್ರಾಂತಿ ಸಹಿ ಮಾಡಿ ನಿವೇದಿಕೆಯನ್ನು ನಿಮ್ಮ ರಿಜಿಸ್ಟರ್‌ನಲ್ಲಿ ದಾಖಲೆ ಮಾಡಿಕೊಂಡು ನಮಗೂ ಒಂದು ಪ್ರತಿಯನ್ನು ಕೊಡಿ'ರೆಂದು ಕೇಳಿದನು. ನಿವೇದಿಕೆಯನ್ನು ರಿಜಿಸ್ಟರ್‌ನಲ್ಲಿ ಬರೆಯಬೇಕಾದರೆ SHO ಅವರು ಬರುವವರೆಗೆ ಕಾಯಬೇಕೆಂದು ರೈಟರ್ ಹೇಳಿದನು. ಪೋಲೀಸ್ ಸ್ಟೇಷನ್ ಅಧಿಕಾರಿಯನ್ನು SHO ಎನ್ನುತ್ತಾರೆ. ಈ ಪೋಲೀಸ್ ಸ್ಟೇಷನ್‌ನಲ್ಲಿ ಸಬ್ ಇನ್ಸ್‌ಪೆಕ್ಟರ್ (S.I.) SHO.ಆದರಿಂದ SHO ಬರೆದ ನಿವೇದಿಕೆಯನ್ನು ರಿಜಿಸ್ಟರ್‌ನಲ್ಲಿ ದಾಖಲೆ ಮಾಡುವವರೆಗೆ ಕ್ರಾಂತಿ ಅಲ್ಲಿಯೇ ಇದ್ದನು.

- SHO/S.Iಬರುವವರೆಗೆ ಅವರು ಅಲ್ಲಿಯೇ ಏಕೆ ಕಾಯುತ್ತಿದ್ದರು? ಇಂತಹ ನಿವೇದಿಕೆಯನ್ನು ನೀವು ಬರೆಯಬೇಕಾಗಿ ಬಂದರೆ ನೀವು ಅದರಲ್ಲಿ ಏನು

## ಮೊದಲ ಸಮಾಚಾರ ನಿವೇದಿಕೆ (F.I.R.)

ಪೋಲೀಸರಿಗೆ ದೂರು (ಫಿರ್ಯಾದಿ) ಮಾಡಬೇಕಾಗಿ ಬಂದರೆ ಪೋಲೀಸ್ ಸ್ಟೇಷನ್‌ನಲ್ಲಿ ಮೊದಲ ಸಮಾಚಾರ ನಿವೇದಿಕೆ(F.I.R.) ಸಹ ಬೇಕಾಗಿದೆ. F.I.R ದಾಖಲಿಸಿದ ನಂತರ ಕೇಸನ್ನು ಪರಿಶೋಧಿಸಿ, ಪರಿಷ್ಕರಿಸುವ ಜವಾಬ್ದಾರಿ ಪೋಲೀಸರದು.

ನಿವೇದಿಕೆಯಲ್ಲಿ ಬರೆದ ಸಮಾಚಾರವನ್ನು SHO ಎಲ್ಲರಿಗೂ ಕೇಳುವಂತೆ ಓದಬೇಕು. ಅದರಲ್ಲಿ ಎಲ್ಲಾ ವಿಷಯಗಳು ಸರಿಯಾಗಿ ಇದ್ದರೆ ಫಿರ್ಯಾದಿದಾರ ಅದರ ಮೇಲೆ ಸಹಿ ಮಾಡಬೇಕು. F.I.R.ಆಧಾರವಾಗಿ ಪೋಲೀಸ್ ಸ್ಟೇಷನ್‌ನಲ್ಲಿ ರಿಜಿಸ್ಟರ್‌ನಲ್ಲಿ ಅಪರಾಧ ವಿವರಗಳನ್ನು ದಾಖಲಿಸಬೇಕು. ಫಿರ್ಯಾದಿ ಮಾಡಿದ ವ್ಯಕ್ತಿಯಿಂದ ಯಾವ ಫೀಜು ತೆಗೆದುಕೊಳ್ಳದಂತೆ F.I.R. ಪ್ರತಿ ಆತನಿಗೆ ಕೊಡಬೇಕು. ಒಂದು ವೇಳೆ ಕೇಸು ತೆಗೆದುಕೊಳ್ಳಲು, SHO ತಿರಸ್ಕರಿಸಿದರೆ ನೇರವಾಗಿ ಡಿಎಸ್‌ಪಿ ಅಥವಾ ಮೇಜಿಸ್ಟ್ರೇಟು ಬಳಿ ಹೋಗಿ ಫಿರ್ಯಾದಿ (ದೂರು) ಕೊಡಬಹುದು. ಫಿರ್ಯಾಧಿಯನ್ನು ಅವರಿಗೆ ಪೋಸ್ಟ್ ಮೂಲಕ ಸಹ ಕಳಿಸಬಹುದು.

SCERT TELANGANA

## ವಿಚಾರಣೆ, ಅರೆಸ್ಟ್‌ಗಳಲ್ಲಿ ಪೋಲೀಸರ ಪಾತ್ರ :

ಅಪರಾಧಕ್ಕೆ ಸಂಬಂಧಿಸಿದ ಯಾವ ದೂರನ್ನಾದರೂ ವಿಚಾರಣೆ ಮಾಡುವುದು ಪೋಲೀಸರ ಮುಖ್ಯ ಕರ್ತವ್ಯ. ವಿಚಾರಣೆಯ ಭಾಗದಲ್ಲಿ ವಿವಿಧ ರುಜುವುಗಳನ್ನು ಶೇಖರಿಸಬೇಕು. ಸಾಕ್ಷಿಗಳು ಹೇಳುವುದನ್ನು ದಾಖಲಿಸಬೇಕು. ಈ ವಿಚಾರಣೆಗಳ ಆಧಾರವಾಗಿ ಪೋಲೀಸರು ಒಂದು ಅಭಿಪ್ರಾಯಕ್ಕೆ ಬರಬೇಕು. ಅಪರಾಧಿ ದೋಷಿ ಎಂದು ಸಾಕ್ಷಿಗಳು ಹೇಳುತ್ತಿವೆ ಎಂದು ಪೋಲೀಸರು ಭಾವಿಸಿದರೆ ಅವರು ನ್ಯಾಯ ಸ್ಥಾನದಲ್ಲಿ ಚಾರ್ಜ್ ಶೀಟ್ ದಾಖಲೆ ಮಾಡಬೇಕು. ಅಪರಾಧಿಯನ್ನು ಶಿಕ್ಷಿಸುವ ಕೆಲಸ ಪೋಲೀಸರದು ಅಲ್ಲ. ಅಪರಾಧಿಯು ದೋಷಿ ಅವುದೋ, ಅಲ್ಲವೋ ಒಂದು ವೇಳೆ ದೋಷಿ ಆದರೆ ಯಾವ ಶಿಕ್ಷೆ ವಿಧಿಸಬೇಕೆಂದು ನ್ಯಾಯಮೂರ್ತಿ ನ್ಯಾಯವರ್ಗ ನಿರ್ಣಯಿಸುತ್ತಾರೆ.



ಈ ಕೇಸಿನಲ್ಲಿ S.I ಆ ಊರಿಗೆ ಹೋಗಿ ವಿಚಾರಿಸುತ್ತಾನೆ. ಮೊದಲು ಸಾಂಬನನ್ನು ಕಂಡು ಆತನಿಗಿರುವ ಗಾಯವನ್ನು ನೋಡಿದ್ದಾನೆ. ಒಡೆತಗಳು ಚೆನ್ನಾಗಿ ತಗಲಿವೆಂದು ಆಸ್ಪತ್ರೆ ನಿವೇದಿಕೆ ಹೇಳುತ್ತದೆ. ನಂತರ ಆತನ ಮನೆಯ ಸುತ್ತ ಮುತ್ತ ಇರುವವರನ್ನು ವಿಚಾರ ಮಾಡಿದ್ದಾನೆ. ಜರುಗಿದ ಘಟನೆಯ ಬಗ್ಗೆ ಅಕ್ಕಪಕ್ಕದವರಿದಂದ ಪೂರ್ತಿ ವಿವರಗಳನ್ನು ನೀಡಿದ್ದಾರೆ. ಸಾಂಬನ ಮೇಲೆ ರವಿ ದಾಳಿ ಮಾಡಿ, ಗಾಯಗೊಳಿಸಿದ್ದಾನೆಂದು ಎಂತಹಾ ಅನುಮಾನಕ್ಕೆ ಆಸ್ಪದವಿಲ್ಲವೆಂದು ಸ್ಪಷ್ಟವಾಯಿತು.

ನಂತರ S.I ರವಿ ಅವರ ಮನೆಗೆ ಹೋಗಿ ಸಾಂಬ ಎನ್ನುವ ವ್ಯಕ್ತಿಯನ್ನು ತೀವ್ರವಾಗಿ ಗಾಯಗೊಳಿಸಿದ್ದೀರೆಂಬ ಆರೋಪಣೆಯ ಮೇಲೆ ಆತನನ್ನು ಅರೆಸ್ಟ್ ಮಾಡುತ್ತೇವೆ ಎಂದು ಹೇಳಿದನು. ಆತನು ರವಿಯನ್ನು ಅರೆಸ್ಟ್ ಮಾಡಿ ಮಂಡಲ ಪೋಲೀಸ್ ಸ್ಟೇಷನ್‌ಗೆ ಕರೆದೊಯ್ದು ಆತನನ್ನು ಪ್ರಶ್ನಿಸಿದರು. ಸಾಂಬನನ್ನು ಒಡೆದಿದ್ದೇನೆ ಎಂದು ರವಿಯು ಒಪ್ಪಿಕೊಳ್ಳಲಿಲ್ಲ. ರವಿ, ಆತನು ಅಪರಾಧ ಮಾಡಿದ್ದೀಯಾ ಎಂದು ಒಪ್ಪಿಸಲು S.I ಪ್ರಯತ್ನಿಸಿದರು ಆದರೆ ರವಿ ಒಪ್ಪಿಕೊಳ್ಳಲಿಲ್ಲ. ಮರುದಿವಸ ಮೆಜಿಸ್ಟ್ರೇಟ್ ಮುಂದು ಹಾಜರುಪಡಿಸಲು ರವಿಯನ್ನು ಪೋಲೀಸ್ ಲಾಕಪ್‌ನಲ್ಲಿ ಬಂಧಿಸಿದರು.

- ಅಪರಾಧವನ್ನು ಯಾರು ವಿಚಾರಿಸಿದರು, ಹೇಗೆ ವಿಚಾರಿಸಿದರು?
- ಆರೋಪಿ ಎಂದರೆ ಏನು ? ಈ ಕಥೆಯಲ್ಲಿ ಆರೋಪಿ ಯಾರು?
- ಆರೋಪಿಯ ಮೇಲೆ ಇದ್ದ ಆರೋಪಣೆ ಯಾವುದು?
- ರವಿಯನ್ನು ಶಿಕ್ಷಿಸುವುದಕ್ಕೆ S.I ಆತನನ್ನು ನಿರ್ಭಂಧಿಸಿದ್ದಾನೆ ಸಾಂಬ ಅಂದುಕೊಂಡಿದ್ದಾನೆ? ಇದು ನಿಜವೇನಾ?

## ಸಿವಿಲ್, ಕ್ರಿಮಿನಲ್ ಅಪರಾದಗಳು :

ಮರುದಿನ S.I ಹತ್ತಿರ ರವಿ ಹೀಗೆ ಹೇಳಿದ್ದಾನೆ. ಪ್ಲಾಟಿಗೋಸ್ಕರ ಸಾಂಬನು ಕಟ್ಟಿದ ಹಣವನ್ನು ತಿರುಗಿ ಕೊಡುತ್ತೇನೆ. ಈಗ ನಡೆದುದೆಲ್ಲವನ್ನು ಮರೆತು ಹೋಗುವೆನು.

ಹಣವನ್ನು ಹೇಗಾದರೂ ತಿರುಗಿ ಕೊಡಲೇ ಬೇಕು. ಆದರೆ ಈಗ ನೀನು ಸಾಂಬನನ್ನು ಒಡೆದಿದ್ದೀಯ ಅದಕ್ಕಾಗಿ ಅರೆಸ್ಟ್ ಮಾಡಿದ್ದೇವೆ. ಇದು ಈಗ ಕ್ರಿಮಿನಲ್ ಆರೋಪ ಆಗಿದೆ. ನೀನು ಸಾಂಬನನ್ನು ಒಡೆಯದೇ ಇದ್ದಿದ್ದರೆ ಪೋಲೀಸರು ಇದರಲ್ಲಿ ಪಾಲ್ಗೊಳ್ಳುತ್ತಿರಲಿಲ್ಲ. ಪ್ಲಾಟು ಕೊಡದೇ ಇದ್ದುದಕ್ಕಾಗಿ ನಿನ್ನ



SCERT TELANGANA

ಮೇಲೆ ಸಾಂಬ ಸಿವಿಲ್ ಕೇಸು ಹಾಕುತ್ತಿದ್ದ. ಆಗ ನೀನು ಆತನಿಗೆ ಪ್ಲಾಟ್ ತಿರುಗಿ ಕೊಟ್ಟು ಆತನಿಗೆ ಜರುಗಿದ ನಷ್ಟಕ್ಕೆ ಪರಿಹಾರ ಕೊಡಬೇಕಾಗಿತ್ತು. ಆಗ ನೀನು ಜೈಲಿಗೆ ಹೋಗುವ ಅವಸರವು ಸಹ ಇದ್ದಿಲ್ಲ ಎಂದು S.I ಉತ್ತರಿಸಿದನು.

ರವಿ ಸಾಂಬರ ವಿಷಯದಲ್ಲಿ ಎರಡು ವಿಧವಾದ ವಿವಾದಗಳು ಇದ್ದಾವೆ. ಮೊದಲನೆಯದು ಸಾಂಬನ ಮೇಲೆ ರವಿ ದಾಳಿಮಾಡಿದದು, ಇದು ಕ್ರಿಮಿನಲ್ ಆರೋಪ. ಕಳ್ಳತನ, ದೋಚುವಿಕೆ,ಕಲ್ತೀ, ಲಂಚಗಳು ಕೊಡುವುದು, ಕಲ್ತೀ ಮಂದುಗಳು ತಯಾರು ಮಾಡುವುದೆಲ್ಲವೂ ಕ್ರಿಮಿನಲ್ ಆರೋಪಗಳಿಗೆ ಉದಾಹರಣೆಗಳು.ಅವರಿಬ್ಬರ ಮಧ್ಯ ಸಿವಿಲ್ ವಿವಾದ ಸಹ ಇದೆ. ಸಾಂಬಾಗೆ ರವಿ ಪ್ಲಾಟು ಆಗಲೀ, ಹಣವಾಗಲೀ ಕೊಟ್ಟಿಲ್ಲ.

ಭೂಮಿ, ಆಸ್ತಿ, ಆದಾಯಗಳ ಹೊಂದಿರುವುದು ಪ್ರಜೆಗಳ ಹಕ್ಕು. ಪ್ರಜೆಗಳ ಮಧ್ಯ ಇರುವ ಸಂಬಂಧಗಳಿಗೆ ಸಂಬಂಧಿಸಿದವುಗಳೆಲ್ಲವೂ ಸಿವಿಲ್ ವಿವಾದಗಳು ಆಗುತ್ತವೆ. ಕ್ರಿಮಿನಲ್ ವಿವಾದಗಳಲ್ಲಿ ಸಾಧಾರಣವಾಗಿ ದೋಷಿಗಳಿಗೆ ಜೈಲು ಶಿಕ್ಷೆ ವಿಧಿಸುತ್ತಾರೆ. ಸಿವಿಲ್ ವಿವಾದಗಳಲ್ಲಿ ಜೈಲು ಶಿಕ್ಷೆ ಇರದೇ ಇರಬಹುದು. ಕ್ರಿಮಿನಲ್ ಕೇಸುಗಳೆಲ್ಲವನ್ನು ಪೋಲೀಸರೆ ಕೈಹಿಡಿಯುತ್ತಾರೆ. ಅಪರಾದಕ್ಕೆ ಗುರಿಯಾದ ವ್ಯಕ್ತಿ ಅಲ್ಲ. ಇದಕ್ಕೆ ವಿರುದ್ದವಾಗಿ ಸಿವಿಲ್ ವಿವಾದಗಳಲ್ಲಿ ಒಪ್ಪಂದ ಉಲ್ಲಂಘನೆಯಾದಾಗ ಅಥವಾ ಮೋಸದಿಂದ ನಷ್ಟವಾದಾಗ ವ್ಯಕ್ತಿ ಒಬ್ಬರು ಸ್ವಯಂ ಆಗಿ ಸಿವಿಲ್ ಕೇಸುಗಳನ್ನು ದಾಖಲು ಮಾಡುತ್ತಾನೆ.

ಕಿಮಿನಲ್ ಕೇಸುಗಳಲ್ಲಿ ಸರ್ಕಾರ ಮಾಡಿದ ಕಾನೂನುಗಳನ್ನು ಉಲ್ಲಂಘಿಸುವುದರಿಂದ ಪೋಲೀಸರೆ ಜೋಕ್ಯ ಮಾಡಿಕೊಳ್ಳುವರು. ಸಿವಿಲ್ ಕೇಸುಗಳಲ್ಲಿ ಇಬ್ಬರು ವ್ಯಕ್ತಿಗಳ ಮಧ್ಯೆ ಒಪ್ಪಂದ ಉಲ್ಲಂಘನೆ ಜರುಗುತ್ತದೆ..

- ಸಾಂಬನ ಪ್ಲಾಟನ್ನು ರವಿ ಬೇರೊಬ್ಬ ವ್ಯಕ್ತಿಗೆ ಮಾರಿದಾಗ ಅದು ____________ ಆರೋಪ (ಕ್ರಿಮಿನಲ್ / ಸಿವಿಲ್)
- ಸಾಂಬನನ್ನು ರವಿ ಒಡೆದಿದ್ದು ಅದು_______ ಆರೋಪ (ಕ್ರಿಮಿನಲ್ / ಸಿವಿಲ್)

**ಕ್ರಿಮಿನಲ್,ಸಿವಿಲ್ ಕಾನೂನುಗಳನ್ನು ಅರ್ಥಮಾಡಿಕೊಳ್ಳಲು ಕೆಳಗಿನ ಪಟ್ಟಿಕೆಯನ್ನು ನೋಡಿರಿ.**

| ಕ್ರ.ಸಂ. | ಕ್ರಿಮಿನಲ್ ಕಾನೂನು | ಸಿವಿಲ್ ಕಾನೂನು (ಪೌರ) |
|---|---|---|
| 1. | ಇದು ಆರೋಪಿಯಾಗಿ ಪರಿಗಣಿಸುವ ಚರ್ಯೆಗಳಿಗೆ ಸಂಬಂಧಿಸಿದ್ದು ಉದಾ : ಕಳ್ಳತನ ವರದಕ್ಷಿಣೆ ತೆಗೆದುಕೊಳ್ಳುವುದು ಹತ್ಯೆ ಮುಂತಾದವು.. | ಇದು ಮತ್ತೊಬ್ಬ ವ್ಯಕ್ತಿ ಒಪ್ಪಂದವನ್ನು ಉಲ್ಲಂಘಿಸುವುದರಿಂದ ಒಬ್ಬ ವ್ಯಕ್ತಿಗೆ ಜರುಗುವ ನಷ್ಟಕ್ಕೆ ಸಂಬಂಧಿಸಿದೆ. ಉದಾ : ಬಾಡಿಗೆ, ವಸ್ತುಗಳ ಕೊಳ್ಳುವಿಕೆ-ವಿವಾಹ ವಿಚ್ಛೇಧನೆ. |
| 2. | ಸಾಧಾರಣವಾಗಿ F.I.R. ನಮೂದು ಮಾಡಿ ಪೋಲೀಸ್ ವಿಚಾರಣೆಯೊಂದಿಗೆ ಇದು ಮೊದಲಾಗಿ ಆ ನಂತರ ನ್ಯಾಯ ಸ್ಥಾನದಲ್ಲಿ ಕೇಸು ಹಾಕುತ್ತಾರೆ. | ನಷ್ಟಕ್ಕೆ ಗುರಿಯಾದ ವ್ಯಕ್ತಿ ನ್ಯಾಯ ಸ್ಥಾನದಲ್ಲಿ ದಾವೆ ಹಾಕುತ್ತಾನೆ. ಉದಾ : ಬಾಡಿಗೆ ವಿವಾದದಲ್ಲಿ ಯಜಮಾನ ಅಥವಾ ಬಾಡಿಗೆ ದಾರ |
| 3. | ದೋಷಿ ಎಂದು ಸಾಬೀತಾದರೆ ಜುಲ್ಮಾನಾದೊಂದಿಗೆ ಜೈಲಿಗೆ ಕಳಿಸುತ್ತಾರೆ. | ನಷ್ಟಕ್ಕೆ ಗುರಿಯಾದ ವ್ಯಕ್ತಿಗೆ ಕೋರ್ಟ್ ಉಪಶಮನವನು ಕೊಡುತ್ತದೆ. ಉದಾ : ಬಾಡಿಗೆ ಮನೆಯಿಂದ ಬಾಡಿಗೆ ದಾರನ್ನು ಖಾಲೀ ಮಾಡಿಸುವುದು ಅಥವಾ ಬಾಡಿಗೆ ದಾರರಿಂದ ಬಾಡಿಗೆಯನ್ನು ವಸೂಲಿ ಮಾಡಿಕೊಡುವುದು. |

SCERT TELANGANA

| ಕ್ರಿಮಿನಲ್, ಸಿವಿಲ್ ಕಾನೂನುಗಳ ಕುರಿತು ನೀವು ಅರ್ಥಮಾಡಿಕೊಂಡ ಆಧಾರವಾಗಿ ಕೆಳಗಿನ ಪಟ್ಟಿಕೆ ತುಂಬಿರಿ. | | |
|---|---|---|
| **ಘಟನೆಯ ವಿವರಣೆ** | **ಯಾವ ಕಾನೂನು** | **ಅನುಸರಿಸುವ ವಿಧಾನ** |
| ಶಾಲೆಗೆ ಹೋಗುವ ದಾರಿಯಲ್ಲಿ ಬಾಲಕೀಯರ ವೃಂದವನ್ನು ಒಂದುಬಾಲಕರ ಗುಂಪು ದಿನವೂ ವೇದಿಸುತ್ತಾ ಇರುತ್ತದೆ.<br>ಖಾಲೀ ಮಾಡಿರೆಂದು ಬಲವಂತ ಮಾಡುವ ಯಜಮಾನನ ಮೇಲೆ ಬಾಡಿಗೆದಾರ ಕೋರ್ಟಿನಲ್ಲಿ ದಾವಾ ಹಾಕುವುದು. | | |

## ಬೆಯಿಲ್ (ಜಾಮೀನಿನಿಂದ ಬಿಡಿಸಿಕೊಳ್ಳು) :

ರವಿಯದ್ದು ಕ್ರಿಮಿನಲ್ ಕೇಸು ಅದಕ್ಕಾಗಿ ದೋಷಾರೋಪ (ಚಾಜ್‌ಷೀಟ್) ಪತ್ರ ದಾಖಲು ಮಾಡಿದ ನಂತರ ಲಾಕಪ್‌ನಲ್ಲಿ ನಿರ್ಭಂಧಿಸಿದರು. ಕ್ರಿಮಿನಲ್ (ನೇರ) ಕೇಸುಗಳಲ್ಲಿ ಆರೋಪಿಗಳನ್ನು ಜೈಲುಗಳಲ್ಲಿ ಇಡುತ್ತಾರೆ. ಆದರೆ ಇದು ಶಿಕ್ಷೆ ಅಲ್ಲ. ಇದು ಅಪರಾಧ ವಿಚಾರಣೆಯಲ್ಲಿ ಸಹಕರಿಸುವುದಕ್ಕೆ ಅಲ್ಲದೆ ಆರೋಪಿಗಳು ಸಾಕ್ಷಿಗಳನ್ನು ಕಣ್ಣುಮರೆ ಮಾಡದಂತೆ ಇರಲು, ಇಲ್ಲವೇ ಸಾಕ್ಷಿಗಳನ್ನು ಬೆದರಿಸದಂತೆ ಇರಲು ಉದ್ದೇಶಿಸಿದೆ. ಪೋಲೀಸ್ ಲಾಕಪ್‌ನಲ್ಲಿ ಕೆಲ ದಿನಗಳ ನಂತರ ರವಿ ಕುಟುಂಬ ಬೆಯಿಲ್ ಗಾಗಿ ನ್ಯಾಯ ಸ್ಥಾನದಲ್ಲಿ ಅರ್ಜಿ ಇಟ್ಟುಕೊಂಡಿದೆ. ಹತ್ಯೆ, ಲಂಚ, ದೋಚುವಿಕೆ, ಅಪರಾಧವೆಸಗಿದವರಿಗೆ ಬೆಯಿಲ್ ದೊರಕದೇ ಇರಬಹುದು. ಬೆಯಿಲ್ ಹೊಂದಲು ನ್ಯಾಯ ಸ್ಥಾನಕ್ಕೆ ಕೆಲವು ಭರವಸೆ (ಜಾಮೀನು)ಗಳನ್ನು ಕೊಡಬೇಕು. ಈ ಭರವಸೆಗಳು ಆಸ್ತಿಗಳು ಆಗಬಹುದು/ ಜಾಮಿನಾಗಿ ನಿಲ್ಲುವ ವ್ಯಕ್ತಿಗಳಾಗಬಹುದು/ ಬಾಂಡುಗಳಾಗಬಹುದು. ಕೇಳಿದಾಗ ನ್ಯಾಯ ಸ್ಥಾನದಲ್ಲಿ ಆರೋಪಿಯು ಹಾಜರಾಗುತ್ತಾನೆ ಎಂದು ಬಾಂಡು ಭರವಸೆ ಕೊಡುತ್ತದೆ. ಬೆಯಿಲ್ ನೀಡಬೇಕೋ ಇಲ್ಲ ಕೊಡಬಾರದೋ ಎಂಬುದನ್ನು ನ್ಯಾಯ ಸ್ಥಾನದಲ್ಲಿ ನ್ಯಾಯ ಮೂರ್ತಿಯು ನಿರ್ಣಯಿಸುತ್ತಾರೆ.

## ಆರೋಪಿಯ ಹಕ್ಕು ಆಗಿ ಬೆಯಿಲ್ :

ಬೆಯಿಲ್ ಆರೋಪಿಯ ಹಕ್ಕು. ಅಪರಾಧದ ತೀವ್ರತೆಯನ್ನು ಹಿಡಿದು ಸಾಕ್ಷಿಗಳನ್ನು ಬೆದರಿಸಲು ಇರುವ ಅವಕಾಶವನ್ನು ಹಿಡಿದು ಅದನ್ನು ಮಂಜೂರು (ಸಮ್ಮತಿಸು) ಮಾಡುತ್ತಾರೆ. ಅದೇ ಸಮಯದಲ್ಲಿ ಆರೋಪಿಯನ್ನು ಬಿಡುವುದರಿಂದ ಸಮಾಜಕ್ಕಾಗಲೀ, ಸಾಕ್ಷಿಗಳಿಗಾಗಲೀ, ಫಿರ್ಯಾದುದಾರನಿಗೆ ಏನಾದರೂ ಹಾನಿ ಜರುಗುತ್ತದೆಯಾ ಎಂದು ನ್ಯಾಯ ಸ್ಥಾನ ಪರಿಶೀಲಿಸುತ್ತದೆ. ಬೆಯಿಲ್ ಕೊಡಬಲ್ಲ ತಪ್ಪುಗಳಲ್ಲಿ SHO ಮಾತ್ರವೇ ಬೆಯಿಲ್ ಮಂಜೂರು ಮಾಡುತ್ತಾರೆ. ಬೆಯಿಲ್ ಕೊಡದೇ ಇರುವ ಅಪರಾಧಗಳಲ್ಲಿ ಆರೋಪಿಯು ಸಂಬಂಧಿತ ನ್ಯಾಯ ಸ್ಥಾನದಲ್ಲಿ ಬೆಯಿಲ್‌ಗಾಗಿ ಅರ್ಜಿಯನ್ನು ಇಟ್ಟುಕೊಳ್ಳಬೇಕು.

ನ್ಯಾಯ ಸ್ಥಾನದಲ್ಲಿ ರವಿ ಇಲ್ಲವೇ ಸಾಂಬರ ಕೇಸುಗಳನ್ನು ನ್ಯಾಯ ವಾದಿಗಳು ವಾದಿಸುತ್ತಾರೆ. ರವಿ ಸ್ವಂತವಾಗಿ ನ್ಯಾಯವಾದಿಯನ್ನು ಏರ್ಪಾಟು ಮಾಡಿಕೊಳ್ಳಬೇಕು. ಆದರೆ ಸಾಂಬನ ಪರವಾಗಿ ಸರ್ಕಾರದ ನ್ಯಾಯವಾದಿ (ಪಬ್ಲಿಕ್ ಪ್ರಾಸಿಕ್ಯೂಟರ) ವಾದಿಸುವನು. ನ್ಯಾಯ ವಿಧಾನಗಳು ಬಹಳ ಕಠಿಣವಾಗಿವೆ. ಅವುಗಳ ಕುರಿತು ಚರ್ಚಿಸಲು ಪ್ರತ್ಯೇಕ ಅವಗಾಹನೆ ಇರಬೇಕು.

## ಪ್ರಭುತ್ವ (ಸರ್ಕಾರ) ನ್ಯಾಯವಾದಿ ಪಾತ್ರ

ಕ್ರಿಮಿನಲ್ ಅಪರಾಧಗಳನ್ನು ಪ್ರಜೆಗಳ ಮೇಲೆ ಜರುಗಿದ ಅಪರಾಧಗಳಾಗಿ ನಮೋದು ಮಾಡುತ್ತಾರೆ. ಅಂದರೆ ಈ ಅಪರಾಧ ಎಂಬುದು ಭಾದಿತರ ಮೇಲೆ ಅಲ್ಲದೇ ಸಮಾಜದ ಮೇಲೆ ಜರುಗಿದೆ ಎಂದು ಭಾವಿಸುವರು.

ನ್ಯಾಯ ಸ್ಥಾನದಲ್ಲಿ ಸರ್ಕಾರಿ ನ್ಯಾಯವಾದಿ ಸರ್ಕಾರದ ಪ್ರಯೋಜನಗಳಿಗೆ ಪ್ರತಿನಿಧಿಯಾಗಿ ಇರುತ್ತಾನೆ. ಪೋಲೀಸರು ವಿಚಾರಣೆ ಮಾಡಿ ನ್ಯಾಯಸ್ಥಾನದಲ್ಲಿ ದೋಷಾರೋಪಣ ಪತ್ರ ದಾಖಲಿಸಿದ ನಂತರ ಪ್ರಭುತ್ವ ನ್ಯಾಯವಾದಿ ಪಾತ್ರ ಮೊದಲಾಗುತ್ತದೆ. ವಿಚಾರಣೆಯಲ್ಲಿ ಪ್ರಭುತ್ವ ನ್ಯಾಯವಾದಿ ಪಾತ್ರ ಏನು ಇರುವುದಿಲ್ಲ. ಆತನು/ ಆಕೆ ಸರಕಾರದ ಪರವಾಗಿ ವಾದಿಸಬೇಕು. ನ್ಯಾಯಸ್ಥಾನ ಅಧಿಕಾರಿಯಾಗಿ ಆತನು /ಆಕೆ



SCERT TELANGANA

ನಿಷ್ಪಕ್ಷಪಾತವಾಗಿ ವ್ಯವಹರಿಸುತ್ತಾ, ಸಾಕ್ಷಿಗಳನ್ನು, ರುಜುವುಗಳನ್ನು / ಆಧಾರಗಳನ್ನು ನ್ಯಾಯ ಸ್ಥಾನದ ಮುಂದೆ ಇಟ್ಟು ಕೇಸಿನ ಮೇಲೆ ನಿರ್ಣಯತೆಗೆದುಕೊಳ್ಳುವುದಕ್ಕೆ ಸಹಕರಿಸಬೇಕು.

## ನ್ಯಾಯವಾದ ವಿಚಾರಣೆ :

ಸಾಂಬ, ರವಿ ಅವರ ಕೇಸು ಜ್ಯುಡಿಷೀಯಲ್ ಮೆಜಿಸ್ಟ್ರೇಟು ನ್ಯಾಯ ಸ್ಥಾನದಲ್ಲಿ ವಿಚಾರಿಸಲಾಗುತ್ತದೆ. ನ್ಯಾಯ ಸ್ಥಾನದ ಹೊರಗೆ, ಒಳಗೆ ಕಪ್ಪು ಕೋಟುಗಳನ್ನು ಧರಿಸಿದ ನ್ಯಾಯವಾದಿಗಳು, ವಿಚಾರಣೆಗೆ ಸಂಬಂಧಿಸಿದ ಪ್ರಜೆಗಳು ಅಲ್ಲದೇ ಇತರರು ಬಹಳ ಜನ ಇರುತ್ತಾರೆ.

ಕಾನೂನಿನ ಮುಂದೆ ಎಲ್ಲರೂ ಸಮಾನರೆಂದು ಕಾನೂನು ಹೇಳುತ್ತದೆ. ಒಬ್ಬರು ದೋಷಿಗಳು ಹೌದೋ ಅಲ್ಲವೋ ನಿರ್ಣಯಿಸಲು ಆತನು / ಆಕೆ ಮೇಲೆ ನ್ಯಾಯವಾದ, ನಿಷ್ಪಾಕ್ಷಿಕವಾದ ಬಹಿರಂಗ ವಿಚಾರಣೆ ನಡೆಸುತ್ತಾರೆ. ದೋಷ ವಿಚಾರಣೆಯು ಅಮಾಯಕರು ಎನ್ನುವ ಭಾವನೆಯಿಂದ ಮೊದಲಾಗುತ್ತದೆ. ಏಕೆಂದರೆ ಅನುಮಾನಗಳಿಗೆ ಎಡೆ ಇಲ್ಲದಂತೆ ತಪ್ಪು ನಿರೂಪಿಸಬೇಕಲ್ಲವೇ.

ಸಾಂಬನು ಗಾಯಗೊಂಡಿದ್ದಾನೆ. ಅದಕ್ಕಾಗಿ ರವಿ ತಪ್ಪಿತಸ್ಥ ಎಂಬ ನಿರ್ಣಯಕ್ಕೆ ನ್ಯಾಯ ಮೂರ್ತಿ ಬರುವುದಿಲ್ಲ. ರವಿಯಿಂದಲೇ ಆತನಿಗೆ ಗಾಯಗಳು ಆಗಿವೆ ಎಂದು ನಿರೂಪಿಸಬೇಕು.

- ನ್ಯಾಯವಾದ ವಿಚಾರಣೆ ಎಂದರೇನು? ಅದು ಅವಸರವೇ? ವಿತಕ್ಕೆ ಚರ್ಚಿಸಿರಿ.

## ಮೊದಲ ವಿಚಾರಣೆ (ವಾಯಿದಾ) ನ್ಯಾಯವಾದಿ :

ಜ್ಯುಡಿಷಿಯಲ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಸಾಂಬ, ಆತನ ಮಗ ಕ್ರಾಂತಿ, ರವಿ, S.I ಇದ್ದಾರೆ. ರವಿ ಒಬ್ಬ ನ್ಯಾಯವಾದಿಯನ್ನು ಏರ್ಪಾಟು ಮಾಡಿ ಕೊಂಡಿದ್ದಾನೆ. ಇನ್ನೊಂದು ಕಡೆ ಪ್ರಭುತ್ವದ ಪರವಾಗಿ ಸಹಾಯ ಪ್ರಭುತ್ವದ ನ್ಯಾಯವಾದಿ (ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್) ಇದ್ದಾನೆ.

ಬಹಳ ಸಮಯದ ನಂತರ ರವಿ, ಸಾಂಬರನ್ನು ವಿಚಾರಿಸಲು ಕರೆದರು. ಜ್ಯುಡಿಷಿಯಲ್ ಮೆಜಿಸ್ಟ್ರೇಟ್ ಮುಂದೆ ಇದೇ ಮೊದಲನೇ ವಾಯಿದಾ.

F.I.R ಪ್ರತಿಯನ್ನು ಪೋಲೀಸರ ನಿವೇದಿಕೆಯನ್ನು ರವಿ ನ್ಯಾಯವಾದಿಗೆ ಎಸ್ ಐ ಕೊಡವನು. ಇದರಿಂದ ತನ್ನ ಕ್ಲಯಿಂಟ್ ಮೇಲೆ ಹಾಕಲಾದ ಆರೋಪಗಳು ಯಾವೆಂದು ಅವರಿಗೆ ಗೊತ್ತಾಗುತ್ತದೆ. ಈ ನಿವೇದಿಕೆಯ ಮೂಲಕ ರವಿಗೆ ವ್ಯತಿರೇಖವಾಗಿ ಪೋಲೀಸರು ಶೇಖರಿಸಿದ ಸಾಕ್ಷಿಗಳು, ಯಾವೆಂದು ಸಹ ಅವರಿಗೆ ತಿಳಿಯುತ್ತದೆ. ಈ ಕೇಸಿನಲ್ಲಿ ಆರೋಪಿಯಾದ ರವಿ ಪರವಾಗಿ ಇರುವ ನ್ಯಾಯವಾದಿ ವಾದಿಸಲು ಇದೆಲ್ಲಾ ಸಹಾಯವಾಗುತ್ತದೆ.

ತೀವ್ರವಾಗಿ ಗಾಯಗೊಳಿಸಿದ್ದಾನೆಂದು ರವಿಯ ಮೇಲೆ ಜ್ಯುಡೀಷಿಯಲ್ ಮೆಜಿಸ್ಟ್ರೇಟ್ ಮೊದಲ ವಿಚಾರಣೆಯಲ್ಲಿಯೇ ದೋಷಾರೋಪಣ ಮಾಡಿದನು. ಈ ಆರೋಪಣ ರುಜುವು ಆದರೆ 4 ವರ್ಷದವರೆಗೂ ಜೈಲು ಶಿಕ್ಷೆ ಬೀಳಬಹುದು. ರವಿ ಆರೋಪಣವನ್ನು ಅಂಗೀಕರಿಸಲಿಲ್ಲ ಆದ್ದರಿಂದ ಮೆಜಿಸ್ಟ್ರೇಟ್ ನಂತರ ವಿಚಾರಣೆಯನ್ನು 15 ದಿನಗಳಿಗೆ ವಾಯಿದೆ ಹಾಕಿದ್ದಾರೆ.

- ರವಿ ಕೇಸನ್ನು ಯಾವ ನ್ಯಾಯಸ್ಥಾನ ವಿಚಾರಿಸುತ್ತದೆ?
- ಮೊದಲ ವಿಚಾರಣೆಯಲ್ಲಿ ಏನಾಗಿದೆ?
- ಸರ್ಕಾರದ ಪರವಾಗಿ ವಾದಿಸುವ ನ್ಯಾಯ ವಾದಿಯನ್ನು ಏನೆನ್ನುತ್ತಾರೆ?





SCERT TELANGANA

## ನ್ಯಾಯಮೂರ್ತಿಯ ಪಾತ್ರವೇನು? :

ನ್ಯಾಯ ಮೂರ್ತಿ ಆಟದಲ್ಲಿ ಅಂಪೈರ್ ಇದ್ದಂತೆ. ಆತನು ವಿಚಾರಣೆಯನ್ನು ನಿಷ್ಪಕ್ಷಪಾತವಾಗಿ, ಬಹಿರಂಗವಾಗಿ ನಿರ್ವಹಿಸುವನು. ಸಾಕ್ಷಿಗಳು ಎಲ್ಲರೂ ಹೇಳುವುದು, ವಾದಿ, ಪ್ರತಿವಾದಿಗಳು ಕೊಡುವ ರುಜುವು ಗಳನ್ನು ನ್ಯಾಯಮೂರ್ತಿ ಪರಿಶೀಲಿಸುತ್ತಾನೆ. ತನ್ನ ಮುಂದೆ ಇಟ್ಟ ಸಾಕ್ಷಿಗಳ ಆಧಾರವಾಗಿ ಆರೋಪಿತ ವ್ಯಕ್ತಿ ಕಾನೂನು ಪ್ರಕಾರ ದೋಷಿ ಅವುದೋ, ಅಲ್ಲವೋ ನ್ಯಾಯಮೂರ್ತಿ ನಿರ್ಣಯಿಸುತ್ತಾನೆ. ಆರೋಪಿಯು ದೋಷಿ ಎಂದು ನಿರೂಪಿತವಾದರೆ ಶಿಕ್ಷೆ ವಿಧಿಸುತ್ತಾ ತೀರ್ಪುಕೊಡುತ್ತಾನೆ. ಕಾನೂನು ಏನು ಹೇಳುತ್ತದೋ ಎಂಬುದನ್ನು ಹಿಡಿದು ಆತನಿಗೆ ಜೈಲು ಶಿಕ್ಷೆ ನೀಡಬಹುದು ಇಲ್ಲವೇ ಜುಲ್ಮಾನ ವಿಧಿಸಬಹುದು. ಎರಡೂ ವಿಧಿಸಬಹುದು.

## ವಿವಿಧ ಅಧಿಕಾರಿಗಳ ಮಧ್ಯೆ ವಿಭಜನೆ, ಸ್ವತಂತ್ರತೆ :

ಇದಕ್ಕೆ ಮುಂದು ಅಧ್ಯಾಯದಲ್ಲಿ ನಾವು ಭಾರತ ದೇಶದ ಸಂವಿಧಾನ ಕುರಿತು ಓದಿದ್ದೇವೆ. ಸಂವಿಧಾನದಲ್ಲಿ ಮುಖ್ಯವಾದ ಅಂಶ ಕಾರ್ಯ ನಿರ್ವಾಹಕ, ನ್ಯಾಯ, ಶಾಸನ ಅಧಿಕಾರಗಳನ್ನು ಬೇರೆ ಮಾಡುವುದು. ಇದರ ಅರ್ಥ ಒಂದು ಶಾಖೆಯಲ್ಲಿ ಉಳಿದ ಶಾಖೆಗಳು ಅಂದರೆ ಉದಾಹರಣೆಗೆ ನ್ಯಾಯ ಶಾಖೆಯಲ್ಲಿ ಶಾಸನ, ಕಾರ್ಯನಿರ್ವಾಹಕ ಶಾಖೆಗಳು ಜೋಕ್ಯ ಮಾಡಿಕೊಳ್ಳವುದಿಲ್ಲ. ನ್ಯಾಯ ಸ್ಥಾನಗಳು ಸರಕಾರದ ಆಧೀನದಲ್ಲಿಲ್ಲ. ಸರ್ಕಾರದ ಪರವಾಗಿ ಕೆಲಸ ಮಾಡುವುದಿಲ್ಲ.

ಪೋಲೀಸರು ಸಹ ನ್ಯಾಯ ಶಾಖೆಯಲ್ಲಿ ಭಾಗಿಗಳು ಅಲ್ಲ. ಅವರು ಕಾರ್ಯನಿರ್ವಾಹಕ ಶಾಖೆಗೆ ಸೇರಿದವರು. ಹೋದ ವರ್ಷ ನೀವು ಜಿಲ್ಲಾ ಸ್ಥಾಯಿ ಪರಿಪಾಲನೆ ಕುರಿತು ಓದಿದ್ದೀರಿ. ಜಿಲ್ಲಾ ಸ್ಥಾಯಿಯಲ್ಲಿ ಕಲೆಕ್ಟರ್ ಇದ್ದಂತೆ, ಶಾಂತಿ ಭದ್ರತೆ ನಿರ್ವಹಣೆಗೆ ಜಿಲ್ಲಾ ಸ್ಥಾಯಿ ಪೋಲೀಸ್ ಅಧಿಕಾರಿ ಇರುತ್ತಾನೆ. ರಾಜ್ಯ ಸರ್ಕಾರದ ಹೋಂ, ಮಂತ್ರಿತ್ವ ಶಾಖೆಯ ಕೆಳಗೆ ಪೋಲೀಸ್ ಇಲಾಖೆ ಕೆಲಸ ಮಾಡುತ್ತದೆ.

ಮೇಲಿನ ವಿಭಜನೆ ಚೆನ್ನಾಗಿ ಕೆಲಸ ಮಾಡಲು ಹೈಕೋರ್ಟ್ ಸುಪ್ರೀಂಕೋರ್ಟ್ ಗಳಿಗೆ ಸೇರಿದ ನ್ಯಾಯಮೂರ್ತಿಗಳನ್ನು ಸರ್ಕಾರದಲ್ಲಿನ ಇತರ ಅಂಗಗಳ ಮಧ್ಯಸ್ಥಿಕೆ ಇಲ್ಲದಂತೆ ನಿಯಮಿಸಬೇಕು. ಒಂದು ಸಾರಿ ನ್ಯಾಯ ಮೂರ್ತಿಯನ್ನು ನಿಯಮಿಸಿದರೆ ಅವನನ್ನು ತೊಲಗಿಸುವುದು ಬಹಳ ಕಷ್ಟ.

- ತೀರ್ಪುನ್ನು ಪ್ರಭಾವಿತ ಮಾಡುವಲ್ಲಿ ರಾಜಕೀಯ ನಾಯಕರಿಗೆ ಏನಾದರೂ ಆಸ್ಕಾರ ಇದೆಯಾ? ಏತಕ್ಕಾಗಿ?
- ಸ್ವತಂತ್ರ ನ್ಯಾಯವ್ಯವಸ್ಥೆ ಎಂದರೇನು?
- ನಿಮ್ಮ ಪ್ರಾಂತದಲ್ಲಿ ಒಂದು ದೊಡ್ಡ ಕಂಪನಿ ಅಡವಿಯನ್ನು ನಾಶಮಾಡು ತ್ತದೆ ಎಂದು, ಒಬ್ಬ ಗಿರಿಜನ ಕಟ್ಟಿಗೆಗೆ ಆಗಿ ಮರದ ಕೊಂಬೆಗಳನ್ನು ಕಡಿಯುವನೆಂದು ಊಹಿಸಿಕೊಳ್ಳಿರಿ?

## ಸಾಕ್ಷಿಗಳ ರುಜುವುಗಳು

## (The Evidence of Witnesses)

ತನ್ನ ಪರವಾಗಿ ಸಾಕ್ಷಿಗಳಾಗಿ ರವಿ ಕೆಲವು ಸ್ನೇಹಿತರ ಹೆಸರುಗಳನ್ನು ಕೊಟ್ಟಿದ್ದಾನೆ. ಸಾಂಬನ ಪರವಾಗಿ F.I.R. ದಾಖಲು ಮಾಡಿದ ಆತನ ಮಗ ಕ್ರಾಂತಿ ಸಹ ಕೆಲವು ಜನರನ್ನು ಸಾಕ್ಷಿಯಾಗಿ ಹೆಸರಿಸಿ ದ್ದಾನೆ. S.I ತನ್ನ ವಿಚಾರಣೆಯ ಸಮಯ ದಲ್ಲಿ ರವಿ ಪಕ್ಕದ ಮನೆಯವರ ಇಬ್ಬರ ಹೆಸರುಗಳನ್ನು ಸಾಕ್ಷಿಗಳಾಗಿ ಬರೆದಿದ್ದಾನೆ. ಕೇಸು ಎರಡನೇ ವಾಯಿದಾ ದಿನಕ್ಕೆ ನ್ಯಾಯ ಸ್ಥಾನಕ್ಕೆ ಎಲ್ಲರೂ ಹಾಜರ್ ಆಗಬೇಕೆಂದು ಸಾಕ್ಷಿಗಳಿಗೆ ಮೆಜಿಸ್ಟ್ರೇಟ್ ನಿಂದ ಸಮನ್‌ಗಳು ಬಂದಿವೆ.

ಎರಡನೇ ವಿಚಾರಣೆ ಸಮಯಕ್ಕೆ ಸಂಬಂಧಿತ ವ್ಯಕ್ತಿಗಳೆಲ್ಲರೂ ನ್ಯಾಯ ಸ್ಥಾನಕ್ಕೆ ಬಂದರು. ಬಹಳ ಸಮಯ ನಿರೀಕ್ಷಿಸಿದ ನಂತರ ಈ ಕೇಸು ವಿಚಾರಣೆ ಪ್ರಾರಂಭವಾಯಿತು. ಮೊದಲು ಸರಕಾರದ ಪರವಾಗಿ ಸಾಕ್ಷಿಯಾಗಿರುವ ಮಹಿಳೆಯನ್ನು ಕರೆದರು. ಅಪರಾಧ ನಡೆದ ದಿನ ಘಟನೆಯ ಕ್ರಮವನ್ನು ಆಕೆ ವಿವರಿಸಿದಳು. ಪ್ರಭುತ್ವ ನ್ಯಾಯವಾದಿ, ರವಿ ಪರವಾಗಿರುವ ನ್ಯಾಯವಾದಿ ಆಕೆಗೆ ಅನೇಕ ಪ್ರಶ್ನೆಗಳನ್ನು ಕೇಳಿದರು, ಮತ್ತೆ ಮೂವರ ಸಾಕ್ಷಿಗಳ ಹೇಳಿದ್ದನ್ನು ಮೆಜಿಸ್ಟ್ರೇಟ್

SCERT TELANGANA

ಕೇಳಿ ಅವರ ಸಾಕ್ಷಿಗಳನ್ನು ದಾಖಲು ಮಾಡಿದನು. ನಂತರದ ವಿಚಾರಣೆಯನ್ನು ಮರುದಿನಕ್ಕೆ ವಾಯಿದಾ ಹಾಕಿದನು. ಈ ವಿಧವಾಗಿ ಪ್ರತಿ ಸಾರಿ ವಿಚಾರಣೆಯಲ್ಲಿ ಒಬ್ಬರಿಬ್ಬರು ಸಾಕ್ಷಿಗಳನ್ನು ವಿಚಾರಿಸಿ ಕೇಸನ್ನು ಮರುದಿನಕ್ಕೆ ವಾಯಿದಾ ಹಾಕುತ್ತಿದ್ದರು.

ವಿಚಾರಣೆಯು ಅನೇಕ ತಿಂಗಳುಗಳ ಕಾಲ ಸಾಗಿದೆ. ನ್ಯಾಯವಾದಿಗೆ ರವಿ ಹಣ ಕೊಡಬೇಕ್ಕಾಗಿ ಬಂತು. ನ್ಯಾಯ ಸ್ಥಾನಕ್ಕೆ ಹೋಗಿ ಬರುವ ಖರ್ಚಾಗುತ್ತದೆ. ಆತನ ವ್ಯಾಪಾರ ಸಹ ಕಡಿಮೆಯಾಯಿತು. ಒಂದು ವರ್ಷ ಕಳೆಯಿತು. ಕೊನೆಗೆ ರವಿಯು ದೋಷಿ ಎಂದು ನ್ಯಾಯಮೂರ್ತಿಯು ತೀರ್ಪು ಕೊಟ್ಟು ನಾಲ್ಕು ವರ್ಷ ಜೈಲು ಶಿಕ್ಷೆ ವಿಧಿಸಿದನು.

- ಯಾವ ಕೇಸಿನಲ್ಲಾಗಲೀ ಸಾಕ್ಷಿಗಳು ಹೇಳುವುದನ್ನು ಕೇಳುವ ಅವಸರ ಏನು ಚರ್ಚಿಸಿರಿ.

## ಅಪೀಲು ವಿಧಾನ :

ನ್ಯಾಯ ಮೂರ್ತಿ ನೀಡಿದ ತೀರ್ಪುನಿಂದ ರವಿ ಬಹಳ ಅಸಂತೃಪ್ತಿ ಹೊಂದಿದ್ದಾನೆ. ತಾನು ಜೈಲಿನಲ್ಲೇ ಇದ್ದರೆ ತನ್ನ ಕುಟುಂಬ ಏನಾಗುತ್ತದೆ ಎಂದು ಆಂದೋಲನ ಪಟ್ಟನು. ಕೆಳ ಸ್ಥಾಯಿ ನ್ಯಾಯ ಸ್ಥಾನ ಕೊಟ್ಟು ತೀರ್ಪುನಿಂದ ಯಾರಾದರೂ ಅಸಂತೃಪ್ತಿ ಹೊಂದಿದರೆ ಮೇಲಿನ ನ್ಯಾಯ ಸ್ಥಾನದಲ್ಲಿ ಅಪೀಲು ಮಾಡಬಹುದು.

ನಮ್ಮ ದೇಶದಲ್ಲಿ ಮೂರು ಮಟ್ಟದಲ್ಲಿ ನ್ಯಾಯ ಸ್ಥಾನಗಳಿವೆ. ಕೆಳ ಮಟ್ಟದಲ್ಲಿ ಅನೇಕ ನ್ಯಾಯ ಸ್ಥಾನಗಳು ಇದ್ದಾವೆ. ಬಹಳ ಜನರು ಆಶ್ರಯಿಸುವ ನ್ಯಾಯಸ್ಥಾನಗಳು **ಸಾಬಾರ್ಡಿನೇಟ್ ಅಥವಾ ಜಿಲ್ಲಾ ನ್ಯಾಯ ಸ್ಥಾನಗಳು** ಎನ್ನುವರು. ಇವು ಸಾಧಾರಣವಾಗಿ ಜಿಲ್ಲಾ ಇಲ್ಲವೇ ಡಿವಿಜನ್ ಮಟ್ಟದಲ್ಲಿ ಅಥವಾ ಪಟ್ಟಣಗಳಲ್ಲಿಯೇ ಇರುತ್ತವೆ. ಇವು ಅನೇಕ ವಿಧವಾದ ಕೇಸುಗಳನ್ನು ವಿಚಾರಿಸುತ್ತವೆ. ಪ್ರತಿ ರಾಷ್ಟ್ರದಲ್ಲಿ (ರಾಜ್ಯ) ಆ ರಾಷ್ಟ್ರಕ್ಕೆ ಅತ್ಯುನ್ನತವಾದ **ಹೈಕೋರ್ಟ್** ಇರುತ್ತದೆ. ದೇಶದಲ್ಲಿ ಅತ್ಯುನ್ನತವಾದ **ಸುಪ್ರೀಂ ಕೋರ್ಟ್** ಇದೆ. ಇದು ಹೊಸ ದೆಹಲಿಯಲ್ಲಿದೆ. ಇದಕ್ಕೆ ಅಧಿಪತಿಯಾಗಿ ಭಾರತ ಪ್ರಧಾನ ನ್ಯಾಯ ಮೂರ್ತಿ ಇರುತ್ತಾನೆ. ಸುಪ್ರೀಂ ಕೋರ್ಟ್ ತೆಗೆದುಕೊಳ್ಳುವ ನಿರ್ಣಯಗಳನ್ನು ಭಾರತ ದೇಶದಲ್ಲಿರುವ ಉಳಿದ ಎಲ್ಲಾ ಕೋರ್ಟುಗಳು ಬದ್ಧವಾಗಿರಬೇಕು.




SCERT TELANGANA

- ನಿಮ್ಮ ಉಪಾಧ್ಯಾಯರ ಸಹಾಯದಿಂದ ನಿಮ್ಮ ಪ್ರಾಂತಕ್ಕೆ ಸಂಬಂಧಿಸಿ ಈ ನ್ಯಾಯ ಸ್ಥಾನಗಳು ಎಲ್ಲಿವೆಯೋ ತಿಳಿದುಕೊಳ್ಳಿರಿ.
- ಕೆಳಗಿನಿಂದ ಮೇಲೆವರೆಗೆ ನ್ಯಾಯ ಸ್ಥಾನಗಳು ವ್ಯವಸ್ಥೆ ಪಿರಮಿಡ್ ಆಕಾರದ ಹೋಲಿಕೆ ಇದೆ. ಇದಕ್ಕೆ ಸಂಬಂಧಿಸಿದ ಸಮಾಚಾರವನ್ನು ಒಂದು ಚಿತ್ರದಲ್ಲಿ ತೋರಿಸಿರಿ.

## ಸೆಷೆನ್ಸ್ ಕೋರ್ಟ್‌ನಲ್ಲಿ ಅಪೀಲು :

ಜಿಲ್ಲಾ ಮುಖ್ಯಸ್ಥಾನದಲ್ಲಿನ ಸೆಷನ್ಸ್ ಕೋರ್ಟ್‌ನಲ್ಲಿ ಅಪೀಲು ಮಾಡೆಂದು ರವಿಗೆ ಆತನ ನ್ಯಾಯವಾದಿ ಸಲಹೆ ನೀಡಿದನು. ಅಪೀಲು ಮಾಡುವ ಕೆಲಸ ನನಗೆ ಬಿಡಿರಿ ಆದರೆ ಇದಕ್ಕೆ ಹೆಚ್ಚಾದ ಶುಲ್ಕವನ್ನು ನನಗೆ ಕೊಡಬೇಕಾಗುತ್ತದೆ. ಕೆಳಮಟ್ಟದಲ್ಲಿ ಬಂದ ನಿರ್ಣಯವನ್ನು ಬದಲಿಸುವ ಅಧಿಕಾರ ಈ ನ್ಯಾಯ ಸ್ಥಾನಕ್ಕೆ ಇದೆ. ನಿನ್ನ ಶಿಕ್ಷೆಯನ್ನು ಈ ನ್ಯಾಯ ಸ್ಥಾನ ತಗ್ಗಿಸಬಹುದು.

ಆದರೆ ರವಿಯ ಆಂದೋಲನ ಕಡಿಮೆ ಆಗಲಿಲ್ಲ. ಕೇಸಿಗೆ ಮೇಲಿಂದ ಮೇಲೆ ಹಾಜರಾಗಬೇಕಲ್ಲ ಎಂದು ಆಲೋಚಿಸುತ್ತಿದ್ದಾನೆ. ಜಿಲ್ಲಾ ಪ್ರಧಾನ ಕೇಂದ್ರ ಬಹಳ ದೂರವಿದೆ. ಸಾಕ್ಷಿಗಳೆಲ್ಲರೊಂದಿಗೆ ಅಷ್ಟು ದೂರ ಹೋಗಿ ಬರುವುದು ಬಹಳ ಖರ್ಚಿನಿಂದ ಕೂಡಿಕೊಂಡಿರುವಂಹದು ಅಷ್ಟು ಖರ್ಚು ಭರಿಸುವುದಾದರೂ ಹೇಗೆಂದು? ರವಿ ಅಂದನು. ಸೆಷನ್ಸ್ ಕೋರ್ಟ್‌ನಲ್ಲಿ ರವಿ ಒಂದೆರಡು ವಾಯಿದಾಗಳಿಗೆ ಹಾಜರಾದರೆ ಸರಿಹೋಗುತ್ತದೆ ಎಂದು, ಉಳಿದ ವಿಚಾರಣೆ ಎಲ್ಲವೂ ದಸ್ತ್ರದ ಆಧಾರವಾಗಿ ನಡೆಯುತ್ತದೆ ಎಂದು ನ್ಯಾಯವಾದಿ ಹೇಳಿದನು.

ಆತನ ಪರವಾಗಿ ರವಿಯ ನ್ಯಾಯವಾದಿ ಸೆಷನ್ಸ್ ಕೋರ್ಟಿನಲ್ಲಿ ಅಪೀಲು ಹಾಕಿದ್ದಾನೆ. ಜ್ಯುಡಿಷಿಯಲ್ ಮೆಜಿಸ್ಟ್ರೇಟ್ ಕೊಟ್ಟ ತೀರ್ಪನ್ನು ಸೆಷನ್ಸ್ ಕೋರ್ಟ್ ನಿಲ್ಲಿಸಿದೆ. ಇದರ ಅರ್ಥ ಈಗಲೇ ಜೈಲಿಗೆ ಹೋಗಬೇಕಾದ ಅವಸರವಿಲ್ಲ. ಸೆಷನ್ಸ್ ಕೋರ್ಟಿಗೆ ರವಿ ಒಂದು ಸಾರಿ ಹಾಜರಾದರೆ ಸರಿಹೋಗಿದೆ. ಸಾಂಬ ಆತನ ಪರವಾಗಿ ಸಾಕ್ಷಿಗಳು ಹಾಜರಾಗುವ ಕೆಲಸವಿಲ್ಲ. ಉಳಿದ ವಾಯಿದಗಳನ್ನು ನ್ಯಾಯಾವಾದಿ ನೋಡಿಕೊಂಡನು. ತೀರ್ಪು ಹೇಳಲು ಸೆಷನ್ಸ್ ಕೋರ್ಟ್ ಎರಡು ವರ್ಷ ಹಿಡಿಯಿತು. ರವಿಯನ್ನು ದೋಷಿಯಾಗಿ ನಿರ್ಧರಿಸಿ, ಆದರೆ ಶಿಕ್ಷೆಯನ್ನು ವರ್ಷಕ್ಕೆ ತಗ್ಗಿಸಿತು.

- ರವಿಯ ಶಿಕ್ಷೆಯನ್ನು ಸೆಷನ್ಸ್ ಕೋರ್ಟ್ ತಗ್ಗಿಸಲು ಕಾರಣಗಳನ್ನು ಊಹಿಸಿರಿ?



*ಚಿತ್ರ 15.1 : ಆಂಧ್ರಪ್ರದೇಶ್ ಹೈಕೋರ್ಟ್,ಹೈದರಾಬಾದು.*



SCERT TELANGANA

### ಹೈಕೋರ್ಟ್ :

ಸೆಷನ್ಸ್ ಕೋರ್ಟ್ ಕೊಟ್ಟ ತೀರ್ಪಿನಿಂದ ಸಹ ರವಿಯು ಸಂತೋಷಪಡಲಿಲ್ಲ. ಈ ಕೋರ್ಟಿನಲ್ಲಿ ಆದ ನಿರ್ಣಯಗಳ ಮೇಲೆ ರಾಜ್ಯದ ಅತ್ಯುನ್ನತ ನ್ಯಾಯ, ಸ್ಥಾನವಾದ ಹೈಕೋರ್ಟ್‌ನಲ್ಲಿ ಅಪೀಲು ಮಾಡಬಹುದು ಎಂದು ನ್ಯಾಯವಾದಿ ಸಲಹೆ ಕೊಟ್ಟನು. ಆರೋಪಿಗಳನ್ನಾಗಲೀ, ಸಾಕ್ಷಿಗಳನ್ನಾಗಲೀ ಹೈಕೋರ್ಟ್ ಕರೆಯದು. ಕೇಸಿಗೆ ಸಂಬಂಧಿಸಿದ ದಸ್ತ್ರಗಳ ಆಧಾರವಾಗಿ ಅದು ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದೆ. “ನಿನಗೆ ಹಾಕಿದ ಶಿಕ್ಷೆಯನ್ನು ಇನ್ನೂ ಕಡಿಮೆ ಮಾಡಿಕೊಳ್ಳಲು ನೀವು ಹೈಕೋರ್ಟಿನಲ್ಲಿ ಅಪೀಲು ಮಾಡಿಕೊಳ್ಳಬೇಕೆಂದು ಕೊಂಡರೆ ನಾನು ಈ ಕೇಸನ್ನು ಹೈಕೋರ್ಟ್‌ನಲ್ಲಿ ಹಾಕುತ್ತೇನೆ”. ಎಂದು ನ್ಯಾಯವಾದಿ ಹೇಳಿದ.

ರವಿಯು ತನ್ನ ನ್ಯಾಯವಾದಿಗೆ ಇನ್ನಷ್ಟು ಹಣವನ್ನು ನೀಡಿ ಹೈಕೋರ್ಟ್‌ಗೆ ಅಪೀಲು ಮಾಡಲು ಹೇಳಿದನು. ಅಪೀಲು ಮಾಡಿ ಕೆಲವು ತಿಂಗಳುಗಳ ಕಾಲ ವಿಚಾರಣೆ ನಡೆದ ನಂತರ ಸೆಷನ್ಸ್ ಕೋರ್ಟ್ ನಿರ್ಣಯವನ್ನೇ ನಿರ್ಧರಿಸುತ್ತಾ ಹೈಕೋರ್ಟ್ ತನ್ನ ತೀರ್ಪು ನೀಡಿತು. ಅಂದರೆ ರವಿಗೆ ಹೈಕೋರ್ಟ್‌ನಲ್ಲಿ ಸೋಲು ಉಂಟಾಯಿತು. ಸೆಷನ್ಸ್ ಕೋರ್ಟ್ ವಿಧಿಸಿದ ಶಿಕ್ಷೆಯನ್ನು ಅನುಭವಿಸಬೇಕು.

ಈಗ ರವಿಯ ಮುಂದೆ ಎರಡು ಮಾರ್ಗಗಳು ಇವೆ. ಮೊದಲನೆಯದು ಜೈಲು ಶಿಕ್ಷೆ ಅನುಭವಿಸುವುದು, ಎರಡನೆಯದು ಸುಪ್ರೀಂ ಕೋರ್ಟ್‌ಗೆ ಅಪೀಲು ಮಾಡುವುದು. ಈ ಎಲ್ಲಾ ವ್ಯವಹಾರದಿಂದ ರವಿ ದಣಿದು ಬೇಸತ್ತುಕೊಂಡಿದ್ದಾನೆ. ಆದರಿಂದ ರವಿಯ ವ್ಯವಹಾರ ಹೈಕೋರ್ಟಿನೊಂದಿಗೆ ಮುಕ್ತಾಯವಾಯಿತು.

ಇಲ್ಲಿಯವರೆಗೆ ನಾವು ರವಿ ಮತ್ತು ಸಾಂಬಾರ ಮಧ್ಯೆ ನಡೆದಿರುವ ಕಲಹಗಳು, ಅವರು ಯಾರಾರನ್ನು ಆಶ್ರಯಿಸಿ ಎಂತಹ ನ್ಯಾಯ ಪಡೆದರೋ ದೂರು ಸಲ್ಲಿಸುವುದು, ನಮೋದಿಸುವುದು, ವಿಚಾರಣೆ ನಡೆಸುವುದಂತಹ ನ್ಯಾಯ ಪ್ರಕ್ರಿಯೆಗಳ ಕುರಿತು ತಿಳಿದುಕೊಂಡೆವು. ಅಲ್ಲವೆ! ಮಕ್ಕಳ ಭದ್ರತೆ ವಿಷಯದಲ್ಲಿ ಅವರು ಎದುರಿಕೊಳ್ಳುವ ಸಮಸ್ಯೆಗಳನ್ನು ಪರಿಷ್ಕರಿಸಲು ಕೂಡಾ ಪ್ರತ್ಯೇಕ ನ್ಯಾಯಾಲಯಗಳು ಇವೆ. ಅವು ದೊಡ್ಡವರ ನ್ಯಾಯಾಲಯಗಳಿಗಿಂತ ಪೂರ್ತಿ ಭಿನ್ನವಾಗಿ ಕಾರ್ಯನಿರ್ವಹಿಸುತ್ತಿವೆ.

ಭಾರತ ಸರ್ಕಾರ ಮಕ್ಕಳ ಆಸೆ-ಆಕಾಂಕ್ಷೆಗಳನ್ನು, ಭದ್ರತೆಯನ್ನು ಪರಿರಕ್ಷಿಸುವುದು ಒಂದು ಪ್ರತ್ಯೇಕ ಕಾನೂನು ಜಾರಿಗೆ ತಂದಿದೆ. ಅಂತಹ ಮಕ್ಕಳ ಮೇಲೆ ಲೈಂಗಿಕ ಹಿಂಸೆ ನಿರೋಧಿಸುವ ಕಾನೂನು-2012 (POCSO Act - 2012) ಈ ಕಾನೂನು ಮಕ್ಕಳ ಕುರಿತು ಲೈಂಗಿಕ ಹಿಂಸೆಗಳನ್ನು ಅಶ್ಲೀಲ ಚಿತ್ರಗಳನ್ನು ತೋರಿಸುವುದು ತಡೆಗಟ್ಟುತ್ತದೆ. ಪ್ರತಿ ಹಂತದಲ್ಲಿ ಮಕ್ಕಳ ಆಸಕ್ತಿಗಳನ್ನು ಕಾಪಾಡುತ್ತಾ ಅವರೊಂದಿಗೆ ಸಹೃದಯದಿಂದ ವ್ಯವಹರಿಸುವ ಹಾಗೆ ಪ್ರತ್ಯೇಕ ನ್ಯಾಯಾಲಯಗಳು ಕ್ರಮ ಕೈಗೊಳ್ಳುತ್ತಿವೆ. ಆದ್ದರಿಂದ ಮಕ್ಕಳಿಗೆ ಇಂತಹ ಸಮಸ್ಯೆಗಳು ಎದುರಾದಾಗ ಸಂಕೋಚಿಸದೇ ನಿರ್ಭಯದಿಂದ ತಕ್ಷಣವೇ ತಂದೆ-ತಾಯಂದಿರಿಗೆ ತಿಳಿಸಬೇಕು. ತಂದೆ-ತಾಯಂದಿರು ಪೋಲಿಸರಿಗೆ (Special Juvenile Police Unit) ಅಲ್ಲದೆ 1098ಗೆ ಕರೆ ಮಾಡಬೇಕು. ಪ್ರತ್ಯೇ ಬಾಲ ಅಪರಾಧಿಗಳ ಪೋಲೀಸು ವಿಭಾಗ ಪ್ರತಿ ಜಿಲ್ಲೆಯಲ್ಲಿ ಇರುತ್ತದೆ. ಮಕ್ಕಳ ಮೇಲೆ ಲೈಂಗಿಕ ಹಿಂಸೆಗಳಿಂದ ತಡೆಹಿಡಿಯಲು ಪ್ರತ್ಯೇಕ ನ್ಯಾಯಾಲಯಗಳನ್ನು ಏರ್ಪಾಟು ಮಾಡಿದೆ. ಈ ಕಾನೂನಿನ ಪ್ರಕಾರ ಪ್ರತ್ಯೇಕ ನ್ಯಾಯಸ್ಥಾನದ ನ್ಯಾಯಾಧೀಶರು, ಬಾಧಿತ ಮಕ್ಕಳ ವಾಂಗ್ಮೂಲಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಾರೆ.

- ಆರೋಪಿಗಳನ್ನಾಗಲೀ, ಸಾಕ್ಷಿಗಳನ್ನಾಗಲೀ ಹೈಕೋರ್ಟ್ ತನ್ನ ಮುಂದೆ ಬರಲು ಹೇಳುವುದಿಲ್ಲ? ಏಕೆ?
- ನಮ್ಮ ತಂದೆಗೆ ನ್ಯಾಯ ಜರುಗಿದೆ ಆದರೆ ಬಹಳ ತಡವಾಗಿದೆ - ಎಂದು ಕ್ರಾಂತಿ ನುಡಿದನು. ನೀವು ಆತನೊಂದಿಗೆ ಏಕೀಭವಿಸುವಿರಾ?

### ಮುಖ್ಯ ಪದಗಳು

| | |
|---|---|
| 1. ಆರೋಪಿ | 2. ಎಫ್.ಐ.ಆರ್. |
| 3. ಅಪರಾಧ | 4. ವಿಚಾರಣೆ |
| 5. ಅರೆಸ್ಟ್ (ಬಂಧನ) | 6. ಸಮನ್ |
| 7. ಸಾಕ್ಷಿ | 8. ನ್ಯಾಯವಾದ ವಿಚಾರಣೆ |
| 9. ತೀರ್ಪು | 10. ಮೇಲ್ಮನವಿ (Appeal) |
| 11. ಒಪ್ಪಂದ ಉಲ್ಲಂಘನೆ | 12. ವಾಜ್ಯದಾರ |
| 13. ಪ್ರಭುತ್ವ ನ್ಯಾಯವಾದಿ | 14. ಬೆಯಿಲ್ |
| 15. ಮೆಜಿಸ್ಟ್ರೇಟ್ | |



SCERT TELANGANA

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿರಿ.

1. ತಪ್ಪು ಇರುವ ವಾಕ್ಯಗಳನ್ನು ಸರಿಮಾಡಿರಿ.
   - F.I.R.ನ್ನು ಕೋರ್ಟಿನಲ್ಲಿ ದಾಖಲು ಮಾಡುತ್ತಾರೆ.
   - ಪೋಲೀಸರು ಅರೆಸ್ಟ್ ಮಾಡುವುದೆಂದರೆ ಶಿಕ್ಷಿಸುವುದಕ್ಕೆ ಸಮಾನವು.
   - ಹಾಮಿಗಳು (Sureties) ಆಧಾರವಾಗಿ ಬೆಯಿಲ್ ಮಂಜೂರು ಮಾಡುತ್ತಾರೆ.
   - ದೇಶದಲ್ಲಿ ಅತ್ಯುನ್ನತ ಕೋರ್ಟ್ ಸುಪ್ರಿಂಕೋರ್ಟ್.
2. ರವಿಯ ವಿಷಯದಲ್ಲಿ ಮೊದಲ ವಿಚಾರಣೆಯಿಂದ ಹೈಕೋರ್ಟಿನಲ್ಲಿ ಕಡೆಯ ತೀರ್ಪು ಬರುವವರೆಗೆ ಏನು ನಡೆದಿದೋ ಈ ಪಟ್ಟಿಕೆಯಲ್ಲಿ ವಿವರಿಸಿರಿ.

| ಸಾಕ್ಷಿಗಳ ಪಾತ್ರ | ಕೊಟ್ಟ ಶಿಕ್ಷೆ | ರವಿ ಹಾಜರಾಗುವ ಅವಸರ |
|---|---|---|
| | | |
| | | |

3. ಕ್ರಿಮಿನಲ್, ಸಿವಿಲ್ ಕೇಸುಗಳ ಮಧ್ಯ ವ್ಯತ್ಯಾಸಗಳ ಕುರಿತು ಒಂದೊಂದು ವಾಕ್ಯ ಬರೆಯಿರಿ. (a) ಶಿಕ್ಷೆ, ಜೈಲು b) ಪ್ರಭುತ್ವ ನ್ಯಾಯವಾದಿಗಳು; c) FIR ದಾಖಲೆ.
4. ಹೈಕೋರ್ಟ್ ನಿರ್ಣಯವನ್ನು ಸೆಷನ್ಸ್ ಇಲ್ಲವೇ ಜಿಲ್ಲಾ ಕೋರ್ಟ್ ಬದಲಿಸಬಹುದಾ?
5. ಸೆಷನ್ಸ್ ಕೋರ್ಟ್ ತೀರ್ಪು ಮತ್ತು ಹೈಕೋರ್ಟಿನ ತೀರ್ಪಿನೊಂದಿಗೆ ಯಾರಾದರೂ ಸಂತೃಪ್ತಿ ಹೊಂದದೇ ಇದ್ದರೆ ಅವರು ಏನು ಮಾಡಬಹುದು ?
6. S.H.O. ಮೆಜಿಸ್ಟ್ರೇಟ್‌ಗಳ ಪಾತ್ರದಲ್ಲಿ ವ್ಯತ್ಯಾಸಗಳು ಯಾವುವು?
7. ನಿಮ್ಮ ಅಭಿಪ್ರಾಯದಲ್ಲಿ ರವಿಯ ವಿಷಯದಲ್ಲಿ ತೀರ್ಪು ಹೇಗೆ ಇರಬೇಕು?
8. ಒಬ್ಬ ವ್ಯಕ್ತಿ ಪೋಲೀಸ್ ಸ್ಟೇಷನ್‌ನಲ್ಲಿ ತನ್ನ ತಪ್ಪು ಒಪ್ಪಿಕೊಂಡಿದ್ದಾನೆ. ಪೋಲೀಸರು ಆತನನ್ನು ಆರು ತಿಂಗಳ ಕಾಲ ಬಂಧಿಸಿದರು. ಇದು ಸರಿಯಾದ ವಿಧಾನವೇ? ನಿಮ್ಮ ಸಮಾಧಾನಕ್ಕೆ ಕಾರಣಗಳನ್ನು ಹೆಸರಿಸಿರಿ.
9. ಮಕ್ಕಳ ಬಗ್ಗೆ ದೊಡ್ಡವರ ಪ್ರವರ್ತನೆ ಹೇಗೆ ಇರಬೇಕು ? ಭದ್ರತಾ ದೃಷ್ಟಿಯಿಂದ ಕೆಲವು ಸೂಚನೆಗಳನ್ನು ಮಾಡಿರಿ ?
10. ನಿನ್ನನ್ನು ಒಬ್ಬರು ಪೀಡಿಸುತ್ತಿದ್ದಾರೆ ಎಂದು ಊಹಿಸಿಕೊ. ಅದಕ್ಕೆ ಸಂಬಂಧಿಸಿ ಎಲ್ಲ ವಿವರಗಳನ್ನು ಸರಿಜೋಡಿಸುತ್ತಾ ಪೋಲಿಸ ಅಧಿಕಾರಿಗಳಿಗೆ ಫಿರಿಯಾದಿ ಬರೆಯಿರಿ.

ಚರ್ಚೆ :

1) ಗ್ರಾಮಗಳಲ್ಲಿ / ಕುಟುಂಬಗಳಲ್ಲಿ ಆಗಾಗ ವಿವಾದಗಳು ಏಕೆ ಉಂಟಾಗುತ್ತವೆ ? ಅದಕ್ಕೆ ಕಾರಣಗಳೇನು ? ವಿವಾದಗಳುಂಟಾಗದಂತೆ ಇರಬೇಕಾದರೆ ನಮ್ಮಲ್ಲಿ ಎಂತಹ ಬದಲಾವಣೆ ಬರಬೇಕು ?

2) ಅಪರಾಧ ಮಾಡಿ ಜೈಲಿಗೆ ಹೋದ ಕುಟುಂಬಗಳ ಪರಿಸ್ಥಿತಿಗಳ ಬಗ್ಗೆ ಚರ್ಚಿಸಿರಿ. ಅಂತಹ ವ್ಯಕ್ತಿಗಳನ್ನು ಶಾಲೆಗೆ ಕರೆದು ಜೈಲು ಜೀವನ ಸ್ವೇಚ್ಛಾ ಜೀವನದ ಬಗ್ಗೆ ಮಾತನಾಡಿ.

SCERT TELANGANA

3) ಪೋಲೀಸ್ ಅಧಿಕಾರಿಯನ್ನಾಗಲಿ, ನ್ಯಾಯವಾದಿಯನ್ನಾಗಲೀ ಶಾಲೆಗೆ ಆಹ್ವಾನಿಸಿ, ವಿವಿಧ ಅಪರಾಧಗಳು, ಅವುಗಳಿಗಾಗುವ ಶಿಕ್ಷೆ ಕುರಿತು ಮತ್ತು ಅಪರಾಧಿಗಳಾಗದಂತೆ ಇರಲು ಅವರು ಹೇಗೆ ನಡೆದುಕೊಳ್ಳಬೇಕು ಚರ್ಚಿಸಿರಿ.

## ಪ್ರಾಜೆಕ್ಟು :

ಶಾಂತಿನಗರ ಎನ್ನು ವಪಟ್ಟಣವಿದೆ. ಮರುದಿವಸ ಅಲ್ಲಿಂದ 40 ಕಿಲೋಮೀಟರ್ ದೂರದಲ್ಲಿನ ಪಟ್ಟಣದಲ್ಲಿ ಫಿಯಸ್ಸಾ, ಜುಬಿಲೀ ಎನ್ನುವ ಪುಟ್‌ಬಾಲ್ ತಂಡಗಳ ಮಧ್ಯ ಕಡೆಯ ಸ್ಪರ್ಧೆ ನಡೆಯಬೇಕಾಗಿದೆ. ಆದರೆ ಮರುದಿನ ಮೈದಾನವನ್ನು ಜುಬಿಲೀ ತಂಡದ ಬೆಂಬಲಿಗರು ನಾಶಗೊಳಿಸಿದ್ದಾರೆಂದು ಗೊತ್ತಾಗಿದೆ. ಶಾಂತಿನಗರದಲ್ಲಿ ಫಿಯಸ್ಸಾ ಬೆಂಬಲಿಗರು ಜುಬಿಲೀ ಬೆಂಬಲಿಗರ ಮನೆಗಳ ಮೇಲೆ ಮಾರಣಾಯುಧಗಳಿಂದ ದಾಳಿ ಮಾಡಿದರು. ಈ ದಾಳಿಯಲ್ಲಿ ಹತ್ತು ಮಂದಿ ಪುರುಷರು ಸತ್ತಿದ್ದಾರೆ. ಐದು ಜನ ಮಹಿಳೆಯರು ತೀವ್ರವಾಗಿ ಗಾಯಗೊಂಡಿದ್ದಾರೆ. ಬಹಳ ಮನೆಗಳು ನಾಶಗೊಂಡಿವೆ ಐವತ್ತು ಮಂದಿ ಜನರಿಗೆ ಗಾಯಗೊಳಗಿದ್ದಾರೆ.

ನೀವು ನಿಮ್ಮಮಿತ್ರು ನೇರ ನ್ಯಾಯ ವ್ಯವಸ್ಥೆಯಲ್ಲಿ ಭಾಗವೆಂದು ಊಹಿಸಿಕೊಳ್ಳಿರಿ. ಮೊದಲು ತರಗತಿಯಲ್ಲಿನ ವಿದ್ಯಾರ್ಥಿಗಳನ್ನು ಈ ಕೆಳಗೆ ಹೇಳಿದಂತೆ ವಿಭಜಿಸಿರಿ.

1.ಪೋಲೀಸ್ 2. ಪ್ರಭುತ್ವ ನ್ಯಾಯವಾದಿ 3. ಆರೋಪಿ ಪರ ನ್ಯಾಯವಾದಿ 4. ನ್ಯಾಯ ಮೂರ್ತಿ

ಫಿಯಾಸ್ಸಾ ಅಭಿಮಾನಿಗಳ ಹಿಂಸೆಯಿಂದ ಪ್ರಭಾವಿತರಾದವರಿಗೆ ನ್ಯಾಯವನ್ನು ಕೊಡಲು ಏನೇನು ಮಾಡಬೇಕೆಂಬುದನ್ನು ಒಂದೊಂದು ಬೃಂದಕ್ಕೆ ಆಯುಕ್ತೊಳ್ಳಿರೆಂದು ಹೇಳಿರಿ. ಈ ಕರ್ತವ್ಯಗಳು ಯಾವ ಕ್ರಮದಲ್ಲಿ ಜರುಗುತ್ತವೆ.

- ಇದೇ ಪರಿಸ್ಥಿತಿಯನ್ನು ತೆಗೆದುಕೊಂಡು ಫಿಯಾಸ್ಸಾ ಪುಟ್‌ಬಾಲ್ ತಂಡ ಅಭಿಮಾನಿಯಾದ ಒಬ್ಬ ವಿದ್ಯಾರ್ಥಿಯು ಮೇಲಿನ ಕರ್ತವ್ಯವನ್ನು ನಿರ್ವಹಿಸಿರಿ ಎಂದು ಹೇಳಿರಿ. ನೇರ ನ್ಯಾಯವ್ಯವಸ್ಥೆಯಲ್ಲಿ ಎಲ್ಲಾ ವಿಧಿಗಳನ್ನು ಒಬ್ಬರೇ ನಿರ್ವಹಿಸುವುದರಿಂದ ಬಾದಿತರಿಗೆ ನ್ಯಾಯ ಜರುಗುತ್ತದಾ? ನಿಮ್ಮ ಉತ್ತರಗಳಿಗೆ ಕಾರಣಗಳನ್ನು ಹೆಸರಿಸಿರಿ.
- ನೇರ ನ್ಯಾಯ ವ್ಯವಸ್ಥೆಯಲ್ಲಿ ವಿವಿಧ ಪಾತ್ರಗಳನ್ನು ವಿವಿಧ ವ್ಯಕ್ತಿಗಳು ಪೋಷಿಸಲು ಎರಡು ಕಾರಣಗಳನ್ನು ಹೆಸರಿಸಿರಿ?

SCERT TELANGANA

ಘಟಕ 16

# ಜಮಿಂದಾರೀ ವ್ಯವಸ್ಥೆ ರದ್ದು

## ಸ್ವಾತಂತ್ರ್ಯ ಬಂದಾಗ ಗ್ರಾಮೀಣ ಬಡತನ :

ಭಾರತ ದೇಶ ಸ್ವಾತಂತ್ರ್ಯ ದೇಶವಾದಾಗ ಅದು ಎದುರಿಸುವ ಸಮಸ್ಯೆಗಳಲ್ಲಿ ಪ್ರಮುಖವಾದುದು ಬಡತನ. ಗ್ರಾಮೀಣ ಪ್ರಾಂತಗಳಲ್ಲಿ ಇನ್ನೂ ಹೆಚ್ಚು. ಗ್ರಾಮ ಜನಾಭದಲ್ಲಿ ಹೆಚ್ಚಾಗಿ (55ಶಾತಂ) ಅಂದರೆ 18.6 ಕೋಟಿ ಜನಸಂಖ್ಯೆ ತೀವ್ರ ಬಡತನದಲ್ಲಿತ್ತೆಂದು ಅಂದಾಜು. ಅವರಿಗೆ ಭೂಮಿ ಇಲ್ಲ ಬೇರಾವ ಸಂಪನ್ಮೂಲವಿಲ್ಲ. ಕನಿಷ್ಟ ಉಪಾದಿ ಹೊಂದಲು ವಿದ್ಯೆಯೂ ಇಲ್ಲ. ನಿಜವಾಗಿ ಹೇಳಬೇಕಾದರೆ ಉಪಾಧಿಗೆ ಅವಕಾಶವೇ ಇಲ್ಲ. ಕಡಿಮೆ ಕೂಲಿ ಸಿಗುವ ವ್ಯವಸಾಯ ಕೆಲಸಗಳು ಮಾತ್ರ ಅವರಿಗೆ ಸಿಗುತ್ತಿದ್ದವು. ವ್ಯವಸಾಯ ದಾರರಲ್ಲಿ ಬಹಳ ಜನರಿಗೆ ಭೂಮಿಇಲ್ಲ. ಅವರಲ್ಲಿ ಕೆಲವರು ಭೂ ಮಾಲಿಕರ ಹತ್ತಿರ ಭೂಮಿಯನ್ನು ಗುತ್ತಿಗೆಗೆ ಬೇಸಾಯ ಮಾಡುತ್ತಿದ್ದರು. ಭೂ ಮಾಲಿಕರ ಹೊಲಗಳಲ್ಲಿ ಕೂಲಿ ಇಲ್ಲದಂತೆಯೇ ಕೆಲಸ ಮಾಡಬೇಕಾಗಿತ್ತು. ಮೇಲಿಂದ ಮೇಲೆ ಬರಗಾಲ, ಸಾಂಕ್ರಾಮಿಕ ರೋಗಗಳು ಸಂಭವಿಸಿ ವಿನಾಶವನ್ನು ಸೃಷ್ಟಿಸುತ್ತಿದ್ದವು. ಹಸಿವು ಯಾವಾಗಲೂ ಅವರನ್ನು ಹಿಂಬಾಲಿಸುತ್ತಲೇ ಇರುತ್ತದೆ.

ಸ್ವಾತಂತ್ರ್ಯ ಬಂದ ಮೇಲೆ ಗ್ರಾಮೀಣ ಬಡತನವನ್ನು ಕಡಿಮೆ ಮಾಡಲು ಬಡವರಿಗೆ ಬೇಸಾಯ ಭೂಮಿ ನೀಡಬೇಕೆಂದು ಬಹಳ ಜನರು ಗುರ್ತಿಸಿದರು. ಜಮಿಂದಾರಿ ವ್ಯವಸ್ಥೆ ಅಲ್ಲವೇ ಭೂಸಾಮ್ಯ ವಿಧಾನವನ್ನು ರದ್ದುಮಾಡುವ ಮೂಲಕ ಇದು ಸಾಧ್ಯವಾಗುತ್ತದೆ ಎಂದು ಅಂದುಕೊಂಡರು. ಬ್ರಿಟಿಷ್ ಕಾಲದಲ್ಲಿನ ನಿರಸನಗಳು, ರೈತು ಕೂಲಿ ಸಮಸ್ಯೆಗಳು. ಅವರ ಬೇಡಿಕೆಗಳು ಅವರ ಆಸೆಗಳ ಮೇಲೆ ದೃಷ್ಟಿ ಕೇಂದ್ರೀಕರಿಸಿದ್ದಾರೆ. ಸರ್ಕಾರ ತೆರಿಗೆಗಳನ್ನು ಕಡಿಮೆ ಮಾಡಬೇಕೆಂದ್ದು, ಬಡ್ಡೀ ವ್ಯಾಪಾರಿಗಳ ಬಂಧನದಿಂದ, ಜಮೀಂದಾರರ ದುರಾಡಳಿತದಿಂದ ತಮ್ಮನ್ನು ವಿಮುಕ್ತಿ ಮಾಡಬೇಕೆಂದು ಇವರು ಕೋರಿಕೊಂಡರು. ಭೂಮಿಯನ್ನು ಸಾಗುವಳಿ ಮಾಡುವವರಿಗೆ ಭೂಮಿ ಸೇರಬೇಕು ಎಂದುಕೊಂಡರು. ಸಾಗುವಳಿ (ಬೇಸಾಯ) ಮಾಡುವವರಿಗೆ ಭೂಮಿ ('Land to the Tiller) ಎಂದು ನಿನಾದ ಮಾಡಿದರು !

- ಗ್ರಾಮೀಣ ಬಡವರಿಗೆ ಆದಾಯ ತರುವ ಉಪಾದಿ ಕಲ್ಪಿಸುವ ಇನ್ನೂ ಬೇರೆ ಮಾರ್ಗಗಳಿವೆಯೆಂದು ನೀವು ಭಾವಿಸುವಿರಾ?
- ನಿಮ್ಮ ಪ್ರಾಂತದಲ್ಲಿ ನಾಲ್ವರು ವ್ಯಕ್ತಿಗಳಿರುವ ಒಂದು ಕುಟುಂಬಕ್ಕೆ ಗೌರವ ಪ್ರದವಾಗಿ ಜೀವನ ನಡೆಸಲು ಎಷ್ಟು ಭೂಮಿ ಇದ್ದರೆ ಸರಿಹೋಗುತ್ತದೆ. (ನೀರಿನ ವಸತಿ ಇರುವ / ಇಲ್ಲದೇ ಇರುವ ಭೂಮಿ ಬೇರೆ – ಬೇರೆಯಾಗಿ ಇರುವಂತೆ ತಿಳಿಸಿರಿ?
- 'ಸಾಗುವಳಿ ಮಾಡುವವನಿಗೆ ಭೂಮಿ' ಎಂಬ ನಿನಾದದಿಂದ ಸಾಗುವಳಿದಾರನಿಗೆ ಭೂಮಿ ಸಿಗುತ್ತದೆ. ಆದರೆ ಕೂಲಿ ಕೆಲಸ ಮಾಡುವ ವ್ಯವಸಾಯ ಕೂಲಿ ಪರಿಸ್ಥಿತಿ ಏನು ?

## ಜಮೀಂದಾರೀ, ಇತರ ಮಧ್ಯವರ್ತಿಗಳು ರದ್ದು :

ಜಮೀಂದಾರೀ ವ್ಯವಸ್ಥೆಯನ್ನು ರದ್ದು ಪಡಿಸುವ ಕಾನೂನನ್ನು ಎಲ್ಲಾ ರಾಜ್ಯ ಸರ್ಕಾರಗಳು 1950 ಜಾರಿಗೆ ತಂದವು. ಬಲವಂತವಾಗಿ ಚಾಕರಿ ಮಾಡಿಸಿಕೊಳ್ಳುವ (ಸೇವೆ) ಬಿಟ್ಟಿಚಾಕರಿ, ಚೀಗಾರ್ ಅಂತಹವುಗಳನ್ನು ರದ್ದುಮಾಡಿದರು. ಇದರಿಂದ ಗ್ರಾಮೀಣ ಪ್ರಜೆಗಳ ಮುಖ್ಯವಾದ ಸಮಸ್ಯೆ ಒಂದು ಪರಿಷ್ಕಾರವಾಯಿತು.

ಭೂಸ್ವಾಮಿ (ಭೂಮಾಲಿಕರ) ಗಳ ಆದಿಪತ್ಯ ಮೂರುವಿಧವಾಗಿದೆಯೆಯೆಂದು ಗುರ್ತಿಸಿದ್ದಾರೆ. ಒಂದು ಭೂಮಿ ಶಿಸ್ತು ವಸೂಲಿ. ಎರಡನೆಯದು ಸಾಗು ಭೂಮಿಯ ಮೇಲೆ ನಿಯಂತ್ರಣೆ, ಇದು ಎರಡು ವಿಧವಾಗಿದೆ. ಗುರ್ತಿಸಿದ ಸಾಗುವಳಿದಾರರು ಸಾಗುಮಾಡುವ ಭೂಮಿ, ಭೂ ಮಾಲಿಕರೇ ನೇರವಾಗಿ ಸಾಗುವಳಿ ಮಾಡುವ ಭೂಮಿ ಎಂದಿದೆ. ಮೂರನೆಯದು, ಅಡಿವಿ, ಭಂಜರು ಭೂಮಿ ಮೇಲೆ ನಿಯಂತ್ರಣೆ, ಭೂ ಸಂಸ್ಕರಣೆ ಕಾನೂನು ಇದನ್ನು ಹೇಗೆ ಪರಿಷ್ಕರಿಸಿದೆಯೋ ನೋಡೋಣ. .



SCERT TELANGANA

i. ಮೊದಲು ಜಮಿಂದಾರರು ಭೂಮಿ ಶಿಸ್ತು ವಸೂಲು ಮಾಡುವ ವಿಧಾನವನ್ನು ರದ್ದು ಮಾಡುವ ಕಾನೂನು ಮಾಡಿದರು. ಅಲ್ಲಿಂದ ಭೂಮಿ ಇರುವವರೆಲ್ಲರೂ ಸರ್ಕಾರಕ್ಕೆ ನೇರವಾಗಿ ತೆರಿಗೆಯನ್ನು ಕಟ್ಟಬೇಕು. ಇದರಿಂದ ಜಮೀಂದಾರರು ಆದಾಯವನ್ನು ಕಳೆದುಕೊಳ್ಳುವರು. ಅದಕ್ಕಾಗಿ ಸರ್ಕಾರ ಅವರಿಗೆ ನಷ್ಟ ಪರಿಹಾರವನ್ನು ಅಧಿಕ ಮೊತ್ತದಲ್ಲಿ ಕೊಡಬೇಕಾಗಿ ನಿರ್ಣಯಿಸಿದೆ. ತೆರಿಗೆ ವಸೂಲಿನಿಂದ ವರ್ಷಕ್ಕೆ ಬರುವ ಆದಾಯಕ್ಕಿಂತ 20, 30ರಷ್ಟು ಮೊತ್ತವನ್ನು ಜಮೀಂದಾರಿರಿಗೆ ಕೊಟ್ಟಿದೆ.

ii. ಗುರ್ತಿಸಿದ ಸಾಗುವಳಿದಾರರು (Tenants) ಬೇಸಾಯ ಮಾಡುವ ಜಮೀಂದಾರರ ಭೂಮಿಯನ್ನು ಸರ್ಕಾರ ಸ್ವಾಧೀನ ಪಡಿಸಿಕೊಂಡು ಸಾಗುವಳಿದಾರರನ್ನೇ ಭು ಯಜಮಾನ ರಾಗಿ ಪ್ರಕಟಿಸಿತು. ಇವರು ಸಹ ಮಧ್ಯದಳಾರಿಗಳು ಇಲ್ಲದಂತೆ ನೇರವಾಗಿ ಸರ್ಕಾರಕ್ಕೆ ತೆರಿಗೆ ಕಟ್ಟಬೇಕು. ಜಮೀಂದಾರರಿಗೆ ನಷ್ಟ ಪರಿಹಾರವಾಗಿ ಬಹಳ ಮೊತ್ತವನ್ನು ಖರ್ಚು ಮಾಡಿದೆ ಇದನ್ನು ಸರ್ಕಾರ ಗುರ್ತಿಸಿದ್ದರಿಂದ ಆ ಭೂಮಿಗೆ ಸ್ವಲ್ಪ ಬೆಲೆಯನ್ನು ಕಟ್ಟಿದರೆ ಮಾತ್ರವೇ ಸಾಗುವಳಿದಾರರಿಗೆ (ಬಾಡಿಗೆದಾರರು) ಭೂಮಿ ಕೊಡುತ್ತೇವೆ ಎಂದು ನಿಯಮವನ್ನು ರೂಪಿಸಿತು. ಈ ಮೊತ್ತವನ್ನು ಕಟ್ಟಿದವರು ಮಾತ್ರ ತಾವು ಸಾಗುಮಾಡುತ್ತಿದ್ದ ಭೂಮಿಯ ಒಡೆಯರಾಗಿ ಭೂ ಸ್ವಾಮ್ಯ ವ್ಯವಸ್ಥೆಯ ದೋಚುವಿಕೆಯಿಂದ ಹೊರ ಬಂದರು. ಒಟ್ಟು 2 ರಿಂದ 2.5 ಕೋಟಿ ಸಾಗುವಳಿದಾರರು ಇದರಿಂದ ಪ್ರಯೋಜನ ಹೊಂದಿ ತಾವು ಸಾಗುಮಾಡುವ ಭೂಮಿಯ ಹಕ್ಕುದಾರರಾಗಿದ್ದಾರೆ. ಆದರೆ ಈ ಬೆಲೆ ಕಟ್ಟದೆ ಇರುವ ಸಾಗುವಳಿದಾರರು ಕಾನೂನು ಬದ್ದ ಗುರ್ತಿಸದೇ ಇರುವ ಲಕ್ಷಗಟ್ಟಲೆ ಬಡ ರೈತರು ಇದರಿಂದ ಯಾವ ಪ್ರಯೋಜನೆ ಹೊಂದಲಿಲ್ಲ. ಆದರಿಂದ ಅವರು ದೊಡ್ಡ ರೈತರ, ಮಾಜೀ ಜಮೀಂದಾರರ ಭೂಮಿಗಳಲ್ಲಿ ಕೆಲಸ ಮಾಡುವ ಸಾಗುವಳಿಗಾರರಾಗಿ, ವ್ಯವಸಾಯ ಕೂಲಿಗಳಾಗಿ ಉಳಿದ ಹೋದರು.

iii. ಕೂಲಿಮಾಲಿಕ, ಸಾಗುವಳಿದಾರರ ಮೂಲಕ ಸಾಗುಮಾಡುವ ಜಮಿಂದಾರರ ಭೂಮಿಗಳಿಗೆ ಅವರೇ ಯಜಮಾನರಾಗಿ ಇರುತ್ತಾರೆಂದು ಕಾನೂನು ಹೇಳುತ್ತದೆ. ಇದರಿಂದ ಜಮೀಂದಾರರು ಬಹಳ ಭೂಮಿ ತಾವೇ ಸಾಗುಮಾಡುತ್ತೇವೆ (ವ್ಯವಸಾಯ) ತಮ್ಮ ಆಧೀನದಲ್ಲೆ ಇದೆ ಎಂದು ನೋಡಿಸಿ ಅದರ ಮೇಲೆ ಹಿಡಿತವನ್ನು ಹೊಂದಿದರು. ಅಷ್ಟೇ ಅಲ್ಲದೇ ಸಾಗುವಳಿ ಮಾಡುವವರೆಲ್ಲರನ್ನೂ ಬಹಳ ಜನರನ್ನು ತೊಲಗಿಸಿ ಭೂಮಿಯನ್ನು ತಮ್ಮ ಸ್ವಂತ ಆಧೀನದಲ್ಲಿ ತಂದುಕೊಂಡಿದ್ದಾರೆ. ಕಾನೂನಿನಲ್ಲಿರುವ ವಿವಿಧ ರಂಧ್ರಗಳ ಮೂಲಕ (Loop holes) ಅಧಿಕ ಭೂಮಿಯ ಮೇಲೆ ನಿಯಂತ್ರಣವನ್ನು ಸಾಧಿಸಿದರು. ಒಬ್ಬ ವ್ಯಕ್ತಿ ಅತ್ಯಧಿಕವಾಗಿ ಎಷ್ಟು ಭೂಮಿ ಹೊಂದರಬೇಕೆಂದು – ಸ್ಪಷ್ಟತೆ ಇಲ್ಲದೇ ಇರುವುದರಿಂದ ಸಹ ಈಗೆ ಜರುಗಿದೆ.

iv. ಹೊಸ ಕಾನೂನು ಪ್ರಕಾರ ಜಮೀಂದಾರರ ಆಧೀನದಲ್ಲಿ ಇರುವ ಅಡವಿ, ಬಂಜರು ಭೂಮಿ(Waste Land)ಯನ್ನು ಸರ್ಕಾರ ಸ್ವಾಧೀನಪಡಿಸಿಕೊಂಡಿತು. ಆ ಸಮಯದಲ್ಲಿ ಜಮೀಂದಾರರು ಈ ಭೂಮಿಗಳಲ್ಲಿ ಗಿಡಗಳನ್ನು ಕಡಿಸಿ ಮಾರಿ ದೊಡ್ಡ ಮೊತ್ತದಲ್ಲಿ ಅಪಾರ ಹಣಗಳಿಸಲು ಪ್ರಯತ್ನಿಸಿದರು. ಈ ವಿಧವಾಗಿ ವಿಶಾಲ ಮಟ್ಟದಲ್ಲಿರುವ ಅಡವಿಗಳು ನಾಶವಾದವು ಯಾವುದೇ ನಾದರೂ ದೊಡ್ಡ ಮೊತ್ತದಲ್ಲಿ ಬಂಜರು ಭೂಮಿ ಸರ್ಕಾರಕ್ಕೆ ಸೇರಿತು. ಇದನ್ನು ಅಭಿವೃದ್ಧಿ ಪಡಿಸಿ, ಬಡಜನರಿಗೆ ಹಂಚಲು ಒಳ್ಳೆಯ ಅವಕಾಶ ಸರ್ಕಾರಕ್ಕೆ ಲಭಿಸಿತು.

- ಭೂ ಸುಧಾರಣೆಯ ಕಾನೂನುಗಳು ಭೂಮಾಲಿಕರಿಗೆ ಸಹಾಯ ಮಾಡಲು ಸಹಾಯಕವಾಗಿದೆ. ಎಂದು ಕೆಲವರು ಹೇಳುತ್ತಿದ್ದಾರೆ. ಈ ಭಾವನೆಯನ್ನು ನೀವು ಒಪ್ಪುವಿರಾ ?
- ಭೂ ಸುಧಾರಣೆಯ ಕಾನೂನುಗಳು ಭೂಮಿಯನ್ನು, ಅಧಿಕಾರವನ್ನು ಸಂಪನ್ನ ಸಾಗುವಳಿ ರೈತರಿಗೆ ಮಾತ್ರವೇ ಬದಲಾಯಿಸಲು ಪ್ರಯತ್ನಿಸಿವೆ ಎಂದು ಕೆಲವರು ಹೇಳುತ್ತಾರೆ? ಇದನ್ನು ನೀವು ಏಕೀಭವಿಸುವಿರಾ?
- ವಿವಿಧ ಗ್ರಾಮೀಣ ವರ್ಗಗಳ ಪ್ರಯೋಜನಗಳ ಮಧ್ಯ ಸಮಾನತೆಯನ್ನು ಸಾಧಿಸಲು ಅಂತರ್ಗತ ಘರ್ಷಣೆಗಳು ತಗ್ಗಿಸುವ ಉದ್ದೇಶದಿಂದ ಈ ಕಾನೂನುಗಳು ಪ್ರಯತ್ನಿಸಿವೆ. ಎಂದು ಕಲವರ ಅಭಿಪ್ರಾಯ – ನೀವು ಅವರೊದಿಂಗೆ ಏಕೀಭವಿಸುತ್ತೀರಾ ?
- ಈ ಕಾನೂನುಗಳಿಂದ ಯಾರು ಹೆಚ್ಚಾಗಿ ಲಾಭಪಟ್ಟರು. ಯಾರಿಗೆ ಅಸಲು ಲಾಭವಿಲ್ಲ? ಭೂ ಮಾಲಿಕರು ಬಹಳ ನಷ್ಟ ಪಟ್ಟರೆಂದು ನೀವು ಅಂದುಕೊಳ್ಳುತ್ತಿದ್ದೀರಾ?



SCERT TELANGANA

## ತೆಲಂಗಾಣದಲ್ಲಿ ಜಾಗೀರುದಾರಿ ವ್ಯವಸ್ಥೆ ರದ್ದು :

ನೈಜಾಂ ರಾಜ್ಯವು ಭಾರತ ದೇಶದಲ್ಲಿ ವಿಲೀನವಾದ ಸಮಯದಲ್ಲಿ ತೆಲಂಗಾಣ ಪ್ರಾಂತದಲ್ಲಿ ರೈತಾಂಗ ಹೋರಾಟ ಉದೃತವಾಗಿ ಸಾಗುತ್ತಿತ್ತು. ಸ್ವಾತಂತ್ರ್ಯ ಬರುವ ಮೊದಲೇ 1927 ರಲ್ಲಿಯೇ ಬಿಟ್ಟಿ ಕೆಲಸ (ಬಿಟ್ಟೀ ಚಾಕರಿ) ನಿರ್ಮೂಲಿಸುವ ಕಾನೂನು ತಂದರು. ಆದರೆ ಆ ಕಾನೂನನ್ನು ಜಾರಿಗೊಳಿಸಲಿಲ್ಲ. ಆದರೆ ತೆಲಂಗಾಣ ಸಾಯುಧ ಹೋರಾಟ ಬಲವಾಗಿರುವ ಪ್ರಾಂತದಲ್ಲಿ 1948 ರಲ್ಲಿ ಬಿಟ್ಟಿ ಕೆಲಸ ಅಂತ್ಯವಾಯಿತು. 1945 ರಲ್ಲಿ ತೆಲಂಗಾಣ ಹೋರಾಟ ಮೊದಲಾಗುವ ಹೊತ್ತಿಗೆ ಸಾಗುವಳಿದಾರರಿಗೆ (ಕೌಲುದಾರ) ರಕ್ಷಣೆ ಕೊಡುವ ಕಾನೂನು ನಿಜಾಂ ಮಾಡಿದನು. ಇದರ ಕೆಳಗೆ ಸಾಗುವಳಿದಾರರನ್ನು ದಾಖಲಿಸಿ ಅವರಿಗೆ ಶಾಶ್ವತ ಸಾಗು ಹಕ್ಕುಗಳನ್ನು ಕಲ್ಪಿಸಿದ್ದಾನೆ.

ಹೈದರಾಬಾದು ರಾಜ್ಯವು ಭಾರತ ದೇಶದಲ್ಲಿ ವಿಲೀನ ಆದ ಕೂಡಲೇ ರಾಷ್ಟ್ರ ಅಧಿಪತಿಯಾಗಿರುವ ನಿಜಾಂ ತನ್ನ ಸೊಂತ ಆಸ್ತಿಯಾಗಿರುವ ಸರ್ಫ್-ಎ-ಖಾಸ್ ನಿ ಬಿಟ್ಟಿಕೆಲಸದಂತೆ ಬಲವಂತ ಚಾಕರೀಗಳನ್ನು ರದ್ದು ಮಾಡುತ್ತಾ ಪರ್ಮಾನಗಳನ್ನು ಜಾರಿಗೊಳಿಸಿದನು. 1949 ರ ಆಗಸ್ಟು ತಿಂಗಳ ಹದಿನೈದನೆಯ ದಿನ ಜಾರಿಮಾಡಿದ ಮತ್ತೊಂದು ಪರ್ಮಾನಾ ಮೂಲಕ (ಸಂಸ್ಥಾನ, ಮುಕ್ತಾಗಳು ಸಹ) ಸಣ್ಣ ಸಣ್ಣ ರಾಜ್ಯಗಳಾಗಿರುವ ಜಾಗೀರುಗಳನ್ನು ರದ್ದು ಮಾಡಿದನು. ಈ ಜಾಗೀರುಗಳಲ್ಲಿ ಭೂಮಿಯನ್ನು ಸಾಗುವಳಿ ಮಾಡುವ ಆದಿಪತ್ಯ ಕುಲಗಳಿಗೆ ಆ ಭೂಮಿಗಳ ಮೇಲೆ ಪಟ್ಟಾಗಳು ಲಭಿಸಿದವು. ಹೈದರಾಬಾದು ಜಾಗೀರುದಾರ ನಿಷೇದ ಕಾನೂನು ಪ್ರಕಾರ ಕೆಲವು ದಿನಗಳಲ್ಲೇ ದೊಡ್ಡ ದೊಡ್ಡ ಜಹಗೀರುಗಳನ್ನು ಸರ್ಕಾರ ಸ್ವಾದೀನ ಮಾಡಿಕೊಂಡಿತು. ಅದಕ್ಕೆ ನಷ್ಟ ಪರಿಹಾರವಾಗಿ 18 ಕೋಟಿ ರೂಪಾಯಿ ಕೊಡಲು ನಿರ್ಧರಿಸಿತು. ಈ ಕಾನೂನಿನ ಮೂಲಕ 995 ಜಹಗೀರುದಾರರನ್ನು ತೊಲಗಿಸಿ ಆ ಭೂಮಿಗಳನ್ನು ಅವುಗಳನ್ನು ಸಾಗುಮಾಡುವ ರೈತರಿಗೆ ಕೊಟ್ಟುಬಿಟ್ಟರು ಅಷ್ಟೇಅಲ್ಲದೇ ಭೂಮಿ ಶಿಸ್ತು ಸಹಕಡಿಮೆ ಮಾಡಿದರು.

ಹೊಸ ಸರ್ಕಾರವು ಹೈದರಾಬಾದು ವ್ಯವಸಾಯ ಸಂಸ್ಕರಣೆಗಳ ಸಂಘವನ್ನು ಏರ್ಪಾಟುಮಾಡಿತು. ಭೂ ಕೇಂದ್ರೀಕರಣ ಉತ್ಪತ್ತಿಯನ್ನು ಹೆಚ್ಚಿಸುವುದು. ಆಗಿರುವ ವ್ಯವಸ್ಥೆಯಲ್ಲಿ ರೈತರ ಸಾಗುವಳಿದಾರರ ಕೋರಿಕೆಗಳನ್ನು ಅಧ್ಯಯನ ಮಾಡಿರೆಂದು ಆ ಸಂಘವನ್ನು ಕೋರಿದರು. ಈ ಸಂಘವು ಮಧ್ಯದಳಾರಿಗಳನ್ನು ತೊಲಗಿಸುವುದು, ಭೂಯಾಜಮಾನ್ಯದ ಮೇಲೆ ಪರಿಮಿತಿಯು, ಭೂ ಮಾಲಿಕರಿಂದ ಹೆಚ್ಚು ಭೂಮಿಯನ್ನು ಕೊಳ್ಳುವುದು. ಸಾಗುವಳಿದಾರರ ರಕ್ಷಣೆ ಮೊದಲಾದ ಮುಖ್ಯವಾದ ಶಿಫಾರಸ್ಸುಗಳನ್ನು ಮಾಡಿದೆ. ಆದರೆ ಕೆಲವು ಶಿಫಾರಸ್ಸುಗಳಲ್ಲಿ ಕೆಲವನ್ನು ಮಾತ್ರವೇ ಜಾರಿಗೆ ತಂದರು.

ಎಲ್ಲಾ ವಿಧವಾದ ಸಾಗುವಳಿ ಮಾಡುವವರಿಗೆ ರಕ್ಷಣೆಯ ಕಲ್ಪಿಸುತ್ತಾ ಪ್ರಖ್ಯಾತ ಹೈದರಾಬಾದು ಸಾಗುವಳಿದಾರರ ಕಾನೂನು 1950ರಲ್ಲಿ ಜಾರಿಗೆ ಬಂದಿತು. ಭೂ ಮಾಲಿಕರು ಇಷ್ಟ ಬಂದಾಗ ಸಾಗುವಳಿದಾರರನ್ನು ಬದಲಿಸುವುದಕ್ಕೆ ವಿರುದ್ಧ ರಕ್ಷಿತ ಸಾಗುವಳಿದಾರರನ್ನಾಗಿ ಮಾಡಿದರು. ಆರು ವರ್ಷಗಳ ಮೇಲ್ಪಟ್ಟು ಸಾಗುವಳಿ ಮಾಡುವವರನ್ನು ರಕ್ಷಿತ ಸಾಗುವಳಿದಾರರಾಗಿ ಅಲ್ಲದೇ ನಾಮ ಮಾತ್ರ ಚೆಲ್ಲಿಸುವುದರ ಆಧಾರವಾಗಿ ಪಟ್ಟಾದಾರರಾಗಿ ಮಾಡಿದರು. ಇದರಿಂದ ಸಾಗುವಳಿದಾರರನ್ನು ಸಾಗುವಳಿ ಮಾಡುವ ಭೂಮಿಯಿಂದ ತೊಲಗಿಸುವುದು ಅಷ್ಟು ಸುಲಭವಲ್ಲ. ತಲೆ ತಲಾಂತರವಾಗಿ ಆ ಭೂಮಿಯನ್ನು ಸಾಗುವಳಿ ಮಾಡಬಹುದು. ಇದೇ ವಿಧವಾಗಿ 1955ರಲ್ಲಿ ಹೈದರಾಬಾದ್ ಇನಾಂ ಭೂಮಿಗಳ ರದ್ದು ಕಾನೂನನ್ನು ಮಾಡಿದರು.

1950 ರಲ್ಲಿ ಮಾಡಿದ ಭೂ ಸಂಸ್ಕರಣೆಗಳ ಕಾನೂನಿಗೆ 1954ರಲ್ಲಿ ಒಂದು ತಿದ್ದುಪಡಿ ಮಾಡಿದರು. ಇದರ ಮೂಲಕ ಕೆಲವು ವಿಧವಾದ ಸಾಗುದಾರರಿಗೆ ರಕ್ಷಿತ ಸಾಗುವಳಿ ಹಕ್ಕು. ಕಲ್ಪಿಸದಂತೆ ಭೂ ಸಂಸ್ಕರಣೆಗಳ ಉದ್ದೇಶವನ್ನೇ ಕಡೆಗಣಿಸಿತು. ಅಷ್ಟೇ ಅಲ್ಲದೇ ಈ ಕಾನೂನು ಭೂ ಮಾಲಿಕರಿಗೆ ಕೋಟ್ಯಾಧಿ ರೂಪಾಯಿಗಳು ನಷ್ಟ ಪರಿಹಾರವಾಗಿ ಕೊಡಬೇಕೆಂದು ಶಿಫಾರಸ್ಸು ಮಾಡಿತು. ಇದರಿಂದ ಫ್ಯೂಡಲ್ ವ್ಯವಸ್ಥೆಯನ್ನು ರದ್ದು ಮಾಡುವ ಭಾರವನ್ನು ಸ್ವಾತಂತ್ರ್ಯ ಭಾರತ ದೇಶ ಭರಿಸಲು ಬಂದಿತು. ದೊಡ್ಡ ದೊಡ್ಡ ಭವನಗಳು, ದನಗಳ ಕೊಟ್ಟಿಗೆಗಳು, ವ್ಯವಸಾಯ ಪರಿಕರಗಳು ಹಿಂದಿನ ಕಾಲದ ಭೂ ಮಾಲಿಕ ಆಧೀನದಲ್ಲಿಯೇ ಬಿಟ್ಟರು. ಭೂಮಿಯ ಹಿಡುವಳಿ (Land Holding) ಪರಿಮಿತಿ ಇಲ್ಲದೇ ಇರುವುದರಿಂದ ಸಾವಿರಾರು ಎಕರೆಗಳ ಸಾರವಂತವಾದ ಭೂಮಿ ಖುದ್ ಖಾಸ್ತ್ ಕೆಳಗೆ ಭೂ ಮಾಲಿಕರ ಆಧೀನದಲ್ಲಿಯೇ ಉಳಿಯಿತು. ಅನೇಕ ಕಾಯ್ದೆಯಗಳನ್ನು ಸರಿಯಾಗಿ ಜಾರಿಗೊಳಿಸಲಿಲ್ಲ. ಇವುಗಳ ಜಾರಿಗೊಳಿಸು ವುದು ತಡಮಾಡಿದ್ದರಿಂದ ಭೂ

SCERT TELANGANA

ಸ್ವಾಮಿಗಳು ತಮ್ಮ ಪ್ರಯೋಜನೆಗಳಿಗೆ ಬಳಸಿಕೊಂಡರು. ಸಾಗುವಳಿದಾರ (ಕಾಲುದಾರಿ) ಕಾನೂನು ಗಳಲ್ಲಿ ರಂಧ್ರಗಳ ಆಧಾರ ಮಾಡಿಕೊಂಡು ಜಮೀಂದಾರರು ಸಾಗುವಳಿದಾರರಿಂದ ಭೂಮಿಗಳನ್ನು ತಿರುಗಿ ತಮ್ಮ ಆಧೀನಕ್ಕೆ ತಂದುಕೊಂಡರು. ಜಮಿಂದಾರಿ ರದ್ದು ನಂತರ ಅವರ ಆ ಭೂಮಿಗಳು ತಮ್ಮವೇ ಎಂದು ದೊಡ್ಡ ದೊಡ್ಡ ಭೂ ಮಾಲಿಕರಾಗಿ ಉಳಿದರು. ಈ ಭೂಮಿಗಳನ್ನು ಕೈಗಾರಿಕೆಗಳ ಸ್ಥಾಪನೆಗೆ ವಿನಯೋಗಿಸಿದರು. ಉದಾ : ಚಲ್ಲಂಪಲ್ಲಿ ಜಮಿಂದಾರ ಸಕ್ಕರೆ ಕಾರ್ಖಾನೆ ಕೆಳಗೆ 2650 ಎಕರೆ ಭೂಮಿ ನೋಡಿಸಿದ್ದಾನೆ. ಕಾಲಕ್ರಮದಲ್ಲಿ ಇವರು ಆಂಧ್ರದಲ್ಲಿ ದೊಡ್ಡ ಕೈಗಾರಿಕೋದ್ಯಮಿಗಳಾಗಿ ಬೆಳೆದರು. ತೆಲಂಗಾಣದಲ್ಲಿ ಇವರು 21ನೇ ಶತಮಾನ ದಲ್ಲಿ ಸಹ ತಮ್ಮ ದೊಡ್ಡಸ್ತಿಕೆಯನ್ನು ಮುಂದು ವರಿಸುತ್ತಿದ್ದಾರೆ.

## ಭೂಧಾನ ಉದ್ಯಮ (ಚಳುವಳಿ) :

ತೆಲಂಗಾಣ ಭೂ ಸ್ವಾಮ್ಯ ವಿಧಾನ, ಸಾಯುಧ ರೈತಾಂಗ ಹೋರಾಟದಿಂದ ದೇಶದಲ್ಲಿ ಬಹಳ ಜನರು ಆಂದೋಲನ ವ್ಯಕ್ತಪಡಿಸಿದ್ದಾರೆ. ಭೂ ಕೇಂದ್ರೀಕರಣ ಸಮಸ್ಯೆಯನ್ನು ಶಾಂತಿಯುತ ಪದ್ದತಿಗಳ ಮೂಲಕ ಅಂದರೆ ಭೂಧಾನ ಉದ್ಯಮದ ಮೂಲಕ ಪರಿಷ್ಕರಿಸಲು ಸರ್ವೋದಯ ನಾಯಕ ಆಚಾರ್ಯ ವಿನೋ ಬಾ ಭಾವೆ ಭಾವಿಸಿದನು. ಭೂ ಧಾನ ಎಮದರೆ ಭೂಮಿ ಇಲ್ಲದೇ ಇರುವವರಿಗೆ ಭೂಮಿಧಾನ ಕೊಡುವುದು. ಆತನು ಭೂ ಸ್ವಾಮಿಗಳಿಂದ ಸ್ವಚ್ಛಂದವಾಗಿ ಭೂಮಿಯನ್ನು ಹೊಂದಿ ಅದನ್ನು ಭೂಮಿ ಇಲ್ಲದವರಿಗೆ ದಾನ ಮಾಡಬೇಕೆಂದು ಅಂದುಕೊಂಡನು. 1951, ಏಪ್ರಿಲ್ 18 ರಂದು ವಿನೋಬಾ ಭಾವೆ ಉದ್ಯಮವನ್ನು ಪ್ರಾರಂಭಿಸಿದನು. ಭೂ ಸಂಸ್ಕರಣೆಯ ಚರಿತ್ರೆಯಲ್ಲಿ ಇದನ್ನು ಒಂದು ಮೈಲಿಗಲ್ಲಾಗಿ ಕೊಂಡಾಡಿದರು. ಸರ್ವೋದಯ ಉದ್ಯಮದಲ್ಲಿ ಭಾಗವಾಗಿ ವಿನೋಭಾ ಜೀ ಹೈದರಾಬಾದು ಹತ್ತಿರ ವಿರುವ ಶಿವರಾಂಪಲ್ಲಿಗೆ ಬಂದನು. ಅಲ್ಲಿಂದ ನಲ್ಗೊಂಡ ಜಿಲ್ಲೆಯ ಪೋಚಂಪಲ್ಲಿಗೆ ಪಾದಯಾತ್ರೆಮಾಡಿದ. ಗ್ರಾಮದ ಕೆರೆಯ ಹತ್ತಿರ ಪ್ರಾರ್ಥನಾ ಸಮಾವೇಶ ನಿರ್ವಹಿಸಿದನು. ಆ ಸಮಾವೇಶದಲಿ ಷೆಡ್ಯೂಲ್ಡ್ ಕುಲಕ್ಕೆ ಸೇರಿದ 40 ಮಂದಿ ತಮಗೆ ಭೂಮಿ ಕೊಡಿರಿ ಎಂದು ಕೇಳಿದರು. ಆ ಸಮಾವೇಶದಲ್ಲೇ ವೆದಿರಿ ರಾಮಚಂದ್ರರೆಡ್ಡಿ ತನ್ನ ತಂದೆ ಜ್ಞಾಪಕಾರ್ಥ 250 ಎಕರೆ ಭೂಮಿ ದಾನ ಕೊಡುವುದಾಗಿ ತಿಳಿಸಿದ ಕೊಟ್ಟನು. ಭೂಮಿಯನ್ನು ದಾನವಾಗಿ ಹೊಂದಿದ ಮೊದಲ ವ್ಯಕ್ತಿ ಮೈಸಯ್ಯ. ಇದರಿಂದ ಸೂರ್ತಿಹೊಂದಿದ ವಿನೋಬಾಜೀ ಭೂಧಾನ ಉದ್ಯಮವನ್ನು ಕೈಹಿಡಿದನು ಆ ನಂತರ ಇದನ್ನು ಗ್ರಾಮದಾನ ಉದ್ಯಮವನ್ನಾಗಿ ಬದಲಾಯಿಸಿದನು. ದೇಶವ್ಯಾಪ್ತವಾಗಿ ಸಂಚರಿಸಿ 44 ಲಕ್ಷ ಎಕರೆ ಭೂಮಿಯನ್ನು ದಾನವಾಗಿ ಪಡೆದು ಎಲ್ಲರಿಗೂ ಹಂಚಿದನು. ಆದರೂ ಒಳ್ಳೆಯ ಭೂಮಿಯೆಲ್ಲಾ ಭೂ ಸ್ವಾಮಿಗಳ ಆಧೀನದಲ್ಲಿರುವುದರಿಂದ ಈ ಉದ್ಯಮ ದೇಶದಲ್ಲಿನ ಭೂ ಸಮಸ್ಯೆ ಮೇಲೆ ಸಾಕಷ್ಟು ಪ್ರಭಾವ ಮಾಡಲಿಲ್ಲ.




*ಚಿತ್ರ 16.1 : ವಿನೋಭಾವೆ,ವೆದಿರಿ ರಾಮಚಂದ್ರರೆಡ್ಡಿ ಮತ್ತು ಮೈಸಯ್ಯ*

- ವಿವಿಧ ಸಂಸ್ಕರಣಗಳಿಂದ ತೆಲಂಗಾಣದಲ್ಲಿ ಯಾವ ವರ್ಗದ ರೈತಾಂಗ ಲಬ್ದಿ ಹೊಂದಿದೆ? ಯಾವ ವಿಧವಾಗಿ ಲಬ್ದಿಯಾಗಿದೆ ?
- ಭೂಮಿ ಇಲ್ಲದ ಕುಲವೃತ್ತಿಗಳ ಅವರಿಗೆ ಈ ಸಂಸ್ಕರಣಗಳಿಂದ ಯಾವ ಮೇರೆಗೆ ಪ್ರಯೋಜನಗಳು ಉಂಟಾಗಿವೆ.
- ಭೂ ಮಾಲಿಕರು ಹೇಗೆ ನಷ್ಟ ಹೋದರು ತಮ್ಮ ಪ್ರಯೋಜನಗಳನ್ನು ಎಲ್ಲಿಯವರೆಗೆ ಕಾಪಾಡಿ ಕೊಂಡರು?

## ಭೂ ಪರಿಮಿತಿ ಕಾನೂನು (Land Ceiling Act) 1972-75

ಜಮೀಂದಾರಿ ವ್ಯವಸ್ಥೆ ರದ್ದು ಮಾಡುವುದರಿಂದ ಭೂ ಕೇಂದ್ರೀಕರಣ ಸಮಸ್ಯೆ ಪರಿಷ್ಕಾರವಾಗಲಿಲ್ಲ. ಪಟ್ಟಿಕೆ – 1 ನೋಡಿದರೆ 1955–56 ಭೂಸುಧಾರಣೆಗಳು ಪೂರ್ತಿ ಆದ ನಂತರ ಅರ್ಧಕ್ಕಿಂತ ಹೆಚ್ಚಿನ ರೈತಾಂಗ ಕುಟುಂಬಳಿಗೆ 5 ಎಕರೆಗಳಿಗಿಂತ ಕಡಿಮೆ ಭೂಮಿ ಇದೆ ಎಂದು ತಿಳಿಯುತ್ತದೆ. ರಾಜ್ಯದಲ್ಲಿ ಬೇಸಾಯ ಮಾಡುವ ಭೂಮಿಯಲ್ಲಿ 38 ಶಾತ ಭೂಮಿ ಇನ್ನೂ ಭೂ ಸ್ವಾಮಿಗಳ ಆಧೀನದಲ್ಲಿಯೇ ಉಳಿಯಿತು. ದೊಡ್ಡ ಸಂಖ್ಯೆಯಲ್ಲಿರುವ ಭೂಮಿ ಇಲ್ಲದೇ ಇರುವ ದಲಿತರು ಭೂಮಿಗಾಗಿ ಆಂದೋಲನ

ಮಾಡುತ್ತಿದ್ದಾರೆ. ಮತ್ತಷ್ಟು ಭೂ ಸಂಸ್ಕರಣೆಗಳನ್ನು ಮಾಡಬೇಕೆಂದು ಕಿಸಾನ್ ಸಭೆಗಳು ಚಳುವಳಿಗಳನ್ನು ಮಾಡುತ್ತಿದ್ದಾರೆ. ಸರ್ಕಾರ ಭೂ ಹಿಡುವಳಿಗಳಿಗೆ ಪರಿಮಿತಿ ವಿಧಿಸಿ ಹೆಚ್ಚಿನ ಭೂಮಿಯ್ನನು ಸರ್ಕಾರ ಸ್ವಾಧೀನ ಪಡಿಸಿಕೊಂಡು ಭೂಮಿಯಿಲ್ಲದ ಕೂಲಿಗಳಿಗೆ ಚಿಕ್ಕ ಇಡುವಳಿ ರೈತರಿಗೆ ಮರಳಿ ಹಂಚಬೇಕೆಂದು ಅವರುಕೋರುತ್ತಿದ್ದಾರೆ.

ದೇಶ ವ್ಯಾಪ್ತವಾಗಿ ಇದೇ ಪರಿಸ್ಥಿತಿ ಆವರಿಸಿದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಕೇಂದ್ರ ಸರ್ಕಾರವು ಭೂ ಹಿಡುವಳಿಗಳಿಗೆ ಪರಿಮಿತಿ ವಿಧಿಸಿತು. ಬಡವರಿಗೆ ಭೂಮಿ ಯನ್ನು ಹಂಚಲು ಎರಡನೇ ದಶೆ ಭೂ ಸಂಸ್ಕರಣೆಗಳನ್ನು ಕೈಹಿಡಿದಿದೆ. 1972 ರ ನಂತರ ಇದಕ್ಕಾಗಿ ಬಹಳ ರಾಜ್ಯಗಳಲ್ಲಿ

**ಪಟ್ಟಿಕೆ : 1 ತೆಲಂಗಾಣ ಮತ್ತು ಆಂಧ್ರಪ್ರದೇಶದಲ್ಲಿ ಭೂಮಿ ಹಂಚಿಕೆ ,1956-2006**

| | 1955-56 | | 1980-81 | | 2005-06 | |
|---|---|---|---|---|---|---|
| | ಭೂ ಹಿಡುವಳಿ ಗಳಲ್ಲಿ ಭಾಗ | ಬೇಸಾಯ ಭೂಮಿ ಯಲ್ಲಿ ಭಾಗ | ಭೂ ಹಿಡುವಳಿ ಗಳಲ್ಲಿ ಭಾಗ | ಬೇಸಾಯ ಭೂಮಿ ಯಲ್ಲಿ ಭಾಗ | ಭೂ ಹಿಡುವಳಿ ಗಳಲ್ಲಿ ಭಾಗ | ಬೇಸಾಯ ಭೂಮಿ ಯಲ್ಲಿ ಭಾಗ |
| ಅತಿ ಸಣ್ಣ ರೈತರು 5 ಎಕರೆ ಭೂಮಿ ಒಳಗೆ | 58% | 18% | 73% | 29% | 83% | 48% |
| ಸಣ್ಣ ರೈತರು 5-25 ಎಕರೆ ಭೂಮಿ ಒಳಗೆ | 32% | 44% | 25% | 52% | 16% | 46% |
| ದೊಡ್ಡ ರೈತರು 25ಎಕರೆಭೂಮಿ ಮೇಲ್ಪಟ್ಟು | 10% | 38% | 2% | 19% | 1% | 6% |
| ಒಟ್ಟು | 100% | 100% | 100% | 100% | 100% | 100% |

ಮೂಲ - ಆರ್ಥಿಕ ಅಂಶಗಳು, ಗಣಾಂಕಗಳು ಸಂಚಾಲಕರು *(DES)*, ಹೈದರಾಬಾದು

## ಪಟ್ಟಿಕೆಯನ್ನು ಓದುವುದು :

1955-56 ಸಂ॥ ಗೆ ಸಂಬಂಧಿಸಿದ ಗಣಾಂಕಗಳನ್ನು ಜಾಗ್ರತೆಯಾಗಿ ಓದಿರಿ. ಭೂ ಸಂಸ್ಕರಣೆಗಳ ನಂತರ 5 ಎಕರೆಗಳಿಗಿಂತ ಕಡಿಮೆ ಇರುವ ಅತಿ ಸಣ್ಣ ರೈತರು 58% ಇದ್ದಾರೆ. ರೈತರ ಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚು ಇದ್ದರೂ ಅವರ ಕೆಳಗೆ 20% ಗಿಂತ ಕಡಿಮೆ ಭೂಮಿ ಬೇಸಾಯ ಭೂಮಿ ಇದೆ. ಇನ್ನೊಂದು ಕಡೆ 10% ಇರುವ ದೊಡ್ಡ ರೈತರು, ಭೂ ಮಾಲಿಕರ ಕೆಳಗೆ ಮೊತ್ತ ಬೇಸಾಯ ಭೂಮಿಯಲ್ಲಿ 38% ಇದೆ.

ಭೂ ಸಂಸ್ಕರಣೆಗಳು ಜಾರಿಗೆ ತಂದ ಮೇಲೆ 1970 ದಶಕದಲ್ಲಿ ಬಹಳ ಬದಲಾವಣೆ ಬಂದವು. ಅತಿ ಸಣ್ಣ ರೈತರು --% ನಿಂದ --% ವರೆಗೆ ಹೆಚ್ಚಾದರು. ಸಣ್ಣ ರೈತರು --% ನಿಂದ --% ಕಡಿಮೆಯಾದರು. ಆದರೆ ಅವರು ಹಿಂದಿಗಿಂತಲೂ ಹೆಚ್ಚಿನ ಭೂಮಿಯ್ನನು ಹೊಂದಿದ್ದಾರೆ. ದೊಡ್ಡ ರೈತರು --% ನಿಂದ - % ಕಡಿಮೆ ಆಗಿದ್ದಾರೆ. ಅವರ ಆಧೀನದಲ್ಲಿನ ಭೂಮಿ ಸಹ --% ನಿಂದ -% ಕಡಿಮೆಯಾಗಿದೆ.

ಭೂ ಪರಿಮಿತಿ ಕಾನೂನುಗಳನ್ನು ಜಾರಿಗೆ ತಂದರು. ಭೂ ಪರಿಮಿತ ಕಾಯ್ದೆಯನ್ನು ಆಂಧ್ರಪ್ರದೇಶ್ ಶಾಸನ ಸಭೆ, ವಿಧಾನ ಸಭೆ 1972 ರ ಸೆಪ್ಟೆಂಬರ್ ಆಮೋದನೆ ಮಾಡಿತು. ಈ ಕಾನೂನು 1975 ಜನವರಿಯಿಂದ ಜಾರಿಗೆ ಬಂದಿತು.

ಐದುಮಂದಿ ಸದಸ್ಯರಿರುವ ಒಂದು ಕುಟುಂಬವನ್ನು ಯೂನಿಟ್ ಆಗಿ ಕಾನೂನು ಪ್ರಕಟಣೆ ಮಾಡಿತು. ಐದುಮಂದಿ ಸದಸ್ಯರಿರುವ ಕುಟುಂಬಕ್ಕೆ ಗರಿಷ್ಠವಾಗಿ 10-27 ಎಕರೆಗಳ ನೀರಾವರಿ ವಸತಿ ಇರುವ ಭೂಮಿ, 35-54 ಎಕರೆ ಒಣ ಬೇಸಾಯ

SCERT TELANGANA

ಮಾಡುವ ಭೂಮಿ ಇರಬಹುದು. ಇದಕ್ಕಿಂತಲೂ ಕುಟುಂಬಗಳಿಗೆ ಹೆಚ್ಚಿರುವ ಭೂಮಿಯನ್ನು ಉಳಿದ ಭೂಮಿ ಎಂದು ಪ್ರಕಟಿಸಿದರು ಸರ್ಕಾರ ಅದನ್ನು ತೆಗೆದುಕೊಳ್ಳುತ್ತಿದೆ. ಆಂಧ್ರಪ್ರದೇಶ್‌ದಲ್ಲಿ 8 ಲಕ್ಷ ಎಕರೆ ಉಳಿದ ಭೂಮಿ ಇದೆ ಎಂದು ಪ್ರಕಟಿಸಿ. ಇದರಲ್ಲಿ 6,41,000 ಎಕರೆಗಳನ್ನು ಸರ್ಕಾರ ಸ್ವಾಧೀನ ಮಾಡಿಕೊಂಡಿತು. ಅದರಲ್ಲಿ 5,82,000 ಎಕರೆಗಳನ್ನು 5,40,000 ಜನರಿಗೆ ಭೂಮಿ ಇಲ್ಲದವರಿಗೆ, ಅತಿ ಸಣ್ಣ ರೈತರಿಗೆ ಹಂಚಿತು. ಅವಶ್ಯವಿರುವುದಕ್ಕೆ, ಮಾಡುವುದಕ್ಕೆ ಹೋಲಿಸಿದರೆ ಇದು ಬಹಳ ಕಡಿಮೆಯೇ ಭೂಮಾಲಿಕರ ಮೋಸದಿಂದ ಸರ್ಕಾರಕ್ಕೆ ರಾಜಕೀಯ ನಿಬದ್ದತೆ ಇಲ್ಲದೇ ಇರುವುದರಿಂದ ಕಾನೂನು ಸರಿಯಾಗಿ ಜಾರಿಗೊಳ್ಳಲಿಲ್ಲ.

ಅನೇಕ ಜನ ಭೂಮಾಲಿಕರು ಅಧಿಕಾರಿಗಳ ಮುಂದೆ ತಪ್ಪು ಪ್ರಕಟಣೆಗಳನ್ನು ಮಾಡಿ ಹೆಚ್ಚಿನ ಭೂಮಿಯನ್ನು ತೋರಿಸಲಿಲ್ಲ. ಕಾನೂನು ಬರುತ್ತದೆ. ಎಂದು ಮೊದಲೇ ತಿಳಿದ ಅನೇಕ ಮಂದಿ ಭೂ ಮಾಲಿಕರು ಭೂಮಿಯನ್ನು ಬಂಧುಗಳಿಗೆ ಸ್ನೇಹಿತರಿಗೆ, ಆಳುಗಳಿಗೆ (ಜೀತದಾಳುಗಳು) ಅವರ ಹೆಸರಿನ ಮೇಲೆ ಬದಲಿ ಮಾಡಿದರು. ಗಂಡ ಹೆಂಡತಿಯರು ಬೇರೆ ಬೇರೆ ಇದ್ದೇವೆ ಬೇರೆ ಕುಟುಂಬವೆಂದು ತೋರಿಸುವುದಕ್ಕೆ ಕೋರ್ಟಿನ ಮೂಲಕ ಸುಳ್ಳು ವಿವಾಹ ವಿಚ್ಛೇದನೆ ಹೊಂದಿದ ಸಂದರ್ಭಗಳೂ ಇವೆ. ಈ ವಿಧವಾಗಿ ಕಾನೂನಿನ ಪ್ರಕಾರ ಹೆಚ್ಚಿನ (ಉಳಿದ ಭೂಮಿ) ಭೂಮಿ ಇರುವ ರೈತರು ಸಹ ತಮ್ಮ ಭೂಮಿಯನ್ನು ಕಾಪಾಡಿಕೊಳ್ಳಲು ಉಳಿದ ಭೂಮಿಯನ್ನು ತೋರಿಸಲಿಲ್ಲ. ಸರ್ಕಾರ ಸ್ವಾಧೀನ ಮಾಡಿಕೊಂಡ ಉಳಿದ ಭೂಮಿಯಲ್ಲಿ ಬಹಳ ಭೂಮಿ ಬೇಸಾಯ ಮಾಡಲು ಅನುಕೂಲವಿಲ್ಲದ್ದು ಆಗಿದೆ. ಪಟ್ಟಿಕೆ - 1 ರಲ್ಲಿ - 2005-06 ಕ್ಕೆ ಸಂಬಂಧಿಸಿದ ಗಣಾಂಕಗಳನ್ನು ನೋಡಿದರೆ ಅಧಿಕ ಶಾತ (83%) ರೈತರು ಅತಿ ಸಣ್ಣ ರೈತರೆಂದು ಅವರ ಕೆಳಗೆ ಬೇಸಾಯ ಮಾಡುವ ಭೂಮಿಯಲ್ಲಿ ಅರ್ಧದಷ್ಟು ಇದೆಯೆಂದು ಅರ್ಥವಾಗುತ್ತದೆ. ಇದಕ್ಕೆ ವಿರುದ್ಧವಾಗಿ ಕೇವಲ 1% ಮಾತ್ರವೇ ಇರುವ ಭೂ ಮಾಲಿಕರ ಆಧೀನದಲ್ಲಿ ಸುಮಾರು 6% ಭೂಮಿ ಇದೆ. ದೊಡ್ಡ ಭೂ ಮಾಲಿಕರು ತಮ್ಮ ಭೂಮಿಗಳನ್ನು ಚಿಕ್ಕ ಹಿಡುವಳಿಗಳಾಗಿ ವಿಭಜಿಸಿ ಅವುಗಳನ್ನು ಅಕ್ರಮವಾಗಿ ಸ್ನೇಹಿತರಿಗೆ ಆಳುಗಳ ಹೆಸರ ಮೇಲೆ ಬದಲಾಯಿಸುವುದರಿಂದ ಸಹ ಗಣಾಂಕಗಳು ಈಗ ಇವೆ. ಭಾರತದ ಎಲ್ಲಾ ರಾಜ್ಯಗಳಲ್ಲಿ ಇದೇ ಪರಿಸ್ಥಿತಿ ಮುಂದುವರೆಯುತ್ತಿದೆ.

ಭೂ ಪರಿಮಿತಿ ಕಾನೂನನ್ನು ಸಮರ್ಥವಂತವಾಗಿ ಜಾರಿಗೆ ತಂದ ರಾಜ್ಯಗಳಲ್ಲಿ ಪಶ್ಚಿಮ ಬೆಂಗಾಲ್ ಒಂದೇ. ಪಶ್ಚಿಮ ಬೆಂಗಾಲ್ ಸರ್ಕಾರ ಕೃತ ನಿಶ್ಚಯದಿಂದ ವ್ಯವಹರಿಸಿ ಅತಿ ಸಣ್ಣ ರೈತರ್ಗು - ಭೂಮಿ ಇಲ್ಲದ ಬಡವರಿಗೆ ಭೂಮಿ ನೀಡಿ ಭೂ ಪರಿಮಿತಿ ಕಾಯ್ದೆ ಚೆನ್ನಾಗಿ ಜಾರಿಗೆ ಬರುವಂತೆ ಮಾಡಿದೆ. ಫಲಿತವಾಗಿ ಸರ್ಕಾರ 12,94,000 ಎಕರೆಗಳ ಭೂಮಿಯನ್ನು ಸ್ವಾಧೀನಮಾಡಿಕೊಂಡಿತು. ಅದರಿಂದ 10,64,000 ಎಕರೆ ಭೂಮಿಯನ್ನು 26,51,000 ಕುಟುಂಬಗಳಿಗೆ ಹಂಚಿದೆ. ರಾಜಕೀಯ ನಿಬದ್ದತೆ ಇದ್ದರೆ ಈ ಕಾನೂನನ್ನು ಸಮರ್ಥವಂತವಾಗಿ ಜಾರಿಗೆ ತರಬಹುದೆಂದು ಬಡವರಿಗೆ ಆಸ್ತಿ ಭೂ ಸಂಪತ್ತು ದಕ್ಕುವಂತೆ ಮಾಡಬಹುದು ಎಂದು ಇದು ನಿರೂಪಿಸುತ್ತದೆ.

- ಭೂ ಪರಿಮಿತ ಕಾನೂನು ಅವಸರವೇಕೆ ಏರ್ಪಟ್ಟಿದೆ?
- ಈ ಕಾನೂನನ್ನು 1950 ರ ಒಳಗೆ ಜಾರಿಗೆ ತರಬೇಕಾಗಿತ್ತು ಎಂದು ಕೆಲವು ಜನ ಭಾವಿಸುವರು? ಆದರೆ ಇದರಿಂದ ಬಹಳ ವ್ಯತಿರೇಖತೆ ಬರುತ್ತಿತ್ತು ಎಂದು ಕೆಲವರ ಅಭಿಪ್ರಾಯ. ಈ ಎರಡು ಅಭಿಪ್ರಾಯಗಳ ಕುರಿತು ತರಗತಿಯಲ್ಲಿ ಚರ್ಚಿಸಿರಿ? ನೀವು ಯಾವುದರೊಂದಿಗೆ ಏಕೀಭವಿಸುವಿರಿ?
- ಭೂ ಪರಿಮಿತಿ ಕಾನೂನು ಆಂಧ್ರಪ್ರದೇಶದಲ್ಲಿ, ಪಶ್ಚಿಮ ಬೆಂಗಾಲ್‌ನಲ್ಲಿಯೂ ಜಾರಿಗೊಳಿಸಿದ ವಿಧಾನವನ್ನು ಹೋಲಿಸಿರಿ. ಈ ಕಾನೂನನ್ನು ಸಮರ್ಥವಾಗಿ ಹೇಗೆ ಜಾರಿಗೆ ತರಬೇಕೆಂದು ಚರ್ಚಿಸಿರಿ.

## ಮುಖ್ಯ ಪದಗಳು

| | | |
|---|---|---|
| 1. ಭೂ ಪರಿಮಿತಿ | 2. ಜಾಗೀರು ದಾರ ವ್ಯವಸ್ಥೆ | 3. ಫರ್ಮಾನಾ |
| 4. ಸಾಗುವಳಿದಾರರ ಕಾಯ್ದೆ | 5. ಭೂಧಾನ ಉದ್ಯಮ (ಚಳುವಳಿ) | 6. ಸರ್ಫ್-ಎ-ಖಾಸ್ |
| 7. ಭೂ ಹಿಡುವಳಿ | 8. ಬೇಗಾರ್/ ಬಿಟ್ಟಿ (ವೆಟ್ಟಿ) | 9. ನಷ್ಟ ಪರಿಹಾರ |

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿರಿ :

1. ಶಾಸನ ಸಭೆಗಳಲ್ಲಿ ಕಾನೂನುಗಳು ಮಾಡುವಾಗ ಅವುಗಳ ಮೇಲೆ ವಿವಿಧ ದೃಷ್ಟಿಕೋನಗಳಲ್ಲಿ ತುಂಬಾ ಚರ್ಚೆ ಜರುಗುತ್ತದೆ. 1950 ರಲ್ಲಿ ಭೂ ಸಂಸ್ಕರಣೆಗಳ ಕಾನೂನು ಮೇಲೆ ವಿವಿಧ ಅಭಿಪ್ರಾಯಗಳಿವೆ? ಆ ಅಭಿಪ್ರಾಯಗಳು ಏನಾಗಿರುತ್ತವೆ. ಯಾವ ದೃಷ್ಟಿಕೋನ ಬಲವಾಗಿರುತ್ತದೆ?
2. 1970 ರಲ್ಲಿ ಭೂ ಪರಿಮಿತ ಕಾನೂನು ಮಾಡುವಾಗ ಎಂತಹಾ ಅಭಿಪ್ರಾಯ ಇದ್ದಿರುತ್ತವೆ?
3. ಈ ಸಂಸ್ಕರಣೆಗಳಿಂದ ಮಹಿಳಾ ರೈತರಿಗೆ ಯಾವ ಲಬ್ದಿಉಂಟಾಗಿದೆ? ಕಾರಣಗಳು ಹೇಳಿರಿ.
4. ''ಜೀತ ಪದ್ಧತಿ'' ಎನ್ನುವುದು ನಿಮ್ಮ ಪ್ರಾಂತದಲ್ಲಿ ಇನ್ನೂ ಜಾರಿಯಲ್ಲಿ ಇದೆಯಾ ? ಅದರ ಮೇಲೆ ಒಂದು ನಿವೇದಿಕೆಯನ್ನು ತಯಾರು ಮಾಡಿರಿ.
5. ನೀವು ಒಬ್ಬ ಸಾಗುವಳಿದಾರ - ಭೂ ಸಂಸ್ಕರಣೆಗಳ ಕಾನೂನಿನಿಂದ ನಿನಗೆ ಭೂಮಿ ಲಭಿಸಿದೆ ? ನಿನ್ನ ಅನುಭೂತಿಗಳನ್ನು ಕುರಿತು ಬರೆಯಿರಿ.
6. ಭೂ ಸಂಸ್ಕರಣೆಗಳ ಕಾನೂನು ಸಮಯದಲ್ಲಿ ನೀನೊಬ್ಬ ಭೂ ಮಾಲಿಕ ಎಂದು ಊಹಿಸಿಕೊಂಡು, ಆಗ ನಿನ್ನ ಭಾವಗಳು, ಚರ್ಯಗಳು ಹೇಗೆ ಇರುತ್ತವೆ. ಬರೆಯಿರಿ?
7. ರೈತರು ಇಷ್ಟ ಬಂದಾಗ ತೊಲಗಿಸುವುದು ಸಾಗುವಳಿದಾರರಿಗೆ ಭೂ ಸಂಸ್ಕರಣೆಗಳಿಂದ ವಾಸ್ತವವಾಗಿ ನಷ್ಟ ಜರುಗಿದೆಯೆಂದು ಅಭಿಪ್ರಾಯ ಪಡುತ್ತಾರೆ. ಇದರಿಂದ ನೀವು ಏಕೀಭವಿಸುವಿರಾ? ನಿಮ್ಮ ಕಾರಣಗಳನ್ನು ಕೊಡಿರಿ?
8. ಸರ್ಕಾರ ಸಮರ್ಥವಂತವಾದ ಕಾನೂನು ತಂದರೂ, ಭೂ ಪರಿಮಿತ ಕಾನೂನು ಸಮರ್ಥವಾಗಿ ಜಾರಿಯಾಗಲಿಲ್ಲ ಏಕೆ?
9. ತೆಲಂಗಾಣ ನಕಾಶೆಯಲ್ಲಿ ನಲ್ಗೊಂಡ ಜಿಲ್ಲೆಯಲ್ಲಿರುವ ಪೋಚಂಪಲ್ಲಿ ಗ್ರಾಮವನ್ನು ಗುರ್ತಿಸಿರಿ.
10. ಸ್ವತಂತ್ರ್ಯ ಸಮರದಲ್ಲಿ ಗ್ರಾಮೀಣ ಬಡತನ ಎನ್ನುವ ಶೀರ್ಷಿಕೆಯಲ್ಲಿನ ಮೊದಲ ಪ್ಯಾರಾವನ್ನು ಓದಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. ಪ್ರಸ್ತುತ ಪರಿಸ್ಥಿತಿಗಳು ಸುಧಾರಿಸಿವೆಯಾ? ಹೇಗೆ?

### ಪ್ರಾಜೆಕ್ಟ್ :

ಐದು ಮಂದಿ ವಿದ್ಯಾರ್ಥಿಗಳು ಒಂದು ತಂಡವಾಗಿ ಏರ್ಪಟ್ಟು ನಿಮ್ಮ ಪ್ರಾಂತದಲ್ಲಿನ ಹಿರಿಯರೊಂದಿಗೆ ಭೂ ಸಂಸ್ಕರಣೆಗಳ ಜಾರಿಯಲ್ಲಿ ಅವರ ಅನುಭವಗಳನ್ನು ಕುರಿತು ಕೇಳಿರಿ. ಈ ಅಧ್ಯಾಯದಲ್ಲಿನ ಅಂಶಗಳು ನಿಮ್ಮ ಊರಿನಲ್ಲಿ ಸಹ ನಡೆದಿವೆಯೇ ತಿಳಿಯಿರಿ. ಇದರ ಮೇಲೆ ಒಂದು ನಿವೇದಿಕೆಯನ್ನು ತಯಾರಿಸಿ ತರಗತಿಯಲ್ಲಿ ಚರ್ಚಿಸಿರಿ.

SCERT TELANGANA

ಘಟಕ 17

# ಬಡತನ - ಅವಗಾಹನೆ

## ಗ್ರಾಮೀಣ ಪ್ರದೇಶಗಳಲ್ಲಿ ದುರವಸ್ಥೆ (ದುಸ್ಥಿತಿ) :

ತೆಲಂಗಾಣ ನಲ್ಗೊಂಡ ಜಲ್ಲೆಯಲ್ಲಿ ರಾಮಚಾರಿ ಬಡಿಗನಾಗಿ ಕೆಲಸಮಾಡುತ್ತಿದ್ದನು. ಗ್ರಾಮದಲ್ಲಿ ರೈತರಿಗೋಸ್ಕರ ಉಪಕರಣಗಳು ಕೆಲಸದ ಸಾಮಾನುಗಳನ್ನು ತಯಾರಿಸುತ್ತಿದ್ದನು. ಆತನಿಗೆ ಭೂಮಿಯಾಗಲಿ, ಪಶುಗಳಾಗಲೀ ಇದ್ದಿಲ್ಲ. ರಾಮಾಚಾರಿಯು ರೈತನಾಗಿರದಿದ್ದರೂ ಆತನ ಜೀವನ ಗ್ರಾಮದಲ್ಲಿಯ ವ್ಯವಸಾಯ ಕೆಲಸಗಳ ಮೇಲೆ ಆಧಾರಪಟ್ಟಿದೆ.

ಕೆಲವು ವರ್ಷಗಳ ಹಿಂದೆ ರಾಮಾಚಾರಿಯ ಹತ್ತಿರ ಕೆಲಸ ಮಾಡಿಸಿಕೊಳ್ಳುವುದಕ್ಕೆ 40 ಮಂದಿ ಜನರು ಬರುತ್ತಿದ್ದರು, ಅವರಲ್ಲಿ ಹೆಚ್ಚು ಜನರು ರೈತರು. ಆತನು ಮಾಡಿದ ಕೆಲಸಗಳಿಗೆ ಪ್ರತಿಫಲವಾಗಿ ರೈತರು ಧಾನ್ಯದ ರೂಪದಲ್ಲಿ ಕೊಡುತ್ತಿದ್ದರು. ಒಬ್ಬೊಬ್ಬ ರೈತ ವರ್ಷಕ್ಕೆ 70 ಕೇಜಿಗಳಷ್ಟು ಧಾನ್ಯವನ್ನು ಕೊಡುತ್ತಿದ್ದರು. ಈ ರೀತಿಯಾಗಿ ಬಂದ 2800 ಕೇಜಿಗಳ ಧಾನ್ಯದಲ್ಲಿ ಕುಟುಂಬಕ್ಕೆ ಬೇಕಾದಷ್ಟು ಉಳಿಸಿಕೊಂಡು ಉಳಿದುದನ್ನು ಮಾರುಕಟ್ಟೆಯಲ್ಲಿ ಮಾರುತ್ತಿದ್ದನು. 70 ಕೇಜಿಗಳಷ್ಟು ಧಾನ್ಯವನ್ನು 375 ರೂಪಾಯಿಗಳಿಗೆ ಮಾರುತ್ತಿದ್ದನು. ಕೆಲವು ವರ್ಷಗಳಿಂದ ಇಂದಿನವರೆಗೆ ಈ ವಿಧವಾಗಿ ಕುಟುಂಬಕ್ಕೆ ಸರಿಹೋಗುವ ಅಕ್ಕಿಯೊಂದಿಗೆ ವರ್ಷಕ್ಕೆ 8000



ರೂಪಾಯಿಗಳು ಪಡೆಯುತ್ತಿದ್ದನು. ಇದರೊಂದಿಗೆ ಕುಟುಂಬವನ್ನು ಜಾಗ್ರತೆಯಿಂದ ಸಾಗಿಸುತ್ತಿದ್ದನು.

ವ್ಯವಸಾಯ ಕೆಲಸಗಳಲ್ಲಿ ಬದಲಾವಣೆಗಳು ಬಂದುದರಿಂದ ಸಮಸ್ಯೆ ಮೊದಲಾಯಿತು. ಊರಿನಲ್ಲಿ 12 ಟ್ರಾಕ್ಟರ್‌ಗಳು ಬಂದುದರಿಂದ ಆತನಿಗೆ ಕೆಲಸ ಕಡಿಮೆಯಾಯಿತು. ಹಿಂದಿನ ಅಧ್ಯಾಯದಲ್ಲಿ ಓದಿದಂತೆ ಚಿಕ್ಕ ದೊಡ್ಡ ರೈತರು ಟ್ರಾಕ್ಟರ್‌ಗಳು ಸ್ವತಃ ಆಗಲಿ, ಬಾಡಿಗೆಗೆ ಆಗಲಿ ಉಪಯೋಗಿಸಿಕೊಳ್ಳುವುದರಿಂದ ಎತ್ತುಗಳ ಬಳಕೆ ಕಡಿಮೆಯಾಯಿತು. ಅಷ್ಟೇ ಅಲ್ಲ ಊರಿನಲ್ಲಿ ಚಿಕ್ಕ ರೈತರಿಗೆ ಬರುಬರುತ್ತಾ ವ್ಯವಸಾಯಮಾಡುವುದು ಕಷ್ಟವಾಗುತ್ತದೆ. ಕಾಲುವೆ ಒಣಗಿ ಹೋಗಿರುವುದರಿಂದ ನೀರಾವರಿ ಸೌಕರ್ಯ ಇಲ್ಲದಂತಾಗಿದೆ. ಕೊಳವೆ ಬಾವಿಗಳು ಹಾಕಿಸಲು ಬೀಜಗಳು, ಗೊಬ್ಬರಗಳು, ಕ್ರಿಮಿ ನಾಶಕಗಳು ಕೊಂಡುಕೊಳ್ಳುವುದಕ್ಕೆ ರೈತರು ಹೆಚ್ಚಿನ ಬಡ್ಡಿಗೆ ಸಾಲ ಮಾಡಬೇಕಾಗುತ್ತದೆ. ಈ ಸಾಲಗಳು ತಿರುಗಿ ಕಟ್ಟುವುದು, ಪ್ರತ್ಯೇಕವಾಗಿ ಬೆಳೆಗಳು ನಷ್ಟವಾದಾಗ ಕಷ್ಟವಾಗುತ್ತದೆ. ರಾಮಾಚಾರಿ ಅವರ ಊರಿನಲ್ಲಿ ಸಾಲ ಮಾಡಿಕೊಂಡ ರೈತರು 30 ಕ್ಕಿಂತ ಹೆಚ್ಚು ಎತ್ತುಗಳನ್ನು ಮಾರಿಕೊಳ್ಳಬೇಕಾಗುತ್ತದೆ. ಅಂದರೆ ಅವುಗಳಿಗೆ ಅನುಬಂಧವಾಗಿ ವಿಧವಿಧವಾದ ಕೆಲಸಗಳು ಮಾಡುವ ರಾಮಾಚಾರಿಗೆ ಕೆಲಸ ಕಡೆಮೆಯಾಗಿದೆ ಎಂಬ ಮಾತು. ರಾಮಾಚಾರಿ ತಯಾರುಮಾಡುವ ಉಪಕರಣಗಳಿಗೆ ಬೇಡಿಕೆ ಇಲ್ಲದಂತಾಯಿತು. ಒಂದು ಸಮದಯಲ್ಲಿ ಬರುವ 40 ಜನಕ್ಕೆ ಬದಲು ಈಗ ಮೂರು ಜನ, ನಾಲ್ಕು ಜನರು ಬಂದು ಕೆಲಸ ಮಾಡಿಸಿಕೊಳ್ಳುತ್ತಾರೆ.

ಊರಿನಲ್ಲಿ ಕೆಲಸ ಕಡೆಮೆಯಾದುದರಿಂದ ರಾಮಾಚಾರಿಯ ಹೆಂಡತಿ ಅರುಣ ವಿಜಯವಾಡದಲ್ಲಿ ಚಪ್ಪಲಿಗಳ ಕಂಪನಿಯಲ್ಲಿ ಕೆಲಸ ಮಾಡುತ್ತಿರುವಳು ನನಗೆ ಬೇರೆ ದಾರಿ ಇಲ್ಲದಂತಾಗಿದೆ ಎಂದು ಅವಳು ಹೇಳಿದಳು. ಇದಕ್ಕಿಂತ ಮೊದಲು ನಾನೆಂದೂ ಕೆಲಸಕ್ಕೆ ವಲಸೆ ಹೋಗಿಲ್ಲ. ಆದರೆ ಊರಿನಲ್ಲಿ ಕೆಲಸ ಸಿಗುವ ಅವಕಾಶಗಳು ಪೂರ್ತಿಯಾಗಿ ಇಲ್ಲದಂತಾಗಿದೆ. ತನ್ನ ಮೂರು ಜನ ಮಕ್ಕಳನ್ನು ಗಂಡನ ಹತ್ತಿರ ಬಿಟ್ಟು ಅವಳು ಒಂದು ತಿಂಗಳವರೆಗೆ ಕೆಲಸಕ್ಕೆ ಹೋಗುತ್ತಾಳೆ.

SCERT TELANGANA

ಮನೆಯ ಹತ್ತಿರ ಮುದುಕರು, ಮಕ್ಕಳನ್ನು ಬಿಟ್ಟು ಊರಿನಿಂದ 250 ಜನರು ಕೆಲಸ ಹುಡುಕುತ್ತಾ ವಲಸೆ ಹೋಗಿದ್ದಾರೆ.

ಅರುಣ ವಲಸೆಗೆ ಹೋದಾಗ ಅವಳ ಕುಟುಂಬವು ಬಹಳ ಸಲ ಹಸಿವೆಯಿಂದ ಕಾಲ ಕಳೆಯಬೇಕಾಗುತ್ತಿತ್ತು. ನುಚ್ಚು ಕೊಳ್ಳುವುದಕ್ಕೆ ಸಹ ರಾಮಾಚಾರಿ ನೆರೆಹೊರೆಯ ಮನೆಯವರ ಹತ್ತಿರ ಸಾಲಮಾಡಬೇಕಾಗುತ್ತಿತ್ತು. ರಾಮಾಚಾರಿಯ ಆರೋಗ್ಯವು ಸರಿಯಾಗಿ ಇರುತ್ತಿರಲಿಲ್ಲ. ಆತನು ಪದೇ ಪದೇ ರೋಗಗಳಿಂದ ನರಳುತ್ತಿದ್ದನು. ಮೊದಲ ಹಾಗೆ ಅವನಿಗೆ ಕೆಲಸ ಮಾಡಲು ಆಗುತ್ತಿರಲಿಲ್ಲ.

- ರಾಮಾಚಾರಿ ಜೀವನೋಪಾದಿ ಗ್ರಾಮದಲ್ಲಿಯ ವ್ಯವಸಾಯದೊಂದಿಗೆ ಯಾವ ವಿಧವಾಗಿ ಸಂಬಂಧ ಹೊಂದಿತ್ತು ?
- ರಾಮಾಚಾರಿಯ ಕುಟುಂಬವು ಕಷ್ಟಗಳನ್ನು ಎದುರಿಸುವುದಕ್ಕೆ ಕಾರಣ :

  (ಎ) ರಾಮಚಾರಿ ಸರಿಯಾದ ಪ್ರಯತ್ನಗಳು ಮಾಡದೇ ಹೋಗುವುದು, ತಕ್ಕ ಅವಗಾಹನೆ ಇಲ್ಲದೇಹೋಗುವುದು, ಅಥವಾ

  ಬಿ) ಗ್ರಾಮದಲ್ಲಿ ಜೀವನೋಪಾದಿಗಳ ಪರಿಸ್ಥಿತಿ
- ರಾಮಾಚಾರಿ ಕುಟುಂಬಕ್ಕೆ ಪ್ರತಿ ದಿನ ಎರಡು ಹೊತ್ತು ಊಟ ಸಿಗಬೇಕೆಂದರೆ ಏನು ಮಾಡಬೇಕು ? ಆಲೋಚಿಸಿರಿ.
- ರಾಮಾಚಾರಿ ಗ್ರಾಮದಲ್ಲಿಯ ರೈತರಿಗೆ ಮಧ್ಯ ಬದಲಾವಣೆ / ಲಾವಾದೇವಿಯನ್ನು ಹೇಗೆ ವರ್ಣಿಸುತ್ತೀಯ ?
- ಸಾಧಾರಣವಾಗಿ ವರ್ಷಕ್ಕೆ ರಾಮಾಚಾರಿ ತನ್ನ ಕುಟುಂಬ ಅವಸರಗಳಿಗೆ ಎಷ್ಟು ಕೇಜಿಗಳ ಧಾನ್ಯವನ್ನು ಇಟ್ಟುಕೊಳ್ಳುತ್ತಿದ್ದನು?
- (ಆಹಾರ ಧಾನ್ಯಗಳು ಅಲ್ಲದೇ) ಕುಟುಂಬದ ಖರ್ಚು ಗಳಿಗೆ ವರ್ಷಕ್ಕೆ 8000 ರೂಪಾಯಿಗಳು ಸರಿಹೋಗುತ್ತವೆಯಾ?

ಚಂದ್ರಯ್ಯ ಪಟ್ಟಣದ ಮಾರುಕಟ್ಟೆಯಲ್ಲಿ ಬಂಡಿ ಎಳೆಯುತ್ತಾ, ಪಟ್ಟಣದ ಕೊಳಚೆ ಪ್ರದೇಶದಲ್ಲಿರುತ್ತಾನೆ. ಆತನ ಕುಟುಂಬ ಊರಿನಲ್ಲಿರುತ್ತದೆ. ಒಂದೊಂದು ದಿನ ಅವನು ನೂರು ರೂಪಾಯಿಗಳವರೆಗೆ ಸಂಪಾದಿಸುತ್ತಿದ್ದನು. ಒಂದೊಂದು ಸಲ 40 ರೂಪಾಯಿಗಳಿಗಿಂತ ಹೆಚ್ಚು ಬರುತ್ತಿರಲಿ. ಹಗಲು ಮಾರುಕಟ್ಟೆಯಲ್ಲಿ ಬಂಡಿಯ ಮೇಲೆ ಮಾರುವ ರೊಟ್ಟಿ, ಪಲ್ಲೆ ಕೊಂಡುಕೊಂಡು ತಿನ್ನುತ್ತಿದ್ದನು. ಸ್ವಲ್ಪ ಹಣ ಮನೆಗೆ ಕೂಡ ಕಳುಹಿಸಬೇಕು. ಆದುದರಿಂದ ಅವನು ಮಾಡುವ ಶಾರೀರಿಕ ಶ್ರಮಕ್ಕೆ ಸರಿಹೋಗುವಂತೆ ಬಹಳ ಕಡಿಮೆ ತಿನ್ನುತ್ತಿದ್ದನು. ಸಾಯಂಕಾಲ ಆಗುವುದರೊಳಗಾಗಿ ಅವನು ನೀರಸನಾಗುತ್ತಿದ್ದನು. ರಾತ್ರಿ ಹೊಲಗೇರಿಯಲ್ಲಿ ಇರುವ ಬಂಡಿಯವರೆಲ್ಲಾ ವಂತುಗಳ ಪ್ರಕಾರ ಎಲ್ಲರಿಗೆ ಅಡುಗೆ ಮಾಡುತ್ತಿದ್ದರು. ಈ ವಿಧವಾಗಿ ಸರಿಯಾದ ಆಹಾರವಿಲ್ಲದೆ ಇಪ್ಪತ್ತು ವರ್ಷ ಕಳೆದ ಚಂದ್ರಯ್ಯ ದೇಹದಲ್ಲಿ ಶಕ್ತಿಯಲ್ಲಿನ ಸಾರ ಕಡಿಮೆಯಾಗಿದೆ. ಅವನು ತನ್ನ ವಯಸ್ಸಿಗಿಂತ ಬಹಳ ಮುದುಕನಾಗಿ ಕಾಣಿಸುತ್ತಾನೆ.

- ಚಂದ್ರಯ್ಯ, ರಾಮಾಚಾರಿ ಜೀವನದಲ್ಲಿಯ ಹೋಲಿಕೆಗಳನ್ನು ಚರ್ಚಿಸಿರಿ.

### ತೀವ್ರವಾದ ಹಸಿವೆಯು ಸಹ ಬಡತನವೇ :

ಉಪವಾಸ ಮಲಗಿಕೊಳ್ಳುವುದು ಬಹಳ ವಿಸ್ತೃತವಾಗಿದೆ. ರಾಮಾಚಾರಿ, ಚಂದ್ರಯ್ಯರಂತೆ ಭಾರತೀಯ ಗ್ರಾಮಗಳು ಪಟ್ಟಣಗಳಲ್ಲಿ ಅನೇಕ ಜನ ಆರೋಗ್ಯವಾಗಿ ಇರುವುದಕ್ಕೆ



*ಚಿತ್ರ 17.1: ಮೇಲಿನ ಪಟ್ಟಣದ ಚಿತ್ರದಲ್ಲಿಯ ಜೀವನ ವಿಧಾನಗಳಲ್ಲಿ ವ್ಯತ್ಯಾಸಗಳನ್ನು ಕುರಿತು ಚರ್ಚಿಸಿರಿ.*

SCERT TELANGANA

ಪ್ರತಿದಿನ ಚೆನ್ನಾಗಿ ಕೆಲಸ ಮಾಡುವುದಕ್ಕೆ ತಕ್ಕಷ್ಟು ಆಹಾರವನ್ನು ತಿನ್ನುವ ಪರಿಸ್ಥಿತಿಯಲ್ಲಿ ಇಲ್ಲ. ಬೀದಿಗಳಲ್ಲಿ ನಾವು ನೋಡುವ ಅನಾಥರು, ಮುದುಕರ ಹಾಗೆ ಅವರ ಪರಿಸ್ಥಿತಿ ಅಷ್ಟು ದಯನೀಯ ಸ್ಥಿತಿ ಅನಿಸದೇ ಹೋಗಬಹುದು. ಇವರು ನಮಗೆ ಚೆನ್ನಾಗಿ ಇದ್ದಾ ಹಾಗೆ ಕಾಣುತ್ತಾರೆ. ಆದರೆ ಅವರು ಹಸಿವಿಗೆ, ಬೇಸರಕ್ಕೆ ಗುರಿಯಾಗುತ್ತಾರೆ. ಅವರಿಗೆ ತಿನ್ನುವುದಕ್ಕೆ ಸರಿಹೋಗುವಷ್ಟು ಆಹಾರ ಸಿಗುವುದಿಲ್ಲ. ಅವರು ತಿನ್ನುವುದಕ್ಕಿಂತ ಕಡಿಮೆ ತಿನ್ನುತ್ತಾರೆ. ಈ ಪರಿಸ್ಥಿತಿ ಬಹಳ ಕಾಲವು ಮುಂದುವರೆ ಯುವುದನ್ನು ಧೀರ್ಘಕಾಲ ಅಥವಾ ತೀವ್ರವಾದ ಹಸಿವೆ ಎನ್ನುತ್ತಾರೆ. ಆದುದರಿಂದ ಅವರು ಹೆಚ್ಚಾಗಿ ದಣಿದು ಕೊಳ್ಳುವರು, ಬಲಹೀನವಾಗಿ ಇದು ಪದೇ ಪದೇ ರೋಗಗಳಿಗೆ ಒಳಗಾಗುತ್ತಿದ್ದರು.

ಸ್ನಾಯುಗಳನ್ನು ಕದಲಿಸುವುದಕ್ಕೆ, ನಡೆಯುವುದಕ್ಕೆ, ಮಾತನಾಡುವುದಕ್ಕೆ ಪ್ರತಿ ದಿವಸ ಕೆಲಸಗಳು ಮಾಡುವುದಕ್ಕೆ ನಮಗೆ ಶಕ್ತಿ ಬೇಕು. ಈ ಶಕ್ತಿಯು ನಾವು ತಿನ್ನುವ ಆಹಾರದಿಂದ ಬರುತ್ತದೆ. ಈ ಶಕ್ತಿಯನ್ನು ಕಿಲೋ ಕ್ಯಾಲರಿಯಲ್ಲಿ ಅಳೆಯುತ್ತಾರೆ. ಉದಾಹರಣೆಗೆ ಒಂದು ಚಮಚ ಸಕ್ಕರೆಯಿಂದ 40 ಕಿಲೋಕ್ಯಾಲರಿಗಳೂ ಶಕ್ತಿ ಬರುತ್ತದೆ. ಒಂದು ಚಮಚೆ ಎಣ್ಣೆಯಿಂದ 90 ಕಿಲೋ ಕ್ಯಾಲರಿಗಳ ಶಕ್ತಿ ಲಭಿಸುತ್ತದೆ. ಅಟ್ಟ ಪೆಟ್ಟಿಗೆಗಳಲ್ಲಿ ಇರುವ ಆಹಾರ ಕೊಂಡಾಗ ಅದನ್ನು ತಿಂದರೆ ಬರುವ ಶಕ್ತಿ ವಿವರಗಳು ಅದರ ಮೇಲೆ ಇರುತ್ತವೆ.

ಗ್ರಾಮೀಣ ಪ್ರದೇಶಗಳಲ್ಲಿ ಇರುವವರಿಗೆ 2400 ಪಟ್ಟಣಗಳಲ್ಲಿ ಇರುವವರಿಗೆ 2100 ಕಿಲೋ ಕ್ಯಾಲರಿಗಳ ಶಕ್ತಿ ಕೊಡುವ ಆಹಾರ ಪ್ರತಿದಿನ ಅವಸರವೆಂದು ರಾಷ್ಟ್ರೀಯ ಮಟ್ಟದಲ್ಲಿ ಪ್ರಾಮಾಣಿಕವಾಗಿ ನಿರ್ಧರಿಸಿದ್ದಾರೆ. ಒಬ್ಬ ಮನುಷ್ಯನು ಆರೋಗ್ಯವಾಗಿರಬೇಕಾದರೆ ಸರಾಸರಿ ದಿನಕ್ಕೆ ಕನಿಷ್ಟ 2100 ಕಿಲೋಕ್ಯಾಲರಿ ಶಕ್ತಿ ಕೊಡುವ ಆಹಾವರನ್ನು ತೆಗೆದುಕೊಳ್ಳಬೇಕು. ಶಾರೀರಿಕ ಶ್ರಮ ಹೆಚ್ಚಾಗಿ ಮಾಡುವವರಿಗೆ ದಿನಕ್ಕೆ ಕನಿಷ್ಟ 2400 ಕಿಲೋ ಕ್ಯಾಲರಿಗಳ ಶಕ್ತಿ ಬೇಕು.

ಭಾರತ ದೇಶದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಶೇಕಡ 80 ದಷ್ಟು ಜನರು ಕನಿಷ್ಟಕ್ಯಾಲರೀಗಳು ಕೊಡುವ ಆಹಾರವನ್ನು ತಿನ್ನುತ್ತಿಲ್ಲವೆಂದರೆ ಆಶ್ಚರ್ಯವುಂಟಾಗುತ್ತದೆಯಾ ? ಅಂದರೆ ಪ್ರತಿ ಐದು ಮಂದಿಯಲ್ಲಿ ನಾಲ್ಕು ಜನ ಸರಿಹೋಗುವ ಕ್ಯಾಲರೀಗಳು ಇಲ್ಲದ ಆಹಾರವನ್ನು ತಿನ್ನುತ್ತಿದ್ದಾರೆ. ಈ ಕ್ಯಾಲರೀಗಳ ಲೋಪವು ಗ್ರಾಮೀಣ ಪ್ರದೇಶಗಳಿಗೆ ಪರಿಮಿತವಾಗಿಲ್ಲ. ಪಟ್ಟಣ ಪ್ರದೇಶಗಳಲ್ಲಿ ಸಹ ಪ್ರತಿ ಐದು ಮಂದಿಯಲ್ಲಿ ಮೂರು ಜನ ಕ್ಯಾಲಿರೀಗಳು ಕಡಿಮೆಯಾಗಿ ಇರುವ ಆಹಾರವನ್ನು ತೆಗೆದುಕೊಳ್ಳುತ್ತಾರೆ.

ವರ್ಷಗಳು ಮುಂದುವರೆದಂತೆ ಅತ್ಯಂತ ಬಡವರ ಆಹಾರದಲ್ಲಿ ಕ್ಯಾಲರಿಗಳ ಪರಿಮಾಣವು ಕಡಿಮೆಯಾಗುವುದು ಬಹಳ ಆಂದೋಲನೆ ಉಂಟುಮಾಡುತ್ತದೆ. 1980ಕ್ಕೆ ಹೋಲಿಸಿದರೆ ಪ್ರಸ್ತುತ ನಮ್ಮ ದೇಶದ ಸಂಪತ್ತು ಹೆಚ್ಚಾದಂತೆ ಅನಿಸುತ್ತದೆ. ಮೊದಲಿಗಿಂತ ಹೆಚ್ಚಿನ ವಸ್ತುಗಳೂ,ಸೇವೆಗಳು ದೊರೆಯಲು ಸಾಧ್ಯವಾಗಿವೆ. ಆದರೆ, ಅತ್ಯಂತ ಬಡವರಲ್ಲಿ ಮಾತ್ರ ಹಸಿವೆಗೀಡಾಗುವುದು ಹೆಚ್ಚಾಗಿದೆ. ವಾಸ್ತವವಾಗಿ ಅವರಿಗೆ 25 ವರ್ಷಗಳ ಹಿಂದೆಗಿಂತ ಈಗ ಕಡಿಮೆ ಕ್ಯಾಲರಿಗಳೂ ಸಿಗುತ್ತವೆ.

- ದೇಶದಲ್ಲಿ ಅತ್ಯಂತ ಶ್ರೀಮಂತರಾದ ಶೇಕಡ 25 ಪ್ರಜೆಗಳು ಸರಾಸರಿ ದಿನಕ್ಕೆ ಎಷ್ಟು ಕ್ಯಾಲರಿಗಳನ್ನು ತೆಗೆದುಕೊಳ್ಳುತ್ತಾರೆ.
- ದೇಶದಲ್ಲಿ ಅತ್ಯಂತ ಬಡವರಾದ ಶೇಕಡ 25 ಜನಗಳು ದಿನಾಲು ತೆಗೆದುಕೊಳ್ಳವಾದ ಕ್ಯಾಲರಿ ಗಳಿಗಿಂತ ಸರಾಸರಿ ಅವರು ತೆಗೆದುಕೊಳ್ಳುವ ಕ್ಯಾಲರಿಗಳು ಎಷ್ಟು ಶೇಖಡ ಕಡಿಮೆ.
- ಬಡ ಜನರು ಬಹಳ ಕಡಿಮೆ ಕ್ಯಾಲರೀಗಳು ತೆಗೆದುಕೊಳ್ಳವುದಕ್ಕೆ ಕಾರಣಗಳೇನು?

ಹಸಿವೆಯನ್ನು ತಾಳುವುದು ಬಹಳ ಕಷ್ಟಕರವಾಗಿ ಇರುವುದೇ ಅಲ್ಲ. ಅದರಿಂದ ಎಷ್ಟು ತೊಂದರೆ ಉಂಟಾಗುತ್ತದೆ. ತೀವ್ರವಾದ ಹಸಿವೆಯಿಂದ ಬಳಲುವವರು ತಕ್ಕಷ್ಟು ಪೋಷಕಗಳಿರುವ ಆಹಾರ ಸಿಗುವುದಿಲ್ಲ. ಸರಿಹೋಗುವಷ್ಟು ಆಹಾರವು ತೆಗೆದುಕೊಳ್ಳದಿದ್ದರೆ ತೀವ್ರ ಹಸಿವೆಯೊಂದಿಗೆ, ಕ್ಯಾಲರಿಗಳ ಲೋಪಕ್ಕೆ ಗುರಿಯಾಗುತ್ತಾರೆ. ಪೋಷಕ ಆಹಾರಲೋಪವಿದ್ದರೆ ಓದುವುದು, ಕೆಲಸ ಮಾಡುವುದು, ಶಾರೀರಕ ಶ್ರಮ ಮಾಡುವುದು ಕಷ್ಟವಾಗುತ್ತದೆ. ಪೋಷಕ ಆಹಾರ ಲೋಪ ಇರುವ ಮಕ್ಕಳು ಆರೋಗ್ಯವಾಗಿರುವ ಮಕ್ಕಳಿಗಿಂತ ವೇಗವಾಗಿ ಬೆಳೆಯು ವುದಿಲ್ಲ. ಮಾನಸಿಕವಾಗಿ ಸಹ ಅಷ್ಟು ಚೆನ್ನಾಗಿ ವೃದ್ಧಿ ಹೊಂದುವುದಿಲ್ಲ. ಪ್ರತಿದಿನ ಹಸಿವೆಯಿಂದ ಇರುವುದರಿಂದ ರೋಗ ನಿರೋಧಕ ಶಕ್ತಿ ಕಡಿಮೆಯಾಗಿ ಅವರು ರೋಗಗಳಿಗೆ ಬಲಿಯಾಗುತ್ತಾರೆ. ತೀವ್ರವಾದ ಹಸಿವೆಗೆ ಳಗಾದ ತಾಯಂದಿರು ಸಾಧಾರಣವಾಗಿ ಭಾರ ಕಡಿಮೆ, ಬಲಹೀನವಾದ ಮಕ್ಕಳಿಗೆ ಜನ್ಮ ಕೊಡುತ್ತಾರೆ.

## ಆಹಾರ ಅಸಮಾನತೆ :

ಶಾಸ್ತ್ರಜ್ಞರು ಪರಿಶೋಧನೆ ಕೇಂದ್ರಗಳಲ್ಲಿ ಪ್ರಯೋಗಗಳು ಮಾಡಿ ಗಣಾಂಕಗಳು ಶೇಖರಿಸಿದಂತೆ ಸಾಮಾಜಿಕ ಶಾಸ್ತ್ರವೇತ್ತರಿಗೆ ಸರ್ವೇಗಳು ಬೆಲೆಬಾಳುವ ಗಣಾಂಕಗಳನ್ನು ವಿಶ್ಲೇಷಣೆಗೆ ಋಜುವಾತುಗಳನ್ನು ಕೊಡುತ್ತವೆ. ಪ್ರಜೆಗಳ ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳು ತಿಳಿದುಕೊಳ್ಳುವುದಕ್ಕೆ ಭಾರತ ಸರಕಾರ ಪ್ರತಿ 4 ವರ್ಷಕ್ಕೆ ಒಂದು ಬಾರಿ ರಾಷ್ಟ್ರೀಯ ನಮೂನೆ ಸರ್ವೇಯನ್ನು ನಿರ್ವಹಿಸುತ್ತದೆ. ದೇಶದಾದ್ಯಂತ ದೊಡ್ಡ ಸಂಖ್ಯೆಯಲ್ಲಿ ಕುಟುಂಬಗಳಿಂದ ಇಂಟರ್ವ್ಯೂಗಳ ಮುಖಾಂತರ ಸರ್ವೇ ಮಾಡಿ ಬೇಕಾದಂತ ಸಮಾಚಾರವನ್ನು ಶೇಖರಿಸುತ್ತಾರೆ. ಪ್ರಜೆಗಳ ಉದ್ಯೋಗ, ಅವರು ಮಾಡುವ ಖರ್ಚು, ಪಾಠಶಾಲೆ ವಿದ್ಯೆ ಆರೋಗ್ಯ ಕುಡಿಯುವ ನೀರಿನಂತಹ ವಿಷಯಗಳಲ್ಲಿ ಏನಾಗುತ್ತದೋ ತಿಳಿದುಕೊಳ್ಳುವುದಕ್ಕೆ ಪರಿಶೋಧಕರು ಈ ಗಣಾಂಕಗಳನ್ನು ಉಪಯೋಗಿಸುತ್ತಾರೆ. ಸರಕಾರದ ವಿಧಾನಗಳು ಸರಿಯಾದ ಮಾರ್ಗದರ್ಶನದಲ್ಲಿ ವೆಯೋ ಇಲ್ಲವೋ ತಿಳಿದುಕೊಳ್ಳುವುದಕ್ಕೆ ಈ ಗಣಾಂಕಗಳು ಪ್ರತ್ಯೇಕವಾಗಿ ಉಪಯೋಗವಾಗುತ್ತವೆ.

2004 ರಲ್ಲಿ ನಡೆಸಿದ ರಾಷ್ಟ್ರೀಯ ನಮೂನೆ ಸರ್ವೇಯಲ್ಲಿ ಸಮಾಚಾರದ ಆಧಾರವಾಗಿ ಕ್ಯಾಲರಿಗಳ ಬಳಕೆಯನ್ನು ತಿಳಿಯಪಡಿಸುವ ರೇಖಾ ಚಿತ್ರ 1 ತಯಾರು ಮಾಡಿದ್ದಾರೆ. ಸರಾಸರಿ ಪ್ರತಿಯೊಬ್ಬ ವ್ಯಕ್ತಿಯು ಎಷ್ಟು ಕ್ಯಾಲರಿಗಳು ತೆಗೆದುಕೊಳ್ಳುತ್ತಾರೋ ತಿಳಿದುಕೊಳ್ಳವುದಕ್ಕೆ ಪರಿಶೋಧಕರು ಪ್ರಯತ್ನಿಸಿದ್ದಾರೆ, ಈ ವಿಷಯದಲ್ಲಿ ಶ್ರೀಮಂತರಿಗೂ ಬಡವರಿಗೂ ಮಧ್ಯ ಬಹಳ ವ್ಯತ್ಯಾಸ ಇದೆ ಎಂದು ತಿಳಿದುಕೊಂಡಿದ್ದಾರೆ. ಬಹಳ ಕಡಿಮೆ ಆದಾಯ ಇದ್ದು, ಬಹಳ ಕಡಿಮೆ ಖರ್ಚು ಮಾಡುವವಂತಹವರು (ಕಡು ಬಡವರು) ಸರಾಸರಿ ಪ್ರತಿ ದಿನವು 1624 ಕಿಲೋ ಕ್ಯಾಲರಿಗಳ ಆಹಾರವನ್ನು ತೆಗೆದುಕೊಳ್ಳುತ್ತಾರೆ. ಆದಾಯ, ಖರ್ಚಿನೊಂದಿಗೆ ತೆಗೆದುಕೊಳ್ಳುವ ಕ್ಯಾಲರಿಗಳು ಸಹ ಹೆಚ್ಚಾಗುತ್ತಿರುತ್ತವೆ. ಬಡವರು ತೀವ್ರ ಶಾರೀರಿಕ ಶ್ರಮ ಮಾಡುತ್ತಿದ್ದುದರಿಂದ ಅವರು ಇನ್ನೂ ಹೆಚ್ಚಿನ ಕ್ಯಾಲರಿಗಳು ತೆಗೆದುಕೊಳ್ಳಬೇಕು ಆದರೆ ಜನಸಂಖ್ಯೆಯಲ್ಲಿ ಅತ್ಯಂತ ಬಡವರು ಅತ್ಯಂತ ಶ್ರೀಮಂತರಿಗಿಂತ ಬಹಳ ಕಡಿಮೆ ಕ್ಯಾಲರಿಗಳು ತೆಗೆದುಕೊಳ್ಳುತ್ತಾರೆ.

ಹೆಚ್ಚಿನ ಶೇಖಡ ಪ್ರಜೆಗಳಲ್ಲಿ ಅವರು ದಿನಾಲು ತಿನ್ನುವ ಆಹಾರದಿಂದ ಅವರಿಗೆ ಅವಸರವಾದಷ್ಟು ಕ್ಯಾಲರಿಗಳು ದೊರೆಯುವುದಿಲ್ಲ. ಪ್ರಾಮಾಣಿಕ ಮಟ್ಟದಲ್ಲಿ ಕ್ಯಾಲರಿಗಳು ತೆಗೆದುಕೊಂಡು ಅವರೆಲ್ಲರನ್ನು ಬಡವರಾಗಿ ಪರಿಗಣಿಸಬಹುದು.




**ಸೂಚನೆ :** ಇಲ್ಲಿ ಮಾಡುತ್ತಿರುವ ಖರ್ಚುಗಳು ಅಂದರೆ ಆಹಾರ, ಬಟ್ಟೆಗಳು, ಪಾದರಕ್ಷೆಗಳು, ವಿದ್ಯೆ, ವೈದ್ಯ, ಇಂಧನ, ವಿದ್ಯುತ್ ಮನೆ ತೆರಿಗೆಯಂತಹವು ಬರುತ್ತವೆ. 2004ರಲ್ಲಿ ಅತ್ಯಂತ ಬಡವಾರದ ಶೇಕಡ ಕಾಲು ಜನರಲ್ಲಿ ಪ್ರಜೆಗಳಲ್ಲಿ ಪ್ರತಿ ವ್ಯಕ್ತಿ ಈ ಅಂಶಗಳ ಮೇಲೆ ತಿಂಗಳಿಗೆ 340 ರೂಪಾಯಿಗಳು ಖರ್ಚು ಮಾಡುತ್ತಾರೆ, ಅಂದರೆ ಈ ನಿತ್ಯಾವಸರ ವಸ್ತುಗಳಿಗೆ ದಿನಕ್ಕೆ 12 ರೂಪಾಯಿಗಳಿಗಿಂತ ಕಡಿಮೆ ಎಂಬ ಮಾತು ! ಎರಡನೇ ಕಾಲುಭಾಗ ಶೇಖಡದಲ್ಲಿ ಅವರು ಸ್ವಲ್ಪ ಹೆಚ್ಚು ಖರ್ಚು ಮಾಡುತ್ತಾರೆ. ಎಕ್ಸ್ ಆಕ್ಷದ ಮೇಲೆ ಮುಂದಕ್ಕೆ ಸಾಗುತ್ತಿರುವಂತೆ ಅವರು ಮಾಡುತ್ತಿರುವ ಖರ್ಚು ಹೆಚ್ಚಾಗುತ್ತಿದೆ.

SCERT TELANGANA

**ಚಟುವಟಿಕೆ**

- ನಾವು ಸರಿಯಾಗಿ ಪೋಷಿಸಲ್ಪಡುತ್ತಿದ್ದೇವೆಯೋ, ಇಲ್ಲವೋ ಎನ್ನುವುದನ್ನು ತಿಳಿದುಕೊಳ್ಳಲು ಪೋಷಕಾಹಾರ ತಜ್ಞರು ತಿಳಿಸಿದ Body Mass Index (BMI) ನ್ನು ಅನುಸರಿಸಬೇಕು. ಇದನ್ನು ಲೆಕ್ಕಿಸುವುದು ಸುಲಭ. ತರಗತಿಯಲ್ಲಿನ ಪ್ರತಿ ವಿದ್ಯಾರ್ಥಿ/ವಿದ್ಯಾರ್ಥಿನಿಯ ಭಾರ ಮತ್ತು ಎತ್ತರವನ್ನು ತಿಳಿಯಿರಿ. ಭಾರವನ್ನು ಕಿಲೋಗ್ರಾಮ್‌ಗಳಲ್ಲಿ ಗುರುತಿಸಿರಿ. ಗೋಡೆಯ ಮೇಲೆ ಎತ್ತರವನ್ನು ಸೂಚಿಸುವ ಅಳತೆ ಮಾಪನವನ್ನು ಹಾಕಿ, ಎತ್ತರವನ್ನು ಲೆಕ್ಕಿಸಿರಿ. ಎತ್ತರವನ್ನು ಅಳೆಯುವಾಗ ತಲೆಯನ್ನು ನೆಟ್ಟಗೆ ಇರುವಂತೆ ಮಾಡಿರಿ. ಸೆಂ.ಮೀ.ನಲ್ಲಿನ ಅಳತೆಯನ್ನು ಮೀಟರ್ ಮಾನಕ್ಕೆ ವರ್ಗಾಯಿಸಿರಿ. ಕಿ.ಗ್ರಾಂ.ಗಳಲ್ಲಿರುವ ಭಾರವನ್ನು ಎತ್ತರದ ವರ್ಗದಿಂದ ಭಾಗಿಸಿರಿ. ಬಂದ ಸಂಖ್ಯೆಯನ್ನೇ BMI ಎನ್ನುತ್ತಾರೆ. ನಂತರ ಪುಸ್ತಕದ ಕೊನೆಯಲ್ಲಿರುವ BMI ವಯಸ್ಸು ಪಟ್ಟಿಯನ್ನು ಗಮನಿಸಿರಿ. ಉದಾ: ಒಬ್ಬ ಬಾಲಕಿ 14 ವರ್ಷ 8 ತಿಂಗಳು ವಯಸ್ಸಿನವಳಾಗಿದ್ದು BMI 15.2 ಇದ್ದರೆ ಅವಳು ಪೋಷಕಾಹಾರ ಕೊರತೆಯಿಂದ ಬಳಲುತ್ತಿದ್ದಾಳೆಂದು ತಳಿಯಬೇಕು. ಅದೇ ರೀತಿ 15 ವ॥ 6 ತಿಂಗಳು ವಯಸ್ಸಿನ ಬಾಲಕನ BMI 28 ಆದರೆ ಅವನು ಅಧಿಕ ಭಾರವಾಗಿ ಇದ್ದಾನೆ ಎಂದರ್ಥ. ವಿದ್ಯಾರ್ಥಿಗಳ ಜೀವನ ಪರಿಸ್ಥಿತಿ, ಆಹಾರ ಮತ್ತು ವ್ಯಾಯಾಮ ಅಭ್ಯಾಸಗಳನ್ನು ಕುರಿತು ತರಗತಿಯಲ್ಲಿ ಯಾರಿಗೂ ನೋವಾಗದಂತೆ ಚರ್ಚಿಸಿರಿ.



*ಚಿತ್ರ 17.2: ಶರೀರ ಪದಾರ್ಥ ಸೂಚಿಕೆ*

BMI ದೇಹದ ಭಾರ(ಕಿ.ಗ್ರಾಂ.)÷ಎತ್ತರ×ಎತ್ತ (ಮೀ.ಗಳಲ್ಲಿ)

- ವ್ಯಕ್ತಿ ಆರ್ಥಿಕ ಸ್ಥಾಯಿಗೆ ಅವರ ಪೋಷಕಾಹಾರ ಸ್ಥಾಯಿಗೆ ಮಧ್ಯೆ ಏನಾದರೂ ಸಂಬಂಧವು ಕಾಣಿಸುತ್ತದೆಯಾ?

## ಬಡತನವು ಏಕೆ ಇದೆ ? ಅದನ್ನು ಹೇಗೆ ನಿರ್ಮೂಲಿಸಬಹುದು ?

ಬಡತನಕ್ಕೆ ಪ್ರಧಾನ ಕಾರಣ ಕ್ರಮ ತಪ್ಪದಂತೆ ಕೆಲಸ ಸಿಗದೇ ಹೋಗಬಹುದು ಎಂದು ನೀವು ಈಗಾಗಲೇ ಗ್ರಹಿಸಿದ್ದೀರಿ. ಉಪಾಧಿ ಅವಕಾಶಗಳು ಇಲ್ಲದಿದ್ದರೆ ಮೂಲಭೂತ ಅವಸರಗಳು ತೀರಿಸಿಕೊಳ್ಳುವ ಪ್ರಜೆಗಳ ಕೊಂಡುಕೊಳ್ಳುವ ಶಕ್ತಿ(ಆದಾಯವು) ಕಡಿಮೆಯಾಗುತ್ತದೆ. ಕನಿಷ್ಟ ಕೊಂಡು ಕೊಳ್ಳುವ ಶಕ್ತಿ ಇಲ್ಲದಾಗ ಅವರು ತೀವ್ರ ಹಸಿವೆಗೆ ಗುರಿಯಾಗುತ್ತಾರೆ.

## ಜೀವನೋಪಾಧಿಗಾಗಿ ವ್ಯವಸಾಯ :

ಭಾರತ ದೇಶದಲ್ಲಿ ಇಂದಿಗೆ 50%ಕ್ಕಿಂತ ಹೆಚ್ಚು ಪ್ರಜೆಗಳು ತಮ್ಮ ಜೀವನೋಪಾಯಕ್ಕೆ ವ್ಯವಸಾಯದ ಕೆಲಸಗಳ ಮೇಲೆ ಆಧಾರಪಡುತ್ತಿದ್ದಾರೆ. ಇವರಲ್ಲಿ ಸಣ್ಣರೈತರು, ವ್ಯವಸಾಯ ಕೂಲಿಗಳು ಹೆಚ್ಚು. ಅಷ್ಟೇ ಅಲ್ಲದೇ ಬಡಿಗ ರಾಮಾಚಾರಿಯಂತೆ ವ್ಯವಸಾಯದೊಂದಿಗೆ ಆಧಾರ ಪಟ್ಟವರು ಸಹ ಇದ್ದಾರೆ. ಗ್ರಾಮಗಳಲ್ಲಿ ಗಡಿಗೆಗಳು ಮಾಡು ವವರು, ಚರ್ಮದ ಕೆಲಸ ಮಾಡುವವರು, ಚಿಕ್ಕ, ಚಿಕ್ಕ ಕೈಗಾರಿಕೆಗಳು ಇಟ್ಟು ಕೊಂಡವರ ಶ್ರೇಯಸ್ಸು ಕೂಡ ವ್ಯವಸಾಯ ಸ್ಥಿತಿಯಮೇಲೆ ಆಧಾರಪಟ್ಟಿರುತ್ತದೆ. ಗ್ರಾಮದಲ್ಲಿ ವ್ಯವಸಾಯವು ಗತಿರಹಿತವಾದಾಗ ರಾಮಾಚಾರಿಯ ಕುಟುಂಬವು ಕಷ್ಟಕ್ಕೀಡಾದ ವಿಧಾನವನ್ನು ನೋಡಿದ್ದೇವೆ. ರಾಮಾಚಾರಿ ತಯಾರು ಮಾಡುವಂತಹ ಉಪಕರಣಗಳಿಗೆ ಬೇಡಿಕೆ ಇಲ್ಲದಂತಾಗಿದೆ. ಫಲಿತವಾಗಿ ರಾಮಾಚಾರಿಗೆ ಕೆಲಸ, ಆದಾಯವು ಇಲ್ಲದಂತಾಗಿದೆ. ಇತರ ಬಡಕುಡುಂಬ ಗಳಿಗೆ ಮಾದರಿಯಂತೆ ಅವರಿಗೆ ಸಹ ಹೊಲಗಳಾಗಲೀ, ಪಶುಗಳಾಗಲೀ, ಇಲ್ಲ. ಆ ವರ್ಷ ಹೊಲಗಳಲ್ಲಿ ವ್ಯವಸಾಯ ಕೂಲಿಗಳಿಗೆ ಕೂಡ ಅಷ್ಟೊಂದು ಕೆಲಸವಿಲ್ಲ. ವ್ಯವಸಾಯೇತರ ಕೆಲಸಗಳು ಕೂಡ ಇಲ್ಲ.

SCERT TELANGANA

ಬಹಳ ಜನಗಳ ಜೀವನೋಪಾಧಿ,ಸಂಕ್ಷೇಮವು ವ್ಯವಸಾಯದ ಮೇಲೆ ಆಧಾರಪಟ್ಟಿದೆ ಆದುದರಿಂದ ವ್ಯವಸಾಯವು ಸರಿಯಾದ ಅಭಿವೃದ್ದಿ ಸಾಧಿಸುವುದು ಮುಖ್ಯ ವ್ಯವಸಾಯವು ವೃದ್ಧಿಯಾದರೆ ಗ್ರಾಮೀಣ ಪ್ರದೇಶಗಳಲ್ಲಿ ಪ್ರಜೆಗಳಿಗೆ ಉಪಾಧಿ,ಆದಾಯಗಳನ್ನು ಒದಗಿಸುತ್ತದೆ.ಅಷ್ಟೇ ಅಲ್ಲದೇ ವ್ಯವಸಾಯ ಉತ್ಪತ್ತಿಗಳು ಚೆನ್ನಾಗಿದ್ದರೆ ಆಹಾರದ ಬೆಲೆಗಳು ಹೆಚ್ಚು ಜನಕ್ಕೆ ಕಡಿಮೆ ದರದಲ್ಲಿ ದೊರೆಯಲು ಅವಕಾಶವಿದೆ.

ಪ್ರಸ್ತುತ ವ್ಯವಸಾಯವು ಅನೇಕ ಸಮಸ್ಯೆಗಳನ್ನು ಎದುರಿಸುತ್ತಾ ಇದೆ.ಆರನೇ ತರಗತಿಯಲ್ಲಿ ನಮ್ಮ ಕಾಲದಲ್ಲಿ ವ್ಯವಸಾಯ ಎನ್ನುವ ಅಧ್ಯಾಯದಲ್ಲಿ ನೀರಾವರಿ ಸೌಕರ್ಯ ವಸತಿ ಇಲ್ಲದೇ ಕಡಿಮೆ ಬಡ್ಡಿಗೆ ಸಾಲಗಳು ಸಿಗದೇ, ಬೆಳೆಗಳಿಗೆ ನಾಣ್ಯವಾದ ಬೀಜಗಳು,ಗೊಬ್ಬರಗಳು ಸಿಗದೇ ಸಣ್ಣ ರೈತರು ಹೇಗೆ ತೊಂದರೆ ಪಡುತ್ತಿದ್ದಾರೋ ತಿಳಿದುಕೊಂಡಿದ್ದಾರೆ (ಈ ಪಾಠವು ಮತ್ತೊಂದು ಸಲ ಓದಿ ವೆಂಕಟಾಪುರದಲ್ಲಿ ರವಿ,ರಾಮು ಅವರ ಸ್ಥಿತಿ ಪುನಸ್ಮರಣೆ ಮಾಡಿರಿ) ಉತ್ಪಾದಕಗಳ ಖರ್ಚುಗಳು ಹೆಚ್ಚಾಗುವಿಕೆ, ಕಡಿಮೆ ಇಳುವರಿ ಬರುವುದು, ಪದೇ ಪದೇ ಬೆಳೆಗಳು ವಿಫಲವಾಗುವುದರಿಂದ ರೈತರು ತೀವ್ರ ಸಂಕ್ಷೋಭವನ್ನು ಎದುರಿಸುತ್ತಿರುವರು. ಕುಟುಂಬವು ಸಾಗಿಸುವುದಕ್ಕೆ ಬಹಳ ಜನ ಸಣ್ಣ ರೈತರು ವ್ಯವಸಾಯ ಕೂಲಿಗಳಾಗಿ ಸಹ ಕೆಲಸ ಮಾಡಬೇಕಾಗಿ ಬರುತ್ತದೆ. ಆಂಧ್ರಪ್ರದೇಶ್‌ದಲ್ಲಿ ಐದು ಜನ ರೈತರಲ್ಲಿ ನಾಲ್ಕು ಜನ ರೈತರ ಪರಿಸ್ಥಿತಿ ರವಿ, ರಾಮುರವರ ಹಾಗೆ ಇದೆ.

- ವ್ಯವಸಾಯ ಅಭಿವೃದ್ಧಿಗೆ,ವ್ಯವಸಾಯದ ಮೇಲೆ ಆಧಾರಪಟ್ಟವರಿಗೆ ಬೆಂಬಲವಾಗಿ ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳು ಈಕೆಳಗೆ ಇವೆ. ಪ್ರತಿಯೊಂದನ್ನು ಕುರಿತು ಕೆಲವು ವಾಕ್ಯಗಳು ಬರೆಯಿರಿ. ಅದು ಏತಕ್ಕಾಗಿ ಮುಖ್ಯವೋ ತಿಳಿಯ ಪಡಿಸಿರಿ. ನಿಮ್ಮ ದೃಷ್ಟಿಕೋನದಿಂದ ಕೆಲವು ಉದಾಹರಣೆ ಗಳನ್ನು ಕೊಡಿರಿ.

1. ರೈತರು ವ್ಯಾಪಾರಸ್ತರು/ ಮಧ್ಯ ವರ್ತಿಗಳ ಮೇಲೆ ಆಧಾರ ಬೀಳದಂತೆ ಸರಕಾರವು ಸರಿಯಾದ ಕಾಲದಲ್ಲಿ ಬೀಜಗಳು, ಗೊಬ್ಬರಗಳು ಕ್ರಿಮಿ ಸಂಹಾರಕ ಔಷಧಗಳು ಕೊಡಬೇಕು. ಇವು ಒಳ್ಳೆಯ ನಾಣ್ಯತೆಯಾಗಿರುವಂತೆ ಸರಿಯಾದ ಬೆಲೆಗಳಿಗೆ ಸಿಗುವಂತೆ ಸರಕಾರವು ಕ್ರಮಗಳು ತೆಗೆದುಕೊಳ್ಳಬೇಕು.
2. ಚಿಕ್ಕ ನೀರಾವರಿ ಯೋಜನೆಗಳು.
3. ನ್ಯಾಯವಾದ ಬಡ್ಡಿಗೆ ಸರಿಯಾದ ಸಮಯಕ್ಕೆ ಬ್ಯಾಂಕಿನ ಮುಖಾಂತರ ಸಾಲಗಳು.
4. ಉತ್ಪತ್ತಿದಾರರಿಗೆ ನ್ಯಾಯವಾದ ಬೆಲೆ ಸಿಗುವಂತೆ ಮಾರ್ಕೆಟಿಂಗ್ ಸೌಕರ್ಯಗಳು.
5. ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ, ಸಾರಿಗೆ ಸೌಕರ್ಯಗಳು ಅಭಿವೃದ್ಧಿಗೊಳಿಸುವುದು.
6. ಬೆಳೆಗಳು ನಷ್ಟವಾದಾಗ ರೈತರಿಗೆ ಸಹಾಯ ಮಾಡುವುದು.

## ಇತರ ಜೀವನೋಪಾಧಿ ಅವಕಾಶಗಳು :

ತೆಲಂಗಾಣ ಗ್ರಾಮೀಣ ಕುಟುಂಬಗಳಲ್ಲಿ 40 ಶೇಖಡ ಪ್ರಧಾನವಾಗಿ ವ್ಯವಸಾಯ ಕೂಲಿಗಳು. ಈ ಕುಟುಂಬಗಳಿಗೆ ಭೂಮಿ ಇಲ್ಲ. ಇಲ್ಲವೇ ಬಹಳ ಸ್ವಲ್ಪ ಭೂಮಿ ಮಾತ್ರವೇ ಇದೆ. ಇವರಿಗೆ ಕೆಲಸದ ಅವಕಾಶಗಳು ಬಹಳ ಕಡಿಮೆ. ಸಾಧಾರಣ ವರ್ಷದಲ್ಲಿ ವ್ಯವಸಾಯ ಕೂಲಿಗೆ 120– 180 ದಿನಗಳ ಕೆಲಸ ಸಿಗುತ್ತದೆ. ಹೊಲಗಳಲ್ಲಿ ಬಹಳ ದಿನಗಳವರೆಗೆ ಕೆಲಸಗಳು ಸಿಗದ ಸಂದರ್ಭಗಳು ಇರುತ್ತವೆ.

ಬರಗಾಲ, ಪ್ರವಾಹಗಳು, ಕ್ರಿಮಿ ಕೀಟಗಳು ಇತರ ವ್ಯಪರಿತ್ಯಗಳಿಂದ ಬೆಳೆಗಳು ನಷ್ಟವಾದಾಗ ವ್ಯವಸಾಯ ಕೆಲಸದ ದಿನಗಳು ಮತ್ತಷ್ಟು ಕಡಿಮೆಯಾಗುತ್ತವೆ. ಇಂತಹ ಪರಿಸ್ಥಿತಿಗಳಲ್ಲಿ ಪ್ರಜೆಗಳು ದೊಡ್ಡ ಸಂಖ್ಯೆಯಲ್ಲಿ ಗ್ರಾಮೀಣ ಪ್ರದೇಶಗಳಿಂದ ವಲಸೆ ಹೋಗುತ್ತಾರೆ. ಈ ಸಂಕ್ಷೋಬದ ಕಾಲದಲ್ಲಿ ಪ್ರಜೆಗಳು ಹಸಿವು, ಅನಾರೋಗ್ಯಗಳಿಗೆ ಸಿಲುಕುತ್ತಾರೆ. ಇಂತಹ ಪರಿಸ್ಥಿತಿಗಳಲ್ಲಿ ಜೀವನೋಪಾಧಿಗಳು ಕಲ್ಪಿಸುವುದಕ್ಕೆ ಏನು ಮಾಡಬೇಕು?

ಪ್ರಾಥಮಿಕ ಅವಸರಗಳು ಒದಗಿಸಿಕೊಳ್ಳುವುದಕ್ಕೆ ಪ್ರತಿ ವ್ಯಕ್ತಿಗೆ ಕೆಲಸ ಕಲ್ಪಿಸಬೇಕೆಂದು ಕೆಲಸದ ಹಕ್ಕು ತಿಳಿಸುತ್ತದೆ. ಭಾರತ ಸಂವಿಧಾನದಲ್ಲಿ ಆದೇಶ ಸೂತ್ರಗಳಲ್ಲಿ ಕೆಲಸ ಹಕ್ಕು ಅಳವಡಿಸಲಾಗಿದೆ. 41 ನೇ ಅಧಿಕರಣ ಹೀಗೆ ತಿಳಿಸುತ್ತದೆ. ತನ್ನ ಆರ್ಥಿಕ ಸಾಮರ್ಥ್ಯ ಅಭಿವೃದ್ಧಿ ಪರಿಮಿತಿಗಳಿಗೆ ಒಳಪಟ್ಟು ಕೆಲಸದ ಹಕ್ಕು ಕಲ್ಪಿಸುವುದಕ್ಕೆ ಸರಕಾರವು ಏರ್ಪಾಟುಗಳು ಮಾಡಬೇಕು. ಆದರೆ ಪ್ರಜೆಗಳು ಈ ಹಕ್ಕುಗಳನ್ನು ಉಪಯೋಗಿಸಿಕೊಳ್ಳಲಾರದೇ ಹೋಗಿದ್ದಾರೆ. ಸರಕಾರವು ತನಗೆ ಇಷ್ಟ ಬಂದಾಗ ಕೆಲಸಗಳು ಕೈಗೊಂಡು ಕೂಲಿಗಾರರಿಗೆ ಉಪಾದಿ ಕಲ್ಪಿಸುತ್ತಿತ್ತು . ಆದರೆ ಪ್ರಜೆಗಳು ತಮಗೆ ಅವಸರವಾದಾಗ, ತಮ್ಮ ನಿವಾಸ ಪ್ರಾಂತಕ್ಕೆ ಹತ್ತಿರ ಕೆಲಸ


SCERT TELANGANA

ತೋರಿಸಿರಿ ಎಂದು ಕೇಳದೇ ಹೋಗುತ್ತಿದ್ದರು. ಪ್ರಜಾ ಸಂಘಗಳು ವರ್ಷಗಳಾದ್ಯಂತ ನಡೆಸಿದ ಹೋರಟಾದ ಫಲಿತವಾಗಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉಪಾದಿಹಾಮಿ ಕಾನೂನು, 2005ತಯರಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಪ್ರಜೆಗಳ ಜೀವನೋಪಾಧಿ ಕಾಪಾಡುವುದರಲ್ಲಿ ಇದು ದೊಡ್ಡ ಮುನ್ನೆಜ್ಜೆ ಎಂದು ಹೇಳಬಹುದು.

**ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾನೂನು.**

ಬಿಹಾರ್‌ನಲ್ಲಿ ಅರೇರಿಯಾ ಜಿಲ್ಲೆಯ ಬಾಲೇಶ್ವರ್ ಮಹಾತೋ ತನ್ನಕುಟುಂಬ ಪೋಷಣೆಗೆ ಪ್ರತಿವರ್ಷ ಕೆಲಸ ಹುಡುಕುತ್ತಾ ಪಂಜಾಬ್‌ಗೆ ಹೋಗುತ್ತಿದ್ದನು. ಈ ಜೂನ್‌ನಲ್ಲೂ ಅವನು ಅಲ್ಲಿಗೆ ಹೋಗಬೇಕೆಂದುಕೊಳ್ಳುತ್ತಿದ್ದನು. ಆದರೆ ಅವನಿಗೆ ಉಪಾದಿ ಹಾಮಿ ಕಾನೂನಿನ ಕೆಳಗೆ ತನ್ನ ಗ್ರಾಮದೊಳಗೆ ಕೆಲಸ ಸಿಕ್ಕಿರುವುದರಿಂದ ಊರಿನಲ್ಲೇ ಇರಬೇಕೆಂದು ನಿರ್ಣಯಿಸಿಕೊಂಡನು.

ಸ್ಥಾನಿಕವಾಗಿ ಕೆಲಸ ಸಿಗುವುದು ಬಹಳ ಕಷ್ಟ ಆದುದರಿಂದ ಅರೇರಿಯಾ ಪ್ರಾಂತದ ಪ್ರಜೆಗಳು ದೂರವಾಗಿರುವ ಪಂಜಾಬ್, ಡಿಲ್ಲಿ, ಗುಜರಾತ್‌ನಲ್ಲಿ ಕೆಲಸ ಹುಡುಕುತ್ತಾ ಹೋಗಬೇಕಾಗುತ್ತದೆ. ಸ್ಥಾನಿಕವಾಗಿ ಲಭಿಸುವ ಕೆಲಸಗಳಿಗೆ ಕೂಲಿ ರೇಟುಗಳು ಬಹಳ ಕಡಿಮೆ. ಬೆಳೆಗಳು ಸುಗ್ಗಿ ಸಮಯದಲ್ಲಿ ದಿನಕ್ಕೆ 40-60 ರೂಪಾಯಿಗಳು ಕೊಡುತ್ತಾರೆ. ಉಳಿದ ಸಮಯಗಳಲ್ಲಿ ಇದು ಮತ್ತಷ್ಟು ಕಡಿಮೆ (ದಿನಕ್ಕೆ 25-50ರೂಪಾಯಿಗಳು) ಕುಟುಂಬದಲ್ಲಿ ಯಾರಾದರೂ ಕಾಯಿಲೆಯಿಂದ ಊರಲ್ಲೇ ಇರಬೇಕಾದ ಪರಿಸ್ಥಿತಿ ಏರ್ಪಾಟ್ಟಾಗ ಬಾಲೇಶ್ವರ್ ಇಂತಹ ಕೆಲಸಕ್ಕೆ ಹೋಗುತ್ತಾನೆ.

ಪಟ್ಟಣದಲ್ಲಿ ವಲಸೆ ಕಾರ್ಮಿಕರು ಬಹಳ ಹೀನಾಯ ಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದಾರೆ. ನಿವಾಸಸ್ಥಾನ, ಕುಡಿಯುವುದಕ್ಕೆ ಶುಭ್ರವಾದ ನೀರು, (ಸಿಹಿನೀರು) ಪರಿಶುಭ್ರತೆಯಂತಹ ಮೂಲಭೂತ ವಸತಿಗಳು ಯಾವುವೂ ಅವರಿಗೆ ಇರುವುದಿಲ್ಲ. ಊರುಗಳಲ್ಲೆ ಇರುವ ಮಹಿಳೆಯರು, ಮಕ್ಕಳು ಭದ್ರತಾ ರಹಿತಕ್ಕೆ ಗುರಿಯಾಗುತ್ತಾರೆ. ಪದೇ ಪದೇ ಕುಟುಂಬ ಬಾಂಧವ್ಯಗಳು (ಸಂಬಂಧಗಳು) ಪೆಟ್ಟು ತಿನ್ನುತ್ತವೆ.

ಉಪಾದಿ ಹಾಮಿ ಕಾನೂನಿನಿಂದ ಬಾಲೇಶ್ವರನಿಗೆ ಮೂರು ವಿಧವಾಗಿ ಲಾಭವು, ಸ್ಥಾನಿಕವಾಗಿ ಉಪಾಧಿ ಸಿಗುವುದೇ ಅಲ್ಲದೆ ಅವನು ತನ್ನ ಕುಟುಂಬದೊಂದಿಗೆ ಇರುತ್ತಾ ಇರುವ ಸ್ವಲ್ಪ ಭೂಮಿಯನ್ನು ಬೆಳೆಸಬಹುದು.

ಈ ಉಪಾದಿ ಹಾಮಿ ಕಾನೂನಿನ ಪ್ರಕಾರ ನೈಪುಣ್ಯವು ಅವಸರವಿಲ್ಲದ ಶಾರೀರಕ ಶ್ರಮ ಮಾಡುವುದಕ್ಕೆ ತಯಾರಾಗಿದ್ದು, ಕೆಲಸವನ್ನು ಕೇಳಿದ ದೊಡ್ಡವರಿ (18 ವರ್ಷ ತುಂಬಿದ)ಗೆ ಸರಕಾರವು ಕೆಲಸ ಕಲ್ಪಿಸಬೇಕು. ಈ ವಿಧವಾಗಿ ಪ್ರತಿ ಗ್ರಾಮೀಣ ಕುಟುಂಬವು ಒಂದು ವರ್ಷದ ಕಾಲದಲ್ಲಿ ಕನಿಷ್ಟ ನೂರು ದಿನಗಳವರೆಗೆ ಉಪಾದಿಯನ್ನು ಪಡೆಯಬಹುದು. ಈ ಕೆಲಸಕ್ಕೆ ಕನಿಷ್ಟ ಕೂಲಿಗೆ ಕಡಿಮೆಯಾಗದಂತೆ ಕೂಲಿ ಕೊಡಬೇಕು.

- ನೀರು (ಕಾಯಿದ್ದು) ಶೇಖರಣೆ ಸಂರಕ್ಷಣೆ.
- ಬರಗಾಲಕ್ಕೆ ತಡೆದುಕೊಳ್ಳುವ ಕೆಲಸಗಳು (ಕಾಡುಗಳ ವೃದ್ಧಿ, ಗಿಡಗಳ ಬೆಳೆಸುವಿಕೆ).
- ಪರಿಶಿಷ್ಟ ಜಾತಿ, ವರ್ಗಗಳಿಗೆ ಹೊಂದಿದ ಭೂಮಿಗಳಿಗೆ ನೀರಾವರಿ ಸೌಕರ್ಯಗಳು ಕಲ್ಪಿಸುವುದು.
- ಕೆರೆಗಳಲ್ಲಿ ಹೂಳು ತೆಗೆಯುವುದರೊಂದಿಗೆ ಸಹ ನೀರಿನ ಕುಣಿಗಳು ಪುನರುದ್ದರಣೆ.
- ನಿಮ್ಮ ಉಪಾಧ್ಯಾಯರ ಸಹಾಯದಿಂದ ಮೇಲೆ ಕೊಡಲಾದ ಕೆಲಸಗಳು ಏನು ಸೂಚಿಸುತ್ತವೆಯೋ ತಿಳಿದುಕೊಳ್ಳಿರಿ.
- ನಿಮ್ಮ ಗ್ರಾಮ/ ಪಟ್ಟಣಕ್ಕೆ ಸಮೀಪದಲ್ಲಿ ಉಪಾಧಿ ಹಾಮಿ ಕಾನೂನಿನ ಕೆಳಗೆ ನಡೆಯುವ ಕೆಲಸದ ಸ್ಥಳವನ್ನು ಸಂದರ್ಶಿಸಿರಿ. ಅಲ್ಲಿ ಅವರೊಂದಿಗೆ ಮಾತನಾಡಿ ಅದನ್ನು ಕುರಿತು ಬರೆಯಿರಿ.
- ಪರಿಶಿಷ್ಟ ಜಾತಿಗಳು, ವರ್ಗಗಳಿಗೆ ಹೊಂದಿದ ಭೂಮಿಗಳಗೆ ನೀರಾವರಿ ಸೌಕರ್ಯಗಳು ಕಲ್ಪಿಸುವುದಕ್ಕೆ ಉಪಾದಿ ಹಾಮಿ ಕಾನೂನು ಏಕೆ ಪ್ರಾಧಾನ್ಯತೆ ಕೊಡುತ್ತದೆ ?
- ಗ್ರಾಮೀಣ ಪ್ರದೇಶಗಳಲ್ಲಿ ಜೀವನೋಪಾಧಿಗಳ ರಕ್ಷಣೆಯಲ್ಲಿ ಉಪಾಧಿಹಾಮಿ ಕಾನೂನನ್ನು ಒಂದು ದೊಡ್ಡ ಮುನ್ನಜ್ಜೆಯಾಗಿ ಏಕೆ ಪರಿಗಣಿಸುತ್ತಾರೆ ?

SCERT TELANGANA

### ಸಾಮಾಜಿಕ ವಿಚಾರಣೆಯಲ್ಲಿ ಒಂದು ವರದಿ

2009 ಫೆಬ್ರವರಿಯಲ್ಲಿ ನಿಜಾಮಾಬಾದ್ ಜಿಲ್ಲೆ, ಈಶನಪಲ್ಲಿಯಲ್ಲಿ ಸಾಮಾಜಿಕ ವರದಿ ವೃಂದವು ಕೊಟ್ಟ ವರದಿಯಲ್ಲಿನ ಅಂಶಗಳು

- ಸಂದಾಯಗಳು (ಸಂಬಳಗಳು) ಸರಿಯಾಗಿ ನಡೆದಿವೆ.
- ಫೀಲ್ಡ್ ಅಸಿಸ್ಟೆಂಟ್ ತನ್ನ ಜವಾಬ್ದಾರಿಗಳು ಸಕ್ರಮವಾಗಿ ನಿರ್ವರ್ತಿಸಿದ್ದಾನೆ.
- ಕೆಲಸದ ಪ್ರದೇಶದ ಹತ್ತಿರ ಕಾಂಟ್ರಾಕ್ಟರ್‌ಗಳಿಲ್ಲ.
- ಆದರೆ ಕೆಲಸದಲ್ಲಿ ನಾಣ್ಯತೆ ಲೋಪಿಸಿದೆ.

ಇವು ಅಲ್ಲದೆ ವಿಚಾರಣೆಯ ಮುಖಾಂತರ ಹೊರಬಂದ ಇನ್ನೂ ಕೆಲವು ವಿಷಯಗಳು:

ರಂಟೆ ಹೊಡೆಯುವುದು ಗಿಡಗಳು ಬೆಳೆಸುವುದು ಕೆಲಸವು 5.6 ಎಕರೆಗಳಲ್ಲಿ ಮಾತ್ರ ನಡೆದಿದೆ. ಆದರೆ ಈ ಕೆಲಸಕ್ಕೆ ಸಂಬಂಧಿಸಿದ ಅಳತೆಗಳ ಪುಸ್ತಕದಲ್ಲಿ ರಂಟೆ ಹೊಡೆಯುವುದು, ಗಿಡಗಳು ಬೆಳೆಸುವ ಕೆಲಸ 15 ಎಕರೆಗಳಲ್ಲಿ ನಡೆದಿದೆ ಎಂದು ಹೇಳಲ್ಪಟ್ಟಿದೆ. ಅಂದರೆ 9.04 ಎಕರೆಗಳಲ್ಲಿ ಹೆಚ್ಚಿಗೆ ಸಂದಾಯಗಳು ನಡೆದಿವೆ. ಇದಕ್ಕೆ ಹಳೆ ಟೆಕ್ನಿಕಲ್ ಅಸಿಸ್ಟೆಂಟ್ ರಾಮ್‌ಮೋಹನ್ ಜವಾಬ್ದಾರನು.

ರಿಕಾರ್ಡುಗಳು ಪ್ರಕಾರ ಸಿಂಡಿಕೇಟ್ ನಗರ್‌ಗೆ ಹೊಂದಿದ ರಾಮಾದೇವಿಗೆ ಹರಳು ಗಂಟುಗಳು ಹಾಕಿದುದಕ್ಕಾಗಿ 6 ದಿನಗಳಿಗೆ 400 ರೂಪಾಯಿಗಳು ಕೊಡಬೇಕು. ಆದರೆ ಅವಳಿಗೆ ಈ ಮೊತ್ತ ಹಣ ಇನ್ನೂ ಕೊಟ್ಟಿಲ್ಲ.

ಆಂಧ್ರಪ್ರದೇಶ್ ಸರ್ಕಾರವು, ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಸಾಮಾಜಿಕ ವಿಚಾರಣೆ, ಜವಾಬ್ದಾರಿತನ, ಪಾರದರ್ಶಕತೆ ಸಂಸ್ಥೆಯು ಸಾಮಾಜಿಕ ವಿಚಾರಣೆಗೆ ಬಾಧ್ಯತೆ ವಹಿಸುತ್ತದೆ. ಈ ಸಂಸ್ಥೆಯು ವೆಬ್‌ಸೈಟ್‌ನಲ್ಲಿ ನಿಮ್ಮ ಗ್ರಾಮಕ್ಕೆ ಸಂಬಂಧಿಸಿದ ಸಾಮಾಜಿಕ ವಿಚಾರಣೆ ಸಮಾಚಾರವನ್ನು ಹೊಂದಬಹುದು. www.socialaudit.telangana.gov.in

## ಸುಲಭವಾದ ಬೆಲೆಗಳಿಗೆ ಆಹಾರವು ದೊರೆಯುವಿಕೆ

"ತನ್ನ ಧಾನ್ಯಾಗಾರದಲ್ಲಿ ಅರ್ಧ ಮೊತ್ತವನ್ನು ರಾಜನು ಕಷ್ಟ ಕಾಲದಲ್ಲಿರುವ ಗ್ರಾಮೀಣ ಪ್ರಜೆಗಳಿಗೋಸ್ಕರ ಇಟ್ಟು ಉಳಿದ ಅರ್ಧ ಬಳಸಬೇಕು. ಪ್ರತಿ ವರ್ಷ ಹಳೆಯ ವಸ್ತುವು ಬಳಸಿಕೊಂಡು ಹೊಸ ವಸ್ತುವನ್ನು ಶೇಖರಿಸಿ ಇಡಬೇಕು."

ಅರ್ಥಶಾಸ್ತ್ರ *(2.15.22-23)*

ಕೌಟಿಲ್ಯ ಕ್ರಿ.ಪೂ *.4*ನೇ ಶತಮಾನ .

ಉಪಾಧಿ ಕಲ್ಪಿಸುವುದರೊಂದಿಗೆ ಸರಕಾರವು ಪ್ರತಿಯೊಬ್ಬರಿಗೆ ಸರಿಯಾದ ಬೆಳೆಗಳಲ್ಲಿ ಆಹಾರವು ಒದಗಿಸುವಂತೆ ನೋಡಬೇಕು ನಿತ್ಯಾವಸರ ವಸ್ತುಗಳ ಬೆಲೆಗಳು ಹೆಚ್ಚು ಇದ್ದರೆ, ಉಪಾಧಿ, ಆದಾಯಗಳಿಂದ ಅಷ್ಟೊಂದು ಪ್ರಯೋಜನೆ ಇರುವುದಿಲ್ಲ. ಮೂಲಭೂತ ಅವಸರಗಳು ಸರಿಯಾದ ಬೆಲೆಗಳಿಗೆ ಒದಗಿಸುವುದುಕ್ಕೆ ಸರಕಾರವು ಮಾಡುವ ಪ್ರಯತ್ನಗಳಲ್ಲಿ ನ್ಯಾಯ ಬೆಲೆ ಅಂಗಡಿಗಳ ಮುಖಾಂತರ ಆಹಾರ ಧಾನ್ಯಗಳನ್ನು ಕಡಿಮೆ ಬೆಲೆಗೆ ಒದಗಿಸುವುದು ಒಂದು. ಸರಕಾರವು ರೈತರಿಂದ ಆಹಾರ ಧಾನ್ಯಗಳನ್ನು ಕೊಂಡು ಅವುಗಳನ್ನು ನ್ಯಾಯ ಬೆಲೆಯ ಅಂಗಡಿಗಳಿಗೆ ಒದಗಿಸುತ್ತದೆ. ಈ ಅಂಗಡಿಗಳು ಆಹಾರ ಧಾನ್ಯಗಳನ್ನು (ಇವುಗಳೊಂದಿಗೆ ಸಕ್ಕರೆ, ಕಡಲೆ, ಕಿರೋಸಿನ್ ಆಯಿಲ್‌ನಂತಹ ಅತ್ಯವಸರ ವಸ್ತುಗಳನ್ನು) ಪ್ರಜೆಗಳಿಗೆ ಮಾರುತ್ತಿವೆ. ಬಜಾರುನಲ್ಲಿರುವ ಬೆಲೆಗಿಂತ ನ್ಯಾಯ ಬೆಲೆಯ ಅಂಗಡಿಯಲ್ಲಿ ಬೆಲೆಗಳು ಕಡಿಮೆ ಇರಬೇಕು.

ನ್ಯಾಯ ಬೆಲೆಯ ಅಂಗಡಿಗಳ ಮುಖಾಂತರ ಆಹಾರ ಧಾನ್ಯಗಳು ಇತರ ನಿತ್ಯಾವಸರ ವಸ್ತುವುಗಳು ಒದಗಿಸುವುದನ್ನು ಪ್ರಜಾ ಹಂಚಿಕೆ ವ್ಯವಸ್ಥೆ ಎನ್ನುವರು. ಭಾರತ ದೇಶಕ್ಕೆ ಸ್ವಾತಂತ್ರ್ಯವು ಬಂದ ನಂತರ ಈ ಹಂಚಿಕೆ ವ್ಯವಸ್ಥೆಯನ್ನು ಏರ್ಪಾಟು ಮಾಡಿದ್ದಾರೆ. ಪಟ್ಟಣ, ಗ್ರಾಮೀಣ ಪ್ರಜೆಗಳೆಲ್ಲರಿಗೂ ಆಹಾರ ಧಾನ್ಯಗಳನ್ನು ತಲುಪಿಸುವುದರಲ್ಲಿ ಇದು ಮುಖ್ಯ ಪಾತ್ರವಹಿಸಿದೆ. ಇದರ ಕೆಲಸದ ಹಂತದಲ್ಲಿ ಕೆಲವು ಸಮಸ್ಯೆಗಳಿವೆ. ಕೆಲವು ಪ್ರಾಂತಗಳಲ್ಲಿ ಈ ಅಂಗಡಿಗಳು ಸಮಯಕ್ಕೆ ಸರಿಯಾಗಿ ಇಲ್ಲವೇ ಪ್ರತಿ ದಿವಸ ತೆರೆಯುವುದಿಲ್ಲ. ಯಾರು ಕೊಂಡುಕೊಳ್ಳಬಾರದೆಂಬ ಉದ್ದೇಶದಿಂದ ಆಹಾರ ಧಾನ್ಯಗಳನ್ನು ಕಲ್ತೀ ಮಾಡುವ ಸಂದರ್ಭಗಳೂ ಇವೆ. ಪ್ರಜೆಗಳಿಗಿಲ್ಲದೆ ಇತರ ಅಂಗಡಿಗಳಿಗೆ ವಸ್ತುಗಳು ಮಾರುವ ನ್ಯಾಯ ಬೆಲೆಯ ಅಂಗಡಿಯವರೂ ಇದ್ದಾರೆ. ಇದರೊಂದಿಗೆ ಬಡ ಪ್ರಜೆಗಳೊಂದಿಗೆ ಸಹಾ ಬಹಳ ಜನಕ್ಕೆ ಆಹಾರ ಧಾನ್ಯಗಳು ಸೇರುವುದಿಲ್ಲ. ಭಾರತ ದೇಶದಲ್ಲಿ ಬಡ ರಾಜ್ಯಗಳು ಬಡ ಪ್ರದೇಶಗಲ್ಲಿ ಸಾಧಾರಣವಾಗಿ ಇವುಗಳ ಕೆಲಸದ ಸ್ಥಾಯಿ ಆಶಿಸಿದ ಮಟ್ಟಕ್ಕಿಲ್ಲ.

'ನಗದು ಬದಲಾವಣೆ ' ಯೋಜನೆ ಪ್ರಜಾ ಹಂಚಿಕೆ ಯೋಜನೆಗೆ ಸರಿಯದ ಪ್ರತ್ಯಾಮ್ನಾಯವೆಂದು ನೀವು ಭಾವಿಸುತ್ತೀರಾ?

## ತೆಲಂಗಾಣ ಮತ್ತು ಆಂಧ್ರ ಪ್ರದೇಶ್‌ನಲ್ಲಿ ಸಾಮಾಜಿಕ ವಿಚಾರಣೆ :

ಸರಕಾರದ ಉಪಾಧಿ ಯೋಜನೆಗಳಿಗೆ ಸಂಬಂಧಿಸಿ ಭ್ರಷ್ಟಾಚಾರ ಆರೋಪಣೆಗಳು ಪದೇ ಪದೇ ಕೇಳಿಸುತ್ತವೆ. ಈ ಯೋಜನೆಗಳ ಉಪಯೋಗಗಳು ಹೇಳಿದುದರಲ್ಲಿ ಬಹಳ ಕಡಿಮೆ ಮಾತ್ರವೇ ಬಡ ಜನರಿಗೆ ತಲುಪಿ ಗುತ್ತಿಗೆದಾರರು, ಅಧಿಕಾರ ಇದ್ದವರು ಹೆಚ್ಚು ಲಾಭ ಹೊಂದುತ್ತಿದ್ದಾರೆಂದು ಹೇಳುತ್ತಾರೆ. ಭ್ರಷ್ಟಾಚಾರವನ್ನು ಕಡಿಮೆಮಾಡುವುದಕ್ಕೆ ಮಾಹಾತ್ಮ ಗಾಂಧಿಜೀ ರಾಷ್ಟ್ರೀಯ ಗ್ರಾಮೀಣ ಉಪಾದಿ ಕಾನೂನಿನಲ್ಲಿ ಸಾಮಾಜಿಕ ವಿಚಾರಣೆ ಏರ್ಪಾಡ್ಡಾಯ ಮಾಡಿದ್ದಾರೆ.

ಸಾಮಾಜಿಕ ವಿಚಾರಣೆಯ ಮುಖಾಂತರ ಗ್ರಾಮ ಪ್ರಜೆಗಳು ಕಾರ್ಯಕ್ರಮವನ್ನು, ಅದರ ಜಾರಿಯನ್ನು ಪರಿಶೀಲಿಸುವರು. ಯೋಜನೆ / ಕಾರ್ಯಕ್ರಮವು ಪ್ರಯೋಜನೆಗಳು ಯಾರಿಗಾದರೆ ಉದ್ದೇಶಿಸಲ್ಪಟ್ಟಿವೆಯೋ ಅವರಿಗೆ ತಲುಪಿವೆಯೋ, ಇಲ್ಲವೋ ಇದು ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತದೆ. ಈ ವಿಷಯದಲ್ಲಿ ಆಂಧ್ರಪ್ರದೇಶ್ ಅನುಭವವು ಹೇಳಿಕೊಳ್ಳುವಂತಹದು. ಪೌರ ಸಮಾಜದ ಶ್ರೇಯಸ್ಸಿಗೆ ಬೆಂಬಲ ಕೊಡುವುರಲ್ಲಿ ಆಂದ್ರಪ್ರದೇಶ ಸರಕಾರ ಕ್ರಿಯಾಶೀಲ ಪಾತ್ರವನ್ನು ಪೋಷಿಸಿದೆ.



1.ಸಾಧಾರಣವಾಗಿ ಉಪಾದಿ ಕಾನೂನಿನಿಂದ ಲಾಭ ಪಡೆಯುವ ಕುಟುಂಬಗಳಿಗೆ ಹೊಂದಿ ಚುರುಕಾಗಿ ಇರುವ ಯುವಕರಿಗೆ ಮೊದಲು ಸಾಮಾಜಿಕ ವಿಚಾರಣೆ ಪ್ರಕ್ರಿಯೆಯಲ್ಲಿ ತರಬೇತಿಯನ್ನು ಕೊಡುತ್ತಾರೆ.



2. ಈ ಯುವಕರು ವೃಂದಗಳಾಗಿ ಏರ್ಪಟ್ಟು ಮನೆ ಮನೆಗೆ ಹೋಗುತ್ತಾರೆ. ಮಸ್ಟರ್ ಹಾಜರು ಪಟ್ಟಿಗಳನ್ನು ಸಹ ನೋಡುತ್ತಾರೆ. ಕೆಲಸ ನಡೆಯುತ್ತಿರುವ ಪ್ರದೇಶಗಳನ್ನು ವಿಚಾರಣೆ ಮಾಡುತ್ತಾರೆ. ಕಾರ್ಮಿಕರು ಮಾಡುವ ವ್ಯಾಖ್ಯಾನಗಳನ್ನು ನಮೋದಿಸುತ್ತಾರೆ. ಪ್ರತಿ ಗ್ರಾಮದಲ್ಲಿ ಸಮಾವೇಶಗಳನ್ನು ನಿರ್ವಹಿಸುತ್ತಾರೆ.






3.ನಂತರ ಮಂಡಲ ಹೆಡ್ ಕ್ವಾರ್ಟರ್ಸ್‌ನಲ್ಲಿ ದೊಡ್ಡ ಬಹಿರಂಗ ಸಭೆಯನ್ನು ನಿರ್ವಹಿಸುತ್ತಾರೆ. ಈ ಸಭೆಗೆ ಎಲ್ಲಾ ಗ್ರಾಮಗಳಿಂದ ಪ್ರಜೆಗಳು, ಆಯ್ಕೆಯಾದ ಪ್ರಜಾ ಪ್ರತಿನಿಧಿಗಳು ಪತ್ರಿಕೆಗಳೂ / ಟಿ.ವಿ.ಗಳ ಸುದ್ದಿಗಾರರು, ಉಪಾಧಿ ಹಾಮಿ ಕಾನೂನು ಅಧಿಕಾರಿಗಳಲ್ಲಿ ಸಂಬಂಧಿಸಿದವರು, ಸರಕಾರದ ಸೀನಿಯರ್ ಅಧಿಕಾರಿಗಳು ಭಾಗವಹಿಸುತ್ತಾರೆ.

4. ಈ ಸಮಾವೇಶದಲ್ಲಿ ಗ್ರಾಮಗಳ ಪ್ರಕಾರ ಸಾಮಾಜಿಕ ವಿಚಾರಣೆಯಲ್ಲಿ ಕಂಡುಕೊಂಡ ವಿಷಯಗಳನ್ನು ಓದುತ್ತಾರೆ. ಕಾರ್ಮಿಕರು ತಮ್ಮ ವಾಂಗ್ಮೂಲನೆಯನ್ನು ಕೊಡುತ್ತಾರೆ. ಮೇಲೆತ್ತಿದ ಅಂಶಗಳಿಗೆ, ಮಾಡಿದ ದೂರುಗಳಿಗೆ ಸಂಬಂಧಿಸಿದ ಅಧಿಕಾರಿಗಳು ಉತ್ತರವನ್ನು ಕೊಡುತ್ತಾರೆ. ತೆಗೆದುಕೊಂಡ ಚರ್ಯೆಗಳು ವಿವರಿಸುತ್ತಾರೆ.



5. ದೂರುಗಳಿಗೆ ಸಂಬಂಧಿಸಿ ಎಂತಹ ಚರ್ಯೆಗಳು, ಎಷ್ಟು ದಿನಗಳೊಳಗೆ ತೆಗೆದುಕೊಳ್ಳುತ್ತಾರೋ ಸಹ ಅಧಿಕಾರಿಗಳೂ ವಿವರಿಸಬೇಕು.

6. ಮಂಡಲದಲ್ಲಿ ಬಹಿರಂಗ ಸಭೆ ನಡೆದ ನಂತರ ಸಾಮಾಜಿಕ ವಿಚಾರಣೆ ವೃಂದಗಳು ಪ್ರತಿ 15 ದಿವಸಕ್ಕೆ ಒಂದು ಸಲ ಗ್ರಾಮಗಳಿಗೆ ಹೋಗಿ ಆ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳು ಜಾರಿಯಾಗುವಂತೆ ನೋಡುತ್ತಾರೆ.

SCERT TELANGANA

ಆಂಧ್ರಪ್ರದೇಶ್‌ನಲ್ಲಿ ಸಾಮಾಜಿಕ ವಿಚಾರಣೆಯ ಮುಖಾಂತರ ಅಕ್ರಮವಾಗಿ ಸಂಪಾದಿಸಿದ ಹಣವನ್ನು ಬಹಳ ಮಟ್ಟಿಗೆ ತಿರಿಗಿ ಬರುವ ಹಾಗೆ ಮಾಡಿದ್ದಾರೆ. ಅನೇಕ ಸಂದರ್ಭಗಳಲ್ಲಿ ತಪ್ಪು ಮಾಡಿದ ಅಧಿಕಾರಿಗಳು ಬಹಿರಂಗ ಸಭೆಗಳಲ್ಲೇ ಕಾರ್ಮಿಕರಿಗೆ ಹೊಂದಬೇಕಾದ ಹಣವನ್ನು ಸ್ವಚ್ಛಂದವಾಗಿ ವಾಪಸ್ಸು ಮಾಡಿದ ಸಂದರ್ಭಗಳು ಇವೆ. ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಚರ್ಯೆಗಳು ಈ ಸಭೆಯೊಳಗೆ ಮೊದಲಾಗುವವು. ಈ ಕ್ರಮದಲ್ಲಿ ಉಪಾಧಿ ಹಾಮಿ ಕಾನೂನಿನಲ್ಲಿಯ ಅಂಶಗಳನ್ನು ಕುರಿತು ಕೂಲಿಗಾರರಲ್ಲಿ ಅವಗಾಹನೆ ಗಣನೀಯವಾಗಿ ಹೆಚ್ಚಾಗಿದೆ.

ಪ್ರಜಾ ಹಂಚಿಕೆ ವ್ಯವಸ್ಥೆಯಲ್ಲಿ ಬೇಕಾದುದಲ್ಲಾ ಅದನ್ನು ಚೆನ್ನಾಗಿ ಜಾರಿಗೊಳಿಸುವುದು. ಕೇರಳ, ಆಂಧ್ರಪ್ರದೇಶ್, ತಮಿಳುನಾಡುವಂತಹ ದಕ್ಷಿಣದ ರಾಜ್ಯಗಳಲ್ಲಿ ಇದು ಚೆನ್ನಾಗಿ ಕೆಲಸ ಮಾಡುತ್ತದೆ. ಆದುದರಿಂದ ಪ್ರತಿ ಒಬ್ಬರೂ ಪ್ರಯತ್ನಿಸಿದರೆ ಅದನ್ನು ಸುಧಾರಿಸುವುದ ಸಾಧ್ಯವೇ.

ಆದರೆ ಭಾರತ ಸರಕಾರಕ್ಕೆ ಬೇರೆ ಆಲೋಚನೆಗಳು ಇವೆ. ನ್ಯಾಯಬೆಲೆ ಅಂಗಡಿಗಳು ಪ್ರಧಾನವಾಗಿ ಬಡವರಿಗೆ ಮಾತ್ರವೇ ವಸ್ತುಗಳು ಸರಫರಾ ಮಾಡಬೇಕೆಂದು 1997 ರಲ್ಲಿ ನಿರ್ಣಯಿಸಿವೆ. ಉಳಿದವರು ಹೆಚ್ಚಿನ ಬೆಲೆಗೆ ಮಾರುಕಟ್ಟೆಯಿಂದ ಆಹಾರ ಧಾನ್ಯಗಳನ್ನು ಕೊಂಡು ಕೊಳ್ಳಬೇಕು.

ಪ್ರಜಾಹಂಚಿಕೆ ವ್ಯವಸ್ಥೆಯಲ್ಲಿ ಈ ಹೊಸ ವಿಧಾನವನ್ನು ಜಾರಿಗೊಳಿಸುವುದಕ್ಕೆ ಸರಕಾರಕ್ಕೆ ಯಾರು ಬಡವರು ಎಂಬುದು ತಿಳಿಯಬೇಕು. ಆದುದರಿಂದ ಬಡತನ ರೇಖೆಗೆ ಕೆಳಗೆ(ಬಿ.ಪಿ.ಎಲ್) ಇರುವವರನ್ನು ಗುರ್ತಿಸುವುದಕ್ಕೆ ಸರ್ವೇ ಮಾಡಬೇಕು ಎಂದು ಗ್ರಾಮ ಪಂಚಾಯಿತಿಗಳನ್ನು ಕೋರಿದೆ. ಕುಟುಂಬ ಆದಾಯ, ಜೀವ ನೋಪಾಧಿ ಮಾರ್ಗಗಳು, ಪ್ರತಿದಿವಸ ತಿನ್ನುವ ಆಹಾರ, ಬಟ್ಟೆಗಳು, ಗೃಹವಸತಿ, ವಲಸೆ, ಸಾಲಗಳಂತಹ ಅಂಶಗಳನ್ನು ಈ ಸರ್ವೇ ಶೇಖರಿಸಿ ಒಂದು ಕುಟುಂಬವು ಬಡತನದಲ್ಲಿ ಇದೆಯೋ(ಬಿ.ಪಿ.ಎಲ್) ಇಲ್ಲವೋ ಎಂಬುದನ್ನು ನಿರ್ಣಯಿಸುತ್ತದೆ. ಸರ್ವೇ ಪರಿಣಾಮಗಳ ಆಧಾರವಾಗಿ ಮೂರು ವಿಧವಾದ ಕಾರ್ಡುಗಳು ಜಾರಿಗೊಳಿಸುತ್ತಾರೆ.

ಅತ್ಯಂತ ಬಡ ಕುಟುಂಬಗಳಿಗೆ ಅಂತ್ಯೋದಯ ಕಾರ್ಡುಗಳನ್ನು ಜಾರಿಗೊಳಿಸಿದ್ದಾರೆ. ಅವರಿಗಿಂತ ಪರಿಸ್ಥಿತಿಯು ಸ್ವಲ್ಪ ಸುಧಾರಿಸಿದ್ದರೂ ಬಡವರಾಗಿ ಪರಿಗಣಿಸಲ್ಪಡುವವರಿಗೆ ಬಿ.ಪಿ.ಎಲ್ (ಬಿಳಿ) ಕಾರ್ಡುಗಳು ಕೊಟ್ಟಿದ್ದಾರೆ. ಉಳಿದವರಿಗೆ ಎ.ಪಿ.ಎಲ್. (ಗುಲಾಬಿ) ಕಾರ್ಡುಗಳು ಕೊಟ್ಟಿದ್ದಾರೆ.

ಒಬ್ಬೊಬ್ಬರಿಗೆ ನ್ಯಾಯ ಬೆಲೆಯ ಅಂಗಡಿಯಿಂದ ಲಭಿಸುವ ವಸ್ತುಗಳ ಮೊತ್ತವು, ಅವುಗಳ ಬೆಲೆಗಳು ವ್ಯತ್ಯಾಸವಾಗಿರುತ್ತವೆ. ಉದಾಹರಣೆಗೆ ಅಂತ್ಯೋದಯ ಕಾರ್ಡು ಇದ್ದವರಿಗೆ ತಿಂಗಳಿಗೆ ಕುಟುಂಬಕ್ಕೆ 35 ಕೆ.ಜಿ. ಆಹಾರ ಧಾನ್ಯಗಳು (ಅಕ್ಕಿ, ಗೋಧಿ) ಕೊಡುತ್ತಾರೆ. ಬಿ.ಪಿ.ಎಲ್. ಕಾರ್ಡು ಇದ್ದವರಿಗೆ ತೆಲಂಗಾಣದಲ್ಲಿ ಪ್ರತಿಯೊಬ್ಬರಿಗೆ 6ಕೆ.ಜಿ. ಅಕ್ಕಿ ಕೊಡುತ್ತಾರೆ. ಅನ್ನಪೂರ್ಣ ಯೋಜನೆಯ ಕಾರ್ಡು



*ಚಿತ್ರ 17.4:* ಪಾಠಶಾಲೆಯಲ್ಲಿ ಮಧ್ಯಾಹ್ನ ಭೋಜನ ಮಾಡುತ್ತಿರುವ ಬಾಲಕಿಯರು



SCERT TELANGANA

ಇದ್ದವರಿಗೆ ವಯೋವೃದ್ಧ ಕಡುಬಡವರಿಗೆ 10 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ಕೊಡುತ್ತಾರೆ.

- ಹೊಸ ವಿಧಾನದಿಂದ ಬಡವರಿಗೆ ಒಳ್ಳೆಯದಾಗುತ್ತದೆಯಾ? ನಿಮ್ಮ ಸಮಾಧಾನಕ್ಕೆ ಕಾರಣಗಳು ಕೊಡಿರಿ.
- ಪ್ರಜಾ ಹಂಚಿಕೆ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವುದಕ್ಕೆ ಮತ್ತಷ್ಟು ಸೂಚನೆಗಳು ಮಾಡಿರಿ.

## "ಬದುಕುವ ಹಕ್ಕುಗೋಸ್ಕರ ಹೋರಾಟ "(Public Distribution System)

ಪ್ರಜಾ ಹಂಚಿಕೆ ವ್ಯವಸ್ಥೆಯ (P.D.S) ಹೊಸ ವಿಧಾನದ ಮೇಲೆ ಎಷ್ಟೋ ಚರ್ಚೆ ನಡೆಯುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿ ಐದು ಜನರಲ್ಲಿ ನಾಲ್ಕು ಜನ ಕನಿಷ್ಟ ಕ್ಯಾಲರಿಗಳಿಗಿಂತ ಕಡಿಮೆ ಸಿಗುವ ಆಹಾರವು ತೆಗೆದುಕೊಳ್ಳುತ್ತಿದ್ದಾರೆಂದು ನಮಗೆ ಗೊತ್ತು. ರಾಷ್ಟ್ರೀಯ ನಮೂನೆ ಸರ್ವೇ (National Sampul Sarvary) ಪ್ರಕಾರ ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿ ಹತ್ತು ಕುಟುಂಬಗಳಲ್ಲಿ ಮೂರು ಕುಟುಂಬಗಳಿಗೆ ಸಹ ಅಂತ್ಯೋದಯ, ಬಿ.ಪಿ.ಎಲ್. ಕಾರ್ಡುಗಳಿಲ್ಲ. ಅಂದರೆ ಅಷ್ಟಕ್ಕೆ ಮೊದಲು ಪ್ರಜಾ ಹಂಚಿಕೆ ವ್ಯವಸ್ಥೆಯಿಂದ ಪ್ರಯೋಜನೆ ಪಡೆದವರು ಈಗ ಹೊಂದುತ್ತಿಲ್ಲ. ಭೂಮಿ ಇಲ್ಲದ ಕೂಲಿ ಮಾಡುವ ಕುಟುಂಬಗಳಲ್ಲಿ ಹೆಚ್ಚಿನವುಗಳಿಗೆ ಬಿ,ಪಿ.ಎಲ್.ಕಾರ್ಡುಗಳು ಇಲ್ಲ. ಇದಕ್ಕೆ ವಿರುದ್ಧವಾಗಿ ಕೆಲವು ಶ್ರೀಮಂತ ಕುಟುಂಬಗಳಿಗೆ ಬಿ.ಪಿ.ಎಲ್.ಕಾರ್ಡುಗಳು ಇವೆ ಎಂಬ ವಾರ್ತೆಗಳು ಬಂದವು.

ಈ ಹೊಸ ವಿಧಾನದಲ್ಲಿ ಇತರ ವೈವಿಧ್ಯಗಳು ಸಹ ಇವೆ. ಭಾರತ ಸರಕಾರದ ಹತ್ತಿರ (ರೈತರ ಹತ್ತಿರಕೊಂಡ) ಆಹಾರ ಧಾನ್ಯಗಳು ಕುಪ್ಪೆಗಳಾಗಿ ಬಿದ್ದಿವೆ. ಈ ಆಹಾರ ಧಾನ್ಯಗಳನ್ನು ಇಲಿಗಳು ತಿಂದ, ಕೊಳೆತ ಸಂದರ್ಭಗಳೂ ಇವೆ. ನ್ಯಾಯ ಬೆಲೆ ಅಂಗಡಿಗಳು ಸರಿಯಾದ ಬೆಲೆಗಳಿಗೆ ಆಹಾರ ಧಾನ್ಯಗಳನ್ನು ಬಿ.ಪಿ.ಎಲ್. ಅಂತ್ಯೋದಯ ಕಾರ್ಡುಗಳು ಇದ್ದವರಿಗೆ ಮಾತ್ರವೇ ಮಾರುತ್ತವೆ. ಆದುದರಿಂದ ಅಲ್ಲಿ ಸಹ ಆಹಾರ ಧಾನ್ಯಗಳು ಹಾಗೆ ಸ್ಟಾಕ್ ಇರುತ್ತವೆ. ಇನ್ನೊಂದು ಕಡೆಗೆ ಹಸಿವು ನೀಗಿಸುತ್ತಿಲ್ಲವೆಂಬ ಭಾವನೆ ಕೂಡಾ ಇದೆ.

ಭಾರತ ರಾಜ್ಯಾಂಗವು 21ನೇ ಕಾಯ್ದೆಯಲ್ಲಿ ಅಳವಡಿಸಲಾದ ಪ್ರಾಥಮಿಕ ಹಕ್ಕಾದ ಬದುಕುವ ಹಕ್ಕು ಸ್ಪಷ್ಟವಾಗಿ ಭಂಗವಾಗುತ್ತದೆ. ಆಹಾರವು ಇಲ್ಲದಂತೆ ಜೀವಿಸುವುದು ಹೇಗೆ ಸಾಧ್ಯವಾಗುತ್ತದೆ ? ಸರಕಾರವು ಏಕೆ ಜವಾಬ್ದಾರಿ ತೆಗೆದುಕೊಳ್ಳಬಾರದು ? ಆಹಾರ ಧಾನ್ಯಗಳನ್ನು ಕೊಳೆಯಿಸುವ ಬದಲು ಉಚಿತವಾಗಿ ಏಕೆ ಹಂಚಬಾರದು? ಇದು ನ್ಯಾಯವಾದ ಪರಿಸ್ಥಿತಿಯಾ ? ಇಂತಹ ಪ್ರಶ್ನೆಗಳು ಪ್ರಜೆಗಳು ಕೇಳುತ್ತಿದ್ದರು. ಸ್ವಲ್ಪಕಾಲಕ್ಕೆ ಆಹಾರಕ್ಕೆ ಹಕ್ಕುಕೋಸ್ಕರ ಪ್ರಜಾ ಚಳುವಳಿ (ಉದ್ಯಮು) ತಯಾರಾಗಿದೆ. ಜನರು ಕೋರ್ಟ್‌ನ್ನು ಆಶ್ರಯಿಸಿದರು. ಆಹಾರಕ್ಕೆ ಹಕ್ಕುಗಳಲ್ಲಿ ಭಾಗವಾದ ಜೀವನಕ್ಕೆ ಹಕ್ಕನ್ನು ಉಲ್ಲಂಘಿಸಿದುದರಿಂದ ಭಾರತ ಸರ್ಕಾರದ ಮೇಲೆ ಸುಪ್ರೀಂ ಕೋರ್ಟಿನಲ್ಲಿ ಪೌರ ಹಕ್ಕುಗಳ ವೃಂದವು ಅರ್ಜಿ (ಪಿಟಷನ್) ಹಾಕಿವೆ. ನ್ಯಾಯ ಬೆಲೆಯ ಅಂಗಡಿಯ ಹತ್ತಿರ ಎಲ್ಲಾ ಕುಟುಂಬಗಳಿಗೆ ಆಹಾರ ಧಾನ್ಯಗಳು ಒದಗಿಸಬೇಕೆಂದು ಈ ವೃಂದಗಳು ಕೋರುತ್ತವೆ. ಪ್ರಸ್ತುತ ಸಿಗುವುದಕ್ಕಿಂತ ಹೆಚ್ಚು ಮೊತ್ತದಲ್ಲಿ ಆಹಾರ ಧಾನ್ಯಗಳು ಪ್ರತಿ ಕುಟುಂಬಕ್ಕೆ ಸಿಗಬೇಕೆಂದು ಕೋರುತ್ತವೆ.

ಸುಪ್ರೀಂ ಕೋರ್ಟು ತೀರ್ಪುಗಳು, ಸಾಧಾರಣ ಪ್ರಜೆಗಳಿಂದ ನಿರಂತರ ಒತ್ತಡದಿಂದ ಪ್ರಜಾ ಹಂಚಿಕೆ ವ್ಯವಸ್ಥೆಯೊಂದಿಗೆ ಸಹ ಅನೇಕ ಕಾರ್ಯಕ್ರಮಗಳಲ್ಲಿ ಚಿಕ್ಕವು ಆದಾಗ್ಯೂ ಕೀಲಕವಾದ ಬದಲಾವಣೆಗಳು ಉಂಟಾಗುತ್ತವೆ. ಬದಲಾವಣೆಯಾಗಬೇಕಾದುದು ಇನ್ನು ಎಷ್ಟೋ ಇದೆ.

- ದಿನ ಭತ್ಯೆ (ರೇಷನ್) ಅಂಗಡಿಗಳನ್ನು ನ್ಯಾಯ ಬೆಲೆಯ ಅಂಗಡಿಗಳೆಂದು ಸಹ ಕರೆಯುತ್ತಾರೆ. ಏಕೆ ತಿಳಿಯುತ್ತದೆಯಾ?

ಭಾರತ ದೇಶದಲ್ಲಿ ಹಸಿವೆ ತೀವ್ರವಾಗಿರುವ ನೇಪಥ್ಯದಲ್ಲಿ ಕೆಲಸಕ್ಕೆ ಹಕ್ಕು, ಆಹಾರಕ್ಕೆ ಹಕ್ಕು ಕುರಿತು ಈ ಅಧ್ಯಾಯದಲ್ಲಿ ಓದಿದ್ದೇವೆ. ಬಡತನ ಹಸಿವೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಕೆಲಸಕ್ಕೆ ಹಕ್ಕು ಆಹಾರಕ್ಕೆ ಹಕ್ಕು ಎರಡು ಖಡ್ಡಾಯವಾಗಿರಬೇಕು. ಆದರೆ ಬಡತನದಿಂದ ಹೊರಬೀಳುವುದು, ಗೌರವ ಪ್ರದವಾದ ಜೀವನ ನಡೆಸುವುದು ಅಂದರೆ ಇನ್ನೂ ಎಷ್ಟೋ ಇವೆ. ಆರೋಗ್ಯ, ವಿದ್ಯೆ, ಬಟ್ಟೆ, ನಿವಾಸ, ನೀರು, ಪರಿಶುಭ್ರತೆ, ಮಾಲಿನ್ಯವಿಲ್ಲದ ಗಾಳಿ ಇಂಧನ, ಮೂಲಭೂತ ಸದುಪಾಯಗಳು ವಿವಕ್ಷತೆಗೆ ಗುರಿಯಾಗದಂತೆ ಇರುವುದು, ಪ್ರಜಾ ಪ್ರಭುತ್ವದಲ್ಲಿ ಪಾಲ್ಗೊಳ್ಳುವುದು, ಈ ಆರ್ಥಿಕ ಸಾಮಾಜಿಕ ಹಕ್ಕುಗಳ ಸಹ ಬದುಕುವ ಹಕ್ಕಿನಲ್ಲಿ ಭಾಗವೇ. ಈ ವಿಸ್ತೃತವಾದ ತಿಳುವಳಿಕೆಯ ದಿಕ್ಕಿಗೆ ಸಮಾಜವು ಮುಂದಕ್ಕೆ ಹೋಗಬೇಕು.

SCERT TELANGANA

## ಮುಖ್ಯ ಪದಗಳು

| | | |
|---|---|---|
| 1. ಪೋಷಕಾಹಾರ ಲೋಪ | 2. ವ್ಯವಸಾಮಾಭಿವೃದ್ಧಿ | 3. ಆದೇಶ ಸೂತ್ರಗಳು |
| 4. ಪ್ರಜಾ ಕೆಲಸಗಳು | 5. ಸಾಮಾಜಿಕ ವಿಚಾರಣೆ | 6. ಬಡತನ ರೇಖೆಗೆ ಕೆಳಮಟ್ಟ |
| 7. ಪ್ರಜಾ ಹಂಚಿಕೆ ವ್ಯವಸ್ಥೆ. | | |

## ನಿಮ್ಮ ಕಲಿಕೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಿರಿ.

1. ತೀವ್ರವಾದ ಹಸಿವೆಯನ್ನು ಬಡತನ ಎನ್ನುವ ಹಿನ್ನಲೆಯಲ್ಲಿ ಕೆಳಗಿನ ವಾಕ್ಯಗಳಲ್ಲಿ ಸರಿಯಾದುವು ಯಾವುವು?
   ಅ. ದಿನಕ್ಕೆ ಒಂದು ಸಲ ಆಹಾರವನ್ನು ತೆಗೆದುಕೊಳ್ಳುವಿಕೆ
   ಆ. ಅವಸರವಾದ ಕ್ಯಾಲರಿಗಳಿಗಿಂತ ಕಡಿಮೆ ಇರುವ ಆಹಾರವನ್ನು ತೆಗೆದುಕೊಳ್ಳುವುದು.
   ಇ. ನೇಗಿಲುನಿಂದ ಹೂಳುವ ವ್ಯಕ್ತಿಗೆ ಭತ್ತ ಕೊಯ್ಯುವ ಯಂತ್ರ ನಡೆಸುವ ವ್ಯಕ್ತಿಗೆ ಒಂದೇ ಪ್ರಮಾಣದಲ್ಲಿ ಕ್ಯಾಲರಿಗಳು ಇರುವ ಆಹಾರವು ಅವಸರ.
   ಈ. ಅಂಗಡಿ ಮಾಲಿಕನಿಗಿಂತ ಹೊಲವನ್ನು ಹೂಳುವ ವ್ಯಕ್ತಿಗೆ ಹೆಚ್ಚಿನ ಕ್ಯಾಲರಿಗಳು ಬೇಕು.
   ಉ. ಹಸಿವೆ ಕಾರಣದಿಂದ ವ್ಯಕ್ತಿಯಲ್ಲಿ ರೋಗನಿರೋಧಕ ಶಕ್ತಿ ಕಡಿಮೆಯಾಗುತ್ತದೆ.
2. ಈ ಅಧ್ಯಾಯದಲ್ಲಿ ಬಡತನಕ್ಕೆ ಇರುವ ಪ್ರದಾನ ಕಾರಣಗಳನ್ನು ಗುರ್ತಿಸಿರಿ.
3. ರಾಷ್ಟ್ರೀಯ ಗ್ರಾಮೀಣ ಉಪಾಧಿ ಹಾಮಿ ಕಾನೂನು, ಪ್ರಜಾ ಹಂಚಿಕೆ ವ್ಯವಸ್ಥೆ ಯಂತೆಯೇ ಜನಗಳಲ್ಲಿ ಮುಖ್ಯವಾದ ಅಂಶಗಳು ಯಾವುವು ? ಬಡತನದಲ್ಲಿ ಯಾವ ಅಂಶಗಳನ್ನು ಅವು ಪರಿಷ್ಕರಿಸುವುದಕ್ಕೆ ಪ್ರಯತ್ನಿಸುತ್ತವೆ ? ನ್ಯಾಯ ಬೆಲೆಗಳ ಅಂಗಡಿಗಳು ಅವಸರವೇಕೆ ?
4. ಉಪಾಧಿ ಇಲ್ಲದ ಪ್ರಜೆಗಳಿಗೇ ಭೂಮಿ, ಪಶುಗಳು ಅಂಗಡಿಗಳಂತಹ ಆಸ್ತಿಗಳು ಸಾಧಾರಣವಾಗಿ ಇರುವುದಿಲ್ಲ ಏಕೆ ?
5. 203 ನೇ ಪುಟದಲ್ಲಿನ 'ಬದುಕುವ ಹಕ್ಕುಕೋಸ್ಕರ ಹೋರಾಟ' ಮೊದಲ ಎರಡು ಪ್ಯಾರಾ (ಪದಪುಂಜ)ಗಳನ್ನು ಓದಿ ವ್ಯಾಖ್ಯಾನಿಸಿರಿ.
6. ನಿಮ್ಮ ಗ್ರಾಮದಲ್ಲಿ PDS ಯೋಜನೆಯ ನಿರ್ವಹಣೆ ಮೇಲೆ ಜಿಲ್ಲಾಧಿಕಾರಿಗೆ ಪತ್ರ ಬರೆಯರಿ.

±Ý¦h¤Pl¦ár :

¯Ê¦á±Ý¦íñ¦ ¨¦È¿á®Ý¦¿á ¸¦Ç¤¿áA¦íW¦w¿á®¦áÓ¦í ¨¦Î ìÔ D P¤Ù¦X®¦ ËÐ¦¿áW¦Ù¦®¦á£Ú ¨¦áP¤ãÙ¦Ä.

- ನ್ಯಾಯ ಬೆಲೆಯ ಅಂಗಡಿಯು ಯಾವಾಗ ತೆರೆದಿರುತ್ತದೆ? ಇದು ವ್ಯವಸಾಯ ಕೂಲಿ, ದನಗೂಲಿಗಳಿಗೆ ಅನುಕೂಲ ವಾಗಿದೆಯೇ ?
- ನ್ಯಾಯ ಬೆಲೆಯ ಅಂಗಡಿಯಲ್ಲಿ ಯಾವ ವಸ್ತುಗಳು ಮಾರುತ್ತಾರೆ?
- ಬೇರೆ ಬೇರೆ ವಿಧಧ ಕಾರ್ಡುಗಳು ಇರುವ ವಿಧಾನ ನಿಮಗೆ ಕಂಡುಬಂದಿದೆಯಾ?
- (ಬಡತನದಲ್ಲಿರುವ ಕುಟುಂಬಗಳಿಗೆ) ನ್ಯಾಯ ಬೆಲೆಯ ಅಂಗಡಿಯಲ್ಲಿ ಅಕ್ಕಿ, ಸಕ್ಕರೆಗಳ ಬೆಲೆಗಳನ್ನು ಕಿರಾಣಿ ಅಂಗಡಿಗಳ ಬೆಲೆಗಳೊಂದಿಗೆ ಹೋಲಿಸಿರಿ. (ಕಿರಾಣಿ ಅಂಗಡಿಯಲ್ಲಿ ಮಾಮೂಲು ಅಕ್ಕಿಯ ಬೆಲೆ ಕೇಳಿರಿ).
- ನಿತ್ಯವಸರ ವಸ್ತುಗಳ ಹಂಚಿಕೆಯ ಬಗ್ಗೆ ಸಾರ್ವಜನಿಕರು ಏನೆಂದುಕೊಳ್ಳುತ್ತಿದ್ದಾರೆ ?

SCERT TELANGANA

ಘಟಕ 18

# ಮಾನವ ಹಕ್ಕುಗಳು – ಅಭಿವೃದ್ಧಿ

## ಮಾನವ ಹಕ್ಕುಗಳ ಭಾವನೆ :

ಗತಿಸಿದ 300 ವರ್ಷಗಳಲ್ಲಿ ಪ್ರಜಾ ಪ್ರಭುತ್ವ ಮಾದರಿಯಾಗಿ ಮಾನವ ಹಕ್ಕುಗಳು ಎಂಬ ಭಾವನೆ ಪ್ರಪಂಚವೆಲ್ಲಾ ಹರಡಿದೆ. ಮಾನವರೆಲ್ಲರಿಗೆ ಅವರ ಕುಲ ಮತ, ದೇಶದಂತಹ ಅವುಗಳೊಂದಿಗೆ ಸಂಬಂಧವಿಲ್ಲದೆ, ಹೆಣ್ಣು ಗಂಡು ಎಂಬ ಭೇಧವಿಲ್ಲದೆ, ಅವರು ಕಾನೂನನ್ನು ಗೌರವಿಸುತ್ತಿದ್ದಾರೆಯೇ ಅಪರಾಧಿ ಎಂಬುವುದರೊಂದಿಗೆ ಸಂಬಂಧವಿಲ್ಲದಂತೆ ಒಬ್ಬರನ್ನು ಉಲ್ಲಂಘಿಸದಂತಹ ಕೆಲವು ಮೂಲಭೂತ ಹಕ್ಕುಗಳು ಇವೆ. ಬಡತನದ ಹಿನ್ನಲೆಯಲ್ಲಿ ಈ ಹಕ್ಕುಗಳಲ್ಲಿ ಎರಡು ಬಹಳ ಮುಖ್ಯವಾದವು. ಗೌರವಪ್ರದ ಜೀವನವನ್ನು ನಡೆಸುವ ಹಕ್ಕು. ಸ್ವೇಚ್ಛೆ, ಸ್ವಾತಂತ್ರ್ಯ ಹಕ್ಕು ಜೀವಿಸುವ ಹಕ್ಕು ಎಂದರೆ ಮಾನವ ಗೌರವಕ್ಕೆ ಭಂಗ ಉಂಟಾಗದಂತೆ ಜೀವಿಸುವ ಹಕ್ಕು. ಸ್ವೇಚ್ಛೇ ಸ್ವಾತಂತ್ರ್ಯಗಳಿಗೆ ಹಕ್ಕು ಎಂದರೆ ತಮಗೆ ಇಷ್ಟವಾದ (ಇತರರ ಸ್ವೇಚ್ಛೆಗೆ ಭಂಗ ಉಂಟುಮಾಡದಂತೆ) ಯಾವುದೇ ಭಯವೂ ಇಲ್ಲದಂತೆ ಮಾತನಾಡುವುದು. ನಂಬುವುದು, ಮಾಡುವುದು ತಾವು ಆರಿಸಿಕೊಂಡ ವಿಧವಾಗಿ ಜೀವಿಸುವುದು.

13 ವರ್ಷದ ಅಪ್ಪು ಅವರ ಅಮ್ಮನ ಜೊತೆ ಎಷ್ಟೋ ಜನ ಭಕ್ತರು ಸಂದರ್ಶಿಸುವ ಒಂದು ಪುಣ್ಯ ಸ್ಥಳದಲ್ಲಿ ಇರುತ್ತಾನೆ.



*ಚಿತ್ರ 18.1 ಇದು ಮಳೆ ಬಾರದೇ ಇರುವ ವರ್ಷ 1946*

ಪವನ್ ದೇವಾಲಯದ ಹೊರಗಡೆ ನಿಂತುಕೊಂಡು ಭಕ್ತರ ಕಾಲಿನ ಮೇಲೆ ಬಿದ್ದು ಭಿಕ್ಷೆಬೇಡುತ್ತಾನೆ. ಆತನಿಗೆ ಸ್ವಲ್ಪ ಜನ ಉಳಿದ ಅಳಸಿದ ಆಹಾರವನ್ನು ತಿನ್ನುವುದಕ್ಕೆ ಕೊಡುತ್ತಾರೆ. ಕೆಲವು ಸಲ ಆತನು ಭಾರವಾದ ಸಾಮಾನುಗಳನ್ನು ಹೊರವನು. ಅದಕ್ಕೆ ಅದರ ಯಜಮಾನರು ಸ್ವಲ್ಪ ಹಣ ಕೊಡುತ್ತಾರೆ.

ಆತನ ತಾಯಿ ಬೇರೆಯವರ ಮನೆಯಲ್ಲಿ ಕೆಲಸ ಮಾಡುತ್ತಾಳೆ. ಅವಳು ದಿನಕ್ಕೆ 12 ಗಂಟೆಗಳ ಕಾಲ, ತಿಂಗಳಲ್ಲಿ 30 ದಿನಗಳು ಕೆಲಸ ಮಾಡುತ್ತಾಳೆ. ಅವಳಿಗೆ ಕೇವಲ ಒಡತಿಯಲ್ಲದೇ, ಚಿಕ್ಕ ಮಕ್ಕಳು ಸಹ ಇದು ಮಾಡು ಅದು ಮಾಡು ಎಂದು ಹೇಳುತ್ತಾರೆ. ಎಲ್ಲರೂ ಊಟ ಮಾಡಿದ ಮೇಲೆ ಉಳಿದ ಆಹಾರ ಅವಳಿಗೆ ತಿನ್ನಲು ಕೊಡುತ್ತಾರೆ. ಯಜಮಾನರ ಮುಂದೆ ಅವಳು ಕುಳಿತು ಕೊಳ್ಳುವುದಕ್ಕೆ ಅವಕಾಶವಿಲ್ಲ. ಅವರೊಂದಿಗೆ ಭಯ ಭಕ್ತಿಯಿಂದ ಮಾತನಾಡಬೇಕು. ಚಿಕ್ಕ ಚಿಕ್ಕ ತಪ್ಪುಗಳಿಗೆ, ತಡವಾಗಿ ಬಂದಾಗ ಅವಮಾನ್ನೆ ಗುರಿಯಾಗುತ್ತಾಳೆ. ಅವಳು ಕಣ್ಣೀರಿನೊಂದಿಗೆ ಕೋಪವನ್ನು ಸಹ ನುಂಗಿಕೊಳ್ಳಬೇಕು. ಇಲ್ಲದಿದ್ದರೆ ಅವಳನ್ನು ಕೆಲಸದಿಂದ ತೆಗೆದುಹಾಕುತ್ತಾರೆ.

ಮೇಲಿನ ಉದಾಹರಣೆಯಲ್ಲಿನ ಪವನ್ ಆತನ ತಾಯಿ ಗೌರವ ಪ್ರದವಾದ ಜೀವನ್ನು ನಡೆಸುತ್ತಿದ್ದಾರಾ?

- ಯಾವುದರ ಮುಖಾಂತರ ಅವರಿಗೆ ಗೌರವ ಪ್ರದವಾದ ಜೀವನ ಸಿಗುತ್ತದೆ?
- ತಮಗೆ ಬೇಕಾದುದು ಮಾಡುವ ಸ್ವಾತಂತ್ರ ಪವನ್‌ಗೆಯಾಗಲಿ ಆತನ ತಾಯಿಗೆ ಆಗಲಿ ಇದೆಯಾ ?
- ಪವನ್ ಆತನ ತಾಯಿ ಈ ವಿಧವಾದ ಜೀವನ ನಡೆಸುವುದಕ್ಕೆ ಯಾರು ಕಾರಣ ? ಅವರ ಪರಿಸ್ಥಿತಿಗೆ ಅವರನ್ನೇ ನಿಂದಿಸಬೇಕಾ ?
- ಗೌರವ ಪ್ರದವಾದ, ಸ್ವೇಚ್ಛೆಯೊಂದಿಗೆ ಕೂಡಿದ ಜೀವನ ಪವನ್ ಆತನ ತಾಯಿ ಜೀವಿಸುವಂತೆ ನೋಡಬೇಕಾದ ಜವಾಬ್ದಾರಿ ಯಾರದು?

SCERT TELANGANA

ಹಿಂದಿನ ಅಧ್ಯಾಯದಲ್ಲಿ ನಾವು ಬಡತನಕ್ಕೆ ಸಂಬಂಧಿಸಿದ ಕೆಲವು ಅಂಶಗಳನ್ನು ತಿಳಿದುಕೊಂಡಿದ್ದೆವೆ. ಬಡತನವೆಂದರೆ ಹಸಿವಿನಿಂದ ಇರುವುದು ಒಂದೇ ಅಲ್ಲ. ಜೀವನೋಪಾಯಕ್ಕೆ ಭೂಮಿಯಂತಹ ಸಹಜ ಸಂಪನ್ಮೂಲಗಳಗಳು ಅಲ್ಲದೇ ವಿದ್ಯೆ ಇಲ್ಲದೇ ಇರುವುದು ಲಾಭ ಸಾಟಿಯಾದ ಉದ್ಯೋಗವಿಲ್ಲದೆ ಇರುವುದು ಜೀವನಕ್ಕೆ ಮೂಲಭೂತ ಅವಸರಗಳಾದ ಆರೋಗ್ಯ ಸೇವೆಗಳು, ವಿದ್ಯೆ, ಆಹಾರದಂತಹವು ಇಲ್ಲದೇ ಇರುವುದು ತಮ್ಮ ಸಮಸ್ಯೆಗಳು ತಿಳಿಸುವ ಅವಕಾಶಗಳು ಇಲ್ಲದೇ ಇರುವುದು. ಸರಕಾರದ ಕಾರ್ಯಕ್ರಮಗಳನ್ನು ವಿಧಾನಗಳನ್ನು ಪ್ರಭಾವಿತಗೊಳಿಸದೇ ಹೋಗುವುದು. ಪ್ರಜೆಗಳು ಬಡತನದಿಂದ ಹೇಗೆ ವಿಮುಕ್ತರಾಗುತ್ತಾರೆ? ಬಡತನದಿಂದ ಹೊರಬೀಳಲು ಬೇಕಾದ ಸಹಜ ಸಂಪನ್ಮೂಲಗಳು, ಸೌಕರ್ಯಗಳನ್ನು ಹೇಗೆ ಶೇಖರಿಸಿ ಕೊಳ್ಳುತ್ತಾರೆ?

ಅವರ ಪರವಾಗಿ ಸರಕಾರ ಕ್ರಮಗಳು ತೆಗೆದುಕೊಂಡಾಗ ಮಾತ್ರವೇ ಇದು ಸಾಧ್ಯವಾಗುತ್ತದೆ. ಸರಕಾರದಲ್ಲಿ ಇದ್ದವರು ಬಡ ಜನರ ಸಂಕ್ಷೇಮಕ್ಕೆ ಹಣವನ್ನು ಮೀಸಲಾಗಿಡುವುದು ಅಂದರೆ ಧಾತೃತ್ವವನ್ನು ತೋರಿಸುವುದು ಎಂದುಕೊಳ್ಳುತ್ತಾರೆ. ಸಹಜ ಸಂಪನ್ಮೂಲಗಳು ಮೀಸಲಾಗಿಡುವುದು ಎಂದರೆ ಸರಕಾರದ ಮೇಲೆ ಭಾರವೆಂದು ಅಂದುಕೊಳ್ಳುತ್ತಾರೆ ಆದರೆ ಇದು ಪ್ರಜೆಗಳ ಪ್ರಾರ್ಥಮಿಕ ಹಕ್ಕು ಎಂಬ ವಿಷಯವನ್ನು ಗುರ್ತಿಸಿದಾಗಲೇ ಈ ಹಕ್ಕುಗಳು ಸಿಗುವಂತೆ ನೋಡುವುದು ಸರಕಾರದ ಪ್ರಾಥಮಿಕ ಜವಾಬ್ದಾರಿಯಾಗುತ್ತದೆ. ಅಷ್ಟೇ ಅಲ್ಲದೆ ಇವುಗಳ ಮೇಲೆ ಖರ್ಚುಮಾಡುವ ಸಹಜ ಸಂಪನ್ಮೂಲಗಳನ್ನು ಧಾತೃತ್ವವಾಗಿಯೇ, ವ್ಯಥಾವಾಗಿಯೇ ಪರಗಣಿಸಿದಂತಲ್ಲವೇ ಭಾರತ ದೇಶ ಭವಿಷ್ಯತ್ತಿಗೆ ಅವಸರವಾದ ಬಂಡವಾಳವೆಂದು ಭಾವಿಸುತ್ತಾರೆ. ಆದುದರಿಂದ ಪ್ರಜೆಗಳಲ್ಲರಿಗೂ ಆರ್ಥಿಕ, ಸಂಕ್ಷೇಮ ಹಕ್ಕುಗಳನ್ನು ಕೊಡುವ ಕಾನೂನು ಮಾಡುವುದು ಮುಖ್ಯವಾಗುತ್ತದೆ.

1945 ರಲ್ಲಿ ವಿಶ್ವ ಸಂಸ್ಥೆಯು ಏರ್ಪಟ್ಟಾಗ ಸ್ವೇಚ್ಚ ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ ಹಕ್ಕುಗಳು ಮಾನವರೆಲ್ಲರ ಪ್ರಾಥಮಿಕ ಹಕ್ಕುಗಳಾಗಿ ಪರಿಗಣಿಸಿದರು. ಬಹಳ ದೇಶಗಳು ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಹಕ್ಕುಗಳಿಗೆ ಹಾಮಿಕೊಡುವುದಕ್ಕೆ ಸಿದ್ದವಾಗಿ ಇವೆ. ಆದರೆ ಆರ್ಥಿಕ ಸಂಕ್ಷೇಮಕ್ಕೆ ಸಂಬಂಧಿಸಿದ ಉಪಾದಿ, ನ್ಯಾಯಬದ್ದವಾದ ಕೂಲಿ, ಸುಲಭ ವಿದ್ಯೆ, ಆರೋಗ್ಯ ಸೇವೆಗಳು, ವಸತಿ ಆಹಾರದಂತಹ ಹಕ್ಕುಗಳಾಗಿ ಕೊಡುವುದಕ್ಕೆ ತಯಾರಾಗಿ ಇಲ್ಲ.1993ರಲ್ಲಿ ಎರಡು ವಿಧಧ ಹಕ್ಕುಗಳು ಮುಖ್ಯವೆಂದು ಎಲ್ಲಾ ದೇಗಳು ಒಪ್ಪಿಕೊಂಡಿವೆ.

ಪ್ರಜೆಗಳಿಗೆ ಆಹಾರ, ವಿದ್ಯಾಭ್ಯಾಸ, ವೈದ್ಯ ಸೇವೆಗಳು, ವಸತಿ, ಉದ್ಯೋಗದಂತಹವುಗಳಿಗೆ ಹಕ್ಕು ಇದೆ ಎಂದರೆ ಅದರ ಅರ್ಥವೇನು ? ದೇಶದಲ್ಲಿ ಇರುವ ಪ್ರಜೆಗಳೆಲ್ಲರಿಗೆ ಅವುಗಳನ್ನು ಕೊಡುವ ಜವಾಬ್ದಾರಿ ಸರಕಾರದ್ದು ಎಂದು ಅದರ ಅರ್ಥವು. ಪೌರರೆಲ್ಲರಿಗೂ ಇವುಗಳನ್ನು ಸರಕಾರವು ಒದಗಿಸಬೇಕು. ಒಂದು ವೇಳೆ ಅವು ಸರ್ಕಾರ ಒದಗಿಸದಿದ್ದರೆ, ಪ್ರಜೆಗಳು ನ್ಯಾಯಸ್ಥಾನಕ್ಕೆ ಹೋಗಿ ತಮ್ಮ ಹಕ್ಕುಗಳು ಹೊಂದುವಂತೆ ಮಾಡಬಹುದು. ಪವನ್‌ನಂತರು ತಮಗೆ ಆಹಾರ, ಇತರ ಅವಸರಗಳು ತೀರುದಂತಹವುಗಳು ಇದ್ದವರು ದಯಾ ದಾಕ್ಷಿಣ್ಯಗಳಿಲ್ಲದೇ ತಮ್ಮ ಪ್ರಾಥಮಿಕ ಹಕ್ಕುಗಳಾಗಿ ನೋಡಬಲ್ಲವರಾಗುತ್ತಾರೆ. ಆಹಾರ, ವಿದ್ಯೆ, ವಸತಿ, ವೈದ್ಯಗಳಂತಹವುಗಳನ್ನು ತಮ್ಮ ಹಕ್ಕುಗಳಾಗಿ ಅವರು ಕೋರುವಂತಹವರಾಗುತ್ತಾರೆ.

ಈ ಭಾವನೆಗಳಿಗೆ ಅನುಗುಣವಾಗಿ ಸರಕಾರವು ಕಾನೂನುಗಳನ್ನು ಮಾಡಿದಾಗಲೇ ಇದು ಸಾಧ್ಯವಾಗುತ್ತದೆ. ಕಳೆದ ಸ್ವಲ್ಪ ವರ್ಷಗಳಲ್ಲಿ ಭಾರತ ಸರಕಾರವು ಇವುಗಳಿಗೆ ಸಂಬಂಧಿಸಿದ ಅನೇಕ ಕಾನೂನುಗಳನ್ನು ತಯಾರಿಸಿದೆ. ಈ ಕಾನೂನುಗಳನ್ನು ಸಮಾಚಾರ ಹಕ್ಕು, ಉದ್ಯೋಗ, ಪಾಠಶಾಲೆ ವಿದ್ಯೆಗೆ ಸಂಬಂಧಿಸಿದಂತಹವು. ಎಲ್ಲರಿಗೂ ಆಹಾರದ ಹಕ್ಕನ್ನು ಕೊಡುವ ಕಾನೂನು ರೂಪಪಡೆಯುವ ಹಂತದಲ್ಲಿದೆ. ಇವುಗಳಲ್ಲಿ ಕೆಲವು ಕಾನೂನುಗಳನ್ನು ಕುರಿತು ವಿವರವಾಗಿ ತಿಳಿದುಕೊಳ್ಳೋಣ.

## ಭ್ರಷ್ಟಾಚಾರವನ್ನು ಎದುರಿಸುವುದಕ್ಕೆ ಸಮಾಚಾರ ಅವಸರ :

ಸರಕಾರದ ವ್ಯವಸ್ಥೆಯು ಬಹಳ ದೊಡ್ಡದು, ಸಂಕ್ಲಿಷ್ಟವಾದುದು. ವಿಧಾನಗಳು, ಯೋಜನೆಗಳು ಸಕ್ರಮವಾಗಿ ಜಾರಿಗೊಳ್ಳುವಂತೆ ನೋಡುವುದು ಬಹಳ ಕಷ್ಟ. ಬಡವರ ಪ್ರಯೋಜನೆಗಳಿಗೋಸ್ಕರ, ಬಡತನ ನಿರ್ಮೂಲಿಸುವುದಕ್ಕೆ ರೂಪಿಸಿದ ಕಾರ್ಯಕ್ರಮಗಳು ಸಾಧಾರಣವಾಗಿ ಅವರಿಗೆ ಸೇರುವುದಿಲ್ಲ. ಹಣವು ಬೇರೆ ಕಡೆಗೆ ಬದಲಾಯಿಸಲ್ಪಡುತ್ತದೆ. ಇದಕ್ಕೆ ಪ್ರಧಾನ ಕಾರಣ ಭ್ರಷ್ಟಾಚಾರ ಸರ್ಕಾರದ ಕಾರ್ಯಕ್ರಮಗಳ ಕುರಿತು, ಅವು ಜಾರಿಗೊಳ್ಳುವ ವಿಧಾನವನ್ನು ಕುರಿತು ಪ್ರಜೆಗಳಿಗೆ ಸರಿಯಾದ ಸಮಾಚಾರ ಇಲ್ಲದೇ ಇರುವುದರಿಂದ ಭ್ರಷ್ಟಾಚಾರ ಹೆಚ್ಚಾಗುವುದಕ್ಕೆ ಒಂದು ಪ್ರಧಾನ ಕಾರಣವಾಗುತ್ತದೆ.


SCERT TELANGANA

ಈ ಸಂಸ್ಥೆಗಳು ಹಣವನ್ನು ಹೇಗೆ ಖರ್ಚು ಮಾಡಿವೆಯೋ ವಿಚಾರಣೆ ಮಾಡುವ ಅವಕಾಶ ಪ್ರಜೆಗಳಿಗಿಲ್ಲ. ಉದಾಹರಣೆ ಪುರಪಾಲಕ ಸಂಘ, ಪಂಚಾಯಿತಿಗಳು ಯಾವುದಾದರೊಂದು ಕಟ್ಟಡ ನಿರ್ಮಿಸಿದರೆ ಗುತ್ತಿಗೆದಾರರನ್ನು ಆರಿಸಿದ ವಿಧಾನ, ಉಪಯೋಗಿಸಿದ ಸಿಮೆಂಟು, ಇಟ್ಟಿಗೆಗಳ ನಾಣ್ಯತೆ, ಎಷ್ಟು ದಿನಗಳವರೆಗೆ ಕೂಲಿ ಕೆಲಸ ನಡೆದಿದೆಯಂತಹ ವಿವರಗಳು ತಿಳಿದುಕೊಳ್ಳುವುದು ಸಾಧ್ಯವಾಗುವುದಿಲ್ಲ. ಈ ಸಮಾಚಾರ ವನ್ನು ಪ್ರಜೆಗಳೊಂದಿಗೆ ಹಂಚಿಕೊಳ್ಳುವವರೂ ಅಲ್ಲ. ಆದರೆ ಪ್ರಜಾ ಪ್ರಭುತ್ವದಲ್ಲಿ ಪ್ರಜೆಗಳ ಸಂಕ್ಷೇಮಕ್ಕೆ ಪ್ರಜೆಗಳ ಹಣವನ್ನು ಉಪಯೋಗಿಸುತ್ತಾರೆ. ಆದ್ದರಿಂದ ಈ ಹಣವು ಹೇಗೆ ಬಳಕೆಯಾಗು ತ್ತದೋ ತಿಳಿದುಕೊಳ್ಳುವ ಹಕ್ಕು ಅವರಿಗೆ ಇದೆ. ಅಷ್ಟಕ್ಕೂ ಮೊದಲು ವಿಧಾನ ಸಭೆಯಲ್ಲಿ ಆರಿಸಲ್ಪಟ್ಟ ಪ್ರಜಾ ಪ್ರತಿನಿಧಿಗಳು ಮಾತ್ರವೇ ಈ ಸಮಾಚಾರವನ್ನು ಕೇಳಿ ಭ್ರಷ್ಟಾಚಾರವನ್ನು ನಿರ್ಮೂಲಿಸಬೇಕೆಂದು ಭಾವಿಸುತ್ತಿದ್ದರು..

- ಒಂದು ರಸ್ತೆ ಅಥಾ ಮನೆ ನಿರ್ಮಾಣಕ್ಕೆ ಸಂಬಂಧಿಸಿದ ಸಮಾಚಾರವನ್ನು ಗುತ್ತಿಗೆದಾರರು ಹೇಗೆ ನಿರ್ವಹಿಸುತ್ತಾರೋ ಚರ್ಚಿಸಿರಿ..
- ಈ ಸಮಾಚಾರವನ್ನು ಸರಿನೋಡುವುದರ ಮುಖಾಂತರ ಜವಾಬ್ದಾರಿಯನ್ನು ಹೇಗೆ ಬಳಸಬಹುದು?

## ಚಳುವಳಿ ಹೇಗೆ ಪ್ರಾರಂಭವಾಯಿತು :

ರಾಜಸ್ತಾನ್‌ನಲ್ಲಿ ಸ್ವಲ್ಪ ಜನ ಮಜ್ದೂರ್ ಕಿಸಾನ್ ಶಕ್ತಿ ಸಂಘಟನೆ (ಎಂ.ಕೆ.ಎಸ್.ಎಸ್) ಹೆಸರಿನೊಂದಿಗೆ ಸಂಘಟಿತವಾಗಿ ಮೇಲಿನ ಪ್ಯಾರದಲ್ಲಿ ಕೇಳಲ್ಪಟ್ಟಂತಹ ಉದ್ಯೋಗಖಾತ್ರಿ ಯೋಜನೆಗೆ ಸಂಬಂಧಿಸಿದ ಸಮಾಚಾರ ವನ್ನು ಕೇಳುತ್ತಿದ್ದರು. ಸರಕಾರದಿಂದ ಪ್ರಜೆಗಳು ಸಮಾಚಾರ ವನ್ನು ಪಡೆಯುವುದಕ್ಕೆ ಯಾವ ತರಹದ ನ್ಯಾಯಬದ್ದ ಹಕ್ಕು ಇಲ್ಲ. ಮೊದಲಿಗೆ ಸ್ವಲ್ಪ ಜನ ಅಧಿಕಾರಿಗಳ ಸಹಾಯದಿಂದ ಈ ಪತ್ರಗಳನ್ನು ಶೇಖರಿಸಿ ಬಹಿರಂಗ ಸಮಾವೇಶಗಳಲ್ಲಿ ಪ್ರಜೆಗಳು ಇವುಗಳನ್ನು ವಿಚಾರಣೆ ಮಾಡುವುದು ಪ್ರಾರಂಭಿಸಿದ್ದಾರೆ. ಸ್ವಲ್ಪ ಸಮಯದ ನಂತರ ಈ ವಿವರಗಳು ಕೊಡುವುದಕ್ಕೆ ಅಧಿಕಾರಿಗಳು ನಿರಾಕರಿಸಿದ್ದಾರೆ. ಫಲಿತವಾಗಿ ಈ ವಿಷಯವಾಗಿ ಮೂರು ವರ್ಷಗಳ ಕಾಲ ಪ್ರದರ್ಶನಗಳು, ಉತ್ಸವಗಳೊಂದಿಗೆ ಉದ್ಯಮಿಸಿದ್ದಾರೆ. ಈ ಸಮಾಚಾರವು ತಮ್ಮ ಸಂಕ್ಷೇಮಕ್ಕೆ ಕೀಲಕವಾದುದು. ಆದುದರಿಂದ ಅದನ್ನು ತಿಳಿಸಬೇಕೆಂದು ಪ್ರಜೆಗಳು ಕೋರಿದ್ದಾರೆ. ಅವರ ವಾದನೆಗಳು ಈ ವಿಧವಾಗಿವೆ

- ಮಾವನ ಅಭಿವೃದ್ಧಿ, ಪ್ರಜಾ ಸ್ವಾಮಿಕ ಹಕ್ಕುಗಳಿಗೆ ಸಮಾಚಾರವು ಕೀಲಕವಾದುದು. ಅಧಿಕಾರಿಕ ಪತ್ರಗಳ ರೂಪದಲ್ಲಿ ತಕ್ಕಷ್ಟು ಸಮಾಚಾರವು ಇದ್ದಾಗ ಪ್ರಜೆಗಳು ಆಡಳಿತದಲ್ಲಿ ಭಾಗ ಸ್ವಾಮಿಗಳಾಗಿ, ನ್ಯಾಯವಾದ ಅಭಿವೃದ್ಧಿ ನಡೆಯುವಂತೆ ನೋಡಿಕೊಳ್ಳುತ್ತಾರೆ.
- ಸಮಾಚಾರವು ಪ್ರಜೆಗಳಿಗೆ ಹತ್ತಿರದಲ್ಲಿ ಇರುವುದರಿಂದ ಸರಕಾರಗಳು ತಮ್ಮ ಕೆಲಸ ಗಳಲ್ಲಿ ಮತ್ತಷ್ಟು ಭಾಧ್ಯತೆಯಿಂದ ಇರುತ್ತವೆ. ಇದರಿಂದ ಅವುಗಳ ಕೆಲಸದ ವಿಧಾನಗಳನ್ನು ಪರ್ಯವೀಕ್ಷಿಸುವುದಕ್ಕೆ, ಭ್ರಷ್ಟಾಚಾರ ನಡೆಯದಂತೆ ನೋಡುವುದಕ್ಕೆ ಸಾಧ್ಯವಾಗುತ್ತದೆ.ಬಡವರ ಏಳಿಗೆಗಾಗಿ ಸಮಾಚಾರವು ಕೀಲಕವಾದುದು.
- ಸಮಾಚಾರವನ್ನು ತಿಳಿಸಬೇಕಾಗಿ ಆಯ್ಕೆಯಾದ ಪ್ರಜಾ ಪ್ರತಿನಿಧಿಗಳು ಅಧಿಕಾರಿಗಳು ತಮ್ಮ ಇಷ್ಟ ಬಂದಂತೆ ನಿರ್ಣಯಗಳು ತೆಗೆದುಕೊಳ್ಳುವುದನ್ನು ತಡೆಯಬಹುದು.

ಎಷ್ಟೋ ವರ್ಷಗಳ ಹೋರಾಟದ ನಂತರ ಅಧಿಕಾರಿಕ ಸಮಾಚಾರವನ್ನು ತಿಳಿಸುವುದು ಖಡ್ಡಾಯವಾಗಿ ಮಾಡುತ್ತಾ 1995 ರಲ್ಲಿ ರಾಜಾಸ್ತಾನ್‌ನಲ್ಲಿ ಒಂದು ಕಾನೂನನ್ನು ಮಾಡಿದ್ದಾರೆ. ಆ ನಂತರ ಕಾಲದಲ್ಲಿ ಅನೇಕ ರಾಜ್ಯಗಳು ಇಂತಹ ಕಾನೂನುಗಳನ್ನು ಮಾಡಿವೆ. ರಾಷ್ಟ್ರೀಯ ಸ್ಥಾಯಿಯಲ್ಲಿ ಪಾರ್ಲಿಮೆಂಟ್ (ಸಂಸತ್ತು) 2005 ರಲ್ಲಿ ಸಮಾಚಾರ ಹಕ್ಕು ಕಾನೂನು ಮಾಡಿದೆ. ಪ್ರಸ್ತುತ ಸಮಾಚಾರ ಹಕ್ಕನ್ನು ಸಂವಿಧಾನದ ಕೆಳಗೆ ಎರಡು ಪ್ರಾಥಮಿಕ ಹಕ್ಕುಗಳ ಕೆಳಗೆ - ಭಾವ ಪ್ರಕಟಣೆ ಸ್ವೇಚ್ಛ ಜೀವನಕ್ಕೆ ಹಕ್ಕಿನ ಕೆಳಗೆ ಗುರ್ತಿಸುತ್ತಾರೆ.

## ಸಾಮಾಚಾರ ಹಕ್ಕು ಕಾನೂನುನಲ್ಲಿಯ ಅಂಶಗಳು:

ಸಮಾಚಾರ ಹಕ್ಕು ಕಾನೂನಿನಲ್ಲಿ ಕೆಲವು ಅಂಶಗಳನ್ನು ತಿಳಿದುಕೊಂಡು ಅವು ಪ್ರಜೆಗಳ ಸಾಧಿಕಾರಿಕರಣಕ್ಕೆ ಹೇಗೆ ಉಪಯೋಗ ಮಾಡುತ್ತಿವೆಯೋ ತಿಳಿದುಕೊಳ್ಳೋಣ. ಕಾನೂನಿನ ಪ್ರಕಾರ ಯಾವ ವ್ಯಕ್ತಿಯಾದರೂ ಸರಕಾರದ ಆದೇಶಗಳು, ನಿವೇದಿಕೆಗಳು, ಸಲಹೆಗಳು, ಲಾಗ್ ಪುಸ್ತಕಗಳು, ನಿಯಮ ನಿಬಂಧನೆಗಳು, ಹಾಜರು ಪಟ್ಟಿಕೆಗಳು, ಉತ್ತರಗಳಂತಹವುಗಳನ್ನುಹೊಂದಬಹುದು. ಈ

SCERT TELANGANA

**ಪ್ರಜಾ ವಿಚಾರಣೆ** : ‘ಜನ್ ಸುವ್ವಾಯಿ’ (ಅಂದರೆ ಪ್ರಜಾ ವಿಚಾರಣೆ) ಹೆಸರಿನಿಂದ ಎಂ ಕೆ ಎಸ್ ಎಸ್ (ಮಜ್ದೂರ್ ಕೀಸಾನ್ ಶಕ್ತಿ ಸಂಘಟನೆ) ಸಮಾವೇಶ ಗಳನ್ನು ನಿರ್ವಹಿಸುತ್ತಿತ್ತು. ಬಡವರಲ್ಲಿ ಬಹಳ ಜನ ಸರಕಾರದ ಪತ್ರಗಳನ್ನು ತಮ್ಮಷ್ಟಕ್ಕೆ ತಾವೇ ಓದುತ್ತಿದ್ದಿಲ್ಲ ಎನ್ನುವುದು ವಾಸ್ತವವೆ. ಊರಿನಲ್ಲಿ ಇರುವ ಪ್ರತಿಯೊಬ್ಬರಿಗೂ ಆ ಪತ್ರದಲ್ಲಿ ಏನು ಇದೆಯೋ ತಿಳಿದುಕೊಳ್ಳಬೇಕೆಂದು, ಆದುದರಿಂದ ಇವುಗಳನ್ನು ಗಟ್ಟಿಯಾಗಿ ಓದಿ ತಿಳಿಸವುವವರು. ವಿವರಿಸುವವರು. ಕೈಪಂಪು ಹಾಕುವುದಕ್ಕೆ ಯಾರು ಯಾರಿಗೆ ಕೂಲಿ ಕೊಟ್ಟಿರುವವರೋ ಮಸ್ವರ್ ಪಟ್ಟಿ ತಿಳಿಯಪಡಿಸುತ್ತದೆ. ಮಸ್ವರ್ ಪಟ್ಟಿಯಲ್ಲಿ ಹೆಸರುಗಳು ಇದ್ದವರನ್ನು ಆ ಸಮಯದಲ್ಲಿ ಊರಿನಲ್ಲಿ ಇದ್ದಾರೋ, ಇಲ್ಲವೇ ವಲಸೆ ಹೋಗಿದ್ದಾರೋ ಪ್ರಜೆಗಳು ಹೇಳಬಲ್ಲರು. ಇಲ್ಲವೇ ಮಸ್ವರ್‌ನಲ್ಲಿ ತಿಳಿಸಿದ ಒಟ್ಟು ಹಣವನ್ನು ಅವರಿಗೆ ಕೊಟ್ಟಿದ್ದಾರೋ ಇಲ್ಲವೋ ಪ್ರಜೆಗಳು ಹೇಳಬಲ್ಲರು. ಇದರ ಮುಖಾಂತರ ಯಾವುದಾದರೂ ಭ್ರಷ್ಟಾಚಾರ ನಡೆದಿದ್ದರೆ ಅದು ತಿಳಿಯುತ್ತದೆ. ಇಂತಹ ಸಮಾವೇಶಗಳ ಮುಖಾಂತರ ಪ್ರಜೆಗಳು ಕಾರ್ಯಾಚರಣೆಗೆ ಸಿದ್ದರಾಗುತ್ತಿದ್ದರು. ಪತ್ರಗಳಲ್ಲಿ ಇರುವ ಸಮಾಚಾರವನ್ನು ಕುರಿತು ವಿವರಿಸುವುದಕ್ಕೆ ಸಮರ್ಥಿಸಿಕೊಳ್ಳುವುದಕ್ಕೆ ಅಧಿಕಾರಿಗಳಿಗೆ ಸಹ ಅವಕಾಶವನ್ನು ಕೊಡುತ್ತಿದ್ದರು. ಈ ಸಮಾವೇಶಗಳಲ್ಲಿ ಜಿಲ್ಲಾ ಆಡಳಿತ ಯಂತ್ರಾಂಗವು, ಪಂಚಾಯತಿ ಅಧಿಕಾರಿಗಳು ಸಹ ಭಾಗವಹಿಸುತ್ತಿದ್ದರು. ಭ್ರಷ್ಟಾಚಾರವನ್ನು ಗುರ್ತಿಸಿದಾಗ ಸಂಬಂಧಿತ ವ್ಯಕ್ತಿಗಳ ಮೇಲೆ ಕೇಸುಗಳನ್ನು ನಮೋದು ಮಾಡುತ್ತಿದ್ದರು.



ಚಿತ್ರ : 18.2 : ಎಂ ಕೆ ಎಸ್ ಎಸ್ ಸಮಾವೇಶದಲ್ಲಿ ಭಾಗವಹಿಸುತ್ತಿರುವ ಮಹಿಳೆಯರು

ಸಮಾಚಾರವು ಬೇಕೆನ್ನುವ ವ್ಯಕ್ತಿ ಆ ಪತ್ರಗಳ ನಕಲು ತಯಾರು ಮಾಡುವುದಕ್ಕಾಗುವ ಖರ್ಚಿಗಿಕೋಸ್ಕರ ಸ್ವಲ್ಪ ಮೊತ್ತವನ್ನು ಕೊಡಬೇಕಾಗಿ ಬರಬಹುದು. ಆದರೆ ಈ ಸಮಾಚಾರವು ಕೋರಿಕೊಳ್ಳುವ ವ್ಯಕ್ತಿ ಬಡತನ ರೇಖೆಗಿಂತ ಕೆಳಗೆ ಇದ್ದಾಗ ಈ ಮೊತ್ತವನ್ನು ಕೊಡಬೇಕಾದ ಅವಸರವಿಲ್ಲ

ಕಾನೂನಿನ ಪ್ರಕಾರ ಪ್ರತಿ ಸರಕಾರದ ಕಛೇರಿಯಲ್ಲಿ ಪ್ರಜೆಗಳು ಕೇಳುವ ಸಮಾಚಾರಕ್ಕೆ ಸ್ಪಂದಿಸುವ ಒಬ್ಬ ಅಧಿಕಾರಿ ಇರಬೇಕು ಆತನು/ ಅವಳು ಇವರನ್ನು ಸಮಾಚಾರ ಅಧಿಕಾರಿ ಎನ್ನುವರು. ಈ ಸಮಾಚಾರ ಅಧಿಕಾರಿಯ ಮೇಲೆ ಬೇರೊಬ್ಬ ವ್ಯಕ್ತಿ ಇರುತ್ತಾನೆ, ಸಮಾಚಾ ಅಧಿಕಾರಿ ಕ್ರಮ ತೆಗೆದುಕೊಳ್ಳುವಂತೆ ಈ ಮೇಲಿನ ಅಧಿಕಾರಿ ನೋಡಬೇಕು. ಅದೇ ವಿಧವಾಗಿ ರಾಜ್ಯ, ಕೇಂದ್ರ ಮಟ್ಟದಲ್ಲಿ ಸ್ವತಂತ್ರ ಸಮಾಚಾರ ಕಮಿಷನ್ ಗಳು ಇರಬೇಕು.

ಕೇಳಿದ ಸಮಚಾರವು ಎಷ್ಟು ಸಮಯದೊಳಗೆ ತಲುಪಿಸಬೇಕೋ ಕಾನೂನು ಸೂಚಿಸುತ್ತದೆ. ಇದರಿಂದ

ಸಮಾಚಾರವು ಕೊಡದಂತೆ ಕಾಲಯಾಪನೆ ಮಾಡುವ ಅವಕಾಶ ಸರಕಾರದ ಶಾಖೆಗಳಿಗೆ ಇರುವುದಿಲ್ಲ. ಒಂದು ವೇಳೆ ಸಮಯದೊಳಗೆ ಸಮಾಚಾರವನ್ನು ಕೊಡದಿದ್ದರೆ ಸಮಾಚಾರವನ್ನು ಕೇಳಿದ ವ್ಯಕ್ತಿ ಮೇಲಾಧಿಕಾರಿಗೆ ದೂರು ಸಲ್ಲಿಸಿ, ರಾಜ್ಯ ಇಲ್ಲವೇ ಕೇಂದ್ರ ಸಮಾಚಾರ ಕಮೀಷನ್‌ಗಳ ಹತ್ತಿರ ಕೇಸು ನಮೋದಿಸ ಬಹುದು.




*ಚಿತ್ರ 18.3: ಸಮಾಚಾರ ಹಕ್ಕು ಕಾನೂನಿನ ಕುರಿತು ಗೋಡೆ ಬರವಣಿಗೆ-2005.*

- ಹಿಂದಿನ ವರ್ಷದ ಕಾಲದಲ್ಲಿ ನಿಮ್ಮ ಉಪಾಧ್ಯಾಯರಿಗೆ ವಿದ್ಯಾಶಾಖೆಯಿಂದ ಬಂದ ಆದೇಶಗಳು ನಿವೇದಿಕೆಗಳು, ಸಲಹೆಗಳ ಲಾಗ್ ಪುಸ್ತಕಗಳಂತಹವುಗಳ ಪಟ್ಟಿಗಳನ್ನು ತಯಾರು ಮಾಡಿರಿ. ವಿದ್ಯಾ ಶಾಖೆಗೆ ತಲುಪಿಸುವುದಕ್ಕೆ ಪಾಠ ಶಾಲೆ ಎಂತಹ ರಿಕಾರ್ಡುಗಳನ್ನು ನಿರ್ವಹಿಸುತ್ತದೆ? ಮಧ್ಯಾಹ್ನ ಊಟದ ಪಥಕಕ್ಕೆ ಸಂಬಂಧಿಸಿದ ರಿಕಾರ್ಡುಗಳು ಹೇಗೆ ನಿರ್ವಹಿಸುತ್ತಾರೆ?
- ರಾಜ್ಯ ಸಮಾಚಾರ ಕಮಿಷನ್ ಸಂದರ್ಭದಲ್ಲಿ ಸ್ವತಂತ್ರ ಎನ್ನುವ ಪದವು ಏಕೆ ಕೀಲಕವಾದುದು?
- ಆರೋಗ್ಯ ಶಾಖೆಯಲ್ಲಿ ಸಮಾಚಾರ ಅಧಿಕಾರಿಯನ್ನು ಕೇಳುವುದಕ್ಕೆ ಪ್ರಶ್ನೆಗಳ ಪಟ್ಟಿಯನ್ನು ತಯಾರು ಮಾಡಿರಿ. (ಅವಸರವಾದರೆ 9ನೇ ಅಧ್ಯಾಯವನ್ನು ಓದಿರಿ)

ಸಮಾಚಾರ ಹಕ್ಕು ಕಾನೂನಿನ ಕೆಳಗೆ ಪ್ರಜೆಗಳು ಯಾರೂ ಕೇಳದಿದ್ದರೂ ಪ್ರತಿಯೊಂದು ಸರಕಾರದ ಕಛೇರಿಯು ತನ್ನಷ್ಟಕ್ಕೆ ತಾನೇ ಸ್ವಲ್ಪ ಸಮಾಚಾರವನ್ನು ತಿಳಿಸಬೇಕು. ಈ ಸಮಾಚಾರವನ್ನು ಆಯಾ ಕಛೇರಿಗಳ ಗೋಡೆಗಳ ಮೇಲೆ ನೋಡಬಹುದು. ನಿಮಗೆ ಇಂಟರ್ನೆಟ್ ಸೌಕರ್ಯವಿದ್ದರೆ ಸರಕಾರದ ಶಾಖೆಗಳ ವೆಬ್‌ಸೈಟ್‌ನಲ್ಲಿ ಸಹ ಸಮಾಚಾರ ಹಕ್ಕಿನ ಕೆಳಗೆ ಆ ಸಂಸ್ಥೆಗೆ ಸಂಬಂಧಿಸಿದ ಸಮಾಚಾರ ಇರುತ್ತದೆ. ಈ ಸರಕಾರದ ಶಾಖೆಗಳಿಗೆ ನೇರವಾಗಿಯಾಗಲಿ, ವೆಬ್‌ಸೈಟ್‌ಗಳಾಗಲಿ ಹೋಗಿ ಆ ಸಮಾಚಾರವನ್ನು ನೋಡಿರಿ.

## ಜೀವನ ಪ್ರಮಾಣಗಳು ಅಭಿವೃದ್ಧಿಗೊಳಿಸುವುದಕ್ಕೆ ಹಕ್ಕುಗಳ ವಿಧಾನ :

ಹಿಂದಿನ ಅಧ್ಯಾಯದಲ್ಲಿ ಉಪಾದಿ ಹಕ್ಕು ಆಹಾರದ ಹಕ್ಕು ಕುರಿತು ಓದಿದ್ದೇವೆ. ಇವುಗಳನ್ನು ಸಾಧಿಸುವುದಕ್ಕೆ ಪ್ರಜಾ ಚಳುವಳಿಗಳು ನಡೆದಿವೆ. ಹಕ್ಕುಗಳ ದೃಷ್ಟಿಕೋನದಿಂದ ವಾದಿಸುವವರು ಪ್ರಜೆಗಳು ಗೌರವ ಪ್ರದವಾದ ಜೀವನಗಳನ್ನು ನಡೆಸುವುದಕ್ಕೆ ಈ ಹಕ್ಕುಗಳು ಸಹಕರಿಸುತ್ತವೆ. ಪ್ರಜೆಗಳ ಜೀವನ ಪರಮಾಣಗಳು ಹೆಚ್ಚಾಗುವುದಕ್ಕೆ ಉಪಾದಿ ಅವಕಾಶಗಳು ಕಲ್ಪಿಸುವುದು, ಸರಿಯಾದ ಬೆಲೆಗಳಿಗೆ ಆಹಾರ ಒದಗಿಸುವಂತಹವುಗಳನ್ನು ಸರಕಾರವು ಕೈಗೊಳ್ಳುವಿಕೆ, ಬಡವರ ಮೇಲೆ ದಯೆ ತೋರಿಸುವುದು ಅಲ್ಲ. ಅದು ಒಟ್ಟು ಸಮಾಜದ ಆರೋಗ್ಯವನ್ನು ಸಂಕ್ಷೇಮವನ್ನು ಹೆಚ್ಚಿಸುತ್ತದೆ. ಆದರೆ ಆಯ್ಕೆಯಾದ ಪ್ರಜಾ ಪ್ರತಿನಿಧಿಗಳು ಮಾತ್ರವೇ ಅಲ್ಲದೇ ಸರಕಾರದ ವ್ಯವಸ್ಥೆ ಕೆಲಸದ ಸ್ಥಾಯಿಯನ್ನು ಕ್ರಮವು ತಪ್ಪದಂತೆ ಪರ್ಯವೀಕ್ಷಿಸುವುದರಲ್ಲಿ (ಹಿಂದಿನ ಅಧ್ಯಾಯದಲ್ಲಿ ಉಪಾದಿ ಹಾಮಿ ಪಥಕದಲ್ಲಿಯ ಮಾದರಿಯಾಗಿ) ಪ್ರಜೆಗಳು ಚುರುಕಾದ ಪಾತ್ರವನ್ನು ಪೋಷಿಸಬೇಕು.

## ಉಚಿತ, ಖಡ್ಡಾಯ ವಿದ್ಯಾ ಹಕ್ಕು ಕಾನೂನು:(RTE)

ಸ್ವಾತಂತ್ರ್ಯ ಚಳುವಳಿಯನ್ನು ಕುರಿತು ಮಿತವಾದಿಗಳಾದ ಗೋಖಲೆಯಂತಹವರನ್ನು ಕುರಿತು ನೀವು ಓದಿದ್ದೀರಿ. ದೇಶದಲ್ಲಿನ ಮಕ್ಕಳಿಗೆಲ್ಲಾ ಉಚಿತ ಖಡ್ಡಾಯ ವಿದ್ಯಾ ಹಕ್ಕು ಕಾನೂನು ಮಾಡು ಎಂದು ಬ್ರಿಟಿಷ್ ವಸಾಹತು ಸರಕಾರವನ್ನು 1911 ರಲ್ಲಿ ಗೋಖಲೆ ಕೋರಿದನು. ಆದರೆ ಬ್ರಿಟೀಷ್ ಸರ್ಕಾರ ಅಂಗೀಕರಿಸಲಿಲ್ಲ. ದುರದೃಷ್ಟವಶಾತ್ತು ಸ್ವಾತಂತ್ರ್ಯವು ಬಂದ ನಂತರ ಸಹ ಇಂತಹ ಕಾನೂನನ್ನು ಮಾಡಲಿಲ್ಲ. ಕೊನೆಗೆ 2002 ರಲ್ಲಿ ವಿದ್ಯೆಯನ್ನು ಪ್ರಾಥಮಿಕ ಹಕ್ಕಾಗಿ ಪಾರ್ಲಿಮೆಂಟ್ ಗುರ್ತಿಸಿದೆ. ವಿದ್ಯೆಯನ್ನು ಪ್ರಾಥಮಿಕ

SCERT TELANGANA

ಹಕ್ಕಾಗಿ ಮಾಡಿದ 86ನೇ ಸಂವಿಧಾನ ಸವರಣೆ 2002 ರಲ್ಲಿ ನಡೆದಿದೆ. 86ನೇ ಸವರಣೆ ಈ ರೀತಿಯಾಗಿ ಹೇಳುತ್ತದೆ. ಸರಕಾರವು ಮಾಡುವ ಕಾನೂನಿನ ಮುಖಾಂತರ 6 ರಿಂದ 14 ವರ್ಷಗಳ ಮಧ್ಯ ವಯಸ್ಸಿನ ಮಕ್ಕಳಿಗೆಲ್ಲಾ ಉಚಿತ, ಕಡ್ಡಾಯ ಶಿಕ್ಷಣವನ್ನು ಸರಕಾರವು ಒದಗಿಸ ಬೇಕು. 'ಉಚಿತ ಕಡ್ಡಾಯ ಶಿಕ್ಷಣಕ್ಕೆ ಮಕ್ಕಳ ಹಕ್ಕು ಕಾನೂನು 2009' ಎನ್ನುವ ಈ ಕಾನೂನನ್ನು ಕೊನೆಯ ದಾಗಿ 2009 ರಲ್ಲಿ ಮಾಡಿದ್ದಾರೆ.

6 ರಿಂದ 14 ವರ್ಷಗಳ ವಯಸ್ಸಿನ ಮಧ್ಯ ಇರುವ ಮಕ್ಕಳಿಗೆಲ್ಲಾ ಉಚಿತ ವಿದ್ಯೆಗೆ ಹಕ್ಕು ಇದೆ ಎಂದು ವಿದ್ಯೆ ಹಕ್ಕು ಕಾನೂನು ತಿಳಿಯಪಡಿಸುತ್ತದೆ. ಮಕ್ಕಳ ಪರಿಸರ ಪ್ರದೇಶಗಳಲ್ಲಿ ತಕ್ಕಷ್ಟು ಪಾಠಶಾಲೆಗಳನ್ನು ಏರ್ಪಾಟು ಮಾಡುವುದು, ಸರಿಯಾದ ಅರ್ಹತೆಗಳಿರುವ ಉಪಾಧ್ಯಾಯರನ್ನು ನಿಯಮಿಸುವುದು, ಅವಸರವಾದ ಸೌಕರ್ಯಗಳೆಲ್ಲವುಗಳನ್ನು ಕಲ್ಪಿಸುವಂತಹ ಕೆಲಸಗಳನ್ನು ಸರಕಾರವು ಮಾಡಬೇಕು. ವಿದ್ಯೆಯು ಮಕ್ಕಳ ಸರ್ವಾಂಗೀಣ ಪ್ರಗತಿಗೆ ಉಪಯೋಗ ವಾಬೇಕೆಂದು. ವಿದ್ಯೆ ಮಕ್ಕಳನ್ನು ಕೇಂದ್ರವಾಗಿ ಮಾಡಿಕೊಂಡು ಚಟುವಟಿಕಗಳ ಮುಖಾಂತರ ಪರಿಶೋಧನೆ, ಆವಿಷ್ಕರಣೆ, ಅನ್ವೇಷಣೆ ಪದ್ದತಿಗಳ ಮುಖಾಂತರ ಸಾಗಬೇಕೆಂದು ಕಾನೂನು ಹೇಳುತ್ತಿದೆ. ಮಕ್ಕಳು ಮಾತೃಭಾಷೆಯಲ್ಲಿ ವಿದ್ಯೆ ಕಲಿಯ ಬೇಕೆಂದು, ಅವರು ಭಯ, ಚಿಂತೆ, ಆಂದೋಳನೆ ಇಲ್ಲದಂತೆ ತಮ್ಮ ಅಭಿಪ್ರಾಯಗಳನ್ನು ಸ್ವೇಚ್ಛೆಯಾಗಿ ವ್ಯಕ್ತಪಡಿಸಬೇಕೆಂದು ಸಹ ಕಾನೂನು ತಿಳಿಸುತ್ತದೆ.

ಪರಿಸರ ಪ್ರದೇಶಗಳಲ್ಲಿ ಪಾಠ ಶಾಲೆಗಳು ಹತ್ತಿರದಲ್ಲಿ ಇಲ್ಲದಿದ್ದರೂ, ಪಾಠಶಾಲೆಗಳನ್ನು ಬೋಧನೆಗೆ ತಕ್ಕಷ್ಟು ಜನ

### ವಿದ್ಯಾ ಹಕ್ಕು ಕಾನೂನು -2009

6 ರಿಂದ 14 ವರ್ಷಗಳ ವಯಸ್ಸಿನ ಮಕ್ಕಳಿಗೆಲ್ಲಾ ಉಚಿತ ಖಡ್ಡಾಯ ಪ್ರಾಥಮಿಕ ವಿದ್ಯೆಯನ್ನು ಒದಗಿಸುವುದಕ್ಕೆ ಉದ್ದೇಶಿಸಿ ಪಟ್ಟಂತಹವು ಇದು ಏಪ್ರಿಲ್ 1 2010 ರಿಂದ ಜಾರಿಯಲ್ಲಿ ಬಂದಿದೆ.

**ಕಾನೂನಿನಲ್ಲಿ ಮುಖ್ಯಾಂಶಗಳು :**

- ಮಕ್ಕಳಿಗೆಲ್ಲರಿಗೂ ಹತ್ತಿರದಲ್ಲಿಪಾಠ ಶಾಲೆಗಳನ್ನು ಏರ್ಪಾಟು ಮಾಡಬೇಕು.
- ಪಾಠಶಾಲೆಗಳಿಗೆ ಮೂಲಭೂತ ವಸತಿಗಳನ್ನು ಕಲ್ಪಿಸಬೇಕು.
- ಮಕ್ಕಳೆಲ್ಲರನ್ನೂ ವಯಸ್ಸಿಗೆ ಅಣುಗುಣವಾದ ತರಗತಿಯಲ್ಲಿ ಸೇರಿಸ ಬೇಕು
- ವಯಸ್ಸಿಗೆ ಅನುಗುಣವಾದ ತರಗತಿಯಲ್ಲಿ ಸೇರಿದ ನಂತರ ಸಹ ವಿದ್ಯಾರ್ಥಿಗಳೊಂದಿಗೆ ಸಮಾನವಾಗಿ ಇರುವುದಕ್ಕೆ ಪ್ರತ್ಯೇಕ ತರಬೇತಿಯನ್ನು ಕೊಡಿಸಬೇಕು
- ಪ್ರತ್ಯೇಕ ಅವಸರಗಳು ಹೊಂದಿದ ಮಕ್ಕಳಿಗೆ ಸಾಧಾರಣ ಮಕ್ಕಳೊಂದಿಗೆ ವಿದ್ಯೆಯನ್ನು ಕಲಿಯುವುದಕ್ಕೆ ತಕ್ಕಷ್ಟು ವಸತಿಗಳು ಏರ್ಪಾಟು ಮಾಡಬೇಕು.
- ಶಾಲೆಯಲ್ಲಿ ಸೇರಿಸಿಕೊಳ್ಳುವುದಕ್ಕೆ ಯಾವ ರೀತಿಯಾದ ಪರೀಕ್ಷೆಗಳು ನಿರ್ವಹಿಸಬಾರದು. ಯಾವ ತರಹದ ಹಣವನ್ನಾಗಲೀ, ಚಾರ್ಜ್‌ಗಳನ್ನಾಗಿಲಿ ವಸೂಲು ಮಾಡಬಾರದು.
- ಶಾಲೆಯಲ್ಲಿ ಸೇರಿದ ಮಕ್ಕಳ ಹೆಸರುಗಳನ್ನು ತೆಗೆದು ಹಾಕುವುದು, ಅದೇ ತರಗತಿಯಲ್ಲಿ ಇರುವಂತೆ ಮಾಡಬಾರದು.
- ಮಕ್ಕಳನ್ನು ಶಾರೀರಿಕವಾಗಿ, ಮಾನಸಿಕವಾಗಿ ಹಿಂಸಿಸಬಾರದು.
- ವಯಸ್ಸು ನಿರ್ಧಾಣೆ ಪತ್ರ , ಇತರ ಧೃವೀಕರಣ ಪತ್ರಗಳು ಇಲ್ಲವೆಂಬಕಾರಣದಿಂದ ಮಕ್ಕಳನ್ನು ಶಾಲೆಯಲ್ಲಿ ಪ್ರವೇಶಿಸುವುದಕ್ಕೆ ನಿರಾಕರಿಸಬಾರದು.
- ತಕ್ಕಷ್ಟು ಅರ್ಹತೆಗಳನ್ನು ಇದ್ದವರನ್ನು ಮಾತ್ರವೇ ಉಪಾಧ್ಯಾಯರಾಗಿನೇಮಿಸಬೇಕು.
- ಮಕ್ಕಳನ್ನು ನಿರ್ದೇಶಿಸಿದ ಸಾಮರ್ಥ್ಯಗಳು ಸಾಧಿಸುವಂತೆ ಬೋಧನಾದ್ಯಸನೆ, ಮೌಲ್ಯಮಾಪನೆ ಇರಬೇಕು.
- ಪ್ರಾಥಮಿಕ ವಿದ್ಯೆಯು ಪೂರ್ತಿಯಾಗುವವರೆಗೂ ಮಕ್ಕಳಿಗೆ ಎಂತಹ ಬೋರ್ಡು ಪರೀಕ್ಷೆಗಳು ನಿರ್ವಹಿಸಬಾರದು.
- ಹದಿನಾಲ್ಕು ವರ್ಷಗಳು ಪೂರ್ತಿಯಾದಾಗ್ಯೂ, ಪ್ರಾಥಮಿಕ ವಿದ್ಯೆಪೂರ್ತಿಯಾಗುವವರೆಗೆ ಪಾಠಶಾಲೆಯಲ್ಲಿ ಮಕ್ಕಳು ಓದು ಮುಂದುವರಿಸಬಹುದು.
- ಬಲಹೀನ ವರ್ಗಗಳೇಗೆ, ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸುವುದಕ್ಕೆ ವೃಂದಗಳಿಗೆ ಹೊಂದಿದ ಮಕ್ಕಳು ಯಾವ ವಿಧವಾದ ವಿವಕ್ಷತೆಗೆ ಗುರಿಯಾಗದಂತೆ ನೋಡಬೇಕು.
- ಸಂವಿಧಾನದಲ್ಲಿ ಆಳವಡಿಸಲಾದಬೆಲೆಗಳಿಗೆ ಅನುಗುಣವಾಗಿ, ವಿದ್ಯಾರ್ಥಿಗಳನ್ನು ಭಯ, ಆಂದೋಲನೆಗೆ ಗುರಿಯಾಗದ ರೀತಿಯಲ್ಲಿ ಅವರ ಸರ್ವಾಂಗೀಣ ಪ್ರಗತಿಗೆ ಸಹಾಯವಾಗುವ ಪಾತ್ರ ಒದಗಿಸಬೇಕು.

child to express views freely

- ನಿಮ್ಮ ಪಾಠಶಾಲೆ ಈ ಪ್ರಾಮಾಣಿಕೆಗಳಿಗೆ ಅನುಗುಣವಾಗಿ ಇದೆಯಾ?
- ಅವಸರವಾದರೆ ನಿಮ್ಮ ಪಾಠಶಾಲೆಯ ಕೆಲಸದ ಮೇಲೆ ಯಾರಿಗೆ ದೂರು (ಫಿರ್ಯಾದು) ಮಾಡಬೇಕೋ ತಿಳಿದುಕೊಳ್ಳಿರಿ.

SCERT TELANGANA

ಉಪಾಧ್ಯಾಯರೂ ಇಲ್ಲದಿದ್ದರೂ, ಬೋಧನ ಅಭ್ಯಸನ ಪರಿಕರಗಳು ತಕ್ಕಷ್ಟು ಹತ್ತಿರದಲ್ಲಿ ಇಲ್ಲದಿದ್ದರೂ, ಮಕ್ಕಳನ್ನು ಹೊಡೆದರೂ, ಭಯ ಬ್ರಾಂತರನ್ನಾಗಿ ಮಾಡಿದರೂ, ಅಂತಹ ಸಂದರ್ಭಗಳಲ್ಲಿ ಅಧಿಕಾರಿಗಳ ಮೇಲೆ ಮಕ್ಕಳು ಅಥವಾ ಹಿರಿಯರು ದೂರು (ಫಿರ್ಯಾದು) ಮಾಡಬಹುದು.

### ಮುಖ್ಯ ಪದಗಳು

| | |
|---|---|
| 1. ಮಾವನ ಹಕ್ಕುಗಳು | 2. ಸಮಾಚಾರ ಹಕ್ಕು ಕಾನೂನು (RTI) |
| 3. ವಿದ್ಯಾ ಹಕ್ಕು ಕಾನೂನು (RTE) | 4. ಸ್ವೇಚ್ಛೆ |

### ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿರಿ.

1) ತಪ್ಪು ಇರುವ ವಾಕ್ಯಗಳನ್ನು ಸರಿಮಾಡಿರಿ :

ಅ) ಸರಕಾರದ ಸಂಕ್ಷೇಮ ಕಾರ್ಯಕ್ರಮಗಳನ್ನು ಪರ್ಯವೇಕ್ಷಿಸಬೇಕು.

ಆ) ಪಥಕಗಳ ಜಾರಿಯನ್ನು ಕೇವಲ ಆಯ್ಕೆಯಾದ ಪ್ರಜಾ ಪ್ರತಿನಿಧಿಗಳು ಪರ್ಯವೀಕ್ಷಿಸುವಂತೆ ಪ್ರಜೆಗಳು ನೋಡಬೇಕು.

ಇ) ಸಮಾಚಾರ ಅಧಿಕಾರಿಗಳು ಇಷ್ಟಬಂದಷ್ಟು ಕಾಲ ಸಮಾಚಾರವನ್ನು ತಿಳಿಸದಂತೆ ಇರಬಹುದು.

ಈ) ವಿವಿಧ ಪತ್ರಗಳು ನೋಡುವುದರ ಮುಖಾಂತರ ಭ್ರಷ್ಟಾಚಾರವಿಲ್ಲದಂತೆ ನಡೆಯುತ್ತವೆ ಎಂದು ಗುರ್ತಿಸಬಹುದು.

2) 'ಭ್ರಷ್ಟಾಚಾರವನ್ನು ಎದುರಿಸುವುದಕ್ಕೆ ಸಮಾಚಾರ ಅವಸರ' ಶೀರ್ಷಿಕೆಯ ಕೆಳಗಿರುವ ಪ್ಯಾರವನ್ನು ಓದಿ ಕೆಳಗಿನ ಪ್ರಶ್ನೆಗಳೇಗೆ ಉತ್ತರಗಳನ್ನು ಬರೆಯಿರಿ.

ಅ) ನಿಮ್ಮ ಪ್ರದೇಶಗಳಲ್ಲಿ ಒಂದು ಸರಕಾರದ ಕಾರ್ಯಕ್ರಮವು ಜಾರಿಯಾಗುವ ರೀತಿಯನ್ನು ಪರಿಶೀಲಿಸಿರಿ. ನಿವೇದಿಕೆಯನ್ನು ತಯಾರು ಮಾಡಿರಿ.

3) ಸಮಾಚಾರ ಹಕ್ಕು ಕಾನೂನಿನ ಮುಖಾಂತರ ಸಾಧಿಸಿದ ಗೆಲವುಗಳನ್ನು ವೃತ್ತ ಪತ್ರಿಕೆಗಳಿಂದ ಶೇಖರಿಸಿ ನಿಮ್ಮ ತರಗತಿಯಲ್ಲಿ ಹೇಳಿರಿ.

4) ವಿದ್ಯಾ ಹಕ್ಕು ಕಾನೂನು (RTE) ಮಕ್ಕಳಿಗೆ ವರದಂತಹದು. ವಿವರಿಸಿರಿ.

5) ನಿಮಗೆ ಇನ್ನೂ ಏನಾದರೂ ಹಕ್ಕುಗಳು ಅವಸರವೆಂದು ಭಾವಿಸುತ್ತಿದ್ದೀರಾ ? ಏತಕ್ಕೆ ?

6) ಸಮಾಚಾರ ಹಕ್ಕು ಕಾನೂನಿನ ಪ್ರಕಾರ ನಿಮ್ಮ ಪಾಠಶಾಲೆಯನ್ನು ಕುರಿತು ಪ್ರಧಾನೋಪಾಧ್ಯಾಯರಿಗೆ ಯಾವ ಸಮಾಚಾರವನ್ನು ಕೇಳುತ್ತೀರಿ ?

7) ಭ್ರಷ್ಟಾಚಾರ ಎದುರಿಸುವುದಕ್ಕೆ ಸಮಾಚಾರ ಹಕ್ಕು ಕಾನೂನು ಉಪಯೋಗವಾಗುತ್ತದೆ ಎಂದು ಹೇಗೆ ಹೇಳಬಲ್ಲೆ ?

**ಚರ್ಚೆ :**

ಇತ್ತೀಚಿನ ದಿನಗಳಲ್ಲಿ ಭ್ರಷ್ಟಾಚಾರ ನಿಯಂತ್ರಣಾಧಿಕಾರಿಗಳ ದಾಳಿಯಲ್ಲಿ ಸಿಕ್ಕಿಬಿದ್ದ ಅಧಿಕಾರಿಗಳ ಬಗೆಗಿನ ಮಾಹಿತಿಯ ದಿನಪತ್ರಿಕೆಯ ಪ್ರಕಟಣೆಗಳ ಕಟಿಂಗ್ಸ್‌ನ್ನು ಶೇಖರಿಸಿ ತರಗತಿ ಕೋಣೆಯಲ್ಲಿ ಚರ್ಚಿಸಿರಿ.

SCERT TELANGANA

# ಘಟಕ 19 ಸಾಮಾಜಿಕ, ಧಾರ್ಮಿಕ ಸುಧಾರಣಾ ಚಳುವಳಿಗಳು

ಏಳನೇ ತರಗತಿಯಲ್ಲಿ ನೀವು ಓದಿದ ಭಕ್ತಿ ಚಳುವಳಿಯಲ್ಲಿಯ ಮುಖ್ಯಾಂಶಗಳನ್ನು ಜ್ಞಾಪಕ ಮಾಡಿಕೊಳ್ಳಿರಿ. ಹಿಂದೂಗಳು, ಮುಸ್ಲಿಂರಲ್ಲಿಯ ವಿದ್ಯುಕ್ತ ಕರ್ಮಾನುಸಾರವನ್ನು ವಿಮರ್ಶಿಸುತ್ತಾ ಭಕ್ತಿ ಸಂತರು ದೇವರು ಒಬ್ಬನೆ ಎಂದು, ಮನುಷ್ಯರೆಲ್ಲರೂ ಸಮಾನರೆಂದು ತಿಳಿಸಿದ್ದಾರೆ. ಈ ಭಾವನೆಗಳು 18 , 19 ನೇ ಶತಮಾನದಲ್ಲಿ ಮತ್ತಷ್ಟು ಬಲಪಟ್ಟಿವೆ.

## ಕೈಸ್ತವ ಪ್ರಚಾರಕರು, ಪೂರ್ವದೇಶದ ಪಂಡಿತರು

ಯುರೋಪಿಯನ್ ಕಂಪನಿಗಳೊಂದಿಗೆ ಸಹ ಅನೇಕ ಜನ ಕ್ರೈಸ್ತವ ಧರ್ಮ ಪ್ರಚಾರಕರು ಭಾರತ ದೇಶದಲ್ಲಿ ಕ್ರೈಸ್ತವ ಧರ್ಮವನ್ನು ಭೋಧಿಸಲು ಬಂದರು. ಆಗಿನ ಧಾರ್ಮಿಕ ಆಚರಣೆಗಳನ್ನು, ನಂಬಿಕೆಗಳನ್ನು ಅವರು ತೀವ್ರವಾಗಿ ವಿಮರ್ಶಿಸಿ ಕೈಸ್ತವ ಧರ್ಮದಲ್ಲಿ ಸೇರಬೇಕೆಂದು ಪ್ರಜೆಗಳಿಗೆ ಬೋಧಿಸಲಾರಂಭಿಸಿದರು. ಅದೇ ಸಮಯದಲ್ಲಿ ಅವರು ಅನೇಕ ವಿದ್ಯಾ ಸಂಸ್ಥೆಗಳು, ಆಸ್ಪತ್ರೆಗಳು ಸ್ಥಾಪಿಸಿದ್ದಾರೆ. ಬಡವರು ಕಷ್ಟದಲ್ಲಿರುವ ಪ್ರಜೆಗಳಿಗೆ ಸೇವೆ ಮಾಡುವ ಉದ್ದೇಶದಿಂದ ಸಾಮಾಜಿಕ ಸೇವಾ ಕಾರ್ಯಗಳನ್ನು ಮಾಡಿದ್ದರು. ಇದು ಪ್ರಜೆಗಳಲ್ಲಿ ಹೊಸ ಆಲೋಚನೆಗಳನ್ನು ಹರಡಿಸುವುದಕ್ಕೆ ಸಹಾಯವಾಗಿದೆ.

ಸ್ವಲ್ಪ ಕಾಲದಲ್ಲೇ ಈ ಧರ್ಮ ಪ್ರಚಾರಕರಿಗೂ ಹಿಂದೂ, ಇಸ್ಲಾಂ ಧಾರ್ಮಿಕ ನಾಯಕರಿಗೂ ಮಧ್ಯ ತಮ್ಮ ತಮ್ಮ ಧಾರ್ಮಿಕ ಭಾವನೆಗಳನ್ನು ಸಮರ್ಥಿಸಿಕೊಳ್ಳುವ ಚರ್ಚೆಗಳು ಮೊದಲಾದವು. ಈ ಚರ್ಚೆಗಳಿಂದ ಪ್ರಜೆಗಳಿಗೆ ಬೇರೆಯವರ ಆಲೋಚನೆಗಳು ತಿಳಿಯುವುದೇ ಅಲ್ಲದೇ ತಮ್ಮ ತಮ್ಮ ಮತಗಳಲ್ಲಿ ಮೂಲಭೂತ ಸೂತ್ರಗಳನ್ನು ತೆರೆದು ನೋಡುವಂತೆ ಮಾಡಿತು. ಅನೇಕ ಯುರೋಪಿಯನ್ ಪಂಡಿತರು ಭಾರತ ದೇಶದ ಪುರಾತನ ಸಾಹಿತ್ಯವನ್ನು ಓದಿ, ಅನುವಾದಮಾಡಿ, ಪುಸ್ತಕಗಳಾಗಿ ಪ್ರಚರಿಸಿದ್ದಾರೆ. (ಪೂರ್ವ ದೇಶಗಳ ಪುಸ್ತಕಗಳು ಓದಿರುವರು ಆದುದರಿಂದ ಅವರನ್ನು ಪೂರ್ವ ದೇಶದ ಪಂಡಿತರು ಎನ್ನುತ್ತಿದ್ದರು). ಇಂದಿಗೂ ಈ ಪುಸ್ತಕಗಳು ಎಲ್ಲರೂ ಓದಿಕೊಳ್ಳುವುದಕ್ಕೆ ದೊರೆಯಲು ಸಾಧ್ಯವಾದವು.



ËÈ¿áí hæà®...



ÊÞP... ÊáâÆÃ...

ಪ್ರಾಚೀನ ಸಂಸ್ಕೃತ, ತಮಿಳು, ತೆಲುಗು, ಪರ್ಷಿಯನ್, ಅರೇಬಿಕ್ ಪುಸ್ತಕಗಳು ಯುರೋಪ್ ಭಾಷೆಗಳಲ್ಲಿ ಅನುವಾದ ಮಾಡಿದುದರಿಂದ ದೇಶ ಸಂಪನ್ನ, ವೈವಿಧ್ಯ ಭರಿತ. ಸಾಂಸ್ಕೃತಿಕ ವಾರಸತ್ವವನ್ನು ಎಲ್ಲರೂ ಗುರ್ತಿಸಿದ್ದಾರೆ. ಅವರ ಧರ್ಮಗಳಲ್ಲಿ ತಮ್ಮ ಭಾವನೆಗಳನ್ನು ಹೊಸದಾಗಿ ವ್ಯಾಖ್ಯಾನಿಸುವುದಕ್ಕೆ ಅವಕಾಶ ಉಂಟಾಯಿತು.

ಯುರೋಪಿಯನ್ನರು ಭಾರತ ದೇಶದಲ್ಲಿ ಮುದ್ರಣ ಯಂತ್ರವನ್ನು ಪ್ರವೇಶಗೊಳಿಸಿದರು. ಇದರಿಂದ ಎಷ್ಟೋ ವಾರ್ತಾಪತ್ರಿಕೆಗಳು, ಇತರ ಪತ್ರಿಕೆಗಳು ಪ್ರಚರಿಸಲ್ಪಟ್ಟವು. ಅನೇಕ ಭಾರತೀಯ ಭಾಷೆಗಳಲ್ಲಿ ಸಹ ಪುಸ್ತಕಗಳು ಪ್ರಚಲಿತವಾದವು. ಇದರ ಫಲವಾಗಿ ಬಹಳ ಕಡಿಮ ಬೆಲೆಗೆ ಪುಸ್ತಕಗಳು ಅನೇಕ ಜನರಿಗೆ ದೊರೆಯಲು ಸಾಧ್ಯವಾದವು. ಈ ವಾರ್ತಾ ಪತ್ರಿಕೆಗಳು ಪ್ರಜೆಗಳಲ್ಲಿ ಚರ್ಚೆಗಳಿಗೆ, ವಾದೋಪವಾದಗಳಿಗೆ ಸಹಾಯ ವಾದವು. ಪತ್ರಿಕೆಗಳು ಮತ್ತು ಪುಸ್ತಕಗಳು ಹೆಚ್ಚಿನ ಸಂಖ್ಯೆಯಲ್ಲಿ ಜನರಿಗೆ ದೊರೆಯಲು ಸಾಧ್ಯವಾದವು.

SCERT TELANGANA

## ಬ್ರಹ್ಮಸಮಾಜ, ಬೆಂಗಾಲ್‌ನಲ್ಲಿ ಧಾರ್ಮಿಕ ಚಳುವಳಿಗಳು



ರಾಜಾರಾಮ್ ಮೋಹನ್ ರಾಯ್

ರಾಜರಾಮ್ ಮೋಹನ್ ರಾಯ್ ಬೆಂಗಾಲ್‌ನಲ್ಲಿ 1772ರಲ್ಲಿ ಜನಿಸಿದ್ದಾರೆ. ಆತನು ಸಂಸ್ಕೃತ, ಪರ್ಷಿಯನ್ ಆಂಗ್ಲ ಭಾಷೆಯಲ್ಲಿ ಪಂಡಿತ. ಅವರಿಗೆ ಅರಬಿಕ್, ಲ್ಯಾಟಿನ್, ಗ್ರೀಕ್ ಭಾಷೆಗಳು ಸಹ ತಿಳಿದಿವೆ.

ಅವರು ಹಿಂಧೂ, ಇಸ್ಲಾಂ, ಕ್ರೈಸ್ತವ, ಸೂಧೆ ಯಂತಹ ಅನೇಕ ಧಾರ್ಮಿಕ ಸಿದ್ಧಾಂತಗಳನ್ನು ಓದಿದ್ದರು. ಅನೇಕ ಪುಸ್ತಕಗಳು ಓದಿರುವುದರಿಂದ ಅವರಿಗೆ ದೇವರು ಒಬ್ಬನೇ ಎಂಬ ನಂಬಿಕೆ ಉಂಟಾಯಿತು. ವಿಗ್ರಹಾರಾಧನೆ, ಬಲಿದಾನ ಕೊಡುವುದು ಸರಿಯಲ್ಲವೆಂದು ಅವರಿಗೆ ಅನ್ನಿಸಿತು. ಎಲ್ಲಾ ಪ್ರಮುಖ ಧರ್ಮಗಳು ಒಂದೇ ನಂಬಿಕೆಗಳು ಇಟ್ಟುಕೊಂಡಿವೆಯೆಂದು, ಇತರರ ಧರ್ಮಗಳನ್ನು ವಿಮರ್ಶಿಸುವುದು ಸರಿಯಲ್ಲವೆಂದು ಅವರು ಭಾವಿಸಿದ್ದಾರು. ಸುವಿಚಾರವಾಗಿದ್ದಾಗ (ಜ್ಞಾನವುಳ್ಳ), ಪ್ರಜೆಗಳಿಗೆ ಪ್ರಯೋಜನಕರವಾಗಿದ್ದಾಗ ಮಾತ್ರವೇ ಧಾರ್ಮಿಕ ಭಾವನೆಗಳನ್ನು ಒಪ್ಪಿಕೊಳ್ಳಬೇಕೆಂದು ಸಹ ಅವರು ಭಾವಿಸಿದ್ದಾರು. ಪುರೋಹಿತರ ಅಧಿಕಾರವನ್ನು ತಿರಸ್ಕರಿಸಿ ತಮ್ಮ ಧರ್ಮದೊಳಗಿನ ಮೂಲ ಗ್ರಂಥಗಳನ್ನು ಓದಿರಿ ಎಂದು ಪ್ರಜೆಗಳನ್ನು ಅವರು ಕೋರಿದರು. ಅಚ್ಚು ಯಂತ್ರದಲ್ಲಿ ಹೊಸ ತಾಂತ್ರಿಕ ವಿಜ್ಞಾನವನ್ನು ಉಪಯೋಗಿಸಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಪ್ರಜೆಗಳೇಗೆ ತಲುಪಿಸಲಿಕ್ಕೆ ಅವರ ತನ್ನ ಭಾವನೆಗಳನ್ನು ಪತ್ರಿಕೆಯಲ್ಲಿ, ಪುಸ್ತಕಗಳಾಗಿ ಪ್ರಚರಿಸಿದ್ದಾರೆ.

1828 ರಲ್ಲಿ ರಾಂ ಮೋಹನ್ ರಾಯ್ ಬ್ರಹ್ಮ ಸಮಾಜವನ್ನು ಏರ್ಪಾಟು ಮಾಡಿದ್ದಾರು. ದೇವರು ಒಬ್ಬನೇ ಎನ್ನುವ ಸಿದ್ಧಾಂತದ ಮೇಲೆ ಆಧಾರಪಟ್ಟ ವಿಶ್ವ ಜನನೀ ಧರ್ಮದಲ್ಲಿ ನಂಬಿಕೆ ಇರುವ ಎಲ್ಲರೊಂದಿಗೆ ಕಲೆತು ಇದನ್ನು ಸ್ಥಾಪಿಸಿದ್ದಾರು. 1833ರಲ್ಲಿ ರಾಜರಾಮ್‌ಮೋಹನ್ ರಾಯರು ಮರಣ ಹೊಂದಿದ ನಂತರ ಈ ಚಳುವಳಿಗೆ ದೇವೇಂದ್ರನಾಥ್ ಠಾಗೂರ್, ಕೇಶವ ಚಂದ್ರ ಸೇನ್ ರಂತಹವರು ನಾಯಕತ್ವವನ್ನು ವಹಿಸಿದರು. ಇವರು ದೇಶದಾದ್ಯಂತ ತಿರುಗುತ್ತಾ, ಉಪನ್ಯಾಸಗಳು ಕೊಡುತ್ತಾ ತಮ್ಮ ಭಾವನೆಗಳನ್ನು ಪ್ರಚಾರ ಮಾಡಿದರು.

ಕೇಶವ ಸೇನ್ ಮಹಾರಾಷ್ಟ್ರದಲ್ಲಿ ತಿರುಗುತ್ತಾ ಉಪನ್ಯಾಸ ಮಾಡಿದ ಪರಿಣಾಮವಾಗಿ 1867ರಲ್ಲಿ ಬೊಂಬಾಯಿಯಲ್ಲಿ ಪ್ರಾರ್ಥನಾ ಸಮಾಜವು ಏರ್ಪಟ್ಟಿತು. ಬ್ರಹ್ಮ ಸಮಾಜದಂತಹ ಭಾವನೆಗಳು ಇರುವ ಇದನ್ನು ಆರ್ ಜಿ ಭಂಡಾರ್ಕರ್, ಎಂ ಜಿ ರಣಡೇಲರು ಸ್ಥಾಪಿಸಿದ್ದಾರು. ದಕ್ಷಿಣ ಭಾರತ ದೇಶದಲ್ಲಿ ಸುಧಾರಣಾ ಚಳುವಳಿಯನ್ನು ಪ್ರಾರಂಭಿಸಿದ ವೀರಶಲಿಂಗಂರವರ ಮೇಲೆ ಸಹ ಸೇನ್ ಪ್ರಭಾವವು ಬಹಳ ಇದೆ.


ಕಂದುಕೂರಿ ವೀರೇಶಲಿಂಗಂ

ವೀರೇಶಲಿಂಗಂ ಆಂಧ್ರ ಪ್ರದೇಶದಲ್ಲಿ ಬ್ರಹ್ಮಸಮಾಜವನ್ನು ಸ್ಥಾಪಿಸಿದರು. ವಿಧವಾ ವಿವಾಹ ಹಾಗು ಬಾಲ್ಯ ವಿವಾಹ ನಿವಾರಣೆಗಾಗಿ ತನ್ನ ಜೀವನವನ್ನು ಸವೆಸಿದರು. ಆ ಕಾಲದಲ್ಲಿ ಮಹಿಳಾ ವಿದ್ಯೆ ಸಾಧನೆ ಗಾಗಿ ಹೋರಾಟ ನಡೆಸಿದರು.

ಆದರೆ ಬ್ರಹ್ಮ ಸಮಾಜದಲ್ಲಿ ಭೇಧಭಿಪ್ರಾಯಗಳು ಏರ್ಪಟ್ಟು ಚಿಕ್ಕ ಚಿಕ್ಕ ಸಂಸ್ಥೆಗಳಾಗಿ ಬೇರ್ಪಟ್ಟಿದೆ. ಇವು ಪದೇ ಪದೇ ಒಂದರೊಂದಿಗೆ ಇನ್ನೊಂದು ಜಗಳ ವಾಡುತ್ತಿದ್ದವು

ಕೇಶವ ಸೇನ್ ಕೊನೆಗೆ ಕಾಳಿ ಮಾತೆಯ ಬಗ್ಗೆ ಭಕ್ತಿಯನ್ನು ಪ್ರಚಾರ ಮಾಡಿದ ರಾಮಕೃಷ್ಣ ಪರಮಹಂಸರಿಗೆ ಶಿಷ್ಯನಾದರು.


ರಾಮಕೃಷ್ಣ ಪರಮಹಂಸ

ಸ್ವಾಮಿ ವಿವೇಕಾನಂದರು ಸಹ ರಾಮಕೃಷ್ಣ ಪರಮಹಂಸರ ಶಿಷ್ಯರೇ. ಅವರು ಎರಡು ಉದ್ದೇಶಗಳೊಂದಿಗೆ ರಾಮಕೃಷ್ಣ ಮಠವನ್ನು ಸ್ಥಾಪಿಸಿದ್ದಾರೆ. ಸುಧಾರಣೆ ಗಳೊಂದಿಗೆ ಕೂಡಿದ ಹಿಂದೂ ಧರ್ಮ ಪುನರುದ್ಧರಣೆ, ರಾಷ್ಟ್ರ ಪುನಃ ನಿರ್ಮಾಣಕ್ಕೆ ಸಾಮಾಜಿಕ ಕೆಲಸ, ಸೇವೆಯಲ್ಲಿ ಪಾಲ್ಗೊಳ್ಳುವಿಕೆ.

ಹಿಂದೂ ಧರ್ಮವು ಇತರ ಧರ್ಮಗಳಿಂದ ಮಹತ್ವದ್ದು ಎಂದು ವಿವೇಕಾನಂದರು ಭಾವಿಸಿದ್ದಾರು. ಅವರು ಉಪನಿಷತ್ತುಗಳ ಭೋಧನೆ ಗಳಿಗೆ ಪ್ರಾಧಾನ್ಯತೆ ಕೊಟ್ಟರು. ಇವು ಅನುವಾದವಾಗಿ ದೊಡ್ಡ ಸಂಖ್ಯೆಯಲ್ಲಿ ಮುದ್ರಿಸಲ್ಪಟ್ಟಿವೆ. ಅದೇ ಸಮಯದಲ್ಲಿ ಹಿಂಧೂ ಧರ್ಮವು ಕರ್ಮತಂತ್ರ, ಮೂಢನಂಬಿಕೆಗಳನ್ನು ಬಿಟ್ಟು ಬಿಟ್ಟು ಯುರೋಪಿಯನ್ ಸಂಸ್ಕೃತಿಯಲ್ಲಿನ ಒಳ್ಳೆಯ ಅಂಶಗಳಾದ ಸ್ವೇಚ್ಛೆ, ಮಹಿಳೆಯರ ಬಗ್ಗೆ ಗೌರವ ನೀತಿ ತಂತ್ರಜ್ಞಾನ ದಂತಹವುಗಳನ್ನು ಅವಲಂಬಿಸ ಬೇಕೆಂದು ಅವರು ಕೋರಿ ಕೊಂಡರು. ಆಸ್ಪತ್ರೆಗಳು, ಪಾಠ ಶಾಲೆಗಳು ಅನಾಥ ಶರಣಾ ಲಯಗಳಂತಹವುಗಳನ್ನು ಈ ಮಿಷನ್ ಸ್ಥಾಪಿಸಬೇಕೆಂದು, ಬರಗಾಲಗಳು, ಪ್ರವಾಹ ಗಳಂತಹ ಕಷ್ಟಕಾಲದಲ್ಲಿ ಸಹಾಯ ಕಾರ್ಯ ಕ್ರಮಗಳನ್ನು ಒದಗಿಸಬೇಕೆಂದು ಅತರು ಕೋರಿಕೊಂಡರು.


ÓÝËá ËÊÄaPÝ®Ì í ¨Ì

SCERT TELANGANA

- ರಾಜಾರಾಮ್ ಮೋಹನ್ ರಾಯ್, ಸ್ವಾಮಿ ವಿವೇಕಾನಂದರ ಅವಲೋಕನಗಳಲ್ಲಿ (ನೋಟ) ಹೋಲಿಕೆಗಳು, ವ್ಯತ್ಯಾಸಗಳು ಯಾವುವು?
- ಯುರೋಪಿಯನ್ ಸಂಸ್ಕೃತಿ, ಕ್ರೈಸ್ತವ ಧರ್ಮದಿಂದ ಮೊದಲಿನ ಸುಧಾರಕರು ಯಾವ ವಿಧವಾಗಿ ಪ್ರಭಾವಿತಗೊಂಡಿದ್ದಾರೆ?
- ಈ ಹೊಸ ಭಾವನೆಗಳ ವ್ಯಾಪ್ತಿಯಲ್ಲಿ ಮುದ್ರಣೆ ಯಾವ ವಿಧವಾಗಿ ಸಹಾಯ ಪಟ್ಟಿದೆ?

## ಪಂಜಾಬ್‌ನಲ್ಲಿ ಆರ್ಯಸಮಾಜ

ಸ್ವಾಮಿ ದಯಾನಂದ ಸರಸ್ವತಿ (1824-1883)ಒಬ್ಬ ಸಾಮಾಜ ಸುಧಾರಕ. ಅವರು ವಿದ್ಯುಕ್ತ ಕರ್ಮಾನುಸಾರಿ ಸಂಪ್ರದಾಯ ಗಳೊಂದಿಗೆ ಕೂಡಿದ ಹಿಂದೂ ಧರ್ಮವನ್ನು ತಿರಸ್ಕರಿಸಿ, ಸನ್ಯಾಸಿ ಯಾಗಿ ಬದಲಾಗಿ ದೇಶದಾ ದ್ಯಂತ ಸಂಚರಿ ಸುತ್ತಿದ್ದರು.

ಅವರು ವೇದಗಳನ್ನು ಓದಿ ನಿಜವಾದ ಧರ್ಮವು ಅವುಗಳಲ್ಲಿದೆ ಎಂದು ನಂಬಿದರು. ಅನಂತರ ಹಿಂದೂ ಧರ್ಮದೊಳಗೆ ಬಂದು ಸೇರಿದ ಅನೇಕ ದೇವರುಗಳು, ದೇವತೆಗಳನ್ನು, ದೇವಾಲಯದಲ್ಲಿ ವಿಗ್ರಹಾರಾಧನೆಗಳನ್ನು, ಬ್ರಾಹ್ಮಣ ಪುರೋಹಿತರನ್ನು, ಜಾತಿ ವ್ಯವಸ್ಥೆಯನ್ನು ಅವರು ತಿರಸ್ಕರಿಸದರು.



ÓÝËá ¨Ï¿ÞÉÍí¨Ï ÓÄÃÔÍ£

ಸಾಧಾರಣ, ಪೂಜಾ ವಿಧಾನ ಗಳೊಂದಿಗೆ, ವೇದ ಮಂತ್ರಗಳೊಂದಿಗೆ ಒಬ್ಬರೇ ದೇವರನ್ನು ಪೂಜಿಸಬೇಕೆಂದು ಅವರು ಪ್ರಚಾರ ಮಾಡಿದರು. ಉಳಿದ ಎಲ್ಲಾ ಧರ್ಮಗಳನ್ನು ಅವರು ತಪ್ಪಾದ ಧರ್ಮಗಳಾಗಿ ತಿರಸ್ಕರಿಸಿ ಇತರ ಧರ್ಮಗಳನ್ನು ಸ್ವೀಕರಿಸಿದ ಹಿಂದೂಗಳು ವೇದಗಳ ಆಧಾರವಾಗಿರುವ ಹಿಂದು ಧರ್ಮದೊಳಗೆ ತಿರುಗಿ ಬರಬೇಕೆಂದು ಭಾವಿಸಿದನು. ಭಾವನೆಗಳ ಪ್ರಚಾರಕ್ಕೆ ಅವರು 1875 ರಲ್ಲಿ ಆರ್ಯ ಸಮಾಜವನ್ನು ಸ್ಥಾಪಿಸಿದತು. ಸತ್ಯಾರ್ಥ ಪ್ರಕಾಶ್ ಎಂಬ ಪುಸ್ತಕವನ್ನು ಬರೆದನು. ಈ ಪುಸ್ತಕವು ಹೆಚ್ಚಿನ ಸಂಖ್ಯೆಯಲ್ಲಿ ಮುದ್ರಣಗೊಂಡಿತು. ವಿದ್ಯಾವಂತರಲ್ಲಿ ಬಹಳ ಜನ ಇದನ್ನು ಓದಿದ್ದಾರೆ.

1883 ರಲ್ಲಿ ಅವರು ಮರಣ ಹೊಂದಿದ ನಂತರ ಅವರ ಅನುಯಾಯಿಗಳು ಪಂಜಾಬ್‌ನಲ್ಲಿ ದಯಾನಂದ್ ಆಂಗ್ಲೋ ವೇದಿಕೆ (ಡಿಎವಿ) ಪಾಠಶಾಲೆಯನ್ನು ಸ್ಥಾಪಿಸಿದರು. ಮಕ್ಕಳಿಗೆ ಆಧುನಿಕ ವಿಷಯಗಳನ್ನು ಕಲಿಸುತ್ತಾ ಅವರ ಧರ್ಮ, ಸಂಸ್ಕೃತಿಯನ್ನು ಕುರಿತು ತಿಳಿಯಪಡಿಸುವುದು ಈ ಪಾಠಶಾಲೆಯ ಉದ್ದೇಶ. ಕೆಲವು ವರ್ಷಗಳ ನಂತರ ಆರ್ಯ ಸಮಾಜ್ ಚಳುವಳಿಯಲ್ಲೂ ಅಭಿಪ್ರಾಯ ಭೇಧಗಳೂ ಏರ್ಪಟ್ಟವು. ಆಧುನಿಕ ವಿಷಯಗಳಲ್ಲದೆ ವೇದ ಧರ್ಮವನ್ನು ಮಾತ್ರವೇ ಭೋಧಿಸುತ್ತಾ ಇತರ ಧರ್ಮಗಳ ಪ್ರಭಾವವನ್ನು ವಿರೋಧಿಸಬೇಕೆಂದು ಸ್ವಲ್ಪ ಜನ ಭಾವಿಸಿದ್ದರು. ಇವರು ಹರಿದ್ವಾರದಲ್ಲಿ ಗುರುಕುಲ ಕಾಂಗ್ರಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ್ದರು.

- ರಾಜಾರಾಮ್ ಮೋಹನ್ ರಾಯ್, ವಿವೇಕಾನಂದ ದಯಾನಂದ ಸರಸ್ವತಿಯವರ ಧಾರ್ಮಿಕ ಅವಲೋಕನೆ ಗಳನ್ನು ಹೋಲಿಸಿ ಅವುಗಳ ನಡುವೆ ವ್ಯತ್ಯಾಸಗಳು, ಹೋಲಿಕೆಗಳನ್ನು ಎತ್ತಿ ತೋರಿಸಿರಿ.
- ನೀವು ಡಿಎವಿ ಪಾಠಶಾಲೆ, ಗುರುಕುಲ ಪಾಠ ಶಾಲೆ ಸರಕಾರವು ನಡೆಸುವ ಪಾಠಶಾಲೆಗಳಲ್ಲಿ ಒಂದನ್ನು ಆರಿಸಿಕೊಳ್ಳಬೇಕಾದರೆ ಯಾವುದನ್ನು ಆರಿಸಿಕೊ ಳ್ಳುತ್ತೀರಿ? ಕಾರಣಗಳನು ಕೊಡಿರಿ.

## ÈÙáäÔ í ÃÙÈ ÓÙá«ÝÃÙÓ¤ÜÚÙá, Ë¨¤Â

ಸುಧಾರಣೆವಾದ ಹಿಂದೂಗಳು ವಿದ್ಯುಕ್ತ ಧರ್ಮಾನು ಸಾರಿಗಳೊಂದಿಗೆ ಜಗಳ ಮಾಡಬೇಕಾಗಿ ಬಂದರೆ ಸುಧಾರಣವಾದ ಮುಸ್ಲಿಂರು ಸಹ ಅವರ ವಿದ್ಯುಕ್ತಾನುಸಾರಿ ಮತಾಚಾರಿಗಳೊಂದಿಗೆ ಹೋರಾಡಬೇಕಾಗುತ್ತದೆ. 1857ರ ದಂಗೆ ಹತ್ತಿಕ್ಕುವುದು ಮುಸ್ಲಿಂರ ಆಂಗ್ಲೇಯರ ಮಧ್ಯ ತೀವ್ರ ವಿಭೇಧಗಳು ಸೃಷ್ಟಿಸಿತು. ಇಸ್ಲಾಮಿಕ್ ಸೂತ್ರಗಳಿಗೆ ವಿರುದ್ಧವಾಗಿ ಇವೆ ಆದುದರಿಂದ ಆಧುನಿಕ ವಿಜ್ಞಾನ ಶಾಸ್ತ್ರವು, ತತ್ವ ಶಾಸ್ತ್ರಗಳನ್ನು ಭೋಧಿಸುವ ಆಂಗ್ಲ ವಿದ್ಯೆಯನ್ನು ಬಹಳ ಜನ ಮೌಲ್ವಿಗಳು ತಿರಸ್ಕರಿಸಿದರು.

**ಆದರೆ ಸರ್ ಸಯ್ಯದ್ ಅಹ್ಮದ್ ಖಾನ್** (1817 -1898)ರಂತಹ ಅನೇಕ ಮುಸ್ಲಿಂರು, ಮುಸ್ಲಿಂರಿಗೂ ಬ್ರಿಟೀಷ್‌ನವರಿಗೂ ನಡುವೆ ಶತೃತ್ವವು ಕೊನೆಯಾಗಬೇಕೆಂದು ಭಾವಿಸಿದ್ದರು. ಅಭಿವೃದ್ಧಿ ಸಾಧಿಸುವುದಕ್ಕೆ ಮುಸ್ಲಿಂರು ಸರಕಾರದಲ್ಲಿ ಭಾಗವಹಿಸುತ್ತಾ ಸರಕಾರದ ಉದ್ಯೋಗಗಳಲ್ಲಿ ಹೆಚ್ಚು ಭಾಗ ಪಡೆಯಬೇಕೆಂದು ಅವರು ಭಾವಿಸಿದರು.

ಆಧುನಿಕ ವಿದ್ಯೆಯ ಮುಖಾಂತರ ಮಾತ್ರವೇ ಇದು ಸಾಧ್ಯವಾಗುತ್ತದೆ. ಮುಸ್ಲಿಂ ಜನಗಳು ಆಧುನಿಕವು ಹೊಂದು ವುದಕ್ಕೆ ಸರ್ ಸಯ್ಯದ್ ಕೃಷ್ ಮಾಡಿದ್ದಾರೆ. ಒಂದು ಪತ್ರಿಕೆಯಲ್ಲಿ ರಚನೆಗಳ ಮುಖಾಂತರ ಅವರು ತನ್ನ ಭಾವನೆಗಳನ್ನು ಪ್ರಚಾರ ಮಾಡಿದ್ದರು.

SCERT TELANGANA

ಮುಸ್ಲಿಂರಲ್ಲಿ ಸಾಮಾ ಜಿಕ ಸುಧಾರಣೆ ಗಳಿಗೆ, ಆಧುನಿಕ ವಿದ್ಯಾ ವ್ಯಾಪ್ತಿಗೆ ಸರ್ ಸಯ್ಯದ್ ಅಲಿಘಡ್ ಚಳುವಳಿಯನ್ನು ಪ್ರಾರಂಭಿ ಸಿದ್ದರು. ಮಹಿಳೆಯರು ಓದಿಕೊಳ್ಳಬೇಕೆಂದು, ಪರದೆಪದ್ಧತಿಯನ್ನು ರದ್ದುಮಾಡಬೇಕೆಂದು ಅವರು ಭಾವಿಸಿದರು. ಇಸ್ಲಾಮನ್ನು ಪುನಃ ವ್ಯಾಖ್ಯಾನಿಸಿ ಧರ್ಮಕ್ಕೆ, ಆಧುನಿಕ ವಿಜ್ಞಾನ ಶಾಸ್ತ್ರವು, ತತ್ವ ಶಾಸ್ತ್ರಗಳಿಗೂ ಮಧ್ಯ ಇರುವ ದೂರವನ್ನು ಮುಚ್ಚಬೇಕೆಂದು ಅಂದು ಕೊಂಡರು. 1864ರಲ್ಲಿ ಸರ್ ಸಯ್ಯದ್ ಒಂದು ವಿಜ್ಞಾನ ಶಾಸ್ತ್ರಸಂಸ್ಥೆಯನ್ನು ಏರ್ಪಾಟು ಮಾಡಿದ್ದರು. ಅನೇಕ ವಿಜ್ಞಾನ ಶಾಸ್ತ್ರ ಪ್ರಚರಣೆಗಳನ್ನು ಈ ಸಂಸ್ಥೆಯು ಉರ್ದೂ ಭಾಷೆಯಲ್ಲಿ ಅನುವಾದ ಮಾಡಿ ಪ್ರಚರಿಸಿದೆ. 1875 ರಲ್ಲಿ ಅಲಿಘಡ್‌ನಲ್ಲಿ ಮಹ್ಮದನ್ ಆಂಗ್ಲೋ ಓಲಿಯಂಟಲ್ (ಎಂಎಓ) ಕಲಾಶಾಲೆಯನ್ನು ಸ್ಥಾಪಿಸುವುದು ಅವರು ಮಾಡಿದವುಗಳಲ್ಲಿ ಪ್ರಮುಖವಾದುದು. ಅದು ಇಸ್ಲಾಮಿಕ್ ವಾತಾವರಣದಲ್ಲಿ ಇಂಗ್ಲೀಷ್, ವಿಜ್ಞಾನ ಶಾಸ್ತ್ರಗಳನ್ನು ಭೋಧಿಸುವುದಕ್ಕೆ ಪ್ರಯತ್ನಿಸಿದೆ. ಕಾಲ ಕ್ರಮದಲ್ಲಿ ಇದು ಭಾರತೀಯ ಮುಸ್ಲಿಂರಿಗೆ ಅತ್ಯಂತ ಮುಖ್ಯವಾದ ವಿದ್ಯಾ ಸಂಸ್ಥೆಯಾಗಿ ಅಭಿವೃದ್ಧಿಯಾಗಿದೆ. ಅನಂತರ ಇದು ಅಲಿಘಡ್ ಮುಸ್ಲಿಂವಿಶ್ವ ವಿದ್ಯಾಲಯವು ಆಗಿದೆ. ಡಿ.ಎ.ವಿ., ಎಮ್.ಎ.ಓ. ಸಂಸ್ಥೆಗಳು ಅವರವರ ಮತ ಬೋಧನೆಗಳಿಂದ ಬದಲಾದ ಅಗತ್ಯ ಗಳಿಗನುಗುಣವಾಗಿ ಜ್ಞಾವನ್ನು ನೀಡಿ, ಅವರ ಸಮಾಜವನ್ನು ಆಧುನೀಕರಿಸಿದರು.


ಸರ್‌ಸಯ್ಯಾದ್ ಅಹ್ಮದ್ ಖಾನ್

- ತಮ್ಮ ಸುಧಾರಣೆಯ ಭಾವನೆಗಳನ್ನು ಸಮರ್ಥಿಸಿ ಕೊಳ್ಳುವುದಕ್ಕೆ ಸುಧಾರಕರೆಲ್ಲರೂ ತಮ್ಮ ತಮ್ಮ ಧಾರ್ಮಿಕ ಗ್ರಂಥಗಳನ್ನು ಹೊಸ ನೋಟದಲ್ಲಿ ನೋಡುವುದಕ್ಕೆ ಪ್ರಯತ್ನಿಸದರೆಂಬವಿಷಯವನ್ನು ನೀವು ಗಮನಿಸಿ ದ್ದೀರಿ. ಪ್ರಮುಖ ಸುಧಾರಕರ ಉದಾಹರಣೆಗಳನ್ನು ನೋಡಿ ಇದನ್ನು ಅವರು ಹೇಗೆ ಮಾಡಿದ್ದಾರೋ ತಿಳಿದುಕೊಳ್ಳಿರಿ.
- 1857ರ ನಂತರ ಮುಸ್ಲಿಮರು – ಬ್ರಿಟೀಷರ ಮಧ್ಯೆ ಶತೃತ್ವವು ಏಕೆ ಏರ್ಪಟ್ಟಿದೆ?
- ಡಿ.ಎ.ವಿ. ಪಾಠಶಾಲೆಗಳು, ಎಂ ಏ ಓ ಕಲಾ ಶಾಲೆಯ ಮಧ್ಯ ಯಾವುದಾದರೂ ಹೋಲಿಕೆಗಳು ಇವೆಯಾ?
- ಭಕ್ತಿ ಚಳುವಳಿಯಲ್ಲಿ ಭಾಗವಲ್ಲದ ಧಾರ್ಮಿಕ ಭಾವನೆಗಳನ್ನು ಮೇಲೆ ತಿಳಿಸಿದ ಸುಧಾರಕರು ಪ್ರಚಾರ ಮಾಡಿದ್ದಾರೆಯೇ?

## ಸಾಮಾಜಿಕ ಸುಧಾರಣೆಗಳು, ಮಹಿಳೆಯರು

ಇಂದು ಮಧ್ಯ ತರಗತಿಗೆ ಸೇರಿದ ಅನೇಕ ಜನ ಹೆಣ್ಣು ಮಕ್ಕಳು ಶಾಲೆಗೆ ಹೋಗುತ್ತಾ ಗಂಡು ಮಕ್ಕಳೊಂದಿಗೆ ಓದುತ್ತಿದ್ದಾರೆ. ಆ ನಂತರ ಅವರಲ್ಲಿ ಅನೇಕ ಜನ ಕಲಾ ಶಾಲೆಗಳು ವಿಶ್ವ ವಿದ್ಯಾಲಯಗಳಲ್ಲಿ ಓದಿ, ಉದ್ಯೋಗಗಳು ಮಾಡುತ್ತಿದ್ದಾರೆ. ಗಂಡಸರು ಹಾಗೆ ಹೆಣ್ಣು ಮಕ್ಕಳಿಗೆ ಸಹ ವಿಧವಿಧವಾದ ಉದ್ಯೋಗಗಳನ್ನು ಕೈಗೊಳ್ಳುವ ಸ್ವೇಚ್ಛೆ ಈಗ ಇದೆ. ಅವರು ದೂರ ಪ್ರದೇಶಗಳಿಗೆ ಸಹ ಹೋಗಿ ಉದ್ಯೋಗಗಳು ಮಾಡುತ್ತಿದ್ದಾರೆ.

ಕಾನೂನಿನ ಪ್ರಕಾರ ಮಹಿಳೆಯರು ವಯಸ್ಸು (ಮೇಜರ್) ಆದರೆ ಅವರಿಗೆ ಇಷ್ಟವಾದವರನ್ನು ಯಾವ ಕುಲದಿಂದ ಆದರೂ ಯಾವ ಮತದಿಂದ ಆದರೂ ಮದುವೆ ಮಾಡಿಕೊಳ್ಳಬಹುದು. ಇಲ್ಲವೇ ಮದುವೆ ಮಾಡಿಕೊಳ್ಳಲಾರದೇ ಸಹ ಇರಬಹುದು. ವಿಧವೆಯರು ಪುನಃ ಮದುವೆ ಮಾಡಿಕೊಳ್ಳಬಹುದು. ಪುರುಷರೆಲ್ಲರಂತೆ ಮಹಿಳೆಯರೆಲ್ಲರೂ ಮತ ಚಲಾಯಿಸಬಹುದು. ಚುನಾವಣೆಯಲ್ಲಿ ಸ್ಪರ್ಧಿಸಬಹುದು. ಪ್ರಜೆಗಳ ಜೀವನದಲ್ಲಿ ಭಾಗವಹಿಸಬಹುದು. ಮಹಿಳೆಯರು ಇಂದಿಗೂ ಶೋಷಣೆಯನ್ನು ಎದುರಿಸುತ್ತಿದ್ದಾಗ್ಯೂ ಅದಕ್ಕೆ ವಿರುದ್ದವಾಗಿ ಅವರು ಹೋರಾಡಬಹುದು. ತಮ್ಮ ಹಕ್ಕುಗಳನ್ನು ಸಾಧಿಸಿಕೊಳ್ಳಬಹುದು.

ಎರಡು ನೂರು ವರ್ಷಗಳ ಹಿಂದಿನ ಪರಿಸ್ಥಿತಿಗಳು ಬಹಳ ಭಿನ್ನವಾಗಿ ಇರುತ್ತಿದ್ದವು. ಬಹಳ ಜನ ಮಕ್ಕಳಿಗೆ ಐದು, ಆರು ವರ್ಷಗಳಿಗೆ ಮದುವೆಗಳು ನಡೆದು ಹೋಗುತ್ತಿದ್ದವು. ಹಿಂದೂ, ಮುಸ್ಲಿಂ ಪುರುಷರು ಒಬ್ಬರಿಗಿಂತ ಹೆಚ್ಚು ಹೆಂಡತಿಯನ್ನು ಪಡೆದಿರಬಹುದು. ದೇಶದಲ್ಲಿ ಕೆಲವು ಪ್ರದೇಶಗಳಲ್ಲಿ ಉನ್ನತ ವರ್ಗದ ಮಹಿಳೆಯರನ್ನು ಮರಣಿಸಿದ ಗಂಡನ ಶವದೊಂದಿಗೆ ಸಜೀವವಾಗಿ ಸುಡುತ್ತಿದ್ದರು. ಇದನ್ನು ಸತಿ ಎನ್ನುವರು ಸತಿ ಸಹಗಮನ ಮಾಡದ ವಿಧವೆಯರ ಪರಿಸ್ಥಿತಿ ಬಹಳ ಹೀನಾಯವಾಗಿತ್ತು. ಅವರನ್ನು ನೋಡುವುದು ಶುಭ ಸೂಚಕವಲ್ಲವೆಂದು, ರಕ್ಷಣೆ ಇಲ್ಲದ ಕಾರಣವಾಗಿ ಅವರನ್ನು ಎಷ್ಟೋ ವಿಧವಾಗಿ ಹಿಂಸಿಸುತ್ತಿದ್ದರು. ಅವರು ಗುಂಡು ಮಾಡಿಸಿಕೊಂಡು, ಬಿಳಿಯ ಸೀರೆ ಉಟ್ಟುಕೊಳ್ಳಬೇಕಾಗುತ್ತಿತ್ತು. ಶುಭ ಕಾರ್ಯಗಳಲ್ಲಿ ಭಾಗವಹಿಸದಂತೆ ಮಾಡುತ್ತಿದ್ದರು. ಮಹಿಳೆಯರಿಗೆ ಆಸ್ತಿ ಹಕ್ಕೂ ಸಹ ಇರುತ್ತಿದ್ದಿಲ್ಲ. ಬಹಳ ಜನ ಮಹಿಳೆಯರಿಗೆ ಓದಿಕೊಳ್ಳವ ಅವಕಾಶ ಇರುತ್ತಿದ್ದಿಲ್ಲ. ದೇಶದಲ್ಲಿ ಬಹಳ ಪ್ರದೇಶಗಳಲ್ಲಿ ಹೆಣ್ಣು ಹುಡುಗಿ ಓದುತ್ತಿದ್ದರೆ ಅವಳ ಗಂಡ, ಅತ್ತೆ, ಮಾವನವರ ಹತೋಟಿಯಲ್ಲಿ ಇರುವುದಿಲ್ಲವೆಂದು ಭಾವಿಸುತ್ತಿದ್ದರು.

SCERT TELANGANA

ಆದರೆ ಎಲ್ಲಾ ವರ್ಗಗಳ ಪ್ರಜೆಗಳಲ್ಲಿ ಈ ಪರಿಸ್ಥಿತಿ ಇಲ್ಲ. ಇಂತಹ ಪರಿಸ್ಥಿತಿ ಹೆಚ್ಚಾಗಿ ಉನ್ನತ ಜಾತಿಗಳಲ್ಲೂ ಬಲವಾದ ವರ್ಗಗಳಲ್ಲೂ ಇರುತ್ತಿತ್ತು. ಬುಡಕಟ್ಟು ಸಮಾಜಗಳಲ್ಲಿ ಶ್ರಾಮಿಕ ಪ್ರಜೆಗಳಲ್ಲಿ ಇದು ಕಡಿಮೆ.

## ಮದುವೆಗೆ ಕನಿಷ್ಟ ವಯಸ್ಸು

1846ರಲ್ಲಿ ಹತ್ತು ವರ್ಷದ ವಯಸ್ಸಿನೊಳಗಿನ ಹೆಣ್ಣು ಮಕ್ಕಳಿಗೆ ಮದುವೆ ಮಾಡುವುದನ್ನು ನಿಷೇಧಿಸುತ್ತಾ ಕಾನೂನು ಮಾಡಿದರು. 1891 ರಲ್ಲಿ ಇದನ್ನು 12 ವರ್ಷಗಳಿಗೆ ಹೆಚ್ಚಿಸಿದರು. 1929 ರಲ್ಲಿ ಶಾರದಾ ಕಾನೂನಿನ ಮುಖಾಂತರ ಮದುವೆಗೆ ಕನಿಷ್ಟ ವಯಸ್ಸನ್ನು 14 ವರ್ಷಗಳಿಗೆ ಹೆಚ್ಚಿಸಿದರು. ಈ ಪರಿಮಿತಿಯನ್ನು 1978ರಲ್ಲಿ ಹೆಣ್ಣು ಮಕ್ಕಳಿಗೆ 18 ವರ್ಷಗಳಿಗೆ, ಗಂಡಸರಿಗೆ 21 ವರ್ಷಗಳಿಗೆ ಹೆಚ್ಚಿಸಿದರು.

ಮನೆಕೆಲಸ ಜವಾಬ್ದಾರಿ, ಮನೆಗೆ, ಅಡುಗೆ ಮನೆಗೆ ಪರಿಮಿತವಾಗುವುದು, ಹೊರಗಡೆ ಹೋಗಲಾರದಂತೆ ಮಾಡುವುದು, ಓದಿಕೊಳ್ಳದಿರುವಂತೆ ಮಾಡುವಿಕೆಯಂತಹ ಮಹಿಳೆಯರ ಸಮಸ್ಯೆಗಳನ್ನು ಕುರಿತು ರಾಜಾ ರಾಮ್ ಮೋಹನ್ ರಾಯ್‌ರಂತಹ ಸಮಾಜ ಸುಧಾರಕರು ಬರೆದಿದ್ದಾರೆ. ಅವರು ಸತಿ ಸಹಗಮನಕ್ಕೆ ವಿರುದ್ಧವಾಗಿ ಪ್ರಚಾರ ಮಾಡಿದ್ದಾನೆ. ಧಾರ್ಮಿಕ ಗ್ರಂಥಗಳಲ್ಲಿ ವಿಧವೆಯರನ್ನು ಸುಟ್ಟು ಸಾಯಿಸುವುದಕ್ಕೆ ಎಂತಹ ಅನುಮತಿ ಇಲ್ಲವೆಂದು ತೋರಿಸುವುದಕ್ಕೆ ಪ್ರಯತ್ನಿಸಿದನು. 19ನೇ ಶತಮಾನದ ಪ್ರಾರಂಭಕ್ಕೆಲ್ಲಾ ಬ್ರಿಟೀಷು ಅಧಿಕಾರಿಗಳೊಂದಿಗೆ ಬಹಳ ಜನರು ಸಹ ಭಾರತೀಯ ಸಂಪ್ರದಾಯಗಳು, ಆಚಾರಗಳನ್ನು ವಿಮರ್ಶೆ ಮಾಡುತ್ತಿದ್ದರು. ರಾಜ ರಾಮ್ ಮೋಹನ್‌ರಾಯ್‌ರ ವಾದನೆಯನ್ನು ಅವರು ಕೇಳಿಸಿಕೊಂಡರು. ಆ ವಿಧವಾಗಿ 1829 ರಲ್ಲಿ ಸತಿ ಅಧಿಕಾರಿಕವಾಗಿ ನಿಷೇಧಿಸಲ್ಪಟ್ಟಿತು. ಮತ್ತೊಬ್ಬ ಬೆಂಗಾಲಿ ಸುಧಾರಕನಾದ ಈಶ್ವರ್ ಚಂದ್ರ ವಿದ್ಯಾಸಾಗರ್ ವಿಧವೆಯರ, ಪ್ರತ್ಯೇಕಿಸಿ ಬಾಲಕೀಯ ವಿಧವೆಯರನ್ನು ಪುನಃ ಮದುವೆ ಮಾಡಿಕೊಳ್ಳುವಂತೆ ಅನುಮತಿ ಕೊಡುತ್ತಾ 1855 ರಲ್ಲಿ ಕಾನೂನನ್ನು ತಯಾರಿಸಿದ್ದಾರೆ. ಬಾಲ್ಯ ವಿವಾಹಗಳಿಗೆ ವಿರುದ್ಧವಾಗಿ ಒಬ್ಬ ಪುರುಷನು ಅನೇಕ ಜನ ಸ್ತ್ರೀಯರನ್ನು ಮದುವೆಮಾಡಿಕೊಳ್ಳುವುದಕ್ಕೆ (ಬಹುಪತ್ನಿತ್ವಕ್ಕೆ) ವಿರುದ್ಧವಾಗಿ ಸಹ ವಿದ್ಯಾಸಾಗರ್ ಹೋರಾಡಿದ್ದಾರೆ. ಬಾಲಕೀಯರ ವಿದ್ಯೆಗಾಗಿ ಅವರು ಹೋರಾಡಿದ್ದಾರೆ. ತೀವ್ರ ವ್ಯತಿರೇಕತೆ ಎದುರಾದಾಗ್ಯೂ ಅವರು ಬಾಲಕೀಯರಿಗಾಗಿ ಪಾಠಶಾಲೆಗಳನ್ನು ಏರ್ಪಾಟು ಮಾಡಿದನು.

*"1856ರಲ್ಲಿ ಕಲಕತ್ತಾದಲ್ಲಿ ನಡೆದ ಮೊದಲನೇ ವಿಧವೆಯ ಪುನರ್ವಿವಾಹವನ್ನು ಒಬ್ಬ ಪ್ರೇಕ್ಷಕನು ಹೀಗೆ ವಿವರಿಸಿದ್ದಾರು. ಆ ದಿನವನ್ನು ನಾನು ಎಂದಿಗೂ ಮರೆತು ಹೋಗುವುದಿಲ್ಲ." ವಿದ್ಯಾಸಾಗರ್ ತನ್ನ ಸ್ನೇಹಿತನಾದ ಮಧುಮಗನೊಂದಿಗೆ ಬಂದಾಗ..... ಮರಳು ಹಾಕಿದರೂ ಕೆಳಗೆ ಬೀಳದಷ್ಟು ಸಂದರ್ಶಕರು ಗುಂಪಾಗಿದ್ದಾರೆ.... ಆ ಮದುವೆ ನಡೆದ ನಂತರ ಬಜಾರುಗಳಲ್ಲಿ, ಅಂಗಡಿಗಳಲ್ಲಿ, ಬೀದಿಗಳಲ್ಲಿ, ಬಹಿರಂಗ ಪ್ರದೇಶದಲ್ಲಿ ವಿದ್ಯಾರ್ಥಿಗಳ ವಸತಿ ಗೃಹಗಳಲ್ಲಿ, ಮನೆಗಳಲ್ಲಿ, ಮೂಲೆ ಮೂಲೆ ಗ್ರಾಮಗಳಲ್ಲಿ - ಎಲ್ಲಾ ಕಡೆಗೂ ಎಲ್ಲರ ಬಾಯಲ್ಲಿ ಇದೇ ಚರ್ಚೆ. ಮಹಿಳೆಯರು ಸಹ ಈ ವಿಷಯವನ್ನು ಕುರಿತು ತೀವ್ರವಾಗಿ ಚರ್ಚಿಸಿದ್ದಾರೆ."*

Ë«ÌÊ¿á ±Ìâ®Ì ì ËÊÝÖÌÊÌ®Ìá ÓÌÊÌá¦ ì ÓÌá£¨ÌÃÌá. ËÃãà—ÓÌÊÌÊÌÃÌ ÊÌá«ÌÀ ÓÌí»ÝÐÌO¿á®Ìá F ×Ô ŸÃÀáÄ.

ಸಮಾಜ ಸುಧಾರಣೆಗಾಗಿ ಸರಕಾರವು ಕಾನೂನು ಮಾಡುವುದು ಏಕೆ ಮುಖ್ಯವಾಗಿದೆ?

## ¯hÝí ±ÝÆ®¿áÈ ÓÌá«ÝÃÌOÝ aÌÙÌáÊÌÚWÌÙÌá :

ಬ್ರಿಟಿಷರ ಕಣ್‌ಸನ್ನೆಯಲ್ಲಿ ನಿಜಾಂ ಪ್ರಾಂತ ರಾಜಪಾಲನೆಯಲ್ಲಿ ಇದ್ದಾಗ್ಯೂ ದೇಶದಲ್ಲಿಯ ಸುಧಾರಣಾ ಚಳುವಳಿಯಲ್ಲಿಯ ಇದು ಪ್ರಭಾವಿತಗೊಂಡಿತು. ಮಹಿಳಾ ಸಮಸ್ಯೆಗಳ ಬಗ್ಗೆ ಬರೆಯಲು ಮೋಹಿತ ಹುಸೇನ್ ಎಂಬ ಸಮಾಜ ಸುಧಾರಕನು ಮುಲ್ಲಿಂ-ಎ-ನಿಸ್ವಾನ್ ಎಂಬ ಪತ್ರಿಕೆಯನ್ನು ಪ್ರಾರಂಭಿಸಿದನು. ಮಹಿಳೆಯರು ವಿದ್ಯೆ ಪಡಿಯಬೇಕೆಂದು ಪ್ರಚಾರ ಮಾಡಿದರು. ಬುರುಕಾ ಪದ್ಧತಿಯನ್ನು ವಿರೋಧಿಸಿದನು. ರಾಜ ಕುಟುಂಬಗಳಿಗೆ ಮಾತ್ರ ಸಿಮೀತವಾಗಿದ್ದ ಈ ಬುರುಕಾ ಪದ್ಧತಿಯು ಕೆಳ ವರ್ಗಗಳ ವರೆಗೂ ವಿಸ್ತರಿಸಿದ್ದು ಆತನನ್ನು ಚಿಂತೆಗೀಡು ಮಾಡಿತು. ಆತನು ರಚಿಸಿದ ದ್ವಿಪದ ಕವಿತೆಗಳು ಮೂಢ ಸಂಪ್ರದಾಯಗಳನ್ನು ವಿಮರ್ಶಿಸುತ್ತಾ ಸುಧಾರಣಾ ಸ್ಫೂರ್ತಿಯನ್ನು ತುಂಬುತ್ತಿದ್ದವು.

ನಮ್ಮ ದೇಶವು ಸಂಪ್ರದಾಯಬದ್ಧ ದೇಶವಾಗಿದೆ. ಹಠ ಸ್ವಭಾವ ಹೊಂದಿದ್ದು ಅತ್ಯಂತ ಪ್ರಾಚೀನ ಸಂಪ್ರದಾಯಗಳು, ಹವ್ಯಾಸಗಳನ್ನು ಇನ್ನು ಹೆಚ್ಚಿಕೊಂಡಿದೆ. ಅಷ್ಟೇ ಅಲ್ಲದೇ ಆತನು ಸೂಫಿ ಸಂಪ್ರದಾಯದ ಐಕ್ಯತೆಯನ್ನು ಪ್ರೋತ್ಸಾಹಿಸಿದನು. "ಓ ಮೊಹೆಬ್, ಹಿಂದೂ ಮುಸ್ಲಿಂರ ದ್ವೇಶಕ್ಕೆ ಕೃಷಿ ಮಾಡುವವರು, ಅತ್ಯಂತ ವಿಷಭರಿತ ಹಾವುಗಳಿಗಿಂತ ಅಪಾಯಕಾರಿಗಳು"

SCERT TELANGANA

ಮೇಲೆ ಹೇಳಿದವುಗಳಲ್ಲಿ ಮಹಿಳಾ ಹಕ್ಕುಗಳಿಗಾಗಿ ಹೋರಾಡಿದವರಲ್ಲಿ ಪುರುಷರೇ ಅಧಿಕ ಸಂಖ್ಯೆಯಲ್ಲಿದ್ದಾರೆಂಬುದು ಗಮನಿಸಿರುತ್ತೀರಿ. ಆ ಸಮಯದಲ್ಲಿ ಮಹಿಳಾ ಸಾಕ್ಷರತೆ ಇಲ್ಲದಿರುವುದು, ಮಹಿಳೆಯರು ಸಾರ್ವಜನಿಕ ಕಾರ್ಯಗಳಲ್ಲಿ ಭಾಗಿಗಳಾಗುವ ಅವಕಾಶ ಇಲ್ಲದಿರುವುದು ಈ ಪರಿಸ್ಥಿತಿಯೇ ಕಾರಣ. ಇಂತಹ ಪರಿಸ್ಥಿತಿಯಲ್ಲಿಯೂ ಸಹ ಮಹಿಳಾ ಹಕ್ಕುಗಳಿಗಾಗಿ ಹೋರಾಡಿದ ಕೆಲವು ವೀರನಾರಿಯರ ಬಗ್ಗೆ ತಿಳಿದುಕೊಳ್ಳೋಣ.

## ÓÝË£Ì ¸ÝÀá h¤ãÂà£ÃÝÊÌâ ±ÌäÇ¤ (1831–1897)




ಮಹಾರಾಷ್ಟ್ರದಲ್ಲಿ ಮಹಿಳೆಯರ ಹಕ್ಕುಗಳನ್ನು ಸಾಧಿಸುವುದರಲ್ಲಿ ಗಂಡ ಜ್ಯೋತಿ ಬಾಪೂಲೆಯೊಂದಿಗೆ ಸಾವಿತ್ರಿ ಬಾಯಿ ಪೂಲೆ ಮುಖ್ಯವಾದ ಪಾತ್ರವನ್ನು ಪೋಷಿಸಿದ್ದಾರೆ.

1848ರಲ್ಲಿ ಪೂನೆಯಲ್ಲಿ 'ಅಸ್ಪೃಶ್ಯತೆ'ಕುಲಗಳ ಬಾಲಕೀಯರಿಗೋಸ್ಕರ ಜ್ಯೋತಿಬಾ ಒಂದು ಪಾಠಶಾಲೆಯನ್ನು ಸ್ಥಾಪಿಸಿದನು. ಸಾವಿತ್ರಿ ಬಾಯಿಗೆ ತರಬೇತಿ ಕೊಡುವ ಮೊದಲನೇ ಮಹಿಳಾ ಉಪಾಧ್ಯಾಯನಿಯಾಗಿ ನೇಮಿಸಿದರು.

ಕೆಳಗಿನ (ಕೀಳು) ಕುಲಗಳ ಬಾಲಕೀಯರಿಗೆ ವಿದ್ಯೆ ಕಲಿಸುವುದರಿಂದ ತೀವ್ರವಾದ ವಿರೋಧ ಇದ್ದಾಗ್ಯೂ ಸಾವಿತ್ರಿ ಬಾಯಿ ಅದನ್ನು ಮುಂದುವರೆಸಿದರು. ಜ್ಯೋತಿ ರಾವು ಪೂಲೆ ಮರಣಿಸಿದ ನಂತರ ಸತ್ಯ ಶೋಧಕ್ ಸಮಾಜ ಜವಾಬ್ದಾರಿಯನ್ನು ಸಾವಿತ್ರಿ ಬಾಯಿ ಕೈಗೊಂಡರು. ಇವರು ಸಮಾವೇಶಗಳಿಗೆ ಅಧ್ಯಕ್ಷತೆ ವಹಿಸಿ, ಕಾರ್ಯಕರ್ತರಿಗೆ ಮಾರ್ಗದರ್ಶಕ ಮಾಡಿದರು. ಪ್ಲೇಗುನಂತಹ ರೋಗಗಳಿಗೀಡಾದ (ಬಲಿ ಯಾದ) ಪ್ರಜೆಗಳಿ ಗೋಸ್ಕರ ಸಾವಿತ್ರಿಬಾಯಿ ಹಗಲು ರಾತ್ರಿ ಶ್ರಮಿಸಿದಳು. ಬಡ ಮಕ್ಕಳಿಗಾಗಿ ಶಿಬಿರಗಳು ನಿರ್ವಹಿಸಿದಳು. ಈ ರೋಗಗಳ ಕಾಲದಲ್ಲಿ ಆಕೆ ಪ್ರತಿದಿನ ಎರಡು ಸಾವಿರ ಮಂದಿ ಮಕ್ಕಳಿಗೆ ಊಟ ಹಾಕುತ್ತಿದ್ದರು.

ನಿಮಗೆ ನಿಮ್ಮ ಪ್ರಾಣದ ಮೇಲೆ ಎಷ್ಟು ಪ್ರೇಮವೋ ಮಹಿಳೆಯರಿಗೆ ಸಹ ಹಾಗೆ ಇರುವುದಿಲ್ಲವಾ?....... ಒಬ್ಬ ಸ್ತ್ರೀ ಗಂಡನು ಮರಣಿಸಿದರೆ.... ಇವರ ಜೀವನದಲ್ಲಿ ಏನು ಉಳಿದಿರುತ್ತದೆ? ಕ್ಷೌರಿಕ ಬಂದು ನಿಮ್ಮ ಕಣ್ಣುಗಳು ತಣ್ಣಗೆ ಮಾಡುವುದಕ್ಕೆ ಇವರ ಕೂದಲಿನ ಜುಟ್ಟನ್ನು ಪೂರ್ತಿಯಾಗಿ ತೆಗೆದುಹಾಕುತ್ತಾನೆ..... ಇವರು ವಿವಾಹಗಳಿಗೆ, ಶುಭ ಕಾರ್ಯಗಳಿಗೆ, ಸುಮಂಗಳಿಯಾರಾದ ಇತರ ಮಹಿಳೆಯರು ಹೋಗುವ ಕಾರ್ಯಕ್ರಮಗಳಿಗೆ ಹೋಗಬಾರದು. ಈ ನಿಷೇಧಗಳೆಲ್ಲಾ ಏತಕ್ಕೆ? ಆಕೆಯ ಗಂಡನು ಮರಣಿಸಿದರಿಂದ ಇವಳು ದುರದೃಷ್ಟವಂತಳು. ಇವರ ಹಣೆಯ ಮೇಲೆ ಕಷ್ಟಗಳು ಬರೆದಿವೆ. ಇವರು ದುಶ್ಯಕುನವು. ಅವಳ ಮುಖವನ್ನು ನೋಡಬಾರದದು.

**- ñÝÃÝ¸ÝÀá Ñívªà, *Ôà±ÌâÃÌáÐÌ ñÌáÇÝ, 1882 (ÓÝË£Ì ¸ÝÀá ±ÌäÇ¤Á ã í©W¤ PÌÇ¤ñÌá ñÝÃÝ¸ ÝÀá P¤ÆÓÌ ÊÌÞwÃÌáÊÌÃÌá)***

## ±Ìíwñ ÃÌÊÌÞ ¸ÝÀá ÓÌÃÌÓÌ£ (1858 –1922)

ರಮಾಬಾಯಿ ಮಹಾರಾಷ್ಟ್ರದಲ್ಲಿ ಜನಿಸಿದರು. ವಿದ್ಯುಕ್ತ ಕರ್ಮಾನುಸಾರಿಗಳನ್ನು(ಸನಾತರು) ವ್ಯತಿರೇಕಿಸಿದಾಗ್ಯೂ ಇವರ ತಂದೆ ರಮಾಬಾಯಿಗೆ ಸಂಸ್ಕೃತ ಗ್ರಂಥಗಳನ್ನು ಭೋಧಿಸಿದರು. ತಂದೆ ಮರಣಿಸಿದ ನಂತರ ಸಹೋದರನೊಂದಿಗೆ ಸೇರಿ ರಮಾಬಾಯಿ ದೇಶವೆಲ್ಲಾ ಸಂಚರಿಸಿದರು. ಬೆಂಗಾಲ್ ನಲ್ಲಿ ಕೋಲ್‌ಕತ್ತಾಗೆ ಸಹ ಹೋಗಿದ್ದಾರೆ.


±Ìíwñ ÃÌÊÌÞ ¸ÝÀá ÓÌÃÌÓÌ£

ಇವರ ಪಾಂಡಿತ್ಯದ ಗುರ್ತಿಗಾಗಿ ಇವರು ಪಂಡಿತ ರಮಾಬಾಯಿ ಸರಸ್ವತಿ ಎಂದು ಕರೆಯಲ್ಪ ಡುತ್ತಿದ್ದರು.

"ಪಶುಗಳೊಂದಿಗೆ ಪ್ರವರ್ತಿಸಿದಂತೆ ಪುರುಷರು ಸ್ತ್ರೀಯ ರೊಂದಿಗೆ ಪ್ರವರ್ತಿಸುತ್ತಾರೆ. ನಮ್ಮ ಪರಿಸ್ಥಿತಿಯನ್ನು ಅಭಿವೃದ್ಧಿಗೊ ಳಿಸುವುದಕ್ಕೆ ಪ್ರಯತ್ನಿಸಿದ್ದರೆ ನಾವು ಪುರುಷರಿಗೆ ವಿರುದ್ಧವಾಗಿ ದಂಗೆ ಮಾಡುತ್ತಿದ್ದೇವೆಂದು, ಅದುಪಾಪ ವೆಂದು ಅನ್ನುವರು. ಗಂಡಸರ ದುಷ್ಕೃತ್ಯಗಳನ್ನು ಸಹಿಸುತ್ತಾ ಅವುಗಳನ್ನು ವಿರೋಧಿಸದೇ ಹೋಗು ವುದೇ ದೊಡ್ಡ ಪಾಪ," ಎಂದರು ರಾಮಾಬಾಯಿ.

ಮಹಿಳೆಯರಿಗೆ ಪ್ರತ್ಯೇಕಿಸಿ ವಿಧವೆಯರಿಗೆ ಸಹಾಯ ಪಡುವುದಕ್ಕೆ ರಮಾಬಾಯಿ ತನ್ನ ಜೀವನವೆಲ್ಲಾ ಅರ್ಪಿಸಿದ್ದಾಳೆ. ಇಂಗ್ಲಾಂಡ್, ಅಮೇರಿಕಾ ಮಹಿಳಾ ಸಂಸ್ಥೆಗಳನ್ನು ಕುರಿತು ತಿಳಿದುಕೊಳ್ಳುವುದಕ್ಕೆ ಇವರು ಒಂಟಿಯಾಗಿ ಆ ದೇಶಗಳಿಗೆ ಹೋದರು. ಭಾರತ ದೇಶಕ್ಕೆ ತಿರುಗಿ ಬಂದ ನಂತರ ಅವರು ವಿಧವೆಯರನ್ನು ವಿದ್ಯಾವಂತರನ್ನಾಗಿ ಮಾಡುವುದಕ್ಕೆ ಮುಂಬೈನಲ್ಲಿ ಶಾರದಾ ಸದನ್ ಎಂಬ ಪಾಠ ಶಾಲೆಯನ್ನು, ಆಶ್ರಮವನ್ನು ಸ್ಥಾಪಿಸಿದರು. ಈ ಪಾಠಶಾಲೆಯಲ್ಲಿ ಮಹಿಳೆಯರು ತಮ್ಮ ಕಾಲಿನ ಮೇಲೆ ತಾವು ನಿಂತುಕೊಳ್ಳುವಂತೆ ಅನೇಕ ವೃತ್ತಿ ವಿದ್ಯೆಗಳು, ನೈಪುಣ್ಯತೆಗಳು ಕಲಿಸುತ್ತಿದ್ದರು. ಈ ಆಶ್ರಮವು

SCERT TELANGANA

ವಿಧವೆಯರು, ಅನಾಥರು, ಕುರುಡರು ಮೊದಲಾದ ವರಿಗೆ ವಸತಿ ಸೌಕರ್ಯಗಳೊಂದಿಗೆ ವಿದ್ಯೆ, ವೃತ್ತಿ ವಿದ್ಯೆ, ವೈದ್ಯ ಸೇವೆಗಳು ಒದಗಿಸುತ್ತಿತ್ತು. ಪುರುಷರ ಮೇಲೆ ಆಧಾರ ಪಟ್ಟರಿತ್ತಾರೆ ಆದುದರಿಂದ ಮಹಿಳೆಯರು ಎಲ್ಲಾ ಕಷ್ಟನಿಷ್ಠೂರಗಳನ್ನು ಮೌನವಾಗಿ ಸಹಿಸಬೇಕಾಗುತ್ತ ದೆಂದು, ಸ್ವತಃ ಸಂಪಾದನೆ ಇದ್ದರೆ ಮಾತ್ರವೇ ತಮ್ಮ ಹಕ್ಕುಗಳನ್ನು ಸಾಧಿ ಸಿಕೊಳ್ಳುತ್ತಾರೆಂದು ಇವರು ಪದೇ ಪದೇ ಹೇಳುತ್ತಿದ್ದರು.

## ÊïáàÔí Êïá×Ùè¿ áÃïÈ Ë¨æÂ:

ಇಪ್ಪತ್ತನೆ ಶತಮಾನದ ಆರಂಭದಿಂದ ಭೂಪಾಲಿಗೆ ಸೇರಿದ ಬೇಗಂನವರು ಮುಸ್ಲಿಂ ಮಹಿಳೆಯರಲ್ಲಿ ವಿದ್ಯಾ ವ್ಯಾಪ್ತಿಗೆ ಕೃಷಿ ಮಾಡಿದ್ದಾರೆ. ಪಾಟ್ನಾ, ಕೊಲ್‌ಕೊತ್ತಾಗಳಲ್ಲಿ ಮುಸ್ಲಿಂ ಬಾಲಕೀಯರನ್ನು ಬೇಗಂ ರೊಕಿಯಾ ಸುಖಾವತ್ ಹುಸ್ಸೇನ್ ಪಾಠಶಾಲೆಗಳನ್ನು ಪ್ರಾರಂಭಿಸಿದರು. ಎಲ್ಲಾ ಧರ್ಮಗಳ ನಾಯಕರಿಗೆ ಕಡಿಮೆ ಸ್ಥಾನವನ್ನು ಕೊಟ್ಟಿದ್ದಾರೆಂದು ವಾದಿಸುತ್ತಾ ವಿದ್ಯುಕ್ತನುಸಾರ (ಸನಾತನ) ಭಾವನೆಗಳನ್ನು ನಿರ್ಭಯವಾಗಿ ವಿಮರ್ಶಿಸುತ್ತಿತ್ತು.

ಈ ಸಮಾಜ ಸುಧಾರಕರ ಕೃಷಿ ಫಲವಾಗಿ ಬಾಲಕೀಯರಿಕೋಸ್ಕರ ಪಾಠಶಾಲೆಗಳು, ಕಾಲೇಜುಗಳು ಸ್ಥಾಪಿಸಿದ್ದರು. ಮಹಿಳೆಯರಲ್ಲಿ ಬಹಳ ಜನ ವೈದ್ಯರು, ಉಪಾಧ್ಯಾಯರು ಸಹ ಆಗಿದ್ದಾರೆ. ಆದರೆ ಮಹಿಳೆಯರಲ್ಲಿ ವಿದ್ಯಾ ವ್ಯಾಪ್ತಿಯನ್ನು ಬಲವಾಗಿ ವಿರೋಧಿಸಿದವರು ಸಹ ಇದ್ದಾರೆ. ಹೆಣ್ಣು ಹುಡುಗಿಯರಿಗೆ ಓದಿಕೊಂಡರೆ ಅವರು ತಮ್ಮ ಗಂಡರ ಹಿಡಿತದಲ್ಲಿ ಇರುವುದಿಲ್ಲವೆಂದು, ಮನೆ ಕೆಲಸಗಳು ಮಾಡುವುದಿಲ್ಲವೆಂದು ಅವರು ಭಾವಿಸಿದ್ದರು. ತಮ್ಮ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುವ ಸಾಹಸ ಮಾಡಿದ ತಂದೆ ತಾಯಿಗಳನ್ನು ಸಾಮಾಜಿಕವಾಗಿ ಬಹಿಷ್ಕರಿಸಿದರು. ಆದಾಗ್ಯೂ ಅನೇಕ ಕುಟುಂಬಗಳು ಸಾಮಾಜಿಕ ಬದಲಾವಣೆಗಳನ್ನು ಆರಿಸಿಕೊಂಡಿವೆ. ನಿಧಾನವಾಗಿ ಹೆಣ್ಣು ಹುಡುಗಿಯರು ಪಾಠ ಶಾಲೆಗಳಲ್ಲಿ, ಕಾಲೇಜುಗಳಲ್ಲಿ ಓದುವುದು ಪ್ರಾರಂಭಿಸಿದರು.

- ಹುಡುಗರಂತೆ ಹುಡುಗಿಯರ ವಿದ್ಯೆಗಳಿಗೆ ಇಂದು ಸಮಾನ ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆಯೇ? ಇಲ್ಲವೆ ಹುಡುಗಿಯರು ಶೋಷಣೆಗೆ ಗುರಿಯಾಗುತ್ತಿದ್ದಾರೆಯೇ ?
- ಓದಿಕೊಳ್ಳುವುದಕ್ಕೆ ಹುಡುಗರು ಎದುರಿಸಿದ ಯಾವ ಕಷ್ಟಗಳನ್ನು ಹುಡುಗಿಯರು ಎದುರಿಸುತ್ತಿದ್ದಾರೆ?
- ವಿಧವೆಯರ ಬಗ್ಗೆ ವ್ಯವಹರಿಸುವ ಪದ್ಧತಿ ಇಂದು ಎಷ್ಟರ ಮಟ್ಟಿಗೆ ಬದಲಾಗಿದೆ?

- ಇಂದಿಗೂ ದಲಿತ ಬಾಲಕೀಯರು, ಮುಸ್ಲಿಂ ಬಾಲಕೀಯರು ಓದಿಕೊಳ್ಳುವುದಕ್ಕೆ ಪ್ರತ್ಯೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆಯೇ ?

## ಸಮಾಜ ಸುಧಾರಕರು, ಕುಲವ್ಯವಸ್ಥೆ

ಹಿಂದಿನ ತರಗತಿಗಳಲ್ಲಿ ನೀವು ಜಾತಿ ಭೇದದ ಕುರಿತು ಓದಿದ್ದೀರಿ. ಬ್ರಾಹ್ಮಣರು, ಕ್ಷತ್ರಿಯರಂತಹ ಉನ್ನತ ಜಾತಿಯವರು ಸಮಾಜದಲ್ಲಿ ಕೆಳಗಿನ ವರ್ಗಗಳಾದ ಶ್ರಾಮಿಕ ಜನರನ್ನು ಶೂದ್ರರಾಗಿ, ಅಸ್ಪೃಶ್ಯರನ್ನಾಗಿ ನೋಡುತ್ತಿದ್ದರು. ಅವರನ್ನು ದೇವಾಲಯದೊಳಗೆ ಪ್ರವೇಶಗೊಳಿಸುತ್ತಿರಲಿಲ್ಲ. ಮೇಲಿನ ಜಾತಿಯವರು ಉಪಯೋಗಿಸುವ ಬಾವಿಗಳಿಂದ ನೀರು ತರುವಹಾಗಿಲ್ಲ. ಓದುವುದು, ಬರೆಯುವುದು ಕಲಿಯುವಂತೆ ಮಾಡುತ್ತಿದ್ದಿಲ್ಲ. ಧಾರ್ಮಿಕ ಗ್ರಂಥಗಳನ್ನು ಓದದಂತೆ ತಡೆಯುತ್ತಿದ್ದರು. ಅವರು ಕಡಿಮೆ ಜಾತಿಯವರೆಂದು, ಮೇಲಿನ ಕುಲದವರಿಗೆ ಸೇವೆ ಮಾಡುವುದೇ ಅವರ ಕೆಲಸವೆಂದು ಭಾವಿಸುತ್ತಿದ್ದರು. ಅಂದಿನ ಆಡಳಿತಗಾರರು, ರಾಜರು ಈ ಜಾತಿ ನಿಯಮಗಳನ್ನು ಪಾಲಿಸದವರನ್ನು ಶಿಕ್ಷಿಸುತ್ತಾ ಈ ಜಾತಿ ಭೇದವನ್ನು ಅನುಸರಿಸುತ್ತಿದ್ದರು.

ಭಾರತ ದೇಶದಲ್ಲಿ ಬ್ರಿಟೀಷ್‌ನವರ ಆಡಳಿತದಿಂದ ಈ ಪರಿಸ್ಥಿತಿಗಳು ಬದಲಾಗಿವೆ. ಬ್ರಿಟೀಷು ನ್ಯಾಯ ಸ್ಥಾನಗಳು ಎಲ್ಲರಿಗೂ ಒಂದೇ ಕಾನೂನುಗಳು ಜಾರಿಗೊಳ್ಳುವಂತೆ ಮಾಡಿವೆ. ಸರಕಾರ, ಕ್ರೈಸ್ತವ ಧಾರ್ಮಿಕ ಪ್ರಚಾರಕರು ಪಾಠ ಶಾಲೆಗಳನ್ನು ತೆರೆದು ಜಾತಿಯೊಂದಿಗೆ ಸಂಬಂಧವಿಲ್ಲದಂತೆ ಮಕ್ಕಳನ್ನೆಲ್ಲಾ ಸೇರಿಸಿಕೊಳ್ಳುತ್ತಿದ್ದರು. ಅಲ್ಲಿಯವರೆಗೂ ಓದಿಕೊಳ್ಳದಂತೆ ಮಾಡಲ್ಪಟ್ಟ ಕೆಳಗಿನ ಜಾತಿಗಳ ಮಕ್ಕಳಿಗೆ ವಿದ್ಯೆ ಕಲಿಸುವುದರಲ್ಲಿ ಕ್ರೈಸ್ತವ ಧರ್ಮ ಪ್ರಚಾರಕರು ಪ್ರತ್ಯೇಕ ಪಾತ್ರವನ್ನು ಪೋಷಿಸಿದರು. ಸರಕಾರದ ಉದ್ಯೋಗಗಳು ಎಲ್ಲಾ ಜಾತಿಯವರಿಗೆ ಕೊಡುವುದರಿಂದ ಪ್ರತ್ಯೇಕಿಸಿ ಸೈನ್ಯದಲ್ಲಿ ಕಡಿಮೆ ಜಾತಿಗಳಿಗೆ ಹೊಂದಿದವರು ದೊಡ್ಡ ಮೊತ್ತದಲ್ಲಿ ಸೇರಿದರು. ಹೊಸದಾಗಿ ಏರ್ಪಡುತ್ತಿರುವ ಪಟ್ಟಣಗಳಲ್ಲಿ ಹೊಸ ಉದ್ಯೋಗಗಳನ್ನು ಹುಡುಕುತ್ತಾ ಬಹಳ ಜನ ಅಲ್ಲಿಗೆ ಹೋದರು. ಇವೆಲ್ಲವುಗಳಿಂದ ಕೆಳಗಿನ ಜಾತಿಗಳ ಪರಿಸ್ಥಿತಿಯಲ್ಲಿ ಬದಲಾವಣೆಯಾಗಿ, ಜಾತಿ ಆಧಾರಿತ ಭೇಧವನ್ನು ಅವರು ಪ್ರಶ್ನಿಸತೊಡಗಿದರು. ಇದು ಹೇಗೆ ನಡೆದಿದೆಯೋ ಜಾತಿ ವ್ಯವಸ್ಥೆಗೆ ಕೊನೆ ಹೇಳುತ್ತಾ ಸಮಾನತ್ವಕ್ಕಾಗಿ ಚಳುವಳಿಗಳು ನಡೆಸಿದ ನಾಯಕರು ಯಾರೋ ತಿಳಿದುಕೊಳ್ಳೋಣ.

SCERT TELANGANA

**ತರಗತಿ ಕೋಣೆಯಲ್ಲಿ ಸ್ಥಾನವಿಲ್ಲ**

1829ರಲ್ಲಿ ಸಹ ಬಾಂಬೆ ರಾಜ್ಯದಲ್ಲಿ ಕೆಲವು ಜನರನ್ನು ಅಸ್ಪೃಶ್ಯರೆಂದೂ ಅವರನ್ನು ತರಗತಿ ಕೋಣೆಯೊಳಗೆ ಬರಗೊಡುತ್ತಿರಲಿಲ್ಲ. ಕೆಲವು ಜನ ತಮ್ಮ ಹಕ್ಕುಗಳಿಗಾಗಿ ಗಟ್ಟಿಯಾಗಿ ಕೇಳಿದಾಗ ತರಗತಿಯೊಳಗೆ ಮೇಲಿನ ಜಾತಿಯವರ ಹುಡುಗರು ಮಲಿನವಾಗದಂತೆ ತರಗತಿಯ ಹೊರಗಡೆ ವರಂಡಾದಲ್ಲಿ ಕುಳಿತುಕೊಂಡು, ಪಾಠಗಳನ್ನು ಕೇಳುತ್ತಿದ್ದರು.

1. ವರಂಡಾದಲ್ಲಿ ಕುಳಿತುಕೊಂಡು ಪಾಠಗಳನ್ನು ಕೇಳುತ್ತಿರುವ ಹುಡುಗರಲ್ಲಿ ನೀವು ಒಬ್ಬರನ್ನು ಊಹಿಸಿಕೊಳ್ಳಿರಿ. ನಿಮ್ಮ ಮನಸ್ಸಿನಲ್ಲಿ ಎಂತಹ ಪ್ರಶ್ನೆಗಳು ಉದಯಿಸುತ್ತವೆ?
2. ಅಸ್ಪೃಶ್ಯರು ಅಸಲು ವಿದ್ಯೆ ಇಲ್ಲದಂತೆ ಇರುವು ದಕ್ಕಿಂತ ಇದು ಸುಧಾರಿಸಿದೆ ಎಂದು ಸ್ವಲ್ಪ ಜನ ಭಾವಿಸಿದ್ದಾರೆ. ನೀವು ಇವರೊಂದಿಗೆ ಏಕೀ ಭವಿಸುವಿರಾ?

## h¤ãÂà£¸Ý ±ÄäÇ¤à (1827-1890) ÊÄáñÄá ÓÄñÄÀ Ì¤ãà«ÄP... ÓÄÊÄÞh...



ಜ್ಯೋತಿಬಾ ಪೂಲೆ ಮಹಾರಾಷ್ಟ್ರದಲ್ಲಿ ಜನಿಸಿದ್ದಾರೆ. ಕ್ರೈಸ್ತವ ಧರ್ಮ ಪ್ರಚಾರಕರು ಪ್ರಾರಂಭಿಸಿದ ಪಾಠಶಾಲೆಗಳಲ್ಲಿ ಓದಿದ್ದಾರೆ.

ಜ್ಯೋತಿಬಾ ತನ್ನ ಬ್ರಾಹ್ಮಣ ಸ್ನೇಹಿತನ ಮದುವೆಯ ಮೆರವಣಿಗೆಯಲ್ಲಿ ಪಾಲ್ಗೊಂಡಾಗ ಅವರ ಕುಟುಂಬದ ಸದಸ್ಯರು ಮಾಡಿದ ಅವಮಾನದಿಂದ ಅವರ ಜೀವನದಲ್ಲಿ ಬದಲಾವಣೆ ಉಂಟಾಯಿತು. ದೊಡ್ಡವರಾದ ನಂತರ ಅವರು ಸಮಾಜದಲ್ಲಿ ಜಾತಿ ಬೇಧದ ಮೇಲೆ ತನ್ನದಾದ ಅಭಿಪ್ರಾಯಗಳು ಏರ್ಪಡಿಸಿಕೊಂಡು ತಾವು ಉಳಿದವರಿಗಿಂತ ಮೇಲಿನವರೆಂಬ ಬ್ರಾಹ್ಮಣರ ವಾದನೆಯನ್ನು ಖಂಡಿಸಲಾರಂಭಿಸದರು. ಶೂದ್ರರು (ಶ್ರಾಮಿಕ ಕುಲಗಳು) ಅತಿ ಶೂದ್ರರು (ಅಸ್ಪೃಶ್ಯರು) ಸೇರಿ ಜಾತಿ ಬೇಧಕ್ಕೆ ವಿರುದ್ದವಾಗಿ ಹೋರಾಡಬೇಕೆಂದು ಅವರು ಕೋರಿದರು.

ಸತ್ಯವು, ಸಮಾನತ್ವವು ಎಂಬ ಸೂತ್ರಗಳ ಆಧಾರವಾಗಿ ಹೊಸ ಸಮಾಜವನ್ನು ಏರ್ಪಾಟ್ಟು ಮಾಡುವುದಕ್ಕೆ ಸತ್ಯಶೋಧಕ್ ಸಮಾಜ ಎನ್ನುವ ಸಂಸ್ಥೆಯನ್ನು ಜ್ಯೋತಿಬಾ ಪುಲೆ ಸ್ಥಾಪಿಸಿದರು. ಅಸ್ಪೃಶ್ಯರಾಗಿ ಭಾವಿಸುವ ಮಹಾತ್, ಮಾಂಗ್ ಜಾತಿಗಳಿಗೆ ಹೊಂದಿದ ಬಾಲಕೀಯರಿಗಾಗಿ ಅವರು, ಅವರ ಹೆಂಡತಿ ಸಾವಿತ್ರಿ ಬಾಯಿ ಪೂಲೆ ಒಂದು ಪಾಠಶಾಲೆಯನ್ನು ತೆರೆದರು. ತಮ್ಮ ಬಂಧುವುಗಳಿಂದ ಸಹ ಅವರು ವಿರೋಧವನ್ನು ಎದುರಿಸಿದರು.

ಜಾತಿ ವ್ಯವಸ್ಥೆಯನ್ನು "ಗುಲಾಮಗಿರಿ"ಯೆಂದು ಪರಿಗಣಿಸುತ್ತಾ ಇವರು ಅದಕ್ಕೆ ವಿರುದ್ದವಾಗಿ "ಗುಲಾಮಗಿರಿ"ಯಂತಹ ಎಷ್ಟೋ ಪುಸ್ತಕಗಳನ್ನು ಬರೆದಿದ್ದಾನೆ. ಕೆಳ ಜಾತಿಯವರ ಮಕ್ಕಳಿಗಾಗಿ, ಕೆಳಗಿನ ಜಾತಿಯ ಉಪಾಧ್ಯಾಯರೇ ಪಾಠಗಳು ಹೇಳುವ ಪ್ರತ್ಯೇಕ ಪಾಠ ಶಾಲೆಗಳು, ಕಲಾ ಶಾಲೆಗಳೂ, ವಸತಿ ಗೃಹಗಳಿಗಾಗಿ ಸತ್ಯಶೋಧಕ್ ಸಮಾಜ್, ಪೂಲೆ ಉದ್ಯಮಿಸಿದರು. ವ್ಯಾಸರಚನೆ, ಚರ್ಚೆ, ಭಾಷಣದಂತಹ ಅಂಶಗಳಲ್ಲಿ ಸ್ಪರ್ಧೆಗಳು ಏರ್ಪಡಿಸಿ ಕೆಳ ಜಾತಿಯವರಲ್ಲಿ ಆತ್ಮ ವಿಶ್ವಾಸ, ಆತ್ಮ ಗೌರವ ಹೆಚ್ಚಾಗುವಂತೆ ಮಾಡಿದರು. ಬ್ರಾಹ್ಮಣರು ಇಲ್ಲದೇ ಮದುವೆಗಳನ್ನು ಕರ್ಮಕಾಂಡಗಳನ್ನು ನಿರ್ವಹಿಸಿರೆಂದು ಕೆಳಗಿನ ಜಾತಿಗಳಿಗೆ ಅವರು ಕರೆಕೊಟ್ಟರು.

- ಇಂದಿಗೂ ಈ ಭಾವನೆಗಳು ಅವಸರವೆಂದು ನೀನು ಭಾವಿಸಿದ್ದೀಯಾ?
- ಕೆಳ ಕುಲದವರ ವಿದ್ಯಾರ್ಥಿಗಳಿಗೆ ಆ ಕುಲಗಳ ಉಪಾಧ್ಯಾಯರೇ ವಿದ್ಯೆ ಕಲಿಸಬೇಕೆಂದು ಅವನು ಏಕೆ ಹೇಳಿದ್ದಾನೆ?

## ®ÝÃÝ¿á| WÄáÃÄá (1856-1928)

ಮನುಷ್ಯರೆಲ್ಲರಿಗೂ ಒಂದೇ ಜಾತಿ, ಒಂದೇ ಧರ್ಮ, ಒಬ್ಬರೇ ದೇವರು ಎಂಬ ಭಾವನೆಯನ್ನು ಪ್ರಚಾರ ಮಾಡಿದ ಧಾರ್ಮಿಕ ಗುರುವು ನಾರಾಯಣ ಗುರು. ಇವರ ತಂದೆ ಆಯುರ್ವೇದ ಡಾಕ್ಟರ್. ಮಕ್ಕಳಿಗಾಗಿ ಇವರು ನಡೆಸಿದ ಪಾಠಶಾಲೆಯಲ್ಲೇ ನಾರಾಯಣ ಸಹ ಓದಿದ್ದಾರೆ. ಈಝುವ ಜಾತಿಯವರನ್ನು ಸಾರಾಯಿ ತಯಾ ರಿಸುವುದು, ಪ್ರಾಣಿ ಬಲಿಗಳಂತ ಹವುಗಳನ್ನು ಬಿಟ್ಟುಕೊಡಿರಿ ಎಂದು ನಾರಾಯಣ ಗುರು ಕರೆಕೊಟ್ಟನು. ಇವರು ಜಾತಿ ಬೇಧವನ್ನು ಪಾಲಿಸಿದ ದೇವಾಲಯ ಗಳನ್ನು ಸ್ಥಾಪಿಸಿದನು. ಬ್ರಾಹ್ಮಣ ಪರೋಹಿತರು ಇಲ್ಲದಂತೆ ಸಾಮಾನ್ಯವಾದ ಪೂಜಾ ವಿಧಾನಗಳನ್ನು ಅನುಸರಿಸುತ್ತಿದ್ದರು. ದೇವಾಲಯಗಳನ್ನು ಕಟ್ಟುವುದಕ್ಕಿಂತ ಮಕ್ಕಳಿಗೆ ಪಾಠಶಾಲೆಗಳು ಕಟ್ಟಿಸುವುದು ಎಷ್ಟೋ ಮುಖ್ಯವೆಂದು ಇವರು ಹೇಳುತ್ತಿದ್ದರು. ಇವರ ಪಾಂಡಿತ್ಯ, ಆದ್ಯಾತ್ಮಿಕತೆಗಳೊಂದಿಗೆ ಪ್ರಭಾವಗೊಂಡ ಇತರ ಜಾತಿಯವರು ಸಹ ಇವರ ಅನುಯಾಯಿಗಳಾಗಿ ಬದಲಾದರು.



SCERT TELANGANA

ನಾರಾಯಣ ಗುರು ಜಾತಿ ವ್ಯವಸ್ಥೆಯನ್ನು ತೀವ್ರವಾಗಿ ವಿಮರ್ಶಿಸಿದ್ದಾರೆ, ಎಲ್ಲಾ ರೂಪಗಳಲ್ಲಿ ಜಾತಿಬೇದ ವು ಕೊನೆಗೊಳ್ಳಬೇಕೆಂದು ಇವರು ಉದ್ಯಮಿಸಿದನು.

- ನಾರಾಯಣ ಗುರು ಜ್ಯೋತಿಬಾ ಫೂಲೆ ಯರ ಕೃಷಿಯನ್ನು ಹೋಲಿಸಿರಿ. ಅವರ ನಡುವೆ ಹೋಲಿಕೆಗಳು ವ್ಯತ್ಯಾಸಗಳು ತಿಳಿಸಿರಿ

## vÝ» ¹. BÃ... Aí¸ ‡àvÌÃ... (1891–1956)




ಅಂಬೇಡ್ಕರ್ ಮಹಾರಾಷ್ಟ್ರ ದಲ್ಲಿ ಜನ್ಮಿಸಿದ್ದಾರೆ. ಸೈನ್ಯದಲ್ಲಿ ಕೆಲಸ ಮಾಡುತ್ತಾ ಅವರ ತಂದೆಯು ಮಕ್ಕಳನ್ನು ಓದಿಕೊಳ್ಳಿರಿ ಎಂದು ಪ್ರೋತ್ಸಾಹಿಸಿದರು.

ದಿನ ನಿತ್ಯದ ಜೀವನದಲ್ಲಿ ಜಾತಿ ಬೇಧಕ್ಕೆ ಗುರಿಯಾಗು ವುದು ಎಂದರೆ ಏನೆಂಬುದು ಅಂಬೇಡ್ಕರ್ ಬಾಲ್ಯದಲ್ಲಿಯೇ ಅನುಭವಿಸಿದ್ದಾನೆ. ಶಾಲೆಯಲ್ಲಿ ಅಂಬೇಡ್ಕರ್, ಇತರ ಅಸ್ಪೃಶ್ಯರ ಮಕ್ಕಳನ್ನು ಬೇರೆಯಾಗಿ ಕೂಡಿಸುತ್ತಿದ್ದರು. ಉಪಾಧ್ಯಾಯರು ಅವರ ಮೇಲೆ ಶ್ರದ್ಧೆ ತೋರಿಸುತ್ತಿದ್ದಿಲ್ಲ. ಅವರಿಗೆ ದಾಹವಾದರೆ ಕುಡಿಯುವ ನೀರಿನ ಪಾತ್ರೆಯನ್ನು ಮುಟ್ಟಬಾರದು ಆದುದರಿಂದ ಮೇಲಿನ ಜಾತಿಯವರು ಯಾರಾದರೂ ಮೇಲಿನಿಂದ ನೀರನ್ನು ಹಾಕಬೇಕಾಗುತ್ತಿತ್ತು . ಅನೇಕ ಸಾಮಾಜಿಕ ಆರ್ಥಿಕ ತೊಂದರೆಗಳನ್ನು ಎದುರಿಸಿ ಭಾರತ ದೇಶದಲ್ಲಿ ಕಲಾ ಶಾಲೆಯ ವಿದ್ಯೆಯನ್ನು ಪೂರ್ತಿಗೊಳಿಸಿದ ಮೊದಲನೇ ದಲಿತರಲ್ಲಿ ಅಂಬೇಡ್ಕರ್ ಒಬ್ಬರಾದರು.

ಮುಂದಿನ ವಿದ್ಯಾಭ್ಯಾಸಕ್ಕಾಗಿ ಅವರು ಅಮೇರಿಕಾ, ಇಂಗ್ಲೆಂಡ್ ದೇಶಗಳಿಗೆ ಹೋದರು. ಭಾರತ ದೇಶಕ್ಕೆ ಹಿಂತಿರುಗಿ ಬಂದನಂತರ ನ್ಯಾಯವಾದಿ ವೃತ್ತಿಯನ್ನು ಮಾಡಲಾರಂಭಿಸಿದರು. ಉಪಾಧ್ಯಾಯರಾಗಿ ಕೆಲಸ ಮಾಡಿದರು. 1927ರಲ್ಲಿ ದಲಿತರು ಹಿಂದೂ ದೇವಾಲಯಗಳಲ್ಲಿ ಪ್ರವೇಶ ಮಾಡುವುದಕ್ಕೆ, ಸರಕಾರಿ ಕುಡಿಯುವ ನೀರಿನ ಸಂಪನ್ಮೂಲಗಳಿಂದ ನೀರನ್ನು ಉಪಯೋಗಿಸಿಕೊಳ್ಳುವ ಹಕ್ಕುಗಳಿಗಾಗಿ ಇವರು ಹೋರಾಟ ಮಾಡಿದರು. ದಲಿತರನ್ನು ಚೈತನ್ಯಗೊಳಿಸುವುದರಲ್ಲಿ ಆತನು ಮಾಡಿದ ಕೃಷಿಯನ್ನು ಗುರ್ತಿಸಿ 'ಭಾರತ ದೇಶ ರಾಜಕೀಯ ಭವಿಷ್ಯತ್ತು' ಎನ್ನುವ ಅಂಶದ ಮೇಲೆ 1932 ವಲಸೆ ಸರಕಾರವು ನಿರ್ವಹಿಸಿದ ಸಮಾವೇಶಕ್ಕೆ ಅವರನ್ನು ಆಹ್ವಾನಿಸಿದರು. ಶಾಸನ ಸಭೆಯಲ್ಲಿ ದಲಿತ ಅಭ್ಯರ್ಥಿಗಳಿಗೆ ದಲಿತರು ಬೇರೆ ಮತ ಹಾಕಬೇಕೆಂದು ಅವರು ವಾದಿಸಿದರು. ಬ್ರಿಟೀಷು ಸರಕಾರ ಈ ಪ್ರತಿಪಾದನೆಯನ್ನು ಒಪ್ಪಿಕೊಂಡಿತು. ಆದರೆ, ಗಾಂಧೀಜಿಯು ಅದನ್ನು ವಿರೋಧಿಸಿದರು. ಕೊನೆಗೆ ದಲಿತರಿಗೆ ಕೆಲವು ಸೀಟುಗಳನ್ನು ಮೀಸಲಾಗಿಟ್ಟು ಎಲ್ಲರೂ ಅವರಿಗೆ ಮತ ಹಾಕುವಂತೆ ಒಪ್ಪಂದಕ್ಕೆ ಬಂದರು.

ದಲಿತರ ಪ್ರಯೋಜನಗಳಿಗೆ ಪ್ರಾತಿನಿಧ್ಯ ವಹಿಸುವುದಕ್ಕೆ ಇವರು "ಇಂಡಿಪೆಂಡೆಂಟ್ ಲೇಬರ್ ಪಾರ್ಟಿ"ಯನ್ನು ಸ್ಥಾಪಿಸಿದರು.

1932ರ ಕಾಲದಲ್ಲಿ ಅಸ್ಪೃಶ್ಯತೆಗ ವಿರುದ್ಧವಾಗಿ ಗಾಂಧೀಜಿಯು ಚಳುವಳಿಯನ್ನು ಪ್ರಾರಂಭಿಸಿದರು. ಅಸ್ಪೃಶ್ಯ ಜಾತಿಯವರಿಗೆ ಅವರು 'ಹರಿಜನರು' ಅಂದರೆ 'ದೇವರ ಪ್ರಜೆಗಳು' ಎಂದು ನಾಮಕರಣ ಮಾಡಿದರು. ದೇವಾಲಯಗಳು, ನೀರಿನ ಸಂಪನ್ಮೂಲಗಳು, ಪಾಠಶಾಲೆ ಗಳಂತಹವುಗಳಲ್ಲಿ ಪ್ರವೇಶ ಹಕ್ಕುಗಳು, ಸಮಾನ ಹಕ್ಕುಗಳು ಕಲ್ಪಿಸಬೇಕೆಂದು ಆಶಿಸಿದನು. ಈ ಚಳುವಳಿಯನ್ನು ಕಾಂಗ್ರೆಸ್ ಮಹತ್ತರವಾಗಿ ಕೈಗೊಂಡಿರುವುದರಿಂದ ರಾಷ್ಟ್ರೀಯ ಚಳುವಳಿಯಲ್ಲಿ ದಲಿತರು ಲಕ್ಷಾಂತರ ಸಂಖ್ಯೆಯಲ್ಲಿ ಸೇರಿದರು.

1947ರಲ್ಲಿ ಸ್ವಾತಂತ್ರ್ಯವು ಬಂದ ನಂತರ ದೇಶಕ್ಕೆ ಮೊದಲನೇ ನ್ಯಾಯ ಶಾಖೆಯ ಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳಬೇಕೆಂದು ಅಂಬೇಡ್ಕರ್‌ರವರನ್ನು ಆಹ್ವಾನಿಸಿದರು. ಭಾರತ ದೇಶಕ್ಕೆ ಹೊಸ ಸಂವಿಧಾನವನ್ನು ರಚಿಸುವ, ರಚನಾ ಸಂಸ್ಥೆಗೆ ಅಂಬೇಡ್ಕರ್‌ನ್ನು ಅಧ್ಯಕ್ಷರನ್ನಾಗಿ ನಿಯಮಿಸಿದರು. ಅಂಬೇಡ್ಕರ್‌ರವರು ಬರೆದ ಮುಸಾಯಿದೆಯಲ್ಲಿ ಪೌರರ ವಿಸ್ತೃತ ಸ್ವೇಚ್ಛೇ ಸ್ವಾತಂತ್ರಗಳಿಗೆ, ಹಕ್ಕುಗಳಿಗೆ ಸಂವಿಧಾನ ಪರವಾಗಿ ಭರವಸ ಲಭಿಸಿದೆ. ಉದಾ॥ ಧಾರ್ಮಿಕ ಸ್ವಾತಂತ್ರ್ಯ, ಅಸ್ಪೃಶ್ಯತೆಯನ್ನು ನಿಷೇಧಿಸುವುದು, ಎಲ್ಲಾ ವಿಧದ ಬೇಧ ಭಾವನೆಯನ್ನು ನಿಷೇಧಿಸುವುದು. ಮಹಿಳೆಯರಿಗೆ ವಿಸ್ತೃತ ಸಾಮಾಜಿಕ, ಆರ್ಥಿಕ ಹಕ್ಕುಗಳಿಗಾಗಿ ಅಂಬೇಡ್ಕರ್ ಹೋರಾಡಿದರು. ಪರಿಶಿಷ್ಟ ಜಾತಿಗಳು, ವರ್ಗಗಳಿಗೆ ಪಾಠಶಾಲೆಗಳು, ಕಲಾ ಶಾಲೆಗಳಲ್ಲಿ ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿಯನ್ನು ಕಲ್ಪಿಸುವಂತೆ ಸಂವಿಧಾನ ಸಭೆಯನ್ನು ಅಂಬೇಡ್ಕರ್ ಒಪ್ಪಿಸಿದನು. ಅಂಬೇಡ್ಕರ್ ತನ್ನ ಜೀವನದ ಕೊನೆಯ ಹಂತದಲ್ಲಿ ಬೌದ್ಧ ಮತವನ್ನು ಸ್ವೀಕರಿಸಿದನು.

- ದಲಿತರ ಬಗ್ಗೆ ತಮ್ಮ ದೃಷ್ಟಿಯಲ್ಲಿ ಗಾಂಧೀಜಿ, ಅಂಬೇಡ್ಕರ್‌ರವರ ನಡುವೆ ಹೋಲಿಕೆಗಳು, ವ್ಯತ್ಯಾಸಗಳೇನು?

SCERT TELANGANA

- ಇಂದಿನ ದೇವಾಲಯಗಳು, ನೀರಿನ ಸಂಪನ್ಮೂಲಗಳು, ಪಾಠಶಾಲೆಯಲ್ಲಿ ದಲಿತರಿಗೆ ಸಮಾನ ಹಕ್ಕುಗಳು ಇವೆಯಾ? ಅವರು ಇಂದಿಗೂ ಎದುರಿಸುತ್ತಿರುವ ಸಮಸ್ಯೆಗಳು ಯಾವುವು?




### »ÝWÚÂÃ¤w ÊÚÊÚá ì (1888-1939)

ತೆಲಂಗಾಣದಲ್ಲಿ ದಲಿತರು ತಮ್ಮ ಪರಿಸ್ಥಿತಿಯನ್ನು ಗುರ್ತಿಸಿ ಹಕ್ಕು ಗಳಿಗಾಗಿ ಹೋರಾಡುವಂತೆ ಮಾಡುವುದಕ್ಕೆ ಭಾಗ್ಯರೆಡ್ಡಿ ವರ್ಮ ರಂತಹ ದಲಿತ ನಾಯಕರು ವಿಶ್ರಾಂತಿ ಇಲ್ಲದೇ ಕೃಷಿ ಮಾಡಿದ್ದಾರೆ. ಈತನ ಅಸಲಿ ಹೆಸರು ಮ್ಯಾದರಿ ಬಾಗಯ್ಯ. ದಲಿತರೇ ಈ ಪ್ರಾಂತದ ಮೂಲ ನಿವಾಸಿಗಳೆಂದು, ಉನ್ನತ (ಮೇಲಿನ) ಜಾತಿಯ ಆರ್ಯರು ದಲಿತರನ್ನು ಬಲದಿಂದ ಅಡಗಿಸಿದ್ದಾರೆಂದು ಹೇಳುತ್ತಾರೆ. ಆದುದರಿಂದ ದಲಿತರು ತಮ್ಮನ್ನು 'ಆದಿ ಹಿಂದುಗಳು' ಎಂದು ಕರೆಯಿಸಿ ಕೊಳ್ಳಬೇಕೆಂದು ಇವರು ಕರೆಕೊಟ್ಟರು. ಹಿಂದೂ ಸಮಾಜದಿಂದ ಹೊರಗಿರದಂತೆ ಆ ಸಮಾಜದಲ್ಲಿರುವುದೇ ಆತನ ಮುಖ್ಯ ಉದ್ದೇಶವಾಗಿತ್ತು. ಜನಾದರಣೆ ಹೊಂದಿದ ಕಲೆಗಳನ್ನು ಉಪಯೋಗಿಸಿಕೊಂಡು ದಲಿತರನ್ನು ಚೈತನ್ಯ ಉಂಟು ಮಾಡುವುದಕ್ಕೆ 1906ರಲ್ಲಿ 'ಜಗನ್ ಮಿತ್ರ ಮಂಡಳಿ' ಯನ್ನು ಭಾಗ್ಯರೆಡ್ಡಿರವರು ಪ್ರಾರಂಭಿಸಿದ್ದಾರೆ. ಅವರು ಪಾಠಶಾಲೆ ಗಳನ್ನು ಸ್ಥಾಪಿಸಿದರು. ದಲಿತರ ವಿದ್ಯೆಗಾಗಿ ಪ್ರತ್ಯೇಕ ಹಣ ಮೀಸಲಾಗಿಡು ವಂತೆ ನಿಜಾಂನನ್ನು ಒಪ್ಪಿಸಿದ್ದಾರೆ. ಹೆಣ್ಣು ಮಕ್ಕಳನ್ನು ಪ್ರತ್ಯೇಕಿಸಿ ದಲಿತ ಬಾಲಕೀಯರನ್ನು ದೇವಾಲಯಗಳಲ್ಲಿ ದೇವ ದಾಸಿಗಳು, ಇಲ್ಲವೇ ಜೋಗಮ್ಮನವರಾಗಿ ಮಾಡಿ ಬಲವಂತವಾಗಿ ವೇಶ್ಯರಾಗಿ ಮಾಡುವದರ ವಿರುದ್ಧವಾಗಿ ಚಳುವಳಿಯನ್ನು ನಡಿಸಿ ಒಳ್ಳೆಯ ಫಲಿತಗಳನ್ನು ಸಾಧಿಸಿದರು. ಹಿಂದೂ ಜಾತಿವ್ಯವಸ್ಥೆಯ ಹೋರಾಟದಲ್ಲಿ ಭಾಗವಾಗಿ ಬುದ್ದನ ಭೋಧನೆಯಲ್ಲಿ ಆ ಶಕ್ತಿಯನ್ನು ತೋರಿಸಿದರು. ದಲಿತರು ಬೌದ್ಧಧರ್ಮವನ್ನು ಸ್ವೀಕರಿಸಬೇಕೆಂದು ಪ್ರೋತ್ಸಾಹಿಸಿದರು.

- ಜಾತಿ ವ್ಯವಸ್ಥೆಗೆ ಸಂಬಂಧಿಸಿ ಬುದ್ದನ ಭೋಧನೆಗಳನ್ನು ಜ್ಞಾಪಿಸಿಕೊಳ್ಳಿರಿ.
- ಆಂಧ್ರಪ್ರಾಂತಗಳಲ್ಲಿ ದಲಿತರು ಮೂಲ ನಿವಾಸಿಗಳು ಎನ್ನುವ ಭಾವನೆ ದಲಿತರಲ್ಲಿ ಆತ್ಮ ವಿಶ್ವಾಸವನ್ನು ಹೆಚ್ಚಿಸುವುದಕ್ಕೆ ಯಾವ ವಿಧವಾಗಿ ಸಹಾಯ ಪಟ್ಟಿದೆ?

## ಸ್ವತಂತ್ರ ಚಳುವಳಿಯಲ್ಲಿ ಸ್ತ್ರೀಯರು ಮತ್ತು ದಲಿತರು (Women and Dalits in Freedom Movement)

ಸಹಾಯ ನಿರಾಕರಣೆ, ಸತ್ಯಾಗ್ರಹ ಚಳುವಳಿಗಳಲ್ಲಿ ಭಾಗವಹಿಸಬೇಕೆಂದು ಮಹಿಳೆಯರನ್ನು ಗಾಂಧೀಜಿ ಪ್ರೋತ್ಸಾಹಿಸದರು. ಉಪ್ಪಿನ ಸತ್ಯಾಗ್ರಹ ಅಸ್ಪೃಶ್ಯತೆಗೆ ವಿರುದ್ದವಾಗಿ ಹೋರಾಟ, ರೈತಾಂಗದ ಚಳುವಳಿಯಂತ ಹವುಗಳಲ್ಲಿ ಮಹಿಳೆಯರು ಭಾಗವಹಿ ಸುವಂತೆ ಮಾಡುವುದರ ಮುಖಾಂತರ ಗಾಂಧೀಜಿಯು ಅನೇಕ ಜನ ಮಹಿಳೆಯರಿಗೆ ಜನ ಜೀವನದಲ್ಲಿ ಮರ್ಯಾದೆ ಪೂರ್ವಕವಾದ ಸ್ಥಾನ ದೊಂದಿಗೆ ಅವರಲ್ಲಿ ಆತ್ಮ ವಿಶ್ವಾಸವನ್ನು ತುಂಬಿದನು. ರಾಷ್ಟ್ರೀಯ ಚಳುವಳಿಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು. ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಪುರುಷರೊಂದಿಗೆ ಮಹಿಳೆಯರು ಸಹ ಸಮಾನವಾದ ಹಕ್ಕುಗಳು ಪಡೆಯುತ್ತಾರೆಂದು ಅವರು ಆಶಿಸಿದರು.

- ಸ್ವಾತಂತ್ರ್ಯ ಹೋರಾಟದಲ್ಲಿ ಮುಖ್ಯವಾದ ಮಹಿಳಾ ನಾಯಕರನ್ನು ಕುರಿತು ತಿಳಿದುಕೊಳ್ಳಿರಿ – ಕಲ್ಪನಾದತ್, ಅರುಣ ಅಸಫ್ ಅಲಿ, ಕ್ಯಾಪ್ಟೆನ್ ಲಕ್ಷ್ಮೀ ಸೆಹಗಾಲ್, ಸರೋಜಿನಿ ನಾಯುಡು, ಕಮಲಾದೇವಿ ಚಟೋಪಾಧ್ಯಾಯ ಮೊದಲಾದವರು.
- ಸ್ವತಂತ್ರ ಭಾರತ ದೇಶದಲ್ಲಿ ಮಹಿಳೆಯರೆಲ್ಲರಿಗೂ ಮತದಾನ ಹಕ್ಕು (ಓಟು ಹಕ್ಕು) ಲಭಿಸಿದೆಯಾ?

### AÄW¤ ÃÝÊÚá0ÝËá :




ಹೈದರಾಬಾದ್ ರಾಜ್ಯದಲ್ಲಿ ಪ್ರಮುಖ ದಲಿತ ನಾಯಕರಲ್ಲಿ ಅರಿಗೆ ರಾಮಸ್ವಾಮಿ ಒಬ್ಬರು. ಆತನು ಅಚಲ ಸಿದ್ಧಾಂತ, ಬ್ರಹ್ಮಸಮಾಜದ ಅನುಯಾಯಿ. ಆತನು ಸುನಿತಾ ಬಾಲಸಮಾಜವನ್ನು ಸ್ಥಾಪಿಸಿದನು. ಸಿಕಿಂದ್ರಾಬಾದ್‌ನಲ್ಲಿಯ ದಲಿತರಲ್ಲಿ ಸಮಾಜ ಸುಧಾರಣ ಚಟುವಟಿಕೆಗಳನ್ನು ಕೈಗೊಂಡನು. ಹಾಗೆಯೇ ಆದಿ ಹಿಂದು ರಾಷ್ಟ್ರೀಯ ಅಭಿವೃದ್ಧಿ ಸಭೆಯನ್ನು ಸ್ಥಾಪಿಸಿ ಮಧ್ಯಪಾನ, ಜೋಗಿನಿ ವ್ಯವಸ್ಥೆಯಂತಹವುಗಳನ್ನು ಬಿಡಬೇಕೆಂದು ದಲಿತರಲ್ಲಿ ಬೇಡಿಕೊಂಡನು. ಜಂತು ಬಲಿ, ಬಾಲ್ಯ ವಿವಾಹಗಳಿಗೆ ವಿರುದ್ಧವಾಗಿ ಹೋರಾಡಿದನು.

- ಕುಲ ವ್ಯವಸ್ಥೆಗೆ ಸಂಬಂಧಿಸಿದಂತೆ ಬುದ್ಧನ ಬೋಧನೆಗಳನ್ನು ನೆನಪಿಸಿಕೊಳ್ಳಿರಿ.

SCERT TELANGANA

● ತೆಲಂಗಾಣ ಮತ್ತು ಆಂಧ್ರ ಪ್ರಾಂತದಲ್ಲಿ ದಲಿತರು ಮೂಲಾವಾಸಿಗಳು ಎಂಬ ಭಾವನೆ ದಲಿತರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುವಲ್ಲಿ ಹೇಗೆ ಸಹಕರಿಸಿದೆ.

ಸ್ವತಂತ್ರ ಹೋರಾಟದಲ್ಲಿ ಸ್ತ್ರೀಯರು ಮತ್ತು ದಲಿತರು ಸಹಾಯ ನಿರಾಕರಣೆ ಸತ್ಯಾಗ್ರಹ ಚಳುವಳಿಗಳಲ್ಲಿ ಭಾಗವಹಿಸಬೇಕೆಂದು ಮಹಿಳೆಯರನ್ನು ಗಾಂಧೀಜಿ ಪ್ರೋತ್ಸಾಹಿಸಿದರು. ಉಪ್ಪಿನ ಸತ್ಯಾಗ್ರಹ ಅಸ್ಪೃಶ್ಯತೆಗೆ ವಿರುದ್ಧವಾಗಿ ಹೋರಾಟ, ರೈತಾಂಗದ ಚಳುವಳಿಯಂತಹವುಗಳಲ್ಲಿ ಮಹಿಳೆಯರು ಭಾಗವಹಿಸುವಂತೆ ಮಾಡುವುದರ ಮುಖಾಂತರ ಗಾಂಧೀಜಿಯು ಅನೇಕ ಜನ ಮಹಿಳೆಯರಿಗೆ ಜನ ಜೀವನದಲ್ಲಿ ಮರ್ಯಾದೆ ಪೂರ್ವಕವಾದ ಸ್ಥಾನದೊಂದಿಗೆ ಅವರಲ್ಲಿ ಆತ್ಮವಿಶ್ವಾಸವನ್ನು ತುಂಬಿದನು. ರಾಷ್ಟ್ರೀಯ ಚಳುವಳಿಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು. ಭಾರತದೇಶಕ್ಕೆ ಸ್ವಾತಂತ್ರ್ಯ ಬಂದಾಗ ಪುರುಷರೊಂದಿಗೆ ಮಹಿಳೆಯರು ಸಹ ಸಮಾನವಾದ ಹಕ್ಕುಗಳು ಪಡೆಯುತ್ತಾರೆಂದು ಅವರು ಆಶಿಸಿದರು.

## DÍÄ¸ÝÀá:

ರಾಜಕೀಯ ಚಳುವಳಿಯಲ್ಲಿ ಮಹಿಳೆಯರ ಭಾಗವಹಿಸುವಿಕೆ, ಹೈದರಾಬಾದ್ ಯಾವ ವಿಧದಲ್ಲಿಯೂ ಕಡೆಗನಿಸಲಾಗದು. ಅಂತಹ ಮಹಿಳೆಯರಲ್ಲಿ ಈಶ್ವರಿಬಾಯಿ ಒಬ್ಬರು. ದಲಿತ ಮತ್ತು ಗಿರಿಜನರ ಪರವಾಗಿ ಹೋರಾಡಿದ ಧೀರವನಿತೆ ಈಶ್ವರಿಬಾಯಿ. ಈಕೆ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಅಂಕಿತಭಾವದಿಂದ ಅನುಸರಿಸಿದರು. ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ರಾಷ್ಟ್ರೀಯ ಅಧ್ಯಕ್ಷರಾಗಿ ಕೆಲಸ ಮಾಡಿದರು. 1950ರಲ್ಲಿ ಸಿಕಿಂದ್ರಬಾದ್ ನಗರ ಪಾಲಿಕ ಸಂಸ್ಥೆಯ ಕೌನ್ಸಿಲರ್ ಆಗಿ ಚುನಾಯಿತರಾದರು. ಅದೇ ವರ್ಷದಲ್ಲಿ ಮಹಿಳೆಯರಿಗಾಗಿ ವೃತ್ತಿ ಶಿಕ್ಷಣ ಕೇಂದ್ರವನ್ನು ಸ್ಥಾಪಿಸಿ ಹೊಲಿಗೆ, ನೂಲು, ತೆಗೆಯುವುದು, ಹೆಣೆಯುವುದು ಸೇರಿದಂತೆ ಅನೇಕ ಕರಕುಶಲ ಕೆಲಸಗಳಲ್ಲಿ ಮಹಿಳೆಯರಿಗೆ ಶಿಕ್ಷಣ ನೀಡಿದರು.


DÍÄ¸ÝÀá

ಚಿಲಕಗೂಡದಲ್ಲಿಯ ಚಿಂತ ಬಾವಿ ಹತ್ತಿರ ಸ್ವಂತ ಹಣದಿಂದ ಶಾಲೆಯನ್ನು ಕಟ್ಟಿಸಿ ಸರಕಾರಕ್ಕೆ ಒಪ್ಪಿಸಿದರು. ಇಂಡಿಯನ್ ಕಾನ್ಫರೆನ್ಸ್ ಆಫ್ ಸೋಷಲ್ ವೆಲ್‌ಫೇರ್ ಕಾರ್ಯದರ್ಶಿಯಾಗಿ, ಇಂಡಿಯನ್ ರೆಡ್‌ಕ್ರಾಸ್ ಸೋಸೈಟಿ ಸದಸ್ಯರಾಇ ಸೇವೆಸಲ್ಲಿಸಿದರು. ಮಹಿಳಾ ಶಿಶುಕಲ್ಯಾಣ ವಿಭಾಗದ ಅಧ್ಯಕ್ಷರಾಗಿ ಬಾಲಕೀಯರು ಉಚಿತವಾಗಿ ಪ್ರೌಢ ಶಿಕ್ಷಣ ಪಡೆಯುವಂತೆ ಕಾನೂನು ರಚಿಸಲು ಕೃಷಿ ಮಾಡಿದರು. ಸಾಮಾಜಿಕ ಪಿಡುಗಳಿಗೆ, ದಲಿತರು ಮಹಿಳೆಯರ ಮೇಲಿನ ದೃಶ್‌ಕೃತ್ಯಗಳು ಅನ್ಯಾಗಳಿಗೆ ವಿರುದ್ಧವಾಗಿ ಹೋರಾಡುವುದರ ಜೊತೆಗೆ ಭೂರೈತ ಬಡ ಜನರಿಗೆ ಭೂಹಂಚಿಕೆ ಕುರಿತು ವಿಧಾನಸಭೆ ಸದಸ್ಯರಾಗಿ ನಿರಂತರ ಕೃಷಿ ಮಾಡಿದರು. ಹಾಗೆಯೇ ಪ್ರತ್ಯೇಕ ತೆಲಂಗಾಣ ರಾಜ್ಯ ಸಾಧನೆಗಾಗಿ ಹೋರಾಡಿದಳು.

## q.G®....Óï¨ÝÆQ$:

ತೆಲಂಗಾಣದಲ್ಲಿಯ ಪ್ರಮುಖ ದಲಿತ ರಾಜಕೀಯ ನಾಯಕರು, ಸಾಮಾಜಿಕ ಕಾರ್ಯಕರ್ತರಲ್ಲಿ ಟಿ.ಎನ್.ಲಕ್ಷ್ಮಿ ಒಬ್ಬರು. ಆರ್ಯಸಮಾಜ ಸದಸ್ಯರಾಗಿದ್ದ ಇವರು ದಲಿತರ ಸಾಮಾಜಿಕ ಸುಧಾರಣಾ ಚಳುವಳಿಯಲ್ಲಿ ಕ್ರಿಯಾತ್ಮಕ ಪಾತ್ರವಹಿಸಿದರು. ಅಂದಿನ ವಿಧಾನಸಭಾ ಸದಸ್ಯರಾಗಿ, ಮಂತ್ರಿಯಾಗಿ, ಉಪಸಭಾಪತಿಯಾಗಿ ಕಾರ್ಯನಿರ್ವಹಿಸಿದರು. ಅರಿಗೆ ರಾಮಸ್ವಾಮಿಯೊಂದಿಗೆ ಸೇರಿ ದಲಿತರ ವಿದ್ಯಾ ಆರ್ಥಿಕ ಪ್ರಗತಿಗೆ ಶ್ರಮಿಸಿದರು. ಇವರು ತೆಲಂಗಾಣದಲ್ಲಿ ದಲಿತ ಸಾಧಿಕಾರತೆಗೆ ಕೆಲಸ ಮಾಡುವವರೆಗೆ ಮಾರ್ಗದರ್ಶಿಯಾಗಿದ್ದರು. ಇವರು ಪ್ರಜಾಸಮಿತಿ ಉಪಾಧ್ಯಕ್ಷರಾಗಿ ಕೆಲಸಮಾಡಿದರು.


q.G®....Óï¨ÝÆQ$:

● ಸ್ವತಂತ್ರ್ಯ ಹೋರಾಟದಲ್ಲಿನ ಪ್ರಮುಖ ಮಹಿಳಾ ನಾಯಕೀಯರ ಬಗ್ಗೆ ತಿಳಿದುಕೊಳ್ಳಿರಿ. ಕಲ್ಪನಾದತ್, ಅರುಣಾ ಅಶ್ರಫ್ ಅಲಿ, ಕೆಪ್ಟೆನ್ ಲಕ್ಷ್ಮಿ ಸೆಹೆಗೆಲ್, ಸರೋಜಿನಿ ನಾಯುಡು, ಕಮಲಾದೇವಿ ಚಟೋಪಾಧ್ಯಾಯ ಮೊದಲಾದವರು.

● ಸ್ವತಂತ್ರ್ಯ ಭರತದೇಶದಲ್ಲಿ ಮಹಿಳೆಯರೆಲ್ಲರಿಗೂ ಮತದಾನದ ಹಕ್ಕು ಲಭಿಸಿದೆಯಾ ?

SCERT TELANGANA

## ಮುಖ್ಯ ಪದಗಳು

1. ಸುಧಾರಣೆಗಳು
2. ಸತಿ
3. ಪರದೆ
4. ವಿಧವೆಯ ಪುರ್ನವಿವಾಹ
5. ಅಸ್ಪೃಶ್ಯತೆ

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಗೊಳಿಸಿಕೊಳ್ಳಿರಿ

1. ಪಾಶ್ಚಾತ್ಯ ವಿದ್ಯೆ, ಕ್ರೈಸ್ತವ ಧರ್ಮ ಪ್ರಚಾರಗಳು ಭಾರತ ದೇಶದಲ್ಲಿ ಸಾಮಾಜಿಕ, ಧಾರ್ಮಿಕ ಸುಧಾರಣೆಯನ್ನು ಪ್ರಭಾವಿತಗೊಳಿಸಿವೆ. ಇದರೊಂದಿಗೆ ನೀನು ಏಕೀಭವಿಸುತ್ತೀಯಾ ? ಏಕೆ ?

2. ಸುಧಾರಣಾ ಚಳುವಳಿಯು ಅಭಿವೃದ್ದಿಗೊಳ್ಳುವುದರಲ್ಲಿ ಅಚ್ಚು ಯಂತ್ರದ ಪ್ರಾಮುಖ್ಯತೆ ಏನು?

3. ಅನೇಕ ದೇವರುಗಳನ್ನು ಪೂಜಿಸುವುದು, ವಿಗ್ರಹಾರಾಧನೆ, ಸಂಕ್ಲಿಷ್ಟ ಸಂಪ್ರದಾಯಗಳಂತಹ ಅವುಗಳನ್ನು ಮುಕ್ತಾಯಗೊಳಿಸುವುದಕ್ಕೆ ಧಾರ್ಮಿಕ ಸುಧಾರಣೆಗಳು ಪ್ರಯತ್ನಿಸಿವೆ. ಈ ಸುಧಾರಣೆಗಳನ್ನು ಪ್ರಜೆಗಳು ಅಂಗೀಕರಿಸಿದ್ದಾರೆಯೇ? ನಿಮ್ಮ ಉತ್ತರಕ್ಕೆ ಕಾರಣಗಳು ತಿಳಿಸಿರಿ.

4. ರಮಾಬಾಯ್‌ರಂತಹ ವ್ಯಕ್ತಿಗಳು ವಿಧವೆಯರ ಪರಿಸ್ಥಿತಿಯ ಮೇಲೆ ಪ್ರತ್ಯೇಕ ಕೃಷಿ ಏಕೆ ಮಾಡಿದ್ದಾರೆ?

5. ಭಾರತ ದೇಶದಲ್ಲಿ 19ನೇ ಶತಮಾನದಲ್ಲಿ ಸಾಮಾಜಿಕ ಸುಧಾರಕನಾಗಿ ರಾಜಾರಾಮ್‌ಮೋಹನ್ ರಾಯ್‌ರವರ ಪಾತ್ರವನ್ನು ವಿವರಿಸಿರಿ

6. ಆಂಗ್ಲ ವಿದ್ಯೆಯನ್ನು ಪ್ರೋತ್ಸಾಹಿಸುವುದರಲ್ಲಿ ಸರ್ ಸಯ್ಯದ್ ಅಹ್ಮದ್ ಖಾನ್‌ರ ಪ್ರಧಾನ ಉದ್ದೇಶವೇನು?

7. ಅಸ್ಪೃಶ್ಯತೆ ಜಾತಿಗಳನ್ನು ಉಳಿದ ಜಾತಿಗಳೊಂದಿಗೆ ಸಮಾನವಾಗಿ ಮಾಡುವುದಕ್ಕೆ ವಿವಿಧ ನಾಯಕರು ವಿವಿಧ ಪದ್ಧತಿಗಳನ್ನು ಅನುಸರಿಸಿದ್ದಾರೆ. ಪೂಲೆ, ಭಾಗ್ಯರೆಡ್ಡಿ ವರ್ಮ, ನಾರಾಯಣ ಗುರು, ಅಂಬೇಡ್ಕರ್, ಗಾಂಧೀಜಿಯಂತಹ ನಾಯಕರು ಸೂಚಿಸಿದ ಚರ್ಯೆಗಳ ಪಟ್ಟಿಯನ್ನು ತಯಾರಿಸಿರಿ.

8. ಇಂದಿಗೂ ಸಹ ಜಾತಿಯು ಏಕೆ ವಿವಾದಾಸ್ಪದ ವಿಷಯವಾಗಿದೆ? ವಸಾಹತು ಆಡಳಿತದಲ್ಲಿ ಜಾತಿಗೆ ವಿರುದ್ಧವಾಗಿ ನಡೆದ ಮುಖ್ಯವಾದ ಚಳುವಳಿ ಯಾವುದು?

9. ದೇವಾಲಯದ ಪ್ರವೇಶ ಚಳುವಳಿಯ ಮುಖಾಂತರ ಅಂಬೇಡ್ಕರ್ ಏನನ್ನು ಸಾಧಿಸಬೇಕೆಂದುಕೊಂಡಿದ್ದಾರೆ?

10. ಭಾರತ ಸಮಾಜದಲ್ಲಿ ಸಾಮಾಜಿಕ ಅಪರಾಧಗಳು ಇಲ್ಲದಂತೆ ಮಾಡುವುದರಲ್ಲಿ ಸಾಮಾಜಿಕ ಸುಧಾರಣೆ ಚಳುವಳಿಗಳು ಯಾವ ವಿಧವಾಗಿ ಸಹಾಯಕವಾಗಿವೆ. ಇಂದಿಗೂ ಎಂತಹ ಸಾಮಾಜಿಕ ಅಪರಾಧಗಳಿವೆ? ಇವುಗಳನ್ನು ಎದುರಿಸುವುದಕ್ಕೆ ಎಂತಹ ಸಾಮಾಜಿಕ ಸುಧಾರಣೆಗಳು ಕೈಗೊಳ್ಳಬೇಕು?

11. "ಬಾಲಕೀಯರ ವಿದ್ಯೆ" ಪ್ರಾಮುಖ್ಯತೆಯನ್ನು ತಿಳಿಸುವ ಒಂದು ಕರಪತ್ರವನ್ನು ತಯಾರು ಮಾಡಿರಿ.

12. ಸಮಾಜ ಸುಧಾರಕರಲ್ಲಿ ನಿನಗೆ ಮೆಚ್ಚುಗೆಯಾದ ಗುಣಗಳಾವುವು ? ಏಕೆ ಮೆಚ್ಚುಗೆಯಾಗಿವೆ.

SCERT TELANGANA

ಪಾಠ 20

# ಜಾತ್ಯಾತೀತ ಅವಗಾಹನೆ

ನೀವು ಅಮೇರಿಕಾದಲ್ಲಿ ಇರುವ ಹಿಂದೂವಾಗಿಯೇ, ಮುಸ್ಲಿಂನಾಗಿಯೋ, ಊಹಿಸಿಕೊಳ್ಳಿರಿ. ಅಲ್ಲಿ ಕ್ರೈಸ್ತವ ಧಾರ್ಮಿಕತೆ ಧೋರಣೆ ಬಲವಾಗಿದೆಯೆಂದು ಊಹಿಸಿಕೊಳ್ಳಿರಿ. ನೀವು ಅಮೇರಿಕಾದ ಪೌರರಾಗಿದ್ದಾಗ್ಯೂ ನಿಮಗೆ ಮನೆ ಬಾಡಿಗೆ ಕೊಡಲು ಯಾರು ತಯಾರಾಗಿರುವುದಿಲ್ಲ. ಆಗ ನಿಮಗೇನು ಅನಿಸುತ್ತದೆ ? ಆಗ ನಿಮಗೆ ನೋವು ಉಂಟಾಗುವು ದಿಲ್ಲವೆ ? ನೀವು ಆ ನೋವು ಭಾವನೆಯನ್ನು ಕುರಿತು ದೂರು ಮಾಡಿದರೆ ನಿಮ್ಮನ್ನು ಭಾರತದೇಶಕ್ಕೆ ಮರಳಿ ಹೋಗಿರೆಂದು ಹೇಳಿದರು. ಆಗ ನಿಮಗೆ ಕೋಪ ಉಂಟಾಗುವುದಿಲ್ಲವೆ? ನಿಮ್ಮ ಕೋಪವು ಎರಡು ರೂಪಗಳು ತೆಗೆದುಕೊಳ್ಳಬಹುದು. ಒಂದು ನಿಮ್ಮ ಬಗ್ಗೆ ವರ್ತಿಸಿದ ಹಾಗೆ ಮುಸ್ಲಿಂರು, ಹಿಂದೂಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದ ಕಡೆ ಕ್ರೈಸ್ತರ ಬಗ್ಗೆ ವ್ಯವಹರಿಸಬೇಕೆಂದು ಕೋರಬಹುದು. ಇದು ಪ್ರತೀಕಾರ (ಸೇಡು) ತೀರಿಸಿಕೊಳ್ಳುವಂತಹದು. ಅಥವಾ, ಎಲ್ಲರಿಗೂ ನ್ಯಾಯ ಉಂಟಾಗಲಿ ಎನ್ನುವ ಅವಲೋಕನೆಯನ್ನು ವ್ಯಕ್ತಪಡಿಸಬಹುದು. ತಮ್ಮ ಧರ್ಮ ಪರವಾದ ನಂಬಿಕೆಗಳು, ಆಚರಣೆಗಳ ಆಧಾರವಾಗಿ ಯಾವ ವ್ಯಕ್ತಿಯೂ ಬೇಧಭಾವನೆಗೆ ಗುರಿಯಾಗಬಾರದೆಂದು ನೀವು ಹೋರಾಟ ಪ್ರಾರಂಭಿಸ ಬಹುದು. ಧರ್ಮ ಪರವಾದ ದಬ್ಬಾಳಿಕೆಯಗಳಿಗೆಲ್ಲಾ ಕೊನೆ ಹೇಳಬೇಕೆಂಬ ಆಲೋಚನೆಯ ಮೇಲೆ ಇದು ಆಧಾರಪಟ್ಟಿದೆ. ಜಾತ್ಯಾತೀತತೆಯ ಸಾರಾಂಶವು ಇದೇ. ಭಾರತ ದೇಶದ ಪೂರ್ವಾಪರ ಸಂಬಂಧದಲ್ಲಿ ಇದರ ಅರ್ಥವೇನೋ ಈ ಅಧ್ಯಾಯದಲ್ಲಿ ತಿಳಿದುಕೊಳ್ಳೋಣ.

- ಈ ಅಧ್ಯಾಯದಕ್ಕೆ ಮೇಲೆ ಇರುವ ಪರಿಚಯವನ್ನು ಮತ್ತೊಂದು ಸಲ ಓದಿರಿ. ಈ ಸಮಸ್ಯೆಗೆ ಪ್ರತಿಕಾರ ಚರ್ಯೆ ಸರಿಯಾದುದು ಏಕೆ ಅಲ್ಲ? ವಿವಿಧ ಗುಂಪುಗಳು ಈ ಪದ್ದತಿಯನ್ನು ಅನುಸರಿಸಿದರೆ ಏನಾಗುತ್ತದೆ?

ಧರ್ಮ ಕಾರಣವಾಗಿ ಭೇಧ ಭಾವನೆ, ಕಿರುಕುಳಗಳು, ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸದಂತೆ ಮಾಡುವುದು, ಅಂತಹವುಗಳಿಗೆ ಚರಿತ್ರೆಯಲ್ಲಿ ಎಷ್ಟೋ ಉದಾಹರಣೆಗಳಿವೆ. ಜರ್ಮನಿಯಲ್ಲಿ ಯಹೂದಿಗಳನ್ನು ಹಿಂಸಿಸಿ ಲಕ್ಷಾಂತರ ಜನರನ್ನು ಹಿಟ್ಲರ್ ಸಾಯಿಸುವುದು ನೀವು ಓದಿರುತ್ತೀರಿ. ಆದರೆ ಈಗ ಯಹೂದಿಗಳ ದೇಶವಾದ ಇಜ್ರಾಯಿಲ್ ತಮ್ಮ ದೇಶದಲ್ಲಿ ಮುಸ್ಲಿಂ, ಕ್ರೈಸ್ತವ ಅಲ್ಪಸಂಖ್ಯಾತ ವರ್ಗಗಳನ್ನು ಎಷ್ಟೋ ಕಿರುಕುಳಗಳಿಗೆ ಗುರಿಮಾಡುತ್ತದೆ. ಸಾದಿ ಅರೇಬಿಯಾದಲ್ಲಿ ಮುಸ್ಲಿಂಮರಲ್ಲದವರನ್ನು ದೇವಾಲಯ, ಪ್ರಾರ್ಥನಾ ಮಂದಿರಗಳೂ ಕಟ್ಟಿಕೊಳ್ಳುವುದಕ್ಕೆ ಅನುಮತಿಸುವುದಿಲ್ಲ, ಪ್ರಾರ್ಥನೆಗಳಿಗಾಗಿ ಬಹಿರಂಗ ಪ್ರದೇಶದಲ್ಲಿ ಸಮಾವೇಶಗೊಳ್ಳಲು ಅವಕಾಶವಿಲ್ಲ.

ಮೇಲೆ ತಿಳಿಸಿದ ಉದಾಹರಣೆಗಳಲ್ಲಿ ಒಂದು ಧಾರ್ಮಿಕ ವರ್ಗದ ಪ್ರಜೆಗಳು ಮತ್ತೊಂದು ಧಾರ್ಮಿಕ ವರ್ಗದ ಪ್ರಜೆಗಳ ಬಗ್ಗೆ ಭೇಧ ಭಾವನೆಯನ್ನು ತೋರಿಸುತ್ತಿದ್ದರು. ಅಥವಾ ಅವರನ್ನು ಹಿಂಸಿಸುತ್ತಿದ್ದರು. ದೇಶದ ಸರಕಾರವು ಇತರ ಧರ್ಮಗಳಿಗೆ ಅವಕಾಶವಿಲ್ಲದಂತೆ ಒಂದು ಧರ್ಮಕ್ಕೆ ಅಧಿಕಾರಿಕ ಗುರುತನ್ನು ಕೊಟ್ಟಾಗ ಇಂತಹ ಬೇಧ ಭಾವನೆಗಳು ಹೆಚ್ಚಾಗಿ ಇರುವ ಅವಕಾಶಗಳು ಹೆಚ್ಚು. ತಮ್ಮ ಧರ್ಮದ ಕಾರಣವಾಗಿ ಬೇಧ ಭಾವನೆಗೆ ಗುರಿಯಾಗು ವುದನ್ನು ಯಾರೂ ಇಚ್ಛಿಸುವುದಿಲ್ಲ. ಇನ್ನೊಂದು ಧರ್ಮವು ತಮ್ಮ ಮೇಲೆ ಆಧಿಪತ್ಯವನ್ನು ನಡೆಸುವುದಕ್ಕೆ ಇಷ್ಟ ಪಡುವುದಿಲ್ಲ. ಭಾರತ ದೇಶದಲ್ಲಿ ಧಾರ್ಮಿಕ ಕಾರಣವಾಗಿ ಒಬ್ಬ ವ್ಯಕ್ತಿಯ ಬಗ್ಗೆ ಸರಕಾರವು ಭೇಧ ಭಾವನೆಯನ್ನು ತೋರಿಸುವ ಅವಕಾಶ ಇದೆಯಾ?

## ಜಾತ್ಯಾತೀತತೆ ಎಂದರೇನು?

ಹಿಂದಿನ ಅಧ್ಯಾಯದಲ್ಲಿ ನೀವು ರಾಜ್ಯಾಧಿಕಾರದಿಂದ, ಹೆಚ್ಚಿನ ಸಂಖ್ಯಾತರಿಂದ ಭಯೋತ್ಪಾದನೆಗಳಿಗೆ ಗುರಿಯಾಗುವುದರಿಂದ ವ್ಯಕ್ತಿಗಳನ್ನು ಭಾರತ ಸಂವಿಧಾನದಲ್ಲಿ ಪ್ರಾಥಮಿಕ ಹಕ್ಕುಗಳು ಹೇಗೆ ಕಾಪಾಡುತ್ತವೆಯೋ ಓದಿದ್ದಾರೆ. ತಮ್ಮ ಮತ ನಂಬಿಕೆಗಳೊಂದಿಗೆ, ತಾವು ಅವುಗಳನ್ನು ಅರ್ಥಮಾಡಿಕೊಂಡಿರುವುದರ ಅನುಗುಣವಾಗಿ ಜೀವಿಸುವುದಕ್ಕೆ ವ್ಯಕ್ತಿಗಳಿಗೆ ಭಾರತ ಸಂವಿಧಾನವು ಸ್ವತಂತ್ರ್ಯ ನೀಡುತ್ತದೆ ಎಲ್ಲರಿಗೂ ಧಾರ್ಮಿಕ ಸ್ವಾತಂತ್ರ್ಯ ಎಂಬ ಭಾವನೆಗೆ ಅನುಗುಣವಾಗಿ ಧರ್ಮವನ್ನು, ಸರಕಾರದ ಅಧಿಕಾರವನ್ನು ಭಾರತ ದೇಶ ಬೇರೆ ಮಾಡಿದೆ. ಸರಕಾರದಿಂದ ಧರ್ಮವನ್ನು ಬೇರೆ ಮಾಡುವುದನ್ನು ಜಾತ್ಯಾತೀತತೆ ಎನ್ನುವರು.

SCERT TELANGANA

## ಸರಕಾರದಿಂದ ಮತವನ್ನು ಬೇರೆ ಮಾಡುವುದು ಏಕೆ ಮುಖ್ಯ ?

ಮೇಲೆ ತಿಳಿಸಿದಂತೆ ಜಾತ್ಯಾತೀತತೆಯಲ್ಲಿ ಮುಖ್ಯವಾದ ಅಂಶವು ಸರಕಾರದ ಅಧಿಕಾರದಿಂದ ಧರ್ಮವನ್ನು ಬೇರೆ ಮಾಡುವುದು. ಒಂದು ದೇಶವು ಪ್ರಜಾ ಪ್ರಭುತ್ವಕ್ಕೆ ಬದ್ಧವಾಗಿ ಕೆಲಸ ಮಾಡಬೇಕಾದರೆ ಇದು ಮುಖ್ಯ . ಪ್ರಪಂಚದಲ್ಲಿ ಸುಮಾರು ಎಲ್ಲಾ ದೇಶಗಳಲ್ಲಿ ಒಂದಕ್ಕಿಂತ ಹೆಚ್ಚಿನ ಧರ್ಮಗಳ ಪ್ರಜೆಗಳು ವಾಸಿಸುತ್ತಿದ್ದಾರೆ. ಈ ಧರ್ಮಗಳಲ್ಲಿ ಯಾವುದೋ ಒಂದು ಧರ್ಮವು ಹೆಚ್ಚಿನ ಜನರನ್ನು ಕೂಡಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಇರುವ ಧರ್ಮ ವೃಂದವು ಪ್ರಭುತ್ವಾಧಿಕಾರದೊಳಗೆ ಬಂದರೆ, ಈ ಅಧಿಕಾರವನ್ನು, ಆರ್ಥಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಇತರ ಧರ್ಮಕ್ಕೆ ಸೇರಿದ ವ್ಯಕ್ತಿಗಳನ್ನು ಹಿಂಸಿಸಬಹುದು. ಬೇಧ ಭಾವನೆಗೆ ಗುರಿ ಮಾಡಬಹುದು. ಹೆಚ್ಚಿನ ಸಂಖ್ಯಾತರ ಅಧಿಪತ್ಯದಿಂದ ಈ ಅಲ್ಪ ಸಂಖ್ಯಾತ ಪ್ರಜೆಗಳು ಬೇಧ ಭಾವನೆಗೆ, ಒತ್ತಡಕ್ಕೆ ಗುರಿಯಾಗಬಹುದು. ಕೆಲವೊಂದು ಸಲ ಸಾಯಿಸಲ್ಪಡಬಹುದು. ಹೆಚ್ಚಿನ ಸಂಖ್ಯೆಯಲ್ಲಿರುವವರು, ಕಡಿಮೆ ಸಂಖ್ಯೆಯಲ್ಲಿರುವವರನ್ನು ಸುಲಭವಾಗಿ ತಮ್ಮ ಧರ್ಮವನ್ನು ಅನುಸರಿಸದಂತೆ ಮಾಡಬಹುದು. ಧರ್ಮದೊಂದಿಗೆ ಸಂಬಂಧವಿಲ್ಲದಂತೆ ಪ್ರತಿಯೊಬ್ಬ ವ್ಯಕ್ತಿಗೂ ಪ್ರಜಾ ಪ್ರಭುತ್ವ ಸಮಾಜವು ನೀಡುವ ಹಕ್ಕುಗಳು ಧರ್ಮದ ದಬ್ಬಾಳಿಕೆಯಿಂದ ಉಲ್ಲಂಘಿಸಲ್ಪಡುತ್ತವೆ. ಅಂದರೆ ಹೆಚ್ಚಿನ ಸಂಖ್ಯೆಯವರ ದಬ್ಬಾಳಿಕೆಯನ್ನು ತಡೆಯಬೇಕಾದರೂ, ಪ್ರಾಥಮಿಕ ಹಕ್ಕುಗಳ ಉಲ್ಲಂಘನೆ ಯಾಗದಂತೆ ನೋಡಬೇಕಾದರೂ ಪ್ರಜಾ ಪ್ರಭುತ್ವ ಸಮಾಜದಲ್ಲಿ ಸರಕಾರ ಅಧಿಕಾರದಿಂದ ಧರ್ಮವನ್ನು ಬೇರೆ ಮಾಡುವುದು ಬಹಳ ಮುಖ್ಯವಾಗುತ್ತದೆ.

ವ್ಯಕ್ತಿಗಳಿಗೆ ಅವರ ಧರ್ಮವನ್ನು ಬಿಟ್ಟು ಕೊಟ್ಟು ಮತ್ತೊಂದು ಧರ್ಮವನ್ನು ಸ್ವೀಕರಿಸುವುದಕ್ಕೆ, ಧರ್ಮ ಬೋಧನೆಗಳನ್ನು ವಿಭಿನ್ನವಾಗಿ ವಿಶ್ಲೇಷಿಸುವುದಕ್ಕೆ ಸ್ವೇಚ್ಛೆಯನ್ನು ಕಾಪಾಡುವುದಕ್ಕೆ ಸಹ ಪ್ರಜಾ ಪ್ರಭುತ್ವ ಸಮಾಜದಲ್ಲಿ ಸರಕಾರದ ಅಧಿಕಾರದಿಂದ ಧರ್ಮವನ್ನು ಬೇರೆ ಮಾಡುವುದು ಮುಖ್ಯವಾಗುತ್ತದೆ.



- ಒಂದೇ ಧರ್ಮದಲ್ಲಿ ಬೇರೆ ಬೇರೆ ದೃಷ್ಟಿಕೋನ ಇರಬಹುದಾ? ತರಗತಿಯಲ್ಲಿ ಚರ್ಚಿಸಿರಿ.

## ಭಾರತ ದೇಶದ ಜಾತ್ಯಾತೀತತೆ ಏನು?

ಭಾರತ ದೇಶವು ಜಾತ್ಯತೀತತೆಯಿಂದ ಕೂಡಿರಬೇಕೆಂದು ಭಾರತ ಸಂವಿಧಾನವು ನಿರ್ದೇಸಿಸುತ್ತದೆ. ಈ ಕೆಳಗಿನ ಗುರಿಗಳನ್ನು ಜಾತ್ಯಾತೀತ ದೇಶವು ಮಾತ್ರವೇ ಸಾಧಿಸುವುದೆಂದು ಭಾರತ ಸಂವಿಧಾನವು ಭಾವಿಸುತ್ತದೆ.

1. ಒಂದು ಧಾರ್ಮಿಕ ವರ್ಗವು ಮತ್ತೊಂದು ವರ್ಗದ ಮೇಲೆ ದಬ್ಬಾಳಿಕೆ ಮಾಡಬಾರದು.
2. ಒಂದೇ ಧರ್ಮದಲ್ಲಿಯ ಕೆಲವು ಜನರ ಮೇಲೆ ಇನ್ನೂ ಸ್ವಲ್ಪ ಜನ ಅಧಿಕಾರ ಚಲಾಯಿಸಬಾರದು.
3. ಸರಕಾರವು ಯಾವ ಒಂದು ಧರ್ಮವನ್ನು ವ್ಯಕ್ತಿಗಳ ಮೇಲೆ ಹೇರಬಾರದು. ವ್ಯಕ್ತಿಗಳ ಧಾರ್ಮಿಕ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಬಾರದು.

ಮೇಲೆ ತಿಳಿಯಪಡಿಸಿದ ದಬ್ಬಾಳಿಕೆಗಳನ್ನು ನಿವಾರಿಸುವುದಕ್ಕೆ ಭಾರತ ದೇಶವು ಬೇರೆ ಬೇರೆ ವಿಧಾನಗಳನ್ನು ಅವಲಂಭಿಸುತ್ತದೆ. ಮೊದಲನೆಯದಾಗಿ ಅದು ಧರ್ಮಕ್ಕೆ ದೂರವಾಗಿ ಇರುತ್ತದೆ. ಭಾರತ ದೇಶವು ಒಂದು ಧರ್ಮ ವರ್ಗದ ಮುಖಾಂತರ ಆಡಳಿತ ನಡೆಸಲಾಗುವುದಿಲ್ಲ. ಅದು ಯಾವ ಧರ್ಮವನ್ನು ಸಮರ್ಥಿಸುತ್ತಿಲ್ಲ. ಭಾರತ ದೇಶದಲ್ಲಿ

SCERT TELANGANA

ನ್ಯಾಯ ಸ್ಥಾನಗಳು, ಪೋಲೀಸ್ ಸ್ಟೇಷನ್‌ಗಳು (ರಕ್ಷಕ ಭಟ ನಿಲಯಗಳು)ಸರಕಾರದ ಪಾಠಶಾಲೆಗಳೂ, ಕಛೇರಿಗಳಂತಹ ಸರಕಾರದ ಸ್ಥಳಗಳಲ್ಲಿ ಯಾವ ಒಂದು ಧಾರ್ಮಿಕ ಚಿಹ್ನೆಗಳನ್ನು ಪ್ರದರ್ಶಿಸಬಾರದು. ಯಾವ ಧರ್ಮವನ್ನು ಪ್ರೋತ್ಸಾಹಿಸಬಾರದು..

ಎರಡನೆಯದು ದಬ್ಬಾಳಿಕೆಯನ್ನು ನಿವಾರಿಸಲು ಭಾರತದೇಶ ಜ್ಯಾತ್ಯಾತೀತತೆ ಜೋಕ್ಯೆ ಮಾಡಿಕೊಳ್ಳದಂತೆ ಇರುವುದು ಎನ್ನುವ ವಿಧಾನವನ್ನು ಸಹ ಅನುಸರಿಸುತ್ತದೆ. ಎಲ್ಲಾ ಧರ್ಮಗಳ ಭಾವನೆಗಳನ್ನು ಗೌರವಿಸುವುದಕ್ಕೆ, ಧರ್ಮಆಚಾರಗಳಲ್ಲಿ ತಲೆ ಹಾಕದಂತೆ ಇರುವುದಕ್ಕೆ ಕೆಲವು ಧರ್ಮಗಳಿಗೆ ಭಾರತ ಸರಕಾರವು ಕೆಲವು ರಿಯಾಯಿತಿಗಳನ್ನು ಕೊಡುತ್ತದೆ.

ಮೂರನೇಯದು ಕುಲಗಳ ಬಗ್ಗೆ ಬೇಧ ಭಾವನೆ, ಹೊರಹಾಕುವಿಕೆಯಂತಹವುಗಳನ್ನು ನಿವಾರಿಸುವುದಕ್ಕೆ ಭಾರತ ಸಂವಿಧಾನವು ಅಸ್ಪೃಶ್ಯತೆಯನ್ನು ನಿಷೇಧಿಸುತ್ತದೆ. ಅಂದರೆ ಈ ದೇಶ ಪೌರರಾದ ಕೆಳ ಜಾತಿಗಳ ಪ್ರಜೆಗಳ ಪ್ರಾಥಮಿಕ ಹಕ್ಕುಗಳಿಗೆ ಭಂಗ ಉಂಟಾಗದಂತೆ ಅವರನ್ನು ಬೇಧ ಭಾವನೆ ಗಳಿಂದ ಹೊರ ಹಾಕುವುದಕ್ಕೆ ಗುರಿಮಾಡುವ ಸಾಮಾಜಿಕ ಆಚಾರಗಳನ್ನು ಕೊನೆಗೊಳಿಸುವುದಕ್ಕೆ ಭಾರತ ದೇಶವು ಧರ್ಮದಲ್ಲಿ ಮಧ್ಯಸ್ತಿಕೆವಹಿಸಿಕೊಳ್ಳುತ್ತದೆ. ಅದೇ ವಿಧವಾಗಿ ವಂಶಪಾರಂಪರ್ಯದಲ್ಲಿ ಸಮಾನ ಆಸ್ತಿ ಹಕ್ಕನ್ನು ಕಾಪಾಡುವುದಕ್ಕೆ ಪ್ರಜೆಗಳ ಧರ್ಮ ಆಧಾರಿತ "ಪರ್ಸನಲ್ ಲಾ" ಗಳಲ್ಲಿಯ ದೇಶವು ಮಧ್ಯ ಪ್ರವೇಶ ಮಾಡಬೇಕಾಗಿ ಬರುವುದು.

ಸರಕಾರವು ತಲೆದೋರುವುದು ಬೆಂಬಲ ರೂಪದಲ್ಲಿ ಸಹ ಇರಬಹುದು. ಧರ್ಮ ವರ್ಗಗಳು ತಮ್ಮ ಸ್ವತಃ ಪಾಠಶಾಲೆಗಳು, ಕಳಾ ಶಾಲೆಗಳು ಸ್ಥಾಪಿಸಿಕೊಳ್ಳುವ ಹಕ್ಕನ್ನು ಭಾರತ ಸಂವಿಧಾನ ಕಲ್ಪಿಸುತ್ತದೆ. ಅಂತಹವುಗಳಿಗೆ ಆರ್ಥಿಕ ಬೆಂಬಲ ಸಹ ಕೊಡುತ್ತದೆ.

- ಇತರ ಪ್ರಜಾ ಪ್ರಭುತ್ವ ದೇಶಗಳೊಂದಿಗೆ ಹೋಲಿಸಿದರೆ ಭಾರತ ಜಾತ್ಯಾತೀತತೆ ಯಾವ ರೀತಿ ಭಿನ್ನವಾಗಿದೆ ?

ಭಾರತ ಜಾತ್ಯಾತೀತ ವಿಧಾನವು ಧರ್ಮಗಳಲ್ಲಿ ಮಧ್ಯಸ್ತಿಕೆವಹಿಸಿ ಕೊಳ್ಳುತ್ತದೆ. ಅಸ್ಪೃಶ್ಯತೆಯನ್ನು ನಿಷೇಧಿಸುವುದಕ್ಕೆ ಭಾರತ ಸಂವಿಧಾನವು ಹಿಂದೂ ಧರ್ಮ ಆಚರಣೆಗಳಲ್ಲಿ ಮಧ್ಯಸ್ತಿಕೆ ಮಾಡಿಕೊಂಡಿರುವ ವಿಧಾನವನ್ನು ಕುರಿತು ನೀವು ಓದಿದ್ದೀರಿ. ಭಾರತ ಜಾತ್ಯಾತೀತ ವಿಧಾನದಲ್ಲಿ ಮತದಿಂದ ಸರಕಾರವು ಪೂರ್ತಿಯಾಗಿ ಬೇರೆ ಮಾಡದಿದ್ದಾಗ್ಯೂ ಧರ್ಮಗಳಿಂದ ಅದು ಸೂತ್ರ ಬದ್ಧವಾದ ದೂರದಲ್ಲಿ ಇರುತ್ತದೆ. ಇದರ ಅರ್ಥ ಧರ್ಮದಲ್ಲಿ ದೇಶವು ಜೋಕ್ಯವಹಿಸಿಕೊಳ್ಳುವುದು.

ಭಾರತ ದೇಶವು ಜಾತ್ಯಾತೀತ ರಾಷ್ಟ್ರ, ಧಾರ್ಮಿಕ ಪ್ರಚಾರವನ್ನು ನಿವಾರಿಸುವುದಕ್ಕೆ ಅದು ಅನೇಕ ವಿಧಗಳಾಗಿ ಕೆಲಸ ಮಾಡುತ್ತದೆ. ಜಾತ್ಯಾತೀತತೆ ಸೂತ್ರಗಳ ಮೇಲೆ ಆಧಾರಪಟ್ಟ ಪ್ರಾಥಮಿಕ ಹಕ್ಕುಗಳಿಗೆ ಭಾರತ ಸಂವಿಧಾನವು ಭರವಸೆ ಕೊಡುತ್ತದೆ. ಆದರೆ ಈ ಹಕ್ಕುಗಳಿಗೆ ಭಾರತ ದೇಶದಲ್ಲಿ ಭಂಗ ಉಂಟಾಗುವುದೆಂದಲ್ಲ. ಇಂತಹ ಉಲ್ಲಂಘನೆಗಳು ನಡೆಯುತ್ತವೆ ಆದುದರಿಂದ ಇವುಗಳನ್ನು ನಿವಾರಿಸುವುದಕ್ಕೆ ಸಂವಿಧಾನ ವಿಧಾನವು ಅವಸರ. ಇಂತಹ ಹಕ್ಕುಗಳು ಇವೆ ಎಂದು ತಿಳಿಯುವುದರಿಂದ ಅವು ಉಲ್ಲಂಘಿಸಲ್ಪಟ್ಟಾಗ ಸ್ಪಂದಿಸಿ, ಉಲ್ಲಂಘನೆಗಳನ್ನು ವಿರೋಧಿಸುತ್ತಾ ಚರ್ಯೆಗಳಿಗೆ ಇಳಿಯುತ್ತದೆ.

- ಇತ್ತೀಚಿನ ಕಾಲದಲ್ಲಿ ಭಾರತ ದೇಶದಲ್ಲಿ ಯಾವ ಪ್ರಾಂತದಲ್ಲಾದರೂ ಸಂವಿಧಾನದಲ್ಲಿನ ಜಾತ್ಯಾತೀತ ಆದರ್ಶಗಳು ಉಲ್ಲಂಘಿಸಲ್ಪಟ್ಟ ಘಟನೆಗಳು ಕೇಳಿದ್ದೀರಾ? ಧರ್ಮದ ಕಾರಣದಿಂದು ವ್ಯಕ್ತಿಗಳು ಹಿಂಸೆಗೊಳಪಟ್ಟು, ಸಾಯಿಸಲ್ಪಟ್ಟ ಘಟನೆಗಳು ಕೇಳಿದ್ದೀರಾ?

2004 ಫೆಬ್ರವರಿಯಲ್ಲಿ ಮುಸ್ಲಿಂ ಹೆಂಗಸರು ಕಟ್ಟಿಕೊಳ್ಳುವ ತಲೆ ಬಟ್ಟೆ (ಬುರುಕ) ಯಾದರ ಟೋಪಿ, ಕ್ರೈಸ್ತವ ಶಿಲುಬೆಗಳಂತಹ ಧರ್ಮ, ರಾಜಕೀಯ ಗುರ್ತುಗಳನ್ನು ಪಾಠಶಾಲೆಯ ವಿದ್ಯಾರ್ಥಿಗಳು ಹಾಕಿಕೊಳ್ಳದಂತೆ ಫ್ರಾನ್ಸ್ ಸರಕಾರ ಒಂದು ಕಾನೂನನ್ನು



SCERT TELANGANA

ತಯಾರಿಸಿದೆ. ಫ್ರಾನ್ಸ್ ದೇಶದ ಕೆಳಗೆ ಒಂದೊಂದು ಬಾರಿ ವಸಾಹತು ದೇಶಗಳಾಗಿರುವ ಅಲ್ಜೀರಿಯಾ, ಟ್ಯುನೀಸಿಯಾ, ಮೆರಾಕ್ಕೋ ದೇಶಗಳಿಂದ ಬಂದು ಫ್ರಾನ್ಸ್ ದೇಶದಲ್ಲಿ ವಾಸಿಸುತ್ತಿರುವವರು. ಈ ಕಾನೂನನ್ನು ತೀವ್ರವಾಗಿ ವಿರೋಧಿಸಿದರು. 1960 ರಲ್ಲಿ ಫ್ರಾನ್ಸ್ ದೇಶದಲ್ಲಿ ಕಾರ್ಮಿಕರ ಕೊರತೆ ತೀವ್ರವಾಗಿ ಇರುವುದರಿಂದ ಆದೇಶಗಳಿಂದ ವಲಸೆ ಬಂದು ಕೆಲಸ ಮಾಡುವುದಕ್ಕೆ ವೀಸಾಗಳು ಕೊಟ್ಟಿದೆ. ಈ ವಲಸೆ ಕುಟುಂಬಗಳ ಹೆಣ್ಣು ಹುಡುಗಿಯರು ಶಾಲೆಗೆ ಹೋಗುವಾಗ ತಲೆಗೆ ಬಟ್ಟೆಯನ್ನು ಕಟ್ಟಿಕೊಳ್ಳುತ್ತಾರೆ. ಈ ಕಾನೂನು ಮಾಡಿದ ನಂತರ ತಲೆಗೆ ಬಟ್ಟೆ ಕಟ್ಟಿ ಕೊಂಡಿದ್ದುದರಿಂದ ಈ ಹುಡುಗಿಯರು ಶಾಲೆಯಿಂದ ಬಹಿಷ್ಕರಿಸಲ್ಪಟ್ಟರು.

## ಮುಖ್ಯ ಪದಗಳು

1. ಪ್ರಾಥಮಿಕ ಹಕ್ಕುಗಳು 2. ಪ್ರಜಾ ಪ್ರಭುತ್ವ 3. ಭಯೋತ್ಪಾತ 4. ವ್ಯಕ್ತಿಗತ ಕಾನೂನು (ಪರ್ಸನಲ್ ಲಾ)
5. ಬಲತ್ಕಾರ 6. ವ್ಯಾಖ್ಯಾನಿಸುವ ಹಕ್ಕು 7. ಮಧ್ಯಸ್ಥಿಕೆ ವಹಿಸುವದು

## ಕಲಿಕೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಿರಿ.

1. ನಿಮ್ಮ ಪರಿಸರ ಪ್ರದೇಶಗಳಲ್ಲಿ ವಿವಿಧ ಧರ್ಮದ ಆಚಾರಗಳ ಪಟ್ಟಿ ತಯಾರು ಮಾಡಿರಿ. ವಿವಿಧ ರೀತಿಯ ಪ್ರಾರ್ಥನೆಗಳು, ದೇವರನ್ನು ಪೂಜಿಸುವ ವಿಧಾನಗಳು, ಪವಿತ್ರ ಸ್ಥಳಗಳು ಭಕ್ತಿ ಹಾಡುಗಳು, ಸಂಗೀತ ಮೊದಲಾದವು. ಧಾರ್ಮಿಕ ಆಚರಣೆ ಸ್ವಾತಂತ್ರ್ಯವನ್ನು ಇದು ಸೂಚಿಸುತ್ತದೆಯಾ?
2. ನಮ್ಮ ಧರ್ಮವು ಶಿಶು ಮರಣಗಳನ್ನು ಅನುಮತಿಸುತ್ತದೆಂದು ಒಂದು ಧರ್ಮದ ಪ್ರಜೆಗಳು ಅಂದರೆ ಸರಕಾರವು ಅದರಲ್ಲಿ ಜೋಕ್ಯವಹಿಸುತ್ತದೆಯಾ? ನಿಮ್ಮ ಸಮಾಧಾನಕ್ಕೆ ಕಾರಣಗಳು ತಿಳಿಸಿರಿ.
3. ಒಂದೇ ಧರ್ಮದಲ್ಲಿ ಬೇರೆ ಬೇರೆ ಅವಲೋಕನೆ (ನೋಟ) ಗಳಿಗೆ ಸಂಬಂಧಿಸಿ ಕೆಲವು ಉದಾಹರಣೆಗಳು ಸಂಗ್ರಹಿಸಿರಿ.
4. ಭಾರತ ರಾಷ್ಟ್ರವು ಧರ್ಮಕ್ಕೆ ದೂರವಾಗಿರುತ್ತದೆ. ಧರ್ಮದಲ್ಲಿ ಮಧ್ಯಸ್ತಿಕೆವಹಿಸಿಕೊಳ್ಳುತ್ತದೆ. ಈ ಭಾವನೆ ಗಲಭೆ ಸೃಷ್ಟಿಸಬಹುದು. ಈ ಅಧ್ಯಾಯದಲ್ಲಿ ಕೊಟ್ಟ ಉದಾಹರಣೆಗಳೊಂದಿಗೆ ಸಹ ನಿಮಗೆ ಅನುಭವಕ್ಕೆ ಬಂದ / ತಿಳಿದ ಇತರ ಉದಾಹರಣೆಗಳೊಂದಿಗೆ ಇದನ್ನು ಮತ್ತೊಂದು ಸಲ ಚರ್ಚಿಸಿರಿ.
5. ಜಾತ್ಯಾತೀತತೆ ಎಂದರೇನು? ಎಂಬ ಭಾಗವನ್ನು ಓದಿ ಅದರ ಮೇಲೆ ವ್ಯಾಖ್ಯಾನಿಸಿರಿ.

SCERT TELANGANA

# ಘಟಕ 21 ಆಧುನಿಕ ಕಾಲದಲ್ಲಿನ ಕೆಲೆಗಳು ಮತ್ತು ಕಲಾಕಾರರು









- ಕೆಲವು ಕಲೆಗಳು ಪ್ರದರ್ಶನೆಯ ಭಾವಚಿತ್ರಗಳು ಇಲ್ಲಿವೆ. ಅವುಗಳಲ್ಲಿ ನೀವು ಎಷ್ಟನ್ನು ಗುರ್ತಿಸಬಲ್ಲಿರಿ? ಫೋಟೋ ಕೆಳಗೆ ಅವುಗಳ ಹೆಸರುಗಳನ್ನು ಬರೆಯಿರಿ?
- ಈ ಕಲೆಗಳಲ್ಲಿ ಯಾವುದಾದರೂ ನಿಮ್ಮ ಊರಲ್ಲಿ ಪ್ರದರ್ಶನಗೊಂಡಿದೆಯಾ ? ನಿಮ್ಮ ಅನುಭವವನ್ನು ತರಗತಿಯಲ್ಲಿ ಹಂಚಿಕೊಳ್ಳಿರಿ.

ಈ ಅಧ್ಯಾನದಲ್ಲಿ 20ನೇ ಶತಮಾನದಲ್ಲಿ ಪ್ರದರ್ಶನಗೊಂಡ ಕಲಾಕಾರರ ಬಗ್ಗೆ ತಿಳಿದುಕೊಳ್ಳೋಣ. ಹಾಡು, ನಾಟ್ಯ, ನಾಟಕಗಳಂತಹ ಪ್ರದರ್ಶಿಸುವವರನ್ನು ಪ್ರದರ್ಶನ ಕಲಾಕಾರರು ಎನ್ನುವರು. ಚಿತ್ರ ಕಲಾಕಾರರು, ಶಿಲ್ಪಕಾರರು ಲೇಖಕರಂತಹ ಕಲಾಕಾರರಿಗೂ ಈ ಕಲಾಕಾರರಿಗೂ ವ್ಯತ್ಯಾಸವಿದೆ. ಪ್ರದರ್ಶನ ಕಲಾಕಾರರು ತಮ್ಮ ಕೆಲಸವನ್ನು ಸ್ಥಿರಪಡಿಸಿಕೊಳ್ಳಲಾರರು. ಪ್ರತಿಸಲ ಅವರು ಹೊಸದಾಗಿ ಪ್ರದರ್ಶಿಸಬೇಕಾಗುತ್ತದೆ.

ಹೆಚ್ಚಾಗಿ ಜಾನಪದ ಕಲೆಯಲ್ಲಿ ಪ್ರಜೆಗಳೇ ಪಾಲ್ಗೊಳ್ಳುವರು. ರೈತರು, ಗಿರಿಜನ ಸ್ತ್ರೀಯರು, ಪುರುಷರು ತಮ್ಮ ಕೆಲಸದ ವೇಳೆಯಲ್ಲಿ ಅಥವಾ ಹಬ್ಬಹರಿದಿನ, ಬಿಡುವಿನ ವೇಳೆಗಳಲ್ಲಿ ಹಾಡಿ, ಕುಣಿದು ಕುಪ್ಪಳಿಸುವರು. ತೆಲಂಗಾಣ ರೈತರು ದಿನನಿತ್ಯ ಶ್ರಮದಿಂದ ಚುಟ್ಟು ಕಾಮುಡು ಎನ್ನುವ ಕಲೆಯ ರೂಪ ತಾಳಿತು.ಕೆಲಸದ ವೇಳೆಯಲ್ಲಿ ಹಾಡುವ ಹಾಡುಗಳೇ ನಾಟ್ಯ ಮಾಡುತ್ತಾ ಹಾಡುವ ಹಾಡುಗಳಾಗಿ ಮಾರ್ಪಟ್ಟಿವೆ. ಸಾಮಾನ್ಯವಾಗಿ ಹುಣ್ಣಿಮೆಯ ರಾತ್ರಿಗಳಲ್ಲಿ ಮಹಿಳೆಯರು ಚುಟ್ಟು ಕಾಮುಡು ಹಾಡುಗಳನ್ನು ಹಾಡುತ್ತಾ ಲಯಬದ್ದವಾಗಿ ತಮಟೆ ಬಾರಿಸುತ್ತಾ ಹಾಡುತ್ತಾರೆ. ಅದೇ ರೀತಿ ಹೆಣ್ಣು ಮಕ್ಕಳು ಗಿಡಗಳಿಗೆ ಜೋಕಾಲಿ ಕಟ್ಟಿ ತೂಗುತ್ತಾ ಜೋಕಾಲಿ ಹಾಡುಗಳು, ಲಕ್ಷ್ಮೀ, ಗೌರಿ ದೇವತೆಗಳಿಗೆ ಸಂಬಂಧಿಸಿದ ಭಕ್ತಿಯ ಕಥೆ ಹೇಳುವ ಹಾಡುಗಳನ್ನು ಹಾಡುತ್ತಿದ್ದರು. ಅನೇಕ ಇತರ ಕಲಾರೂಪಗಳನ್ನು ಪ್ರತ್ಯೇಕ ಬೃಂದಗಳಾಗಿ ಪ್ರದರ್ಶಿಸುವರು

- ಪ್ರತ್ಯೇಕ ಸಂದರ್ಭಗಳಲ್ಲಿ ಕುಟುಂಬ ಸದಸ್ಯರು ಹಾಡುವ ಹಾಡುಗಳು ಮಾಡುವ ನಾಟ್ಯಗಳ ಬಗ್ಗೆ ನಿಮ್ಮ ತಂದೆ ತಾಯಿ, ಅಜ್ಜಿ ತಾತಂದಿರ ಹತ್ತಿರ ಕೇಳಿ ತಿಳಿದುಕೊಳ್ಳಿ. ನಮೂನೆ ಹಾಡುಗಳ ಒಂದು ಪಟ್ಟಿ ತಯಾರಿಸಿರಿ. ಈಗಿನ ಕಾಲದಲ್ಲಿ ಈ ಪ್ರದರ್ಶನಗಳಲ್ಲಿ ಎಂತಹ ಬದಲಾವಣೆಗಳು ಬಂದಿವೆ ? ನೀವು ತಿಳಿದುಕೊಂಡ ವಿಷಯಗಳನ್ನು ನಿಮ್ಮ ತರಗತಿಯ ಇತರ ವಿದ್ಯಾರ್ಥಿಗಳೊಂದಿಗೆ ಹಂಚಿಕೊಳ್ಳಿ.
- ನಿಮ್ಮಲ್ಲಿ ಯಾರಿಗಾದರೂ ಈ ಹಾಡುಗಳು, ನಾಟ್ಯಗಳು ತಿಳಿದಿದ್ದಲ್ಲಿ ತರಗತಿ ಕೋಣೆಯಲ್ಲಿ ಪ್ರದರ್ಶಿಸಿರಿ.

SCERT TELANGANA

## ವಿವಿಧ ನಾಟ್ಯ ರೂಪಗಳು (Different forms of dances) :

### ಯಕ್ಷಗಾನ :

ಯಕ್ಷಗಾನ ಅಥವಾ ಜಕೂಲ ಭಾಗವತಂ ಅಥವಾ ಬೀದಿ ಭಾಗವತಂ ಒಂದು ಪ್ರಸಿದ್ಧ ತೆಲುಗು ಜಾನಪದ ಕಲಾರೂಪ ಕಲಾಕಾರರು ಲಯಬದ್ಧವಾಗಿ, ನೃತ್ಯವಮಾಡುತ್ತಾ



ಚಿತ್ರ 21.1 ಯಕ್ಷಗಾನ

ಕುಣಿಯುತ್ತಾ ಇರುವುದರಿಂದ ಇದಕ್ಕೆ ಯಕ್ಷಭಾರತ ಎಂದು ಕೂಡ ಕರೆಯುತ್ತಾರೆ. 13ನೇ ಶತಮಾನದಿಂದ ಇದು ಪ್ರಚಾರದಲ್ಲಿ ಬಂದಂತೆ ಪಂಡಿತಾರಾಧ್ಯ ಚರಿತ್ರೆ, ಬಸವ ಪುರಾಣದಂತಹ ಗ್ರಂಥಗಳ ಮೂಲಕ ತಿಳಿಯುತ್ತದೆ. ಬಹಿರಂಗ ಪ್ರದೇಶದಲ್ಲಿ, ನಾಲ್ಕು ರಸ್ತೆಗಳ ಕೂಡಲಿಯಲ್ಲಿ ವೇದಿಕೆಗಳನ್ನು ನಿರ್ಮಿಸಿ ಪ್ರದರ್ಶನಗಳನ್ನು ನೀಡುತ್ತಾರೆ. ಪ್ರಾರಂಭದಲ್ಲಿ ಒಬ್ಬನೇ ಹಾಡುತ್ತಾ ನೃತ್ಯ ಮಾಡುತ್ತಿದ್ದನು. ಹಾಗೆಯೇ ಬಹುಪಾತ್ರಾಭಿನಯವನ್ನು ಕೂಡಾ ಪ್ರದರ್ಶಿಸುತ್ತಿದ್ದರು. ಆದರೆ ಇಂದು ಒಂದೊಂದು ಪಾತ್ರಕ್ಕೂ ಒಬ್ಬೊಬ್ಬ ಕಲಾಕಾರರು ಇದ್ದಾರೆ. ಇದರಲ್ಲಿ ನಟನೆಗಿಂತ ಕಥೆಯ ವಿವರಣೆ ಪ್ರಧಾನವಾದದ್ದು. ಈ ಯಕ್ಷಗಾನವು ಸಂಭಾಷಣೆ, ಹಾಡುಗಳು ಮತ್ತು ಪದ್ಯಗಳನ್ನು ಒಳಗೊಂಡಿರುತ್ತದೆ. ವೇದಿಕೆಯ ಮೇಲೆ ಪ್ರದರ್ಶನ ಕೊಡುವವರ ಜೊತೆಗೆ ತಬಲ, ಹಾರ್ಮೋನಿಯಂ ನುಡಿಸುವವರು, ಕೋರಸ್ ನೀಡುವವರು ಇರುತ್ತಾರೆ. ಪಾತ್ರಾಧಾರರ ಕೈ ಕಾಲುಗಳ ಚಲನೆಗಳು, ಹಾವಾಭಾವಗಳು, ಪಾತ್ರಗಳನ್ನಾಧರಿಸಿ ಪ್ರಾಮುಖ್ಯತೆಯನ್ನಾಧರಿಸಿ ಬೇರೆ ಬೇರೆಯಾಗಿರುತ್ತವೆ. ಪಾತ್ರಗಳಿಗನುಗುಣವಾದ ಬಟ್ಟೆಗಳು, ಆಯುಧಗಳು, ಶಿರಸ್ತ್ರಾಣಗಳನ್ನು ಧರಿಸುತ್ತಾರೆ. ಒಂದೊಂದು ಕಥೆಯಲ್ಲಿ ದೇವತೆಗಳು, ರಾಜರು ಮಂತ್ರಿಗಳು, ಸೈನಿಕರು, ಬ್ರಾಹ್ಮಣರು, ರೈತರು, ಸಾಧಾರಣ ಪ್ರಜೆಗಳು, ವಿಧೂಷಕರು ಮುಂತಾದ ಪಾತ್ರಗಳು ಇರುತ್ತವೆ.

ಸುಗ್ರೀವ ವಿಜಯಂ, ಬಾಲನಾಗವ್ಮ ಕಥೆ, ರಂಬಾರಂಪಾಲ, ಚಿತ್ರಾಂಗದ ವಿಲಾಸ ಮತ್ತು ಕೃಷ್ಣಾರ್ಜುನ ಯುದ್ಧ ಮೊದಲಾದವು ಇವರು ಪ್ರದರ್ಶಿಸುವ ಕೆಲವು ಮುಖ್ಯ ಕಥೆಗಳು. ಆಶ್ರಿತ ಕುಲಕ್ಕೆ ಸೇರಿದವರು ಯಕ್ಷಗಾನವನ್ನು ಪ್ರದರ್ಶಿಸುತ್ತಿದ್ದರು. ಈಗ ಕುಲದೊಂದಿಗೆ ಸಂಬಂಧವಿಲ್ಲದೇ ಈ ಕಲೆಯನ್ನು ಕಲಿತುಕೊಳ್ಳಲು ಮುಂದೆಬರುತ್ತಿದ್ದಾರೆ.

### ಗುಸಾಡಿ (Gusadi) :

ಆದಿಲಾಬಾದ್‌ಗೆ ಸೇರಿದ ರಾಜಗೊಂಡ್ಲು ದೀಪಾವಳಿಯನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಇವರು ಮಾಡುವ ನಾಟ್ಯವನ್ನು ಗುಸಾಡಿ ಎನ್ನುವರು. ಇವರು ನವಿಲು ಗರಿ, ಜಿಂಕೆ ಕೋಡುಗಳಿಂದ ವರ್ಣರಂಜಿತವಾಗಿ ಅಲಂಕರಿಸಿಕೊಳ್ಳುತ್ತಾರೆ. ಇದರೊಂದಿಗೆ ಡಪ್ಪು , ತುಡುಮು, ಪಿಪ್ರಿ, ಕಲಿಕೊಗಳಂತಹ ಸಂಗೀತ ವಾದ್ಯಗಳೊಂದಿಗೆ ಸಂಗೀತ ನುಡಿಸುವರು.



ಚಿತ್ರ 21.2 ಗುಸಾಡಿ

SCERT TELANGANA

### ಸದಿರ್ ನಾಟ್ಯ (Sadir Natyam) :

ಇದು ಒಬ್ಬರೇ ಮಾಡುವ ನಾಟ್ಯ ಅನೇಕ ಶತಮಾನಗಳಿಂದ ದೇವಾಲಯಗಳಲ್ಲಿ ದೇವದಾಸಿಯರು ಈ ನಾಟ್ಯ ಮಾಡುತ್ತಿದ್ದರು. ದಕ್ಷಿಣ ಭಾರತದಲ್ಲಿ ಪ್ರತ್ಯೇಕವಾಗಿ ತಮಿಳು ನಾಡಿನ ರಾಜ ದರ್ಬಾರಿನಲ್ಲಿ ಪ್ರದರ್ಶನ ನೀಡುತ್ತಿದ್ದರು.

### ಲಂಬಾಡಿ (Lambadi) :

ಆಂಧ್ರಪ್ರದೇಶದಲ್ಲಿ ಲಂಬಾಡಿಗಳು ಪಾಕ್ಷಿಕ ಸಂಚಾರಿ ಜಾತಿಯವರು. ಬಿತ್ತುವುದು, ನಾಟುವುದು, ಕೊಯ್ಯುವ ದಿನನಿತ್ಯದ ಕೆಲಸಗಳ ಆಧಾರವಾಗಿ ಅವರ ನಾಟ್ಯಗಳಿರುತ್ತವೆ. ಮಣಿ, ಕನ್ನಡಿಗಳಿಂದ ಹೋಲಿದ ಅವರ ಬಟ್ಟೆಗಳು ಬಹಳ ಆಕರ್ಷಕವಾಗಿರುತ್ತವೆ. ದಸರಾ, ದೀಪಾವಳಿ, ಹೋಲಿಗಳಂತಹ ಹಬ್ಬಗಳಲ್ಲಿ ಅವರು ಪ್ರದರ್ಶನ ನೀಡಿದರೆ ಜನರು ಹಣ ನೀಡುತ್ತಿದ್ದರು.

### ಕುರುವಂಜಿ (Kuravanji) :

ಮಹಿಳೆಯರು ಮಾಡುವ ಬೃಂದನಾಟ್ಯ ಪ್ರತ್ಯೇಕವಾಗಿ ಪ್ರೇಮಿಯ, ಪ್ರೇಮ ಲಭಿಸುವ ಅಂಶವಾಗಿ ಹುಡುಗಿಯರು ಸಾಹಿತ್ಯ ಅಥವಾ ಕವಿತೆಯ ರೂಪದಲ್ಲಿ ಪ್ರದರ್ಶಿಸುವ ಬೃಂದನಾಟ್ಯ.

### ಕೂಚಿಪುಡಿ (Kuchipudi) :

ಆಂಧ್ರಪ್ರದೇಶದಲ್ಲಿನ ಬ್ರಾಹ್ಮಣ ಕೂಚಿಪುಡಿ ಗ್ರಾಮಕ್ಕೆ ಸೇರಿದ ಒಂದು ನೃತ್ಯ ನಾಟಕ. ಇದರಲ್ಲಿನ ಪಾತ್ರಗಳೆಲ್ಲವುಗಳಲ್ಲಿ ಪುರುಷರು ಅಭಿನಯಿಸುತ್ತಾರೆ. ಇದರ ಪುರಾಣ ಸಾಹಿತ್ಯಕ್ಕೆ ಸಂಬಂಧಿಸಿದ ಕಥಾಂಶಗಳಿಂದ ಕೂಡಿದೆ.

ಶತಮಾನಗಳಿಂದ ನಾಟ್ಯಕಲಾಕಾರರು, ಕಥೆ ಹೇಳುವವರು, ಹಾಡುಗಾರರು, ನಾಟಕಕಾರರು ಜನರಿಗೆ ಮನೋರಂಜನೆ, ಸೌಂದರ್ಯ ಪ್ರಜ್ಞೆಯ ಅನುಭವಗಳು ನೀಡುವುದಲ್ಲದೆ ಆಧ್ಯಾತ್ಮಿಕ ಸಂದೇಶಗಳನ್ನು ನೀಡುತ್ತಿದ್ದರು. ಸಮಾಜದಲ್ಲಿನ ದುರಾಚಾರಗಳನ್ನು ವಿಮರ್ಶಿಸಿ ಪ್ರತ್ಯಾಮ್ನಾಯಗಳನ್ನು ಸೂಚಿಸುತ್ತಿದ್ದರು. ವಿಶಾಲವಾದ ಸಾಮಾಜಿಕ ಗುರಿಗಳಿಗಾಗಿ ಪ್ರಜೆಗಳನ್ನು ಸಜ್ಜುಗೊಳಿಸಲು ಈ ಪ್ರದರ್ಶನ ಕಲಾಕಾರರು ಪ್ರಮುಖ ಪಾತ್ರವಹಿಸುತ್ತಿದ್ದರು. ಫಕೀರರ ಹಾಡು, ಬೈರಾಗಿ ಹಾಡು, ದಂಡಗಾನಂ, ಲತ್ಕೋರು ಸಾಬ್‌ರಂತಹ ಸಂಚಾರಿ ಬೈರಾಗಿಗಳು, ಫಕೀರರು ಹಾಡುತ್ತಿದ್ದರು. ಅವು ತೆಲುಗು ಡೆಕ್ಕನಿ, ಉರ್ದುನಲ್ಲಿ ಅಲ್ಲದೇ ಎರಡು ಭಾಷೆಗಳ ಮಿಶ್ರಣವಾಗಿದ್ದವು.

ಬುರ್ರಕಥೆ, ಗೊಲ್ಲಸುದ್ದಲುಗಳಂತಹಾ ಅನೇಕ ಇತರ ಕಲೆಯ ರೂಪಗಳಿಗೆ ದೊಡ್ಡ ಬೃಂದ ಅವಸರ. ಮೊದಲು ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗುವ ಕುರಿ ಕಾಯುವವರು ಈ ಕಲಾರೂಪಗಳನ್ನು ಪ್ರದರ್ಶಿಸುತ್ತಿದ್ದರು. ಇವರಲ್ಲಿ ಕೆಲವರು ವೀರಶೈವದಂತಹ ಮತ ಸಾಂಪ್ರದಾಯಗಳಿಗೆ ಸಂಬಂಧಿಸಿದವರಾಗಿರುತ್ತಿದ್ದರು.

- ಊರೂರು ತಿರುಗಿ ಕಲಾಕಾರರು ಪ್ರದರ್ಶಿಸುವುದನ್ನು ನೀವು ಯಾವುದಾದರೂ ನೋಡಿರುವಿರಾ ? ಅವರು ಯಾರು, ಏನು ಮಾಡುತ್ತಿದ್ದರು, ಪ್ರೇಕ್ಷಕರು ಅವರ ಬಗ್ಗೆ ಹೇಗೆ ವ್ಯವಹರಿಸುತ್ತಿದ್ದರು ಎಂಬ ವಿವರಗಳು ನಿಮ್ಮ ತರಗತಿಯ ವಿದ್ಯಾರ್ಥಿಗಳೊಂದಿಗೆ ಹಂಚಿಕೊಳ್ಳಿರಿ.
- ಅಂತಹಾ ಕಲಾಕಾರರು ನಿಮ್ಮ ಹತ್ತಿರದಲ್ಲಿ ವಾಸಿಸುತ್ತಿದ್ದರೆ ಅವರನ್ನು ಭೇಟಿ ಮಾಡಿ ಅವರ ಕಲೆ, ಜೀವನದ ಬಗ್ಗೆ ತಿಳಿದುಕೊಳ್ಳಿರಿ.

ಪ್ರದರ್ಶನ ಕಲಾಕಾರರು ತಮ್ಮ ಜೀವನೋಪಾಯ ಹೇಗೆ ಸಂಪಾದಿಸಿಕೊಳ್ಳುತ್ತಿದ್ದರು ? ಕೆಲವು ಜನ ಕಲಾಕಾರರು ಪ್ರದರ್ಶನ ನೀಡುತ್ತಾ ಊರೂರು ತಿರುಗುತ್ತಿದ್ದರು. ಇಂತಹ ಕಲಾಕಾರರನ್ನು ಊರಿನ ಪ್ರಮುಖರು ಅಥವಾ ಭೂಸ್ವಾಮಿಗಳಿಂದ ಹಿಡಿದು ಸಾಧಾರಣ ಜನರು ಸಹ ಆದರಿಸುತ್ತಿದ್ದರು. ಗ್ರಾಮದ ಜನರು ಈ ಕಲಾಕಾರರಿಗೆ ಧಾನ್ಯ ನೀಡುತ್ತಿದ್ದರು. ಅವರನ್ನು ಕಲಾಕಾರರನ್ನಾಗಿ ಜನರು ಗೌರವಿಸುತ್ತಿದ್ದರು. ಅವರು ನೀಡುವ ಮನೋರಂಜನೆಗೆ ಜನರು ಅವರನ್ನು ಸ್ವಾಗತಿಸುತ್ತಿದ್ದರು. ಗುಡಿಗಳಲ್ಲಿ ನಡೆಯುವ ಹಬ್ಬಗಳಲ್ಲಿ, ಊರಿನಲ್ಲಿ ನಡೆಯುವ ಉತ್ಸವಗಳಲ್ಲಿ ಇವರು ತಪ್ಪದೇ ಭಾಗವಹಿಸುತ್ತಿದ್ದರು. ಮಳೆ ಬರುತ್ತದೆಂದು, ಕೇಡು ಆಗದಂತೆ ಇರುತ್ತದೆಂದು ನಂಬುವುದರಿಂದ ಜನರು ಇವರಿಂದ ಪ್ರತ್ಯೇಕ ಪ್ರದರ್ಶನ ಏರ್ಪಡಿಸುತ್ತಿದ್ದರು.

ಬಹಳ ಕಲಾಕಾರರು ಊರೂರು ಸುತ್ತದೆ ಚಕ್ರವರ್ತಿ, ರಾಜರು, ಜಮೀನುದಾರರ ಪೋಷಣೆಯಲ್ಲಿ ಇರುತ್ತಿದ್ದರು. ಈ ಕಲೆಯನ್ನು ಅಭ್ಯಸಿಸುತ್ತಾ , ಇತರರಿಗೆ ಕಲಿಸುತ್ತಾ, ದರ್ಬಾರ್‌ನಲ್ಲಿ , ಮಹಲುಗಳಲ್ಲಿ ಪ್ರದರ್ಶನಹಗಳನ್ನು ನೀಡುತ್ತಾ ಇವರು ಕಾಲ ಕಳೆಯುತ್ತಿದ್ದರು.

ಮೊದಲು ನಾವು ಬುರ್ರಕಥೆ, ತೊಗಲುಗೊಂಬೆ ಆಟ ಮುಂತಾದ ಸಂಚಾರ ಕಳಾಕಾರರ ಕುರಿತು ತಿಳಿದುಕೊಳ್ಳೋಣ.

SCERT TELANGANA

## ಬುರ್ರ ಕಥೆ (Burrakatha) :

ಬುರ್ರ ಕಥೆ ಎಂಬುದು ತೆಲಂಗಾಣದಲ್ಲಿ ಕಥೆ ಹೇಳುವ ಕಲಾರೂಪ. 12, 13ನೇ ಶತಮಾನದಲ್ಲಿ ವೀರಶೈವ ಚಳುವಳಿಯ ಹಿನ್ನಲೆಯಲ್ಲಿ ಬುರ್ರಕಥೆ ಏರ್ಪಟಾಯಿತು.

ಇದರಲ್ಲಿ ಪ್ರಧಾನ ಕಥೆಗಾರನ ಬಲಭುಜದ ಮೇಲೆ ಹಾಕಿಕೊಳ್ಳುವ ತಂತಿಯ ವಾದ್ಯವಾದ ತಂಬೂರನ್ನು ಬುರ್ರ ಎನ್ನುವರು. ಸಾಧಾರಣವಾಗಿ ಈ ಕಲೆಯನ್ನು ಪಿಚ್ಚುಗುಂಟ್ಲ ಅಥವಾ ಜಂಗಾಲುಗಳಂತಹ ಕುಲಕ್ಕೆ / ಗಿರಿಜನರಿಗೆ ಸಂಬಂಧಿಸಿದ ಒಂದೇ ಕುಟುಂಬಕ್ಕೆ ಸಂಬಂಧಿಸಿದ ಇಬ್ಬರು, ಮೂವರು ಪ್ರದರ್ಶಿಸುತ್ತಾರೆ. ಇದರಲ್ಲಿ ಕಥೆಗಾರ ಅಂದೆಲು (ಕಾಲ್‌ಗಡಗ) ಹಾಕಿಕೊಂಡು ಹಾಡುತ್ತಾ , ತಂಬೂರಿ ಮೀಟುತ್ತಾ ಕಥೆ ಹೇಳುವನು. ಈ ಕಥೆ ಹೇಳುತ್ತಾ ಆತ ವೇದಿಕೆಯ ಮೇಲೆ ಲಯಬದ್ದವಾಗಿ ಹಿಂದೆ ಮುಂದೆ ಅಡ್ಡಾಡುತ್ತಿರುತ್ತಾನೆ. ಕಥೆಗಾರನು ಬಲಗೈಯ ಹೆಬ್ಬೆರಳಿಗೆ ರಂಧ್ರದ ಉಂಗುರವನ್ನು ಹಾಕಿಕೊಂಡು ಹಾಡಿಗೆ ಅನುಗುಣವಾಗಿ ತಾಳಹಾಕುತ್ತಿರುವವನು. ಪ್ರಧಾನ ಕಥೆಗಾರನಿಗೆ ಒಬ್ಬರು ಅಥವಾ ಇಬ್ಬರು ವಂತಿನ ಸಹಾಯಕರು ಇರುತ್ತಾರೆ. ಇವರ ಕೈಯಲ್ಲಿ ಡಕ್ಕೆ ಇಲ್ಲವೆ ಬುಡಿಕೆ ಎನ್ನುವ ಮಣ್ಣಿನಿಂದ ಮಾಡಿದ ಮೃದಂಗದಂತಹ ವಾದ್ಯ ಉಪಕರಣ ವಿರುತ್ತದೆ. ಬಲಗಡೆ ಇರುವ ವ್ಯಕ್ತಿ ಪೌರಾಣಿಕ, ಜಾನಪದ ಕಥೆಗಳಿಂದ ಈಗಿನ ಸಾಮಾಜಿಕ, ರಾಜಕೀಯ ಅಂಶಗಳನ್ನು ಹೇಳುತ್ತಾ ವ್ಯಾಖ್ಯಾನಿಸುತ್ತಿರುವನು. ಎಡಗಡೆ ಇರುವ ವ್ಯಕ್ತಿ ಮುಖ್ಯವಾಗಿ ಹಾಸ್ಯ ಪ್ರಧಾನ ಪಾತ್ರವಹಿಸುವನು.

ವಿನರಾ ಭಾರತ ವೀರ ಕುಮಾರ ವಿಜಯಂ ಮನದೇರಾ ತಂದಾನ ತಾನ ಎಂಬುದು ಬರ್ರಕಥೆಯಲ್ಲಿ ಕೇಳುವ ಮೊದಲ ಪಲ್ಲವಿ. ಬುರ್ರಕಥೆಯು ವಿವಿಧ ದೇವರನ್ನು ಕೀರ್ತಿಸುತ್ತಾ ಸಾಯಂಕಾಲ ಮೊದಲಾಗುತ್ತದೆ. ಸ್ಥಳ, ಕಾಲ, ಸಂದರ್ಭ ವಿವರಣೆಗಳಿಂದ ಕಥೆಗಾರ ಕಥೆಯನ್ನು ಪರಿಚಯಿಸುವನು. ಈತನ ಸಹಾಯಕರು ಅದನ್ನು ಪುನರುಚ್ಚರಿಸುತ್ತಾರೆ.

ಬುರ್ರಕಥೆಗಳನ್ನು ಹೆಚ್ಚಾಗಿ ದಸರಾ ಇಲ್ಲವೇ ಸಂಕ್ರಾತಿ ಹಬ್ಬಗಳ ಕಾಲದಲ್ಲಿ ಪ್ರದರ್ಶಿಸುತ್ತಾರೆ. ಸಾಧಾರಣವಾಗಿ ರಾಮಾಯಣ, ಮಹಾಭಾರತದಲ್ಲಿನ ಕಥೆಗಳು, ಕಾಂಭೋಜ ರಾಜನ ಕಥೆ, ಬೊಬ್ಬಿಲಿ ಕಥೆ, ಪಲ್ನಾಟಿ ಕಥೆ, ಕಾಟಮ ರಾಜು ಕಥೆಗಳಂತಹ ರಾಜರ ಕಥೆಗಳನ್ನು ಹೇಳುತ್ತಾರೆ. ತೆಲಂಗಾಣ



ಚಿತ್ರ 21.3: ಬುರ್ರಕಥೆ ಪ್ರದರ್ಶನೆ

ಸಾಯುಧ ಹೋರಾಟದಲ್ಲಿ ನಾಜರ್ ಅನೇಕ ಬುರ್ರಕಥ ಪ್ರದರ್ಶನ ನೀಡಿದನು.

ಚಳುವಳಿಗಾಗಿ ತೆಲಂಗಾಣ ಕಲಾಕಾರರು ಹೊಸ ಬುರ್ರಕಥೆಗಳನ್ನು ಬರೆದು ಪ್ರದರ್ಶಿಸಿದರು. ಅವುಗಳಲ್ಲಿ ತಿರುನಗಿರಿ ರಾಮಾಂಜನೇಯಲು ಅವರ ತೆಲಂಗಾಣ ವೀರಯೋಧರು, ಅದುರಿ ಅಯೋಧ್ಯ ರಾಮು ಅವರ ನೈಜಾಂ ವಿಪ್ಲವಂ, ಎಸ್.ಕೆ. ಚೌದರಿ ಅವರ ಕಾಸಿಂ ರಜ್ವಿ, ಸುಂಕರ ಸತ್ಯನಾರಾಯಣ ಅವರ ಕಷ್ಟಜೀವಿ ಎನ್ನುವವು. ಈ ಬುರ್ರಕಥೆಗಳಲ್ಲಿ ಜನರ ಸಾಮಾಜಿಕ, ಆರ್ಥಿಕ ಸಮಸ್ಯೆಗಳು, ಚಳುವಳಿಯ ನಾಯಕರ ಸಾಹಸ ಕಥೆಗಳು ಪ್ರಧಾನವಾಗಿದ್ದವು. ಉದಾಹರಣೆಗೆ ಸುಂಕರ ಸತ್ಯನಾರಾಯಣ 1944 ರಲ್ಲಿ ತೆಲಂಗಾಣ ಎನ್ನುವ ಬುರ್ರಕಥೆ ಬರೆದರು. ವಿಸ್ನೂರಿ ದೇಶ್‌ಮುಕ್ ಎನ್ನುವ ಭೂಸ್ವಾಮಿ ದೌರ್ಜನ್ಯಗಳು, ತುಳಿತಕ್ಕೆ ವಿರುದ್ಧವಾಗಿ ಧೈರ್ಯವಾಗಿ ಹೋರಾಡಿದ ಮುಸ್ಲಿಂ ಬಡರೈತ ಷೇಕ್ ಬಂದಗಿ ಸಾಹಸಗಳನ್ನು ವಿವರಿಸುವ ಕಥೆ ಇದು.

ಪ್ರಸ್ತುತ ಸಾಕ್ಷರತೆ, ಎಯಿಡ್ಸ್‌ಗಳಂತಹ ಅಂಶಗಳ ಮೇಲೆ ಜನರಲ್ಲಿ ತಿಳುವಳಿಕೆ ಮೂಡಿಸಲು ಸರ್ಕಾರವು ಬುರ್ರಕಥೆ ಬೃಂದಗಳನ್ನು ಪ್ರೋತ್ಸಾಹಿಸಿತು. ಬುರ್ರಕಥೆಗಳು ದೂರದರ್ಶನದಲ್ಲಿ (TV) ಪ್ರಸಾರವಾಗುತ್ತಿವೆ. ಆದರೆ ಗ್ರಾಮಗಳಲ್ಲಿ ತಮ್ಮ ಸ್ಥಾನವನ್ನು ಇತರ ಮನೋರಂಜನೆ ಸಾಧನೆಗಳು ತೆಗೆದುಕೊಳ್ಳುವುದರಿಂದ ಜನರ ಮೆಚ್ಚುಗೆ ಕಳೆದುಕೊಂಡ ಸಂಪ್ರದಾಯ ಕಲಾಕಾರರು ಈ ಕೆಲಸವನ್ನು ಕೈಬಿಟ್ಟರು.

SCERT TELANGANA

## ತೊಗಲುಗೊಂಬೆ (Tholubommalata) :

ಸಂಚಾರ ಕಲಾಕಾರರು ಪರದೆ ಹಿಂದೆ ಪ್ರದರ್ಶಿಸುವ ತೊಗಲು ಗೊಂಬೆ ಆಟ ಇದು. ತೊಗಲುಗೊಂಬೆಗಳನ್ನು ಪ್ರಾಣಿ ಚರ್ಮದಿಂದ ಮಾಡುತ್ತಾರೆ. ಪ್ರಾಣಿ ಚರ್ಮವನ್ನು ಶುದ್ಧ ಮಾಡಿ, ಪಾರದರ್ಶಕವಾಗಿ ಮಾಡುತ್ತಾರೆ. ನಂತರ ವಿವಿಧ ಆಕಾರಗಳು, ಗಾತ್ರಗಳಾಗಿ ಕತ್ತರಿಸುತ್ತಾರೆ. ಪಾತ್ರದ ವಯಸ್ಸು, ಸ್ವಭಾವಗಳನ್ನು ಹಿಡಿದು ತೊಗಲುಗೊಂಬೆಗಳು



ಚಿತ್ರ 21.4: ತೊಗಲುಗೊಂಬೆಆಟ

1 ರಿಂದ 6 ಅಡಿಗಳವರೆಗೆ ಇರುತ್ತವೆ. ಬಣ್ಣ ಬಣ್ಣಗಳಿಂದ ಇರುವ ಈ ತೊಗಲುಗೊಂಬೆಗಳು ಕುತ್ತಿಗೆ, ಭುಜ, ಮೊಣಕೈ, ಸೊಂಟ, ಮೊಣಕಾಲುಗಳ ಬಳಿ ಜೋಡಿಸಲಾಗಿರುತ್ತದೆ. ಇವಕ್ಕೆ ಇರುವ ಕಡ್ಡಿಪುಳ್ಳೆಗಳಿಂದ ಕದಲುವಂತೆ ಮಾಡುತ್ತಾರೆ.

## ಪ್ರದರ್ಶನೆ (Performance) :

ಸಂಪ್ರದಾಯಿಕ ತೊಗಲುಗೊಂಬೆ ಆಟದಲ್ಲಿ ಕಥೆಯು ಹಾಡಿನ ರೂಪದಲ್ಲಿರುತ್ತವೆ. ಕಥೆಗಾರನಾಗಲಿ, ಗಾಯಕನಾಗಲಿ ಪ್ರೇಕ್ಷಕನಿಗೆ ಕಾಣುವುದಿಲ್ಲ. ಸ್ವರ ಬದಲಾವಣೆಯಿಂದ ಒಂದೊಂದು ಪಾತ್ರಕ್ಕೆ ಒಂದು ಪ್ರತ್ಯೇಕತೆಯನ್ನು ಕಥೆಗಾರನು ನೀಡುತ್ತಾನೆ.

ಈ ಪ್ರದರ್ಶನಗಲು ಸಾಧಾರಣವಾಗಿ ರಾತ್ರಿ 9 ಗಂಟೆಗೆ ಪ್ರಾರಂಭವಾಗಿ ರಾತ್ರಿಲ್ಲಾ ಮುಂದುವರಿಯುತ್ತವೆ. ತೊಗಲು ಗೊಂಬೆ ಆಟದ ಬೃಂದದಲ್ಲಿ 8ರಿಂದ 12 ಜನ ಕಲಾಕಾರರು ಇರುತ್ತಾರೆ. ಸಾಧಾರಣವಾಗಿ ಈ ಬೃಂದದಲ್ಲಿ ಮಹಿಳಾ ಪಾತ್ರಗಳಿಗೆ ಧ್ವನಿ ನೀಡಲು ಇಬ್ಬರು ಮಹಿಳೆಯರು, ಪುರುಷ ಪಾತ್ರಗಳಿಗೆ ಇಬ್ಬರು ಪುರುಷರು, ಹಾರ್ಮೊನಿಯಂ, ಶೃತಿ, ತಾಳಗಳನ್ನು ಹಾಕಲು ಮೂರುಜನ ವಾದ್ಯಕಾರರು ತೊಗಲುಗೊಂಬೆಯನ್ನು ನೀಡಲು ದೀಪಗಳ ನಿರ್ವಹಣೆಗೆ ಒಬ್ಬ ಸಹಾಯಕನು ಇರುತ್ತಾನೆ.

ಪ್ರದರ್ಶನಕ್ಕೆ ಊರಿನಲ್ಲಿ ಬಹಿರಂಗ ಸ್ಥಳವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಸಮಚತುರ್ಕೋನಾಕೃತಿಯಲ್ಲಿ ನಾಲ್ಕು ಬಿದುರುಬೊಂಬುಗಳಿಗೆ ಬಿಳಿ ಬಟ್ಟೆ ಕಟ್ಟಿ ಪದರೆಯಾಗಿ ಉಪಯೋಗಿಸುತ್ತಾರೆ. ಕಥೆಗಾರ ಅಥವಾ ವ್ಯಾಖ್ಯಾನ ಕರ್ತನು ಪರದೆಯ ಹಿಂದೆ ಇರುತ್ತಾನೆ. ಪರದೆ ಮುಂದೆ ಇರುವ ದೀಪಗಳಿಂದ ತೊಗಲುಗೊಂಬೆಗಳು ಕಾಣಿಸುತ್ತವೆ.

## ತೊಗಲುಗೊಂಬೆ ಆಟದಲ್ಲಿ ಪ್ರದರ್ಶಿಸುವ ಅಂಶಗಳು

ಪ್ರಧಾನವಾಗಿ ರಾಮಾಯಣ, ಮಹಾ ಭಾರತಗಳಂತಹ ಮಹಾಕಾವ್ಯಗಳು, ಸ್ಥಳೀಯ ಪುರಾಣ ಕಥೆಗಳಿಗೆ ಸಂಬಂಧಿಸಿದ ಅಂಶಗಳನ್ನು ಪ್ರದರ್ಶನೆಗೆ ಆಯ್ಕೆ ಮಾಡಿಕೊಳ್ಳುತ್ತಾರೆ. ಒರಟಾದ ಪ್ರವೃತ್ತಿ, ಜಾಣ್ಮೆಯ ಕರ್ಕಶ ಧ್ವನಿಯ ಹಾಸ್ಯವು ಪ್ರಸ್ತುತ ಪರಿಸ್ಥಿತಿಗಳಿಗೆ ಸಂಬಂಧಿಸಿರುತ್ತವೆ.

ಇತಿಹಾಸದಲ್ಲಿನ ಅಂಶವನ್ನು ತೆಗೆದು ಕೊಂಡಾಗ ಸ್ಥಾನಿಕ ವಾಗಿ ಪ್ರಚಾರದಲ್ಲಿರುವ ಕಥೆಯನ್ನು ಆಯ್ಕೆಮಾಡಿಕೊಳ್ಳುತ್ತಾರೆ. ಹೊಸ ಕಥೆಗಳನ್ನು ವಿರಳವಾಗಿ ಬರೆಯುತ್ತಾರೆ. ಈ ಪ್ರದರ್ಶಕರು ಸಾಧಾರಣವಾಗಿ ಒಂದು ಊರಿನಿಂದ ಮತ್ತೊಂದು ಊರಿಗೆ ತಿರುಗುತ್ತಿ ರುತ್ತಾರೆ. ಗ್ರಾಮಸ್ಥರಿಂದ ಹಣ, ಧಾನ್ಯವನ್ನು ಪಡೆದುಕೊಳ್ಳುತ್ತಾ ಪ್ರದರ್ಶನಗಳನ್ನು ನೀಡುತ್ತಾ ವರ್ಷದಲ್ಲಿ ಒಂಬತ್ತು ತಿಂಗಳು ಸಂಚಾರ ಮಾಡುತ್ತಿರುತ್ತಾರೆ.

ಚಲನಚಿತ್ರಗಳು, ದೂರದರ್ಶನಗಳಂತಹ ಆಧುನಿಕ ಸಮಾಚಾರ, ಮನೋರಂಜನೆಯ ರೂಪಗಳು ದೊರಕುತ್ತಿರುವುದರಿಂದ ಸಂಪ್ರದಾಯ ಕಲೆಗಳಿಗೆ ಜನರ ಆದರಣೆ ಕಡಿಮೆ ಯಾಗುತ್ತಿದೆ. ಅಷ್ಟೇ ಅಲ್ಲದೆ ಹಿಂದೆ ಇದ್ದಂತೆ ಗ್ರಾಮದ ಮುಖಂಡರು, ಭೂಸ್ವಾಮಿಗಳು ಈ ಕಲಾಕಾರರಿಗೆ ಪೋಷಕ ರಾಗಿರುತ್ತಿರಲಿಲ್ಲ. ಈ ಕಾರಣದಿಂದ ಜಾನಪದ ಕೆಲೆಯು ಕ್ಷೀಣಿಸಿ ಹೋಗುತ್ತಿದೆ. ಕಲಾಕಾರರು ಜೀವನೋಪಾಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವರು ಸಂಚಾರಿ ಕಲಾಕಾರರಾಗಿದ್ದರಿಂದ ಇವರ ಮಕ್ಕಳು ಆಧುನಿಕ ಪಾಠಶಾಲೆ ಗಳಲ್ಲಿ ಅಭ್ಯಸಿಸುವ ಅವಕಾಶದಿಂದ ವಂಚಿತರಾಗಿದ್ದಾರೆ. ಇನ್ನೂ ಅವರಿಗೆ ಉಳಿದ ದಾರಿ ನೈಪುಣ್ಯವಿಲ್ಲದ ಕೂಲಿ ಕೆಲಸ ಮಾಡುವುದು.

SCERT TELANGANA

ಸರ್ಕಾರಿ ಕಾರ್ಯಕ್ರಮಗಳನ್ನು ಪ್ರಚಾರ ಮಾಡಲು ಈ ಕಲಾ ರೂಪಗಳನ್ನು ಆಯ್ಕೆ ಮಾಡುವ ಮೂಲಕ ಸರ್ಕಾರವು ಸ್ವಲ್ಪ ಸಹಾಯ ಮಾಡಿದಂತಾಗುತ್ತದೆ. ಪರಿಶುದ್ಧತೆ, ಆರೋಗ್ಯ ಸೇವೆಗಳು, ಹುಡಿಗಿಯರ ಶಿಕ್ಷಣ, ಕುಟುಂಬ ನಿಯಂತ್ರಣ, ಪರಿಸರಗಳಂತಹ ಅಂಶಗಳ ಮೇಲೆ ಅನೇಕ ಸಂಪ್ರದಾಯ ಬೃಂದಗಳು ಪ್ರದರ್ಶನಗಳು ನೀಡುತ್ತಾರೆ. ಇದರಂತಹ ಪ್ರದರ್ಶನಗಳಲ್ಲಿ ಹೇಳಬೇಕಾದ ಅಂಶಗಳನ್ನು ಈ ಪ್ರದರ್ಶನ ಗಳಿಗೆ ಪ್ರಾಯೋಜಕರಾದ ಸರ್ಕಾರವೇ ನೀಡುತ್ತಾರೆ.

ತೊಗಲುಗೊಂಬೆ ಆಟ ಕಲಾಕಾರರಲ್ಲಿ ಕೆಲವು ಕುಟುಂಬಗಳು ಚರ್ಮದಿಂದ ಮಾಡಿ ಗೋಡೆಗೆ ನೇತು ಹಾಕುವ ಗೊಂಬೆಗಳು, ವಿದ್ಯುತ್ ದೀಪಗಳಿಗೆ ಅಲಂಕಾರ ಗಳಂತಹ ಪ್ರತ್ಯಾಮ್ನಾಯ ಜೀವನೋಪಾಯಗಳನ್ನು ಮಾಡುತ್ತಾರೆ.

- ದೂರದರ್ಶನ, ಚಲನಚಿತ್ರಗಳು ಪ್ರಧಾನ ಮನೋರಂಜನಾ ಸಾಧನೆಗಳಾಗಿ ಮಾರ್ಪಡುತ್ತಿರುವ ಪರಿಸ್ಥಿತಿಯಲ್ಲಿ ಸಂಪ್ರದಾಯ ಜಾನಪದ ಕಲೆಯನ್ನು ಕಾಪಾಡಿಕೊಳ್ಳಬೇಕಾದ ಅವಸರವಿದೆಯಾ ? ನಿಮ್ಮ ಕಾರಣಗಳನ್ನು ಹೇಳಿರಿ.
- ರಾಷ್ಟ್ರೀಯ ಚಳುವಳಿಯ ಕಾಲದಲ್ಲಿ ಕಲಾಕಾರರ ಪರಿಸ್ಥಿತಿಗಳಲ್ಲಿ, ಅವರು ನೀಡುವ ಪ್ರದರ್ಶನಗಳಲ್ಲಿನ ಅಂಶಗಳಲ್ಲಿ ಎಂತಹ ಬದಲಾವಣೆಗಳು ಬಂದಿವೆ ?
- ರಾಷ್ಟ್ರಾಭಿಮಾನಿಗಳು, ಕಮ್ಯುನಿಸ್ಟ್‌ರು ಜಾನಪದ ಕೆಲಯನ್ನು ಪುನರುದ್ದಾರಕ್ಕಾಗಿ ಏಕೆ ಪ್ರಯತ್ನಿಸಿದರು?

## ಭರತನಾಟ್ಯ - ಅವಸಾನ ಮತ್ತು ಪುನರುಜ್ಜೀವನ (Bharatanatyam its decline and revival)

ಭಾರತದೇಶದಲ್ಲಿನ ಸಂಪ್ರದಾಯ ನೃತ್ಯಗಳಲ್ಲಿ ಅನೇಕ ನೃತ್ಯಗಳು ತಮ್ಮ ಮೂಲವು ಭರತನು ಬರೆದ ನಾಟ್ಯಶಾಸ್ತ್ರ ದಲ್ಲಿವೆ. ಎಂದು ತಿಳಿದುಬರುತ್ತಿವೆ. ಏನಾದರೂ ಇಂದು ಭರತನಾಟ್ಯ ಎಂಬುದು ತಮಿಳುನಾಡಿಗೆ ಸೇರಿದ ಒಂದು ಪ್ರತ್ಯೇಕ ನಾಟ್ಯರೂಪವನ್ನು ಸೂಚಿಸುತ್ತದೆ. ನೂರು ವರ್ಷಗಳ ಕೆಳಗೆ ಭರತ ನಾಟ್ಯ ಎಂಬ ಪದವು ಬಳಕೆಯಲ್ಲಿ ಇರಲಿಲ್ಲ.

ನಮಗೆ ಇಂದು ತಿಳಿದ ಭರತ ನಾಟ್ಯವು ಸದಿರ್ ನಾಟ್ಯದಿಂದ ಉದ್ಭವಿಸಿದೆ. ಸದಿರ್ ನಾಟ್ಯವನ್ನು ದೇವಾಲಯ ಗಳಲ್ಲಿ ಆರಾಧನೆಯ ಭಾಗವಾಗಿ ದೇವದಾಸಿಯರು ಪ್ರದರ್ಶಿಸುತ್ತಿದ್ದರು. ದೇವಾಲಯಗಳಲ್ಲಿ ಸೇವೆಗಳಿಗೆ



ಅಂಕಿತವಾದ ದಾಸಿಯರನ್ನು ದೇವದಾಸಿಗಳು ಎಂದು ಕರೆಯುತ್ತಾರೆ. ದೇವದಾಸಿಗಳ ನೃತ್ಯವು ಆಲಯ ಪೂಜೆಗಳು, ಆಚಾರಗಳಲ್ಲಿನ ಒಂದು ಭಾಗವಾಗಿದೆ. ದೇವರಿಗೆ ಕಾಣಿಕೆಯಾಗಿ ಹರೆಯದ ಹುಡುಗಿಯರನ್ನು ಅವರ ತಂದೆ ತಾಯಿಯಂದಿರು ಅರ್ಪಿಸುತ್ತಿದ್ದರು. ಇಂತಹ ಮಹಿಳೆಯರು ಮದುವೆ ಮಾಡಿಕೊಳ್ಳಬಾರದು. ಪೂಜಾರಿಗಳು, ಪ್ರತಿಷ್ಠಿತ ಜನರ ಕೈಯಲ್ಲಿ ತುಳಿತಕ್ಕೆ ಗುರಿಯಾಗುತ್ತಿದ್ದರು. ದೇವದಾಸಿ ಯರಿಗೆ ಹುಟ್ಟಿದ ಮಕ್ಕಳು ಅದೇ ರೀತಿಯಾಗಿ ಜೀವಿಸುತ್ತಿದ್ದರು. ಸಂಗೀತ, ನಾಟ್ಯ ಕಲೆಗಳಲ್ಲಿ ದೇವದಾಸಿಯರು ನೈಪುಣ್ಯ ಹೊಂದಿದ್ದರು. ನಟ್ಟುವನಾರ್ಲ (ನಾಟ್ಯವನ್ನು ಕಲಿಸುವ ಗುರುಗಳು, ಸಾಧಾರಣವಾಗಿ ಇವರು ದೇವದಾಸಿಯರಿಗೆ ಹುಟ್ಟಿದ ಗಂಡು ಸಂತಾನ) ಸಹಾಯದಿಂದ ಇವರು ಅನೇಕ ತಲೆಮಾರುಗಳಿಗೆ ತಮ್ಮ ಸಂಪ್ರದಾಯವನ್ನು ಕಾಪಾಡಿಕೊಂಡು ಬರುತ್ತಿದ್ದಾರೆ.

ಬೊಂಬಾಯಿ, ಮದ್ರಾಸ್ ಪ್ರಾಂತಗಳಲ್ಲಿ 1934-1947 ರ ಮಧ್ಯೆ ದೇವದಾಸಿ ವ್ಯವಸ್ಥೆಯನ್ನು (ದೇವಾಲಯಗಳಲ್ಲಿ ದೇವರಿಗೆ ಹುಡಿಗಿಯರನ್ನು ಸೇವಕರನ್ನಾಗಿಸುವುದನ್ನು) ರದ್ದು ಮಾಡುತ್ತಾ ಕಾಯ್ದೆಯನ್ನು ಮಾಡಲಾಯಿತು. ದೇವದಾಸಿ ವಿಧಾನಕ್ಕೆ ವಿರುದ್ಧವಾಗಿ ಹೈದರಾಬಾದ್ ರಾಜ್ಯದಲ್ಲಿ ಭಾಗ್ಯರೆಡ್ಡಿ ವರ್ಮ ಚಳುವಳಿಯನ್ನು ನೆಡಸಿ ದೇವದಾಸಿ ವ್ಯವಸ್ಥೆಯನ್ನು ಅಂತಗೊಳಿಸಲು ನೈಜಾಂನನ್ನು ಒಪ್ಪಿಸಿದ್ದಾನೆ.

- ದೇವದಾಸಿ ಜೀವನ ಮಾಡಲು ಇಷ್ಟವಿಲ್ಲದ ಆ ಕುಟುಂಬದಲ್ಲಿ ಹುಟ್ಟಿದ ಹುಡಿಗಿಯ ಕಷ್ಟಗಳನ್ನು ಊಹಿಸಿಕೊಳ್ಳಿರಿ. ಆಕೆಯು ತನ್ನ ಸ್ನೇಹಿತಿಗೆ ತನ್ನ ವ್ಯಥೆಯನ್ನು ವ್ಯಕ್ತಪಡಿಸುತ್ತಾ ಉತ್ತರ ಬರೆದಂತೆ ಊಹಿಸಿಕೊಂಡು ನೀವು ಆ ಪತ್ರವನ್ನು ಬರೆಯಿರಿ.

SCERT TELANGANA

## ಪುನರುಜ್ಜೀವನ (Revival) :

ಇ. ಕೃಷ್ಣ ಅಯ್ಯಾರ್ ಸ್ವಾತಂತ್ರ್ಯ ಹೋರಾಟಗಾರ, ವಕೀಲರು. ಇವರು ಭರತನಾಟ್ಯ ಕಲಿತುಕೊಂಡಿರುವರು. ಇದಕ್ಕಿರುವ ಕಳಂಕವನ್ನು ಹೋಗಲಾಡಿಸಲು ಆತನು ಮಹಿಳಾ ಪಾತ್ರದಲ್ಲಿ ಈ ನಾಟ್ಯ ಪ್ರದರ್ಶನ ನೀಡುತ್ತಿದ್ದನು. ಈ ಕಲೆಯಲ್ಲಿ ಜನರಿಗೆ ಆಸಕ್ತಿ ವಹಿಸುವಂತಾಗಲು ಹೋರಾಡಿದನು. ಮದ್ರಾಸ್ (ಚೆನ್ನೈ) ನಲ್ಲಿ ಸಂಗೀತ ಅಕಾಡಿಮಿಯನ್ನು ಸ್ಥಾಪಿಸುವಲ್ಲಿಯೂ ಇವರು ಪಾತ್ರವಹಿಸಿದರು. ಈ ವೇದಿಕೆ ಮೇಲೆ ದೇವದಾಸಿಯರಿಂದ ಭರತನಾಟ್ಯ ಪ್ರದರ್ಶನಗಳನ್ನು ಕೊಡಿಸುತ್ತಿದನು.

ಇದರಿಂದ ಗೌರವಸ್ಥ ಕುಟುಂಬಗಳಿಂದಲೂ ಯುವ ಕಲಾಕಾರರು ಕೂಡ ಭರತನಾಟ್ಯದ ಬಗ್ಗೆ ಆಕರ್ಷಿತರಾದರು. ಜನರು ಮೊದಲು ವಿಭ್ರಾಂತಿಗೆ ಗುರಿಯಾದರು ಗೌರವಸ್ಥ ಕುಟುಂಬಗಳು ಇದರಲ್ಲಿ ಪಾಲ್ಗೊಂಡಿದ್ದರಿಂದ ಈ ಕಲೆಯ ಪುನರುಜ್ಜೀವನಕ್ಕೆ ಅನುಕೂಲವಾಗಿ ಜನರ ಬೆಂಬಲವೂ ದೊರೆಯಿತು. ಇದೇ ಸಮಯದಲ್ಲಿ ಬ್ಯಾಲ್ಲೆರಿನಾ, ಅನ್ನಾ ಪಾವ್‌ಲೋನಾ ರಂತಹ ಪಾಶ್ಚಾತ್ಯ ಕಲಾಕಾರರು ಭಾರತೀಯ ಸಂಸ್ಕೃತಿಯ ಪಿತ್ರಾರ್ಜಿತದ ಮೇಲೆ ಆಸಕ್ತಿ ತೋರಿಸಿದರು. ಥಿಯೋಸಾಫಿಕಲ್ ಚಳುವಳಿಯಲ್ಲಿ ಪಾಶ್ಚಾತ್ಯರು ಭಾರತೀಯ ಆಧ್ಯಾತ್ಮಿಕ ಪರಂಪರೆಯನ್ನು ಪ್ರಚಾರ ಮಾಡಿದರು.





*ಚಿತ್ರ 21.5: ಭಾರತೀಯ ವ್ಯವಸಾಯಿಕ ನೃತ್ಯ "Indian Nautch" illustration from Times, 1858.*

ಅನ್ನಾ ಪಾವ್‌ಲೋವಾ ಶಿಷ್ಯೆಯ ಬಳಿ ರುಕ್ಮೀಣಿ ದೇವಿ ಹಾವಾಭಾವ ಪೂರ್ಣ ನೃತ್ಯವನ್ನು ಕಲಿತುಕೊಂಡರು. ಭಾರತೀಯ ಸಂಪ್ರದಾಯ ನೃತ್ಯ ಅಭ್ಯಸಿಸು ಎಂದು ರುಕ್ಮೀಣಿ ದೇವಿಗೆ ಪಾವ್‌ಲೋವಾ ಸಲಹೆ ನೀಡಿದರು. ಥಿಯೊಸೋಫಿಸ್ಟಾ ಕುಟುಂಬದಲ್ಲಿ ಬೆಳೆದ ಪ್ರತ್ಯೇಕತೆಯಿಂದ ಭರತನಾಟ್ಯವನ್ನು ಸಂಸ್ಕರಿಸಿ ಅದರಲ್ಲಿನ ಆಧ್ಯಾತ್ಮಿಕತೆಯನ್ನು ಹೊರ ತೆಗೆಯಲು ರುಕ್ಮೀಣಿ ದೇವಿಗೆ ಸಾಧ್ಯವಾಯಿತು.

ಭರತನಾಟ್ಯವು ಪುನರುಜ್ಜೀವನಕ್ಕೆ ದೇವದಾಸಿಗಳ ಸಂಘವು ಕೈಜೋಡಿಸಿತು. ರುಕ್ಮೀಣಿ ದೇವಿ ಗುರುಗಳೊಂದಿಗೆ ಬೆಂಗಳೂರು ನಾಗರತ್ನಮ್ಮರಂತಹ ಕಲಾಕಾರರು, ಬಾಲ ಸರಸ್ವತಿಯರಂತಹ ಪ್ರಖ್ಯಾತ ಕಲಾಕಾರರು ಇದ್ದರು. ಈ ಸಂಪ್ರದಾಯವನ್ನು ಪುನರುಜ್ಜೀವನಗೊಳಿಸಬೇಕೆಂದು, ಅದು ದೇವದಾಸಿಯರ ಕೈಯಲ್ಲಿ ಇರಬೇಕೆಂದು ಅವರು ಕೋರಿಕೊಂಡರು. ಅವರಿಂದ ಬೇರ್ಪಡಿಸಿದರೆ ಆ ಕಲೆಯು ನಶಿಸಿ ಹೋಗುತ್ತದೆಂಬುದು ಅವರ ವಾದವಾಗಿದೆ.

ಈ ಕಲೆಯು ಬದುಕಿ ಉಳಿಯಬೇಕಾದಲ್ಲಿ ಕಲೆ ಗೌರವಿಸುವವರ ಕೈಗಳಿಗೆ ಬದಲಾಯಿಸಬೇಕೆಂದು ವಿದ್ಯಾವಂತರು ಭಾವಿಸಿದರು. ಕೊನೆಗೆ ಎರಡು ವರ್ಗದವರು ಈ ನಾಟ್ಯ ಪುನರುಜ್ಜೀವನಕ್ಕಾಗಿ ಸಹಕರಿಸಿದರು. ವಿವಿಧ ಜಾತಿಗಳಿಂದ ಬಂದಂತಹವರಿಗೆ ದೇವದಾಸಿಗಳು, ನಟ್ಟುವನಾರುಗಳು ತರಬೇತಿ ನೀಡಿದರು.

1935 ರಲ್ಲಿ ರುಕ್ಮಿಣಿ ದೇವಿ ನೀಡಿದ ಮೊದಲ ಪ್ರದರ್ಶನವು ಮೈಲುಗಲ್ಲಿನಂತಹುದು. ಆಕೆಯ ಪ್ರಯತ್ನಗಳಿಂದ ಮದ್ರಾಸಿನಲ್ಲಿನ ಸನಾತನ ಕುಟುಂಬಗಳಲ್ಲಿಯ ಅಧಿಕ ಶೇಕಡ ಈ ನಾಟ್ಯಕ್ಕೆ ಬೆಂಬಲ ನೀಡಿದರು. ಉಡುಪು, ವೇದಿಕೆಯ ನಿರ್ಮಾಣ, ರಂಗಪ್ರದಕ್ಷಿಣೆ, ಕುಶಲ ಸಂಗೀತ ಮೊದಲಾದವುಗಳಲ್ಲಿ ಆಕೆ ತಂದಂತಹ ಸುಧಾರಣೆಗಳಿಂದ ಭರತನಾಟ್ಯವು ಅಸಭ್ಯವಾದು ದೆಂಬ ಸನಾತನ ವರ್ಗಗಳ ವಿರೋದವು ತೊಲಗಿತು. ಆಕೆಯು ಕಲಾಕ್ಷೇತ್ರ ಎಂಬ ಸಂಸ್ಥೆಯನ್ನು ಸ್ಥಾಪಿಸಿ ದೊಡ್ಡ ಕಲಾಕಾರರನ್ನು, ವಾದ್ಯಕಾರರನ್ನು ಇದಕ್ಕೆ ಆಕರ್ಷಿತರನ್ನಾಗಿಸಿ ಅವರೊಂದಿಗೆ ಸೇರಿ ನಾಟ್ಯದಲ್ಲಿ ಮುಂದಿನ ಸಂತತಿಗೆ ಇವರು ಶಿಕ್ಷಣ ನೀಡಿದರು.

ದೇವದಾಸಿಯರ ಸಂಪ್ರದಾಯ ಕಲೆಯನ್ನು ಬಾಲ ಸರಸ್ವತಿ ಪ್ರೋತ್ಸಾಹಿಸಿದರು. ಈ ಕಲೆಗೆ ಸುಧಾರಣೆ ಅವಶ್ಯಕತೆ ಇಲ್ಲವೆಂದು ಕಲೆ ಅದರಿಂದ ಬೇರೆ ಹಾದಿ ಹಿಡಿಯುವ ಅವಕಾಶವಿದೆ ಎಂದು ಅವರು ಭಾವಿಸಿದರು. ಅವರು ತನ್ನ ದೇವದಾಸಿ ಪರಂಪರೆಗೆ ಕಟ್ಟುಬಿದ್ದು ತನ್ನ ನೃತ್ಯ ಕಲೆಗೆ ಎಷ್ಟೋ ಪ್ರಖ್ಯಾತಿಯನ್ನು ತಂದಳು.

ಭರತನಾಟ್ಯದ ಬಗ್ಗೆ ಭಾರತ ಸಮಾಜದಲ್ಲಿ ಮತ್ತೇ ಪ್ರಾರಂಭವಾದ ಅರಿವು, ಆಸಕ್ತಿಯಿಂದ ಎಷ್ಟೋ ಜನ ನಟ್ಟುವನರ್‌ಗಳು ತಮ್ಮ ಶಿಕ್ಷಣ ಕಾರ್ಯಕಲಾಪಗಳನ್ನು ಮತ್ತೇ ಪ್ರಾರಂಭಿಸಿದರು. ಈ ಸಂಪ್ರದಾಯ ನೃತ್ಯದಲ್ಲಿ ಎಷ್ಟೋ ಜನ ಕಲಾಕಾರರು ಪ್ರವೇಶಪಡೆದರು. ನಟ್ಟುವನಾರುಗಳ ಗ್ರಾಮಗಳಾದ ಪಾಂಡನಲ್ಲೂರ್, ವರ್ಝೂವೂರ್, ತಂಜಾವೂರ್ ಹೆಸರುಗಳಿಂದ ಪ್ರಖ್ಯಾತಿ ಹೊಂದಿ ವೈವಿದ್ಯವಾದ ನಾಟ್ಯ ಬಗೆಗಳು ಹೆಸರುವಾಸಿಯಾದವು. ಸ್ವಲ್ಪ ಸಮಯ ದಲ್ಲಿಯೇ ಭಾರತೀಯ ಸಂಪ್ರದಾಯ ನೃತ್ಯಗಳಲ್ಲಿ ಭರತ ನಾಟ್ಯವು ಎಷ್ಟೋ ಪ್ರಾಮುಖ್ಯತೆಯನ್ನು ಪಡೆಯಿತು. ಎಷ್ಟೋ ಜನಾದಾರಣೆ ಹೊಂದಿತು. ಭಾರತೀಯ ಸಂಪತ್ತಾಗಿ ಅಂತರಾಷ್ಟ್ರೀಯ ಮನ್ನಣೆ ಹೊಂದಲು ಹೆಚ್ಚು ಸಮಯ ಹಿಡಿಯಲಿಲ್ಲ.



- ಈ ನಾಟ್ಯವನ್ನು ಪುನರುಜ್ಜೀವನಗೊಳಿಸಲು ಇತರ ಜಾತಿಯವರು ಅದನ್ನು ಕರಗತ ಮಾಡಿಕೊಳ್ಳಲು ಎಕೆ ಮುಖ್ಯವಾಯಿತು ?
- ಈ ನಾಟ್ಯವನ್ನು ಗೌರವ ಪ್ರದವನ್ನಾಗಿ ಮಾಡಲು ಅದರಲ್ಲಿ ಎಂತಹ ಬದಲಾವಣೆಗಳನ್ನು ಮಾಡಿರುತ್ತಾರೆ ?
- ಒಂದು ಕಡೆ ಸಂಪ್ರದಾಯವಾಗಿ ಈ ನಾಟ್ಯ ಮಾಡುತ್ತಿರುವವರಿಗೆ ಅದರಲ್ಲಿ ಮುಂದುವರಿಯಲು ಬಿಡಲಿಲ್ಲ. ಮತ್ತೊಂದೆಡೆ ಅದನ್ನು ಗೌರವಪ್ರದವಾಗಿ ಬದಲಾಯಿಸಲು ಇತರ ಜಾತಿಯವರು ಅದನ್ನು ಕೈಗೆಟಕಿಸಿಕೊಳ್ಳು ತ್ತಾರೆ. ಈ ಬದಲಾವಣೆಗಳಲ್ಲಿ ಯಾವುದಾ ದರೂ ಅನ್ಯಾಯವಾಗಿದೆಯಾ?

## ಪ್ರಸ್ತುತ ಕಾಲದಲ್ಲಿನ ಭರತನಾಟ್ಯ (Bharatanatyam today)

ಭರತನಾಟ್ಯವು ಪುನರುಜ್ಜೀವನದ ನಂತರ 20ನೇಯ ಶತಮಾನದ ಕೊನೆಯಲ್ಲಿ ಅದು ಎಷ್ಟು ಆದರಣ ಹೊಂದಿದೆ ಎಂದರೆ ಭರತನಾಟ್ಯ ಕಲೆಯಲು ಮುಂದೆ ಬಂದವರಿಗೆ ಸರಿಹೋಗುವಂತೆ ಶಿಕ್ಷಣ ಸೌಕರ್ಯಗಳು, ಅದರ ಪ್ರಮಾಣಗಳನ್ನು ಕಾಪಾಡುವ ಪರಿಸ್ಥಿತಿಗಳಿಲ್ಲ. ಇಂದು ಭರತ ನಾಟ್ಯಕ್ಕೆ ಪ್ರೇಕ್ಷಕರು, ಪ್ರಯೋಜಕರಿಗಿಂತ ಕಲಿತುಕೊಳ್ಳುವವರು ಹೆಚ್ಚಾಗಿ ಇರುವರು ಆದ್ದರಿಂದ ಅದು ವಿಸ್ತರಿಸುತ್ತಿದೆ.

ಈ ಕಲಾರೂಪಕ್ಕೆ ನಟ್ಟುವನಾರ್‌ಗಳಲ್ಲದೇ ನಾಟ್ಯ ಮಾಡುವವರು ಸಂರಕ್ಷಕರಾಗಿ ಬದಲಾದರು. ಪುನರುಜ್ಜೀವನ ಕಾಲದಲ್ಲಿ ನಾಟ್ಯದಲ್ಲಿ ಶಿಕ್ಷಣ ನೀಡಿದ ನಟ್ಟವನಾರ್‌ಗಳು ಆ ಪರಂಪರೆಗೆ ಸೇರಿದ ಕೊನೆಯವರು. ನಾಟ್ಯವು ಕಲಿತುಕೊಳ್ಳ ಬೇಕೆಂದು ಬಹಳ ಜನ ಕೋರಿಕೊಳ್ಳುವುದರಿಂದ ಶಿಕ್ಷಣ ಕೇವಲ ನಟ್ಟುವನಾರ್‌ರಿಗೆ ಪರಿಮಿತವಾಗಿಲ್ಲ.

ಭರತನಾಟ್ಯ ಪ್ರದರ್ಶನದಲ್ಲಿ ಖರ್ಚುಗಳನ್ನು ಕಡಿಮೆ

SCERT TELANGANA

ಮಾಡಲು ಬಹಳಷ್ಟು ಜನ ದಾಖಲೆ ಮಾಡಿದ ಸಂಗೀತವನ್ನು ಉಪಯೋಗಿಸಬೇಕಾಗುತ್ತದೆ. ಪ್ರದರ್ಶನಗಳ ಮೂಲಕ ಇಂದು ನಾಟ್ಯಕಾರರ ಜೀವನೋಪಾದಿಯನ್ನು ಸಾಧಾರಣ ವಾಗಿ ಹೊಂದಲಾರರು. ಕೆಲವು ವಿನಾಯಿತಿ ಹೊರತುಪಡಿಸಿ ಭರತನಾಟ್ಯವು ಇಂದು ಕುಟುಂಬ ಬೆಂಬಲ ಇದ್ದವರಿಗೆ ಎರಡನೇ ಜೀವನ ವೃತ್ತಿಯಾಗಿದೆ. ಕೆಲವು ಜನರು ಮಾತ್ರ ಈ ನಾಟ್ಯ ಕಲಿತುಕೊಳ್ಳಲು, ನಾಟ್ಯಕಾರರಾಗಿ ಬೆಳೆಯಲು ತಮ್ಮ ಜೀವನವೆಲ್ಲಾ ಮುಡುಪಾಗಿಡುತ್ತಿದ್ದಾರೆ. ಹಣ ಗಳಿಸಲು ನಾಟ್ಯಕಾರರು ತಮ್ಮ ವೃತ್ತಿ ಜೀವನದ ಮೊದಲ ವರ್ಷಗಳಲ್ಲಿ ಇದನ್ನು ಇತರರಿಗೆ ಕಲಿಸಲು ಪ್ರಾರಂಭಿಸುತ್ತಿದ್ದಾರೆ. ಇದು ಅವರ ನಾಟ್ಯ ನಾಣ್ಯತೆಯನ್ನಲ್ಲದೆ ಅವರ ಬೋಧನೆಯನ್ನು ಸಹ ಪ್ರಭಾವಗೊಳಿಸುತ್ತದೆ.

ನಟ್ಟುವನಾರ್‌ಗಳು ಇಲ್ಲದೆ ಇನ್ನಷ್ಟು ಮಂದಿ ನಾಟ್ಯಕಾರರು ಬೋಧಕರಾಗಿ ಮಾರ್ಪಟ್ಟದ್ದರಿಂದ ತಲ ತಲಾಂತರವಾಗಿ ಸಂಪ್ರದಾಯಕವಾಗಿ ನಾಟ್ಯ ರೂಪವನ್ನು ಕಾಪಾಡಿಕೊಂಡು ಬಂದ ವಂಶ ಪರಂಪರೆಗೆ ತೆರೆ ಬಿದ್ದಿತು. ಕೆಲವು ಜನ ಶಿಕ್ಷಕರಲ್ಲಿ ಅಲ್ಲದೇ ಅನೇಕ ಮಂದಿ ನಾಟ್ಯಕಾರರು ಭರತನಾಟ್ಯವನ್ನು ಬೋಧಿಸುವುದರಿಂದ ಅದರಲ್ಲಿ ಹೊಸ ಹೊಸ ಬದಲಾವಣೆಗಳು ಬರುವ ಅವಕಾಶಗಳು ಹೆಚ್ಚಿದವು.

ಭರತ ನಾಟ್ಯದಲ್ಲಿನ ಈ ಅನುಭವಗಳಂತೆ ಕಥಾಕಳಿ, ಯಕ್ಷಗಾನ, ಒಡಿಸ್ಸಿ, ಮಣಿಪುರಿ, ಕಥಕ್‌ಗಳಂತಹವುಗಳಿಗೆ ಇಂತಹ ಘರ್ಷಣೆಗಳಿಗೆ, ಅನುಭವಗಳಿಗೆ ಗುರಿಯಾದವು. ಅವುಗಳ ಬಗ್ಗೆಯೂ ಸಹ ತಿಳಿದುಕೊಳ್ಳಲು ಪ್ರಯತ್ನಿಸಿರಿ.

- ನಟ್ಟುವನಾರ್‌ಗಳ ಪ್ರತ್ಯೇಕ ಪಾತ್ರವೇನು ? ಅವರ ಪಾತ್ರವನ್ನು ನಾಟ್ಯ ಮಾಡುವವರೇ ಮಾಡಿದಲ್ಲಿ ಇದು ನಾಟ್ಯದ ಮೇಲೆ ಎಂತಹ ಪ್ರಭಾವ ಬೀರುತ್ತದೆ ?



ಪೇರಿಣಿನಾಟ್ಯ

- ಭರತನಾಟ್ಯಕ್ಕೆ ಬಂದ ಅತೀವ ಜನಪ್ರೀಯತೆ ಅದಕ್ಕೆ ಹೇಗೆ ಸಹಾಯಕಾರಿಯಾಗಿದೆ ? ಯಾವ ಹೊಸ ಸಮಸ್ಯೆಗಳಿಗೆ ಕಾರಣವಾಗಿವೆ ?

## ಪೇರಿಣಿನಾಟ್ಯ :

ಶಿವನ ಆರಾಧ್ಯ ದೈವವಾಗಿ ಭಾವಿಸಿ, ನಟರಾಜ ವಿಗ್ರಹದ ಮುಂದೆಯಾಗಲೀ, ಶಿವಾಲಯಗಳಲ್ಲಾಗಲೀ, ಸೈನ್ಯಗಳು ಯುದ್ಧಕ್ಕೆ ತೆರಳುವ ಮುನ್ನ ಆವೇಶದಿಂದ ಇದನ್ನು ಪ್ರದರ್ಶಿಸಲಾಗುತ್ತದೆ. ಉಸಿರು ಬಿಡದಂತೆ ಉದ್ವೇಗವಾಗಿ ನಡೆಯುವ ಈ ನಾಟ್ಯವನ್ನು ಕೇವಲ ಪುರುಷರು ಮಾತ್ರ ಮಾಡುತ್ತಾರೆ. ಇದು ಕ್ರಿ.ಶ. 13ನೇ ಶತಮಾನದಿಂದ ಪ್ರಚಾರಕ್ಕೆ ಬಂದಿದೆ. ಕಾಕತೀಯ ಗಣಪತಿ ದೇವನ ಭಾವಮೈದ ಗಜಸಾಹಿಣಿ ಜಾಯಪ್ಪ ಸೇನಾನಿ ರಚಿಸಿದ ನಾಟ್ಯರತ್ನಾವಳಿ



ಡಪ್ಪುನಾಟ್ಯ

ಯಲ್ಲಿ (ಸಂಸ್ಕೃತ) ಪೇರಿಣಿ ನಾಟ್ಯದ ಬಗ್ಗೆ ವಿಸ್ತಾರವಾಗಿ ಬರೆಯಲಾಗಿದೆ. ಈ ನಾಟ್ಯವನ್ನು ಬೆಳಕಿಗೆ ತಂದು ಅತ್ಯಧಿಕ ಪ್ರಚಾರ ಕಲ್ಪಿಸಿಕೊಟ್ಟ ನಟರಾಜ ರಾಮಕೃಷ್ಣ ಆತನ ಶಿಷ್ಯವೃಂದದಿಂದ ವಿಶ್ವವ್ಯಾಪಿ ಮಾನ್ಯತೆ ಪಡೆದಿದೆ.

## ಡಪ್ಪುನಾಟ್ಯ :

ಮೇಕೆ ಚರ್ಮದಿಂದ ಮಾಡಿದ ವಾದ್ಯ ಪರಿಕರಗಳಾದ ಡಪ್ಪು (ಹಲಗೆ)ಗಳನ್ನು ಕಡ್ಡಿಗಳಿಂದ ನುಡಿಸುತ್ತಿದ್ದರೆ ಉದ್ಭವಿಸುವ ನಾದ ಪ್ರಭಂಜನ ನೋಡುವವರನ್ನು ಕೂಡ ಕುಣಿಯುವಂತೆ ಮಾಡುತ್ತದೆ. 15 ರಿಂದ 20 ಜನರು ಇರುವ ನಾಟ್ಯ ತಂಡವು ಕಾಲುಗಳಿಗೆ ಗೆಜ್ಜೆ ಕಟ್ಟಿ ಹಲಗೆಗಳನ್ನು ನುಡಿಸುತ್ತಾ ನಾಟ್ಯ ಮಾಡುತ್ತಾರೆ. ಇದನ್ನು ಉತ್ಸವಗಳಲ್ಲಿ ಮೆರೆವಣಿಗೆಗಳಲ್ಲಿ ಬಳಸುತ್ತಾರೆ.

SCERT TELANGANA

## ಮುಖ್ಯ ಪದಗಳು

1. ಲಾವಣಿಪದ 2. ತಪ್ಪಡಿಗಳು 3. ಮೂಕಾಭಿನಯ ಮಾಡುವವ 4. ಭಿಕ್ಷೆ 5. ತರಂಗ

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ

1. ತಪ್ಪು ವಾಕ್ಯಗಳನ್ನು ಸರಿಪಡಿಸಿರಿ :
   a. ಎಲ್ಲಾ ನೃತ್ಯ ರೂಪಗಳು ಭಕ್ತಿಯ ಭಾಗವಾಗಿ ರೂಪುಗೊಂಡಿವೆ.
   b. ಚಾರಿತ್ರಿಕವಾಗಿ ಕಲಾಕಾರರನ್ನು ದೊಡ್ಡ ದೊಡ್ಡ ಜಮೀನುದಾರರು ಪೋಷಿಸಿದರು.
   c. ಜನರನ್ನು ಚೈತನ್ಯವಂತರನ್ನಾಗಿಸಲು ಬುರ್ರಕಥೆಗಳನ್ನು ಉಪಯಗಿಸಿಕೊಂಡರು.
   d. ಪ್ರಸ್ತುತ ಭರತನಾಟ್ಯವನ್ನು ಪ್ರಧಾನವಾಗಿ ನಟ್ಟುವನರ್‌ಗಳು ಕಲಿಸುತ್ತಿದ್ದಾರೆ.
2. ಕಳೆದ 50 ವರ್ಷಗಳಲ್ಲಿ ಜಾನಪದ ಕಲಾಕಾರರ ಜೀವನದಲ್ಲಿ ಬಂದಂತಹ ಬದಲಾವಣೆಗಳನ್ನು ಚರ್ಚಿಸಿರಿ.
3. ಜಾನಪದ ಕಲೆಗಳು ನಶಿಸಿ ಹೋಗುತ್ತಿವೆಯೇ ? ಇದರಿಂದ ನಮ್ಮ ಸಂಸ್ಕೃತಿಗೆ ಎಂತಹ ನಷ್ಟ ಜರುಗುತ್ತದೆ ?
4. ಆಧುನಿಕ ಜೀವನದಲ್ಲಿನ ಹೊಸ ಅವಸರಗಳಿಗನುಗುಣವಾಗಿ ಜಾನಪದ ಕಲೆಗಳನ್ನು ಮಾರ್ಪಡಿಸಿ ಅವುಗಳನ್ನು ಪುನರುಜ್ಜೀವನಗೊಳಿಸಲು ಸಾಧ್ಯವಾಗುತ್ತದೆಯಾ ?
5. ಸದಿರ್‌ದಿಂದ ಹಿಡಿದು ಭರತನಾಟ್ಯದಲ್ಲಿ ಸಂಭವಿಸಿದ ಮುಖ್ಯ ಬದಲಾವಣೆಗಳು ಯಾವುವು ?
6. ಕೆಳಗೆ ತಿಳಿಸಿದವುಗಳಲ್ಲಿ ದೇವದಾಸಿ ವ್ಯವಸ್ಥೆಯನ್ನು ಸಮರ್ಥಿಸಿದವರು, ವಿರೋಧಿಸಿದವರು, ಅದರಲ್ಲಿ ಸುಧಾರಣೆಗಳನ್ನು ಮಾಡಬೇಕೆಂದವರಾರು ?

   ಬಾಲಸರಸ್ವತಿ ರುಕ್ಮಿಣಿ ದೇವಿ ವೀರೇಶಲಿಂಗಂ

   ಭಾಗ್ಯರೆಡ್ಡಿ ವರ್ಮ ಕೃಷ್ಣ ಅಯ್ಯಾರ್ ಬೆಂಗಳೂರು ನಾಗರತ್ನಮ್ಮ
7. ತಮ್ಮ ಕಲೆಗಳ ಮೂಲಕ ಜೀವನೋಪಾಯ ಪಡೆಯುವುದು ಕಲಾಕಾರರಿಗೆ ಯಾವಾಗ ಏಕೆ ಕಷ್ಟವಾಗಿರುತ್ತಿತ್ತು ? ಇದರ ಮೇಲೆ ನಿನ್ನ ಅಭಿಪ್ರಾಯವೇನು ?
8. ನಿಮ್ಮ ಪ್ರಾಂತದಲ್ಲಿಯ ಕಲಾಕಾರರನ್ನು ಸಂದರ್ಶಿಸಿ ಅವರು ಪ್ರದರ್ಶಿಸುವ ನಾಟಕಗಳು, ಕಿರುನಾಟಕಗಳ ಪಟ್ಟಿಯನ್ನು ತಯಾರಿಸಿರಿ.

**ಮುಖಾಮುಖಿ :**

ಸ್ಥಳೀಯ ಕಲಾಕಾರರನ್ನು ಶಾಲೆಗೆ ಆಹ್ವಾನಿಸಿ ಭಿನ್ನ ಕಲೆಗಳ ಮೇಲೆ, ಪ್ರಸ್ತುತ ಅವುಗಳ ಸ್ಥಿತಿ ಭವಿಷ್ಯತ್ತಿನಲ್ಲಿ ಅವುಗಳ ಸ್ಥಿತಿಗಳ ಬಗ್ಗೆ ಚರ್ಚಿಸಿರಿ.

SCERT TELANGANA

ಘಟಕ 22

# ಸಿನಿಮಾ ಮತ್ತು ಮುದ್ರಣ ಮಾಧ್ಯಮ

ಲತ ಬೇಸಿಗೆ ರಜೆಯಲ್ಲಿ ಮುತ್ತಾತನವರ ಪಟ್ಟಣಕ್ಕೆ ಹೋದಳು. ಮುತ್ತಾತ ರಂಗಯ್ಯನೊಂದಿಗೆ ಸೇರಿ ಹೊಸದಾಗಿ ಬಿಡುಗಡೆಯಾದ ಚಲನಚಿತ್ರ ನೋಡಬೇಕೆಂದುಕೊಂಡಳು. ಆದರೆ ರಂಗಯ್ಯನಿಗೆ ಆರೋಗ್ಯ ಸರಿಯಿಲ್ಲದ ಕಾರಣ ಅವರು ತನ್ನ ಬಾಲ್ಯದ ಕುರಿತು ಹೇಳುತ್ತಾ ಕುಳಿತುಕೊಂಡರು. ತಾತನ ಬಾಲ್ಯದಲ್ಲಿ ಚಲನಚಿತ್ರಗಳಿಲ್ಲವೆಂಬುದು ತಿಳಿದು ಆಶ್ಚರ್ಯಪಟ್ಟಳು. ಆ ಕಾಲದಲ್ಲಿ ನಾಟಕಗಳಿದ್ದವು. ಜಾನಪದ ಕಲಾಕಾರರು ಹರಿಕಥೆ, ಬುರ್ರಕಥೆ, ತೊಗಲುಗೊಂಬೆ ಆಟಗಳಂತಹವುಗಳನ್ನು ಪ್ರದರ್ಶಿಸುತ್ತಿದ್ದರು. ನಾಟಕಗಳಲ್ಲಿ ಪದ್ಯ ನಾಟಕಗಳು, ಗದ್ಯ ನಾಟಕಗಳಿದ್ದವು. ಸುದೀರ್ಘ ರಾಗಗಳಿಗೆ ಪದ್ಯ ನಾಟಕಗಳು ಖ್ಯಾತಿ ಪಡೆದವು. ರಾತ್ರಿ ಸಂಪೂರ್ಣವಾಗಿ ನಿದ್ದೆ ಮಾಡದೇ ನೋಡಿದ ಸತ್ಯಹರಿಶ್ಚಂದ್ರ ನಾಟಕವು ಇಂದಿಗೂ ರಂಗಯ್ಯಗೆ ಚೆನ್ನಾಗಿ ನೆನಪಿದೆ. ಭುವನ ವಿಜಯಂ, ಕನ್ಯಾಶುಲ್ಕ, ಬೊಬ್ಬಲಿ ಯುದ್ಧಂ, ವರವಿಕ್ರಮ ಗಳಂತಹ ನಾಟಕಗಳನ್ನು ಸಹ ಆತನು ನೋಡಿದ್ದಾನೆ. ತನ್ನ ಶಾಲಾ ವಾರ್ಷಿಕೋತ್ಸವದಲ್ಲಿ ಲತ ಸಹ ಒಂದು ನಾಟಕದಲ್ಲಿ ಭಾಗವಹಿಸಿದ್ದಳು. ಆಕೆಯು ಒಂದು ನಾಟಕ ಪ್ರದರ್ಶನ ನೋಡಿದಳು. ಆ ಕಾಲದಲ್ಲಿ ಪ್ರಧಾನವಾಗಿ ನಾಟಕಗಳೇ ಮನೋರಂಜನೆಯ ಮಾರ್ಗಗಳೆಂದು ತಿಳಿದು ಆಶ್ಚರ್ಯಪಟ್ಟಳು.

- ನಿಮ್ಮ ತಂದೆ ತಾಯಿಗಳು ತಮ್ಮ ಬಾಲ್ಯದಲ್ಲಿನ ನಾಟಕಗಳ ಕುರಿತು ಕೇಳಿ ತಿಳಿದುಕೊಳ್ಳಿ.
- ಕಾಲಕ್ಕನುಗುಣವಾಗಿ ನಾಟಕಗಳಲ್ಲಿ ಎಂತಹ ಬದಲಾವಣೆಗಳು ಬಂದಿವೆ ?



*ಚಿತ್ರ 22.1: ಕೆಮೇರಾ ಪ್ರಾಜೆಕ್ಟರ್*



## ಸಿನಿಮಾ (ಚಲನಚಿತ್ರಗಳ) ಹುಟ್ಟು (Birth of Cinema):

ಭಾರತ ದೇಶದಲ್ಲಿ ಚಲನಚಿತ್ರಗಳ ಹುಟ್ಟು 1896 ಜುಲೈ 7 ರಂದು ಮುಂಬಯಿಯಲ್ಲಿ ವಾಟ್ಸನ್ ಹೋಟಲ್‌ನಲ್ಲಿ ಲ್ಯೂಮಿಯರ್ ಸಹೋದರರ ಮೊದಲ ಬಹಿರಂಗ ಪ್ರದರ್ಶನದೊಂದಿಗೆ ಪ್ರಾರಂಭವಾಯಿತೆಂದು ಹೇಳಬಹುದು. ಪಕ್ಕದಲ್ಲಿ ರಂಧ್ರಗಳಿರುವ ಸೆಲ್ಯುಲಾಯಿಡ್ ಫಿಲಿಂ ಉಪಯೋಗಿಸಿ ಸೆಕೆಂಡಿಗೆ ಹತ್ತು ಭಾವಚಿತ್ರ (ಫೋಟೋ)ಗಳು ತೆಗೆಯಬಲ್ಲ ಕೆಮೇರಾವನ್ನು 1887ರಲ್ಲಿ ಇಂಗ್ಲಾಂಡಿನ ವಿಲಿಯಂ ಫ್ರೀಸ್-ಗ್ರೀನ್ ಕಂಡುಹಿಡಿದನು. ಉದ್ದನೆಯ ಫಿಲಿಂ ರೀಲನ್ನು ಮಧ್ಯದಲ್ಲಿ ನಿಲ್ಲದೇ ಪ್ರದಶಿರಸುವಂತಹ ಸಿನಿಮಾ ಪ್ರೊಜೆಕ್ಟರ್‌ನ್ನು 1895 ರಲ್ಲಿ ಉಡಾವಿಲ್ ಲಾಥಾಂ ಕಂಡು ಹಿಡಿದನು.

## ಚಲನಚಿತ್ರಗಳ ವಿಕಸನ
## Evolution of cinema

ನಾಟಕಗಳನ್ನು ವಾದ್ಯಬೃಂದಗಳೊಂದಿಗೆ ಕಲಾಕಾರರು ಪ್ರತಿಬಾರಿಯೂ ಸಜೀವವಾಗಿ ಪ್ರದರ್ಶಿಸಬೇಕು. ಆದರೆ ತಂತ್ರಜ್ಞಾನದ ಅಭಿವೃದ್ಧಿಯಾದುದರಿಂದ ಕಲಾಕಾರರು ನಟಿಸಿದ್ದನ್ನು ಚಿತ್ರವಾಗಿ ತೆಗೆದು ಒಮ್ಮೆ ಅನೇಕ ಸ್ಥಳಗಳಲ್ಲಿ ಪ್ರದರ್ಶಿಸಲು ಸಾಧ್ಯವಾಯಿತು.



SCERT TELANGANA

ಅದನ್ನು ಮತ್ತೇ, ಮತ್ತೇ ಎಷ್ಟು ಸಲ ಬೇಕಾದರೂ ಪ್ರದರ್ಶಿಸ ಬಹುದು. ಅಷ್ಟೇ ಅಲ್ಲದೆ ಚಲನಚಿತ್ರವನ್ನು ಸ್ವಲ್ಪ ಕಾಲ ಚಿತ್ರೀಕರಿಸಬಹುದು. ತೆಗೆದ ರೀಲುಗಳನ್ನು ವಿವಿಧ ರೀತಿಯಲ್ಲಿ ಕಲಿಸುವುದರಿಂದ (ಎಡಿಟಿಂಗ್) ಪ್ರಕಟನೆಗೆ ಸಿದ್ದ ಪಡಿಸುವುದರಿಂದ ಪೂರ್ತಿಯಾಗಿ ಹೊಸ ಅನುಭೂತಿ ಯನ್ನು ಕಲ್ಪಿಸಬಹುದು. ಜಾರ್ಜ್‌ಬರ್ನಾಡ್ ಷಾ, ಷೆಕ್ಸ್‌ಪಿಯರ್ ಬರೆದ ನಾಟಕಗಳನ್ನು ಕೆಮರಾದಿಂದ ಸೆರೆ ಹಿಡಿದು, ಪರದೆಯ ಮೇಲೆ ಚಲನಚಿತ್ರವಾಗಿ ಪ್ರದರ್ಶಿಸುತ್ತಿ ದ್ದರು. ಅದೇ ರೀತಿ ತೆಲುಗಿನಲ್ಲಿ ಪ್ರಸಿದ್ದಿ ಪಡೆದ ವರವಿಕ್ರಯಂ, ಸತ್ಯಹರಿಶ್ಚಂದ್ರ, ಕನ್ಯಾಶುಲ್ಕಂಗಳಂತಹ ನಾಟಕಗಳನ್ನು ಚಲನ ಚಿತ್ರಗಳಾಗಿ ತೆಗೆದಿದ್ದಾರೆ. ಚಲನಚಿತ್ರ ಅವಕಾಶಗಳಿಗಾಗಿ ನಾಟಕ ಕಲಾಕಾರರು ಶಿಲ್ಪಶಾಲೆಗಳ ಸುತ್ತಲೂ ತಿರುಗುತ್ತಿದ್ದರು. ಇದರ ಪರಿಣಾಮಗಳಿಂದ ನಾಟಕಗಳ ಪ್ರಾಧಾನ್ಯತೆ ಕಡಿಮೆ ಯಾಗಿ ಸಿನಿಮಾಗಳಿಗೆ ಬೇಡಿಕೆ ಹೆಚ್ಚಿತು. ಆದರೂ ಸಹ ಸಿನಿಮಾ ನಟರಾಗಿ ಪ್ರಖ್ಯಾತಿಯನ್ನು ಪಡೆದಿದ್ದರೂ ನಾಟಕಗಳಿಗಾಗಿ ಕಾರ್ಯ ನಿರ್ವಹಿಸುವ ಕಲಾಕಾರರೆಂದರೆ ಗೊಲ್ಲುಪುಡಿ ಮಾರುತಿರಾವು, ನಸೀರುದ್ದೀನ್ ಷಾರಂತಹ ಎಷ್ಟೋ ಮಂದಿ ಇದ್ದಾರೆ.

*ಚಿತ್ರ 22.2: ಷೆಕ್ಸ್‌ಪಿಯರ್ ನಾಟಕ ಪ್ರದರ್ಶನದಲ್ಲಿಯ ಒಂದು ಭಾಗ*



- ನಾಟಕ ಪ್ರದರ್ಶನಕ್ಕೆ ಚಲನಚಿತ್ರಕ್ಕೆ ಮಧ್ಯೆ ಇರುವ ವ್ಯತ್ಯಾಸಗಳೇನು ? ಹೋಲಿಕೆಗಳು, ವ್ಯತ್ಯಾಸಗಳಿಂದ ಒಂದು ಪಟ್ಟಿಯನ್ನು ತಯಾರಿಸಿರಿ.
- ನಾಟಕಗಳಿಂದ ಚಲನಚಿತ್ರಗಳಿಗೆ ಬದಲಾಗುವುದ ರಿಂದ ಜೀವನೋಪಾಯ ಹೊಂದುವ ಅವಕಾಶ ಗಳಲ್ಲಿ ಎಂತಹ ಬದಲಾವಣೆಗಳಾಗಿವೆಯೋ ನಿಮ್ಮ ಶಿಕ್ಷಕರ ಸಹಾಯದಿಂದ ಚರ್ಚಿಸಿರಿ.

ಮೊದಲು ಚಲನಚಿತ್ರದಲ್ಲಿ ಶಬ್ದ ಇರಲಿಲ್ಲವೆಂದು, ಪ್ರದರ್ಶನದ ಜೊತೆಗೆ ಸಂಗೀತಕಾರರು ವಾದ್ಯಗಳನ್ನು ನುಡಿಸುವುದು, ಇಲ್ಲವೇ ಸಿನಿಮಾ ಪ್ರದರ್ಶಿಸುವ ವ್ಯಕ್ತಿ ವ್ಯಾಖ್ಯಾನ ಮಾಡುವುದು ನಡೆಯುತ್ತಿತ್ತು ಎಂಬುದು ತಿಳಿದುಕೊಂಡು ಲತ ಆಶ್ಚರ್ಯ ಹೋದಳು. ತಂತ್ರಜ್ಞಾನ ಅಭಿವೃದ್ಧಿ ಹೊಂದಿದ ನಂತರವೇ ಚಲನಚಿತ್ರಗಳಲ್ಲಿ ಮಾತ ನಾಡುವಂತಾದವು ಇವನ್ನೇ ವಾಕ್ಚಿತ್ರ (ಟಾಕೀಜ್) ಎನ್ನುವರು.

ತೆಲುಗುನಲ್ಲಿ ಮೊದಲು ಮೂಕಿ ಚಿತ್ರ ಭೀಷ್ಮ ಪ್ರತಿಜ್ಞ ಮತ್ತು ಮೊದಲ ವಾಕ್ಚಿತ್ರ (Talkie) ವೆಂದರೆ ಭಕ್ತ ಪ್ರಹ್ಲಾದ 1931 ರಲ್ಲಿ ಬಿಡುಗಡೆಯಾಯಿತು. ಈ ಚಿತ್ರವನ್ನು ಹೆಚ್.ಎಂ.ರೆಡ್ಡಿ ನಿರ್ಮಿಸಿದ್ದಾರೆ.

- ಐದು ನಿಮಿಷಗಳು ಯಾವುದೇ ಮಾತಿಲ್ಲದಂತೆ ಮೂಕಾಭಿನಯವನ್ನು ಮಾಡಿರಿ. ಐದು ನಿಮಿಷಗಳು ನಾಟಕ ಮಾಡಿರಿ. ಈ ಎರಡು ನಟನೆಯಲ್ಲಿ ಸೌಲಭ್ಯ ಆಯ್ಕೆ ಮಾಡಿಕೊಂಡ ಅಂಶಗಳು, ಪ್ರೇಕ್ಷರಿಗೆ ಅರ್ಥವಾಗುವಂತಹ ವಿಷಯಗಳನ್ನು ಹೋಲಿಸಿರಿ ?

ಹಿಂದಿಯಲ್ಲಿ ಮೊದಲ ವಾಕ್ಚಿತ್ರ 'ಆಲಂಆರಾ' 1931 ರಲ್ಲಿ ಬಿಡುಗಡೆ ಆಯಿತು. ಅರ್ದೇಶರ್ ಇರಾನಿ.




*ಚಿತ್ರ 22.3: ಪ್ರಕಟನಾ ಪತ್ರಿಕೆ ಆಲಂಆರಾ*

ತೆಲುಗು ಚಲನ ಚಿತ್ರ ಪಿತಮಹಾ ರಘುಪತಿ ವೆಂಕಯ್ಯ. ಇವರು ಬಂದರ್‌ನಲ್ಲಿ ಜನಿಸಿದರು. ಇವರು ಮದ್ರಾಸ್‌ನಲ್ಲಿ ಸ್ಥಂಭ ಚಿತ್ರಗಳನ್ನು ತೆಗೆಯುವವನಾಗಿ ನೆನೆಸಿದ್ದಾನೆ. ಮದ್ರಾಸಿನಲ್ಲಿ 'ಗೆಯಿಟಿ' ಎಂಬ ಹೆಸರಿನಿಂದ ಚಲನಚಿತ್ರ ಸ್ಟುಡಿಯೋ ಸ್ಥಾಪಿಸಿ ದ್ದಾನೆ. ಚಲನಚಿತ್ರ ಶಿಲ್ಪಶಾಲೆ (ಸ್ಟುಡಿಯೋ) ಮತ್ತು ರಂಗಭೂಮಿ ಶಾಲೆಯ



*ಚಿತ್ರ : ರಘುಪತಿ ವೆಂಕಯ್ಯ*

SCERT TELANGANA

ಯಜಮಾನ, ಚಲನ ಚಿತ್ರ ನಿರ್ಮಾಪಕರಾಗಿ ತೆಲುಗು ಚಿತ್ರ ಪರಿಶ್ರಮಕ್ಕೆ ಬಹಳ ಸೇವೆ ಸಲ್ಲಿಸಿದ್ದಾರೆ. ಆದ್ದರಿಂದ ಆಂಧ್ರ ಪ್ರದೇಶ್ ಸರ್ಕಾರ ನಂದಿ ಬಹುಮಾನಗಳ ಜೊತೆಗೆ ತೆಲುಗು ಚಿತ್ರ ಪರಿಶ್ರಮಕ್ಕೆ ಗಣ ನೀಯ ಸೇವೆ ಸಲ್ಲಿಸಿದವರಿಗೆ ಪ್ರತಿ ವರ್ಷವು ರಘುಪತಿ ವೆಂಕಯ್ಯ ಬಹುಮಾನ ವನ್ನು ನೀಡಿ ಗೌರವಿಸುತ್ತದೆ.



*ಚಿತ್ರ 22.4: ನಂದಿ ಬಹುಮಾನ*

## ಚಲನಚಿತ್ರ - ಮನೋರಂಜನೆಯ ಸ್ವರೂಪ (Cinema - form of entertainment)

ಚಲನಚಿತ್ರಕ್ಕೆ ಮುಂಚೆ ಜಾನಪದ ಕಲೆ, ಜಾನಪದ ನೃತ್ಯಗಳು, ಸಂಪ್ರದಾಯ ನೃತ್ಯಗಳು, ಸಂಗೀತ, ನಾಟಕಗಳಂತಹ ಅನೇಕ ಮನೋರಂಜನೆ ರೂಪಗಳಿದ್ದವು. ಕಾಲಾನುಕ್ರಮದಲ್ಲಿ ಮನೋರಂಜನೆಗೆ ಚಲನಚಿತ್ರಗಳು ಪ್ರಧಾನ ರೂಪವಾಗಿ ಮಾರ್ಪಟ್ಟಿವೆ. ಸಿನಿಮಾಗಳಲ್ಲಿ ಹಾಡುಗಳಿಗೆ ತನದೇ ಆದ ಪ್ರತ್ಯೇಕ ಪ್ರಖ್ಯಾತಿ ಪಡೆದಿವೆ. ಇದಕ್ಕಿಂತ ಮುಂಚೆ ರೇಡಿಯೋ, ಈಗ ದೂರದರ್ಶನ ಚಲನಚಿತ್ರ ಹಾಡುಗಳನ್ನು ಪ್ರತ್ಯೇಕವಾಗಿ ಪ್ರಸಾರ ಮಾಡುತ್ತವೆ. ಚಲನಚಿತ್ರ ನಟರೆಂದರೆ ಜನರಲ್ಲಿ ಬಹಳ ಅಭಿಮಾನವಿದೆ. ಅಭಿಮಾನಿಗಳ ಸಂಘಗಳು ಏರ್ಪಾಟಾಗಿವೆ. ಚಲನಚಿತ್ರಗಳಲ್ಲಿನ ಪ್ರಸಿದ್ಧಿ ಪಡೆದ ಸಂಭಾಷಣೆಗಳು ಪ್ರತಿನಿತ್ಯ ಜೀವನದಲ್ಲಿ ಭಾಗವಾಗಿದೆ. ನಟನಟಿಯರು ವೇಷಾಧಾರಣೆ, ಕೇಶಾಲಂಕರಣವು ಜನರು ಅನುಕರಣಿಸುತ್ತಾರೆ. ದೂರದರ್ಶನ ಬಂದಿರುವುದರಿಂದ ಚಲನಚಿತ್ರಗಳನ್ನು ನೋಡಲು ಚಲನಚಿತ್ರ ಮಂದಿರಗಳಿಗೆ ಹೋಗಬೇಕಿಲ್ಲ. ಚಲನಚಿತ್ರ, ಹಾಡು, ಸಿನಿವಾರ್ತೆಗಳು ಪ್ರಸಾರ ಮಾಡಲು ಪ್ರತ್ಯೇಕ ವಾಹಿನಿಗಳು, ಪ್ರತ್ಯೇಕ ಕಾರ್ಯಕ್ರಮಗಳಿವೆ.

- ನಿಮ್ಮ ಗ್ರಾಮ ಮತ್ತು ಪಟ್ಟಣಗಳಲ್ಲಿರುವ ಮನೋರಂಜನೆ ಸಂಪನ್ಮೂಲಗಳನ್ನು ಪಟ್ಟಿ ಮಾಡಿರಿ. ಅವುಗಳ ಪ್ರಖ್ಯಾತಿಯನ್ನು ಹೇಗೆ ಬೆಲೆಕಟ್ಟುವಿರಿ ? ಕಾಲಕ್ಕನುಗುಣವಾಗಿ ಅವುಗಳಲ್ಲಿ ಆಗುತ್ತಿರುವ ಬದಲಾವಣೆ ಗಳೇನು ?

## ಸಿನಿಮಾ ಮತ್ತು ಸ್ವಾತಂತ್ರ್ಯ ಚಳುವಳಿ (Cinema and freedom movement)

1938, 1939ರಲ್ಲಿ ಬಿಡುಗಡೆಯಾದ ಮಾಲಪಿಲ್ಲ, ರೈತುಬಿಡ್ಡ, ಚಲನಚಿತ್ರಗಳ ಬಗ್ಗೆ ರಂಗಯ್ಯ ಮಾತಿನಲ್ಲಿ ಅಂದಿನ ಉತ್ಸಾಹ ಇಂದಿಗೂ ಕಾಣುತ್ತಿದೆ. ಅಸ್ಪೃಷ್ಯತೆ, ದಲಿತರ ಆಲಯ ಪ್ರವೇಶವು ಮಾಲಪಿಲ್ಲ ಚಿತ್ರದ ಪ್ರಧಾನ ಅಂಶ. ಇದರಲ್ಲಿನ ಕಥಾನಾಯಕ ಚೌದರಯ್ಯ ಗಾಂಧೀವಾದಿ. ಇವರು ಮೇಲಿನ ವರ್ಗದ (ಜಾತಿ)ವರಿಗೆ ತಮ್ಮ ಪದ್ಧತಿಗಳನ್ನು ಬದಲಾಯಿಸಿಕೊಳ್ಳಿ, ಕೆಳ ಜಾತಿಯವರಿಗೆ ಕುಡುಕುತನವನ್ನು ಬಿಟ್ಟು ಬಿಡಬೇಕೆಂದು, ಶಿಕ್ಷಣ ಪಡೆಯಬೇಕೆಂದು ಹೇಳುತ್ತಿರುತ್ತಾನೆ. ಪೂಜಾರಿಯ ಮಗ ದಳಿತ ಹುಡುಗಿಯನ್ನು ಪ್ರೇಮಿಸುತ್ತಾನೆ. ಪೂಜಾರಿ ಹೆಂಡತಿಯನ್ನು ಬೆಂಕಿಯ ಅನಾಹುತದಿಂದ ಒಬ್ಬ ದಳಿತನು ಆಕೆಯನ್ನು ಕಾಪಾಡುತ್ತಾನೆ. ಈ ಘಟನೆಯಿಂದ ಪೂಜಾರಿಯು ಅಸ್ಪೃಷ್ಯತೆ ಇರಬಾರದೆಂದು ಹೇಳುತ್ತಾನೆ. ಇದರಿಂದ ದಳಿತರನ್ನು ಆತನು ಆಲಯ ಪ್ರವೇಶ ಕಲ್ಪಿಸಿಕೊಡುತ್ತಾನೆ. ಪೂಜಾರಿಯ ಮಗನು ದಳಿತ ಹುಡುಗಿಯೊಂದಿಗೆ ವಿವಾಹವಾದುದನ್ನು ಎಲ್ಲರೂ ಆಶೀರ್ವಾದಿಸುತ್ತಾರೆ.

ಜಮಿಂದಾರೀ ವ್ಯವಸ್ಥೆಯಲ್ಲಿ ರೈತರ ಕಷ್ಟಗಳನ್ನು ರೈತುಬಿಡ್ಡ ತೋರಿಸುತ್ತದೆ. ಜಮಿಂದಾರನ ಹತ್ತಿರ ಸಾಲ ತೆಗೆದುಕೊಂಡ ಒಬ್ಬ ರೈತ ಚುನಾವಣೆಯಲ್ಲಿ ರೈತ ಪಕ್ಷಕ್ಕೆ ಮತ ಹಾಕುತ್ತಾನೆ. ಇದಕ್ಕೆ ಆತನನ್ನು ವೇಧಿಸಿ ಕಷ್ಟ ನೀಡುತ್ತಾರೆ. ಜಮಿಂದಾರನ ಮಗನನ್ನು ಆತನ ಸ್ವಂತ ತಮ್ಮನೇ ಅಪಹರಿಸಿದಾಗ ಜಮಿಂದಾರನ ಹೃದಯ ಪರಿವರ್ತನೆಯಾಗುತ್ತದೆ. ಆಸ್ತಿಗೆ ನಾವು ಧರ್ಮದರ್ಶಿಗಳೆಂದು ಗಾಂಧೀಜಿ ಹೇಳಿದ ಆಲೋಚನೆಗೆ ಅನುಗುಣವಾಗಿ ಜಮಿಂದಾರನು ತಮ್ಮ ಭೂಮಿಗಳನ್ನು ಅವುಗಳನ್ನು ಊಳುವವರಿಗೆ ನೀಡುತ್ತಾನೆ.

ತಮ್ಮ ಶಾಲೆಯಲ್ಲಿ ಗಾಂಧಿ ಸಿನಿಮಾ ತೋರಿಸಿದ್ದಾರೆಂದು ಲತ ತಾತನಿಗೆ ಹೇಳಿದಳು. ಆ ಸಿನಿಮಾ 1982 ರಲ್ಲಿ ರಿಚರ್ಡ್ ಆಟನ್ ಬರೋ ಎಂಬುವವರು ತೆಗೆದಿದ್ದಾರೆಂದು ತಾತನು ಹೇಳಿದನು. ಆಕೆ ತೆಲುಗಿಗೆ ಡಬ್ಬಿಂಗ್ ಮಾಡಿದ ಚಲನಚಿತ್ರ ನೋಡಿದ್ದಾಳೆ. ಈ ಚಿತ್ರ ಹಿಂದಿ ಇನ್ನೂ ಅನೇಕ ಪ್ರಾಂತೀಯ ಭಾಷೆಗಳಿಗೂ ಡಬ್ ಮಾಡಲಾಗಿದೆ.

ತದನಂತರದಲ್ಲಿ ರಾಷ್ಟ್ರೀಯ ಚಳುವಳಿಯ ಮೇಲಿಯೂ ಅನೇಕ ಚಿತ್ರಗಳನ್ನು ತೆಗೆದಿದ್ದಾರೆ. ಅವುಗಳಲ್ಲಿ ಕೋಮುರಂಭೀಂ, ಗಿರಿಜನರ ಹೋರಾಟಗಳಿಗೆ ಸಂಬಂಧಿಸಿದವುಗಳು ಮುಖ್ಯವಾದವುಗಳು.

ನರಸಿಂಗ್‌ರಾವ್ ನಿರ್ದೇಶಿಸಿದ ಮಾಭೂಮಿ ಸಿನಿಮಾ ತೆಲಂಗಾಣ ರೈತರ ದಂಗೆಯನ್ನು ವಿವರಿಸುತ್ತದೆ. ಚಿತ್ರದ ಪ್ರಧಾನ ಪಾತ್ರಧಾರಿಯಾದ ರಾಮಯ್ಯನ ತಂದೆ 50 ಎಕರೆಗಳ ಜಮೀನ್‌ದಾರನ ಹತ್ತಿರ ಜೀತಕ್ಕಿರುತ್ತಾನೆ.

SCERT TELANGANA

ರಾಮಯ್ಯ ಹೈದರಾಬಾದ್‌ಗೆ ವಲಸೆ ಹೋಗಿ ಒಂದು ಕೈಗಾರಿಕೆಯಲ್ಲಿ ಕೆಲಸಕ್ಕೆ ಸೇರುತ್ತಾನೆ. ಅಲ್ಲಿ ಕಮ್ಯೂನಿಸ್ಟರೊಂದಿಗೆ ಪರಿಚಯವಾಗಿ ಅದು ಸ್ನೇಹವಾಗುತ್ತದೆ. ರಾಮಯ್ಯನು ರಷ್ಯಾ ಕ್ರಾಂತಿಯಿಂದ ಅಲ್ಲಿ ಬಂದ ಬದಲಾವಣೆಯನ್ನು ತಿಳಿದುಕೊಳ್ಳುತ್ತಾನೆ. ನಂತರ ತಮ್ಮ ಊರಿಗೆ ಹೋಗಿ ಭೂ ಮಾಲಿಕತ್ವ ವಿಧಾನಕ್ಕೆ ಪ್ರತಿಯಾಗಿ ಹೋರಾಟ ಮಾಡಲು ಸಿದ್ಧನಾಗುತ್ತಾನೆ. ಸಾಯುಧ ಹೋರಾಟದಿಂದ ನಿಜಾಂ ಆಡಳಿತಕ್ಕೆ ಮುಕ್ತಾಯ ಹೇಳುವ ಹಂತದಲ್ಲಿದ್ದಾಗ ಹೈದರಾಬಾದ್ ಭಾರತ ಒಕ್ಕೂಟದಲ್ಲಿ ವಿಲೀನವಾದುದ್ದರಿಂದ ಭಾರತ ಸೈನ್ಯವು ಸಾಯುಧ ಹೋರಾಟವನ್ನು ಹತ್ತಿಕ್ಕುವ ಸಂದರ್ಭದಲ್ಲಿ ರಾಮಯ್ಯ ಅಮರನಾಗುತ್ತಾನೆ. ಬಂಡೆನಕ ಬಂಡಿಕಟ್ಟಿ, ಪಲ್ಲೆಟೂರಿ ಪಿಲ್ಲಗಾಡ, ಪಸುಲಗಾಸೆ ಮೊನಗಾಡ ದಂತಹ ಹಾಡುಗಳು ಜನಾಧರಣ ಪಡೆದವು.

ಕೊಮುರ ಭೀಂ ಚಿತ್ರ ತೆಗೆದ 20 ವರ್ಷಗಳ ನಂತರ ಜುಲೈ 2010 ರಲ್ಲಿ ಬಿಡುಗಡೆಯಾಯಿತು. ಮುಕುಂದಂ ಅವರ ಭೂಪಾಲ್ ರೆಡ್ಡಿ ಇದರಲ್ಲಿ ಕಥಾನಾಯಕನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾನೆ. ಚಿತ್ರ ನಿರ್ದೇಶನ ಅಲ್ಲಾಣಿ ಶ್ರೀಧರನಿಗೆ ನಿರ್ದೇಶಕರ ಮೊದಲ ಉತ್ತಮ ಚಿತ್ರ ಶ್ರೇಣಿಯ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ. ಈ ಚಲನಚಿತ್ರಕ್ಕೆ ರಾಷ್ಟ್ರೀಯ ಭಾವೈಕ್ಯತೆಗಾಗಿ ಉತ್ತಮ ಚಿತ್ರ ಪ್ರಶಸ್ತಿಯೊಂದಿಗೆ ರಾಜ್ಯಮಟ್ಟದ ಅನೇಕ ನಂದಿ ಪ್ರಶಸ್ತಿಗಳು ದೊರಕಿವೆ. ಕೊಮುರಂ ಭೀಂ ಆದಿಲಾಬಾದ್‌ಗೆ ಸೇರಿದ ಗೋಂಡು ಜಾತಿಯ ಆದಿವಾಸಿ. ಈತನು ಅನಕ್ಷರಸ್ಥನಾಗಿದ್ದರೂ ನೈಜಾಂ ಸರ್ಕಾರ ನಡೆಸುತ್ತಿದ್ದ ಗಿರಿಜನರ ದೌರ್ಜನ್ಯಗಳ ವಿರುದ್ಧ ಹೋರಾಡಿದನು. ಆತನ ಹೋರಾಟಗಳು ನ್ಯಾಯಸ್ಥಾನದಲ್ಲಿ, ಆಯುಧಗಳಿಂದಲೂ ಮುಂದುವರಿದವು. ಬಾಬೇಝುರಿಯ ಬಳಿ ನೈಜಾಂ ಸರ್ಕಾರದೊಂದಿಗೆ ಹೋರಾಟದಲ್ಲಿ ಕೋಮುರಂ ಭೀಂ 1940 ಅಕ್ಟೋಬರ್ 27 ರಂದು ಕೊಲ್ಲಲ್ಪಟ್ಟನು.

ರಾಷ್ಟ್ರೀಯ ಚಳುವಳಿಯ ಮೇಲೆ ತೆಗೆದ ಸಿನಿಮಾಗಳು ತೆಲುಗಿನಲ್ಲಿ ಬಹಳ ಬಂದಿವೆ. ಅದೇ ರೀತಿ ರಾಷ್ಟ್ರೀಯ ಚಳುವಳಿ, ದೇಶಭಕ್ತಿಯ ಮೇಲೆ ಎಷ್ಟೋ ಚಿತ್ರಹಾಡುಗಳಿವೆ. ಇದಕ್ಕಿದ್ದಂತೆ ರಂಗಯ್ಯ ವೆಡಲಿಪೋ ತೆಲ್ಲ ದೊರ ವೆಡಲಿಪೋ ಎಂಬ ಹಾಡು ಹಾಡಲು ಪ್ರಾರಂಭಿಸಿದನು. 1949ರಲ್ಲಿ ತೆಗೆದ ಮನದೇಶಂ ಚಿತ್ರದಲ್ಲಿದೆ. ಗಾಂಧೀ ಜಯಂತಿಯಂದು ಇತರ ರಾಷ್ಟ್ರೀಯ ಹಬ್ಬಗಳಲ್ಲಿ ತಮ್ಮ ಶಾಲೆಯಲ್ಲಿ ಹಾಡುವ ಭಲೇ ತಾತ ನಮ್ಮ ಬಾಪೂಜಿ ಎಂಬ ಹಾಡನ್ನು ಲತ ಹಾಡಿದಳು.

ಈ ಹಾಡು 1955 ರಲ್ಲಿ ತೆಗೆದ ದೊಂಗರಾಮುಡು ಚಿತ್ರದಲ್ಲಿದೆ ಎಂದು ಲತ ತಾತಯ್ಯನ ಮೂಲಕ ತಿಳಿದುಕೊಂಡಳು.

- ರಾಷ್ಟ್ರೀಯ ಚಳುವಳಿಗೆ ಸಂಬಂಧಿಸಿ ತೆಗೆದ ಮತ್ತೇರಡು ಚಲನಚಿತ್ರಗಳನ್ನು ಹೇಳಿರಿ ?
- ತೆಲುಗು ಸಿನಿಮಾಗಳಲ್ಲಿರುವ ದೇಶಭಕ್ತಿ ಹಾಡುಗಳನ್ನು ಸಂಗ್ರಹಿಸಿರಿ.

## ಸಮಾಜದ ಮೇಲೆ ಚಲನಚಿತ್ರಗಳ ಪ್ರಭಾವ
## Influence of film on the society

ಸಮಾಜವು ಕಲೆಗಳನ್ನು, ತನ್ನ ಮೂಲಕ ಚಲನಚಿತ್ರಗಳನ್ನು ಪ್ರಭಾವಿತಗೊಳಿಸುತ್ತದೆ. ಚಲನಚಿತ್ರಗಳು ಮತ್ತೇ ಸಮಾಜವನ್ನು ಪ್ರಭಾವಗೊಳಿಸುತ್ತದೆ ಎಂಬುದು ಸಹ ನಿಜ. ಹೊಸ ಚಲನ ಚಿತ್ರಗಳಲ್ಲಿ ವಸ್ತ್ರಾಲಂಕರಣೆ. ಕೇಶಾಲಂಕರಣೆಯ ಪದ್ಧತಿಗಳು ಬದಲಾಗುತ್ತಿರುತ್ತವೆ. ಸಂಭಾಷಣೆಗಳು, ಹಾಡುಗಳು, ನಟ ನಟಿಯರ ಹಾವಭಾವಗಳನ್ನು ಜನರು ಅನುಸರಿಸುತ್ತಾ , ಅನುಕರಣೆ ಮಾಡುತ್ತಾರೆ. ವಿವಿಧ ಕಥಾನಾಯಕರ, ನಾಯಕಿಯರ ಅಭಿಮಾನಿಗಳು ಹೆಚ್ಚಾಗಿದ್ದಾರೆ. ಅಭಿಮಾನಿಗಳ ಸಂಘಗಳು ಕೂಡ ಹೆಚ್ಚಿವೆ. ಇತರ ರಂಗಗಳ ವ್ಯಕ್ತಿಗಳಿಗೆ, ಕ್ರೀಡಾಪಟುಗಳಿಗೆ ಇಂತಹ ಅಭಿಮಾನಿಗಳಿಲ್ಲ.

- ಎರಡು ಗುಂಪುಗಳಾಗಿ ಏರ್ಪಟ್ಟು ಅಭಿಮಾನಿಗಳ ಸಂಘಗಳಿಂದಾಗುವ ಪ್ರಯೋಜನಗಳು, ಸಮಸ್ಯೆಗಳ ಕುರಿತು ಚರ್ಚಿಸಿರಿ.

ಚಲನಚಿತ್ರಗಳು ವ್ಯಕ್ತಿಗಳ ಭಾವನೆಗಳನ್ನು, ಅಭಿಪ್ರಾಯಗಳನ್ನು ಪ್ರಭಾವಗೊಳಿಸುತ್ತವೆ. ದೇಶಭಕ್ತಿ , ಭೂಮಿಗಾಗಿ ಹೋರಾಟಗಳು, ಪ್ರತಿಕೂಲ ಪರಿಸ್ಥಿತಿಗಳಿಗೆ ಎದುರಾಗಿ ನಿಂತು ನಿಜಜೀವನದ ವ್ಯಕ್ತಿಗಳು ಅವನೀತಿ, ಭ್ರಷ್ಟಾಚಾರದ ಮೇಲೆ ಹೋರಾಡಿದ ಅಂಶಗಳಿಂದ ಕೂಡಿದ ಅನೇಕ ಚಿತ್ರಗಳಿವೆ. ಆದರೆ ಚಲನಚಿತ್ರಗಳಿಂದ ಅನೇಕ ಕೆಟ್ಟ ಪ್ರಭಾವಗಳು ಬೀರುತ್ತವೆ. ಚಿತ್ರಗಳಲ್ಲಿ ಮಹಿಳೆಯನ್ನು ತೋರಿಸುವ ವಿಧಾನದಿಂದ ಸಮಾಜದಲ್ಲಿ ಸ್ತ್ರೀಯರ ಬಗ್ಗೆ ಪಕ್ಷಪಾತವು ಹೆಚ್ಚುತ್ತದೆ. ಧೂಮಪಾನ, ಮದ್ಯಪಾನ ಸೇವನೆಯನ್ನು ಚಿತ್ರದ ನಾಯಕರ ದೃಶ್ಯ ತೋರಿಸುವುದರಿಂದ ಯುವ ಪೀಳಿಗೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಕೆಲವು ಸಿನಿಮಾಗಳು ಹಿಂಸೆ, ಅಸಭ್ಯಕರ ದೃಶ್ಯಗಳೊಂದಿಗೆ ತುಂಬಿರುತ್ತವೆ. ಕಳ್ಳತನ, ಹಿಂಸಾತ್ಮಕ ಕೃತ್ಯ ಮಾಡಿ ಸಿಕ್ಕುಬಿದ್ದ ಬಾಲಾಪರಾಧಿಗಳಾದ ಮಕ್ಕಳು ಚಿತ್ರಗಳನ್ನು ನೋಡಿ ತಾವು ಪ್ರಭಾವಿತರಾದೆವು ಎಂದು

SCERT TELANGANA

ಹೇಳುವ ಸಂದರ್ಭಗಳಿವೆ. ಹಿಂಸೆ ಹೆಚ್ಚಾಗಿರುವ ಚಿತ್ರಗಳನ್ನು ವೀಕ್ಷಿಸಿ ಮಕ್ಕಳು ಹಿಂಸಾತ್ಮಕವಾಗಿ ಬದಲಾಗಬಹುದು. ಇಲ್ಲವೇ ಸಮಾಜದಲ್ಲಿ ಹಿಂಸೆಗೆ ಯಾವ ಸ್ಪಂದನೆ ಇಲ್ಲದೇ ಇರಬಹುದು.

ಸಮಾಜದಲ್ಲಿನ ರಾಜಕೀಯ, ಸಾಮಾಜಿಕ ಅಂಶಗಳ ಮೇಲೆ ಬಹಳ ಡಾಕ್ಯುಮೆಂಟರಿ (ದಾಖಲೆ) ಚಿತ್ರಗಳು ಕೂಡ ಇವೆ.

- ನೀವು ಈ ಮಧ್ಯೆ ನೋಡಿದ ಚಲನಚಿತ್ರದಲ್ಲಿನ ಕಥೆ, ಸನ್ನಿವೇಶಗಳು ನಿಮ್ಮಂತಹ ಮಕ್ಕಳ ಮೇಲೆ ಎಂತಹ ಪರಿಣಾಮ ಬೀರುತ್ತವೋ ವಿಶ್ಲೇಷಿಸಿರಿ.
- ಕಳೆದ ತಿಂಗಳು ವಿವಿಧ ವಿದ್ಯಾರ್ಥಿಗಳು ನೋಡಿದ ಚಿತ್ರಗಳ ಪಟ್ಟಿ ತಯಾರಿಸಿರಿ. ಇವುಗಳಲ್ಲಿ ಹಿಂಸೆಯನ್ನು ಅನುಸರಿಸಿ 0-5 ಅಂಕಗಳನ್ನು ನೀಡಿರಿ. ಯಾವುದೇ ಹಿಂಸೆ ಇಲ್ಲದೇ ಇರುವ ಚಿತ್ರಕ್ಕೆ 5 ಅಂಕ, ಯಾವ ಹತ್ಯೆ ಇರುವ ತೀವ್ರ ಹಿಂಸೆ ಇರುವ ಚಿತ್ರಕ್ಕೆ 0 ಅಂಕಗಳನ್ನು ಹಾಕಬೇಕು.

## ಚಲನಚಿತ್ರ ಒಂದು ಕೈಗಾರಿಕೆ
## Film as an industry

ವರ್ಷದಲ್ಲಿ ಸರಾಸರಿ (ಡಬ್ಬಿಂಗ್ ಚಿತ್ರಗಳೊಂದಿಗೆ) 200 ಸಿನಿಮಾಗಳೊಂದಿಗೆ ಅತಿ ಹೆಚ್ಚು ಚಿತ್ರಗಳನ್ನು ನಿರ್ಮಿಸಿದ ಘನತೆ ತೆಲುಗು ಚಿತ್ರ ಪರಿಶ್ರಮಕ್ಕೆ ಇದೆ. ಮೊದಲು ಚೆನ್ನೈನಲ್ಲಿ ಇದ್ದ ಚಿತ್ರ ಕೈಗಾರಿಕೆಯು ಸರ್ಕಾರದ ಪ್ರೋತ್ಸಾಹದಿಂದ ಈಗ ಹೈದರಾಬಾದಿಗೆ ವರ್ಗಾ ವಾಗಿದೆ. ಒಂದು ಚಿತ್ರ ನಿರ್ಮಿಸಲು 5 ರಿಂದ 35 ಕೋಟಿ ರೂಪಾಯಿಗಳವರೆಗೆ ಖರ್ಚಾಗುತ್ತದೆ. ರಾಜ್ಯದಲ್ಲಿ 2000 ಕ್ಕೂ ಹೆಚ್ಚು ಚಿತ್ರಮಂದಿರಗಳಿವೆ. ಚಿತ್ರದ ತಯಾರಿಯಲ್ಲಿ ನೇರವಾಗಿ ಮತ್ತು ಪ್ರದರ್ಶನಗಳಲ್ಲಿ ಪರೋಕ್ಷವಾಗಿ ಸಿನಿಮಾ ರಂಗದಲ್ಲಿ ಸಾವಿರಾರು ಜನಕ್ಕೆ ಉದ್ಯೋಗಾವಕಾಶ ಕಲ್ಪಿಸಿಕೊಡುತ್ತದೆ.

## ಪತ್ರಿಕಾ ರಂಗ (Print Media)

ಹಿಂದಿನ ತರಗತಿಗಳಲ್ಲಿ ನೀವು ಮುಖ್ಯವಾದ ಪುಸ್ತಕಗಳನ್ನು ಕುರಿತು ತಿಳಿದುಕೊಂಡಿರುವಿರಿ. ಮೊದಲು ಜನರು ತಾಳೆ ಎಲೆ, ತೊಗಟೆ ಮತ್ತು ಬಟ್ಟೆಗಳಂತಹವುಗಳ ಮೇಲೆ ಬರೆಯುತ್ತಿದ್ದರು. 11ನೇ ಶತಮಾನದಲ್ಲಿ ಕಾಗದ 15ನೇ ಶತಮಾನದಲ್ಲಿ ಗುಟೆನಾಬೆರ್ಗ್ ಎಂಬುವವರು ಮುದ್ರಣ ಯಂತ್ರವನ್ನು ಕಂಡು ಹಿಡಿದ ನಂತರ ಪರಿಸ್ಥಿತಿಗಳು ಬದಲಾದವು. ಓದುವುದು, ಬರೆಯುವುದು ಮೇಲ್ವರ್ಗದ ಜನರಿಗೆ ಮಾತ್ರ ಸೀಮಿತವಾಗಿತ್ತು . ಜನರಲ್ಲಿ ಅಕ್ಷರಸ್ಥತೆ ವ್ಯಾಪ್ತಿಯನ್ನು ಹೆಚ್ಚಿಸಲು ಮುದ್ರಣ ಸಹಕಾರಿಯಾಗಿದೆ.

ವಿವಿಧ ಪುಸ್ತಕಗಳ ಪ್ರತಿಗಳು ದೊರಕುವಂತಾದುದಲ್ಲದೆ, ಮುದ್ರಣದಿಂದ ದಿನಪತ್ರಿಕೆ, ವಾರ, ಪಾಕ್ಷಿಕ, ಮಾಸಪತ್ರಿಕೆಗಳು ಸಂಸ್ಕೃತಿಯನ್ನು ಮುದ್ರಿಸುವ ಯಂತ್ರಗಳನ್ನು ಪ್ರವೇಶಪಡಿಸಿಲಾಯಿತು.

- ವಿವಿಧ ವಿಷಯಗಳ ಮೇಲೆ ತರತರಹದ ಪತ್ರಿಕೆಗಳಿವೆ. ನಿಮ್ಮ ಗ್ರಾಮ / ಪಟ್ಟಣದಲ್ಲಿ ಸಿಗುವ ಪತ್ರಿಕೆಗಳ ಹಳೆಯ ಸಂಚಿಕೆಗಳಿಂದ ಮುಖಚಿತ್ರದ ಪುಟಗಳನ್ನು ಸಂಗ್ರಹಿಸಿರಿ. ಇವುಗಳನ್ನು ವಿಷಯಗಳಿಗನು ಗುಣವಾಗಿ ವರ್ಗೀಕರಿಸಿರಿ. ಇವುಗಳನ್ನು ಇನ್ನೂ ಯಾವ ವಿಧವಾಗಿ ಆದರೂ ರಂಗಕ್ಕೆ ವರ್ಗೀಕರಿಸಬಹುದಾ ?

ಮುದ್ರಣಾ ಮಾಧ್ಯಮದಲ್ಲಿ ವಾರ್ತೆ (ದಿನ) ಪತ್ರಿಕೆಗಳು, ವಾರಪತ್ರಿಕೆಗಳು, ಮಾಸ ಪತ್ರಿಕೆಗಳು ಇತರ ಪತ್ರಿಕೆಗಳಿರುತ್ತವೆ. ಸಮಾಚಾರ, ವಿಜ್ಞಾನವನ್ನು ನೀಡುವುದರಲ್ಲಿ ಮುದ್ರಣ ಮಾಧ್ಯಮವು ಗಣನೀಯವಾದ ಪಾತ್ರ ಪೋಷಿಸುತ್ತದೆ. ಎಲಕ್ಟ್ರಾನಿಕ್ ಪ್ರಸಾರ ಮಾಧ್ಯಮಗಳು ಬಂದ ನಂತರವೂ ಮುದ್ರಣ ಮಾಧ್ಯಮವು ತನ್ನ ಪ್ರಾಧಾನ್ಯತೆಯನ್ನು ಕಳೆದುಕೊಂಡಿಲ್ಲ.




SCERT TELANGANA

ನಮ್ಮ ದಿನನಿತ್ಯದ ಜೀವನದಲ್ಲಿ ವಾರ ಪತ್ರಿಕೆಗಳು ಮುಖ್ಯ ಪಾತ್ರಹಿಸುತ್ತವೆ. ಚೈನಾದಿಂದ ಪ್ರಸಾರ ವಾಗುವ ದಿ ಪೆಕಿಂಗ್ ಗೆಜೆಟ್ ನ್ನು ಬಹಳ ಜನ ಪರಿಶೋಧಕರು ಮೊಟ್ಟಮೊದಲ ಪತ್ರಿಕೆಯಾಗಿ ಪರಿಗಣಿಸುತ್ತಾರೆ. ಇದು 618 ರಲ್ಲಿ ಮುದ್ರಿತವಾಗಿದೆ. ಮೊದಲಿಗೆ ದಿನಪತ್ರಿಕೆಯನ್ನು ಕೈಬರಹದ ಮೂಲಕ ಬರೆಯುತ್ತಿದ್ದರು. ಆ ನಂತರ ಅದನ್ನು ಮುದ್ರಿಸುವುದನ್ನು ಪ್ರಾರಂಭಿಸಿದರು. ಆಧುನಿಕ ಭಾವನೆಗಳಿಂದ ಮೊದಲ ದಿನಪತ್ರಿಕೆ 1655 ರಲ್ಲಿ ಲಂಡನ್‌ನಲ್ಲಿ ಆಕ್ಸ್‌ಫರ್ಡ್‌ನಿಂದ ಪ್ರಚಲಿತ ವಾಯಿತು. ಅದರ ಹೆಸರು ಆಕ್ಸ್‌ಫರ್ಡ್ ಗಜೆಟ್ (Oxford Gazette) ಅಮೇರಿಕಾದಲ್ಲಿನ ಮೊದಲ ವಾರ್ತಾ ಪತ್ರಿಕೆಯಾದ ಪಬ್ಲಿಕ್ ಅಕ್ಕರೆನ್ಸ್ (Public Occurrences) 1690ರಲ್ಲಿ ಪ್ರಾರಂಭವಾಯಿತು. ಭಾರತದೇಶದಲ್ಲಿ ಮೊದಲ ವಾರಪತ್ರಿಕೆ ಕಲ್ಲತ್ತಾದಿಂದ 1780 ರಲ್ಲಿ ಪ್ರಚಲಿತವಾಯಿತು. ಅದು ಬೆಂಗಾಲ್ ಗಜೆಟ್ (BengalGazette). ಅದಕ್ಕೆ ಕಲ್ಕತ್ತಾ ಅಡ್ವಟೈಜರ್(Calcutta Advertiser) ಎಂದು ಮತ್ತೊಂದು ಹೆಸರು ಸಹ ಇದೆ. ಭಾರತದೇಶದ ಎರಡು, ಮೂರು, ನಾಲ್ಕನೇ ವಾರ್ತಾ ಪತ್ರಿಕೆಗಳಾದ ಇಂಡಿಯನ್ ಗೆಜೆಟ್, ಕಲ್ಕತ್ತಾ ಗೆಜೆಟ್, ಬೆಂಗಾಲ್ ಜರ್ನಾಲ್ ಸಹ ಕಲ್ಕತ್ತಾದಿಂದಲೇ ಹೊರ ಬೀಳುತ್ತಿದ್ದವು. ತೆಲುಗಿನಲ್ಲಿ ಮೊದಲ ದಿನಪತ್ರಿಕೆ ಕೃಷ್ಣಾ ಪತ್ರಿಕೆ (Krishna Patrika) ಅದರ ಸಂಪಾದಕರು ಮುಟ್ನೂರಿ ಕೃಷ್ಣಾರಾವು.

ತಂತ್ರಜ್ಞಾನದ ಕ್ರಾಂತಿಯಿಂದಾಗಿ ಮುದ್ರಣ ಮಾಧ್ಯಮದಲ್ಲಿ ಬಹಳ ಬದಲಾವಣೆಗಳು ಬಂದಿವೆ. ಬಹಳ ದಿನಗಳವರೆಗೆ ದಿನಪತ್ರಿಕೆಗಳು ಕೈಯಿಂದ ಅಚ್ಚುಮೊಳೆ ಜೋಡಿಸುವ ಮೂಲಕ ಮುದ್ರಿಸಲಾಗುತ್ತಿತ್ತು. ಆನಂತರ ಈ ಸ್ಥಾನದಲ್ಲಿ ಮೊನೋ ಟೈಪ್, ಲೀನೋಟೈಪ್‌ಗಳು ಬಂದವು. ಈ ಪ್ರಕ್ರಿಯೆಯಲ್ಲಿ ಕೀಬೋರ್ಡ್‌ನಿಂದ ನಡೆಯುವ ಯಂತ್ರಗಳಿಂದ ಅಕ್ಷರಗಳನ್ನು ಜೋಡಿಸುತ್ತಿದ್ದರು. ಈಗ ಇದಕ್ಕೆ ಸಹ ಕಾಲ ಬದಲಾದಂತೆ ಟೈಪ್ ಸೆಟ್ಟಿಂಗ್ ಕಂಪ್ಯೂಟರ್‌ಗಳು, ಆಫ್‌ಸೆಟ್, ಲೇಜರ್ ಮುದ್ರಣಗಳು ಬಂದಿವೆ. ಹಿಂದಿನ ಕಾಲದಲ್ಲಿ ದಿನಪತ್ರಿಕೆಗಳು ಕಪ್ಪು ಮತ್ತು ಬಿಳುಪುನಿಂದ ಮುದ್ರಿತವಾಗುತ್ತಿದ್ದವು. ಪ್ರಸ್ತುತ ಈಗ ಎಲ್ಲಾ ಪ್ರಮುಖ ದಿನ ಪತ್ರಿಕೆಗಳು ಬಣ್ಣ ಬಣ್ಣಗಳಿಂದ ಮುದ್ರಿತಗೊಳ್ಳುತ್ತಿವೆ.

ಪ್ರಸ್ತು ವ್ಯವಹಾರಗಳು, ವಿವಿಧ ಮಟ್ಟದ ಪ್ರಚಲಿತ ಘಟನೆಗಳು, ರಾಜಕೀಯ ವಾರ್ತೆಗಳು, ವ್ಯಾಪಾರ, ಕ್ರೀಡೆ, ಸಿನಿಮಾಗಳಂತಹ ವಿಷಯಗಳಿಗೆ ಸಂಬಂಧಿಸಿದ ವಿವರಗಳನ್ನು ದಿನಪತ್ರಿಕೆಗಳು ಮಾಹಿತಿಗಳನ್ನು ಒದಗಿಸುತ್ತವೆ.

- ನಿಮ್ಮ ಪ್ರಾಂತದಲ್ಲಿ ದೊರೆಯುವ ವಿವಿಧ ದಿನಪತ್ರಿಕೆಗಳನ್ನು ತರಗತಿಗೆ ತೆಗೆದುಕೊಂಡು ಬನ್ನಿ ಎಷ್ಟು ಪತ್ರಿಕೆಗಳಿವೆಯೋ ಅಷ್ಟು ಗುಂಪುಗಳಾಗಿ ಏರ್ಪಡಾಗಿರಿ. ವಾರ್ತೆಗಳು, ವಿಶೇಷತೆಗಳು ಹೇಗೆ ವಿಭಜಿಸಿದ್ದಾರೆ ಎಂಬುದನ್ನು(ಯಾವ ಪುಟದಲ್ಲಿ ಏನಿದೆ) ವಿಶ್ಲೇಷಿಸಿರಿ
- ಮೇಲೆ ತಿಳಿಸಿದ ದಿನಪತ್ರಿಕೆಗಳ ಸಂಚಿಕೆಗಳನ್ನು ಕ್ರಮವಾಗಿ ವಾರಪೂರ್ತಿ ಸಂಗ್ರಹಿಸಿರಿ. ಮೇಲಿನ ಗುಂಪುಗಳಲ್ಲಿ ಪ್ರತಿದಿನ ಪತ್ರಿಕೆಗಳಲ್ಲಿ ಯಾವ ಯಾವ ದಿನ ಯಾವ ಪ್ರತ್ಯೇಕ ಅಂಶಗಳು ಪ್ರಕಟವಾಗುತ್ತವೆಯೋ ತಿಳಿದುಕೊಳ್ಳಿರಿ. ಆ ವಿವರಗಳನ್ನು ತರಗತಿ ಕೋಣೆಯಲ್ಲಿ ಹಂಚಿಕೊಳ್ಳಿರಿ. ದಿನಪತ್ರಿಕೆಯಲ್ಲಿ ಇಂತಹ ಅಂಶಗಳು ಏಕೆ ಪ್ರಕಟವಾಗುತ್ತವೆಯೋ ಕಾರಣಗಳನ್ನು ಹೇಳಿರಿ.

### ಸಾಂಸ್ಕೃತಿಕ ಚೈತನ್ಯ, ಸ್ವಾತಂತ್ರ್ಯ ಚಳುವಳಿಗಳಲ್ಲಿ ದಿನಪತ್ರಿಕೆಗಳ ಪಾತ್ರ :

ಬ್ರಿಟೀಷ್ ಆಳ್ವಿಕೆಯಲ್ಲಿ ಸಮಾಜ ಸುಧಾರಕರು ಸಮಾಜದಲ್ಲಿ ಬದಲಾವಣೆಗಾಗಿ ಹೋರಾಡಿದರು. ಹಿಂದೂ ಮತದಲ್ಲಿನ ಸುಧಾರಣೆಗಳು, ಸತಿಸಹಗಮನ ಪದ್ಧತಿಯ ನಿಷೇಧ, ವಿಧವೆಯರ ಪುನರ್ ವಿವಾಹವನ್ನು ಪ್ರೋತ್ಸಾಹಿಸುವಂತಹ ಮುಖ್ಯವಾದ ಸುಧಾರಣೆಗಳು. ಈ ಸುಧಾರಣೆಗಳಿಂದ ಪ್ರೇರಣೆ ಪಡೆದು ದೇಶದ ವಿವಿಧ ಪ್ರಾಂತಗಳಿಂದ ಕೆಲವು ಪತ್ರಿಕೆಗಳು ಪ್ರಾರಂಭವಾದವು.

ಭಾರತ ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಹೋರಾಡಿದ ಅನೇಕ ಮಂದಿ ನಾಯಕರು ಪತ್ರಿಕಾ ಸಂಪಾದಕರು. ಅಮ್ರಿತ್‌ಬಜಾರ್ ಪತ್ರಿಕೆ (1868ರಲ್ಲಿ ಪ್ರಾರಂಭವಾಯಿತು.) ಇದರ ಸಂಪಾದಕರು ಸಿಸಿರ್ ಕುಮಾರ್ ಘೋಷ್, ಬೆಂಗಾಲೀ (1833ರಲ್ಲಿ ಪ್ರಾರಂಭ) ಇದರ ಸಂಪಾದಕ ಸುರೇಂದ್ರನಾಥ್ ಬೆನರ್ಜಿ, ದಿ ಹಿಂದೂ (1878ರಲ್ಲಿ ಪ್ರಾರಂಭ) ಜಿ. ಸುಬ್ರಹ್ಮಣ್ಯ ಅಯ್ಯಾರ್, ಕೇಸರಿ ಪತ್ರಿಕೆ (ಪ್ರಾರಂಭ 1881) ಸಂಪಾದಕರು ಬಾಲ ಗಂಗಾಧರ ತಿಲಕ್‌ರು ಇದರಲ್ಲಿ ಹೇಳಿಕೊಳ್ಳುವಂತವರು. ಈ ಪತ್ರಿಕೆ

SCERT TELANGANA

ಸಂಪಾದಕರು ತಮ್ಮ ಭಾವನೆಗಳನ್ನು, ಉದ್ದೇಶಗಳನ್ನು ಈ ಪತ್ರಿಕೆಗಳ ಮೂಲಕ ಪ್ರಚಾರ ಮಾಡುತ್ತಿದ್ದಾರು. ಭಾರತೀಯರಲ್ಲಿ ರಾಷ್ಟ್ರೀಯ ಭಾವನೆಯನ್ನು ಬೆಳೆಸಲು ವಾರ್ತಾಪತ್ರಿಕೆಗಳು ಪ್ರಮುಖ ಪಾತ್ರವಹಿಸುತ್ತವೆ. ಮುಟ್ನೂರಿ ಕೃಷ್ಣಾರಾವು ಸಂಪಾದಕತ್ವದಲ್ಲಿಯ ಕೃಷ್ಣ ಪತ್ರಿಕೆಯ ಬಗ್ಗೆ ಸಂಕ್ಷಿಪ್ತವಾಗಿ ಹಿಂದಿನ ಅಧ್ಯಾಯಗಳಲ್ಲಿ ತಿಳಿದುಕೊಂಡಿದ್ದೇವೆ. ನಿಜಾಂ ಆಡಳಿತ ಭಾಗಸ್ವಾಮಿಗಳು, ಜಾಗೀರುದಾರರು ಹೈದರಾಬಾದ್ ರಾಜ್ಯದಲ್ಲಿನ ಜನರಿಗೆ ನೀಡುತ್ತಿರುವ ಹಿಂಸೆಯಿಂದ ಜನರನ್ನು ಚೈತನ್ಯಗೊಳಿಸುವ ಸಲುವಾಗಿ ಆಂಧ್ರ ಮಹಾಸಭೆಯು ಬಿಟ್ಟಿಚಾಕಿರಿ ರದ್ದು ಎಂಬ ಬಿತ್ತಿ ಪತ್ರವನ್ನು ಮುದ್ರಿಸಿತು.

ತೆಲಂಗಾಣದಲ್ಲಿಯ ಕೆಲವು ಮುಖ್ಯ ಪತ್ರಿಕೆಗಳು ಮತ್ತು ಮುದ್ರಣಾ ಸಂಸ್ಥೆಗಳು ನಲ್ಗೊಂಡ ಜಿಲ್ಲೆಯ ಶಬ್ದವಿಷೂ ವೆಂಕಟರಾಮ ನರಸಿಂಹರಾವು ಸಂಪಾದಕತ್ವದಲ್ಲಿ ಹೊರಬಂದ ನೀಲಗಿರಿ ಪತ್ರಿಕೆ, ವರಂಗಲ್ ಜಿಲ್ಲೆ ಇನುಗುರ್ತಿಯಿಂದ ವೃದ್ಧಿರಾಜು ಸಹೋದರರು ಹೊರತಂದ ತೆನುಗು ಪತ್ರಿಕೆ ಜನರಲ್ಲಿ ರಾಷ್ಟ್ರೀಯ ಭಾವನೆಗಳನ್ನು ಪ್ರಚೋದಿಸುವ ಉದ್ದೇಶದಿಂದ ಸುರವರಂ ಪ್ರತಾಪರೆಡ್ಡಿ ಪ್ರಕಟಿಸಿದ ಗೋಲ್ಕೊಂಡ ಪತ್ರಿಕೆ, ಮಂದುಮುಲ ನರಸಿಂಗರಾವ್ ರೈತ ಸಮಸ್ಯೆಗಳನ್ನು ಬೆಳಕಿಗೆ ತರಲು ಪ್ರಕಟಿಸಿದ ರಯ್ಯತ್ ಉರ್ದು ಪತ್ರಿಕೆ ಮೊದಲಾದವು. ನಿಜಾಂ ನಿರಂಕುಶ ಪಾಲನೆಯನ್ನು ಭೂಮಾಲಿಕರ ಗುಂಡಾಗಿರಿಯನ್ನು ವಿಮರ್ಶಿಸುತ್ತಾ ಇಮ್ರೋಜ್ ಪತ್ರಿಕೆಯಲ್ಲಿ ಶೋಯ ಬುಲ್ಲಾಖಾನ್ ವ್ಯಾಸಗಳನ್ನು ಬರೆದನು. ಪರಿಣಾಮವಾಗಿ ರಜಾಕಾರರು ಆತನ ಕೈಗಳನ್ನು ಕತ್ತರಿಸಿ ಕೊಲೆ ಮಾಡಿದರು.

ಮಹಾತ್ಮ ಗಾಂಧೀ 1918 ರಲ್ಲಿ ಯಂಗ್ ಇಂಡಿಯನ್ ಎಂಬ ಪತ್ರಿಕೆಯ ಜವಾಬ್ದಾರಿಯನ್ನು ವಹಿಸಿದರು. ನಂತರ ಗುಜರಾತಿಯಲ್ಲಿ ನವಜೀವನ್ ಎಂಬ ಪತ್ರಿಕೆ ಸ್ಥಾಪಿಸಿದರು. ಮಹಾದೇವ್ ದೇಸಾಯಿ ಸಂಪಾದಕತ್ವದಲ್ಲಿನ ಹರಿಜನ ಎಂಬ ಪತ್ರಿಕೆಗೆ ವ್ಯಾಪಕ ಬರಹಗಳನ್ನು ಬರೆಯುತ್ತಿದ್ದರು. ಹೀಗೆ ಗಾಂಧೀಜಿಯವರು ಪತ್ರಿಕೆಗಳಿಗೆ ಬಹಳ ವಿಸ್ತಾರವಾಗಿ ಬರೆಯುತ್ತಿದ್ದರು.

### ಮುಖ್ಯ ಪದಗಳು

1. ಪ್ರೊಜೆಕ್ಟರ್ (ಸಿನಿಮಾ ರೀಲು ಬಿಡುವ ಯಂತ್ರ).
2. ವೀಕ್ಷಕ ವಿವರಣೆ 3. ಅಚ್ಚುಮೊಳೆ ಜೋಡಿಸು
4. ಸರ್ಕಾರಿ ಪ್ರಕಟನೆಯ ಪತ್ರಿಕೆ
5. ಪ್ರಕಾಶಪಡಿಸು

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ

1. ಚಲನಚಿತ್ರಗಳಿಗೂ, ನಾಟಕಗಳಿಗೂ ಇರುವ ಮೂರು ವ್ಯತ್ಯಾಸಗಳನ್ನು ಬರೆಯಿರಿ.
2. ನಿಮ್ಮ ಭಾಷಾ ಪಠ್ಯಪುಸ್ತಕದಲ್ಲಿನ ಯಾವುದಾದರೂ ಕಥೆಯನ್ನು ಇಲ್ಲವೇ ಪದ್ಯವನ್ನು ಚಿಕ್ಕ ಚಲನಚಿತ್ರವಾಗಿ ತೆಗೆಯಬಹುದೇ? ಇದರ ಆಧಾರವಾಗಿ ಚಿತ್ರ ತೆಗೆಯಲು ಯಾರಾರು ಅವಶ್ಯವೆಂಬ ಪಟ್ಟಿಯನ್ನು ತಯಾರು ಮಾಡಿರಿ.
3. ಸಮಾಜ ಬದಲಾವಣೆಗೆ ಚಲನಚಿತ್ರ ಒಂದು ಬಲವಾದ ಆಯುಧ ಎಂದು ಕೆಲವು ಜನ ವಾದಿಸುತ್ತಾರೆ. ಚಲನಚಿತ್ರ ಪ್ರಭಾವ ಕೆಟ್ಟದಾಗಿರುತ್ತದೆ. ಎಂದು ಮತ್ತೇ ಕೆಲವರು ಹೇಳುತ್ತಾರೆ. ನೀವು ಯಾವುದನ್ನು ಒಪ್ಪಿಕೊಳ್ಳುವಿರಿ ? ಏಕೆ ?
4. ಹಿಂದಿನ ಕಾಲದ ಚಿತ್ರಗಳಲ್ಲಿರುವ ಅಂಶಗಳಾವುವು ? ನೀವು ನೋಡಿದ ಚಿತ್ರಗಳು, ಹಿಂದಿನ ಚಿತ್ರಗಳಲ್ಲಿನ ಅಂಶಗಳಿರುವ ಭಿನ್ನತೆ ಮತ್ತು ಹೋಲಿಕೆಗಳೇನು ?
5. ಸ್ವತಂತ್ರ್ಯ ಚಳುವಳಿಯಲ್ಲಿ ದಿನ ಪತ್ರಿಕೆಗಳು ಪ್ರಧಾನ ಪಾತ್ರ ಹೇಗೆ ಪೋಷಿಸಿದವು ?
6. ತಾಜ ಅಂಶಗಳನ್ನು ತಿಳಿಸುವ ವಾರ್ತೆಗಳನ್ನು ದಿನಪತ್ರಿಕೆಗಳಿಂದ ಸಂಗ್ರಹಿಸಿ, ತರಗತಿ ಕೋಣೆಯಲ್ಲಿ ಪ್ರದರ್ಶಿಸಿರಿ.

### ಪ್ರಾಜೆಕ್ಟ್ ಕೆಲಸ :

1. ದಿನಪತ್ರಿಕೆಗಳನ್ನು ನೋಡಿ ಅದರಲ್ಲಿಯ ಪುಟಗಳನ್ನು ಹೇಗೆ ರೂಪಿಸಿದ್ದಾರೆ ವಿವರಿಸಿರಿ ? ಎಂತಹ ಚಿತ್ರಗಳನ್ನು ರೂಪಿಸಿದ್ದಾರೆ ?

ವಾಣಿಜ್ಯ ಪ್ರಕಟಣೆಗಳಿಗೆ ಎಷ್ಟು ಸ್ಥಳ ಮೀಸಲಿಟ್ಟಿದ್ದಾರೆ ? ಸಂಪಾದಕೀಯದಲ್ಲಿ ಯಾವ ಅಂಶಗಳನ್ನು ಪ್ರಸ್ತಾಪಿಸುತ್ತಾರೆ?

2. ನೀವು ಹೆಚ್ಚಾಗಿ ನೋಡುವ ದೂರದರ್ಶನದ ಚಾನಲ್‌ಗಳನ್ನು ಆಯುದ್ದೊಳ್ಳಿ ? 4–5 ವಿದ್ಯಾರ್ಥಿಗಳಿಂದ ಗುಂಪುಗಳನ್ನು ಮಾಡಿ ಒಂದೊಂದು ಗುಂಪು ಒಂದೊಂದು ಚಾನಲ್ ಆಯುದ್ದೊಳ್ಳಬೇಕು ? ಅವು ಮತ, ವಾರ್ತೆಗಳು, ಸಿನಿಮಾಗಳು, ಸೀರಿಯಲ್‌ಗಳು, ಪ್ರಕಟಣೆಗಳಿಗೆ ಎಷ್ಟು ಶೇಕಡಾ ಸಮಯವನ್ನು ಮೀಸಲಿಟ್ಟಿದ್ದಾರೆಯೋ ಅಂದಾಜು ಮಾಡಿರಿ. ನೀವು ತಿಳಿದುಕೊಂಡ ವಿವರಗಳನ್ನು ತರಗತಿಯಲ್ಲಿ ಇತರ ಸಂಘಗಳೊಂದಿಗೆ ಚರ್ಚಿಸಿರಿ.

SCERT TELANGANA

ಘಟಕ 23

# ಕ್ರೀಡೆಗಳು: ರಾಷ್ಟ್ರೀಯ ಮತ್ತು ವಾಣಿಜ್ಯ

- ನಿಮಗೆ ಆಟಗಳು ಆಡುವುದು ಎಂದರೆ ಇಷ್ಟನಾ ?
- ಯಾವ ಆಟಗಳನ್ನು ಆಡುತ್ತೀರಿ ?
- ಯಾವ ಆಟ ಎಂದರೆ ನಿಮಗೆ ಹೆಚ್ಚು ಇಷ್ಟ?
- ಕೇವಲ ಹುಡುಗಿಯರು ಇಲ್ಲವೇ ಕೇವಲ ಹುಡುಗರು ಆಡುವ ಆಟಗಳನ್ನು ಹೇಳಿರಿ.
- ಕೆಲವು ಆಟಗಳನ್ನು ಕೇವಲ ಗ್ರಾಮಗಳಲ್ಲಿ ಮಾತ್ರ ಆಡುತ್ತಾರಾ ?
- ಕೆಲವು ಆಟಗಳು ಕೇವಲ ಹೆಚ್ಚು ಹಣವಿರುವವರು ಮಾತ್ರ ಆಡುತ್ತಾರಾ ?

## ನೀವು ಎಕೆ ಆಡುತ್ತೀರಾ ? (Why do you play?)

ಸೂಚನೆ : ಕೆಳಗೆ ಕೊಟ್ಟ ಕಾರಣವನ್ನು ಒಪ್ಪಿಕೊಳ್ಳುವುದಾದರೆ (✓) ಗುರ್ತು ಹಾಕಿರಿ. ಒಪ್ಪದಿದ್ದಲ್ಲಿ (×) ಗುರ್ತು ಹಾಕಿರಿ. ನಿಮಗೆ ಬೇರೆ ಆಲೋಚನೆ ಬಂದಲ್ಲಿ ಆ ಕಾರಣಗಳನ್ನು ಪಟ್ಟಿಯಲ್ಲಿ ಬರೆಯಿರಿ.

| | |
|---|---|
| ಆಟಗಳನ್ನು ಆಡುವುದು ಸುಲಭ | |
| ಆಟಗಳು ಆಡುವುದು ಸಂತೋಷವಾಗಿರುತ್ತದೆ. | |
| ತಂದೆ ತಾಯಿಗಳಯ, ಶಿಕ್ಷಕರು, ಸ್ನೇಹಿತರು ಮೆಚ್ಚಿಕೊಳ್ಳುವರು | |
| ಆಟಗಳು ಸವಾಲನ್ನು ಹಾಕುತ್ತದೆ. | |
| ಆಟಗಳಿಂದ ಶರೀರವು ಆರೋಗ್ಯವಾಗಿರುತ್ತದೆ. | |
| ಸಚಿನ್, ಸಾನಿಯಾ ಮಿರ್ಜಾರಂತಹ ಅಭಿಮಾನ ಕ್ರೀಡಾಕಾರರನ್ನು ಅನುಕರಣೆಗೆ ಅವಕಾಶ. | |
| ಓದಿಗಿಂತಲೂ ಆಟಗಳು ಸುಲಭ | |
| ದೂರದರ್ಶನದಲ್ಲಿ ಕಾಣಿಸಿಕೊಳ್ಳುತ್ತೇವೆ. | |
| ಆಟಗಳಲ್ಲಿ ಬರವಣಿಗೆ ಪರೀಕ್ಷೆ, ಇತರ ಪರೀಕ್ಷೆಗಳಿರುವುದಿಲ್ಲ. | |
| ಅಂತರಾಷ್ಟ್ರೀಯ ಸ್ಪರ್ಧೆಗಳಲ್ಲಿ ಪದಕಗಳನ್ನು ಪಡೆಯಬಹುದು. | |
| ದೇಶಕ್ಕೆ ಖ್ಯಾತಿ ತರುವುದಕ್ಕಾಗಿ | |
| ಹೆಸರು, ಹಣ, ಖ್ಯಾತಿಯನ್ನು ಗಳಿಸಲು. | |

***ತರಗತಿಯಲ್ಲಿನ ವಿದ್ಯಾರ್ಥಿಗಳೆಲ್ಲರಿಗೂ ಅಭಿಪ್ರಾಯಗಳನ್ನು ಕ್ರೋಢಿಕರಿಸಿ ಯಾವ ಕಾರಣವನ್ನು ಅವರು ಮುಖ್ಯವಾಗಿ ಭಾವಿಸುತ್ತಾರೋ ತಿಳಿದುಕೊಳ್ಳಿರಿ.***

ಅನೇಕ ಕಾರಣಗಳಿಂದ ಆಟಗಳನ್ನು ಆಡುತ್ತೇವೆ. ಆದರೆ ನಾವು ಯಾವ ಆಟಗಳನ್ನು ಆಡುತ್ತೇವೆ. ಯಾವ ಆಟಗಳನ್ನು ನೋಡುತ್ತೇವೆ ಎಂಬುದು ಸಮಾಜದಲ್ಲಿ ಜರುಗುವುದರೊಂದಿಗೆ ಪ್ರಭಾವಿತಗೊಳ್ಳುತ್ತದೆ. ಉದಾಹರಣೆಗೆ ಕ್ರಿಕೇಟ್‌ನ್ನು ತೆಗೆದುಕೊಳ್ಳಿ. ನಮ್ಮ ಊರಿನ ಜನರು ಕಬ್ಬಡ್ಡಿ ಆಡಿದ ಹಾಗೆ ಹಿಂದೆ ಇಂಗ್ಲೆಡಿನಲ್ಲಿ ಗ್ರಾಮಸ್ಥರು ಖಾಲಿ ಮೈದಾನಗಳಲ್ಲಿ ಕ್ರಿಕೇಟ್ ಆಡುತ್ತಿದ್ದರು. ಆದರೆ ಈಗ ಭಾರತದೇಶದೆಲ್ಲೆಡೆ ಗ್ರಾಮ, ಪಟ್ಟಣಗಳಲ್ಲಿ ಈ ಆಟವನ್ನು ಆಡುತ್ತಿದ್ದಾರೆ. ಪ್ರತ್ಯೇಕವಾಗಿ ಯುವಕರಿಗೆ ಈ ಆಟವೆಂದರೆ ವಿಪರೀತವಾದ ಮೋಜು, ಅಭಿಮಾನವು ಹೆಚ್ಚುತ್ತಿದೆ. ಜನರು ತಮ್ಮ ಅಮೂಲ್ಯವಾದ ಸಮಯವನ್ನು ವೃಥಾ ಮಾಡುತ್ತಾ ದೂರದರ್ಶನದಲ್ಲಿ ಈ ಆಟವನ್ನು ನೋಡುತ್ತಿರುತ್ತಾರೆ. ತಮ್ಮ ಅಭಿಮಾನ ತಂಡ ಆಟದಲ್ಲಿ ಗೆಲ್ಲಬೇಕೆಂಧು ಪೂಜೆಗಳನ್ನು ಮಾಡುವವರು ಕೆಲವು ಜನರ ಇದ್ದಾರೆ. ವಾಸ್ತವಕ್ಕೆ ಬಿಳಿ ಜಾತಿಯವರಿಗೆ ಕ್ರಿಕೆಟ್ ಇಷ್ಟ

SCERT TELANGANA

ಪ್ರಖ್ಯಾತಿ ಹೊಂದಿದೆ. ಆದರೆ ಹಾಕಿ, ಫುಟ್‌ಬಾಲ್‌ಗಳಂತಹ ಇತರ ಆಟಗಳಿಗೆ, ಕಬ್ಬಡ್ಡಿ, ಖೋ ಖೋಗಳಂತಹ ಸಂಪ್ರದಾಯ ಆಟಗಳಿಗೆ ಜನರಿಂದ ಬೆಂಬಲ ಪ್ರೋತ್ಸಾ ಕಡಿಮೆಯಾಗುತ್ತಿವೆ. ಇವುಗಳ ಬಗ್ಗೆ ಯಾರಿಗೂ ಆಸಕ್ತಿ ಇಲ್ಲದಾಗಿದೆ. ಇದಕ್ಕೆ ಕಾರಣ ಏನಿರಬಹುದು ? ಇಂಗ್ಲಾಂಡಿನಲ್ಲಿ ಹಳ್ಳಿಗಳಲ್ಲಿ ಆಡಿದ ಆಟ ನಮ್ಮ ದೇಶದಲ್ಲಿ ಇಷ್ಟು ಪ್ರಸಿದ್ಧಿ ಹೊಂದಲು ಏನಿರಬಹುದು? ಬನ್ನಿ ತಿಳಿದುಕೊಳ್ಳೋಣ.

ಕ್ರಿಕೆಟ್ ಇಂಗ್ಲೆಂಡಿನಲ್ಲಿ ಹುಟ್ಟಿದೆ. 19ನೆ ಶತಮಾನದ ಕೊನೆಗೆ ಶ್ರೀಮಂತರು, ಅಂದರೆ ಹೆಚ್ಚು ಭೂಮಿ ಇರುವ ಭೂಸ್ವಾಮಿ ಪುರುಷರ ಆಟವಾಗಿ ಮಾರ್ಪಟ್ಟಿತು. ಬ್ರಿಟೀಷ್‌ನವರು ಮುಖ್ಯವಾದುದೆಂದು ಭಾವಿಸಿದ ನ್ಯಾಯವಾದ ಆಟ, ಕ್ರಮಶಿಕ್ಷಣ, ದೊಡ್ಡ ಮನುಷ್ಯರಂತವರಿಗೆ ಈ ಆಟ ಪ್ರತ್ಯೇಕವಾಗಿದೆ ಎಂದು ಭಾವಿಸುತ್ತಿದ್ದರು. ಶಾರೀರಿಕ ಶಿಕ್ಷಣದ ಮೂಲಕ ಬಾಲಕರನ್ನು ಆದರ್ಶ ಪೌರರನ್ನಾಗಿಸುವ ಕಾರ್ಯಕ್ರಮದಲ್ಲಿನ ಭಾಗವಾಗಿ ಇದನ್ನು ಪಾಠಶಾಲೆಗಳಲ್ಲಿ ಪ್ರವೇಶಪಡಿಸಿದರು. ಹುಡುಗರಿಗೆ ಉದ್ದೇಶಿಸಿದ ಆಟಗಳನ್ನು ಹುಡುಗಿಯರನ್ನು ಆಡಿಸುತ್ತಿರಲಿಲ್ಲ.

ಇಂಗ್ಲೆಂಡಿಗೆ ಸೇರಿದ ಫುಟ್‌ಬಾಲ್, ಹಾಕಿಗಳಂತಹ ತಂಡದ ಆಟಗಳು ಪ್ರಪಂಚವೆಲ್ಲಾ ಖ್ಯಾತಿ ಪಡೆದವು. ಆದರೆ, ಕ್ರಿಕೆಟ್ ಮಾತ್ರ ಬ್ರಿಟೀಷರು ಆಳಿದ ದೇಶಗಳಲ್ಲಿ ಮಾತ್ರ ವಿಸ್ತರಿಸಿದೆ. ತಮ್ಮ ವಸಹತು ಪ್ರಾಂತಗಳಲ್ಲಿ ಶ್ವೇತ ಜಾರಿಯವರ ಆಳ್ವಿಕೆಗಾರರ ಪ್ರಸಿದ್ದ ಆಟವಾಗಿ ನೆಲೆಗೊಳಿಸಿದ್ದಾರೆ. (ಉದಾ. ದಕ್ಷಿಣ ಆಫ್ರಿಕಾ, ಜಿಂಬಾಬ್ವೆ, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ವೆಸ್ಟಿಂಡಿಸ್, ಕೆನ್ಯಾ) ಇಲ್ಲವೇ ಭಾರತ ದೇಶದಲ್ಲಿಯ ರೀತಿಯಲ್ಲಿ ವಸಹತು ಶಾಹಿ ಆಡಳಿತಗಾರರ ಪದ್ದತಿಗಳನ್ನುಅನುಕರಿಸಿದ ಸ್ಥಾನಿಕ ಶ್ರೀಮಂತ ವರ್ಗಗಳಿಂದ ಈ ಆಟ ಪ್ರಸಿದ್ಧಿ ಪಡೆಯಿತು.

- ನಿಮ್ಮ ಅಟ್ಲಾಸ್‌ನಲ್ಲಿ ಕ್ರಿಕೆಟ್ ಆಡುವ ದೇಶಗಳನ್ನು ಗುರ್ತಿಸಿರಿ.
- ವೆಸ್ಟೀಂಡಿಸ್ ಎಂಬ ಹೆಸರಿರುವ ಒಂದು ದೇಶವು ಯಾವುದು ಇಲ್ಲವೆಂಬ ವಿಷಯ ಗುರ್ತಿಸಿದ್ದೀರಾ? ಹೆಚ್ಚು ವೇಗವಾಗಿ ಓಡುವ ಓಟಗಾರು ಯಾವ ದ್ವೀಪದಿಂದ ಬಂದಿರುವನೋ ಗುರ್ತಿಸಿರಿ.

## ಭಾರತದೇಶದಲ್ಲಿ ಕ್ರಿಕೆಟ್ (Cricket in India)

ಕ್ರಿಕೆಟ್ ಪಂದ್ಯ ನೋಡುವುದೆಂದರೆ ಯಾವುದೋ ಒಂದು ತಂಡಕ್ಕೆ ಬೆಂಬಲ ನೀಡುವುದೆಂದು ಅಭಿಮಾನಿಗಳಿಗೆ ತಿಳಿದಿದೆ. ರಂಜೀಟ್ರೋಫಿಯಲ್ಲಿ ಡಿಲ್ಲಿ, ಮುಂಬಯಿ ಆಡುತ್ತಿದ್ದರೆ ಅಭಿಮಾನಿಗಳು ಯಾವ ಪಟ್ಟಣದಿಂದ ಬಂದಿದ್ದಾರೆ, ಯಾವ ತಂಡಕ್ಕೆ ಬೆಂಬಲ ನೀಡುತ್ತಾರೆ. ಎಂಬುದನ್ನು ಹಿಡಿದು ಒಂದು ತಂಡದ ಪರವಹಿಸುತ್ತಾರೆ. ಭಾರತ ದೇಶ, ಆಸ್ಟ್ರೇಲಿಯಾಗಳ ಮಧ್ಯೆ ಕ್ರಿಕೆಟ್ ಪಂದ್ಯ ನಡೆಯುತ್ತಿದ್ದರೆ ಹೈದರಬಾದ್ ಇಲ್ಲವೇ ಚೆನ್ನೈನಲ್ಲಿ ದೂರದರ್ಶನದಲ್ಲಿ ಪಂದ್ಯ ನೋಡುತ್ತಿರುವವರು ಭಾರತೀಯರಾಗಿ ತಮ್ಮ ದೇಶದ ಕಡೆ ಬೆಂಬಲಿಸುತ್ತಾರೆ. ಆದರೆ ಭಾರತದೇಶದ ಹಿಂದಿನ ದಿನಗಳಲ್ಲಿ ತಂಡಗಳು ಪ್ರಾಂತೀಯ ಭೌಗೋಳಿಕ ತತ್ವದ ಮೇಲೆ ಏರ್ಪಾಟಾಗಿರಲಿಲ್ಲ. 1932 ರವರೆಗೂ ಟೆಸ್ಟ್ ಪಂದ್ಯಗಳಲ್ಲಿ ಭಾರತದೇಶದ ತಂಡಕ್ಕೆ ಅವಕಾಶ ನೀಡಿಲ್ಲ. ಮತ್ತೇ ತಂಡಗಳು ಹೇಗೆ ಏರ್ಪಡಿಸುತ್ತಿದ್ದರು? ವಲಯ, ರಾಷ್ಟ್ರೀಯ ತಂಡಗಳು ಇಲ್ಲದಿದ್ದಾಗ ಅಭಿಮಾನಿಗಳು ತಮ್ಮ ಬೆಂಬಲ ತಿಳಿಸಲು ತಂಡಗಳನ್ನು ಯಾವ ಆಧಾರದ ಮೇಲೆ ಆಯ್ಕೆ ಮಾಡುತ್ತಿದ್ದರು ? ಇವಕ್ಕೆ ಸಮಾಧಾನಗಳಿಗಾಗಿ ನಾವು ಚರಿತ್ರೆಯನ್ನು ನೋಡಿದಾಗ ಭಾರತದಲ್ಲಿ ಕ್ರಿಕೆಟ್ ಹೇಗೆ ಅಭಿವೃದ್ಧಿ ಹೊಂದಿದೆ, ಬ್ರಿಟೀಷ್‌ರ ಆಡಳಿತದಲ್ಲಿ ಈ ಆಟ ಅಭಿಮಾನಿಗಳನ್ನು ಹೇಗೆ ವಿಭಜಿಸಿದೆಯೋ ಹೇಗೆ ಐಕ್ಯತೆಯನ್ನು ಸಾಧಿಸಿದೆ ಎಂಬುದನ್ನು ತಿಳಿದುಕೊಳ್ಳಬೇಕು.

ಭಾರತೀಯ ಕ್ರಿಕೆಟ್ ಎಂದರೆ ಭಾರತೀಯರು ಆಡಿದ ಕ್ರಿಕೆಟ್ ಮುಂಬೈಯಲ್ಲಿ ಹುಟ್ಟಿತು. ಈ ಆಟವನ್ನು ಮೊದಲು ಪ್ರಾರಂಭಿಸಿದವರು ಕಡಿಮೆ ಸಂಖ್ಯೆಯಲ್ಲಿರುವ ಪಾರ್ಶೀಗಳು. ತಮ್ಮ ವ್ಯಾಪಾರಗಳಿಂದ ಬ್ರಿಟೀಷರವರೊಂದಿಗೆ ಹತ್ತಿರ ಸಂಬಂಧಗಳು ಪಾರ್ಶಿ ಸಮಾಜಕ್ಕೆ ಏರ್ಪಟ್ಟವು. ಮೊದಲು ಪಾಶ್ಚಾತ್ತಿಕರಣ ಹೊಂದಿದ ಪಾರ್ಶಿಗಳೇ. ಭಾರತದೇಶ ಮೊದಲು ಕ್ರಿಕೆಟ್ ಕ್ಲಬ್ಬನ್ನು ಇವರು 1848ರಲ್ಲಿ ಬೊಂಬಾಯಿಯಲ್ಲಿ ಸ್ಥಾಪಿಸಿದರು. ಇದರ ಹೆಸರು ಓರಿಯಂಟಲ್ ಕ್ರಿಕೆಟ್‌ಕ್ಲಬ್. ಪಾರ್ಶೀ ವ್ಯಾಪಾರಸ್ಥರಾದ ಟಾಟಾಗಳು, ವಾಡಿಯಾಗಳು ಪಾರ್ಶೀ ಕ್ರಿಕೆಟ್ ಕ್ಲಬಗೆ ಹಣವನ್ನು ನೀಡಿದರಲ್ಲದೆ, ಅವುಗಳ ಪ್ರಯೋಜಕರಾಗಿದ್ದಾರೆ. ಆದರೆ ಭಾರತದೇಶದಲ್ಲಿನ ಶ್ವೇತ ಜಾತಿಯ ಕುಲೀನರು ಈ ಆಟದಲ್ಲಿ ಆಸಕ್ತಿ ತೋರಿಸುತ್ತಿರುವ ಪಾರ್ಶೀಗಳಿಗೆ ಯಾವ ವಿಧವಾಗಿ ಸಹಾಯ ನೀಡಲಿಲ್ಲ. ವಾಸ್ತವಾಂಶಕ್ಕೆ ಬಿಳಿಜಾತಿಯವರಿಗೆ ಪರಿಮಿತವಾದ ಬಾಂಬೇ ಜಿಂಖಾನದಲ್ಲಿ ಕ್ರೀಡಾ ಮೈದಾನವನ್ನು ಉಪಯೋಗಿಸಿಕೊಳ್ಳುವಲ್ಲಿ ಪಾರ್ಶೀ ಕ್ರಿಕೆಟ್‌ಗರ ಜೊತೆಗೆ ಶ್ವೇತಜಾತಿಯವರು ಕಾದಾಡಿದರು.

ವಸಹಾತುಶಾಹಿ ಆಡಳಿತಗಾರರು ಶ್ವೇತಜಾತಿಯವರ ಬಗ್ಗೆ ಪಕ್ಷಪಾತವಹಿಸುವರೆಂಬ ನಿರ್ಣಯಕ್ಕೆ ಬಂದ ನಂತರ



SCERT TELANGANA

ಕ್ರಿಕೆಟ್ ಆಡಲು ಪಾರ್ಶೀಗಳು ತಮ್ಮ ಸ್ವಂತ ಜಿಂಖಾನಾ ಏರ್ಪಾಟು ಮಾಡಿಕೊಂಡರು. ಪಾರ್ಶೀಗಳಿಗೆ, ಜಾತಿ ವಿವಕ್ಷತೆ ತೋರಿಸಿದ ಬಾಂಬೆ ಜಂಖಾನಾಗೆ ಮಧ್ಯೆ ಪೈಪೋಟಿಯಲ್ಲಿ ಭಾರತೀಯ ಅಗ್ರಗಾಮಿ ಆಟಗಾರರಿಗೆ ವಿಜಯ ದೊರೆಯಿತು. 1885ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪಿಸಿದ ನಾಲ್ಕು ವರ್ಷಗಳ ನಂತರ ಅಂದರೆ 1889ರಲ್ಲಿ ಕ್ರಿಕೆಟ್‌ನಲ್ಲಿ ಬಾಂಬೇ ಜಿಂಖಾನವನ್ನು ಒಂದು ಪಾರ್ಶಿ ತಂಡ ಸೋಲಿಸಿತು.

ಪಾರ್ಶೀ ಜಂಖಾನ ಪ್ರಾರಂಭವಾದ ನಂತರ ಭಾರತ ದೇಶದಲ್ಲಿ ಮತದ ಆಧಾರವಾಗಿ ಜಿಂಖಾನಗಳು ಏರ್ಪಾಟಾಗಲು ದಾರಿಯಾಯಿತು. 1890ರ ಹೊತ್ತಿಗೆ ಹಿಂದೂ ಜಂಖಾನಾ ಮುಸ್ಲಿಂ ಜಿಂಖಾನಗಳ ಏರ್ಪಾಟಿಗಾಗಿ ಹಿಂದು, ಮುಸ್ಲೀಂರು ನಿಧಿಗಳನ್ನು ಸಂಗ್ರಹಿಸಲು ತಯಾರಾದರು. ಈ ಜಿಂಖಾನಗಳು ಕ್ರಿಕೆಟ್ ಚರಿತ್ರೆ ಕಾರಣವಾಗಿ ಮೊದಲ ಶ್ರೇಣಿ ಕ್ರಿಕೆಟ್ ಸ್ಪರ್ಧೆಗಳು ಮತ, ಜಾತಿ ಆಧಾರವಾಗಿದ್ದವು. ಪ್ರಸ್ತುತ ರಂಜೀ ಟ್ರೋಫಿಯಲ್ಲಿ ತಂಡಗಳು ರಾಜ್ಯಗಳಿಗನುಗುಣವಾಗಿ ಇದ್ದ ಹಾಗಲ್ಲದೆ ವಸಹತು ಶಾಹಿ ಆಡಳಿತದಲ್ಲಿ ಕ್ರಿಕೆಟ್ ತಂಡಗಳು ಮತಗಳ ಅನುಗುಣವಾಗಿದ್ದವು. ಈ ಸ್ಪರ್ಧೆಯಲ್ಲಿ ಐದು ತಂಡಗಳಿದ್ದವು. ಆದ್ದರಿಂದ ಪಂಚಮುಖ ಸ್ಪರ್ಧೆ ಎನ್ನುವರು. ಯುರೋಪಿಯನ್ನರು, ಪಾರ್ಶೀಗಳು, ಹಿಂದುಗಳು, ಮುಸ್ಲಿಂರು, ಇತರರು.1930ರ ಕೊನೆಗೆ 1940ರ ಆರಂಭದಲ್ಲಿ ಈ ಪಂಚಮುಖ ಸ್ಪರ್ಧೆಗಳು ಜಾತಿ, ಮತ, ಬುನಾದಿಗಳನ್ನು ಪತ್ರಕರ್ತರು, ಕ್ರಿಕೆಟ್ ಆಟಗಾರರು, ರಾಜ್ಯಕೀಯ ನಾಯಕರು ವಿಮರ್ಶಿಸಿದ್ದಾರೆ.

- ಕ್ರಿಕೆಟ್‌ಗೆ, ಪಾಶ್ಚತ್ಯ ಸಂಸ್ಕೃತಿಯನ್ನು ಪ್ರೊತ್ಸಾಹಿಸಲು ಮಧ್ಯೆ ಇರುವ ಸಂಬಂಧವೇನು ?

ಆಧುನಿಕ ಕ್ರಿಕೆಟ್‌ನಲ್ಲಿ ದೇಶಗಳ ಮಧ್ಯೆ ನಡೆಯುವ ಅಂತರರಾಷ್ಟ್ರೀಯ ಟೆಸ್ಟ್ ಪಂದ್ಯಗಳು, ಒಂದು ದಿನದ ಪಂದ್ಯಗಳು ಹೆಚ್ಚು. ದೇಶಕ್ಕಾಗಿ ಆಡುವ ಆಟಗಾರರು ಖ್ಯಾತಿ ಗಳಿಸುತ್ತಾರೆ. ಕ್ರಿಕೆಟ್ ಅಭಿಮಾನಿಗಳ ಜ್ಞಾಪಕದಲ್ಲಿ ಉಳಿಯುತ್ತಾರೆ. ಭಾರತ ದೇಶವು ಸ್ವಾತಂತ್ರ್ಯ ಹೊಂದುವ

### ಮಹಾತ್ಮಗಾಂಧೀಜಿ ಮತ್ತು ವಸಹತು ಶಾಹಿಗಳ ಕ್ರೀಡೆಗಳು (Mahatma Gandhi and colonial sports)

ಶರೀರ, ಮನಸ್ಸು ಮಧ್ಯೆ ಸಮತೋಲನಕ್ಕೆ ಕ್ರೀಡೆಗಳು ಅವಸರವೆಂದು ಮಹಾತ್ಮ ಗಾಂಧೀಜಿ ನಂಬಿದ್ದರು. ಆದರೆ ಕ್ರಿಕೆಟ್, ಹಾಕಿಗಳಂತಹ ಆಟಗಳು ಬ್ರಿಟಿಷ್‌ರ ಮೂಲಕ ಭಾರತ ದೇಶಕ್ಕೆ ಆಮದು ಮಾಡಿಕೊಂಡುಸಂಪ್ರದಾಯ ಆಟಗಳನ್ನು ಕಣ್ಮರೆ ಮಾಡುತ್ತವೆ ಎಂದು ಅವರು ವಿಮರ್ಶಿಸುತ್ತಿದ್ದರು. ಇದು ವಸಹತುಶಾಹಿ ಆಡಳಿತದ ಮನಸ್ತತ್ವವನ್ನು ತೋರಿಸುತ್ತದೆ. ಹೊಲದಲ್ಲಿ ಕೆಲಸ ಮಾಡುವುದರಿಂದ ಹೊಂದುವ ವ್ಯಾಯಾಮದೊಂದಿಗೆ ಹೋಲಿಸಿದರೆ ಈ ಆಟಗಳಿಂದ ವಿದ್ಯಾ ಪ್ರಯೋಜನ ಬಹಳ ಕಡಿಮೆ.

ನಿಮ್ಮ ಹುಡುಗರಿಗೆ ಯಾವುದೇ ಆಟಗಳು ಇಲ್ಲವೆಂದು ನನಗೆ ಬಹಳ ಬಾದೆಯಿಂದ ಕೂಡಿದ ಆಶ್ಚರ್ಯವಾಗುತ್ತದೆ. ರಾಷ್ಟ್ರೀಯ ಕ್ರೀಡೆಗಳು, ಸಂಪ್ರದಾಯ ಆಟಗಳನ್ನು ಪುನರುಜ್ಜೀವನಗೊಳಿಸಲು ನಿಮ್ಮ ಸಂಸ್ಥೆ ಮುಂದಿರಬೇಕು. ನಮ್ಮ ದೇಶದಲ್ಲಿ ಎಷ್ಟೋ ಸಂಪ್ರದಾಯ ಆಟಗಳಿವೆ. ಇವು ಆಸಕ್ತಿಕರವೂ, ಉತ್ಸಾಹಭರಿತವಾದವು ಅಲ್ಲದೇ ಇವುಗಳಿಗೆ ಆಗುವ ಖರ್ಚು ಬಹಳ ಕಡಿಮೆ.

ಮಹೀಂದ್ರ ಕಾಲೇಜಿನಲ್ಲಿ 1927 ನವೆಂಬರ್ 24 ರಂದು ನೀಡಿದ ಉಪನ್ಯಾಸ, ಮಹಾತ್ಮಗಾಂಧೀಜಿ ಅವರ ಸಂಗ್ರಹ ಬರಹಗಳು.

ಆರೋಗ್ಯಕರವಾದ ಶರೀರವೆಂದರೆ ಮನಸ್ಸಿಗೆ ತಕ್ಕಹಾಗೆ, ಯಾವಾಗಲೂ ಅದರ ಸೇವೆಗೆ ಸಿದ್ದವಾಗಿರುವುದು, ನನ್ನ ದೃಷ್ಟಿಯಲ್ಲಿ ಇಂತಹ ಶರೀರಗಳು ಪುಟ್‌ಬಾಲ್ ಮೈದಾನದಲ್ಲಿ ತಯಾರಾಗುವುದಿಲ್ಲ. ಅವು ಮೆಕ್ಕೆ ಜೋಳ ಬೆಳೆಯುವ ಹೊಲದಲ್ಲಿ ತಯಾರಾಗುತ್ತವೆ. ಇದರ ಬಗ್ಗೆ ಆಲೋಚಿಸಿದರೆ ಇದಕ್ಕೆ ಸಾಕ್ಷಿಯಾಗಿ ನಿಮಗೆ ಅನೇಕ ಉದಾಹರಣೆಗಳು ಸಿಗುತ್ತವೆ. ವಸಹತು ಶಾಹಿಗಳ ಮೋಜಿನಲ್ಲಿರುವ ಭಾರತೀಯರಿಗೆ ಪುಟ್‌ಬಾಲ್, ಕ್ರಿಕೇಟ್ ಹುಚ್ಚು ಹಿಡಿದಿದೆ. ಕೆಲವು ಸಂದರ್ಭಗಳಲ್ಲಿ ಈ ಆಟಗಳಿಗೆ ಅವಕಾಶ ಸಿಗಬಹುದು. ಶಾರೀರಿಕವಾಗಿ, ಮಾನಸಿಕವಾಗಿ ಚುರುಕಾಗಿರುವ ಮಾನವರಲ್ಲಿ ಅಧಿಕ ಭಾಗ ರೈತರಿಗೆ ಈ ಆಟಗಳು ತಿಳಿದಿಲ್ಲವೆಂಬ ವಾಸ್ತವವನ್ನು ಏಕೆ ಪರಿಗಣನೆಗೆ ತೆಗೆದುಕೊಳ್ಳುತ್ತಿಲ್ಲ ?

ಲಾಜರಸ್‌ಗೆ ಪತ್ರ 1915 ಏಪ್ರೀಲ್ 17, ಮಹಾತ್ಮಗಾಂಧೀಜಿ ಸಂಗ್ರಹ ಬರಹಗಳು, ಸಂಪುಟ 14.

SCERT TELANGANA

ಹದಿನೈದು ವರ್ಷಗಳ ಮುಂಚೆ ಅಂದರೆ, 1932ರಲ್ಲಿ ಟೆಸ್ಟ್ ಕ್ರಿಕೆಟ್ ಆಡುವ ದೇಶವಾಯಿತು. ಕ್ರಿಕೆಟ್ ಹುಟ್ಟಿದ 1877 ರಿಂದ ಅದು ಸ್ವತಂತ್ರ ದೇಶಗಳ ಮಧ್ಯೆ ಸ್ಪರ್ಧೆ ಗಳಲ್ಲದೇ ಬ್ರಿಟೀಷ್ ಸಾಮ್ರಾಜ್ಯ ವಿವಿಧ ಪ್ರಾಂತಗಳ ಮಧ್ಯೆ ಸ್ಪರ್ಧೆಗಾಗಿ ಇರುವುದರಿಂದ ಇದು ಸಾಧ್ಯವಾಯಿತು. ಕ್ರಿಕೆಟ್ ಆಡುವುದರಿಂದ ವಸಹತುಶಾಹಿ ಆಡಳಿತಗಾರರ ಜೊತೆಗೆ ಸಮಾನರಂತೆ ಭಾವಿಸಿ ಅವರನ್ನು ಸವಾಲು ಮಾಡಿದಂತೆ ಭಾವಿಸುತ್ತಿದ್ದರು.

## ಕ್ರಿಕೆಟ್‌ನಲ್ಲಿ ಪರಿವರ್ತನೆ (Transformation of Cricket)

1970ರ ದಶಕದಲ್ಲಿ ಕ್ರಿಕೆಟ್ ಪರಿವರ್ತನೆಗೆ ಗುರಿಯಾಯಿತು. ಬದಲಾಗುತ್ತಿರುವ ಪ್ರಪಂಚಕ್ಕೆ ಅನುಗುಣ ವಾಗಿ ಒಂದು ಸಂಪ್ರದಾಯ ಆಟ ಬದಲಾದ ಸಮಯವದು. ಅಂತರ ರಾಷ್ಟ್ರೀಯ ಕ್ರಿಕೆಟ್‌ನಿಂದ ದಕ್ಷಿಣ ಆಫ್ರಿಕಾವನ್ನು 1970ರಲ್ಲಿ ಬಹಿಷ್ಕರಿಸಿದರು. 1971ರಲ್ಲಿ ಮೆಲ್‌ಬೋರ್ನ್‌ನಲ್ಲಿ ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾಗಳ ಮಧ್ಯೆ ಮೊದಲ ಒಂದು ದಿನದ ಅಂತರರಾಷ್ಟ್ರೀಯ ಸ್ಪರ್ಧೆ ನಡೆಯಿತು. ಐದು ದಿನಗಳಲ್ಲದೆ ಒಂದು ದಿನಕ್ಕೆ ಕಡಿಮೆ ಮಾಡಿದ ಆಟ ಬಹಳ ಪ್ರಸಿದ್ಧಿ ಹೊಂದಿದ್ದರಿಂದ 1975ರಲ್ಲಿ ಮೊದಲ ಪ್ರಪಂಚ ಕಪ್ ಸ್ಪರ್ಧೆಯನ್ನು ವಿಜಯವಂತವಾಗಿ ನಿರ್ವಹಿಸಿದರು. 1977ರಲ್ಲಿ ಟೆಸ್ಟ್ ಪಂದ್ಯಗಳು ಪ್ರಾರಂಭ ವಾಗಿ 100 ವರ್ಷಗಳ ವರ್ಷಾಚರಣೆ ನಡೆಸುತ್ತಿರುವ ಪರಿಸ್ಥಿತಿಗಳಲ್ಲಿ ಈ ಆಟವು ಸಂಪೂರ್ಣ ಬದಲಾವಣೆಗೆ ಗುರಿಯಾಯಿತು. ಈ ಬದಲಾವಣೆಗಳಿಗೆ ಕ್ರಿಕೆಟ್ ಆಟಗಾರರೋ, ನಿರ್ವಾಹಕರೋ ಕಾರಣವಲ್ಲದೇ ಒಬ್ಬ ವ್ಯಾಪಾರಸ್ಥ ಕಾರಕನಾದನು. ಆಸ್ಟ್ರೇಲಿಯಾ ಟಿಲಿವಿಜನ್ ಸಾಮ್ರಾಟನಾದ ಕೆರ್ರಿ ಪಾಕರ್, ಕ್ರಿಕೆಟ್‌ನ್ನು ದೂರದರ್ಶನದಲ್ಲಿ ಪ್ರಸಾರ ಮಾಡುವುದರಿಂದ ಹಣ ಮಾಡಿಕೊಳ್ಳ ಬಹುದಾದ ಅವಕಾಶವನ್ನು ನೋಡಿ ರಾಷ್ಟ್ರೀಯ ಕ್ರಿಕೆಟ್ ಬೋರ್ಡ್‌ಗಳ ಇಷ್ಟಕ್ಕೆ ವಿರುದ್ಧವಾಗಿ 51 ಪ್ರಪಂಚ ಪ್ರಮುಖ ಕ್ರಿಕೆಟ್ ಆಟಗಾರರಿಂದ ಒಪ್ಪಂದ ಮಾಡಿಕೊಂಡನು. ವರಲ್ಡ್ ಸೀರಿಸ್ ಕ್ರಿಕೆಟ್ ಹೆಸರಿನಲ್ಲಿ ಎರಡು ವರ್ಷಗಳ ಕಾಲ ಅನಧಿಕಾರವಾಗಿ ಒಂದು ದಿನ ಅಂತರರಾಷ್ಟ್ರೀಯ ಸ್ಪರ್ಧೆಗಳನ್ನು




ಇಲ್ಲಿ ಆಟಗಳನ್ನು ಆಡಲು ವಿಇವಧ ಕ್ರೀಡಾ ಸಾಮಾಗ್ರಿಗಳಿವೆ. ನಿಮಗೆ ಸ್ಥಳೀಯವಾಗಿ ದೊರಕುವುಗಳೊಂದಿಗೆ ಹೋಲಿಸಿದರೆ ಇವುಗಳ ನಾಣ್ಯತೆ ವ್ಯತ್ಯಾಸವಿದೆ ಎಂದು ನೀವು ಗಮನಿಸಿರುತ್ತೀರಿ. ಹಣಕ್ಕಾಗಿ ವೃತ್ತಿ ಕ್ರೀಡಾಕಾರರು ಉಪಯೋಗಿಸುವ ಈ ಸಾಮಾಗ್ರಿಗಳನ್ನು ಸಂತೋಷಕ್ಕಾಗಿ ಆಡಿಕೊಳ್ಳುವ ಮಕ್ಕಳು ಕೊಂಡುಕೊಳ್ಳುತ್ತಾರೆ.

SCERT TELANGANA

ನಿರ್ವಹಿಸಿದರು. ಪಾಕರ್ ಸರ್ಕಸ್ ಎಂದು ಕರೆಯಲ್ಪಡುವ ಈ ಸ್ಪರ್ಧೆಗಳು ಎರಡು ವರ್ಷಗಳಲ್ಲಿ ಮುಚ್ಚಲ್ಪಟ್ಟರೂ ಟೆಲಿವಿಜನ್ ಪ್ರೇಕ್ಷಕರು ಈ ಆಟವನ್ನು ಆಕರ್ಷಣೀಯವಾಗಿ ಮಾಡಲು ಮಾಡಿದ ಬದಲಾವಣೆಗಳು ಮಾಡುವುದರ ಮೂಲಕ ಆಟದ ಸ್ವಭಾವವನ್ನು ಬದಲಾಯಿಸಿದೆ.

ಬಣ್ಣ ಬಣ್ಣದ ಬಟ್ಟೆಗಳು, ರಕ್ಷಣೆಗಾಗಿ ಹೆಲ್ಮೆಟ್, ಕ್ಷೇತ್ರ ರಕ್ಷಣೆಯಲ್ಲಿನ ಪರಿಮಿತಿಗಳು, ದೀಪ ಕಾಂತಿಗಳಡಿಯಲ್ಲಿ ಕ್ರಿಕೆಟ್‌ನಂತಹ ಪಾಕರ್ ಅನಂತರದ ಆಟದಲ್ಲಿ ಪ್ರಾಮಾಣಿಕವಾಗಿ ಬದಲಾಗಿವೆ. ಎಲ್ಲಕ್ಕಿಂತ ಮಿಗಿಲಾಗಿ ಕ್ರಿಕೆಟ್‌ನ್ನು ಹಣ ಮಾಡಿಕೊಳ್ಳುವ ಆಟವಾಗಿ, ದೊಡ್ಡ ಮಟ್ಟದ ಆದಾಯ ಗಳಿಸುವ ಆಟವಾಗಿ ಪಾಕರ್ ಅದಕ್ಕೆ ಹೆಸರು ತಂದಿದ್ದಾನೆ. ಟೆಲಿವಿಜನ್ ಕಂಪನಿಗಳಿಗೆ ಪ್ರಸಾರ ಹಕ್ಕುಗಳನ್ನು ಮಾರಿಕೊಳ್ಳುವುದರ ಮೂಲಕ ಕ್ರಿಕೆಟ್ ಬೋರ್ಡ್‌ಗಳು ಅತಿ ವಿಪರೀತವಾಗಿ ಹಣವನ್ನು ಸಂಪಾದಿಸಿವೆ. ಟಿವಿ ನೋಡಲು ಮಗ್ನರಾದ ಕ್ರಿಕೆಟ್ ಅಭಿಮಾನಿಗಳು ವಾಣಿಜ್ಯ ಪ್ರಕಟಣೆಗಳು ಜಾರಿ ಮಾಡಲು ವಿವಿಧ ಕಂಪನಿಗಳು ದೊಡ್ಡ ಮೊತ್ತದ ಹಣವನ್ನು ಖರ್ಚು ಮಾಡಲಾರಂಭಿಸಿದರು. ದೂರದರ್ಶನದಲ್ಲಿ ನಿರಂತರ ಪ್ರಸಾರಗಳಿಂದ ಕ್ರಿಕೆಟ್ ಆಟಗಾರರು ಹಿರೋಗಳಾಗಿದ್ದಾರೆ. ಕ್ರಿಕೆಟ್ ಬೋರ್ಡ್ ಇವರಿಗೆ ನೀಡುವ ಹಣ ವಿಪರೀತವಾಗಿ ಬೆಳೆದಿದೆ. ಅಷ್ಟೇ ಅಲ್ಲ ಟೈರ್‌ಗಳಿಂದ ಹಿಡಿದು ಶೀತಪಾನಿಯ ಗಳವರೆಗೆ ವಿವಿಧ ವಸ್ತುಗಳ ವಾಣಿಜ್ಯ ಪ್ರಕಟನೆಯಲ್ಲಿ ಪಾಲ್ಗೊಳ್ಳುವುದರ ಮೂಲಕ ಕ್ರಿಕೆಟ್ ಆಟಗಾರರು ಇನ್ನೂ ಹೆಚ್ಚು ಮೊತ್ತದ ಹಣ ಸಂಪದಾದಿಸುತ್ತಿದ್ದಾರೆ. ದೂರದರ್ಶನ ಪ್ರಸಾರಗಳು ಕ್ರಿಕೆಟ್ ಆಟವನ್ನು ಬದಲಾಯಿಸಿವೆ. ಸಣ್ಣ ಸಣ್ಣ ಪಟ್ಟಣಗಳು, ಗ್ರಾಮಗಳಲ್ಲಿಯೂ ಸಹ ಪ್ರಸಾರ ಮಾಡುವುದರ ಮೂಲಕ ಕ್ರಿಕೆಟ್ ಪ್ರೇಕ್ಷಕರ ಸಂಖ್ಯೆ ಗಣನಿಯವಾಗಿ ಹೆಚ್ಚಿದೆ. ಕ್ರಿಕೆಟ್ ಆಡುವವರ ಸಾಮಾಜಿಕ ಮಟ್ಟವು ಹೆಚ್ಚಿತು. ದೊಡ್ಡ ಪಟ್ಟಣಗಳಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳನ್ನು ನೋಡುವ ಅವಕಾಶವಿಲ್ಲದ ಮಕ್ಕಳು ಈಗ ತಮ್ಮ ಅಭಿಮಾನ ಕ್ರಿಡಾಕಾರರನ್ನು ನೋಡಿ, ಆಟವನ್ನು ಕಲಿತುಕೊಂಡರು. ಉಪಗ್ರಹ ದೂರದರ್ಶನ ತಂತ್ರಜ್ಞಾನದಿಂದ ಬಹುಳ ಜಾತಿ ಟೆಲಿವಿಜನ್ ಕಂಪನಿಗಳಿಂದ, ಕ್ರಿಕೆಟ್‌ಗೆ ಅಂತರರಾಷ್ಟ್ರೀಯ ಮಾರ್ಕೆಟ್ ಏರ್ಪಾಟಾಯಿತು.

- ಟೆಸ್ಟ್ ಕ್ರಿಕೆಟ್ ಪ್ರಾಮುಖ್ಯತೆ ಕಡಿಮೆ ಯಾದ್ದರಿಂದ ಸಂಭವಿಸಿದ ಬದಲಾವಣೆಗಳ ಪಟ್ಟಿ ತಯಾರು ಮಾಡಿರಿ.

## ವ್ಯಾಪಾರ, ಪ್ರಸಾರ ಸಾಧನಗಳು, ಇಂದಿನ ಕ್ರಿಕೆಟ್ (Commerce, Media and Cricket Today)

ಸಿಡ್ನಿಯಲ್ಲಿ ನಡೆಯುವ ಪಂದ್ಯಗಳನ್ನು ಇಂದು ಸೂರತ್‌ನಲ್ಲಿ ಪ್ರತ್ಯೇಕ್ಷ ಪ್ರಸಾರವಾಗಿ ನೋಡಬಹುದು. ಈ ಚಿಕ್ಕ ವಾಸ್ತವಾಂಶ ಕ್ರಿಕೆಟ್ ಅಧಿಪತ್ಯದಲ್ಲಿನ ಸಮೀಕರಣಗಳನ್ನು ಬದಲಾಯಿಸಿತು. ಬ್ರಿಟೀಷ್ ಸಾಮ್ರಾಜ್ಯ ಅವನತಿಯ ನಂತರ ಮೊದಲಾದ ಪ್ರಕ್ರಿಯೆ ಪ್ರಪಂಚೀಕರಣದಿಂದ ಅದರ ತಾರ್ಕಿಕ ಮುಕ್ತಾಯಕ್ಕೆ ಸೇರಿತು. ಕ್ರಿಕೆಟ್ ಆಡುವ ದೇಶಗಳಲ್ಲಿ ಅತ್ಯಧಿಕ ಪ್ರೇಕ್ಷಕರು ಭಾರತದಲ್ಲಿ ಇರುವುದರಿಂದ, ಕ್ರಿಕೆಟ್ ಪ್ರಪಂಚದಲ್ಲಿ ಅತಿದೊಡ್ಡ ಮಾರುಕಟ್ಟೆ ಇರುವುದರಿಂದ ಇದರ ಕೇಂದ್ರವು ದಕ್ಷಿಣಾ ಸಿಯಕ್ಕೆ ಬದಲಾಯಿತು. ಐಸಿಸಿ ಪ್ರಧಾನ ಕಾರ್ಯಾಲಯ ಲಂಡನ್‌ನಿಂದ ತೆರಿಗೆವಿಧಿಸಿದ ದುಬಾಯಿಗೆ ಬದಲಾದದು ಈ ಬದಲಾವಣೆಯ ಸಂಕೇತ.

ಹಳೆಯ ಆಂಗ್ಲ – ಆಸ್ಟ್ರೇಲಿಯಾ ಅಕ್ಷದಿಂದ ಕ್ರಿಕೆಟ್ ಕೇಂದ್ರ ಬದಲಾಗಿದೆ ಎಂಬುದಕ್ಕೆ ಮತ್ತೊಂದು ಮುಖ್ಯ ಸಂಕೇತ. ಕ್ರಿಕೆಟ್ ಪದ್ದತಿಯಲ್ಲಿ ಹೊಸ ಪ್ರಯೋಗಗಳು ಉಪಖಂಡ ದೇಶಗಳಾದ ಭಾರತ, ಪಾಕಿಸ್ಥಾನ, ಶ್ರೀಲಂಕಗಳಂತಹ ಕ್ರಿಕೆಟ್ ದೇಶಗಳಿಂದ ಬಂದಿವೆ. ಬೌಲಿಂಗ್‌ನಲ್ಲಿ ಎರಡು ಮಹತ್ವದ ಪರಿಣಾಮಗಳಿಗೆ ಪಾಕಿಸ್ಥಾನ್ ಬೀಜವನ್ನು ಹಾಕಿದೆ. ದೂಸಾರ್ *(Doosra)* , ರಿವರ್ಸ್ ಸ್ವಿಂಗ್ (reverse swing) ಈ ಎರಡು ನೈಪುಣ್ಯಗಳು ಸಹ ಉಪಖಂಡದಲ್ಲಿಯ ಸ್ಥಿತಿಗಳಿಗೆ ಅನುಗುಣವಾಗಿ ರೂಪುಗೊಂಡವು. ತೂಕವಾದ ಆಧುನಿಕ ಬ್ಯಾಟುಗಳಿಂದ ಆಕ್ರಮಣಶೀಲ ಆಟಗಾರರು ಫಿಂಗರ್ ಸ್ಪಿನ್‌ಗೆ ಕೊನೆ ಹೇಳುವ ಪರಿಸ್ಥಿತಿಯಲ್ಲಿ ದೂಸಾರಾ ಮುಂದೆ ಬಂದಿತು. ನಿರ್ಮಲವಾದ ಆಕಾಶದ ಕೆಳಗೆ, ವಿಕೆಟ್ ಬೀಳದ ಕಷ್ಟ ಪರಿಸ್ಥಿತಿ ಯಲ್ಲಿ ಚಂಡನ್ನು ಕದಲಿಸಲು ರಿವರ್ಸ್ ಸ್ವಿಂಗ್ ಬಂದಿತು. ಮೊದಲಿಗೆ ಈ ಎರಡು ಪದ್ದತಿಗಳನ್ನು ಬ್ರಿಟನ್, ಆಸ್ಟ್ರೇಲಿಯಾಗಳಂತಹ ದೇಶಗಳು ಅನುಮಾನದಿಂದ ನೋಡಿದವು. ಕ್ರಿಕೆಟ್ ನಿಯಮಗಳನ್ನು ಅಕ್ರಮವಾಗಿ ಬದಲಾಯಿಸುತ್ತಿರುವರೆಂದು ಇವು ಆರೋಪಿಸಿದವು. ಬ್ರಿಟೀಷ್, ಆಸ್ಟ್ರೇಲಿಯಾದಲ್ಲಿನ ಆಟ ಪರಿಸ್ಥಿತಿಗಳಿಗೆ ಅನುಗುಣವಾಗಿ ಮಾತ್ರವೇ ಕ್ರಿಕೆಟ್ ನಿಯಮಗಳನ್ನು ರೂಪಿಸಲು ಸಾಧ್ಯವಾಗುವುದಿಲ್ಲವೆಂದು ಕಾಲಕ್ರಮದಲ್ಲಿ ಸಾಬೀತಾಯಿತು. ಪ್ರಪಂಚ ತುಂಬೆಲ್ಲಾ ಬೌಲರ್‌ಗಳೆಲ್ಲರೂ ಉಪಯೋಗಿಸುವ ಪದ್ದತಿಯಾಗಿ ಇವು ಬದಲಾದವು.

150 ವರ್ಷಗಳ ಕೆಳಗೆ ಭಾರತ ದೇಶದಲ್ಲಿ ಮೊದಲು ಕ್ರಿಕೆಟ್ ಆಟಗಾರರಾದ ಪಾರ್ಶೀಗಳು ಆಡಲು ಖಾಲಿ

SCERT TELANGANA

ಪ್ರದೇಶಕ್ಕಾಗಿ ಹೋರಾಟ ಮಾಡಬೇಕಾಯಿತು. ಇಂದು ಪ್ರಪಂಚ ಮಾರ್ಕೆಟ್ ಫಲಿತವಾಗಿ ಭಾರತೀಯ ಆಟಗಾರರಿಗೆ ಅತ್ಯಧಿಕ ಹಣ ನೀಡುತ್ತಿದ್ದಾರೆ. ಅತ್ಯಧಿಕ ಪ್ರಖ್ಯಾತಿಯೂ ಇವರಿಗೆ ಇದೆ. ಪ್ರಂಪಚವೆಲ್ಲವು ಇವರಿಗೆ ವೇದಿಕೆಯಾಗಿದೆ. ಎಷ್ಟೋ ಚಿಕ್ಕ ಚಿಕ್ಕ ಬದಲಾವಣೆಗಳ ಕಾರಣದಿಂದ ಈ ಚಾರಿತ್ರಿಕ ಬದಲಾವಣೆಗಳು ಸಂಭವಿಸುತ್ತಿವೆ. ತಮಾಷೆಗಾಗಿ ಆಡುವ ಸಜ್ಜನರ ಸ್ಥಾನವನ್ನು, ವೃತ್ತಿಯಾಗಿ ಹಣಕ್ಕಾಗಿ ಆಡುವ ಕ್ರೀಡಾಕಾರರು ತೆಗೆದುಕೊಂಡಿದ್ದಾರೆ. ಪ್ರಸಿದ್ದಿ ಹೊಂದಿದ ಟೆಸ್ಟ್ ಪಂದ್ಯಗಳ ಸ್ಥಾನವನ್ನು ಒಂದು ದಿನದ ಪಂದ್ಯಗಳು ಆಕ್ರಮಿಸಿವೆ. ತಂತ್ರಜ್ಞಾನದಲ್ಲಿ, ಪ್ರಪಂಚ ವಾಣಿಜ್ಯದಲ್ಲಿ ಗಣನೀಯವಾದ ಬದಲವಾಣೆಗಳು ಹೊಂದಿವೆ. ಬದಲಾಗುತ್ತಿರುವ ಕಾಲದೊಂದಿಗೆ ಬದಲಾಗುತ್ತಿರುವುದು ವ್ಯಾಪಾರ ಚರಿತ್ರೆಯಾಗುತ್ತದೆ. ಈ ಅಧ್ಯಾಯದಲ್ಲಿ ವಸಹತು ಶಾಹಿ ಆಡಳಿತಗಾರರ ಆಟ ಪರಿಣಾಮ ದೊಂದಿದ ರೀತಿಯನ್ನು ನೋಡಿದೆವು. ಈ ಆಟಗಳನ್ನು ವಸಹತುಶಾಹಿ ನಂತರ ಪ್ರಪಂಚವು ಹೇಗೆ ಸ್ವೀಕರಿಸಿತೆಂದು ನೋಡಿದೆವು.

- ಕ್ರಿಕೆಟ್ ಕುರಿತು ಸ್ವಲ್ಪ ಸಮಯ ಆಲೋಚಿಸಿದ ನಂತರ ವಿನಾಯಕನು ಇಂಗ್ಲೀಷ್‌ನಲ್ಲಿರುವ ಕೆಲವು ಪದಗಳನ್ನು ಬರೆದನು. – ಬೌಂಡರಿ (Boundary), ಓವರ್ (Over), ವಿಕೆಟ್ (Wicket) ಇವುಗಳಿಗೆ ಕನ್ನಡ ಪದಗಳು ಏಕೆ ಇಲ್ಲವೆಂದು ಆತನಿಗೆ ವಿವರಿಸಿರಿ.

**19 ವರ್ಷದೊಳಗಿನ ಪ್ರಪಂಚ ಕಪ್‌ಗೆ ಭಾರತೀಯ ಕ್ರಿಕೆಟ್ ತಂಡದಲ್ಲಿರುವ ಸದಸ್ಯ, ಆಂಧ್ರಪ್ರದೇಶ್‌ಕ್ಕೆ ಸೇರಿದ ಜಿ.ಹೆಚ್. ವಿಹಾರಿ ಜೊತೆಗೆ ಮುಖಾಮುಖಿ**

**ಪ್ರಶ್ನೆ : ಪ್ರಪಂಚ ಕಪ್ ಅಂತಿಮ ಆಟದಲ್ಲಿ ನಿಮ್ಮ ತಂಡವು ಆಸ್ಟ್ರೇಲಿಯಾವನ್ನು ಸೋಲಿಸಿದಾಗ ನಿಮಗೆ ಆದ ಅನುಭವಗಳ ಕುರಿತು ತಿಳಿಸಿ.**

**ಉತ್ತರ :** ನಗುತ್ತಾ... ನಾವು ಬಹಳ ಚೆನ್ನಾಗಿ ಆಡಿದೆವು. ಬಹಳ ಅದ್ಭುತ ಆನಂದವನ್ನು ನೀಡಿತು. ಕಂಗರೂಗಳನ್ನು ಅವರ ದೇಶದಲ್ಲೆ ಸೋಲಿಸುವುದು ಬಹಳ ಕಷ್ಟ. ಈ ಗೆಲವು ನಮ್ಮ ಕಿರೀಟದಲ್ಲಿನ ಗರಿಯಂತಹುದು.

**ಪ್ರಶ್ನೆ : ಭಾರತ ದೇಶದಲ್ಲಿ ಕ್ರಿಕೆಟ್ ಏಕೆ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ ?**

**ಉತ್ತರ :** ನಮ್ಮ ದೇಶದಲ್ಲಿ ಕ್ರಿಕೆಟ್ ಎಂದರೆ ಎಷ್ಟೋ ಅಭಿಮಾನವಿದೆ. ಬಹಳ ಅವಕಾಶಗಳಿವೆ. ಭಾರತದಲ್ಲಿ ಮಕ್ಕಳು ಗಲ್ಲಿ ಗಲ್ಲಿಗ್ಗಳಲ್ಲಿ ಈ ಆಟವನ್ನು ಆಡುತ್ತಾರೆ. ಇದು ಸಂಭವನೀಯತೆಯ ಆಟ... ತಮ್ಮ ಅಭಿಮಾನ ಆಟಗಾರರ ಅದ್ಭುತ ಪ್ರದರ್ಶನವನ್ನು ನೋಡಲು ಜನರಿಗೆ ಬಹಳ ಇಷ್ಟ. 1983 ರಲ್ಲಿ ಭಾರತ ದೇಶವು ಪ್ರಪಂಚ ಕಪ್ ಗೆದ್ದು ಕೊಂಡ ನಂತರ, ಹೇಳಿಕೊಳ್ಳುವ ರೀತಿಯಲ್ಲಿ ಈ ಆಟವನ್ನು ಆಡಲಾಗುತ್ತಿದೆ... 2011 ರಲ್ಲಿ ಮತ್ತೇ ಪ್ರಪಂಚ ಕಪ್‌ನ್ನು ಗೆದುದ್ದಕೊಂಡಿದ್ದೇವೆ... ಇದು 19ನೇಯ ಪ್ರಪಂಚ ಕಪ್ ಆಗಿದೆ... ಭವಿಷತ್ತಿನಲ್ಲಿಯೂ ಕೂಡ ಇಂತಹ ಗೆಲುವುಗಳು ಎಷ್ಟೋ ಇರುತ್ತವೆ. ಆದ್ದರಿಂದ ಈ ಆಟಕ್ಕೆ ಪ್ರಾಮುಖ್ಯತೆಯು ಬೆಳೆಯುತ್ತಾ ಇರುತ್ತದೆ.

**ಪ್ರಶ್ನೆ : ಕಬಡ್ಡಿ, ಖೋ ಖೋ, ಹಾಕಿಗಳಂತಹ ಇತರ ಆಟಗಳಿಗೆ ಕ್ರಿಕೆಟ್ ಹಿಂದುಳಿಯುವಂತೆ ಮಾಡಿದೆಯಾ ?**

**ಉತ್ತರ :** ಹೌದು, ಸ್ವಲ್ಪ ಮಟ್ಟಿಗೆ ನಿಜ, ಆದರೆ ಇತರ ಆಟಗಳಿಗೂ ಸಹ ಪ್ರೋತ್ಸಾಹ ನೀಡಬೇಕು. ಹಾಕಿ ಆಟಕ್ಕೆ ಬೇಕಾದಷ್ಟು ಸ್ಥಿರ ನಿಧಿಗಳಿಲ್ಲದಿರುವುದು ವಿಚಾರಕ. ಪ್ರಾಯೋಜಕರು ಮುಂದೆ ಬರಬೇಕು. ಸರ್ಕಾರ, ಜನರು ಈ ವಿಷಯವನ್ನು ಪರಿಶೀಲಿಸಬೇಕು.

**ಪ್ರಶ್ನೆ : ಆಟಗಳು ರಾಷ್ಟ್ರೀಯ ಭಾವನೆಯನ್ನು ಹೇಗೆ ಪ್ರೋತ್ಸಾಹಿಸುತ್ತವೆ ?**

**ಉತ್ತರ :** ಆಟಗಳು, ರಾಷ್ಟ್ರೀಯತೆಯು ಹೆಣೆದುಕೊಂಡಿರುತ್ತವೆ. ಪ್ರೋತ್ಸಾಹವಿದ್ದರೆ, ಪ್ರೇಕ್ಷಕರಿಂದ ಬೆಂಬಲವಿದ್ದರೆ ಆಟಗಳು, ಕ್ರೀಡೆಗಳು ವಿಕಸಿಸುತ್ತವೆ. ಕ್ರೀಡಾ ಮೈದಾನದಲ್ಲಿ, ಆಟಗಾರರಿಗೆ ಉತ್ತಮ ಪ್ರೋತ್ಸಾಹ ಲಭಿಸುತ್ತದೆ. ಇದರ ಹಿಂದಿರುವ ಸಿದ್ದಾಂತ ಐಕ್ಯತೆ, ಕೃಷಿ, ರಾಷ್ಟ್ರ ನಿರ್ಮಾಣದಲ್ಲಿ ಕೀಲಕಾಂಶವಾದ ಐಕ್ಯತೆಯನ್ನು ಆಟಗಳು ಬೆಳೆಸುತ್ತದೆ. ದೇಶದ ಪರವಾಗಿ ಆಡುವುದು ರಾಷ್ಟ್ರೀಯ ಭಾವನೆಯನ್ನು ಕಲ್ಪಿಸುತ್ತದೆ.

SCERT TELANGANA

**ಪ್ರಶ್ನೆ : ಇತರ ಆಟಗಳಿಗಿಂತ ಕ್ರಿಕೆಟ್‌ಗೆ ಹೆಚ್ಚು ವಾಣಿಜ್ಯ ಬೆಂಬಲ ಏಕೆ ಇದೆ ?**

**ಉತ್ತರ** : ದೂರದರ್ಶನ, ಪ್ರಸಾರ ಮಾಧ್ಯಮಗಳು, ಪ್ರಾಯೋಜಕರು ಇದಕ್ಕೆ ಕಾರಣ. ಇತರ ಆಟಗಳಿಗೆ ಪ್ರಚಾರ, ಪ್ರೋತ್ಸಾಹ ನೀಡಬೇಕು.

**ಪ್ರಶ್ನೆ : ಈ ಆಟವನ್ನು ಮನೋರಂಜನೆಗಾಗಿ ನೋಡುತ್ತಿರಾ, ವೃತಿಯಾಗಿ ನೋಡುತ್ತೀರಾ ?**

**ಉತ್ತರ** : ಪಾಠಶಾಲೆಯವರೆಗೂ ಇದರಿಂದ ಸಂತೋಷಪಟ್ಟೆನು. ಈಗ ಇದನ್ನು ವೃತ್ತಿಯಾಗಿ ನೋಡುತ್ತಿರುವೆ. ಈ ಆಟದ ಮೂಲಕ ನಮ್ಮ ದೇಶಕ್ಕೆ ಗೌರವ ಚಿಹ್ನೆ ಸಾಧಿಸಬೇಕೆಂದುಕೊಂಡಿದ್ದೇನೆ.

**ಪ್ರಶ್ನೆ : ಇತರ ಆಟಗಳನ್ನು ಕ್ರಿಕೆಟ್ ಅಂಧಕಾರವನ್ನಾಗಿಸುತ್ತದೆಯಾ ?**

ಉತ್ತರ : ನಮ್ಮ ದೇಶದಲ್ಲಿ ಕ್ರಿಕೆಟ್‌ಗೆ ಬಹಳ ಪ್ರಾಧಾನ್ಯತೆಯನ್ನು ನೀಡುತ್ತಿದ್ದಾರೆಂದು ಬಹಳ ಜನ ಭಾವಿಸುತ್ತಾರೆ. ಕಂಪನಿಗಳು ಆಟಗಳಿಗೆ ಪ್ರಾಯೋಜಕರಾಗಿರುತ್ತಾರೆ. ಪಂದ್ಯಗಳನ್ನು ಕ್ರೀಡಾ ವಾಹಿನಿಗಳು ಪ್ರತ್ಯೇಕ್ಷವಾಗಿ ಪ್ರಸಾರ ಮಾಡುತ್ತವೆ. ಇದು ಇತರ ಆಟಗಳ ವಿಷಯದಲ್ಲಿ ನಡೆಯುತ್ತಿಲ್ಲ... ಇದರಿಂದ ಕಬಡ್ಡಿ, ಖೋ ಖೋ, ಚದುರಂಗಗಳಂತಹ ಸಂಪ್ರದಾಯ ಆಟಗಳಿಗೆ ಪ್ರಾಮುಖ್ಯತೆ ಲಭಿಸುತ್ತಿಲ್ಲ. ಯಾವುದೇ ಒಂದು ಆಟದಲ್ಲಿ ಪ್ರತಿಭೆ ತೋರಿಸಬೇಕಾದರೆ ಕ್ರೀಡಾಕಾರರು ಬಹಳ ಅವಿರತ ಯತ್ನ ಮಾಡಬೇಕು. ಪಟ್ಟು ಬಿಡದೆ ಸಮರ್ಪಣೆ ಮಾಡಬೇಕು. ಅದ್ಭುತಗಳು ಎಂದು ಕೆಲಸ ಮಾಡುವುದಿಲ್ಲ, ಕೃತ ನಿಶ್ಚಯ ಒಂದೇ ಫಲಿತಾಂಶ ನೀಡುತ್ತದೆ.



## ಇತರ ಪ್ರಸಿದ್ಧ ಆಟಗಳು, ಅವುಗಳ ದರ್ಜೆ (Other popular games and their status)

ಭಾರತದೇಶದಲ್ಲಿ ಪ್ರಜಾದರಣೆ ಪಡೆದ ಮತ್ತೊಂದು ಆಟ ಹಾಕಿ. ವಸಹತುಶಾಹಿ ಆಳ್ವಿಕೆಯಲ್ಲಿ ಇರುವಾಗಲೇ ಭಾರತ ತಂಡ ಬಹಳ ಸ್ಪರ್ಧೆಗಳಲ್ಲಿ ಗೆದ್ದಿದೆ. 1980ರವರೆಗೆ ಅಂತರಾಷ್ಟ್ರೀಯ ಹಾಕಿ ರಂಗದಲ್ಲಿ ಭಾರತ ದೇಶವೇ ಮೇಲುಗೈ. ಆದರೆ ಕೆಲವು ದಶಮಾನಗಳಿಂದ ಈ ಆಟದ ಪರಿಸ್ಥಿತಿ ಕ್ಷೀಣಿಸುತ್ತಿದೆ. ಕ್ರಿಕೆಟ್ ರೀತಿಯಲ್ಲಿ ಹಾಕಿಯಂತಹ ಆಟಗಳಿಗೆ ಪ್ರಸಾರ ಮಾಧ್ಯಮಗಳಿಂದ, ವ್ಯಾಪಾರ ರಂಗಗಳಿಂದ ಅಷ್ಟು ಬೆಂಬಲ ವ್ಯಕ್ತವಾಗುತ್ತಿಲ್ಲ. ಭಾರತದಲ್ಲಿ ಪ್ರಜಾದರಣೆ ಹೊಂದಿದ ಮತ್ತೊಂದು ಸಂಪ್ರದಾಯ ಆಟ ಕಬಡ್ಡಿ. ಇದನ್ನು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಆಡಲು ಪ್ರಾರಂಭಿಸಿ 10 ವರ್ಷಗಳಾ ಗುತ್ತಿದೆ. ಇದರಲ್ಲಿ ನಮ್ಮ ದೇಶ ಜಯವನ್ನು ಸಾಧಿಸುತ್ತಿದೆ. ಬಿಲ್ವಿದ್ಯೆ, ಬ್ಯಾಡ್ಮಿಂಟನ್, ಬಾಕ್ಸಿಂಗ್, ವೆಯಿಟ್ ಲಿಫ್ಟಿಂಗ್, ಚದುರಂಗ, ಟೆನ್ನಿಸ್‌ಗಳಂತಹ ಆಟಗಳಲ್ಲಿ ಭಾರತೀಯ ಕ್ರೀಡಾ ಪಟುಗಳು ಅಂತರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಹಲವು ಪ್ರಶಸ್ತಿ ಪದಕಗಳು ಸಾಧಿಸಿದ್ದಾರೆ.

ಆದರೆ ಅಥಲೆಟಿಕ್ಸ್‌ನಲ್ಲಿ, ಫುಟ್‌ಬಾಲ್, ವಾಲಿಬಾಲ, ಬಾಸ್ಕೆಟ್‌ಬಾಲ್‌ಗಳಂತಹ ಅಂತರಾಷ್ಟ್ರ ಮಟ್ಟದಲ್ಲಿ ಆದರಣೆ ಹೊಂದಿದ ಆಟಗಳಲ್ಲಿ ನಾವು ಜಯಗಳಿಸುತ್ತಿಲ್ಲ. ಮಕ್ಕಳು ಇಷ್ಟವಾಗಿ ಆಡಿಕೊಳ್ಳುವ ಆಟಗಳನ್ನು ದೊಡ್ಡವರು ಆಡುವುದನ್ನು ನಾವು ನೋಡುವುದಿಲ್ಲ. ಈ ಚಿತ್ರದಲ್ಲಿ ಆಟಗಳು ನೀವು ಏನಾದರೂ ನೋಡಿದ್ದೀರಾ ? ಅವುಗಳ ನಿಯಮಗಳನ್ನು ವಿವರಿಸಿ. ಈ ಆಟಗಳನ್ನು ಹಿರಿಯರು ಏಕೆ ಆಡುವುದಿಲ್ಲ ?

ಕ್ರೀಡೆಗಳು ಮಾನಸಿಕ ವಿಕಾಸದ ಜೊತೆಗೆ ಶಾರೀರಕ ಅಭಿವೃದ್ಧಿಯನ್ನು ಬೆಳೆಸುತ್ತವೆ. ಪ್ರಾಥಮಿಕ ಸ್ಥಾಯಿಯಿಂದಲೇ ಮಕ್ಕಳಲ್ಲಿ ಕ್ರೀಡಾಸಕ್ತಿಯನ್ನು ಅಭಿರುಚಿಯನ್ನು ಗುರ್ತಿಸಿ, ಪ್ರೋತ್ಸಾಹಿಸಲು ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸುತ್ತದೆ. ಸರ್ಕಾರ ವ್ಯವಸ್ಥೆ ಪರವಾಗಿ, ಮಾನವ ಸಂಪನ್ಮೂಗಳ ಅಭಿವೃದ್ಧಿ ಮಂತ್ರಿತ್ವ ಇಲಾಖೆಯ ಅಧೀನದಲ್ಲಿ ಕ್ರೀಡಾ ಇಲಾಖೆ ದೇಶದಲ್ಲಿ ಕ್ರೀಡಾರಂಗ ಅಭಿವೃದ್ಧಿಗೆ, ಅಂತರಾಷ್ಟ್ರೀಯ ಮಟ್ಟದಲ್ಲಿ ಕಾಣಿಸಿಕೊಳ್ಳಲು ಕ್ರೀಡಾ ಮಂಡಳಿಗಳ ಮೂಲಕ ಪ್ರತ್ರೇಕ ಶಿಕ್ಷಣ ಕಾರ್ಯಕ್ರಮಗಳು ಏರ್ಪಾಟು ಮಾಡುತ್ತದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ನಿರ್ವಹಿಸುವ ಕ್ರೀಡೆಗಳೊಂದಿಗೆ, ಸ್ಥಾನಿಕ ಕ್ರೀಡಾಂಶಗಳು ಮಂಡಲ, ಡಿವಿಜನಲ್, ಜಿಲ್ಲಾ, ರಾಜ್ಯ, ಜೋನಲ್,



SCERT TELANGANA

ರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆಗಳನ್ನು ನಿರ್ವಹಿಸುತ್ತಾ ವಿಜೇತರನ್ನು ಪ್ರೋತ್ಸಾಹಿಸುತ್ತಾ ಕ್ರೀಡಾಕಾರರಿಗೆ ಉತ್ತಮ ಶಿಕ್ಷಣ ನೀಡಲು ಪ್ರತ್ಯೇಕವಾಗಿ ನಿಪುಣ (ಕೋಚ್)ರನ್ನು ಏರ್ಪಾಟು ಮಾಡಿದ್ದಾರೆ. ಕ್ರೀಡೆಗಳ ಬಗೆಗೆ ಅಭಿರುಚಿಯನ್ನು ಹೆಚ್ಚಿಸುವುದರೊಂದಿಗೆ ಅಂತರಾಷ್ಟ್ರೀಯ ತಿಳುವಳಿಕೆಗೆ, ಸಾಂಸ್ಕೃತಿಕ ವಿಕಾಸಕ್ಕೆ ಸಹಾಯವಾಗುತ್ತಾ ವಿಶ್ವಮಾನವ ಸೌಭ್ರಾತೃತ್ವವನ್ನು ಕ್ರೀಡೆಗಳು ಬೆಳೆಸುತ್ತವೆ. ಭಿನ್ನ ಸಂಸ್ಕೃತಿಗಳನ್ನು ಹೊಂದಿದ ನಮ್ಮ ದೇಶದಲ್ಲಿ ರಾಷ್ಟ್ರೀಯ ಸಮೈಕ್ಯತೆಯನ್ನು ಬೆಳೆಸುವುದಕ್ಕೆ ಕ್ರೀಡೆಗಳು ಹಿತಕರವಾಗಿ ಸಹಾಯ ಮಾಡುತ್ತಿವೆ.



## ಮುಖ್ಯ ಪದಗಳು

1. ವಸಹತುಶಾಹಿ ಆಳ್ವಿಕೆ 2. ಪ್ರಪಂಚ ವಾಣಿಜ್ಯ 3. ರಾಷ್ಟ್ರಾಭಿಮಾನ 4. ಪ್ರಾಯೋಜಕರು

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ

1. ತಪ್ಪಾದ ವಾಕ್ಯಗಳನ್ನು ಸರಿಪಡಿಸಿರಿ :
   - ತಮ್ಮ ಆಳ್ವಿಕೆಯಲ್ಲಿರುವ ದೇಶಗಳ ಮಧ್ಯೆ ಸ್ಪರ್ಧೆಗಳನ್ನು ನಿರ್ವಹಿಸಲು ಕ್ರಿಕೆಟ್‌ನ್ನು ವಸಾಹತುಶಾಹಿ ಆಡಳಿತಗಾರರು ಪ್ರೋತ್ಸಾಹಿಸಿದರು.
   - ಪಾಶ್ಚಿತೀಕರಣ ಹೊಂದಲು ಜನರು ಈ ಆಟವನ್ನು ಕಲಿಯಲಾರಂಭಿಸಿದರು.
   - ಭಾರತೀಯ ಗ್ರಾಮಸ್ಥರು ಕ್ರಿಕೆಟ್‌ನ್ನು ಆಡುತ್ತಿದ್ದರು.
   - ಉತ್ತಮ ನಡುವಳಿಕೆ ಕಲಿತುಕೊಳ್ಳಲು ಈ ಆಟವನ್ನು ಪಾಠಶಾಲೆಯಲ್ಲಿ ಪ್ರವೇಶಪಡಿಸಿದ್ದಾರೆ.
2. ಕ್ರಿಕೆಟ್ ಇತರ ಆಟಗಳ ಮೇಲೆ ಗಾಂಧೀಜಿಯವರ ಅಭಿಪ್ರಾಯ ಕುರಿತು ಕೆಲವು ವಾಕ್ಯಗಳನ್ನು ಬರೆಯಿರಿ.
3. ನೀವು ಓದಿ ಕೆಳಗಿನವುಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.
   - ಭಾರತದೇಶದಲ್ಲಿ ಕ್ರಿಕೆಟ್ ಕ್ಲಬ್ ಸ್ಥಾಪಿಸುವಲ್ಲಿ ಪಾರ್ಶೀಗಳು ಮೊದಲಿಗರು.
   - ಐಸಿಸಿ ಪ್ರಧಾನ ಕಾರ್ಯಾಲಯವು ಲಂಡನ್ನಿನಿಂದ ದುಬಾಯಿಗೆ ಬದಲಾವಣೆಯ ಪ್ರಾಮುಖ್ಯತೆ.
4. ಯಾವುದಾದರೂ ಒಂದು ಸ್ಥಳೀಯ ಆಟದ ಚರಿತ್ರೆ ತಿಳಿದುಕೊಳ್ಳಿರಿ. ನಿಮ್ಮ ತಂದೆ ತಾಯಿಯರನ್ನು, ತಾತ, ಅಜ್ಜಿಯರನ್ನು ಅವರ ಬಾಲ್ಯದಲ್ಲಿ ಈ ಆಟವನ್ನು ಹೇಗೆ ಆಡುತ್ತಿದ್ದರು ಎಂಬುದನ್ನು ಕೇಳಿರಿ. ಈಗಲೂ ಸಹ ಈ ಆಟವನ್ನು ಹಾಗೆಯೇ ಆಡುತ್ತಿದ್ದಾರಾ ? ಬದಲಾವಣೆಗೆ ಕಾರಣವಾದ ಚಾರಿತ್ರಿಕ ಶಕ್ತಿಗಳಾವುವು ಇರಬಹುದೆಂದು ಆಲೋಚಿಸಿರಿ.
5. ವೈಜ್ಞಾನಿಕ ತಂತ್ರಜ್ಞಾನ, ಪ್ರತ್ಯೇಕವಾಗಿ ದೂರದರ್ಶನ ತಂತ್ರಜ್ಞಾನದಲ್ಲಿನ ಬದಲಾವಣೆಗಳು ಪ್ರಸ್ತುತ ಕ್ರಿಕೆಟ್‌ನ್ನು ಯಾವ ರೀತಿ ಪ್ರಭಾವ ಬೀರಿವೆ ?
6. ಕ್ರಿಕೆಟ್ ವಾಣಿಜ್ಯ ಕ್ರೀಡೆಯಾಗಿ ಬದಲಾಗುವುದರಿಂದ ಸಂಭವಿಸಬಹುದಾದ ಪರಿಣಾಮಗಳ ಮೇಲೆ ಒಂದು ಕರಪತ್ರ ತಯಾರು ಮಾಡಿರಿ.
7. ಪ್ರಪಂಚ ನಕ್ಷೆಯಲ್ಲಿ ಕ್ರಿಕೆಟ್ ಆಡುವ ಐದು ದೇಶಗಳನ್ನು ಗುರ್ತಿಸಿರಿ.

**ಡಿಬೇಟ್ :** ಕ್ರೀಡೆಗಳಿಂದನೇ ದೇಶದ ಗೌರವ ಹೆಚ್ಚುತ್ತದೆಯೇ ಈ ಅಂಶದ ಮೇಲೆ ತರಗತಿ ಕೋಣೆಯಲ್ಲಿ ಸ್ಪರ್ಧೆ ನಿರ್ವಹಿಸಿರಿ ?

**ಪ್ರಾಜೆಕ್ಟ್ ಕೆಲಸ :** ಯಾವುದಾದರೊಂದು ಕ್ರೀಡೆಗೆ ಸಂಬಂಧಿಸಿದ ಮಾಹಿತಿಯನ್ನು ಶೇಖರಿಸಿ, ಆ ಕ್ರೀಡೆಯ ಚರಿತ್ರೆಯನ್ನು ವರದಿ ರೂಪದಲ್ಲಿ ಬರೆಯಿರಿ.



SCERT TELANGANA

ಘಟಕ 24

# ವಿಕೋಪಗಳು - ನಿರ್ವಹಣೆ

ಪ್ರತ್ಯೇಕ ಭೂಭೌಗೋಳಿಕ ಪರಿಸ್ಥಿತಿಗಳಿಂದ, ಅಧಿಕ ಜನಸಂಖ್ಯೆಯಿಂದ ಪ್ರಪಂಚದಲ್ಲಿ ಅನಾಹುತಕ್ಕೆ ಗುರಿಯಾಗುವ ದೇಶಗಳಲ್ಲಿ ಭಾರತದೇಶ ಒಂದು ತುಫಾನು ಗಳು, ಭೂಕಂಪಗಳು, ಬರಗಾಲ, ಪ್ರವಾಹಗಳು, ಭೂಕುಸಿತ ಗಳಂತಹ ಪ್ರಕೃತಿ ವೈಪರಿತ್ಯಗಳು ದೇಶದಲ್ಲಿನ ವಿವಿಧ ಪ್ರಾಂತಗಳಲ್ಲಿ, ವಿವಿಧ ತೀವ್ರತೆಯಲ್ಲಿ ಸಂಭವಿಸುತ್ತಿರುತ್ತವೆ. ಭಾರತ ದೇಶದಲ್ಲಿ ಪೂರ್ವ, ಆಗ್ನೇಯ ಪ್ರಾಂತಗಳು ಆಗಾಗ ತುಫಾನುಗಳಿಗೆ ಗುರಿಯಾಗುತ್ತಿರುತ್ತವೆ. ಪ್ರಸ್ಥಭೂಮಿಯಲ್ಲಿ, ಹಿಮಾಲಯ ಗಳಲ್ಲಿ ಭೂಕಂಪಗಳು ಸಂಭವಿಸುತ್ತಿರುತ್ತವೆ. ಗಂಗ-ಬ್ರಹ್ಮಪುತ್ರ ಮೈದಾನಗಳಲ್ಲಿ ಪ್ರವಾಹಗಳು ಆಗಾಗ ಸಂಭವಿಸುತ್ತಿರುತ್ತವೆ. ಪಶ್ಚಿಮದಲ್ಲಿ ರಾಜಸ್ಥಾನ್ ರಾಯಲಸೀಮ ಪ್ರಾಂತಗಳು ತೀವ್ರ ಬರಗಾಲಕ್ಕೆ ಗುರಿಯಾಗುತ್ತಿರುತ್ತದೆ. ಅಂದರೆ ಅನೇಕ ರೀತಿಯ ಪ್ರಮಾದಗಳನ್ನು ನಾವು ಅಷ್ಟೋ ಇಷ್ಟೋ ಎದುರಿಸುವ ಅಪಾಯವಿದೆ. ಒಂದು ಪ್ರಾಂತದಲ್ಲಿರುವ ಜನರು ಒಂದಕ್ಕಿಂತ ಹೆಚ್ಚು ಪ್ರಮಾದಗಳಿಗೆ ಗುರಿಯಾಗ ಬಹುದು. ಉದಾಹರಣೆಗೆ ತೀರ ಪ್ರಾಂತದಲ್ಲಿ ವಾಸಿಸುವ ಜನರು ಆಗಾಗ ಪ್ರವಾಹ, ತುಫಾನುಗಳಿಗೆ ಗುರಿಯಾಗ ಬಹುದು. ಅವರು ಇರುವ ಪ್ರಾಂತಗಳು ಭೂಕಂಪಗಳಿಗೆ, ಗುರಿಯಾಗಬಹುದು. ಇಂತಹ ಪ್ರಾಂತಗಳನ್ನು ಬಹು ಅನಾಹುತಗಳ ಪ್ರಾಂತ ಎನ್ನುವರು.

ಈ ವಿಪತ್ತುಗಳನ್ನು ಎದುರಿಸಲು ಜನರು ಸಿದ್ದರಿಲ್ಲದಿರು ವಾಗ ಅದರಿಂದ ಆಗುವ ನಷ್ಟ ಬಹಳ ಹೆಚ್ಚಾಗ್ಗಿರುತ್ತದೆ. ಉದಾಹರಣೆಗೆ ಪ್ರವಾಹ ಸಂಭವಿಸಿದಾಗ ಅದು ಪ್ರಮಾದ ವಾಗುತ್ತದೆ. ಅದನ್ನು ಎದುರಿಸಲು ಜನರು ಸಿದ್ಧವಿಲ್ಲದಾಗ ಮನೆ, ಪಶುಗಳು, ಮನುಷ್ಯರು ನೀರಿನಲ್ಲಿ ಕೊಚ್ಚಿಕೊಂಡು ಹೋಗುತ್ತಾರೆ. ಆಗ ಅದು ಪ್ರವಾಹ ಆಪತ್ತಾಗುತ್ತದೆ.

## ಅನಾಹುತಗಳಲ್ಲಿ ವಿಧಗಳು (Types of Disasters)

ಅನಾಹುತಗಳು ಏರ್ಪಡಲು ಕಾರಣಗಳನ್ನು ಅನುಸರಿಸಿ, ಅದು ಸಂಭವಿಸುವ ವೇಗವನ್ನು ಹಿಡಿದು ಇವುಗಳನ್ನು ಅನೇಕ ವಿಧಗಳಾಗಿ ವಿಭಜಿಸಬಹುದು.

**A.** ಸಂಭವಿಸುವ ವೇಗವನ್ನು ಹಿಡಿದು ನಿಧಾನವಾಗಿ ಬರುವ, ವೇಗವಾಗಿ ಬರುವ ಅನಾಹುತಗಳೆಂದು ಎರಡು ರೀತಿಯಲ್ಲಿ ವಿಭಜಿಸಬಹುದು.

**ನಿಧಾನವಾಗಿ ಸಂಭವಿಸುವ ಅನಾಹುತಗಳು (Slow onset disaster) :** ಅನೇಕ ದಿನಗಳು, ತಿಂಗಳು, ಕೆಲವೊಮ್ಮೆ ವರ್ಷಗಳು ಸಂಭವಿಸುವ ಬರಗಾಲ, ಪ್ರಕೃತಿಯ ಅವನತಿ, ಉಪದ್ರವಕಾರಿಯ ಅಂಟುರೋಗ, ಕ್ಷಾಮ(ಬರ) ದಂತಹವು ನಿಧಾನವಾಗಿ ಸಂಭವಿಸುವ ಅನಾಹುಗಳಿಗೆ ಉದಾಹರಣೆ.

**ವೇಗವಾಗಿ ಸಂಭವಿಸುವ ಅನಾಹುತಗಳು (Rapid onset disaster) :** ಕ್ಷಣದಲ್ಲೇ ಸಂಭವಿಸುವ ಅನಾಹುತಗಳು ದಿಬ್ಭ್ರಾಂತಿಗೆ ಗುರಿಮಾಡುತ್ತವೆ. ಇಂತಹ ಅನಾಹುತಗಳ ಪ್ರಬಾವವು ಸ್ವಲ್ಪ ಕಾಲ ಇರಬಹುದು. ಇಲ್ಲವೆ ಹೆಚ್ಚು ದಿನಗಳು ಇರಬಹುದು. ಭೂಕಂಪಗಳು, ತುಫಾನು, ಆಕಸ್ಮಿಕ ಪ್ರವಾಹಗಳು, ಅಗ್ನಿ ಪರ್ವತಗಳು ಸ್ಫೋಟದಂತಹವು ವೇಗವಾಗಿ ಸಂಭವಿಸುವ ಅನಾಹುತಗಳಿಗೆ ಉದಾಹರಣೆಗಳು.

**B.** ಕಾರಣಗಳಿಗನುಗುಣವಾಗಿ ಪ್ರಕೃತಿ ಸಹಜ, ಮಾನವ ನಿರ್ಮಿತ ಅನಾಹುತಗಳೆಂದು ಎರಡು ರೀತಿಯಾಗಿ ವಿಭಾಗಿಸಬಹುದು.

**ಪ್ರಕೃತಿ ವಿಪತ್ತು (Natural disaster) :** ಪ್ರಕೃತಿಯ ಕಾರಣಗಳಿಂದ ಇಂತಹ ಅನಾಹುತಗಳು ಏರ್ಪಟ್ಟು ಮಾನವ, ಭೌತಿಕ, ಆರ್ಥಿಕ, ಪ್ರಾಕೃತಿಕ ನಷ್ಟಗಳಿಗೆ ದಾರಿ ಮಾಡಿ ಕೊಡುತ್ತದೆ. ಪ್ರಕೃತಿ ಅನಾಹುತಗಳ ವಿಧಗಳು.

a. ಭೂಕಂಪಗಳು (Earthquakes)
b. ತುಫಾನುಗಳು (Cyclones)
c. ಪ್ರವಾಹಗಳು (Floods)
d. ಬರಗಾಲ (Droughts)
e. ಸುನಾಮಿ (Tsunamis)
f. ಭೂಕುಸಿತ (Land slides)
g. ಅಗ್ನಿಪರ್ವತಗಳು (Volcanoes) ಮುಂತಾದವು.

ಏಳನೇ ತರಗತಿಯಲ್ಲಿ ನೀವು ತುಫಾನುಗಳು, ಪ್ರವಾಹಗಳು, ಅವುಗಳ ನಷ್ಟನಿವಾರಣೆಗಳಂತಹವುಗಳ ಕುರಿತು ಓದಿದ್ದೀರಿ. ಎಂಟನೇ ತರಗತಿಯ ವಿಜ್ಞಾನಶಾಸ್ತ್ರ ಪುಸ್ತಕದಲ್ಲಿ ನೀವು ಭೂಕಂಪಗಳು ಅವುಗಳ ಪ್ರಭಾವ ಕುರಿತು ಅಭ್ಯಾಸ ಮಾಡಿರುವಿರಿ.

SCERT TELANGANA

**ಮಾನವ ನಿರ್ಮಿತ ಅನಾಹುತಗಳು (Human induced disasters) :** ಮಾನವ ತಪ್ಪುಗಳ ಕಾರಣಗಳಿಂದ ಸಂಭವಿಸಬಹುದಾದ ಅನಾಹುತಗಳಿಂದ ಸಾಮಾನ್ಯ ಜೀವನ ಅಸ್ತವ್ಯಸ್ಥವಾಗು ತ್ತವೆ. ಪ್ರಾಣಿ, ಆಸ್ತಿ, ಪರ್ಯಾವರಣ ನಷ್ಟ ಸಂಭವಿಸುತ್ತದೆ. ಅವುಗಳಿಗೆ ಗುರಿಯಾಗುವ ಜನರು ಈ ಸಮಸ್ಯೆಗಳನ್ನು ಎದುರಿಸುವ ಸ್ಥಿತಿಯಲ್ಲಿ ಇರುವುದಿಲ್ಲ. 1984 ಭೂಪಾಲ್ ಗ್ಯಾಸ್ ದುರಂತ, 1997ರಲ್ಲಿ ದೆಹಲಿಯ ಉಪಹಾರ್ ಚಿತ್ರಮಂದಿರದಲ್ಲಿ ಅಗ್ನಿದುರಂತ, 2002ರಲ್ಲಿ ರಾಜಧಾನಿ ಎಕ್ಸ್‌ಪ್ರಸ್ ರೈಲು ದುರಂತ, 2003ರಲ್ಲಿ ಕುಂಬಕೋಣದಲ್ಲಿಯ ಪಾಠಶಾಲೆಯಲ್ಲಿ ಅಗ್ನಿದುರಂತ, 2008ರಲ್ಲಿ ಜೈಪುರದಲ್ಲಿ ಕ್ರಮವಾಗಿ ನಡೆದ ಬಾಂಬ್‌ಸ್ಫೋಟಗಳಂತಹವು ಮುಂತಾದವುಗಳು ಇದಕ್ಕೆ ಉದಾಹರಣೆ.

### ಅನಾಹುತಗಳ ನಿರ್ವಹಣೆ ಎಂದರೇನು ?

### What is disaster management:

ಅನಾಹುತಗಳ ಮೇಲೆ / ಅತ್ಯವಸರ ಪರಿಸ್ಥಿತಿಗಳ ಮೇಲೆ ನಿಯಂತ್ರಣ ಸಾಧಿಸುವುದು. ಅನಾಹುತಗಳ ಪ್ರಭಾವವನ್ನು ನಿವಾರಿಸಲು, ಕಡಿಮೆಗೊಳಿಸಲು, ಇಲ್ಲವೇ ಅವುಗಳಿಂದ ಚೇತರಿಸಿಕೊಳ್ಳಲು ಸಹಾಯ ಮಾಡುವ ವಿಧಾನಗಳನ್ನು ನೀಡು ವುದನ್ನು ಅನಾ ಹುತಗಳ ನಿರ್ವಹಣೆ ಎನ್ನುವರು. ಈ ಚಟುವಟಿಕೆಗಳು ಸಿದ್ದತೆಗೆ ತೀವ್ರತೆಯನ್ನು ಕಡಿಮೆ ಗೊಳಿಸಲು, ಅತಿ ಬೇಗ ಸ್ಪಂದಿಸಲು ಸಹಾಯ ನೀಡಲು, ಸುಧಾರಿಸಿ ಕೊಳ್ಳಲು (ಪುನರ್ ನಿರ್ಮಾಣ, ಪುನಾರಾ ವಸ) ಇವುಗಳಿಗೆ ಸಂಬಂಧಿಸಿದವುಗಳಾಗಿರಬಹುದು. ಶಿಕ್ಷಕರು, ವಿದ್ಯಾರ್ಥಿಗಳು ಸಮಾಜದ ಒಂದು ಮುಖ್ಯ ಭಾಗವಾಗಿದ್ದಾರೆ ಮತ್ತು ಇವರು ಅನಾಹುತ ಗಳನ್ನು ತಪ್ಪಿಸುವಲ್ಲಿ ಪ್ರಮುಖ ಪಾತ್ರ ವಹಿಸು ತ್ತಾರೆ. ವಿದ್ಯಾರ್ಥಿಗಳು ಸಮಾಜಕ್ಕೆ ಪೋಷಕರಿಗೂ ಅನಾಹುತಗಳ ಬಗ್ಗೆ ಪರಿಣಾಮಕಾರಿ ಸಂದೇಶ ನೀಡುವಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಶಿಕ್ಷಕರು ಮಕ್ಕಳಿಗೆ ಈ ಅನಾಹುತಗಳ ಬಗ್ಗೆ ಮಾರ್ಗ ದರ್ಶನ ನೀಡುವಲ್ಲಿ ಮುಖ್ಯ ಜವಾಬ್ದಾರಿಯು ಇದೆ.

*ಚಿತ್ರ 24.1:*

***ಅನಾಹುತಗಳ ನಿರ್ವಹಣೆಯ ಬಗ್ಗೆ ತಿಳಿದುಕೊಂಡಿರುವುದು ವೈಪರಿತ್ಯಗಳ ನಿರ್ವಹಣೆ ಹಂತಗಳು***




SCERT TELANGANA

## ಸುನಾಮಿ (TSUNAMI)

- ಸುನಾಮಿಗಳು ಎಂದರೆ ಏನೋ ನಿಮಗೆ ಗೊತ್ತಾ? ಅವು ಹೇಗೆ ಏರ್ಪಡುತ್ತವೆ ? ಅವುಗಳನ್ನು ಮುಂಚೆಯೇ ಹೇಗೆ ಊಹಿಸಬಹುದು ? ರಾಜ್ಯದಲ್ಲಿನ ಕರಾವಳಿ ಜಿಲ್ಲೆಗಳಲ್ಲಿ ನೀವು ವಾಸವಾಗಿದ್ದರೆ ಸುನಾಮಿ ಸಂಭವಿಸಿದಾಗ ನಿಮ್ಮನ್ನು ಹೇಗೆ ರಕ್ಷಿಸಿಕೊಳ್ಳುತ್ತೀರಿ ?

ಸುನಾಮಿ ಎಂಬುದು ಜಪನೀಸ್‌ನ ಪದವಾಗಿದೆ. ಸು ಎಂದರೆ ರೇವು, ನಾಮಿ ಎಂದರೆ ಅಲೆಗಳು ಎಂದರ್ಥ. ಈ ಎರಡು ಸೇರಿ ಸುನಾಮಿ ಎಂಬ ಪದ ಏರ್ಪಟ್ಟಿದೆ. ಸಮುದ್ರದಲ್ಲಿನ ಭೂಕಂಪಗಳು, ಅಗ್ನಿ ಜ್ವಾಲಾಮುಖಿಗಳು ಸ್ಫೋಟಿಸುವುದು ನೀರಿನ ಒಳಗೆ ಭೂಕುಸಿತದಿಂದ ದೊಡ್ಡ ದೊಡ್ಡ ಅಲೆಗಳು ಎದ್ದು ಕರಾವಳಿ ಪ್ರಾಂತವನ್ನು ಹಾಳು ಮಾಡುವುದನ್ನು ಸುನಾಮಿ ಎನ್ನುವರು.

ಹತ್ತಿರದಲ್ಲಿಯ ಭೂಕಂಪಗಳಿಂದ ಉದ್ಭವಿಸಿದ ಸುನಾಮಿ ಅಲೆಗಳು ಕೇವಲ ನಿಮಿಷಗಳಲ್ಲಿಯೇ ಸಮುದ್ರ ತೀರವನ್ನು ತಲುಪುತ್ತವೆ. ಈ ಅಲೆಗಳು ಕಡಿಮೆ ಆಳದ ನೀರಿಗೆ ಸೇರಿದಾಗ ಬಹಳ ಅಡಿಗಳ ಎತ್ತರ, ಆಗಾಗ ಹತ್ತು ಅಡಿಗಳ ಎತ್ತರದ ಮೇಲೆ ಅಪ್ಪಳಿಸಿ ಕರಾವಳಿ ಪ್ರಾಂತವನ್ನು ವಿಧ್ವಸಂಕರ ಶಕ್ತಿಯಿಂದ ಮುಟ್ಟುತ್ತವೆ. ಒಂದು ದೊಡ್ಡ ಭೂಕಂಪದ ನಂತರ ಸುನಾಮಿ ಪ್ರಮಾದ ಬಹಳ ಗಂಟೆಗಳವರೆಗೆ ಇರಬಹುದು.




*ಚಿತ್ರ 24.2: ಸುನಾಮಿ ಅಲೆಗಳ ನಕ್ಷೆಯ ಸುಸ್ಪಷ್ಟ ವರ್ಣನೆಯ ಪ್ರದರ್ಶನೆ*

### ನಿಮಗೆ ಗೊತ್ತಾ ?

A. ಸುನಾಮಿಯಲ್ಲಿ ಅನೇಕ ಅಲೆಗಳು ಬರುತ್ತವೆ. ಮೊದಲ ಅಲೆ ಎಲ್ಲದಕ್ಕಿಂತ ದೊಡ್ಡದು ಇಲ್ಲದಿರಬಹುದು. ಮೊದಲ ಅಲೆ ನಂತರ ಅನೇಕ ಗಂಟೆಗಳವರೆಗೆ ದೊಡ್ಡ ಅಲೆಗಳು ಬರುವ ಪ್ರಮಾದವಿರುತ್ತದೆ.

B. ಮೈದಾನ ಪ್ರಾಂತಗಳಲ್ಲಿ ಸುನಾಮಿ ಮನುಷ್ಯನಿಗಿಂತ ವೇಗವಾಗಿ, ಅಂದರೆ ಗಂಟೆಗೆ 50 ಕಿ.ಮೀ. ವೇಗದಲ್ಲಿ ಚಲಿಸುತ್ತದೆ.

C. ಸುನಾಮಿ ಹಗಲು ಅಥವಾ ರಾತ್ರಿಯ ಯಾವ ಸಮಯದಲ್ಲಾದರೂ ಸಂಭವಿಸಬಹುದು.

### ಸುನಾಮಿ ಮುಂಚೆ ಏನು ಮಾಡಬೇಕು ? (What to do BEFORE Tsunami) :

1. ಸುನಾಮಿ ಪ್ರಮಾದಕ್ಕೆ ಗುರಿಯಾಗುವ ಪ್ರಾಂತಗಳಲ್ಲಿ ನಿಮ್ಮ ಮನೆ, ಶಾಲೆ, ಕೆಲಸ ಮಾಡುವ ಸ್ಥಳ, ಆಗಾಗ ಸಂದರ್ಶಿಸುವ ಪ್ರದೇಶಗಳು ಯಾವುದಾದರೂ ಇವೆಂಬುದನ್ನು ತಿಳಿದುಕೊಳ್ಳಿರಿ.

2. ಸುನಾಮಿ ಸಂಭವಿಸಿದಾಗ ನೀವು ವಾಸಿಸಲು ಅವಕಾಶ ಇರುವ ನಿಮ್ಮ ಮನೆ, ಶಾಲೆ, ಕೆಲಸ ಮಾಡುವ ಸ್ಥಳ, ಇತರ ಪ್ರದೇಶಗಳಿಂದ ತಪ್ಪಿಸಿಕೊಳ್ಳುವ ಮಾರ್ಗವನ್ನು ಕುರಿತು ಮುಂಚೆಯೇ ತಿಳಿದುಕೊಂಡಿರಬೇಕು.

3. ತಪ್ಪಿಸಿಕೊಳ್ಳುವ ಮಾರ್ಗಗಳ ಮೂಲಕ ಸುರಕ್ಷಿತ ಪ್ರಾಂತಗಳನ್ನು ಸೇರಿಕೊಳ್ಳಲು ಅಭ್ಯಸನ ಮಾಡುತ್ತಾ ಇರಬೇಕು.

4. ಅತ್ಯವಸರ ಪರಿಸ್ಥಿತಿಗಳಲ್ಲಿ, ಇರಬೇಕಾದ ಸಾಮಾಗ್ರಿಗಳೊಂದಿಗೆ ತಯಾರಾಗಿರಿ.

5. ಸುನಾಮಿಗಳ ಬಗ್ಗೆ ನಿಮ್ಮ ಕುಟುಂಬದೊಂದಿಗೆ ಚರ್ಚಿಸುತ್ತಾ ಇರಬೇಕು.

## ಸುನಾಮಿಯ ಬಗ್ಗೆ ಮೊದಲೇ ಪತ್ತೇ ಹಚ್ಚುವುದು (Detecting Tsunamis) :

ಸುನಾಮಿಗೆ ಕಾರಣವಾಗುವ ಭೂಕಂಪಗಳ ಬಗ್ಗೆ ಉಪಗ್ರಹ ತಂತ್ರಜ್ಞಾನದಿಂದ ಆದಷ್ಟು ಬೇಗನೇ ಹೆಚ್ಚರಿಕೆ ಗಳನ್ನು ನೀಡಬಹುದು. ಸುನಾಮಿ ಕೇಂದ್ರದಿಂದ ತೀರ ಪ್ರಾಂತ ಎಷ್ಟು ದೂರವಿದೆ ಎಂಬುದನ್ನು ಹಿಡಿದು ಎಚ್ಚರಿಕೆ ಮತ್ತಷ್ಟು ಮುಂದಾಗಿ ಹೇಳಬಹುದು ಎಂಬುದು ಆಧಾರ ಪಟ್ಟಿರುತ್ತದೆ. ಎಚ್ಚರಿಕೆಯಲ್ಲಿ ಯಾವ ಯಾವ ತೀರ ಪ್ರಾಂತ ವನ್ನು ಎಷ್ಟು ಸಮಯದಲ್ಲಿ ಸುನಾಮಿ ಬರಬಹುದೆಂದು ಹೇಳುತ್ತಾರೆ.

ತೀರ ಪ್ರಾಂತದ ಅಲೆಗಳ ಅಳತೆಗಳ ಪರಿಕರಗಳು ಸುನಾಮಿಗಳನ್ನು ತೀರದ ಹತ್ತಿರ ಗುರ್ತಿಸುತ್ತವೆ. ಆದರೆ ಸಮುದ್ರ ಒಳಗೆ ಇವು ಉಪಯೋಗವಾಗುವುದಿಲ್ಲ. ಸಮುದ್ರದ ಒಳಗಿನ ಕೇಬಲ್‌ಗಳ ಮೂಲಕ ಭೂಮಿಗೆ ಜೋಡಿಸಿದ ಸುನಾಮಿ ಡಿಟೆಕ್ಟರ್‌ಗಳು ಸಮುದ್ರದಲ್ಲಿ 50 ಕಿ.ಮೀ. ಆಳದಲ್ಲಿರುತ್ತದೆ. ಸುನಾಮಿ ಮೀಟರ್‌ಗಳ 'Tsunameters' ಸಮುದ್ರದ ಮೇಲ್ಮೈಮೇಲೆ ತೇಲು ಬುರುಡೆ ಗುರ್ತಿಸಿ ಅವುಗಳನ್ನು ಉಪಗ್ರಹಗಳಿಗೆ ಪ್ರಸಾರ ಮಾಡುತ್ತವೆ.

## ಸುನಾಮಿ ಸಮಯದಲ್ಲಿ ಏನು ಮಾಡಬೇಕು ? What to do DURING a Tsunami:

- ನೀವು ಮನೆಯ ಹತ್ತಿರ ಇದ್ದು, ಸುನಾಮಿ ಎಚ್ಚರಿಕೆ ಗಳು ತಿಳಿದಲ್ಲಿ ಕುಟುಂಬದಲ್ಲಿನ ಎಲ್ಲರಿಗೂ ಆ ವಿಷಯವನ್ನು ತಿಳಿಸಬೇಕು. ಸುನಾಮಿ ತಗಲುವ ಪ್ರಾಂತದಲ್ಲಿ ಇದ್ದರೆ ಕುಟುಂಬವೆಲ್ಲವು ಮನೆ ಬಿಟ್ಟು ಹೋಗಬೇಕು. ಎತ್ತರವಾಗಿ, ಸುರಕ್ಷಿತವಾಗಿರುವ ಪ್ರಾಂತಕ್ಕೆ ಹೋಗಬೇಕು. ಹೀಗೆ ಹೋಗುವಾಗ ಪ್ರಶಾಂತವಾಗಿ, ಕ್ರಮಶಿಕ್ಷಣದಿಂದ ವ್ಯವಹಿಸಬೇಕು.
- ಅನಾಹುತಗಳಲ್ಲಿಬೇಕಾಗುವ ಸಾಮಾಗ್ರಿಗಳನ್ನು ನಿಮ್ಮ ಜೊತೆಗೆ ತೆಗೆದುಕೊಂಡು ಹೋಗಬೇಕು. ಇವು ನಿಮ್ಮ ಜೊತೆಗೆ ಇದ್ದರೆ ನೀವು ನಿಶ್ಚಿಂತೆಯಾಗಿರಬಹುದು.
- ನೀವು ಸಮುದ್ರ ತೀರಕ್ಕೆ ಹತ್ತಿರವಿದ್ದು, ಭೂಮಿ ಕಂಪಿಸುವುದು ಗೊತ್ತಾದರೆ ಸುನಾಮಿ ಎಚ್ಚರಿಕೆಗಾಗಿ ಎದುರು ನೋಡದೆ ಬೇಗನೇ ಎತ್ತರವಾದ ಪ್ರದೇಶ ಗಳಿಗೆ ಹೋಗಬೇಕು. ಸಮುದ್ರದೊಳಗೆ ಸೇರುವ ಹಳ್ಳ, ಕೊಳ್ಳಗಳಿಗೆ ದೂರವಾಗಿರಬೇಕು.
- ಬಹಳ ಎತ್ತರದ ಬಹುಮಹಡಿ ಸಮುದ್ರ ತೀರ ಪ್ರಾಂತಗಳಲ್ಲಿ ಹಲವು ಅಂತಸ್ತುಗಳ (ಹೋಟೆಲ್ ಗಳಂತಹ) ಭವನಗಳಿದ್ದರೆ ಮೇಲಿನ ಅಂತಸ್ತುಗಳು ಸುನಾಮಿಯಿಂದ ರಕ್ಷಿಸಲ್ಪಡುತ್ತವೆ.
- ಸಮುದ್ರದೊಳಕ್ಕೆ ಚಾಚಿಕೊಂಡ ಬಂಡೆಸಾಲುಗಳು ಆಳ ಕಡಿಮೆ ಇರುವ ಪ್ರಾಂತಗಳು ಸುನಾಮಿ ಅಲೆಗಳ ತೀವ್ರತೆಯನ್ನು ಕಡಿಮೆ ಮಾಡಬಹುದು. ಆದರೂ ಈ ಪ್ರಾಂತದಲ್ಲಿ ಸಮುದ್ರ ತೀರದಲ್ಲಿ ವಾಸಿಸುವವ ರಿಗೆ ದೊಡ್ಡ ಅಲೆಗಳ ಅಪಾಯವು ಇನ್ನೂ ಇರುತ್ತದೆ. ಸುನಾಮಿ ಎಚ್ಚರಿಕೆ ಜಾರಿ ಮಾಡಿದಾಗ ಆಳ ಕಡಿಮೆ ಇರುವ ತೀರ ಪ್ರಾಂತಗಳಿಗೆ ದೂರದಲ್ಲಿ ಇರುವುದೇ ಒಳ್ಳೆಯದು.
- ಆಗಿಂದಾಗ್ಗೆ ರೇಡಿಯೋ, ದೂರದರ್ಶನಗಳ ಮೂಲಕ ಪ್ರಸಾರವಾಗುವ ತಾಜಾ ಎಚ್ಚರಿಕೆಗಳ ಬಗ್ಗೆ ತಿಳಿದುಕೊಳ್ಳುತ್ತಾ ಇರಬೇಕು.

## ಸುನಾಮಿ ನಂತರ ಏನು ಮಾಡಬೇಕು ? (What to do AFTER Tsunami)·:

- ರೇಡಿಯೋ, ದೂರದರ್ಶನಗಳ ಮೂಲಕ ತಾಜಾ ಸಮಾಚಾರವನ್ನು ತಿಳಿದುಕೊಳ್ಳುತ್ತಾ ಇರಬೇಕು. ಸುನಾಮಿಯಿಂದ ರಸ್ತೆಗಳು, ಸೇತುವೆಗಳು, ಇತರ ಪ್ರದೇಶಗಳು ಹಾಳಾಗಿ ಪ್ರಮಾದಕಾರಿಯಾಗಿ ಇರಬಹುದು.
- ನಿಮಗೆ ಗಾಯಗಳಾಗಿದ್ದಲ್ಲಿ ಅವಸರವೆನಿಸಿದರೆ ಪ್ರಥಮ ಚಿಕಿತ್ಸೆ ಪಡೆದುಕೊಳ್ಳಬೇಕು. ಒಂದು ವೇಳೆ ಯಾರಾದರೂ ಅಪಾಯದಲ್ಲಿದ್ದರೆ ಅವಸರವಾದ ಸಲಕರಣೆಗಳಿಂದ ಇರುವ ನಿಪುಣರಿಗೆ ಸಹಾಯಕ್ಕಾಗಿ ಕರೆಯಿರಿ. ಪ್ರವಾಹಕ್ಕೆ ಗುರಿಯಾದ ಪ್ರಾಂತಗಳಲ್ಲಿ ಇತರರಿಗೆ ಸಹಾಯವಾಗುವಾಗ ಗಾಯವಾಗ ಬಹುದು, ಪ್ರಾಣಾಪಾಯವಾಗುವ ಪ್ರಮಾದವಿದೆ.
- ಪ್ರತ್ಯೇಕ ಅವಸರವಿರುವ ಮಕ್ಕಳು, ವೃದ್ದರು, ಅಂಗವಿಕಲರು, ಸಾರಿಗೆ ಸಂಪರ್ಕ ಇಲ್ಲದವರು ಹೆಚ್ಚಿನ ಸಹಾಯ ಬೇಕಾಗುವ ದೊಡ್ಡ ಕುಟುಂಬಗಳಿಗೆ ಸಹಾಯ ಮಾಡಬೇಕು.
- ಅನಾಹುತಗಳಾದ ಪ್ರಾಂತಗಳಿಗೆ ಹೋಗಬಾರದು. ನೀವು ಹೋಗುವುದರಿಂದ ಸಹಾಯ ಮಾಡಲು ಇತರ ಅತ್ಯವಸರ ಕೆಲಸಗಳಿಗೆ ತೊಂದರೆಯಾಗ ಬಹುದು. ಕಲುಷಿತ ನೀರು, ಮಣ್ಣಿನ ಎಳ್ಳೆಗಳು ಮುರಿದು ಬೀಳುವುದು, ಬುರದೆ ಪ್ರವಾಹ, ಹಾಳಾದ ರಸ್ತೆಗಳು, ಇತರ ಅನಾಹುತಗಳಿಂದ ನೀವು ತೊಂದರೆಗೀಡಾಗಬಹುದು.

SCERT TELANGANA

- ಅತ್ಯವಸರವಾಗಿ ಮಾತನಾಡಲು ದೂರವಾಣಿ ಉಪಯೋಗಿಸಿರಿ. ವಿಪತ್ತಿನ ಪರಿಸ್ಥಿತಿಗಳಲ್ಲಿ ಟೆಲಿಫೋನ್ ಲೈನ್‌ಗಳ ಮೇಲ ಒತ್ತಡವಿರುತ್ತದೆ. ಅತ್ಯವಸರ ವಿಷಯಗಳು ಮಾತನಾಡಲು ಅವಕಾಶವನ್ನು ಕೊಡಬೇಕು.
- ಸುತ್ತಲೂ ನೀರು ನಿಂತಿರುವ ಮನೆಯಲ್ಲಿ ಇರಬಾರದು. ಪ್ರವಾಹದ ನೀರಿನಂತೆ ಸುನಾಮಿ ನೀರು ಬುನಾದಿಗಳನ್ನು ಬಲಹೀನವನ್ನಾಗಿಸುವುದರಿಂದ ಮನೆಗಳು ಬಿದ್ದು ಹೋಗಬಹುದು. ನೆಲ ಬಿರುಕು ಬಿಡಬಹುದು. ಗೋಡೆಗಳು ಬಿದ್ದು ಹೋಗಬಹುದು.
- ನಂತರ ಮನೆಯನ್ನು ಸೇರಿಕೊಳ್ಳುವಾಗ ಬಹಳ ಜಾಗ್ರತೆಯಿಂದ ಇರಬೇಕು. ಸುನಾಮಿ ಪ್ರವಾಹದಿಂದ ನೀವು ಊಹಿಸದೇ ಇರುವ ಸ್ಥಳಗಳಲ್ಲಿ ಸಹ ಕಟ್ಟಡ ಶಿಥಿಲವಾಗಿರಬಹುದು. ನೀವು ಹಾಕುವ ಪ್ರತಿ ಹೆಜ್ಜೆ ಎಚ್ಚರಿಕೆಯಿಂದ ಇಡಬೇಕು.
- ಉದ್ದನೇ ಪ್ಯಾಂಟು ಮತ್ತು ತುಂಬಿದ ತೋಳಿನ ಅಂಗಿ, ಗಟ್ಟಿಮುಟ್ಟಾದ ಬೂಟು ಹಾಕಿಕೊಳ್ಳಬೇಕು. ಇಂತಹ ಅನಾಹುತಗಳ ನಂತರ ಕಾಲುಗಳು ಕೊಯ್ದುಕೊಂಡು ಹೋಗುವುದು ಆಗಾಗ ನಡೆಯುವ ಪ್ರಮಾದಗಳು.
- ಕಟ್ಟಡಗಳನ್ನು ಪರಿಶೀಲಿಸುವಾಗ ಬ್ಯಾಟರಿ ದೀಪಗಳನ್ನು ಉಪಯೋಗಿಸಬೇಕು. ಇದು ಬಹಳ ಅಪಾಯರಹಿತವಾದುದು. ಇದರಿಂದ ಅಗ್ನಿ ಪ್ರಮಾದ ಸಂಭವಿಸುವುದಿಲ್ಲ. ಮೇಣದ ಬತ್ತಿ ಉಪಯೋಗಿಸಬಾರದು.
- ಗೋಡೆಗಳು, ನೆಲ, ಬಾಗಿಲು ಮೆಟ್ಟಿಲುಗಳು, ಕಿಟಕಿಗಳನ್ನು ಪರೀಕ್ಷಿಸಿ ಮನೆ ಬಿದ್ದು ಹೋಗುವ ಪ್ರಮಾದವಿಲ್ಲವೆಂದು ನಿರ್ಧರಿಸಿಕೊಳ್ಳಬೇಕು.
- ಯಾವುದೇ ರೀತಿಯ ಬಿರುಕು ಅಥವಾ ಇತರ ಸಮಸ್ಯೆಗಳಿಗೆ ಬುನಾದಿಗಳನ್ನು ಪರೀಕ್ಷಿಸಿರಿ. ಇವು ಇದ್ದಲ್ಲಿ ಮನೆಯು ವಾಸಿಸುವುದಕ್ಕೆ ಬರುವುದಿಲ್ಲ.
- ಅಗ್ನಿ ಅನಾಹುತ ಸಂಭವಿಸುವ ಅವಕಾಶಗಳಿವೆ ಎಂಬುದನ್ನು ನೋಡಿರಿ. ಗ್ಯಾಸ್ ಪೈಪುಗಳು ಮುರಿದು ಅನಿಲ ಸೋರುವಿಕೆಯಾಗಬಹುದು. ವಿದ್ಯುಚ್ಛಕ್ತಿ ಸರ್ಕ್ಯೂಟ್, ಇತರ ವಿದ್ಯುತ್ ಸಾಮಾಗ್ರಿಗಳು ನೀರಿನಲ್ಲಿ ಮುಳುಗಿ ಹೋಗಿರಬಹುದು. ಉರಿದು ಹೋಗುವ ಅಥವಾ ಸ್ಫೋಟಗೊಳ್ಳುವ ವಸ್ತುಗಳು ಹೊರಗಿನಿಂದ ಪ್ರವಾಹದಲ್ಲಿ ಬಂದಿರಬಹುದು. ಪ್ರವಾಹಗಳ ನಂತರ ಹೆಚ್ಚಾಗಿ ಅಗ್ನಿ ಪ್ರಮಾದಗಳು ಸಂಭವಿಸುತ್ತಿರುತ್ತವೆ.
- ಕಾಡು ಪ್ರಾಣಿಗಳಿವೆಯೇನೋ ನೋಡಿರಿ. ಪ್ರತ್ಯೇಕವಾಗಿ ನೀರಿನಲ್ಲಿ ವಿಷದ ಹಾವುಗಳು ಬಂದಿರಬಹುದು. ವ್ಯರ್ಥ ಪದಾರ್ಥಗಳನ್ನು ಪರಿಶೀಲಿಸಲು ಕಟ್ಟಿಗೆಯನ್ನು ಉಪಯೋಗಿಸಿರಿ. ಸುನಾಮಿ ಪ್ರವಾಹ ನೀರಿನಿಂದ ಆಶ್ರಯ ಕಳೆದುಕೊಂಡ ಹಾವುಗಳು ಪ್ರಾಣಿಗಳು ಅವುಗಳ ನಿವಾಸಗಳಿಂದ ಬಯಲಿಗೆ ಬರುತ್ತವೆ.



*ಚಿತ್ರ 24.3: ಭಾರತದೇಶ ಪೂರ್ವ, ದಕ್ಷಿಣ ತೀರ ಪ್ರದೇಶವನ್ನು ಅಪ್ಪಳಿಸಿದ ಸುನಾಮಿ*

- ಬಿದ್ದು ಹೋಗವ ಪ್ರಮಾದವಿರುವ ಗೋಡೆ ಮೇಲ್ಭಾವಣಿಗಳನ್ನು ಗಮನಿಸಿರಿ.
- ಮನೆ ಒಣಗಲು ಕಿಟಕಿ, ಬಾಗಿಲುಗಳನ್ನು ತೆಗೆದಿಡಬೇಕು.
- ಗಟ್ಟಿಯಾಗುವುದಕ್ಕಿಂತ ಮುಂಚೆ ಬುರದೆಯನ್ನು ಹೊರಗಡೆ ತೊಡಿ ಹಾಕಬೇಕು.

## ಬರಗಾಲ (DROUGHT)

ಬರಗಾಲ ಎಂಬುದು ಮಳೆಯ ಅಭಾವದಿಂದ ಉಂಟಾಗುವ (ಅನಾಹುತವಾಗಿದೆ) ಪ್ರಕೃತಿ ವೈಪರಿತ್ಯವಾಗಿದೆ. ಒಂದು ಪ್ರಾಂತದಲ್ಲಿ ಸಾಧಾರಣವಾಗಿ

SCERT TELANGANA

ಬೀಳಬೇಕಾದ ಮಳೆಯು ಬೀಳದೇ ಇದ್ದಲ್ಲಿ ಅದನ್ನು ವಾತಾವರಣದ ಬರಗಾಲ ಎಂದು ಕರೆಯುವರು. ಒಂದು ವರ್ಷದಲ್ಲಿ ಮಳೆಯು ಸಾಧಾರಣವಾಗಿಯೇ ಇರಬಹುದು. ಆದರೆ ಎರಡು ಮಳೆಗಳ ಮಧ್ಯೆ ಅವಧಿ ಬಹಳ ಹೆಚ್ಚಾಗಿ ಇದ್ದು ಮಳೆಯಾಧಾರಿತ ಬೆಳೆಗಳು ಬೆಳೆಯದೇ ಇರಬಹುದು. ಇದನ್ನೇ ವ್ಯವಸಾಯ ಬರಗಾಲ ಎನ್ನುವರು. ಆದ್ದರಿಂದ ಎಷ್ಟು ಮಳೆ ಎಂಬುದಲ್ಲದೆ, ಯಾವಾಗ ಮಳೆ ಬಿದ್ದಿದೆ ಎಂಬುದು ಬಹಳ ಮುಖ್ಯವಾದದು.

ಅಧಿಕ ಅಥವಾ ಕಡಿಮೆ ಮಳೆ ಬೀಳುವುದು ಎಂಬುದು (70-100 ವರ್ಷಗಳು) ಸರಾಸರಿ ಸಾಧಾರಣ ವರ್ಷಪಾತ




*ಚಿತ್ರ24.4: ಭಾರತ ದೇಶ, ಪೂರ್ವ, ದಕ್ಷಿಣ ತೀರವನ್ನು ತಾಕಿದ ಸುನಾಮಿ*

ದೊಂದಿಗೆ ಹೋಲಿಸಿ ಈ ವಿಧವಾಗಿ ಹೇಳುವರು.

| | |
|---|---|
| ಅಧಿಕ | ಸರಾಸರಿ ಮಳೆಗಿಂತ ಶೇಕಡ 20 ಅಥವಾ ಅದಕ್ಕಿಂತ ಹೆಚ್ಚು. |
| ಸಾಧಾರಣ | ಸರಾಸರಿ ವರ್ಷಪಾತಕ್ಕಿಂತ ಶೇಕಡ +19 ಹೆಚ್ಚು ದಿಂದ -19 ಶೇಕಡ ಕಡಿಮೆವರೆಗೆ |
| ಕಡಿಮೆ | ಸರಾಸರಿ ವರ್ಷಪಾತಕ್ಕಿಂತ -20 ಶೇಕಡದಿಂದ 59 ಶೇಕಡ ಕಡಿಮೆವರೆಗೆ |
| ಬಹಳ ಕಡಿಮೆ | ಸರಾಸರಿ ವರ್ಷಪಾತಕ್ಕಿಂತ 60 ಶೇಕಡ ಕಡಿಮೆ |

ಕೆಲವು ಪ್ರಾಂತಗಳಲ್ಲಿ ಅವು ಇರುವ ಭೌಗೋಳಿಕ ಸ್ಥಿತಿಗಳಿಂದ ಕಡಿಮೆ ವರ್ಷಪಾತ ಬೀಳಲು ಹೆಚ್ಚು ಅವಕಾಶಗಳಿವೆ. ಇವುಗಳನ್ನು 'ಬರಗಾಲ ಪೀಡಿತ' (Drought Prone Areas) ಪ್ರಾಂತಗಳೇನ್ನುವರು ಉದಾಹರಣೆಗೆ ರಾಮಲಸೀಮ, ತೆಲಂಗಾಣ ಪ್ರಾಂತಗಳಲ್ಲಿ ಪ್ರತಿ ಐದು ವರ್ಷಗಳಲ್ಲಿ ಎರಡು ವರ್ಷಗಳು ಬರಗಾಲ ಸ್ಥಾನವಹಿಸುವ ಅವಕಾಶವಿದೆ.

### ಬರಗಾಲದ ಪ್ರಭಾವ (Impact of Drought):

ಬರಗಾಲದ ಪ್ರಭಾವವು ಕ್ರಮೇಣ ತೀರ್ವ

SCERT TELANGANA

ಪರಿಣಾಮಗಳಿಗೆ ದಾರಿಮಾಡಿಕೊಡುತ್ತದೆ :

- ಭೂಗರ್ಭಜಲ ನೀರಿನ ಮಟ್ಟ ಕಡಿಮೆಯಾಗುವುದು, ಕುಡಿಯುವ ನೀರಿನ ಕೊರತೆ.
- ಬೆಳೆಯ ವಿಸ್ತೀರ್ಣ ಕಡಿಮೆಯಾಗುವುದು.
- ವ್ಯವಸಾಯವು ಕಡಿಮೆಯಾದ್ದರಿಂದ ವ್ಯವಸಾಯದ ರಂಗದಲ್ಲಿ ಉದ್ಯೋಗಾವಕಾಶಗಳು ಕಡಿಮೆಯಾಗುತ್ತದೆ.
- ವ್ಯವಸಾಯ ಅದರ ಅನುಭಂದ ಕ್ಷೇತ್ರಗಳಲ್ಲಿನ ಜನರು ಕೊಳ್ಳುವ ಶಕ್ತಿ ಕಡಿಮೆಯಾಗುತ್ತದೆ.
- ಆಹಾರ ಧಾನ್ಯಗಳ ಕೊರತೆ.
- ಪಶುಗ್ರಾಸ ಕೊರತೆ.
- ಪಶುಗಳು ಸಾವನ್ನಪ್ಪುತ್ತವೆ.
- ಪೌಷ್ಟಿಕ ಆಹಾರದ ಕೊರತೆ, ಪ್ರತ್ಯೇಕವಾಗಿ ಚಿಕ್ಕ ಮಕ್ಕಳಲ್ಲಿ.
- ಅತಿಸಾರ, ಭೇದಿ, ಆಮಶಂಕೆ ಭೇದಿ, ಕಲರಾಗಳಂತಹ ರೋಗಗಳು ಅನಾರೋಗ್ಯ ವಿಸ್ತರಿಸುವುದು. ಹಸಿವಿನಿಂದ ಕಣ್ಣಿನ ದೃಷ್ಟಿ ಕಡಿಮೆಯಾಗುವುದು
- ಭೂಮಿ/ಆಭರಣಗಳು, ಆಸ್ತಿಗಳನ್ನು ತಪ್ಪದೇ ಹಡವಿಡುವುದು ಇಲ್ಲವೇ ಮಾರಾಟ ಮಾಡುವುದು.
- ಕೆಲಸಗಳನ್ನು ಹುಡುಕುತ್ತಾ ಜನರು ವಲಸೆ ಹೋಗುವುದು.

## ಬರಗಾಲವನ್ನು ಎದುರಿಸುವುದು ಹೇಗೆ ? How to cope with Drought?

ಒಮ್ಮೇಲೇ ಸಂಭವಿಸುವ ಅನಾಹುತ ರೀತಿ ಅಲ್ಲದೇ ಬರಗಾಲವು ನಿಧಾನವಾಗಿ ಸಂಭವಿಸುತ್ತದೆ. ಆದುದರಿಂದ ನಾವು ಅದನ್ನು ಎದುರಿಸಲು ಸಂಸಿದ್ದರಾಗಿರಬೇಕು. ಪ್ರತಿಸ್ಪಂದಿಸಲು, ಅದರ ಪ್ರಭಾವವನ್ನು ತಗ್ಗಿಸಲು ಬೇಕಾದಷ್ಟು ಸಮಯವಿರು ತ್ತದೆ. ಪರ್ಯಾವೇಕ್ಷಣೆ, ಮುಂದೆ ಹೇಳುವ ಎಚ್ಚರಿಕೆಗಳಿಂದ ಎಲ್ಲಾ ಮಟ್ಟಗಳಲ್ಲಿ ನಿರ್ಣಯ ಕೈಗೊಳ್ಳುವ ಜಬಾಬ್ದಾರಿ ಇರುವವರು ಸಕಾಲದಲ್ಲಿ ಸ್ಪಂದಿಸಬಹುದು. ಬರಗಾಲಕ್ಕೆ ತುತ್ತಾಗುವ ಪ್ರಾಂತಗಳಲ್ಲಿ ನೀರಿನ ಸಂರಕ್ಷಣೆ ವಿಧಾನಗಳಂತಹ ಅಂಶಗಳ ಮೇಲ ಅವಗಾಹನೆ ಕಲ್ಪಿಸಲು ಸರ್ಕಾರ, ಸ್ವಯಂ ಸಂಸ್ಥೆಗಳು, ಸ್ಥಳೀಯ ಅಧಿಕಾರಿಗಳು ಕೃಷಿ ಮಾಡುತ್ತಾರೆ.

## ಮಳೆಯ ನೀರನ್ನು ಸಂಗ್ರಹಿಸುವುದು (Rainwater harvesting) :

ಪಟ್ಟಣ ಪ್ರಾಂತಗಳಲ್ಲಿ ಮನೆಯ ಮೇಲ್ಚಾವಣಿಗಳಿಂದ ಬೀಳುವ ಮಳೆಯ ನೀರನ್ನು ಇಂಗುವಂತೆ ಮಾಡಬೇಕು. ಈ ಮಳೆಯ ನೀರನ್ನೆಲ್ಲಾ ಇಂಗುವ ಕುಣಿಗೆ ಹೋಗುವಂತೆ ಮಾಡವುದು ಎಲ್ಲಕ್ಕಿಂತ ಸುಲಭವಾದ ಕೆಲಸ. ಪ್ರತ್ಯೇಕವಾಗಿ ಕಟ್ಟಿದ ಟ್ಯಾಂಕುಗಳು, ಸಂಪುಗಳಿಗೆ ಮಳೆಯ ನೀರನ್ನು ಹೋಗುವಂತೆ ಮಾಡಿ ದಿನನಿತ್ಯದ ಅವಸರಗಳಿಗೆ ಉಪಯೋಗಿಸಬಹುದು. ಕೆಲವು ಪ್ರಾಂತಗಳಲ್ಲಿ ಸುಲಭವಾಗಿ ಸೋಸುವ ವಿಧಾನದಿಂದ ಕುಡಿಯಲು ಅತ್ಯಂತ ಶುದ್ಧವಾದ ನೀರನ್ನು ಪಡೆಯಬಹುದು.

## ವಾಟರ್‌ಷೆಡ್ ಅಭಿವೃದ್ಧಿ (Watershed Development) :

ಬರಗಾಲದ ಪ್ರಭಾವಗಳನ್ನು ಕಡಿಮೆ ಮಾಡಲು ಸರ್ಕಾರವು ಬರಗಾಲ ಪೀಡಿತ ಪ್ರಾಂತಗಳಲ್ಲಿ ಸಮಗ್ರ ವಾಟರ್ ಷೆಡ್ ನಿರ್ವಹಣೆ ಯೋಜನೆ (Integrated Watershed Management Programme, IWMP)ಗಳನ್ನು ಜಾರಿಗೆ ತರುತ್ತದೆ. ಇದರ ಮುಖ್ಯ ಉದ್ದೇಶ ಜನರಲ್ಲಿ ನೈಪುಣ್ಯಗಳನ್ನು ಪ್ರಭಲಗೊಳಿಸಿ, ನೈಸರ್ಗಿಕ ಸಂಪನ್ಮೂಲ ಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವಂತೆ ಮಾಡುವುದು. ಭೂಮಿಯನ್ನು ಸಾಮರ್ಥ್ಯಕ್ಕನುಗುಣವಾಗಿ ಉಪಯೋಗಿಸಿಕೊಳ್ಳುವುದರಿಂದ ಭೂಮಿಯನ್ನು ಮತ್ತು ನೀರಿನ ಸಂಪನ್ಮೂಲಗಳನ್ನು ಪೂರ್ತಿಯಾಗಿ ಬಳಕೆ ಮಾಡುವುದಲ್ಲದೆ ಅವುಗಳ ದುರುಪಯೋಗವನ್ನು ನಿಯಂತ್ರಿಸಬಹುದು. ವಾಟರ್‌ಷೆಡ್ ಕಾರ್ಯಕ್ರಮದಲ್ಲಿ ಮಾಡುವ ಮುಖ್ಯ ಕೆಲಸಗಳಲ್ಲಿ ಹೊಲಗಳಲ್ಲಿ ಮಳೆಯ ನೀರಿನ ಸಂರಕ್ಷಣೆ, ಅಡವಿಗಳ ಬೆಳೆಸುವಿಕೆ, ಕಡಿಮೆ ನೀರಿನ ಅವಸರವಾಗುವ ಗಿಡ ಮತ್ತು ಬೆಳೆಗಳನ್ನು ಪ್ರೋತ್ಸಾಹಿಸುವುದು, ಜೀವ ನೋಪಾಯದ ಬದಲಾವಣೆ ಮುಂತಾದವು.

## ನೀವು ನೀರನ್ನು ಉಳಿತಾಯ ಮಡುತ್ತೀರಾ ?ವ್ಯಯ ಮಾಡುತ್ತೀರಾ ?

ಕೆಳಗಿನ ಪ್ರಶ್ನೆಗಳ ಆಧಾರದಿಂದ ನೀವು ನೀರನ್ನು ಉಳಿತಾಯ ಮಡುತ್ತಿರುವಿರೋ, ಖರ್ಚುಮಾಡುತ್ತೀರುವಿರೆಂಬುದನ್ನು ತಿಳಿದುಕೊಳ್ಳಿರಿ. ನೀವು ನೀರಿಗೆ ನಾಯಕರೋ ಅಥವಾ ದುರಾತ್ಮನೋ ತಿಳಿದುಕೊಳ್ಳಿ! ಎಷ್ಟು ನೀರು ಉಳಿತಾಯ ಮಾಡಬಹುದೋ ತಿಳಿದುಕೊಳ್ಳಿರಿ.



SCERT TELANGANA

| ಚಟುವಟಿಕೆ | ಬಳಕೆದಾರ 1 (ಲೀ.ಗಳಲ್ಲಿ) | ಬಳಕೆದಾರ 2 (ಲೀ.ಗಳಲ್ಲಿ) | ನಿಮ್ಮ ಬಳಕೆ (ಲೀ.ಗಳಲ್ಲಿ) |
|---|---|---|---|
| ಹಲ್ಲು ಉಜ್ಜಲು | ನಳ ಬಿಟ್ಟರೆ (19) | ಬ್ರಷ್ ತೊಳೆದು ನಳ ನಿಲ್ಲಿಸಿದರೆ (2) | |
| ಕಾಯಿಪಲ್ಲೆ ತೊಳೆಯಲು | ನಳ ಬಿಟ್ಟರೆ (11) | ಪಾತ್ರೆಯಲ್ಲಿ ನೀರು ತುಂಬಿ ತೊಳೆದರೆ (2) | |
| ಪಾತ್ರೆ ತೊಳೆಯಲು | ನಳ ಬಿಟ್ಟರೆ (114) | ತೊಳೆದು, ಪಾತ್ರೆಯಲ್ಲಿ ಸಿಂಕಿನಲ್ಲಿ ತೊಳೆದರೆ (19) | |
| ಶೌಚಾಲಯದಲ್ಲಿ ನೀರುಹಾಯಿಸಲು | ಟ್ಯಾಂಕಿನ ಗಾತ್ರ ಹಿಡಿದು (20) | ಟ್ಯಾಂಕ್‌ನಲ್ಲಿ ಬ್ಯಾಟಲ್ ಇದ್ದರೆ (15) | |
| ಕ್ಷೌರ ಮಾಡಿಕೊಳ್ಳಲು | ನಳ ಬಿಟ್ಟರೆ (18) | ಜಗ್ಗಿನಿಂದ ನೀರು ಉಪಯೋಗಿಸಿದರೆ (0.5) | |
| ಷವರ್‌ನಿಂದ ಸ್ನಾನ ಮಾಡಲು | ನಳ ಹಾಗೆ ಬಿಟ್ಟರೆ (95) | ಸೋಪುನಿಂದ ಸ್ನಾನ ಮಾಡಿದರೆ (15) | |
| ಕಾರು/ಮೋಟಾರ್/ ಸೈಕಲ್ ತೊಳೆಯಲು ವಾಷಿಂಗ್ ಮೀಷನ್‌ನಲ್ಲಿ ಬಟ್ಟೆ ತೊಳೆಯಲು | ಪೈಪ್‌ನಿಂದ ನೀರು ಬಿಟ್ಟು (400/50/20) ಪೂರ್ತಿ ನೀರು ತುಂಬಿ (227) | ಬಕೆಟ್‌ನಿಂದ (40/20/10) ಕನಿಷ್ಠ ಮಟ್ಟಕ್ಕೆ ನೀರು ತುಂಬಿ (102) | |
| ಬಂಡೆ ತೊಳೆಯಲು<br><br>ಕೈ , ಮುಖ ತೊಳೆಯಲು | 5 ನಿಮಿಷ ಪೈಪ್‌ನಲ್ಲಿ ನೀರು ಬಿಟ್ಟು (200)<br>ನಳ ಬಿಟ್ಟರೆ (8) | ಬಕೆಟ್‌ನಿಂದ (40)<br><br>ಬೇಸಿನ್‌ನಲ್ಲಿ ನೆನಸಿ ತೊಳೆದರೆ(4) | |
| **ಒಟ್ಟು** | - | - | |

ನೀವು ಬಳಸುವ ನೀರನ್ನು ಪಟ್ಟಿಕೆಯಲ್ಲಿ ತುಂಬಿ,ಅವುಗಳನ್ನು ಕೂಡಿರಿ. ನೀವು ಯಾವ ಸ್ಥಾನದಲ್ಲಿ ಇರುವಿರೆಂದು ತಿಳಿದುಕೊಳ್ಳಿರಿ.

- 200 ಲೀಟರ್‌ಗಿಂತ ಕಡಿಮೆ - ಪರಿಸರದ ನಾಯಕ
- 201 – 400 ಲೀಟರ್‌ಗಳು - ನೀರಿನ ಉಳಿತಾಯ
- 401 – 600 ಲೀಟರ್‌ಗಳು -ನೀರಿನ ಖರ್ಚುಮಾಡುವವ
- 601 ಲೀಟರ್‌ಗಿಂತ ಹೆಚ್ಚು-ನೀರಿನ ವಿಲನ್

## ಮುಖ್ಯ ಪದಗಳು

1. ಬಹು ಅನಾಹುತಗಳ ಪ್ರಾಂತ 2. ಮಾನವ ನಿರ್ಮಿತ ಅನಾಹುತ 3. ಬರಗಾಲ 4. ಕೀಟಗಳ ಬಾಧೆ 5. ಪರಿಸರ ಕ್ಷೀಣತೆ

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ

1. ನಿಮ್ಮ ಪ್ರಾಂತದಲ್ಲಿ ಸಂಭವಿಸಿದ ಇಲ್ಲವೇ ದೂರದರ್ಶನದಲ್ಲಿ ನೋಡಿದ ಅನಾಹುತಗಳನ್ನು ಸಂಭವಿಸಿದ ನಷ್ಟವನ್ನು ವಿವರಿಸಿರಿ.
2. ಅನಾಹುತಗಳನ್ನು ಹೇಗೆ ನಿವಾರಿಸಬಹುದು, ಹೇಗೆ ಎದುರಿಸಬಹುದು ?
3. ಅನಾಹುತಗಳಿಗೆ ಸಂಬಂಧಿಸಿದ ಹಿರಿಯರ ಅನುಭವಗಳನ್ನು, ಅವುಗಳನ್ನು ಹೇಗೆ ಎದುರಿಸಿದ್ದಾರೆಂಬುದನ್ನು ತಿಳಿದು ಅವುಗಳ ಬಗ್ಗೆ ಬರೆಯಿರಿ.
4. ಪ್ರಜೆಗಳು ಅನಾಹುತಗಳನ್ನು ಎದುರಿಸಲು ತೆಗೆದುಕೊಳ್ಳಬೇಕಾದ ಮುಂಜಾಗ್ರತೆಗಳನ್ನು ಸೂಚಿಸಿರಿ.
5. ಬರಗಾಲದ ಪ್ರಭಾವಗಳನ್ನು ವಿವರಿಸಿರಿ.
6. ನೀರು ವ್ಯರ್ಥವಾಗುವ ಸಂದರ್ಭಗಳನ್ನು ಹೆಸರಿಸಿ ಅದರ ನಿವಾರಣೆ ಮಾರ್ಗಗಳನ್ನು ಸೂಚಿಸಿರಿ.
7. ಪ್ರಕೃತಿ ವಿಕೋಪಗಳಿಗೆ ಸಂಬಂಧಿಸಿದ ಚಿತ್ರಗಳಿಂದ ಆಲ್ಬಮ್ ತಯಾರು ಮಾಡಿರಿ.

SCERT TELANGANA

## ಪ್ರಪಂಚ ಆರೋಗ್ಯ ಸಂಸ್ಥೆ

### 14 ಮತ್ತು 15 ವರ್ಷ ವಯಸ್ಸಿನ ಬಾಲಕ/ಬಾಲಕಿಯ BMI ಚಾರ್ಟ್

| ವರ್ಷಗಳು | ತಿಂಗಳುಗಳು | ಪೋಷಕಾಂಶಗಳ ಕೊರತೆ (ಕಡಿಮೆ ತೂಕ) ಕೆಳಗೆಕೊಟ್ಟ ಸಂಖ್ಯೆಗಿಂತ ಕಡಿಮೆ | | ಸಾಧಾರಣ | | ಪೋಷಕಾಂಶಗಳ ಕೊರತೆ (ಅಧಿಕ ತೂಕ) ಕೆಳಗೆಕೊಟ್ಟ ಸಂಖ್ಯೆಗಿಂತ ಹೆಚ್ಚು | |
|---|---|---|---|---|---|---|---|
| | | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು |
| 14 | 0 | 15.4 | 15.5 | 15.4 - 27.3 | 15.5 - 25.9 | 27.3 | 25.9 |
| 14 | 1 | 15.5 | 15.5 | 15.5 - 27.4 | 15.5 - 26.0 | 27.4 | 26.0 |
| 14 | 2 | 15.5 | 15.6 | 15.5 - 27.5 | 15.6 - 26.1 | 27.5 | 26.1 |
| 14 | 3 | 15.6 | 15.6 | 15.6 - 27.6 | 15.6 - 26.2 | 27.6 | 26.2 |
| 14 | 4 | 15.6 | 15.7 | 15.6 - 27.7 | 15.7 - 26.3 | 26.3 | 26.3 |
| 14 | 5 | 15.6 | 15.7 | 15.6 - 27.7 | 15.7 - 26.4 | 27.7 | 26.4 |
| 14 | 6 | 15.7 | 15.7 | 15.7 - 27.8 | 15.7 - 26.5 | 27.8 | 26.5 |
| 14 | 7 | 15.7 | 15.8 | 15.7 - 27.9 | 15.8 - 26.5 | 27.9 | 26.5 |
| 14 | 8 | 15.7 | 15.8 | 15.7 - 28.0 | 15.8 - 26.6 | 28.0 | 26.6 |
| 14 | 9 | 15.8 | 15.9 | 15.8 - 28.0 | 15.9 - 26.7 | 28.0 | 26.7 |
| 14 | 10 | 15.8 | 15.9 | 15.8 - 28.1 | 15.9 - 26.8 | 28.1 | 26.8 |
| 14 | 11 | 15.8 | 16.0 | 15.8 - 28.2 | 16.0 - 26.9 | 28.2 | 26.9 |
| 15 | 0 | 15.9 | 16.0 | 15.9 - 28.2 | 16.0 - 27.0 | 28.2 | 27.0 |
| 15 | 1 | 15.9 | 16.1 | 15.9 - 28.3 | 16.1 - 27.1 | 28.3 | 27.1 |
| 15 | 2 | 15.9 | 16.1 | 15.9 - 28.4 | 16.1 - 27.1 | 28.4 | 27.1 |
| 15 | 3 | 16.0 | 16.1 | 16.0 - 28.4 | 16.1 - 27.2 | 28.4 | 27.2 |
| 15 | 4 | 16.0 | 16.2 | 16.0 - 28.5 | 16.2 - 27.3 | 28.5 | 27.3 |
| 15 | 5 | 16.0 | 16.2 | 16.0 - 28.6 | 16.2 - 27.4 | 28.5 | 27.4 |
| 15 | 6 | 16.0 | 16.3 | 16.0 - 28.6 | 16.3 - 27.4 | 28.6 | 27.4 |
| 15 | 7 | 16.1 | 16.3 | 16.1 - 28.7 | 16.3 - 27.5 | 28.6 | 27.5 |
| 15 | 8 | 16.1 | 16.3 | 16.1 - 28.7 | 16.3 - 27.6 | 28.7 | 27.6 |
| 15 | 9 | 16.1 | 16.4 | 16.1 - 28.7 | 16.4 - 27.7 | 28.7 | 27.7 |
| 15 | 10 | 16.1 | 16.4 | 16.1 - 28.8 | 16.4 - 27.7 | 28.8 | 27.7 |
| 15 | 11 | 16.2 | 16.5 | 16.2 - 28.8 | 16.5 - 27.8 | 28.8 | 27.8 |

SCERT TELANGANA

# ವಿದ್ಯಾ ಪ್ರಮಾಣಗಳು

ಪಾಠದಲ್ಲಿನ ಅಂಶಗಳು ವಿದ್ಯಾರ್ಥಿಗಳಿಗೆ ಅರ್ಥವಾಗಲು ಬೇಕಾಗುವ ಸಮಯವನ್ನು ನೀಡಬೇಕು.ಮಧ್ಯ ಮಧ್ಯದಲ್ಲಿ ಇರುವ ಪ್ರಶ್ನೆಗಳು ಇದಕ್ಕೆ ಉಪಯೋಗ ಪಡುತ್ತವೆ.ಇವು ಭಿನ್ನವಾದಪ್ರಶ್ನೆಗಳು :ದೃಷ್ಟಿಕೋನ, ಕಾರಣ –ಕಾರ್ಯ, ಸಮರ್ಥನೆ, ಮೇಥೋಪಟ/ಭಾವನೆಗಳ ಪಟ,ಪರಿಶೀಲನೆ,ವಿಶ್ಲೇಷಣೆ,ಆಲೋಚನೆ, ಊಹೆ, ಸಮತೋಲನೆ, ವ್ಯಾಖ್ಯಾನಿಸುವಂತವುಗಳಿಗೆ ಸಂಬಂಧಿಸಿದವು. ಮುಖ್ಯವಾದ ಭಾವನೆಗಳನ್ನು ಪ್ರತಿ ಅಧ್ಯಾಯದಲ್ಲಿ ಉದಾಹರಣೆಗಳೊಂದಿಗೆ ಮುಖ್ಯಪದಗಳನ್ನು ಸಹ ನೀಡಲಾಗಿ3ದೆ.

1) **ವಿಷಯಾವಗಾಹನೆ :** ವಿಚಾರಣೆ,ಚರ್ಚೆ,ಸಮಾಲೋಚನೆಗಳು,ಕೇಸ್ ಸ್ಟಡಿಗಳ ಮೂಲಕ ಉದಾಹರಣೆಗಳು, ವ್ಯಾಖ್ಯೆ,ಪರಿಶೀಲನೆಗಳ ಮೂಲಕ ಮೌಲಿಕ ಭಾವನೆಗಳನ್ನು ಪ್ರೋತ್ಸಾಹಿಸುವುದು.

2) **ಪಾಠ್ಯಾಂಶವನ್ನು ಓದಿ,ಅರ್ಥಮಾಡಿಕೊಂಡು ವ್ಯಾಖ್ಯಾನಿಸುವುದು :** ಆಗಾಗ ನೇರವಾಗಿ ಭಾವನೆಗಳನ್ನು ತಿಳಿಸದ ರೈತರು ,ಕಾರ್ಮಿಕರ ಕೇಸ್ ಸ್ಟಡಿಗಳು,ಕೆಲವು ಚಿತ್ರಗಳು ಇರುತ್ತವೆ.ಇವುಗಳನ್ನು ಅರ್ಥ ಮಾಡಿಕೊಳ್ಳಲು,ಚಿತ್ರಗಳನ್ನು ವ್ಯಾಖ್ಯಾನಿಸಲು ವಿದ್ಯಾರ್ಥಿಗಳಿಗೆ ಬೇಕಾಗುವ ಸಮಯವನ್ನು ನೀಡಬೇಕು.

3) **ಸಮಾಚಾರ ನೈಪುಣ್ಯಗಳು :** ಸಾಮಾಜಿಕ ಶಾಸ್ತ್ರಗಳ ವಿಧಾನಗಳೆಲ್ಲವನ್ನು ಕೇವಲ ಪಠ್ಯಪುಸ್ತಕಗಳು ಚರ್ಚಿಸಲಾರವು.ಉದಾಹರಣೆಗೆ ಪಟ್ಟಣ ಪ್ರಾಂತದಲ್ಲಿರುವ ಮಕ್ಕಳು ತಮ್ಮ ಆಯ್ಕೆಯಾದ ಪ್ರಜಾಪ್ರತಿನಿಧಿಗಳ ಕುರಿತು , ಹಳ್ಳಿ ಪ್ರಾಂತಗಳಲ್ಲಿರುವ ಮಕ್ಕಳು ,ತಮ್ಮ ಪ್ರಾಂತಗಳಲ್ಲಿನ ಕೆರೆ/ನೀರಾವರಿ ಸೌಕರ್ಯಗಳ ಕುರಿತು ಸಮಾಚಾರ ಶೇಖರಿಸಬಹುದು.ಈ ಸಮಾಚಾರ,ಪಠ್ಯಪುಸ್ತಕದಲ್ಲಿ ನೀಡಿದ್ದು ಒಂದೇ ಆಗದಿರಬಹುದು.ಇದನ್ನು ವಿವರಿಸಬೇಕಾಗಿರುತ್ತದೆ. ಯೋಜನಾ ಪದ್ದತಿಯ ಮೂಲಕ ವಿದ್ಯಾರ್ಥಿಗಳು ಶೇಖರಿಸಿದ ಸಮಾಚಾರವನ್ನು ಹೇಳುವುದು ಕೂಡ ಮುಖ್ಯವಾದ ಸಾಮರ್ಥ್ಯವಾಗಿರುತ್ತದೆ.ಉದಾಹರಣೆಗೆ ಕೆಳಗೆ ಸಂಬಂಧಿಸಿದ ಸಮಾಚಾರವನ್ನು ಶೇಖರಿಸಿದರೆ ಲಿಖಿತ ನಿವೇದಿಕೆಯೊಂದಿಗೆ ಚಿತ್ರ ಇಲ್ಲವೆ ಪಟವನ್ನು ಜೋಡಿಸಬಹುದು.ಶೇಖರಿಸಿದ ಸಮಾಚಾರವನ್ನು ಚಿತ್ರಗಳು,ಗೋಡೆ ಪತ್ರಿಕೆಗಳ ರೂಪದಲ್ಲಿ ಪ್ರದರ್ಶಿಸಬಹುದು.ಸಮಾಚಾರ ಶೇಖರಣೆ,ಕ್ರೂಢೀಕರಣೆ,ವಿಶ್ಲೇಷಣೆ ಗಳಂತಹುವುಗಳು ಸಹ ಸಮಾಚಾರ ನೈಪುಣ್ಯಗಳಾಗಿರುತ್ತವೆ.

4) **ಸಮಕಾಲೀನ(ಸಾಮಾಜಿಕ) ಅಂಶಗಳ ಮೇಲೆ ಪ್ರತಿಸ್ಪಂದನೆ :** ಪ್ರಶ್ನಿಸುವುದು ತಮ್ಮ ಜೀವನ ಪ್ರಮಾಣಗಳನ್ನು ವಿವಿಧ ಪ್ರಾಂತಗಳ,ವಿವಿಧ ಕಾಲದ ಜನರ ಜೀವನ ಪ್ರಮಾಣದೊಂದಿಗೆ ಹೋಲಿಸುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕು.ಈ ಹೋಲಿಕೆಗಳ ಸಂದರ್ಭದಲ್ಲಿ ಎದುರಾಗಬಹುದಾದ ಪ್ರಶ್ನೆಗಳಿಗೆ ಒಂದೇ ಸಮಾಧಾನ ಇಲ್ಲದಿರಬಹುದು.

5) **ಪಟ ನೈಪುಣ್ಯಗಳು :**ಈ ಪಠ್ಯ ಪುಸ್ತಕದಲ್ಲಿ ವಿವಿಧ ರೀತಿಯ ಪಟಗಳು,ಚಿತ್ರಗಳು ಇವೆ.ಪ್ರದೇಶಗಳಿಗೆ ಸಂಬಂಧಿಸಿದ ಪಟಗಳು,ನೈರೂಪ್ಯ ಚಿತ್ರಗಳು ಎಂದು ಅರ್ಥಮಾಡಿಕೊಂಡು ಅದಕ್ಕೆ ಸಂಬಂಧಿಸಿದ ನೈಪುಣ್ಯಗಳನ್ನು ಬೆಳೆಸಿಕೊಳ್ಳಬೇಕು.ಇದರಲ್ಲಿ ವಿವಿಧ ಹಂತಗಳು ಇವೆ.ಹಿಂದಿನ ತರಗತಿಯಲ್ಲಿ ಎತ್ತರ ,ದೂರಗಳನ್ನು ಪಟದಲ್ಲಿ ಹೇಗೆ ತೋರಿಸಬೇಕೆಂದು ತಿಳಿದುಕೊಂಡಿದ್ದೇವೆ.ಸಮತಲ ಎತ್ತರದ ಬಗ್ಗೆ ಈ ತರಗತಿಯಲ್ಲಿ ತಿಳಿದುಕೊಳ್ಳುತ್ತೇವೆ. ಪಠ್ಯ ಪುಸ್ತಕದಲ್ಲಿ ವಿವಿಧ ಚಿತ್ರಗಳು,ಫೋಟೋಗಳು,ಗೋಡೆ ಪತ್ರಿಕೆಗಳು ಇವೆ.ಇವು ಕೇವಲ ಸೌಂದರ್ಯಕ್ಕಾಗಿ ತಯಾರಿಸಿದವಲ್ಲ,ಪಾಠಕ್ಕೆ ಸಂಬಂಧಿಸಿದವು.ಚಿತ್ರಗಳಿಗೆ ಸಂಬಂಧಿಸಿಯೂ ಸಹ ಕೆಲವು ಚಟುವಟಿಕೆಗಳು ಇವೆ.

6) **ಪ್ರಶಂಸೆ/ಅಭಿನಂದನೆ – ಸೂಕ್ಷ್ಮತೆ :** ಬಾಷೆ,ಸಂಸ್ಕೃತಿ,ಕುಲ,ಮತ,ಸ್ತ್ರೀ,ಪುರುಷರ ವಿಷಯಗಳಲ್ಲಿ ನಮ್ಮ ದೇಶದಲ್ಲಿ ಎಷ್ಟೋ ವೈವಿಧ್ಯತೆ ಇದೆ. ಸಮಾಜಶಾಸ್ತ್ರ ಈವೈವಿಧ್ಯತೆಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತದೆ.ಈವುಗಳ ಬಗ್ಗೆ ಸೂಕ್ಷ್ಮತೆ ಪ್ರದರ್ಶಿಸುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತದೆ.

SCERT TELANGANA




SCERT TELANGANA

World Outline Map




SCERT TELANGANA

## Telangana Political Map




SCERT TELANGANA

## India Political Map




SCERT TELANGANA

## ಭಾರತದೇಶದಲ್ಲಿ ಯ್ಯುರೋಪಿಯನ್ನರ ಪ್ರಸ್ಥಾನ - ಕಾಲಕ್ರಮಣಿಕೆ

| | |
|---|---|
| 1500 - 1700 | ಭಾರತದಲ್ಲಿ ಯ್ಯುರೋಪಿಯನ್ನರು ವ್ಯಾಪಾರ ವಸಾಹತುಗಳನ್ನು ಸ್ಥಾಪಿಸಿಕೊಂಡರು. 1510 ರಲ್ಲಿ ಪಣಜಿಯಲ್ಲಿ ಪೋರ್ಚುಗೀಸರು ವಸಾಹತು ಏರ್ಪಡಿಸಿಕೊಂಡರು. 1605ರಲ್ಲಿ ಮಚಲಿ ಮಟ್ಟಣದಲ್ಲಿ (ಅಂದಿನ ಮಸುಲಿ ಪಟ್ಟಣ) ಡಚ್ಚರು ಸ್ಥಾವರವನ್ನು ರಚಿಸಿದರು. 1639ರಲ್ಲಿ ಮದ್ರಾಸಿನಲ್ಲಿ 1661ರಲ್ಲಿ ಬಾಂಬೇಯಲ್ಲಿ, 1690ರಲ್ಲಿಕಲಕತ್ತೆಯಲ್ಲಿ ಬ್ರಿಟಿಷರು ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿದರು. 1673ರಲ್ಲಿಫ್ರೆಂಚರು ತಮ್ಮ ಕೇಂದ್ರವನ್ನು ಪಾಂಡಿಚೇರಿಯಲ್ಲಿ ಸ್ಥಾಪಿಸಿದರು. |
| 1757 | ಪ್ಲಾಸಿಯುದ್ಧದಲ್ಲಿ ಬ್ರಿಟಿಷರ ಸಂಪೂರ್ಣ ವಿಜಯ. ಬೆಂಗಾಲ್‌ನಲ್ಲಿ ಬ್ರಿಟಿಷರ ಆಡಳಿತದ ಆರಂಭ. |
| 1773 | ಈಸ್ಟ ಇಂಡಿಯಾ ಕಂಪೆನಿಯಿಂದ ಕಲಕತ್ತೆಯಲ್ಲಿ ಉಚ್ಚನ್ಯಾಯಾಲಯ ಸ್ಥಾಪನೆ. |
| 1803 | ಕಲಕತ್ತಾ ನಗರಾಭಿವೃದ್ಧಿಗಳ ಲಾರ್ಡ್‌ವೆಲ್ಲೆಸ್ಲಿಯಿಂದ ಕಾರ್ಯಾಚರಣೆ ಯೋಜನೆ. |
| 1818 | ಬ್ರಿಟಿಷರಿಂದ ದಕ್ಕನ್ ಪ್ರಾಂತ ವಶ. ಹೊಸ ಸಂಸ್ಥಾನಗಳ ರಾಜಧಾನಿಯಾಗಿ ಬಾಂಬೆ. |
| 1853 | ಬಾಂಬೆಯಿಂದ ಠಾನೆ ವರೆಗೆ ರೈಲು ಮಾರ್ಗ ನಿರ್ಮಾಣ. |
| 1857 | ಬಾಂಬೆಯಲ್ಲಿ ಪ್ರಥಮ ನೂಲುಮಿಲ್ಲು ಸ್ಥಾಪನೆ. |
| 1857 | ಬಾಂಬೆ, ಮದ್ರಾಸು, ಕಲಕತ್ತಾಗಳಲ್ಲಿ ವಿಶ್ವವಿದ್ಯಾಲಯಗಳ ಸ್ಥಾಪನೆ. |
| 1870 | ರ ದಶಕ ಪುರಸಭೆಗಳಲ್ಲಿ ಚುನಾಯಿತ ಸದಸ್ಯರ ಪ್ರವೇಶ ಆರಂಭ. |
| 1881 | ಮದ್ರಾಸಿನ ನೌಕಾಶ್ರಯ (ಬಂದರು) ನಿರ್ಮಾಣ ಸಂಪೂರ್ಣ. |
| 1896 | ಬಾಂಬೆಯಲ್ಲಿನ ವಾಟ್ಸನ್ ಹೋಟೆಲಿನಲ್ಲಿ ಪ್ರಪ್ರಥಮ ಚಲನಚಿತ್ರ ಪ್ರದರ್ಶನ. |
| 1896 | ಪ್ರಮುಖ ನಗರಗಳಿಗೆ ಪ್ಲೇಗು ಮಹಮ್ಮಾರಿ ಹರಡುವಿಕೆ. |
| 1911 | ಕಲಕತ್ತಾದಿಂದ ರಾಜಧಾನಿಯನ್ನು ದಿಲ್ಲಿಗೆ ವರ್ಗಾಯಿಸಲಾಯಿತು. |

## ರಾಷ್ಟ್ರೀಯ ಚಳುವಳಿ - ಕಾಲಕ್ರಮಣಿಕೆ

| | |
|---|---|
| 1915 | ಮಹಾತ್ಮಾ ಗಾಂಧೀಜಿಯವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬಂದರು. |
| 1917 | ಚಂಪಾರಣ್ಯ ಚಳುವಳಿ |
| 1918 | ಖೇದ (ಗುಜರಾತಿನಲ್ಲಿ)ದಲ್ಲಿ ರೈತರ ಚಳುವಳಿ ಮತ್ತು ಅಹ್ಮದಾಬಾದಿನಲ್ಲಿ ಕಾರ್ಮಿಕರ ಚಳುವಳಿ |
| 1919 | ರೌಲೆಟ್ ಕಾಯ್ದೆಗೆ ಪ್ರತಿಯಾಗಿ ಸತ್ಯಾಗ್ರಹ (ಮಾರ್ಚ್ - ಎಪ್ರಿಲ್) |
| 1919 | ಜಲಿಯನ್ ವಾಲಾಬಾಗ್ ದುರಂತ (ಎಪ್ರಿಲ್) |
| 1921 | ಅಸಹಕಾರ ಚಳುವಳಿಮತ್ತು ಖಿಲಾಫತ್ ಚಳುವಳಿಗಳು. |
| 1928 | ಬರ್ದೋಲಿಯಲ್ಲಿ ರೈತರ ಚಳುವಳಿ. |
| 1929 | ಲಾಹೋರ್ ಕಾಂಗ್ರೆಸ್ (ಡಿಸೆಂಬರ್)ಸಭೆಯಲ್ಲಿ ಸಂಪೂರ್ಣ ಸ್ವಾತಂತ್ರನೆಯೇ ಪ್ರಥಮ ಗುರಿ ನಿರ್ಣಯ. |
| 1930 | ದಂಡಿ ಸತ್ಯಾಗ್ರಹ (ಮಾರ್ಚ್ - ಎಪ್ರಿಲ್) |
| 1931 | ಗಾಂಧಿ-ಇರ್ವಿನ್ ಒಪ್ಪಂದ (ಮಾರ್ಚ್), ಎರಡನೇ ದುಂಡು ಮೇಜಿನ ಸಮ್ಮೇಳನ (ಡಿಸೆಂಬರ್) |
| 1935 | ಭಾರತ ಸರಕಾರದ ಕಾಯ್ದೆ ಭಾರತದ ಪ್ರಾತಿನಿಧಿಕ ಸರ್ಕಾರದ ರಚನೆಯ ಭರವಸೆ |
| 1939 | ಕಾಂಗ್ರೆಸ್ ಸಚಿವರ ರಾಜಿನಾಮೆ. |
| 1942 | ಕ್ವಿಟ್ ಇಂಡಿಯಾ (ಭಾರತ ಬಿಟ್ಟು ತೊಲಗಿ) ಚಳುವಳಿ ಆರಂಭ. |
| 1946 | ಮತೀಯ ಹಿಂಸೆಯನ್ನು ನಿವಾರಿಸಲು ಮಹಾತ್ಮಾ ಗಾಂಧೀಜಿಯಿಂದ ನೋಖಲಿ ಮತ್ತು ಇತರ ಘರ್ಷಣೆಗಳು ನಡೆದ ಪ್ರದೇಶಗಳ ಸಂದರ್ಶನ. |
| 14-15 | ಪಾಕಿಸ್ಥಾನ ಏರ್ಪಾಟು, ಭಾರತಕ್ಕೆ ಸ್ವಾತಂತ್ರ್ಯ, ಮತಸಹಿಂಷ್ಣುತೆಯ ಪುನರುದ್ಧರಣೆಗೆ |
| 1947 | ಪೂರ್ವ ಬಂಗಾಳದಲ್ಲಿನ ನೌಖಲಿಗೆ ಗಾಂಧೀಜಿ ಪ್ರಯಾಣ. |

SCERT TELANGANA

## ಭಾರತ ಸಂವಿಧಾನ ಕರಡು ಸಮಿತಿ ಸದಸ್ಯರು

29 ಆಗಷ್ಟ 1947 ರಂದು ಭಾರತ ಸಂವಿಧಾನ ರಚನಾ ಕರಡು ಸಮಿತಿಯನ್ನು ಏರ್ಪಾಟು ಮಾಡಲಾಯಿತು. ಈ ಸಮಿತಿಯಲ್ಲಿ ಅಧ್ಯಕ್ಷರು ಸೇರಿ 6 ಜನ ಸದಸ್ಯರಿದ್ದರು. ಜೊತೆಗೆ ಒಬ್ಬ ಸಲಹಾದಾರನನ್ನು ನೇಮಿಸಿದರು.

**ಕರಡು ಸಮಿತಿಯ ಸದಸ್ಯರು :-**

**ಡಾ|| ಬಿ.ಆರ್.ಅಂಬೇಡ್ಕರ್ –** ಅಧ್ಯಕ್ಷರು

**ಕೆ.ಎಂ.ಮುನ್ಷಿ –** (ಮಾಜಿ ಗೃಹ ಶಾಖೆ ಸಚಿವರು ಬಾಂಬೆ)

**ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ –** (ಮಾಜಿ ಅಡ್ವಕೇಟ್ ಜನರಲ್, ಮದ್ರಾಸ್ ರಾಜ್ಯ)

**ಎನ್.ಗೋಪಾಲ ಕೃಷ್ಣ ಅಯ್ಯಂಗಾರ್ –** (ಜಮ್ಮು ಮತ್ತು ಕಾಶ್ಮೀರ್ ಮಾಜಿ ಪ್ರಧಾನಮಂತ್ರಿ, ನೆಹ್ರೂ ಮಂತ್ರಿಮಂಡಲ ಸದಸ್ಯರು)

**ಬಿ.ಎಲ್.ಮಿಟ್ಟರ್ –** (ಭಾರತ ದೇಶ ಮಾಜಿ ಅಡ್ವಕೇಟ್ ಜನರಲ್)

**ಮೊಹ್ಮಮದ್ ಸಾದುಲ್ಲಾ –** (ಅಸ್ಸಾಂ ಮಾಜಿ ಮುಖ್ಯಮಂತ್ರಿ, ಮುಸ್ಲಿಂ ಲೀಗ್ ಸದಸ್ಯರು)

**ಡಿ.ಪಿ.ಖೈತಾನ್ –** (ನ್ಯಾಯವಾದಿ)

ಸಂವಿಧಾನ ಸಲಹಾದಾರರಾಗಿ ಶ್ರೀ ಬೆನಗಲ್ ನರಸಿಂಗರಾವ್ ನಿಯಮಿತರಾದರು. ನಂತರ 1950 ರಲ್ಲಿ ಇವರು ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ಭಾರತದಿಂದ ಪ್ರಥಮ ನ್ಯಾಯಮೂರ್ತಿಯಾಗಿ ನಿಯಮಿಸಲ್ಪಟ್ಟರು.

ಸಮಿತಿಯ ಇತರ ಸದಸ್ಯರು : – ಬಿ.ಎಲ್.ಮಿಟ್ಟಲ್ ರಾಜಿನಾಮೆಯ ನಂತರ ಅವರ ಸ್ಥಾನದಲ್ಲಿ ಮಾಧವರಾವು (ವಡೋದರಾ ಮಹಾರಾಜರ ಸಲಹಾದಾರ) ನಿಯಮಿತರಾದರು. ಡಿ.ಸಿ. ಖೈತಾನ್ ದಿವಂಗತರಾದ ಕಾರಣದಿಂದ ಅವರ ಸ್ಥಾನದಲ್ಲಿ ಟಿ.ಟಿ.ಕೃಷ್ಣಮಾಚಾರಿ ನಿಯಮಿತರಾದರು.

## ಸಾಮಾಜಿಕ – ಧಾರ್ಮಿಕ ಸುಧಾರಣಾ ಚಳುವಳಿಗಳು

| ಕ್ರ. ಸಂ. | ಸಂಸ್ಥೆ | ಸ್ಥಾಪಕರು | ಸ್ಥಾಪಿಸಿದ ವರ್ಷ | ಉದ್ದೇಶಗಳು |
|---|---|---|---|---|
| 1<br>2 | ಬ್ರಹ್ಮಸಮಾಜ<br>ಪ್ರಾರ್ಥನಾ ಸಮಾಜ | ಡಾ||ರಾಜಾರಾಮಂ ಮೋಹನರಾಯ<br>ಡಾ|| ಆತ್ಮಾರಾಂ ಪಾಂಡುರಂಗ | 1815<br>1867 | ಹಿಂದೂ ಧರ್ಮದಲ್ಲಿಯ ದುರಾಚಾರಗಳನ್ನು ದೂರ ಮಾಡಿ ಧರ್ಮವನ್ನು ಪರಿಶುದ್ಧಗೊಳಿಸುವುದು ಸಾಮಾಜಿಕ ಆರ್ಥಿಕ ಸುಧಾರಣೆಗಳನ್ನು ಕೈಗೊಂಡು ಕುಲಾಂತರ, ವಿಧವಾ ವಿವಾಹಗಳನ್ನು ಮಾಡಿಸುವುದು, ಮಹಿಳಾ ಶಿಕ್ಷಣ ಪಾಶ್ಚತ್ಯ ಶಿಕ್ಷಣವನ್ನು ಪ್ರೋತ್ಸಾಹಿಸುವುದು. |
| 3 | ಸತ್ಯಶೋಧಕ ಸಮಾಜ | ಜ್ಯೋತಿಬಾ ಫೂಲೆ | 1873 | ನಿಮ್ನವರ್ಗದವರನ್ನು ಉನ್ನತ ಸ್ಥಿತಿಯಲ್ಲಿ ತೆಗೆದುಕೊಂಡು ಬರುವುದು ಮೂಢನಂಬಿಕೆಗಳನ್ನು ವಿರೋಧಿಸುವುದು. |
| 4 | ಮೊಹ್ಮದೀಯನ್ | ನವಾಬ್ ಅಬ್ದುಲ್ ಲತೀಫ್ ಲಿಟರಸಿಸೊಸೈಟಿ | 1863 | ಮುಸ್ಲಿಂರಲ್ಲಿ ವಿದ್ಯಾವ್ಯಾಪ್ತಿಗೆ ಪ್ರಯತ್ನಿಸುವುದು. |
| 5 | ಆರ್ಯ ಸಮಾಜ | ಸ್ವಾಮಿ ದಯಾನಂದ ಸರಸ್ವತಿ | 1875 | ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣೆಗಳು ವೇದವಾಙ್ಮಯತೆಯನ್ನು ಪ್ರಚಾರ ಮಾಡುವುದು. |
| 6 | ದಿವ್ಯಜ್ಞಾನ ಸಮಾಜ | ಮೇಡಮ್ ಬ್ಲಾವಟ್‌ಸ್ಕಿ ಹೆನ್ರಿ ಆಲ್ಕಾಟ್ | 1882 | ವೇದಾಧ್ಯಯನವನ್ನು ಪುನರುದ್ಧರಿಸುವುದು. |
| 7 | ರಾಮಕೃಷ್ಣ ಮಿಷನ್ | ಸ್ವಾಮಿ ವಿವೇಕಾನಂದ | 1887 | ರಾಮಕೃಷ್ಣಪರಮಹಂಸರ ಬೋಧನೆಗಳನ್ನು ಪ್ರಚಾರ ಮಾಡುವುದು ಮತ್ತು ಸಾಮಾಜಿಕ ಸೇವೆಯಲ್ಲಿ ಭಾಗಿಯಾಗುವುದು. |
| 8 | ಹರಿಜನ್ ಸೇವಕ ಸಂಘ | ಮಹಾತ್ಮಾ ಗಾಂಧಿ | 1932 | ಹಿಂದುಳಿದ ವರ್ಗಗಳನ್ನು ಉನ್ನತ ಸ್ಥಿತಿಗೆ ತರುವುದು ಅವರಿಗೆ ಶಿಕ್ಷಣ ಅವಕಾಶಗಳನ್ನು ಒದಗಿಸುವುದು. |

SCERT TELANGANA

## ತೆಲಂಗಾಣ ರಾಜ್ಯದ ಪ್ರೇಕ್ಷಣೀಯ ಸ್ಥಳಗಳು.

| ಜಿಲ್ಲೆ | ಪ್ರೇಕ್ಷಣೀಯ ಸ್ಥಳಗಳು |
|---|---|
| ಜಯಶಂಕರ್ ಜಿಲ್ಲೆ | ಅಧಿಕ ಅರಣ್ಯಗಳ ವಿಸ್ತೀರ್ಣ, ಅತಿ ದೊಡ್ಡ ಗಿರಿಜನರ ಜಾತ್ರೆ ಸಮ್ಮಕ್ಕ ಸಾರಕ್ಕ, ತಾಲಂಪೇಟೆ ರಾಮನ್ನ, ಕಾಳೇಶ್ವರ ಮುಕ್ತೇಶ್ವರ ಸ್ವಾಮಿ, ಗಣಪುರದ ಕೋಟೆಗೂಡುಗಳು, ಪಾಂಡವರ ಗುಡ್ಡ, ಲಕ್ನವರ ಜಲಾಶಯ, ಕೋಟಂಟ ನರಸಿಂಹ ಸ್ವಾಮಿ ದೇವಾಲಯ, ಏಟೂರುನಾಗಾರಂ ಅತಿ ದೊಡ್ಡ ITDA |
| ಜನಗಾಂ | ಜೈನರ ಪ್ರಭಾವ ಹೊಂದಿದ-ಜನಗಾಂ, ಪಾಲಕುರ್ತಿ ಸೋಮೇಶ್ವರ ಲಕ್ಷ್ಮಿನರಸಿಂಹಸ್ವಾಮಿ, ಜೀಡಿ ಕಲ್ ವೀರಾಚಲ ಶ್ರೀ ಸೀತಾರಾಮಚಂದ್ರಸ್ವಾಮಿ ದೇವಸ್ಥಾನ, ಪೆಂಬರ್ತಿ ಹಸ್ತಕಲೆಗಳು, ಮಹಾ ಕವಿ ಬಮ್ಮೆರಪೋತನ ಜನ್ಮಸ್ಥಳ ಬಮ್ಮೆರ. |
| ವರಂಗಲ್ (ಪಟ್ಟಣ) | ಮಾಮೂನೂರು ವಿಮಾನ ನಿಲ್ದಾಣ, NIT ತಾಂತ್ರಿಕ ವಿದ್ಯಾಲಯ, ಭದ್ರಕಾಳಿ ದೇವಾಲಯ ಸಾವಿರಸ್ತಂಭಗಳ ಗುಡಿ, ವರಂಗಲ್ಲಿನ ಮಣ್ಣಿನ ಕೋಟೆ, ಕಲ್ಲಿನ ಕೋಟೆ, ಕುಶ್‌ಮಹಲ್, ಕಾಳೋಜಿ ಆರೋಗ್ಯ ವಿಶ್ವವಿದ್ಯಾಲಯ, ಕಾಜಿಪೇಟೆ ಜಂಕ್ಷನ್ |
| ವರಂಗಲ್ (ಗ್ರಾಮೀಣ) | ಪಾಕಾಲಸರೋವರ, ಪಾಕಾಲಗುಂಡ ಶಿವಾಲಯ, ಅಯಿನವೋಲು ದೇವಸ್ಥಾನ, ಭೀಮದ ಪಾದ ಜಲಪಾತ, ಕೂಮ್ಮಾಲ ಜಾತ್ರೆ, ಗಂಗದೇವಿ ಪಲ್ಲ ಗ್ರಾಂ ಪಂಚಾಯತಿ. |
| ಮಹಬೂಬನಗರ್ | ಕುರಿವಿ ಶ್ರೀ ವೀರಭದ್ರಸ್ವಾಮಿ ದೇವಸ್ಥಾನ, ಅನಂತಾರದಲ್ಲಿನ ಶ್ರೀ ವೆಂಕಟೇಶ್ವರ ಸ್ವಾಮಿ, ಡೋರ್ನ ಕಲ್ಲಿನ ಚರ್ಚ, ಗೂಡೂರಿನ ಭೀಮನ ಪಾದ, ನರಸಿಂಹುಲು ಪೇಟೆಯ ಶ್ರೀ ವೆಂಕಟೇಶ್ವರ ಸ್ವಾಮಿ |
| ಆದಿಲಾಬಾದ್ | ಗಾಯತ್ರಿ ಕನಕಾಯಿ ಜಲಪಾತ, ಪೋಚ್ಚರ ಜಲಪಾತ, ಸಾತ್ನಾಲ ಪ್ರಾಜೆಕ್ಟ್, ಮತ್ತ ಡಿ ಪ್ರಾಜೆಕ್ಟ |
| ನಿರ್ಮಲ್ | ಬಾಸರ ಜ್ಞಾನ ಸರಸ್ವತಿ ದೇವಾಲಯ, ಪಾಪೇಶ್ವರ ಆಲಯ, ಅಡೆಲ್ಲಿ ಮಹಾ ಪೋಚಮ್ಮ ದೇವಾ ಸ್ಥಾನ, ಸ್ವರ್ಣ, ಗಡ್ಡೆನ ಕಾಲುವೆ , ಕಡೆಂ ಜಲಾಶಯ, ಸದರ್ಮಾಟ್ ಬ್ಯಾರೇಜ |
| ಮಂಚಿರ್‍ಯಾಲ | ಸಿಂಗರೇಣಿ ಗಣಿಗಳು, ಗಾಂಧಾರಿ ಬಿಲ, ಗಾಂಧಾರಿವನ, ಜೈಪೂರ್ ಮಂಡಲದ ಮಕರ ಅಭಯಾರಣ್ಯ, ಕೋಟಪಲ್ಲಿ ಮಂಡಲದ ಕೃಷ್ಣ ಜಿಂಕೆಗಳ ಅಭಯಾರಣ್ಯ, ಜನ್ನಾರದಲ್ಲಿನ ಹುಲಿಗಳ ಅಭಯಾರಣ್ಯ, ಜೈಪೂರ್ ಮಂಡಲದ ವಿದ್ಯುತ್ ಘಟಕ |
| ಕೊಮರಂಭೀಮ ಜಿಲ್ಲೆ | ಜೋಡೇ ಘಾಟ್, ಸಪ್ತ ಗುಂಡಾಲ ಜಲಪಾತ, ಸಮುತುಲ ಗುಂಡ ಜಲಪಾತ, ಶಂಕರ್‌ಲೊದ್ದಿ, ಅರ್ಜುನ ಲೊದ್ದಿ ಗುಹೆಗಳು, ವಾಂಕಿಡಿ ಶಿವಾಲಯ |
| ನಲ್ಗೊಂಡ | ನಾಗಾರ್ಜುನ ಸಾಗರ, ಮೂಸಿ ಪ್ರಾಜೆಕ್ಟ್, ಚಂದಂಪೇಟೆ ಗುಹೆಗಳು, ದೇವರಕೊಂಡ ಕೋಟೆ, ಏಲೇಶ್ವರ ಮಲ್ಲನ್ನಸ್ವಾಮಿ ದೇವಸ್ಥಾನ |
| ಸೂರ್ಯಪೇಟೆ | ಪಿಲ್ಲಲಮರ್ರಿಯಲ್ಲಿನ ಸಾವಿರ ವರ್ಷದ ಚೆನ್ನಕೇಶವ ದೇವಸ್ಥಾನ |

SCERT TELANGANA

| ತೆಲಂಗಾಣ ರಾಜ್ಯದ ಪ್ರೇಕ್ಷಣೀಯ ಸ್ಥಳಗಳು. | |
|---|---|
| **ಜಿಲ್ಲೆ** | **ಪ್ರೇಕ್ಷಣೀಯ ಸ್ಥಳಗಳು** |
| ಯಾದಾದ್ರಿ | ಯಾದಾದ್ರಿ ಲಕ್ಷ್ಮೀನರಸಿಂಹಸ್ವಾಮಿ, ಕೊಲನು ಪಾಕ ಜೈನ ದೇವಾಲಯ ಭುವನಗಿರಿಯ ಏಕಶಿಲಾ ಕೋಟೆ |
| ಹೈದರಾಬಾದ್ | ಗೋಲ್ಕೊಂಡ ಕೋಟೆ, ಚಾರ್ಮಿನಾರ್, ಹುಸೇನ್ ಸಾಗರ್, ಬಿರ್ಲಾಮಂದಿರ, ಬಿರ್ಲಾಸೈನ್ಸ್ ಮ್ಯೂಜಿಯಂ, ಬಿರ್ಲಾ ಪ್ಲಾನಿಟೋರಿಯಂ, ಪಬ್ಲಿಕ್ ಗಾರ್ಡನ್ಸ್, ವಿಧಾನಸೌಧ, ಹೈಟೆಕ್‌ಸಿಟಿ, ಶಿಲ್ಪಾರಾಮ, ಓಷಿಯನ್ ಪಾರ್ಕ್, ನೆಹರೂ ಪ್ರಾಣಿಸಂಗ್ರಹಾಲಯ, ಕುತುಬ್‌ಷಾಹಿ ಟೂಂಬ್ಸ್, ಇಂದಿರಾಪಾರ್ಕ್, ಎನ್.ಟಿ.ಆರ್. ಗಾರ್ಡೆನ್ಸ್, ಲುಂಬಿನಿ ಪಾರ್ಕ್, ರವೀಂದ್ರ ಭಾರತಿ, ಸಾಲಾರ್ ಜಂಗ್ ಮ್ಯೂಜಿಯಂ. |
| ಜೋಗುಳಾಂಬ ಗದ್ವಾಲ | 5ನೇ ಶಕ್ತಿಪೀಠ ಜೋಗುಳಾಂಬ ದೇವಸ್ಥಾನ, ಗದ್ವಾಲ ಸಂಸ್ಥಾನ, ಬೀಚುಪಲ್ಲಿ ಆಂಜನೇಯ ದೇವಸ್ಥಾನ, ನೆಟ್ಟೆಂಪಾಡು, ಜೂರಾಲ ಪ್ರಜೆಕ್ಟ್ |
| ನಾಗರ್ ಕರ್ನೂಲ್ | ನಾಗಾರ್ಜುನ ಸಾಗರ್ ಹುಲಿಗಳ ಅಭಯಾರಣ್ಯ, ಕಲ್ವಕುರ್ತಿ ಏತ ನೀರಾವರಿ ಯೋಜನೆ, ಶ್ರೀಶೈಲ ಎಡದಂಡೆ ಕಾಲುವೆಯ ಸೂರಂಗ, ನಲ್ಲಮಲ್ಲ ಅಭಯಾರಣ್ಯ, ಉಮಾಮಹೇಶ್ವರ ದೇವಸ್ಥಾನ, ವಟ್ಟೆಂ ವೆಂಕಟೇಶ್ವರ ದೇವಸ್ಥಾನ, ಸೋಮೇಶ್ವರದಲ್ಲಿನ ಸೋಮೇಶ್ವರಾಲಯ, ಮಲ್ಲೆಲ ತಾರ್ಥ ಜಲಪಾತ. |
| ಕಾಮಾರೆಡ್ಡಿ | ಬಿಕ್ಕನೂರು ಸಿದ್ಧ ರಾಮೇಶ್ವರ ದೇವಸ್ಥಾನ, ಕಾಳಭೈರವ ಸ್ವಾಮಿ, ಲಕ್ಷ್ಮೀನರಸಿಂಹಸ್ವಾಮಿ, ಬುಗ್ಗ ರಾಮೇಶ್ವರಾಲಯ, ಬಸವೇಶ್ವರ ದೇವಸ್ಥಾನ, ನಿಜಾಂ ಸಾಗರ್, ಪೋಚಾರಂ ಮತ್ತು ಕೌಲಾಸ ನಾಲಾ ಪ್ರಾಜೆಕ್ಟ್, ದೋಮಕೊಂಡ ಸಂಸ್ಥಾನ, ಪೋಚಾರಂ ಅಭಯಾರಣ್ಯ, ಗಾಯತ್ರಿ, ಮಾಗಿ ಸಕ್ಕರೆ ಕಾರ್ಖಾನೆ. |
| ವನಪರ್ತಿ | ಶ್ರೀರಂಗಾಪೂರ್ ರಂಗನಾಥಸ್ವಾಮಿ ದೇವಸ್ಥಾನ, ರಾಮನ್‌ಪಾಡು ಬ್ಯಾಲೆನ್ಸಿಂಗ್ ರಿಜರ್ವಾಯರ್, ವನಪರ್ತಿ ಸಂಸ್ಥಾನ. |
| ಮಹಾಬೂಬ್‌ನಗರ್ | ಪಿಲ್ಲಲಮರ್ರಿ, ಮನ್ಯಂಕೊಂಡ ಶ್ರೀವೆಂಕಟೇಶ್ವರ ದೇವಸ್ಥಾನ, ಮುಡುಮಾಲ್‌ನ ನಿಲುವುಗಲ್ಲುಗಳು, ಕೃಷ್ಣ-ಭೀಮಾ ಸಂಗಮ |
| ನಿಜಾಮಾಬಾದ್ | ಶ್ರೀರಾಂಸಾಗರ್ ಪ್ರಜೆಕ್ಟ್, ಬೋಧನ್ ಸಕ್ಕರೆ ಕಾರ್ಖಾನೆ, ರುದ್ರೂರು ವ್ಯವಸಾಯ ಸಂಶೋಧನಾ ಕೇಂದ್ರ, ಬಡಾ ಪಹಡ್ ದರ್ಗಾ, ಖಿಲ್ಲಾ ಜೈಲು, ಸಿರ್ನಾಪಲ್ಲಿಗಡಿ, ಸಾರಂಗಾಪೂರ್ ಹನುಮಾನ್ ದೇವಾಲಯ, ಡಿಚ್‌ಪಲ್ಲಿ ಖಿಲ್ಲಾ ದೇವಸ್ಥಾನ, ದೇವಲ್ ಮಸೀದೆ, ಕಂದಕುರ್ತಿ ತ್ರಿವೇಣಿಸಂಗಮ, ರಾಮಡುಗು ಜಲಾಶಯ, ಗುತ್ತ ಏತ ನೀರಾವರಿ ಯೋಜನೆ ಅಲೀ ಸಾಗರ್, ಅಶೋಕ್ ಸಾಗರ್, ಜಾನಕಂ ಪೇಟೆ, ಅಷ್ಟಮುಖಿ ಕೋನೇರು, ಭಿಮನ ಬೆಟ್ಟಗಳು. |
| ಖಮ್ಮಂ | ಸ್ತಂಬಾದ್ರಿ ಲಕ್ಷ್ಮೀನರಸಿಂಹಸ್ವಾಮಿ, ನೇಲಕೊಂಡಪಲ್ಲಿ ಬೌದ್ಧಸ್ತೂಪ, ಸತ್ತುಪಲ್ಲಿ ಕಲ್ಲಿದ್ದಲಿನ ಗಣಿ, ಭಕ್ತ ರಾಮದಾಸನ ಆಶ್ರಮ, ಖಮ್ಮಂ ಕೋಟೆ |

SCERT TELANGANA

| ತೆಲಂಗಾಣ ರಾಜ್ಯದಲ್ಲಿಯ ಪ್ರೇಕ್ಷಣೀಯ ಸ್ಥಳಗಳು. | |
|---|---|
| **ಜಿಲ್ಲೆ** | **ಪ್ರೇಕ್ಷಣೀಯ ಸ್ಥಳಗಳು** |
| ಮೆದಕ್ | ಏಡುಪಾಯಲ ವನದುರ್ಗ ಜಾತ್ರೆ, ಮೆದಕ್ ಚರ್ಚ, ಮೆದಕ್ ಕೋಟೆ, ಕೊಲ್ಚಾರ್ರದ ಜೈನ ದೇವಾಲಯ, ನರಸಾಪೂರ್ ಅರಣ್ಯಗಳು, ಪೋಚಾರಂ ಅಭಯಾರಣ್ಯ. |
| ರಂಗಾರೆಡ್ಡಿ | ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ, ಚಿಲ್ಕೂರು ಬಾಲಾಜಿ ದೇವಸ್ಥಾನ, ನರ್ಕುಡಾದ ಅಮ್ಮಪಲ್ಲಿ, ಹಿಮಾಯತ್ ಸಾಗರ್, ಉಸ್ಮಾನ್ ಸಾಗರ್ (ಗಂಡೆಪೇಟ್), ಎನ್.ಆರ್.ಎಸ್.ಸಿ. ಷಾದ್ ನಗರ್, ಸ್ವಯಂಭೂ ರಾಮಲಿಂಗೇಶ್ವರ ದೇವಸ್ಥಾನ. |
| ಸಿದ್ಧಿಪೇಟೆ | ಕೊಮರವೆಲ್ಲಿ ಮಲ್ಲನ್ನ, ವರ್ಗಲ್ ಸರಸ್ವತಿ ಕ್ಷೇತ್ರ, ನಾಚಾರದ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ, ಜಗದೇವ್‌ಪೂರ್ ವರದರಾಜು ಸ್ವಾಮಿ, ಕೊಂಡ ಪೋಚಮ್ಮ ಪಾಂಡುರಂಗ ಆಶ್ರಮ, ಕರ್ಕಪಟ್ಲ ಕೈಗಾರಿಕಾ ವಲಯ, ಕೋಟಿಲಿಂಗೇಶ್ವರಾಲಯ, ಕೋಮಟ ಕೆರೆ |
| ಜಗಿತ್ಯಾಲ | ಧರ್ಮಪುರಿ ಲಕ್ಷ್ಮಿನರಸಿಂಹಸ್ವಾಮಿ ದೇವಸ್ಥಾನ, ಕೊಂಡಗಟ್ಟು ಆಂಜನೇಯ ದೇವಸ್ಥಾನ. |
| ವಿಕಾರಾಬಾದ್ | ಅನಂತಗಿರಿ ಬೆಟ್ಟಗಳು, ಪದ್ಮನಾಭಸ್ವಾಮಿ ದೇವಸ್ಥಾನ, ಬುಗ್ಗರಾಮೇಶ್ವರ, ಭೂಕೈಲಾಸ್, ಏಕಾಂಬರೇಶ್ವರ ದೇವಸ್ಥಾನ, ಜುಂಟುಪಲ್ಲಿ ರಾಮ, ಕೊಡಂಗಲ್ ವೆಂಕಟೇಶ್ವರಸ್ವಾಮಿ, ಕೋಟಿಪಲ್ಲಿ, ಲಕ್ನಾಪೂರ್, ಸರ್ಪನ್‌ಪಲ್ಲಿ, ಜುಂಟುಪಲ್ಲಿ ಪ್ರಾಜೆಕ್ಟುಗಳು. |
| ರಾಜನ್ನ ಜಿಲ್ಲೆ | ವೇಮುಲವಾಡ ಶ್ರೀ ರಾಜರಾಜೇಶ್ವರ ದೇವಸ್ಥಾನ, ಅಪ್ಪರ ಮಾನೇರು ಜಲಾಶಯ. |
| ಮೇಡ್ಚಲ್ | ಕೀಸರ ಗುಟ್ಟ ಶ್ರೀ ರಾಮಲಿಂಗೇಶ್ವರ ದೇವಾಲಯ, ಜೈನ–ಬೌದ್ಧ ಕೇಂದ್ರಗಳು |
| ಭದ್ರಾದ್ರಿ | ಭದ್ರಾದ್ರಿ ಶ್ರೀ ಸೀತಾರಾಮ ದೇವಸ್ಥಾನ, ಬೋಗತ ಜಲಪಾತ, ಪರ್ಣಶಾಲೆ ಹಿರಿಯ ಝರಿ, ಮೂಕಮಾಮಿಡಿ, ಕಿನ್ನೆರ ಸಾನಿ, ಸಾಲೆಂ ಝರಿ ಪ್ರಾಜೆಕ್ಟ್ ಕೆ.ಟಿ.ಪಿ.ಎಸ್. ಜೆನ್ ಕೋ ವಿದ್ಯುತ್ ಘಟಗಳು, ರಾಷ್ಟ್ರೀಯ ಖನಿಜಾಭಿವೃದ್ಧಿ ಸಂಸ್ಥೆ. |
| ಪೆದ್ದಪಲ್ಲಿ | ಎಲ್ಲಪಲ್ಲಿ, ಎಲ್ಮಡುಗು ಜಲಾಶಯಗಳು, ರಾಮಗಿರಿ ಕೋಟೆ, ಸಬಿತ ಜಲಪಾತ. |
| ಸಂಗಾರೆಡ್ಡಿ | ಇಕ್ರಿಶ್ಯಾಟ್, ಬಿ.ಎಚ್.ಇ.ಎಲ್., ಸಿಂಗೂರು ಜಲಾಶಯ, ಝರಾಸಂಗಂ ಕೇತಕಿ ಸಂಗಮೇಶ್ವರ ದೇವಸ್ಥಾನ, ಎದ್ದು ಮೈಲಾರದ ಆಯುಧ ಕಾರ್ಯಾಗಾರ. |
| ಕರೀಂನಗರ್ | ಪಾತಪೇರು ಎಲಗಂದುಲ, Lower ಮಾನೇರು ಜಲಾಶಯ, ಬೆಳ್ಳಿ ವಸ್ತುಗಳನ್ನು ತಯಾರಿಸುವ 'ಫಿಲಗ್ರಿ' ಕಲೆ ಪ್ರಪಂಚ ಖ್ಯಾತಿ ಪಡೆದಿದೆ. |

SCERT TELANGANA

# ಆಶಿಸಿದ ಅಭ್ಯಾಸದ ಫಲಿತಾಂಶಗಳು

**ಸಮಾಜಶಾಸ್ತ್ರ**
**8ನೇ ತರಗತಿ**

## ವಿದ್ಯಾರ್ಥಿಗಳು ಇವನ್ನು ಕಲಿಯುತ್ತಾರೆ.....

- ತೆಲಂಗಾಣ ನಕ್ಷೆಯಲ್ಲಿ ಇದ್ದಲು ಇತರ ಖನಿಜಗಳು ಅವುಗಳ ವಿಸ್ತರಣೆ ಗುರ್ತಿಸುತ್ತಾರೆ.
- ಕುಲ, ಬಾಲ್ಯವಿವಾಹ, ಸಾಂಘಿಕ ಸಂಸ್ಕರಣೆ ಮತ್ತು ಮಹಿಳೆಯರ ಸಮಸ್ಯೆಗಳ ಬಗ್ಗೆ ವಿಶ್ಲೇಷಿಸುತ್ತಾರೆ.
- ಭಾರತ ದೇಶದಲ್ಲಿನ ನ್ಯಾಯವ್ಯವಸ್ಥೆಯ ಕೆಲಸದ ರೀತಿ ಮತ್ತು ಪೋಲಿಸು ಫಿರ್ಯಾದಿಗೆ ಸಂಬಂಧಿಸಿದ ಮೊದಲ ಸಮಾಚಾರ ನಿವೇದಿಕೆ (FIR) ವಿವರಿಸುತ್ತಾರೆ.
- ಭಾರತ ದೇಶದಲ್ಲಿನ ಲೋಕಸಭೆಗೆ ಚುನಾವಣೆ ಮತ್ತು ರಾಷ್ಟ್ರಪತಿ, ಉಪರಾಷ್ಟ್ರಪತಿ ಚುನಾವಣೆಯ ಪ್ರಕ್ರಿಯೆಯ ಬಗ್ಗೆ ವಿವರಿಸುತ್ತಾರೆ.
- ನಕ್ಷೆಗಳ ಉಪಯೋಗಗಳನ್ನು ವಿವರಿಸುತ್ತಾರೆ.
- ಜಾಗತಿಕ ತಾಪಮಾನ ಏರಿಕೆಗೆ (Global Warming) ಕಾರಣಗಳನ್ನು ವಿಶ್ಲೇಷಿಸುತ್ತರೆ.
- ಋತುಗಳು ಏರ್ಪಡುವ ವಿಧಾನವನ್ನು ವಿವರಿಸುತ್ತಾರೆ.
- ಧೃವ ಪ್ರಾಂತ್ಯದಲ್ಲಿನ ಪ್ರಜೆಗಳ ಜೀವನ ವಿಧಾನ, ಆಹಾರ, ಬಟ್ಟೆಗಳು, ರವಾಣ, ನಿವಾಸಗಳ ಬಗ್ಗೆ ತಿಳಿಸುತ್ತಾರೆ.
- ಬ್ಯಾಂಕಿನ ಸೇವೆ, ಕಾರ್ಯಕ್ರಮ ವಿವಿಧ ಖಾತೆಗಳ ಬಗ್ಗೆ ವಿಶ್ಲೇಷಿಸುತ್ತಾರೆ.
- ಸಾಂಕೇತಿಕ ರಂಗದಲ್ಲಿ ಬಂದ ಬದಲಾವಣೆಗಳು ವ್ಯವಸಾಯ ರಂಗದಲ್ಲಿ ಎಚಿತಹ ಪ್ರಭಾವವನ್ನು ಬೀರುತ್ತವೆ ಎಚಿದು ವಿಶ್ಲೇಷಿಸುತ್ತಾರೆ.
- ಪ್ರಜೆಗಳ ಆರೋಗ್ಯಕ್ಕಾಗಿ ಪ್ರಭುತ್ವ ಸರಕಾರ ಏರ್ಪಡಿಸುವ ಕಾರ್ಯಕ್ರಮಗಳನ್ನು ಕುರಿತು ಕರಪತ್ರ ತಯ್ಯಾರಿಸುತ್ತಾರೆ.
- ಶಾಶ್ವತ ಶಿಸ್ತು ನಿರ್ಣಯ ಪದ್ಧತಿ, ರೈತ್ವಾರಿ ಪದ್ಧತಿಗಳ ಮಧ್ಯ ಇರುವ ವ್ಯತ್ಯಾಸಗಳನ್ನು ವಿವರಿಸುತ್ತಾರೆ.
- ಭಾರತದ ಜಾತೀಯ ಉದ್ಯಮದಲ್ಲಿನ ಅತಿವಾದ – ಮಿತವಾದ ಹಂತಗಳನ್ನು ಹೋಲಿಸುತ್ತಾರೆ.
- ಮಹಾತ್ಮಾ ಗಾಂಧಿ ಜಾತೀಯ ಉದ್ಯಮದಲ್ಲಿ ಬರುವ ಮುಂಚೆ ಕೈಗೊಂಡ ಉದ್ಯಮಗಳ ಬಗ್ಗೆ ತಿಳಿಯುತ್ತಾರೆ.
- ನಿಜಾಂ ಕಾಲದಲ್ಲಿನ ಫ್ಯೂಡಲ್ ವಿಧಾನ ಹಾಗೂ ರಜಾಕರ ಅಕೃತ್ಯಗಳ ಬಗ್ಗೆ ವಿವರಿಸುತ್ತಾರೆ.
- ಕಲೆಗಳು ಹಾಗೂ ಕಾಲಾರೂಪಗಳಿಂದ ಕೂಡಿದ ಪಟ್ಟಿಕೆ ತಯಾರಿಸುತ್ತಾರೆ.
- ಸಮಾಜದ ಮೇಲೆ ಸಿನಿಮಾ ಪ್ರಭಾವ ಅನ್ನುವ ಅಚಿಶದ ಮೇಲೆ ವ್ಯಾಖ್ಯಾನಿಸುತ್ತಾರೆ.
- ಪ್ರಪಂಚ ನಕ್ಷೆಯಲ್ಲಿ ಕ್ರಿಕೆಟ್ ಆಡುವ ದೇಶಗಳನ್ನು ಗುರುತಿಸುತ್ತಾರೆ.

ತೆಲಂಗಾಣ ವಿದ್ಯಾ ಶಾಖೆ
ತೆಲಂಗಾಣ ಸರಕಾರ

एन सी ई आर टी
NCERT

SCERT TELANGANA